*The Department of Public Instruction, Bombay.*

# ELEMENTS

OF

# POLITICAL ECONOMY

BASED ON

MRS. FAWCETT'S POLITICAL ECONOMY FOR BEGINNERS

BY

VINÂYAK BÂBAJI JOSHI, B.A.

HEAD MASTER, 1ST GRADE A. V. SCHOOL, KUMTA.

1,000 Copies.

*Registered for Copy-right under the Government of India's Act XXV. of 1867.*

**BOMBAY:**
GOVERNMENT CENTRAL BOOK DEPÔT.
1890

*(All Rights reserved.)*

***Price: 2 Rupees.***

27. JAN. 22

MANGALORE
PRINTED AT THE BASEL MISSION PRESS.

ಮುಂಬಾಯಿ ಇಲಾಖೆಯೊಳಗಿನ ಸರಕಾರೀ ವಿದ್ಯಾಖಾತೆ

# ಅರ್ಥಶಾಸ್ತ್ರದ ಮೂಲತತ್ತ್ವಗಳು

ಫಾಸೆಟ್ ಥೊರೆಸಾನಿಯವರ

"ನೂತನಾಭ್ಯಾಸಿಗಳಿಗೋಸ್ಕರ ಅರ್ಥಶಾಸ್ತ್ರ" ಎಂಬ ಮೂಲಗ್ರಂಥದ ಆಧಾರದಿಂದ


ವಿನಾಯಕ ಬಾಬಜಿ ಜೋಶಿ, ಬಿ. ಎ.

ಹೆಡ್ ಮಾಸ್ತರ ಫರ್ಸ್ಟ್ ಗ್ರೇಡ ಅಂಗ್ಲೋ ವ್ಹರ್ನ್ಯಾಕ್ಯುಲರ ಸ್ಕೂಲ್, ಕುಮಠಾ


ಇವರು ಮಾಡಿದರು.


೧,೦೦೦ ಪ್ರತಿಗಳು.



ಈ ಪುಸ್ತಕದ ಬಾಧ್ಯತೆಯು [illegible]ನ ಸರಕಾರದವರ ಸನ್ ೧೮೬೭ನೇ ಇಸವಿಯ
೨೫ನೇ ಆಕ್ಟಿನಂತೆ ರಿಜಿಸ್ಟರು ಮಾಡಲ್ಪಟ್ಟದೆ.



ಮುಂಬಯಿ

ಗವರ್ನಮೆಂಟ ಸೆಂಟ್ರಲ್ ಬುಕ್ ಡಿಪೊ.

೧೮೯೦



(ಈ ಪುಸ್ತಕದ ಸಂಬಂಧದ ಯಾವತ್ತು ಅಧಿಕಾರವನ್ನು ಸರಕಾರದವರು ತಮ್ಮ
ಸ್ವಾಧೀನ ಇಟ್ಟುಕೊಂಡಿದ್ದಾರೆ)


ಕಿಮ್ಮತು: ೨ ರೂಪಾಯಿ.

ಮಂಗಳೂರು
ಬಾಸೆಲ್ ಮಿಶ್ಯನ್ ಛಾಪಖಾನೆಯಲ್ಲಿ ಛಾಪಿಸಲ್ಪಟ್ಟಿತು.

# ಅನುಕ್ರಮಣಿಕೆ.

## ಉಪೋದ್ಘಾತವು.


ವಿಷಯ. ಪುಟ.

ಅರ್ಥಶಾಸ್ತ್ರದ ವ್ಯಾಖ್ಯೆ—ಸಂಪತ್ತು—ಹಣ—ಧನೈಕಾಭಿವೃದ್ಧಿಮತ—ನಿರಾತಂಕ ವ್ಯಾಪಾರ . . . . . . . . . . . . . . . . . . . . ೧—೭

## ೧ನೇ ಭಾಗ.

### ಸಂಪದುತ್ಪಾದನ.

ಸಂಪದುತ್ಪಾದನಕ್ಕೆ ಅವಶ್ಯವಾದ ಮೂರು ಸಾಧನಗಳು—ಭೂಮಿ, ಶ್ರಮ, ಬಂಡವಲ . . . . . . . . . . . . . . . . . . . . . . . ೮

### ೧ನೇ ಅಧ್ಯಾಯ.

ಭೂಮಿ.

ಸಂಪದುತ್ಪಾದನದಲ್ಲಿ ಭೂಮಿಯ ಕರ್ತೃತ್ವ—ಭೂಮಿಯ ಉತ್ಪಾದಕಶಕ್ತಿಯನ್ನು ವರ್ಧಿಸುವ ಸಂಗತಿಗಳು—ದೊಡ್ಡ ಕಮತಗಳೂ, ಸಣ್ಣ ಕಮತಗಳೂ—ಭೂಮಿಯ ಸ್ವಾಮಿತ್ವವುಳ್ಳ ಒಕ್ಕಲಿಗರೂ ಗೇಣಿಗೆ ಹೊಲ ಮಾಡುವ ಒಕ್ಕಲುಗಳೂ . . . . . . . . . . . . . . . ೮—೧೪

### ೨ನೇ ಅಧ್ಯಾಯ.

ಶ್ರಮ.

ಸಂಪದುತ್ಪಾದನದಲ್ಲಿ ಶ್ರಮದಿಂದ ಆಗುವ ಕಾರ್ಯ—ಉತ್ಪಾದಕ ಹಾಗೂ ಅನುತ್ಪಾದಕಶ್ರಮ—ಶ್ರಮವಿಭಾಗ—ನಿರಾತಂಕ ವ್ಯಾಪಾರವು ಶ್ರಮವಿಭಾಗವಾಗಿರುವದು—ಶ್ರಮಸಂಯೋಗ—ಸಾಕ್ಷಾತ್ ಶ್ರಮಸಂಯೋಗ ಮತ್ತು ಫಲದ್ವಾರಕ ಶ್ರಮಸಂಯೋಗ—ಹೊಸ ವಸಾಹತುಗಳನ್ನು ಮಾಡುವ ವಿಷಯದಲ್ಲಿ ವೇಕಫಿಲ್ಡ್ ಧೊರೆಯ ನಿಯಮ—ಶ್ರಮದ ಉತ್ಪಾದಕತ್ವವನ್ನು ಬೆಳಿಸುವಂಥ ವಸ್ತುಗತ ಕಾರಣಗಳೂ ಮಾನಸಿಕ ಕಾರಣಗಳೂ—ಉತ್ಪಾದಕ ಹಾಗೂ ಅನುತ್ಪಾದಕವ್ಯಯ . . . . . . . . . . . . . . . . . . . . . . . . ೧೪—೩೮

ವಿಷಯ. ಪುಟ.

## ೪ನೇ ಅಧ್ಯಾಯ.

ಬಂಡವಲ.

ಸಂಪದುತ್ಪಾದನದಲ್ಲಿ ಬಂಡವಲದಿಂದ ಆಗುವ ಕಾರ್ಯ— ಹೆನ್ರಿಜಾರ್ಜ ಧೊರೆಯ ಸಂಬಳದ ವಿಷಯದ ಅಭಿಪ್ರಾಯ— ಸಂಬಳದ ಮೊಬಲಗು – ಸರಕುಗಳ ಬೇಡಿಕೆ ಶ್ರಮದ ಬೇಡಿಕೆಯಲ್ಲ— ಬಂಡವಲದಿಂದ ಆಗ ತಕ್ಕ ಕಾರ್ಯವು ಆಗ ಬೇಕಾದರೆ, ಅದರ ವ್ಯಯವಾಗುವದು ಅವಶ್ಯ – ಸ್ಥಿರ ಹಾಗೂ ಚರ ಬಂಡವಲ— ಬಂಡವಲದ ಸಂಚಯಕ್ಕೆ ಅನುಕೂಲವಾದ ಸಂಗತಿಗಳು— ಬಂಡವಲದ ಮಿತಿಮೀರಿದ ಸಂಚಯ . . . . . . . . . . . ೪೯—೫೯

## ೨ನೇ ಭಾಗ.

## ಸಂಪತ್ತಿನ ವಿನಿಮಯ.

ವಿನಿಮಯವು ಜನರಿಗೆ ತಮ್ಮ ತಮ್ಮ ಆಸ್ತಿಯ ಮೇಲೆ ಸ್ವಾಮಿತ್ವ ಉಂಟೆಂಬ ಅರ್ಥವನ್ನು ಸೂಚಿಸುತ್ತದೆ— ಸಾಮಾನ್ಯ ಸ್ವಾಮಿತ್ವದ ಪದ್ಧತಿ— ಅರ್ಥಶಾಸ್ತ್ರದೃಷ್ಟ್ಯಾ ಈ ಪದ್ಧತಿಯಲ್ಲಿದ್ದ ದೋಷಗಳ ಹಾಗೂ ಸಾಂಪ್ರತದ ಉದ್ಯೋಗವ್ಯವಸ್ಥೆಯಲ್ಲಿದ್ದ ದೋಷಗಳ ತುಲನೆ . . . . . . . . . . . . . . . . . . . . . . . . ೬೦—೬೫

## ೧ನೇ ಅಧ್ಯಾಯ.

ಬೆಲೆ ಹಾಗೂ ಕ್ರಯ.

ಬೆಲೆಯ ವ್ಯಾಖ್ಯೆ— ಅದಲುಬದಲು— ಕ್ರಯದ ವ್ಯಾಖ್ಯೆ ಬೆಲೆಗಳ ಸಾರ್ವತ್ರಿಕ ಏರೋಣವು ಸಂಭವಿಸುವದಿಲ್ಲ – ಕ್ರಯಗಳ ಸಾರ್ವತ್ರಿಕ ಏರೋಣವು ಸಂಭವಿಸುತ್ತದೆ . . . . . . . . . . ೬೬—೭೦

## ೨ನೇ ಅಧ್ಯಾಯ.

ಹಣ.

ಹಣದ ಕಾರ್ಯಗಳು— ಹಣವಾಗಿ ಉಪಯೋಗಿಸಲ್ಪಟ್ಟ ನಾನಾ ತರದ ಪದಾರ್ಥಗಳು— ಹಣವಾಗಿ ಆರಿಸಲ್ಪಟ್ಟ ಪದಾರ್ಥ

ವಿಷಯ. ಪುಟ.

ದಲ್ಲಿ ಇರ ಬೇಕಾದ ಗುಣಗಳು — ಈ ಗುಣಗಳು ಹಣವಾಗಿ ಉಪಯೋಗಿಸಲ್ಪಟ್ಟ ಬೇರೆ ಯಾವತ್ತೂ ಪದಾರ್ಥಗಳಿಗಿಂತಲೂ ಚಿನ್ನ ಬೆಳ್ಳಿಗಳಲ್ಲಿ ಹೆಚ್ಚು ಅಂಶದಿಂದ ಇರುವವು — ಬೆಲೆಯ ಪ್ರಮಾಣಭೂತವಾದ ನಾಣ್ಯಗಳು ಹಾಗೂ ಚಿನ್ಹೀಭೂತವಾದ ನಾಣ್ಯಗಳು — ಬೆಲೆಯ ದ್ವಿವಿಧ ಪ್ರಮಾಣ — ದ್ವಿಧಾತುಪ್ರಚಾರನಿರ್ಣಯ .... ೭೧ — ೮೬

## ೩ ನೇ ಅಧ್ಯಾಯ.
### ಸರಕುಗಳ ಬೆಲೆ.

ಸರಕುಗಳ ಬೆಲೆಯನ್ನು ಅನುಲಕ್ಷಿಸಿ ಅವುಗಳಲ್ಲಿ ಮಾಡಿದ ಮೂರು ವರ್ಗಗಳು — ಉತ್ಪನ್ನ ಮಾಡುವ ಖರ್ಚಿನ ವಿಷಯದಲ್ಲಿ ಮಿಲ್ ಮತ್ತು ಕೇರ್ನ್ಸ್ ಧೊರೆಗಳ ಅಭಿಪ್ರಾಯ — ಬೇಡಿಕೆ ಪೂರೈಕೆಗಳಿಂದ ಕ್ರಯಗಳ ಮೇಲೆ ಉಂಟಾಗುವ ಪರಿಣಾಮ — ಪೂರೈಕೆಯನ್ನು ಹೆಚ್ಚಿಸಲಿಕ್ಕೆ ಬಾರದಂಥ ಸರಕಿನ ಕ್ರಯವನ್ನು ನಿರ್ಣೈಸುವ ಸಂಗತಿಗಳು — ವಿನಿಮಯದಿಂದ ಬೆಲೆ ಬರುವ ಪ್ರತಿಯೊಂದು ಒಡವೆಯು ಎರಡು ಗುಣಗಳಿಂದ ಯುಕ್ತವಾಗಿರುವದು. ಅವು ಯಾವವಂದರೆ:— ಉಪಯೋಗ ಮೂಲಕವಾದ ಬೆಲೆ ಮತ್ತು ಸಂಪಾದನಶ್ರಮ — ಬೇಸಾಯದ ಹುಟ್ಟುವಳಿಯ ಕ್ರಯವನ್ನು ನಿರ್ಣೈಸುವಂಥ ಸಂಗತಿಗಳು — ಜನಸಂಖ್ಯೆಯ ಬೆಳೆಯುವಿಕೆಯಿಂದ ಬೇಸಾಯದ ಹುಟ್ಟುವಳಿಯ ಕ್ರಯವು ಏರುವ ಕ್ರಮವನ್ನು ಹಿಡಿಯುವದು — ಕೈಗಾರಿಕೆಯ ಸರಕುಗಳ ಕ್ರಯವನ್ನು ನಿರ್ಣೈಸುವಂಥ ಸಂಗತಿಗಳು — ಉತ್ಪನ್ನ ಮಾಡುವ ಖರ್ಚಿನಲ್ಲಿ ಸೇರುವ ಅಂಶಗಳು — ಬಂಡವಲಗಾರನಿಗೆ ಶ್ರಮದಗೋಸ್ಕರ ಬೀಳುವ ಖರ್ಚು ಶ್ರಮದ ಉತ್ಪಾದಕತ್ವವನ್ನವಲಂಬಿಸಿರುವದು. ಅದು ಸಂಬಳವಾಗಿ ಕೊಡಲ್ಪಟ್ಟ ರಕಮಿನಂತೆ ಯಾವಾಗಲೂ ಹೆಚ್ಚು ಕಡಿಮೆಯಾಗುವದಿಲ್ಲ — ಲಾಭ ಕ್ರಯಗಳ ಪರಸ್ಪರ ಸಂಬಂಧ — ಬೇಡಿಕೆ ಪೂರೈಕೆಗಳಿಂದ ಧಾರಣೆಗಳ ಮೇಲೆ ಉಂಟಾಗುವ ಪರಿಣಾಮದ ಸಾರಾಂಶವು. ೮೭ — ೧೧೬

## ೪ ನೇ ಅಧ್ಯಾಯ.
### ಹಣದ ಬೆಲೆ.

ಬೇರೆ ಖನಿಜ ಪದಾರ್ಥಗಳ ಬೆಲೆಯನ್ನು ನಿರ್ಣೈಸುವಂಥ ನಿಯಮಗಳಿಂದಲೇ ಹಣದ ಬೆಲೆಯೂ ಕ್ರಮಗೊಳ್ಳುವದು.—

ವಿಷಯ. ಪುಟ.

ಇತ್ತಲಾಗಿ ಬೆಳ್ಳಿಯ ಬೆಲೆಯು ಕಡಿಮೆಯಾದ ಸಂಗತಿ—ಚಿನ್ನ ಬೆಳ್ಳಿಗಳ ಬೇಡಿಕೆಯನ್ನು ಹೆಚ್ಚುಕಡಿಮೆ ಮಾಡುವಂಥ ಸಂಗತಿಗಳು—ಚಿನ್ನದ ಕಣಿಗಳ ಶೋಧದಿಂದ ಹಣದ ಬೆಲೆಯ ಮೇಲೆ ಉಂಟಾದ ಪರಿಣಾಮ .................... ೧೧೬—೧೩೧

## ೩ನೇ ಭಾಗ.

## ಸಂಪತ್ತಿನ ವಿಭಾಗ.

ಸಂಪತ್ತಿನಲ್ಲಿ ಗೇಣಿ, ಸಂಬಳ, ಲಾಭ, ಎಂಬ ಮೂರು ವಿಭಾಗಗಳಾಗುವವು - ಬೇರೆ ಬೇರೆ ದೇಶಗಳಲ್ಲಿ ಈ ಭಾಗಗಳಿಗೆ ಬೇರೆ ಬೇರೆ ವರ್ಗದ ಜನರು ಒಡಿಯರಾಗಿರುವರು ........... ೧೩೨—೧೩೪

### ೧ನೇ ಅಧ್ಯಾಯ.

### ಭೂಮಿಯ ಗೇಣಿ

ಗೇಣಿಯ ವ್ಯಾಖ್ಯೆ—ಮೇಲಾಟದಿಂದ ಗೊತ್ತಾಗುವ ಗೇಣಿ—ರಿಕ್ಯಾರ್ಡೋ ಧೊರೆಯ ಗೇಣಿಯ ವಿಷಯದ ನಿಯಮವು—ಸಾಗುವಳಿಯ ಮೇರೆ—ಉತ್ಪಾದಕತ್ವದ ಮಾನದಿಂದ ಸಾಗುವಳಿಯ ಮೇರೆಯ ಸ್ಥಿತಿಯಲ್ಲಿ, ಜನಸಂಖ್ಯೆಯ ವೃದ್ಧಿಯಿಂದ ಉಂಟಾಗುವ ಪರಿಣಾಮವು—ಜನಸಂಖ್ಯೆಯು ರಾಷ್ಟ್ರೀಯ ಅಭ್ಯುದಯದ ಕುರುಹಲ್ಲ - ಗೇಣಿಯಿಂದ ಬೇಸಾಯದ ಹುಟ್ಟುವಳಿಯ ಕ್ರಯ ಹೆಚ್ಚುವದಿಲ್ಲ—ಸಾಂಪ್ರದಾಯಾನುಸಾರವಾಗಿ ನಿರ್ಣಯಿಸಲ್ಪಡುವ ಗೇಣಿಯು—ಮೆಟೀರ ಎಂಬ ಕೋರುಪಾಲಿನ ಪದ್ಧತಿ—ಅಲ್‌ಸ್ಟರದ ಒಕ್ಕಲುಗಳ ಹಕ್ಕು—ಸನ್ ೧೮೭೦ನೇ ವರ್ಷದಲ್ಲುಂಟಾದ "ಆಯರ್ಲಂಡದ ಭೂಮಿಯ ಕಟ್ಟಳೆ"—ಆಯರ್ಲಂಡದಲ್ಲಿದ್ದ 'ಕಾಟಿಯರ್' ಹಾಗೂ 'ಕೊನೇಕರ' ಎಂಬ ಹೊಲ ಹಿಡಿಯುವ ಪದ್ಧತಿಗಳು .................... ೧೩೪—೧೫೬

### ೨ನೇ ಅಧ್ಯಾಯ.

### ಶ್ರಮದ ಸಂಬಳ

ಸಂಬಳವು ಮೇಲಾಟದಿಂದ ಗೊತ್ತಾಗುವ ಕ್ರಮವು—ಸಂಬಳದ ಮೇಲೆ ಜನಸಂಖ್ಯೆಯಿಂದ ಉಂಟಾಗುವ ಪರಿಣಾಮವು—

ವಿಷಯ. ಪುಟ.

ಜನಸಂಖ್ಯೆಯ ವಿಷಯದಲ್ಲಿ ಮಾಲಥಸ್ ಧೊರೆಯ ಅಭಿಪ್ರಾಯವು—ಜನಸಂಖ್ಯೆಯು ಮಿತಿಮೀರಿ ಬೆಳೆಯದಂತೆ ಮಾಡುವದಕ್ಕೆ ಪರದೇಶ ಗಮನವು ಪೂರ್ಣವಾದ ಉಪಾಯವಲ್ಲ—ಯಾವದೊಂದು ವಿವಕ್ಷಿತವಾದ ಸ್ಥಳದಲ್ಲಿ ಲಾಭವು ಇಳಿಯುವದರಿಂದ ಸಂಬಳದ ಮೇಲೆ ಉಂಟಾಗುವ ಪರಿಣಾಮವು—ಶ್ರಮದ ಉತ್ಪಾದಕ ಶಕ್ತಿಯು ವೃದ್ಧಿಯಾಗುವದರಿಂದ ಸಂಬಳದ ಮೇಲೆ ಉಂಟಾಗುವ ಪರಿಣಾಮವು—ಧಾರಣೆಗಳು ಏರುವದರಿಂದ ಸಂಬಳವು ಏರುವದಿಲ್ಲ. ಅಪ್ರತಿಬಂಧವಾದ ಮೇಲಾಟದಿಂದ ಸಂಬಳದ ಮೇಲೆ ಉಂಟಾಗುವ ಪರಿಣಾಮವು—ದಾನಧರ್ಮಗಳಿಂದಲೂ, ದರಿದ್ರಸಂರಕ್ಷಕ ಕರದಿಂದ ದೊರಿಯುವ ಸಹಾಯದಿಂದಲೂ, ಮೇಲಾಟದ ಕಾರ್ಯಕ್ಕೆ ಅನೇಕ ಬಾರಿ ಪ್ರತಿಬಂಧವಾಗುವದು—ಇಂಗ್ಲಂಡದಲ್ಲಿ ಬೇಸಾಯದ ಕೂಲಿಕಾರರೊಳಗೆ ಮೇಲಾಟವು ಬಹುತರ ನಡಿಯುವದಿಲ್ಲ. ಬೇರೆ ಬೇರೆ ಉದ್ಯೋಗಗಳಲ್ಲಿ, ಸಂಬಳದ ಹೆಚ್ಚುಕಡಿಮೆಯಾದ ದರಗಳನ್ನುಂಟು ಮಾಡುವಂಥ ಅಡಾಮ್‌ಸ್ಮಿಥ್ ಧೊರೆಯು ಹೇಳಿದ ಐದು ಕಾರಣಗಳು . . ೧೫೬—೧೮೭

## ೬ನೇ ಅಧ್ಯಾಯ.

### ಬಂಡವಲದ ಲಾಭ.

ಬಂಡವಲಕ್ಕೆ ಲಾಭವು ಬರುವದು ಅವಶ್ಯವಾದದ್ದು ಹಾಗೂ ನ್ಯಾಯವಾದದ್ದು—ಲಾಭದಲ್ಲಿ ಮೂರು ಅಂಶಗಳಿರುವವು: ಬಂಡವಲದ ಬಡ್ಡಿ, ಲುಕಸಾನಿನ ಭಯದ ಪ್ರತಿಫಲ, ಮತ್ತು ಮೇಲ್ವಿಚಾರಣೆಯ ಸಂಬಳ, ಎಂಬಿವು—ಒಂದೇ ದೇಶದಲ್ಲಿ ಒಂದೇ ಕಾಲಕ್ಕೆ ಯಾವತ್ತು ಉದ್ಯೋಗಗಳಲ್ಲಿ ಬಡ್ಡಿಯ ದರವು ಸಮಾನವಾಗಿರುವದು—ಜನಸಂಖ್ಯೆಯು ಬೆಳೆದ ಹಾಗೆ, ಬಡ್ಡಿಯ ದರವು ಇಳಿಯುವದು—ಉತ್ತರೋತ್ತರಕ್ಷೀಯಮಾಣ ಉತ್ಪನ್ನದ ನಿಯಮವು—ಧಾರಣೆಗಳು ಏರಿದ್ದರ ಮೇಲಿಂದ ಯಾವಾಗಲೂ ಹೆಚ್ಚು ಲಾಭವು ಬರುವದೆಂದು ತಿಳಿಯ ತಕ್ಕದ್ದಲ್ಲ—ಶ್ರಮ ಬಂಡವಲಗಳ ಸಂಯುಕ್ತ ವ್ಯಾಪಾರದಿಂದ ಉಂಟಾದ ಒಟ್ಟು ಸಂಪತ್ತಿನಲ್ಲಿ,—ಶ್ರಮದ ಪಾಲಿಗೆ ಕೊಡಲ್ಪಡುವ ಪಾಲಿನ ಮೇಲೆ ಲಾಭವು ಅವ

ವಿಷಯ. ಪುಟ.

ಲಂಬಿಸಿರುವದು—ಬಂಡವಲಗಾರನಿಗೆ ಬೀಳುವ ಶ್ರಮದ ಖರ್ಚು, ಬದಲಿಸುವಂಥ ಮೂರು ಸಂಗತಿಗಳಿಗೆ ಆಧೀನವಾಗಿರುವದು—ಸಾವುಕಾರರ ಲಾಭವು ವಾಡಿಕೆಯಾದ ದರಕ್ಕಿಂತಲೂ ಇಳಿಯುವ ಹಾಗೆ ಏರಿದ ಸಂಬಳದಿಂದ ಕೆಲಸಗಾರರಿಗೆ ಅಂತ್ಯದಲ್ಲಿ ಹಿತವಾಗುವದಿಲ್ಲ—ಬಂಡವಲವು ಪರದೇಶಗಳಿಗೆ ಹೋಗುವ ಕ್ರಮ. . ೧೮೭—೨೦೪

### ೪ನೇ ಅಧ್ಯಾಯ.

ಉದ್ಯೋಗಸಮಾಜಗಳು, ಕೂಲಿಕಾರರ ಕಟ್ಟುಗಳು, ಅನ್ಯೋನ್ಯ ಸಹಾಯಕ ಸಂಘಗಳು.

ಉದ್ಯೋಗಸಮಾಜಗಳು ಮಾಡುವ ಕಾರ್ಯಗಳು—ಕೂಲಿಕಾರರ ಕಟ್ಟುಗಳು—ಧನಿಯರ ಕಟ್ಟುಗಳು—ಕೂಲಿಕಾರರ ಕೆಲಸ ತಪ್ಪಿಸೋಣವು—ಕೂಲಿಕಾರರ ಕಟ್ಟುಗಳು ದುಡಿಯುವವರಿಗೂ ಧನಿಯರಿಗೂ ಇರುವ ವಿರೋಧದ ಮೂಲಕವಾಗಿ ಆಗುವವು—ಅನ್ಯೋನ್ಯ ಸಹಾಯ, ಪಾಲಿನ ವ್ಯಾಪಾರ, ಲಾಭ ಹಂಚಿಕೊಳ್ಳುವ ಪದ್ಧತಿ, ಇವುಗಳಿಂದ ಈ ವಿರೋಧವು ತಪ್ಪುವ ಕಾರಣ, ಇವುಗಳಿಂದ ಕಟ್ಟುಗಳೂ ತಪ್ಪುವವು—ಪಂಚರ ಸಭೆಗಳು—ಸಮೂಹಿಕ ಸಂಗ್ರಹಗಳು . . . . . . . . . . . . . . . ೨೦೪—೨೨೪

## ೪ನೇ ಭಾಗ.

ಪರದೇಶವ್ಯಾಪಾರ, ಪತ್ತು, ಹಾಗೂ ಕರ. . . . . . . . . . ೨೨೫

### ೧ನೇ ಅಧ್ಯಾಯ.

ಪರದೇಶವ್ಯಾಪಾರ.

ಪರದೇಶವ್ಯಾಪಾರವು ಶ್ರಮವಿಭಾಗದ ವ್ಯಾಪಕ ಸ್ವರೂಪವು—ಸಂರಕ್ಷಣಪದ್ಧತಿಯು ಲೋಕಹಿತಕ್ಕೆ ಹಾನಿಕರವಾದದ್ದು—ಸಂರಕ್ಷಣದಿಂದ ಸಂಬಳದ ಮೇಲೆ ಉಂಟಾಗುವ ಪರಿಣಾಮ—ಫ್ರಾನ್ಸದ ಹಾಗೂ ಇಂಗ್ಲಂಡದ ಸಕ್ಕರೆ ಶುದ್ಧ ಮಾಡುವವರ ವಿಷಯ—ಮೇಣದ ಬತ್ತಿಗಳನ್ನು ಮಾಡುವವರ ಅರ್ಜಿ—ವಿನಿಮಯ ಮಾಡಲ್ಪಟ್ಟ ಸರಕುಗಳ ಬೆಲೆಯ ಪರಸ್ಪರ ಪ್ರಮಾಣವು ಪ್ರತಿ

ವಿಷಯ. ಪುಟ.

ಯೊಂದು ದೇಶದಲ್ಲಿ ಬೇರೆಯಾಗಿದ್ದರೆ ಮಾತ್ರ ಎರಡೂ ದೇಶಗಳಿಗೆ ಪರದೇಶವ್ಯಾಪಾರದಿಂದ ಕಲ್ಯಾಣವಾಗುವದು — ವಿನಿಮಯದ ಧಾರಣೆಗಳು ಬೇಡಿಕೆ ಪೂರೈಕೆಗಳ ಸಮೀಕರಣವಾಗುವ ಹಾಗೆ ನಿರ್ಣಯಿಸಲ್ಪಡುವವು — ಅನ್ಯೋನ್ಯಸಮವ್ಯಾಪಾರ — ಎರಡು ದೇಶಗಳ ನಡುವೆ ವಿನಿಮಯ ನಡಿಯಲಾಗಿ ಪ್ರತಿಯೊಂದು ದೇಶದ ಲಾಭವು, ಆ ದೇಶಕ್ಕಿದ್ದ ಪರದೇಶಗಳಿಂದ ಬರುವ ಸರಕುಗಳ ಬೇಡಿಕೆಯ ವ್ಯತ್ಕ್ರಮ ಪ್ರಮಾಣದಿಂದ ಇರುವದು — ಅಮೇರಿಕೆಯೊಳಗಿನ ಸಂರಕ್ಷಣ ಕ್ರಮವು - ಆಮದರಫ್ತುಗಳು ಒಂದಕ್ಕೊಂದು ಸಮಾನವಾಗುತ್ತಿರುವವು — ಸರಕುಗಳ ಒಯ್ಯುವ ಹಾಗೂ ತರುವ ಖರ್ಚು — ವ್ಯಾಪಾರಸಮತೋಲನ — "ಪ್ರತಿಕೂಲ ವಿನಿಮಯ" . . . . . . . . . . . . . . . . . . . . . . . . . . . ೨೨೬—೨೫೮

## ೨ನೇ ಅಧ್ಯಾಯ.

ಪತ್ತು, ಹಾಗೂ ಪತ್ತಿನಿಂದ ಧಾರಣೆಗಳ ಮೇಲೆ ಉಂಟಾಗುವ ಪರಿಣಾಮ.

ಪತ್ತಿನ ವ್ಯಾಖ್ಯೆ — ಪತ್ತು ಚನ್ನಾಗಿರೋಣ ಅಥವಾ ಇಲ್ಲದಿರೋಣವೆಂದರೇನು? — ಪತ್ತು ಬಂಡವಲವಲ್ಲ — ಪತ್ತಿನಿಂದ ಸಂಪತ್ತು ಉತ್ಪಾದಕ ಕೆಲಸಗಳಲ್ಲಿ ಸೇರುವದಕ್ಕೆ ಪ್ರೋತ್ಸಾಹನವಾಗುವ ಬಗೆಯು — ಬ್ಯಾಂಕುಗಳು ಅಂದರೆ ಠೇವಿನ ಅಂಗಡಿಗಳು — ಸಮೂಹಿಕ ಬಂಡವಲದ ವ್ಯಾಪಾರಸಂಘಗಳು — ಹುಂಡಿಗಳು — ಹುಂಡಿಗಳನ್ನು ಮುರಿಸುವದು — ಹುಂಡಿಗಳಿಂದ ಹಣದ ಅನೇಕಕಾರ್ಯಗಳಾಗುವವು — ಬ್ಯಾಂಕಿನ ನೋಟುಗಳು — ಚೇಕುಗಳು — ಲೆಕ್ಕ ಮಾಡುವ ಮನೆ — ಖಾತೆಲೆಕ್ಕಗಳು — ಪತ್ತಿನಿಂದಲೇ ಧಾರಣೆಗಳ ಮೇಲೆ ಪರಿಣಾಮವಾಗುತ್ತದೇ ಹೊರ್ತು, ಪತ್ತು ಧರಿಸುವ ಯಾವದಾದರೂ ವಿಶೇಷ ಪ್ರಕಾರದಿಂದ ಆಗುವದಿಲ್ಲ — ಪತ್ತಿನಿಂದ ಉಂಟಾಗುವ ಕೊಳ್ಳುವಶಕ್ತಿ — ಮರ್ಯಾದಿತ ಪೂರೈಕೆಯುಳ್ಳ ಸರಕುಗಳ ಧಾರಣೆಗಳ ಮೇಲೆ ಪತ್ತಿನ ಕಾರ್ಯವು ಎಲ್ಲಕ್ಕೂ ವಿಶೇಷವಾಗಿ ನಡಿಯುವದು — ವ್ಯಾಪಾರಸಮುದ್ವೇಗಗಳು — ಸನ್ ೧೮೪೪ನೇ ವರ್ಷದ ಬ್ಯಾಂಕುಗಳ ಸನದಿನ ಕಟ್ಟಳೆ — ಮುರಿಸಲಿಕ್ಕೆ ಬರುವ ಹಾಗೂ ಮುರಿಸಲಿಕ್ಕೆ ಬಾರದ ಕಾಗದದ ಹಣ — ನ್ಯೂ

ವಿಷಯ. ಪುಟ.

ಆರ್ಕ ಪಟ್ಟದಲ್ಲಾದ ಭಂಗಾರ ಖರೀದಿಯ ಸಂಚು— ಪತ್ರಿಯಿಂದ ಸಾಮಾನ್ಯ ಧಾರಣೆಗಳ ಮೇಲೆ ಆಗುವ ಪರಿಣಾಮವು ಹಿತಕರವಾಗಿರುವದು— ಕಾಗದದ ಹಣದಿಂದ ಆಗುವ ಪ್ರತ್ಯಕ್ಷ ಮಿತವ್ಯಯ. ೨೫೯—೨೮೯

## ೩ನೇ ಅಧ್ಯಾಯ.

### ಕರಕಟ್ಟುವ ವಿಷಯದಲ್ಲಿ.

ಕರ ಕಟ್ಟುವ ಅವಶ್ಯಕತೆ— ಕರ ಕಟ್ಟುವ ವಿಷಯದಲ್ಲಿ ಅಡಾಮ್‌ಸ್ಮಿಥ್ ಧೊರೆಯು ಹೇಳಿದ ನಾಲ್ಕು ಸೂತ್ರಗಳು— ಅಟಕಿನ ಮನೆಗಳಿಂದಾಗುವ ಪ್ರಯೋಜನ— ಮೂಲದ್ರವ್ಯಗಳ ಮೇಲಣ ಕರಗಳು— ಸರಕುಗಳ ಮೇಲೆ ಪ್ರತ್ಯಕ್ಷ ಕರವನ್ನು ಕೂಡ್ರಿಸುವದು ಸಾಧ್ಯವಲ್ಲ— ಕರ ಎತ್ತುವ ಖರ್ಚು— ಕರದ ಭಾರ— ಪ್ರತ್ಯಕ್ಷ ಹಾಗೂ ಪರೋಕ್ಷಕರಗಳು - ಪ್ರಾಪ್ತಿಯ ಮೇಲಿನ ಕರ— ಸರಕುಗಳ ಮೇಲಿನ ಕರಗಳನ್ನು ಸಾಧ್ಯವಾದ ಮಟ್ಟಿಗೆ ಸುಖೋಪಭೋಗದ ಒಡವೆಗಳ ಮೇಲೇ ಕಟ್ಟ ಬೇಕು— ಭೂಮಿಯ ಮೇಲೆ ಕಟ್ಟಿದ ಯಾವತ್ತು ಕರಗಳ ಭಾರವು ಭೂಮಿಯ ಒಡೆಯನ ಮೇಲೆ ಬೀಳುವದು— ತೆರಿಗೆ— ಹೆನ್ರಿ ಜಾರ್ಜಧೊರೆಯು ಭೂಮಿಯ ಮೇಲಿನ ಕರದ ವಿಷಯದಲ್ಲಿ ಮಾಡಿದ ಸೂಚನೆಗಳು— ದಶಮಭಾಗದ ಕರ— ದರಿದ್ರಸಂರಕ್ಷಕ ಕರಗಳು— ವಾಸ ಮಾಡುವ ಮನೆಗಳ ಮೇಲೆ ಹಾಗೂ ವ್ಯಾಪಾರದ ವಖಾರಗಳ ಮೇಲೆ ತಕ್ಕೊಂಡ ದರಿದ್ರ ಸಂರಕ್ಷಕ ಕರದ ಭಾರವು ಯಾರ ಮೇಲೆ ಬೀಳುವದು? . . . . . ೨೮೯—೩೨೧

# ಅರ್ಥಶಾಸ್ತ್ರದ ಮೂಲತತ್ವಗಳು.

## ಉಪೋದ್ಘಾತವು.

ಅರ್ಥಶಾಸ್ತ್ರವೆಂದರೇನು?.—ಸಂಪತ್ತಿನ ಸ್ವರೂಪವನ್ನೂ, ಅದರ ಉತ್ಪಾದನ, ವಿನಿಮಯ, ವಿಭಾಗಗಳ ನಿಯಮಗಳನ್ನೂ, ವ್ಯಕ್ತಪಡಿಸುವ ಶಾಸ್ತ್ರಕ್ಕೆ ಅರ್ಥಶಾಸ್ತ್ರವೆಂಬ ಹೆಸರು.

ಸಂಪತ್ತೇ ಈ ಶಾಸ್ತ್ರದ ವಿಷಯವಾದ ಕಾರಣ, ಸಂಪತ್ತೆಂದರೇನೆಂಬುವದನ್ನು ಮೊದಲು ಚನ್ನಾಗಿ ತಿಳುಕೊಳ್ಳುವದು ಅವಶ್ಯವದೆ.

ವಿನಿಮಯದಿಂದ ಬೆಲೆ ಬರುವ ಸರಕು ಸಂಪತ್ತೆನಿಸುವದು.—ಮಾರಿದರೆ ಬೆಲೆ ಬರುವ ಹಾಗೂ ಕೊಂಡರೆ ಬೆಲೆ ಬೀಳುವ ಪ್ರತಿಯೊಂದು ಒಡವೆಗೆ ಅರ್ಥಶಾಸ್ತ್ರದಲ್ಲಿ ಸಂಪತ್ತೆಂದು ಹೇಳುತ್ತಾರೆ. ಈ ಪ್ರಕಾರ ಹೊಲಮನೆ, ಕಾಳುಕಡಿ, ಅರಿವೆಅಂಚಡಿ ಮೊದಲಾದವುಗಳನ್ನು ಕೊಟ್ಟರೆ ಬೆಲೆ ಬರುವದು. ಇವುಗಳನ್ನು ಸಂಪಾದಿಸ ಬೇಕಾದರೆ ಬೆಲೆ ಕೊಡ ಬೇಕಾಗುವದು. ಆದ್ದರಿಂದ ಇಂಥ ಒಡವೆಗಳು ಸಂಪತ್ತೆನಿಸುವವು. ನಮಗೆ ಅತ್ಯಂತ ಅವಶ್ಯವಾದ ಹಾಗೂ ಮಹದುಪಯೋಗವುಳ್ಳ ಕೆಲ ಪದಾರ್ಥಗಳಲ್ಲಿ ಮೇಲೆ ಹೇಳಿದ ಸಂಪತ್ತಿನ ಲಕ್ಷಣವಿರುವದಿಲ್ಲ. ಉದಾಹರಣಾರ್ಥವಾಗಿ, ನಾವು ಉಸುರಾಡಿಸುವ ಹವೆ ಪ್ರಾಣರಕ್ಷಣಕ್ಕೆ ಅತ್ಯಾವಶ್ಯಕವಾದದ್ದು. ಆದರೂ ನಮಗೆ ಬೇಕಾದಷ್ಟು ಹವೆ ಆಯಾಸವಿಲ್ಲದೆ ದೊರೆಯುವ ಕಾರಣ, ಎಷ್ಟೇ ಹವೆಯನ್ನು ಕೊಟ್ಟರೂ ಅದಕ್ಕೇನು ಬೆಲೆ ಬರುವದಿಲ್ಲ. ಇದೇ ಪ್ರಕಾರ ಸೂರ್ಯನ ಪ್ರಕಾಶವು ಮಹದುಪಯೋಗವುಳ್ಳದ್ದಾದರೂ, ಅದಕ್ಕೆ ವಿನಿಮಯದಿಂದ ಬೆಲೆ ಬರುವದಿಲ್ಲ. ಆ ಕಾರಣ ಇಂಥ ಒಡವೆಗಳು ಸಂಪತ್ತೆನಿಸುವದಿಲ್ಲ. ಆದರೆ ಒಮ್ಮೆ ಸಂಪತ್ತೆನಿಸದ ಒಡವೆಗಳೂ ದೇಶಕಾಲಭೇದದಿಂದ ಸಂಪತ್ತಿನ ಒಡವೆಗಳಾಗಬಹುದು. ನೀರು ವಿಪುಲವಾಗಿದ್ದಲ್ಲಿ ನೀರಿಗೆ ಬೆಲೆ ಬೀಳುವದಿಲ್ಲವಾದ್ದರಿಂದ ಅಲ್ಲಿ ಅದು ಸಂಪತ್ತೆನಿಸುವದಿಲ್ಲ. ಆದರೆ ಸಾಕಷ್ಟು ನೀರು ಇಲ್ಲದ ಸ್ಥಳದಲ್ಲಿ, ನೀರಿಗೆ ಬೆಲೆ ಕೊಡ ಬೇಕಾಗುವದು. ಉದಾಹರಣಾರ್ಥವಾಗಿ, ದೊಡ್ಡ ಪಟ್ಟಣಗಳಲ್ಲಿ ನೀರು ಕಾಲಿವೆಗಳಿಂದಲೂ, ನಳಗಳಿಂದಲೂ ತರಬೇಕಾಗುವದು. ಇಂಥ ಪ್ರಸಕ್ತಿಯಲ್ಲಿ, ನೀರು ಬೆಲೆ ಬೀಳುವ ವಸ್ತುವಾಗುವ

ಕಾರಣ ಸಂಪತ್ತಿನ ಒಡವೆ ಎನಿಸುವದು. ಹವೆಯು ಸಂಪತ್ತಲ್ಲವೆಂದು ಮೇಲೆ ಹೇಳಿಯದೆ. ಆದರೆ ಹವೆಯು ಸಹ ಕೆಲವು ಸಂದರ್ಭಗಳಲ್ಲಿ ಸಂಪತ್ತೆನಿಸುವದು. ಮುಳುಗುವ ಗಂಟೆಗಳಲ್ಲಿಯೂ, ಆಳವಾದ ಕಣಿಗಳಲ್ಲಿಯೂ, ಹವೆಯನ್ನು ಕೊಳವೆಗಳಿಂದ ಹಾಕಬೇಕಾಗುವದು. ಇಂಥ ಪ್ರಸಕ್ತಿಗಳಲ್ಲಿ ಹವೆಗೆ ಬೆಲೆ ಬೀಳುವ ಕಾರಣ ಇಲ್ಲಿ ಹವೆಗೂ ಸಂಪತ್ತೆನ್ನಬೇಕು.

ಸಂಪತ್ತಿನ ನಿಜಹಾದ ಅರ್ಥವು ತಿಳಿಯದ್ದರಿಂದ ಜನರು ಅನೇಕ ಸಾರೆ ಬಹಳ ಹಾನಿಕರವಾದ ತಪ್ಪುಗಳನ್ನು ಮಾಡಿದ್ದಾರೆ. ಹಿಂದಕ್ಕೆ, ಸಂಪತ್ತು ಮತ್ತು ಹಣ ಇವೆರಡೂ ಒಂದೇ ಎಂದು ಸಮಸ್ತರೂ ತಿಳಿಯುತ್ತಿದ್ದರು. ಈ ಗ್ರಹಿಕೆಯ ಮೂಲಕವಾಗಿ, ಜನರು ಯಾವದೊಂದು ದೇಶದ ಸಂಪತ್ತನ್ನು ಆ ದೇಶದಲ್ಲಿದ್ದ ಚಿನ್ನ ಬೆಳ್ಳಿಗಳ ಮೇಲಿಂದ ತಿಳಿಯುತ್ತಿದ್ದರು. ಮತ್ತು ದೇಶದಲ್ಲಿ ಚಿನ್ನ ಬೆಳ್ಳಿಗಳು ಹೆಚ್ಚಿದ ಹಾಗೆ ದೇಶದ ಸಂಪತ್ತು ಅಭಿವೃದ್ಧಿಯಾಗುವದೆಂತಲೂ, ಚಿನ್ನ ಬೆಳ್ಳಿಗಳು ಕಡಿಮೆಯಾದ ಹಾಗೆ ದೇಶವು ಹೀನಸ್ಥಿತಿಯನ್ನು ಹೊಂದುವದೆಂತಲೂ ಭಾವಿಸಿ, ಸ್ವದೇಶದೊಳಗಿನ ಬೆಲೆಯುಳ್ಳ ಧಾತುಗಳು ಹೊರಗೆ ಹೋಗದಂತೆ ವ್ಯಾಪಾರಕ್ಕೆ ನಾನಾ ತರದ ಪ್ರತಿಬಂಧಗಳನ್ನು ಮಾಡುತ್ತಿದ್ದರು. ಆದರೆ ಅನೇಕರು ಈ ರೀತಿಯಾಗಿ ಹಣವೇ ಸಂಪತ್ತೆಂಬ ಭ್ರಮೆಗೆ ಕೇವಲ ನಿಷ್ಕಾರಣ ಒಳಗಾದರೆಂತಲೂ ಹೇಳಕೂಡದು. ಯಾಕಂದರೆ ಜನರು ಯಾವದೊಂದು ವಸ್ತುವಿನ ದರ್ಶಕಚಿನ್ಹವನ್ನು ನೋಡಿ, ಆ ಚಿನ್ಹವೇ ಮೂಲವಸ್ತುವೆಂದು ಭ್ರಾಂತಿಗೊಳ್ಳುವದು ಸಹಜವಾಗಿದುತ್ತದೆ. ಸಂಪತ್ತಿನ ಪರಿಮಿತಿಯನ್ನು ಹೇಳ ಬೇಕಾದರೆ, ಯಾವಾಗಲೂ ಹಣದ ಮೂಲ ಲೆಕ್ಕ ಮಾಡಿ ಹೇಳ ಬೇಕಾಗುವದು. ಯಾವನೊಬ್ಬ ಸಾವುಕಾರನ ಸಂಪತ್ತನ್ನು ಹೇಳಬೇಕಾದರೆ ಅವನು ಇಂತಿಷ್ಟು ರೂಪಾಯಿಯ ಆಸ್ತಿವಂತನೆಂದು ಹೇಳಬೇಕಾಗುತ್ತದೆ. ಇದೇ ಮೇರಿಗೆ, ದೇಶದ ಕಂದಾಯವೇ ಆಗಲಿ, ದೇಶದ ಖರ್ಚೇ ಆಗಲಿ, ಇಂತಿಷ್ಟು ರೂಪಾಯಿಗಳೆಂದು ಹೇಳಲ್ಪಡುವದು. ಆದ್ದರಿಂದ ಜನರು, ಹಣದಿಂದ ತೋರಿಸಲಾಗುವ ನಿಜವಾದ ಸಂಪತ್ತನ್ನು ಮರೆತು ಸಂಪತ್ತಿನ ದರ್ಶಕಚಿನ್ಹವಾದ ಹಣವೇ ಸಂಪತ್ತೆಂಬ ಗ್ರಹಿಕೆಯುಳ್ಳವರಾದರು.

ಈ ಸಂಗತಿಗಳಿಂದಲೂ ಬೇರೆ ಅನೇಕ ಸಂಗತಿಗಳಿಂದಲೂ ಜನರಿಗೆ ಹಣದ ನಿಜವಾದ ಸ್ವರೂಪವು ತಿಳಿಯದೆ, ಅವರ ಮನಸ್ಸಿನಲ್ಲಿ ತಪ್ಪು ಗ್ರಹಿಕೆಗಳು ನೆಲೆಗೊಳ್ಳುವದಕ್ಕೆ ಕಾರಣವಾಯಿತು. ಆದರೆ ಪೂರ್ವದಲ್ಲಿ ಚಿನ್ನ ಬೆಳ್ಳಿಗಳ ನಾಣ್ಯಗಳನು ಎಷ್ಟು ಮಾತ್ರವೂ ಉಪಯೋಗಿಸದಂಥ ಹಲವು ದೇಶದವರು ತಮ್ಮ ವ್ಯವಹಾರಗಳನ್ನು ಯಾವ ಬಗೆಯಿಂದ ನಡಿಸುತ್ತಿದ್ದರೆಂಬುವದನ್ನು ಇತಿಹಾಸದಿಂದ ತಿಳಿದು

ಕೊಂಡರೆ, ಹಣವು ಸಂಪತ್ತಲ್ಲವೆಂಬ ಮಾಹಿತು ಚನ್ನಾಗಿ ಮನವರಿಕೆಯಾಗುವದು. ಪೂರ್ವದಲ್ಲಿ ಚೀನ ದೇಶದ ನಿವಾಸಿಗಳು, ಚಹಾ ಎಲೆಯ ಚೌಕ ಹಲಪೆಗಳನ್ನು ಹಣವಾಗಿ ಉಪಯೋಗಿಸುತ್ತಿದ್ದರು. ಅಮೇರಿಕೆಯಲ್ಲಿ ಕೆಲವು ಕಾಡುಜಾತಿಗಳ ಜನರು ಎಲ್ಲ ಕ್ರಯವಿಕ್ರಯಗಳನ್ನು ಒಂದು ಬಗೆಯ ಚಿಪ್ಪಗಳಿಂದ ಮಾಡುವರು. ಅತಿ ಪ್ರಾಚೀನಕಾಲದಲ್ಲಿ, ಗ್ರೀಕ ಜನರು ದನಕರಗಳನ್ನು ಹಣವಾಗಿ ಉಪಯೋಗಿಸಿ, ಯಾವತ್ತು ವ್ಯವಹಾರಗಳನ್ನು ದನಕರಗಳ ಮೂಲವಾಗಿಯೇ ನಡಿಸುತ್ತಿದ್ದರು. ಇವರು ಸಮುದ್ರದ ಆಚೆ ದಂಡಿಯಲ್ಲಿದ್ದ ಪರರಾಷ್ಟ್ರಗಳ ಕೂಡ ವ್ಯಾಪಾರ ನಡಿಸ ಹತ್ತಿದಾಗ ಮಾತ್ರ, ದನಗಳಿಗೆ ಬದಲಾಗಿ, ಎತ್ತಿನ ಮುದ್ರೆಯುಳ್ಳ ಧಾತುವಿನ ತುಂಡುಗಳನ್ನು ಹಣವಾಗಿ ಉಪಯೋಗಿಸ ಹತ್ತಿದರು. ಕೆಲವು ಅರಬರೂ ದನಗಳನ್ನು ಹಣವಾಗಿ ಉಪಯೋಗಿಸುತ್ತಿದ್ದರೆಂದು ಅಡಾಮ್‌ಸ್ಮಿಥನು ಹೇಳಿದ್ದಾನೆ. ಹಣವೇ ಸಂಪತ್ತೆಂಬ ತಪ್ಪು ತಿಳುವಳಿಕೆಯು ಈ ಅರಬರೊಳಗೆ ಸಹ ಉಂಟಾಗಿತ್ತು. ಅವರು ಸಹ ದೊಡ್ಡ ದೊಡ್ಡ ದನಗಳ ಹಿಂಡುಗಳಿಲ್ಲದೆ ಯಾವ ದೇಶವೂ ಸಂಪತ್ತುಳ್ಳದ್ದಾಗದೆಂದು ನಂಬಿಕೊಂಡಿದ್ದರು. ಅವರು ಫ್ರಾನ್ಸ ದೇಶದ ಹೆಸರು ಮೊದಲು ಕೇಳಿದಾಗ ಆ ದೇಶದ ಸಂಪತ್ತು ತಿಳುಕೊಳ್ಳುವದಕ್ಕಾಗಿ ಅಲ್ಲಿ ದನಕರಗಳು ಎಷ್ಟುಂಟೆಂದು ಕೇಳಿದರಂತೆ. ಕಾಯಿಪಲ್ಲೆ, ಕಿರಾಣಿ ಜೀನಸು, ಮುಂತಾದವುಗಳನ್ನು ಕೊಳ್ಳಬೇಕಾದರೆ, ಪುಣೆಯಲ್ಲಿ ಕವಡಿಗಳನ್ನೂ, ಬಡೋದೆಯಲ್ಲಿ ಬಾದಾಮಿಗಳನ್ನೂ ಇಂದಿಗೂ ಉಪಯೋಗಿಸುವದುಂಟು. ಪ್ರತಿಯೊಂದು ದೇಶದ ಆದಿಸ್ಥಿತಿಯಲ್ಲಿ ಜನರಿಗೆ ಹಣದ ಸುದ್ದಿಯು ಸಹ ಇರುವದಿಲ್ಲ. ಆಗ ಯಾವತ್ತು ವಿನಿಮಯವು ಅದಲುಬದಲಿನಿಂದ ನಡಿಯುವದು. ಹ್ಯಾಗಂದರೆ, ಒಬ್ಬನ ಹತ್ತರ ಎತ್ತು ಕೊಡತಕ್ಕದ್ದಿದ್ದು ಅವನಿಗೆ ಕಾಳು ಬೇಕಾದರೆ, ಅವನು ತನ್ನ ಎತ್ತನ್ನು ತನಗೆ ಕಾಳು ಕೊಡುವವನಿಗೆ ಕೊಡುವನು. ಈ ಬಗೆಯ ವಿನಿಮಯದ ರೀತಿಯಿಂದ ವ್ಯಾಪಾರವು ಎಂದಿಗೂ ಚನ್ನಾಗಿ ಸಾಗಲಾರದೆಂಬುವದು ಸ್ಪಷ್ಟವದೆ. ಆದರೂ ಈ ಪ್ರಕಾರ ಅದಲುಬದಲು ಮಾಡಿ, ವ್ಯವಹಾರ ನಡಿಸುವಂಥ ಕಾಡುಜನರ ಹತ್ತರ ಏನೂ ಸಂಪತ್ತಿರುವದಿಲ್ಲೆಂದು ಹೇಳುವದು ಯಥಾರ್ಥವಾಗಲಾರದು. ಯಾಕಂದರೆ, ಹಿಂದೆ ಹೇಳಿದ ಪ್ರಕಾರ ವಿನಿಮಯದಿಂದ ಬೆಲೆ ಬರುವ ಪ್ರತಿಯೊಂದು ಒಡವೆ ಸಂಪತ್ತೆನಿಸುತ್ತದೆ.

**ಹಣದ ನಿಜವಾದ ಸ್ವರೂಪ.**—ಹಣವೆಂದರೇನು? ಹಣವು ಬೆಲೆಯ ಸಾರ್ವತ್ರಿಕ ಪ್ರಮಾಣವೂ, ವಿನಿಮಯದ ಸಾಧನವೂ, ಆಗಿರುವದು. ಬೆಲೆಯ ಸಾರ್ವತ್ರಿಕ ಪ್ರಮಾಣವೆಂದರೆ, ಬೇರೆ ಯಾವತ್ತು ಪದಾರ್ಥಗಳ ಬೆಲೆಗಳನ್ನು ಹೇಳುವಂಥ ಪ್ರಮಾಣವು. ಯಾವದಾದರೊಂದು ಪದಾರ್ಥವನ್ನು ಆರಿಸಿ. ಆ ಪದಾ

ರ್ಥದ ಮಾನದಿಂದ ಬೇರೆ ಯಾವತ್ತು ಪದಾರ್ಥಗಳ ಬೆಲೆಗಳನ್ನು ಹೇಳಬಹುದೆಂದು ಎಲ್ಲರೂ ಒಪ್ಪಿಕೊಳ್ಳಲಾಗಿ, ಆ ಪದಾರ್ಥವು ಬೇರೆ ಯಾವತ್ತು ಪದಾರ್ಥಗಳ ಬೆಲೆಯ ಪ್ರಮಾಣವಾಗುವದು. ಈ ಪದಾರ್ಥವು ಚಿನ್ನ ಇಲ್ಲವೆ ಬೆಳ್ಳಿಯಾಗಿರುವದು ಅವಶ್ಯವಿಲ್ಲೆಂದು ಮೇಲೆ ಹೇಳಿದ್ದೇವೆ. ಬೆಲೆಯ ಪ್ರಮಾಣವನ್ನು ಹೇಳುವದಕ್ಕೆ ಯಾವ ಪದಾರ್ಥವನ್ನಾದರೂ ಯೋಜಿಸಬಹುದು. ಉದಾಹರಣ. ಸರ್ವರ ಸಮ್ಮತಿಯ ಮೇರೆಗೆ, ಜೋಳವು ಹಣವೆಂದು ಸಂಕೇತಿಸಲ್ಪಟ್ಟಿತೆಂದು ತಿಳಿಯುವ. ಆಗ ಬೇರೆ ಯಾವ ಸರಕಿನ ಬೆಲೆ ಹೇಳ ಬೇಕಾದರೂ, ಅದನ್ನು ಜೋಳಕ್ಕೆ ಸರಿ ಮಾಡಿ ನೋಡಿ ಅದು ಇಂತಿಷ್ಟು ಜೋಳಕ್ಕೆ ಸರಿಯಾಗಿದೆಂದು ಹೇಳುವರು. ಈಗ ಯಾವದೊಂದು ಪದಾರ್ಥದ ಬೆಲೆ ಇಂತಿಷ್ಟು ರೂಪಾಯಿಯೆಂದು ಹೇಳುವಂತೆ, ಜೋಳವು ಬೇರೆ ಯಾವತ್ತು ಪದಾರ್ಥಗಳ ಬೆಲೆ ತಿಳಿಸುವ ಪ್ರಮಾಣವಾಗಿದ್ದಾಗ ಆ ಯಾವತ್ತು ಪದಾರ್ಥಗಳ ಬೆಲೆ ಜೋಳದ ಮಾನದಿಂದಲೇ ಹೇಳಲ್ಪಡುವದು.

ಹಣವು ವಿನಿಮಯದ ಸಾಧನವೆಂಬದರ ತಾತ್ಪರ್ಯವು, ಸರಕುಗಳ ಕೊಡುಕೊಳ್ಳೋಣವು ಹಣದ ಮೂಲವಾಗಿ ನಡಿಯುತ್ತದೆಂಬದೇ. ಹ್ಯಾಗಂದರೆ, ಒಬ್ಬ ಒಕ್ಕಲಿಗನು ತನ್ನದೊಂದು ಬಂಡಿಯನ್ನು ಕೊಟ್ಟು ಎತ್ತು ಸಂಪಾದಿಸಲಪೇಕ್ಷಿಸಿದರೆ, ಅವನು ಮೊದಲು ತನ್ನ ಬಂಡಿಯನ್ನು ಹಣಕ್ಕೆ ಮಾರಿ, ಬಂದ ಹಣದಿಂದ ಎತ್ತು ಕೊಳ್ಳುವನು. ಹೀಗೆ ಹಣದ ದ್ವಾರದಿಂದ ಎತ್ತು ಕೊಳ್ಳುವದು, ಬಂಡಿಯನ್ನೇ ಕೊಟ್ಟು ಅದಕ್ಕೆ ಬದಲಾಗಿ ಎತ್ತು ದೊರಕಿಸುವದಕ್ಕಿಂತಲೂ ಬಹು ಸುಲಭವಾಗಿರುವದು.

ಧನೈಕಾಭಿವೃದ್ಧಿ ಮತವು.—ಹಣವೇ ನಿಜವಾದ ಸಂಪತ್ತೆಂಬ ಭ್ರಮೆಯಿಂದ ಕೆಲವು ಕಾಲದ ಹಿಂದೆ ಬೇರೆಬೇರೆ ದೇಶಗಳ ಜನರು ತಮ್ಮ ದೇಶದೊಳಗಿನ ಬೆಳ್ಳಿ ಬಂಗಾರಗಳನ್ನು ಹೆಚ್ಚಿಸುವದಕ್ಕಾಗಿ, ಬಗೆಬಗೆಯ ಯುಕ್ತಿಗಳನ್ನು ಮಾಡುತ್ತಿದ್ದರೆಂದು ಹಿಂದೆ ಉಲ್ಲೇಖಿಸಿದ್ದೇವಷ್ಟೇ. ಆ ಕಾಲದಲ್ಲಿ ತಮ್ಮ ದೇಶದೊಳಗಿನ ಹಣದ ಸಂಚಯುವನ್ನು ವೃದ್ಧಿಪಡಿಸುವ ಉದ್ದೇಶದಿಂದ ರಾಜಕಾರಭಾರಿಗಳು, ಸ್ವದೇಶದಿಂದ ಪರದೇಶಗಳಿಗೆ ಆದಷ್ಟು ಹೆಚ್ಚು ಸರಕುಗಳು ಹೋಗುವಂತೆ, ಪರದೇಶಗಳಿಗೆ ಹೋಗುವ ಸರಕುಗಳಿಗೆ ಬಹಳ ಉತ್ತೇಜನ ಕೊಡುತ್ತಿದ್ದರು. ಮತ್ತು ಪರದೇಶಗಳ ಸರಕುಗಳು ಸ್ವದೇಶಕ್ಕೆ ಆದಷ್ಟು ಕಡಿಮೆ ಬರುವಂತೆ ಅವುಗಳ ಮೇಲೆ ಭಾರಿಯಾದ ಕಪ್ಪಗಳನ್ನು ಕೂಡ್ರಿಸುತ್ತಿದ್ದರು. ಈ ಮೇರಿಗೆ ವ್ಯಾಪಾರವನ್ನು ನಿರ್ಬಂಧಿಸುವದು, ಧನೈಕಾಭಿವೃದ್ಧಿಮತವೆನಿಸುವದು. ಇಂಗ್ಲಂಡದಲ್ಲಿ ಈ ಮತವು ಪ್ರಬಲವಾಗಿದ್ದಾಗ ಫ್ರಾನ್ಸದಿಂದ ಇಂಗ್ಲಂಡಕ್ಕೆ ಬರುವ ಮದ್ಯ, ರೇಶಿಮೆ, ಜರತಾರಿ, ಮೊದಲಾದ ಸರಕುಗಳು ಇಂಗ್ಲಂಡಕ್ಕೆ ಬಹಳ ಬರಬಾರದೆಂದು, ಆ ಸರಕುಗಳ ಮೇಲೆ ಭಾರಿಯಾದ ಕಪ್ಪಗಳನ್ನು ಕೂಡ್ರಿಸುತ್ತಿದ್ದರು. ಆಗಿನ ಜನರು ಭಾವಿಸಿದ್ದೇನಂದರೆ, ಫ್ರಾನ್ಸದೇಶದ

ಸರಕುಗಳು, ಇಂಗ್ಲಂಡದಲ್ಲಿ ಮಾರಲ್ಪಡುವದರಿಂದ, ಇಂಗ್ಲಂಡದೊಳಗಿನ ಹಣವು ಫ್ರಾನ್ಸಕ್ಕೆ ತೆರಳುವದು. ಮತ್ತು ಅದರಿಂದ ಇಂಗ್ಲಂಡದ ಸಂಪತ್ತು ಕಡಿಮೆಯಾಗುವದು. ಈ ಮತದ ದೋಷಗಳನ್ನು ಅಡಾಮ್ ಸ್ಮಿಥ್‌ನೆಂಬ ಅರ್ಥಶಾಸ್ತ್ರಜ್ಞನು "ರಾಷ್ಟ್ರೀಯ ಸಂಪತ್ತು" ಎಂಬ ತನ್ನ ಗ್ರಂಥದಲ್ಲಿ ಒಳಿತಾಗಿ ಬೈಲಿಗೆ ತಂದನು. ಇಂಗ್ಲಂಡದಲ್ಲಿ ಹಣದ ನಿಜವಾದ ಸ್ವರೂಪವನ್ನು ಈ ಗ್ರಂಥಕಾರನೇ ಮೊದಲು ತಿಳಿಸಿಕೊಟ್ಟವನು. ಪರದೇಶಗಳಿಗೆ ಹೋಗುವ ಸರಕುಗಳ ಮೇಲಾಗಲಿ ಪರದೇಶಗಳಿಂದ ಬರುವ ಸರಕುಗಳ ಮೇಲಾಗಲಿ ಕಪ್ಪ ಮುಂತಾದವುಗಳನ್ನು ಕೂಡ್ರಿಸದೆ, ವ್ಯಾಪಾರವನ್ನು ನಿರಾತಂಕವಾಗಿ ನಡಿಯಗೊಡುವದರಿಂದ ದೇಶದ ಆಮದ ರಪ್ತಗಳು ಕ್ರಮೇಣ ಒಂದಕ್ಕೊಂದು ಸರಿಯಾಗ ಹತ್ತುವವೆಂದು ಈ ಗ್ರಂಥಕಾರನು ಸಿದ್ಧಮಾಡಿ ತೋರಿಸಿದನು.

**ನಿರಾತಂಕವ್ಯಾಪಾರ.**—ಈ ವಿಷಯವು ಮುಂದೆ ಒಂದು ಅಧ್ಯಾಯದಲ್ಲಿ ವಿಶೇಷವಾಗಿ ವಿವರಿಸಲ್ಪಡುವದು. ಇಲ್ಲಿ ನಿರಾತಂಕ ವ್ಯಾಪಾರವೆಂದರೇನೆಂಬುವದನ್ನು ಮಾತ್ರ ತಿಳುಕೊಂಡರೆ ಸಾಕು. ಹೊರಗಿಂದ ಬರುವ ಸರಕುಗಳ ಮೇಲಿನ ಪ್ರತಿಬಂಧಕ ಕಪ್ಪಗಳನ್ನು ತೆಗಿದು, ವ್ಯಾಪಾರವನ್ನು ಸ್ವಾಭಾವಿಕ ಕ್ರಮದಂತೆ ನಡಿಯಗೊಡುವ ಪದ್ಧತಿಗೆ ನಿರಾತಂಕವ್ಯಾಪಾರವೆಂಬ ಹೆಸರು.

ಇವು ಪ್ರಾರಂಭದ ಸೂಚನೆಗಳಾದವು. ಇನ್ನು ಮುಂದೆ ಅರ್ಥಶಾಸ್ತ್ರದ ಮೂರು ಮುಖ್ಯ ಶಾಖೆಗಳಲ್ಲಿ ಮೊದಲನೆ ಶಾಖೆಯಾದ ಸಂಪದುತ್ಪಾದನವೆಂಬ ವಿಷಯವನ್ನು ಕುರಿತು ವಿಚಾರಿಸುವ.

### ಉಪೋದ್ಘಾತದ ಮೇಲಿನ ಪ್ರಶ್ನಗಳು.

೧. ಅರ್ಥಶಾಸ್ತ್ರವೆಂದರೇನು?
೨. ಸಂಪತ್ತೆಂದರೇನು?
೩. ಸಂಪತ್ತಿನ ನಿಜವಾದ ಸ್ವರೂಪದ ವಿಷಯವಾಗಿ ಜನರು ಯಾಕೆ ಭ್ರಾಂತಿಗೊಳ್ಳುವರು?
೪. ಹಣವೆಂದರೇನು?
೫. ಅದಲುಬದಲು ಅಂದರೇನು?
೬. ಬೇರೆಬೇರೆ ಕಾಲಗಳಲ್ಲಿ ಹಣವಾಗಿ ಉಪಯೋಗಿಸಲ್ಪಟ್ಟ ಕೆಲವು ಪದಾರ್ಥಗಳನ್ನು ಹೇಳಿರಿ.
೭. "ಧನೈಕಾಭಿವೃದ್ಧಿ ಮತದ" ಸ್ವರೂಪವನ್ನು ವರ್ಣಿಸಿರಿ.
೮. ಈ ತಪ್ಪು ಮತವು ಪ್ರಚಾರಗೊಂಡ ಬಗೆ ಹ್ಯಾಗೆ?
೯. "ಧನೈಕಾಭಿವೃದ್ಧಿ ಮತದ" ದೋಷಗಳನ್ನು ಯಾರು ಹೊರಗೆಡಹಿದರು?
೧೦. "ಧನೈಕಾಭಿವೃದ್ಧಿ ಮತದ" ತರುವಾಯ ಯಾವ ಪದ್ಧತಿಯು ಅನುಸರಿಸಲ್ಪಟ್ಟದೆ?

---

೧. ಕೈಯಲ್ಲಿ ಕಾಸಿಲ್ಲದವನು ಸಂಪತ್ತುಳ್ಳವನೆನಿಸಬಹುದೋ?
೨. ಸ್ಪಾರ್ಟನ್ ಜನರು ತಮ್ಮ ಪ್ರಾಂತದಲ್ಲಿ ಬಂಗಾರವನ್ನು ಬರಗೊಡುತ್ತಿದ್ದಿಲ್ಲ. ಅದರಿಂದ ಅವರು ಬಡವರಾಗಿದ್ದರೋ?
೩. ಹಿಂದುಸ್ತಾನದಲ್ಲಿ ಅದಲುಬದಲು ಈಗ್ಯೆ ನಿರ್ಮೂಲವಾಗಿರುವದೋ?



ಸಂಪ
ಉತ್ಪಾದನ
ವಿನಿ
ಭೂಮಿ
ಶ್ರಮ
ಬಂಡವಲ
ಬೆಲೆ
ಕ್ರಯ
ಗೊಬ್ಬರ ಗಳು
ಯಂತ್ರ ಗಳು
ಜವಳು ತೆಗಿಯೋಣ ಮುಂತಾದವುಗಳು
ಸ್ಥಿರ
ಚರ
ಬಾಹ್ಯ ಕಾರಣಗಳು
ಅಂತಸ್ಥ ಕಾರಣಗಳು
ಉಪಯೋಗಮೂಲಕವಾದ ಬೆಲೆ
ಸಂಪಾದನ ಶ್ರಮ
ಕಾರ್ಯಕ್ಷಮ ಬೇಡಿಕೆ
ಉತ್ಪಾದಕ
ಅನುತ್ಪಾದಕ
ಕೊಳ್ಳುವ ತ್ರಾಣ
ಸಂಪಾದಿಸುವ ಬಯಕೆ
ವಸ್ತುಗತ ಸಹಾಯಗಳು
ಮಾನಸಿಕ ಸಹಾಯಗಳು
ಕೂಲಿಕಾರರ ಕೌಶಲ್ಯ
ಬುದ್ಧಿ
ಸದಾಚರಣೆ
ಪ್ರಾಮಾಣಿಕತನ
ಕಾಗದದ ಹಣ
ಶ್ರಮ ವಿಭಾಗ
ಶ್ರಮಸಂಯೋಗ
ಯಂತ್ರಗಳ ಯೋಜನೆ
ಸಾಕ್ಷಾತ್ ಶ್ರಮ ಸಂಯೋಗ
ಫಲದ್ವಾರಕ ಶ್ರಮಸಂಯೋಗ
ಮುರಿಸಲಿಕ್ಕೆ ಬರುವ
ಶ್ರಮವನ್ನು ಉಳಿಸುತ್ತದೆ
ಉಳಿದ ಶ್ರಮಕ್ಕೆ ಕೆಲಸ್ಸ ಪೂರೈಸುತ್ತದೆ
ಬ್ಯಾಂಕಿನ ನೋಟುಗಳು
ಹಸ್ತಕೌಶಲ್ಯವು ಬೆಳೆಯೋಣ
ವೇಳೆಯ ಸದ್ವ್ಯಯ
ಹೊಸ ಶೋಧಗಳಾಗೋಣ
ಕೆಲಸಗಾರರ ತಕ್ಕ ಯೋಜನೆ

ತ್ರು



ವಿಷಯ
ವಿಭಾಗ
ಹಣ
ಸರಕುಗಳು
ಗೇಣಿ
ಸಂಬಳದ ಮೊಬಲಗು ಅಥವಾ (ಶ್ರಮದ ಖರ್ಚು)
ಲಾಭ
ಕರ
ಹೆಚ್ಚಿಸಲಿಕ್ಕೆ ಬಾರದವುಗಳು
ಹೆಚ್ಚು ಹುಟ್ಟಿಸಿದಂತೆ ಹೆಚ್ಚು ಖರ್ಚು ತಗಲುವ ಸರಕುಗಳು
ಹೆಚ್ಚು ಹುಟ್ಟಿಸಿದಂತೆ ಹೆಚ್ಚು ಖರ್ಚು ತಗಲದ ಸರಕುಗಳು
ಸಾಂಪ್ರದಾಯ
ಮೇಲಾಟ
ಬಂಡವಲದ ಬಡ್ಡಿ
ಲುಕಸಾನಿನ ಭಯದ ಪ್ರತಿಫಲ
ಮೇಲ್ವಿಚಾರಣೆಯ ಸಂಬಳ
ಸಾಗುವಳಿಯ ಮೇರೆ
ಹೆಚ್ಚಾದ ಬೆಲೆ
ಮೆಟೀರ್ ಎಂಬ ಕೋರು ಪಾಲಿನ ಪದ್ಧತಿ
ಕಾಟಿಯರ್ ಎಂಬ ಪದ್ಧತಿ
ಕೊನೇಕರ ಪದ್ಧತಿ
ಅಲ್‌ಸ್ಟರದ ಒಕ್ಕಲುಗಳ ಹಕ್ಕು
ಪ್ರತ್ಯಕ್ಷ
ಪರೋಕ್ಷ
ಶ್ರಮದ ಉತ್ಪಾದಕತ್ವ
ಸಂಬಳ ಅಥವಾ (ನಿಜವಾದ ಪ್ರತಿಫಲ)
ಉತ್ಪನ್ನ ಮಾಡುವ ಖರ್ಚು
ಧಾತುಗಳ ಹಣ
ತೊಗಲು, ಚಹ ಎಲೆ, ಉಪ್ಪು, ಇತ್ಯಾದಿ.
ಶ್ರಮ
ಮಿತಭೋಗ
ಲುಕಸಾನಿನ ಭಯ
ಬಂಗಾರ
ಬೆಳ್ಳಿ
ತಾಮ್ರ
ಮುರಿಸಲಿಕ್ಕೆ ಬಾರದ
ಉದ್ಯೋಗದ ಸೊಗಸುತನ
ಉದ್ಯೋಗವನ್ನು ಕಲಿಯುವ ಸೌಲಭ್ಯವೂ ಅಲ್ಪ ವೆಚ್ಚವೂ
ಉದ್ಯೋಗದ ಸ್ಥಿರತ್ವ
ಕೂಲಿಕಾರರ ಪ್ರಾಮಾಣಿಕತನ
ಉದ್ಯೋಗವು ಸಫಲ ಇಲ್ಲವೆ ನಿಷ್ಫಲವಾಗುವ ಸಂಭವ
ಚೆಕ್ಕುಗಳು
ಹುಂಡಿಗಳು
ಖಾತೆ ಲೆಖ್ಖಗಳು
ಸಮತ್ವದ ಸೂತ್ರ (ಆದಾಯದ ಮಾನದಿಂದ ಕರ)
ನಿಶ್ಚಿತತ್ವದ ಸೂತ್ರ (ಕರವು ನಿಶ್ಚಿತವಾಗಿರಬೇಕು ಮನಸೋಕ್ತವಾಗಿರ ಬಾರದು)
ಅನುಕೂಲತೆಯ ಸೂತ್ರ (ಕೇವಲ ಅನುಕೂಲವಾದ ವೇಳೆಗೆ, ಅನುಕೂಲವಾದ ರೀತಿಯಿಂದ ಕರ ತಕ್ಕೊಳ್ಳುವದು)
ಮಿತವ್ಯಯದ ಸೂತ್ರ (ಸರಕಾರಕ್ಕೆ ಬರುವ ರಕಮಿಗಿಂತಲೂ ಅದನ್ನು ಕಡಿಮೆ ಹೆಚ್ಚಾದ ರಕಮು ತಕ್ಕೊಳ್ಳಲ್ಪಡಬೇಕು)

# ೧ನೇ ಭಾಗ.

## ಸಂಪದುತ್ಪಾದನ.

ಅರ್ಥಶಾಸ್ತ್ರವು ಸಂಪತ್ತಿನ ಉತ್ಪಾದನ, ವಿಭಾಗ, ವಿನಿಮಯ, ಇವುಗಳ ನಿಯಮಗಳನ್ನು ವ್ಯಕ್ತಪಡಿಸುತ್ತದೆಂದು ಉಪೋದ್ಘಾತದಲ್ಲಿ ಹೇಳಲ್ಪಟ್ಟಿತಷ್ಟೆ. ಈ ಭಾಗದಲ್ಲಿ ಸಂಪದುತ್ಪಾದನದ ವಿಷಯವಾಗಿ ಹೇಳುವೆವು.

**ಸಂಪದುತ್ಪಾದನಕ್ಕೆ ಅವಶ್ಯವಾದ ಮೂರು ಸಾಧನಗಳು.**—ಸಂಪತ್ತು ಹುಟ್ಟಿಸುವದಕ್ಕೆ ಭೂಮಿ, ಶ್ರಮ, ಬಂಡವಲ ಎಂಬಿವು ಮೂರು, ಅವಶ್ಯವಾದ ಸಾಧನಗಳು. ಈ ಮೂರು ಸಾಧನಗಳು ಒಟ್ಟುಗೂಡುವದರಿಂದ ಸಂಪತ್ತು ಹುಟ್ಟುತ್ತದೆ. ಈ ಸಾಧನಗಳ ಕಾರ್ಯಗಳನ್ನು ಚನ್ನಾಗಿ ವಿವರಿಸುವದಕ್ಕಾಗಿಯೂ, ಸಂಪತ್ತು ಹುಟ್ಟಿಸುವಲ್ಲಿ ಪ್ರತಿಯೊಂದು ಸಾಧನದ ಗೌರವವನ್ನು ಸ್ಪಷ್ಟವಾಗಿ ತಿಳಿಸುವದಕ್ಕಾಗಿಯೂ, ಈ ಭಾಗದಲ್ಲಿ ಭೂಮಿ, ಶ್ರಮ, ಬಂಡವಲ ಎಂಬೀ ಮೂರು ವಿಷಯಗಳನ್ನು ಕುರಿತು ಮೂರು ಬೇರೆಬೇರೆ ಅಧ್ಯಾಯಗಳನ್ನು ಮಾಡಿದ್ದೇವೆ.

## ೧ನೇ ಅಧ್ಯಾಯ.

### ಭೂಮಿ.

**ಸಂಪದುತ್ಪಾದನದಲ್ಲಿ ಭೂಮಿಯ ಕರ್ತೃತ್ವ.**—ಈ ಜಗತ್ತಿನಲ್ಲಿ ಸಂಪತ್ತಿನ ಹೊಸ ಸೃಷ್ಟಿಯನ್ನು ಮಾಡುವದು, ಅಂದರೆ ಯಾವದೊಂದು ಸಂಪತ್ತಿನ ಒಡವೆಯನ್ನು ಹೊಸದಾಗಿ ನಿರ್ಮಾಣ ಮಾಡುವದು, ಮನುಷ್ಯನಿಗೆ ಶಕ್ಯವಲ್ಲ. ಜಗತ್ಕರ್ತನಿಂದ ನಿರ್ಮಿತವಾದ ಪದಾರ್ಥಗಳನ್ನೇ ತಕ್ಕೊಂಡು, ಅವುಗಳಿಗೆ ಬೇರೆಬೇರೆ ರೂಪಗಳನ್ನೂ ಆಕೃತಿಗಳನ್ನೂ ಕೊಟ್ಟು, ಅವುಗಳಲ್ಲಿ ಹೊಸ ರಸಗಳನ್ನೂ ಹೊಸ ಧರ್ಮಗಳನ್ನೂ ಹುಟ್ಟಿಸುವದಕ್ಕೆ ಮಾತ್ರ ಮನುಷ್ಯನು ಶಕ್ತನು. ಉದಾಹರಣಾರ್ಥವಾಗಿ, ಗಡಿಗೆ ಮಾಡುವ ಕುಂಬಾರನು ಜಗತ್ತಿನಲ್ಲಿ ಹೊಸ ವಸ್ತುವನ್ನು ನಿರ್ಮಾಣ ಮಾಡುವದಿಲ್ಲ; ಮೊದಲೇ ನಿರ್ಮಾಣವಾಗಿದ್ದ ಮಣ್ಣು ತೆಗೆದುಕೊಂಡು, ಅದಕ್ಕೆ ಗಡಿಗೆಯ ಆಕಾರ ಕೊಟ್ಟು, ಕಾವು ಕೊಡುವ ಬೇರೆಬೇರೆ ಬಗೆಗಳಿಂದ ಆ ಗಡಿಗೆಯ ಮಣ್ಣಿನ ಪರಮಾಣುಗಳು ಒಂದಕ್ಕೊಂದು ಅಂಟಿಕೊಳ್ಳುವಂತೆ ಮಾಡುತ್ತಾನೆ. ಭೂಮಿಯಲ್ಲಿ ಕಾಳು ಬೆಳಕೊಳ್ಳುವ ಒಕ್ಕಲಿಗನು ಹೊಸ ಸೃಷ್ಟಿಯನ್ನುಂಟು ಮಾಡುವದಿಲ್ಲ. ಆದರೆ ಭೂಮಿಯಲ್ಲಿ ಬೀಜ ಬಿತ್ತಿ, ಬೇರೆಬೇರೆ ಬಗೆಗಳಿಂದ ಭೂಮಿಯ

ಪರಮಾಣುಗಳು ಕ್ಕಾಳಿನ ರೂಪ ಹೊಂದುವಂತೆ ಮಾಡುತ್ತಾನೆ. ಈ ಮೇರೆಗೆ ಪೃಥ್ವಿಯೊಳಗಿನ ಪ್ರತಿಯೊಂದು ಒಡವೆ ಯಾವದಾದರೊಂದು ಸಿದ್ಧ ಪದಾರ್ಥದಿಂದ ಆಗಿರುತ್ತದೆಂದು ತೋರಿಸ ಬಹುದು. ಆಹಾರ ಹುಟ್ಟಿಸುವದಕ್ಕೆ ಭೂಮಿ ಎಂಬ ಸಿದ್ಧ ಪದಾರ್ಥವು ಬೇಕಾಗುತ್ತದೆ. ನಮ್ಮ ಹೊದಿಕೆಗಳು ಅರಳಿ, ನಾರು, ಉಣ್ಣೆ, ರೇಶಿಮೆ, ಮೊದಲಾದ ಮೂಲದ್ರವ್ಯಗಳಿಂದ ಆಗಿವೆ. ಕಣಿಗಳಿಂದ ಶೋಧಿಸಿ ತೆಗೆದ ಧಾತುಗಳಿಂದ ಯಂತ್ರ ಮೊದಲಾದವುಗಳನ್ನು ಮಾಡುತ್ತಾರೆ. ಮನೇ ಕಟ್ಟಲಿಕ್ಕೆ ಮಣ್ಣು, ಕಲ್ಲು, ಕಟ್ಟಿಗೆ, ಮೊದಲಾದ ಮೂಲದ್ರವ್ಯಗಳು ಬೇಕಾಗುತ್ತವೆ. ಈ ಪ್ರಕಾರ ಯಾವ ಒಡವೆಯಾದರೂ ಮೂಲದ್ರವ್ಯವಿಲ್ಲದೆ ಆಗಿರುವದಿಲ್ಲ. ಆದರೆ ಸ್ವಲ್ಪತಿಳಿದು ನೋಡಿದರೆ ಯಾವತ್ತು ಮೂಲದ್ರವ್ಯಗಳು ಭೂಮಿ ಎಂಬ ಸಿದ್ಧ ಪದಾರ್ಥದಿಂದ ಆಗಿರುವವೆಂಬದು ಲಕ್ಷ್ಯದಲ್ಲಿ ಬರುವದು. ಪ್ರತ್ಯಕ್ಷವಾಗಲಿ, ಪರಂಪರೆಯಿಂದಾಗಲಿ, ಭೂಮಿಯಿಂದ ಹುಟ್ಟದಂಥ ಸರಕು ಒಂದೂ ಇಲ್ಲ. ಅನ್ನ, ಅರಿವೆ, ಮುಂತಾದವುಗಳ ಮೂಲದ್ರವ್ಯಗಳು ಭೂಮಿಯಿಂದ ಹುಟ್ಟಿದವುಗಳೆಂಬದು ಸ್ಪಷ್ಟವಾಗಿದೆ. ಆದರೆ, ತೋರಿಕೆಯಲ್ಲಿ ಭೂಮಿಯಿಂದ ಹುಟ್ಟಿದಂತೆ ತೋರದ ಉಣ್ಣೆ, ರೇಶಿಮೆ, ಮೊದಲಾದ ಪದಾರ್ಥಗಳು ಸಹ ಪರಂಪರೆಯಿಂದ ಭೂಮಿಯಿಂದಲೇ ಹುಟ್ಟಿದವುಗಳಾಗಿವೆ. ಹ್ಯಾಗಂದರೆ, ಈ ಪದಾರ್ಥಗಳು, ಭೂಮಿಯಲ್ಲಿ ಹುಟ್ಟುವ ಹುಲ್ಲು, ತೊಪ್ಪಲ, ಗಿಡಗಂಟಿಗಳನ್ನು ತಿಂದು ಜೀವಿಸುವ ಪ್ರಾಣಿಗಳಿಂದ ದೊರಿಯುತ್ತವೆ. ಯಾವತ್ತು ಕೈಗಾರಿಕೆಯ ಒಡವೆಗಳು, ಪ್ರಾಣಿಜ ಪದಾರ್ಥಗಳಿಂದಾಗಲಿ, ಉದ್ಭಿಜ್ಜ ಪದಾರ್ಥಗಳಿಂದಾಗಲಿ, ಖನಿಜ ಪದಾರ್ಥಗಳಿಂದಾಗಲಿ, ಆಗಿರುವವು. ಆದರೆ ಈ ಯಾವತ್ತು ಪದಾರ್ಥಗಳು ಭೂಮಿಯಿಂದಲೇ ಹುಟ್ಟಿದವುಗಳು. ಆದ್ದರಿಂದ, ಸಂಪದುತ್ಪಾದನಕ್ಕೆ ಭೂಮಿಯು ಮೊದಲನೇ ಅವಶ್ಯವಾದ ಸಾಧನವೆಂದು ತಿಳಿಯತಕ್ಕದ್ದು.

ಸಂಪತ್ತು ಹುಟ್ಟಿಸುವದಕ್ಕೆ, ಭೂಮಿಯು ಅತ್ಯಂತ ಮಹತ್ವವುಳ್ಳ ಸಾಧನವಾದ್ದರಿಂದ, ಅಡಾಮ್‌ಸ್ಮಿಥನೆಂಬ ಅರ್ಥಶಾಸ್ತ್ರಜ್ಞನ ಕಾಲದಲ್ಲಿ ಫ್ರೆಂಚ ಅರ್ಥಶಾಸ್ತ್ರಜ್ಞರೆಲ್ಲರೂ, ಭೂಮಿಯೆಂಬುವದೊಂದೇ ಸಂಪದುತ್ಪಾದನದ ಸಾಧನವೆಂದು ಪ್ರತಿಪಾದಿಸುತ್ತಿದ್ದರು. ಆದರೆ ಸಂಪತ್ತು ಹುಟ್ಟಿಸುವದಕ್ಕೆ ಭೂಮಿಯಂತೆಯೇ ಶ್ರಮ, ಬಂಡವಲ, ಇವುಗಳಾದರೂ ಅವಶ್ಯವಾದವುಗಳೆಂಬುವದು ಮುಂದೆ ಸ್ಪಷ್ಟವಾಗುವದು.

**ಭೂಮಿಯ ಸಂಪದುತ್ಪಾದಕ ಧರ್ಮವನ್ನು ವರ್ಧಿಸುವ ಸಂಗತಿಗಳು.**— ಭೂಮಿಯ ಉತ್ಪಾದಕ ಶಕ್ತಿಯನ್ನು ಹೆಚ್ಚಿಸುವಂಥ ಅನೇಕ ಸಂಗತಿಗಳಿರುವವು.

ಇಂಗ್ಲಂಡದಲ್ಲಿ ಇತ್ತಲಾಗಿ ರಸಾಯನ ಶಾಸ್ತ್ರವು ಬಹಳ ಅಭಿವೃದ್ಧಿ ಹೊಂದಿರುವದರಿಂದ ಶಾಸ್ತ್ರೀಯ ಕೃತಿಗಳಿಂದ ಮಾಡಿದ ಗೊಬ್ಬರಗಳು ಯಾವತ್ತು ಒಕ್ಕಲಿಗರಿಗೆ ದೊರೆಯುತ್ತವೆ. ಅದರಿಂದ ಭೂಮಿಯ ಬೆಳೆಯು ಮೊದಲಿಗಿಂತ ಬಹಳ ಹೆಚ್ಚಾಗಿರುವದು. ಇದಲ್ಲದೆ ಇತ್ತಲಾಗಿ ಪೈರು ಕೊಯ್ಯುವ ಯಂತ್ರಗಳು, ಕಾಳು ಒಕ್ಕುವ ಯಂತ್ರಗಳು, ಇವು ಮೊದಲಾದ ಅನೇಕ ಯಂತ್ರಗಳು ಹೊರಟದ್ದರಿಂದ ಭೂಮಿ, ಶ್ರಮ, ಬಂಡವಲ, ಇವುಗಳಿಂದ ಮೊದಲಿಗಿಂತ ಬಹಳ ಹೆಚ್ಚು ಸಂಪತ್ತು ಹುಟ್ಟುತ್ತದೆ. ಕೇಮ್ರಿಜ ಮೊದಲಾದ ಪರಗಣೆಗಳೊಳಗಿನ ಯಾವ ಕೆಲಸಕ್ಕೂ ಬಾರದ ಕೊಳಚೆ ಪ್ರದೇಶಗಳೊಳಗಿಂದ ನೀರು ಹೊರ ಹೊರಡಿಸಿದ್ದರಿಂದ ಆ ಪ್ರದೇಶಗಳು ಈಗ ಬಹಳ ಬೆಳೆಯುಳ್ಳವಾಗಿವೆ. ಆದರೆ ಇಂಥಾ ಭೂಮಿಯನ್ನು ರೂಪಕ್ಕೆ ತರಬೇಕಾದರೆ, ಮುಖ್ಯವಾಗಿ ಬಹಳ ಶ್ರಮವೂ, ಬಂಡವಲವೂ ಬೇಕಾಗುತ್ತವೆಂಬುವದು ಸ್ಪಷ್ಟವದೆ. ಆದರೆ ನಮ್ಮ ದೇಶದಲ್ಲಿ ಭೂಮಿಯು ಹೆಚ್ಚು ಫಲವುಳ್ಳದ್ದಾಗುವದಕ್ಕೆ ಬೇರೆ ತರದ ಅಡ್ಡಿಗಳುಂಟು. ಇಲ್ಲಿ ಒಬ್ಬೊಬ್ಬ ಒಕ್ಕಲಿಗನು ಒಂದು ಸಣ್ಣ ಹೊಲ ಹಿಡಿದು ಅಷ್ಟೇ ಮಾಡಿ ತನ್ನ ಚರಿತಾರ್ಥ ಸಾಗಿಸುತ್ತಾನೆ. ಇಂಗ್ಲಂಡದಂತೆ ಇಲ್ಲಿ ಬಹಳ ದೊಡ್ಡ ಕಮತಗಳು ಇರುವದಿಲ್ಲ. ಆದ್ದರಿಂದ ಕೆರಿಗಳನ್ನು ಕಟ್ಟಿಸೋಣ, ಹಳ್ಳಗಳಿಗೂ ಹೊಳೆಗಳಿಗೂ ಒಡ್ಡು ಹಾಕಿ ನೀರು ಸಂಗ್ರಹಿಸೋಣ, ದೊಡ್ಡ ದೊಡ್ಡ ಕಾಲಿವೆಗಳನ್ನು ತೆಗೆದು ನೀರು ಹಾಯಿಸೋಣ, ಮೊದಲಾದ ಕೆಲಸಗಳಿಗೆ ಬೇಕಾಗುವ ಬಂಡವಲವು, ಈ ದೇಶದ ಒಕ್ಕಲಿಗರ ಕೈಯಲ್ಲಿ ಇರುವದಿಲ್ಲ. ಆ ಕಾರಣ ಇಂಥ ಕೆಲಸಗಳು ಸರಕಾರದವರು ಕೈಕೊಂಡರೆ ಮಾತ್ರ ನಡಿಯುತ್ತವೆ, ಇಲ್ಲದಿದ್ದರೆ ನಡಿಯುವದಿಲ್ಲ. ಇದಲ್ಲದೆ ಒಕ್ಕಲತನದ ಉಪಕರಣಗಳು ಇನ್ನೂ ಕಾಡುತರದವಾಗಿರುವವು. ಒಕ್ಕಲಿಗರ ಅಜ್ಞಾನದ ಮೂಲಕವಾಗಿ ಅವರಿಗೆ ಹೊಲ ಮಾಡುವ ಉತ್ಕೃಷ್ಟ ಕ್ರಮಗಳು ಗೊತ್ತಿರುವದಿಲ್ಲ. ಆದ್ದರಿಂದ ಭೂಮಿಯು ಫಲವತ್ತಾಗಿಯೂ, ಹವೆಯು ಸಸ್ಯಾದಿಗಳ ಬೆಳವಿಗೆ ಅನುಕೂಲವಾಗಿಯೂ ಇದ್ದಾಗ್ಯೂ, ಭೂಮಿಯಲ್ಲಿ ಆಗತಕ್ಕಷ್ಟು ಹುಟ್ಟುವಳಿಯಾಗುವದಿಲ್ಲ. ಒಕ್ಕಲತನದಲ್ಲಿ ಒಳ್ಳೇ ಸಾಹಿತ್ಯವು ಉಪಯೋಗಿಸಲ್ಪಟ್ಟು, ಬಾವಿ, ಕಾಲಿವೆ, ಮೊದಲಾದವುಗಳು ಹೆಚ್ಚಾಗಿ, ಭೂಮಿಗೆ ವಿಪುಲ ನೀರು ದೊರೆದರೆ, ಈ ದೇಶದ ಭೂಮಿಯಲ್ಲಿ ಸಾಂಪ್ರತದಕ್ಕಿಂತಲೂ ಬಹಳ ಹೆಚ್ಚು ಧಾನ್ಯವು ಹುಟ್ಟುವ ಹಾಗಿದೆ.

**ದೊಡ್ಡ ಕಮತಗಳೂ ಸಣ್ಣ ಕಮತಗಳೂ.**—ದೊಡ್ಡ ಕಮತಗಳನ್ನೂ ಸಣ್ಣ ಕಮತಗಳನ್ನೂ ಮಾಡುವದರಿಂದ ಆಗುವ ಲಾಭ, ನಷ್ಟಗಳ ವಿಷಯವಾಗಿ ಈಗ್ಗೇ

ಬಹಳ ಖರ್ಚನಡಿದ್ದಿರುವದು. ದೊಡ್ಡ ಕಮತಗಳಿಂದ ಆಗುವ ಮುಖ್ಯ ಲಾಭಗಳಲ್ಲಿ ಒಂದು ಲಾಭ ಯಾವದಂದರೆ, ಅವುಗಳಿಂದ ಒಕ್ಕಲತನದ ಕೆಲಸದಲ್ಲಿ ಸುಧಾರಿಸಿದ ಯಂತ್ರಗಳನ್ನು ಉಪಯೋಗಿಸುವದಕ್ಕೆ ಹೆಚ್ಚು ಅನುಕೂಲವಾಗುತ್ತದೆ. ೧೦೦೦ ಎಕರೆ ಭೂಮಿಯನ್ನು ಮಾಡುವ ಒಕ್ಕಲಿಗನಿಗೆ, ಉಗಿಯಿಂದ ನಡೆಯುವ ನೇಗಲವನ್ನೂ, ಒಕ್ಕುವ ಯಂತ್ರವನ್ನೂ, ಉಪಯೋಗಿಸುವದರಿಂದ ಲಾಭವಾಗುವದು. ಮತ್ತು ಇಂಥವನು ಒಕ್ಕಲತನದ ಸಾಮಾನಿನಲ್ಲಿ ಹೊಸಹೊಸದಾಗಿ ಆಗುವ ಯಾವತ್ತು ಸುಧಾರಣೆಗಳ ಉಪಯೋಗ ಮಾಡಿಕೊಳ್ಳ ಬಹುದು. ಆದರೆ ಸಣ್ಣ ಕಮತಗಳ ಕೆಲಸವು ಸ್ವಲ್ಪಾಗಿರುವದರಿಂದ, ಉಗಿಯಿಂದ ನಡೆಯುವ ಯಂತ್ರಗಳಿಂದ ಲಾಭವಾಗದು. ಇದಲ್ಲದೆ ಹೊಲಗಳ ವಿಸ್ತಾರದ ಮಾನದಿಂದ ಯಾವತ್ತು ವೆಚ್ಚಗಳು ಹೆಚ್ಚಾಗುವದಿಲ್ಲ. ೧೦೦೦ ಕುರಿ ಕಾಯುವದಕ್ಕೆ, ೫೦೦ ಕುರಿ ಕಾಯುವದಕ್ಕೆ ಬೇಕಾಗುವ ಕುರುಬರ ಇಮ್ಮಡಿ ಕುರುಬರು ಬೇಕಾಗುವದಿಲ್ಲ. ೫೦ ದನಗಳಿಗೆ ಬೇಕಾಗುವ ಕೊಟ್ಟಿಗೇ ಖರ್ಚಿನ ಎರಡಷ್ಟು ಖರ್ಚು ೧೦೦ ದನಗಳ ಕೊಟ್ಟಿಗೆಗೆ ಬೇಕಾಗುವದಿಲ್ಲ.

ಆದರೆ, ಸಣ್ಣ ಹೊಲಗಳನ್ನು ಮಾಡುವದರಿಂದ ಆಗುವ ಒಳಿತು ಏನಂದರೆ, ಸಣ್ಣ ಹೊಲ ಮಾಡುವವನು ಕೂಲಿಯವರ ಸಂಗಡ ತಾನೂ ಆಳಾಗಿ ದುಡಿಯುವನು. ಆದ್ದರಿಂದ, ಅವನ ಕೆಲಸವು ತಾತ್ಸಾರವಾಗಿ ಮೂರಾಬಟ್ಟೆಯಾಗುವದಿಲ್ಲ. ಸ್ವಂತ ಹಿತಕ್ಕಾಗಿ ಮನುಷ್ಯನು ಮನಮುಟ್ಟಿ ದುಡಿದಂತೆ ಪರರ ಹಿತಕ್ಕಾಗಿ ಎಂದಿಗೂ ದುಡಿಯುವದಿಲ್ಲ. ಸ್ವಾರ್ಥವು ಮನುಷ್ಯನಿಗೆ ಬಹಳ ಉತ್ತೇಜಕವಾಗಿರುವದು. ಆದ್ದರಿಂದ ಒಕ್ಕಲಿಗನು ತನ್ನ ಸ್ವಂತ ಲಾಭದ ಆಶೆಯಿಂದ ಹೊಲದಲ್ಲಿ ಮೈ ಮುರಿದು ದುಡಿಯುವಂತೆ ಕೂಲಿಯ ಆಳುಗಳು ಎಂದಿಗೂ ದುಡಿಯುವದಿಲ್ಲ. ಆಳು ಮಾಡಿದ್ದು ಹಾಳು ಎಂಬ ಗಾದೆ ಸರ್ವತ್ರ ಪ್ರಸಿದ್ಧವಾಗಿದೆ.

**ಭೂಮಿಯ ಸ್ವಾಮಿತ್ವವುಳ್ಳ ಒಕ್ಕಲಿಗರೂ ಗೇಣಿಗೆ ಹೊಲ ಮಾಡುವ ಒಕ್ಕಲುಗಳೂ.**— ಭೂಮಿಯ ಸ್ವಾಮಿತ್ವವುಳ್ಳ ಒಕ್ಕಲಿಗನಿಗೆ, ತಾನು ತನ್ನ ಹೊಲದಲ್ಲಿ ಮಾಡಿದ ಯಾವತ್ತು ಸುಧಾರಣೆಗಳ ಫಲವು ತನಗೆ ದೊರೆಯುವದೆಂಬ ಭರವಸವಿರುವದರಿಂದ ತನ್ನ ಹೊಲದಲ್ಲಿ ಆದಷ್ಟು ಹೆಚ್ಚು ಸುಧಾರಣೆಗಳನ್ನು ಮಾಡುತ್ತಿರುವನು. ಗೇಣಿಗೆ ಹೊಲ ಮಾಡುವ ಒಕ್ಕಲುಗಳು ತಾವು ಹೆಚ್ಚು ಶ್ರಮ ಪಟ್ಟು ಭೂಮಿಯನ್ನು ರೂಪಿತ ಮಾಡಿದರೆ ಹೆಚ್ಚು ಗೇಣೀ ಕೊಡ ಬೇಕಾಗುವದೆಂಬದನ್ನು ತಿಳಿದು ಎಂದೂ ಮನಮುಟ್ಟಿ ಕೆಲಸ ಮಾಡುವದಿಲ್ಲ. ಭೂಮಿಯ ಒಡೆತನವಿದ್ದ ಒಕ್ಕಲಿಗನಿಗೆ ಅವನ ಶ್ರಮದ ಯಾವತ್ತು ಫಲವು ದೊರೆಯುತ್ತದೆ.

ಭೂಮಿಯ ಒಡೆಯನಲ್ಲದ ಒಕ್ಕಲಿಗೆ, ತಾನು ಹೆಚ್ಚು ಶ್ರಮ ಮಾಡುವದರಿಂದ ತನ್ನ ಒಡೆಯನಿಗೆ ಲಾಭವಾಗುವದೇ ಹೊರ್ತು, ತನಗೆ ಆಗುವದಿಲ್ಲವೆಂಬದು ಚನ್ನಾಗಿ ತಿಳಿದಿರುತ್ತದೆ. ಇತಾಲಿ ದೇಶದ ಉತ್ತರ ಭಾಗದಲ್ಲಿ ಈ ತರದ ಒಕ್ಕಲುಗಳು ಬಹಳ. ಇವರು ಸಾಕಷ್ಟು ಹೊಟ್ಟೆಗಿಲ್ಲದ್ದರಿಂದ ಹೇಳ ಕೂಡದ ಕಷ್ಟಗಳನ್ನು ಅನುಭೋಗಿಸುತ್ತಾರೆ. ಯಾಕಂದರೆ, ಭೂಮಿಯ ಹುಟ್ಟುವಳಿಯೊಳಗಿಂದ ಅವರ ಹೊಟ್ಟೆ ಸಾಗುವಷ್ಟು ಮಾತ್ರ ಕಾಳು ಬಿಟ್ಟು ಉಳಿದ ಯಾವತ್ತು ಹುಟ್ಟುವಳಿಯನ್ನು ಭೂಮಿಯ ಒಡೆಯರು ಗೇಣಿಯ ರೂಪದಿಂದ ತೆಗೆದುಕೊಳ್ಳುತ್ತಾರೆ. ಸನ್ ೧೮೭೦ ಮತ್ತು ೧೮೮೧ನೇ ಇಸವಿಗಳಲ್ಲಿ ಆದ ಭೂಮಿಯ ಆಕ್ಟುಗಳ ಪೂರ್ವದಲ್ಲಿ, ಆಯರ್ಲಂಡ ದೇಶವು ಈ ಪದ್ಧತಿಯಿಂದ ಆಗುವ ಕೇಡುಗಳ ಉತ್ಕೃಷ್ಟ ಉದಾಹರಣವಾಗಿತ್ತು. ಈ ಕಾಯಿದೆಗಳು ಉಂಟಾಗುವ ಪೂರ್ವದಲ್ಲಿ, ಒಕ್ಕಲುಗಳು ಭೂಮಿಯನ್ನು ಒಡೆಯರಿಂದ ಚಾಲಗೇಣಿಯ ಕರಾರಿನಿಂದ ಹಿಡಿಯುತ್ತಿದ್ದರು. ವರ್ಷದ ಕೊನೆಗೆ ಭೂಮಿಯು ರೂಪಿತವಾದರೆ ಮರುವರ್ಷಕ್ಕೆ ಅವರು ಕೊಡತಕ್ಕ ಗೇಣಿಯನ್ನು, ಒಡೆಯರು ಏರಿಸುತ್ತಿದ್ದರು. ಇಲ್ಲವೆ ಒಡೆಯರು ತಮ್ಮ ಮನಸಿಗೆ ಬಂದಂತೆ, ಒಕ್ಕಲುಗಳು ಮಾಡಿದ ಸುಧಾರಣೆಗಳಿಗಾಗಿ ಏನೂ ಬೆಲೆ ಕೊಡದೆ ಅವರನ್ನು ಬಿಡಿಸುತ್ತಿದ್ದರು. ಸನ್ ೧೮೭೦ನೇ ಇಸವಿಯಲ್ಲಿ ಆದ ಆಕ್ಟಿನಿಂದ ಒಕ್ಕಲು ಮಾಡಿದ ಸುಧಾರಣೆಗಳಿಗಾಗಿಯೂ, ಅವನನ್ನು ಒಮ್ಮೇಲೆ ಬಿಡಿಸಿದರೆ ಅದಕ್ಕಾಗಿಯೂ, ಅವನಿಗೆ ತಕ್ಕ ಲುಕಸಾನು ಕೊಡಬೇಕೆಂಬ ಕಟ್ಟಳೆಯಾಯಿತು. ಮತ್ತು ಹೊಲವನ್ನು ಬಿಡುವ ಒಕ್ಕಲು ತಾನು ಮಾಡಿದ ಸುಧಾರಣೆಗಳಿಗಾಗಿ, ಹೊಲವನ್ನು ಹೊಸದಾಗಿ ಹಿಡಿಯುವ ಒಕ್ಕಲಿಂದ ಯೋಗ್ಯವಾದ ಕ್ರಯವನ್ನು ತಕ್ಕೊಳ್ಳ ಬಹುದೆಂದು ಕಾಯಿದೆಯಿಂದ ವಿಧಿಸಲಾಯಿತು. ಈ ತರದ ಪದ್ಧತಿಯು ಮೊದಲು ಅಲ್‌ಸ್ಟರ ಎಂಬ ಪರಗಣೆಯಲ್ಲಿ ಪ್ರಚಾರದಲ್ಲಿದ್ದದರಿಂದ ಈ ಪದ್ಧತಿಗೆ "ಅಲ್‌ಸ್ಟರ ಟೆನೆಂಟ ರಾಯಿಟ್" ಅಂದರೆ "ಅಲ್‌ಸ್ಟರದ ಒಕ್ಕಲುಗಳ ಹಕ್ಕು" ಎಂಬ ಹೆಸರು ಬಂತು. ಸನ್ ೧೮೮೧ನೇ ಇಸವಿಯಲ್ಲಿ ಉಂಟಾದ ಆಕ್ಟಿನಿಂದ ಒಕ್ಕಲಿಗೆ ಭೂಮಿಯ ವ್ಯಾಜ್ಯಗಳನ್ನು ತೀರ್ಥಿಸುವ ಕೋರ್ಟಿಗೆ ಅಪೀಲು ಮಾಡಿ, ಕೋರ್ಟಿನಿಂದ "ಯೋಗ್ಯವಾದ ಗೇಣಿಯನ್ನು" ಗೊತ್ತು ಮಾಡಿಸಿಕೊಳ್ಳುವ ಹಕ್ಕು ದೊರೆಯಿತು. ಈ ಪ್ರಕಾರ ಗೊತ್ತು ಮಾಡಲ್ಪಟ್ಟ ಗೇಣಿಯು ಹದಿನೈದು ವರ್ಷಗಳ ಪರ್ಯಂತರ ಬದಲಾಗುವದಿಲ್ಲ. ಒಕ್ಕಲಿಗೆ ಈ ಮೋರಿಗೆ ದೊರೆದ ಹಕ್ಕನ್ನು ಅವನು ಮಾರಬಹುದು. ಈ ಹಕ್ಕನ್ನು ಭೂಮಿಯ ಒಡೆಯನೇ ಕೊಳ್ಳದಿದ್ದರೆ, ಒಕ್ಕಲು ಅದನ್ನು ಬೇರೆಯವರಿಗೆ ಮಾರುವನು. ಈ ಪ್ರಕಾರ ಈ ಕಾಯಿದೆಯಿಂದ ಭೂಮಿಯನ್ನು

ಗೇಣಿಗೆ ಮಾಡುವ ಒಕ್ಕಲುಗಳಿಗೆ, ಭೂಮಿಯ ಒಡೆತನದಿಂದ ದೊರಿಯುವ ಲಾಭಗಳು ದೊರಕುತ್ತವೆ.

ಯುರೋಪದ ಬೇರೆ ರಾಷ್ಟ್ರಗಳಲ್ಲಿ, ಸಣ್ಣ ಹೊಲಗಳಿಂದಲೂ, ದೊಡ್ಡ ಹೊಲಗಳಿಂದಲೂ, ಆಗುವ ಲಾಭ ಲುಕಸಾನುಗಳನ್ನು ಕುರಿತು ಒಂದಕ್ಕೊಂದು ತೀರ ವಿರುದ್ಧವಾದ ಮತಗಳುಂಟು. ಆದರೆ ಸಣ್ಣ ಹೊಲಗಳನ್ನು ಮಾಡುವ ಪದ್ಧತಿಯು ಇಲ್ಲದ ದೇಶಗಳಲ್ಲಿ, ಕೆಲವು ಹುಟ್ಟುವಳಿಗಳು ಬಹುತರ ಚನ್ನಾಗಿ ಆಗುವದಿಲ್ಲ. ಹಣ್ಣುಹಂಪಲ ಬೆಳಿಸುವದೂ, ಹೈನ ಮಾಡುವದೂ, ಸಣ್ಣ ಸಣ್ಣ ಹೊಲಗಳನ್ನು ಮಾಡುವ ಪದ್ಧತಿಯು ಇದ್ದ ಪ್ರಾಂತಗಳಲ್ಲಿ ಮಾತ್ರ ಚನ್ನಾಗಿ ನಡಿಯುವದೇ ಹೊರ್ತು ಬೇರೆ ಕಡೆಯಲ್ಲಿ ನಡಿಯುವದು ಅಪರೂಪ. ಇತ್ತಲಾಗಿ ಇಂಗ್ಲಂಡದಲ್ಲಿ ಕಮತಗಳ ವಿಸ್ತಾರವು ಬಹಳ ಬೆಳೆದದ್ದರಿಂದ ಭೂಮಿಯ ಒಡೆಯರೂ, ಒಡತಿಯರೂ, ವಿಶೇಷ ದೊಡ್ಡಸ್ತಿಕೆಯುಳ್ಳವರಾಗಿರುವರು. ಆದ್ದರಿಂದ ಅವರು ತಮ್ಮ ಪೂರ್ವಜರಂತೆ ಬೆಳಿಗ್ಯೆ ಐದು ಗಂಟೆಗೆ ಎದ್ದು ಹೈನ ಮುಂತಾದ ಕೆಲಸಗಳನ್ನು ಸ್ವತಃ ಮಾಡದೆ ಈ ಕೆಲಸಗಳನ್ನು ಆಳುಗಳಿಗೆ ಒಪ್ಪಿಸುವರು. ಆದ ಕಾರಣ ಅಲ್ಲಿ ಈಗ್ಯೆ ಚಲೋ ಹಾಲು ಮತ್ತು ಬೆಣ್ಣೆ ದುರ್ಲಭವಾಗಿವೆ. ಅದೇ, ಫ್ರಾನ್ಸದಲ್ಲಿ ಸಣ್ಣ ಕಮತಗಳು ಇರುವದರಿಂದ ಅಲ್ಲಿ ಈ ತೊಂದರೆ ಸಂಭವಿಸುವದಿಲ್ಲ. ಸಣ್ಣ ಕಮತಗಳಿಂದಲೂ, ದೊಡ್ಡ ಕಮತಗಳಿಂದಲೂ, ಆಗುವ ಒಳಿತು ಹೀನಗಳನ್ನು ಕುರಿತು, ಇದುವರೆಗೆ ಬಹಳ ಚರ್ಚೆ ನಡಿದಾಗ್ಯೂ ಈ ಮಾತಿನ ಇತ್ಯರ್ಥವು ಇನ್ನೂ ನೆಟ್ಟಗೆ ಆಗಿಲ್ಲ. ಒಕ್ಕಲುಗಳು, ತಾವು ಮಾಡುವ ಭೂಮಿಯಲ್ಲಿ ತಮ್ಮ ಹಿತವುಂಟೆಂದು ತಿಳಿಯುವ ಹಾಗೆ ಮಾಡಿ, ಮೇಲೆ ಹೇಳಿದ ಎರಡೂ ಪದ್ಧತಿಗಳ ಲಾಭಗಳನ್ನು ಒಟ್ಟುಗೂಡಿಸುವದೊಂದು ಕ್ರಮ ಉಂಟು. ಆ ಕ್ರಮವು ಮುಂದೆ ಒಂದು ಅಧ್ಯಾಯದಲ್ಲಿ ವಿವರಿಸಲ್ಪಡುವದು.

## ಮೊದಲನೆ ಅಧ್ಯಾಯದ ಮೇಲಿನ ಪ್ರಶ್ನಗಳು.

೧. ಸಂಪತ್ತನ್ನು ಹುಟ್ಟಿಸುವದಕ್ಕೆ ಅವಶ್ಯವಾದ ಮೂರು ಸಾಧನಗಳು ಯಾವವು?

೨. ಸಂಪತ್ತನ್ನು ಹುಟ್ಟಿಸುವದಕ್ಕೆ ಭೂಮಿಯು ಅವಶ್ಯವಾದ ಸಾಧನವೆಂಬುವದನ್ನು ಸಿದ್ಧ ಮಾಡಿರಿ.

೩. ಭೂಮಿಯ ಉತ್ಪಾದಕ ಶಕ್ತಿಯನ್ನು ಹೆಚ್ಚಿಸುವ ಕೆಲವು ಸ್ಪಷ್ಟವಾದ ಸಾಧನಗಳನ್ನು ಹೇಳಿರಿ.

೪. ಸಣ್ಣ ಮತ್ತು ದೊಡ್ಡ ಕಮತಗಳಿಂದ ಆಗುವ ಕೆಲವು ಒಳಿತು ಹೀನಗಳನ್ನು ವರ್ಣಿಸಿರಿ.

೫. ಭೂಮಿಯ ಒಡೆತನವುಳ್ಳ ಒಕ್ಕಲಿಗರಿಗೂ, ಭೂಮಿಯ ಒಡೆತನವಿಲ್ಲದ ಒಕ್ಕಲುಗಳಿಗೂ, ಭೇದವ್ಯಾಕೆ ಉಂಟು?

೧. ಒಬ್ಬ ಗ್ರಂಥಕರ್ತನು ತನ್ನ ಗ್ರಂಥದ ಸ್ವಾಮಿತ್ವವನ್ನು ೧೫೦೦ ರೂಪಾಯಿಗೆ ಮಾರಿದನು. ಈ ಸ್ವಾಮಿತ್ವಕ್ಕೆ ವಿನಿಮಯದಿಂದ ಬೆಲೆ ಬಂದದರಿಂದ ಇದು ಸಂಪತ್ತಾಯಿತು. ಆದರೆ ಈ ಸಂಪತ್ತನ್ನು ಹುಟ್ಟಿಸುವಲ್ಲಿ ಭೂಮಿ ಬಂಡವಲಗಳಿಂದ ಏನು ಕಾರ್ಯವಾಯಿತು?

## ೨ನೇ ಅಧ್ಯಾಯ.

### ಶ್ರಮ.

**ಶ್ರಮವು ಸಂಪದುತ್ಪಾದನಕ್ಕೆ ಅವಶ್ಯವಾದ ಎರಡನೆ ಸಾಧನವಾಗಿದೆ.**— ಸಂಪತ್ತನ್ನು ಹುಟ್ಟಿಸುವದಕ್ಕೆ ಶ್ರಮವು ಎರಡನೆ ಸಾಧನವು. ಮೂಲದ್ರವ್ಯಗಳು ತಮ್ಮಿಂದ ತಾವೇ ಸಂಪತ್ತಾಗುವದಿಲ್ಲ. ಒಳ್ಳೇ ಸುಭಿಕ್ಷವಾದ ಭೂಮಿಯುಳ್ಳವನು ಅದನ್ನು ಬಿತ್ತಿ ಬೆಳಕೊಳ್ಳುವ ಶ್ರಮ ಮಾಡಿದ ಹೊರ್ತು, ಅದರಿಂದ ಅವನಿಗೆ ಪ್ರಯೋಜನವಾಗದು. ಅಡವಿಯಲ್ಲಿ ತಮ್ಮಿಂದ ತಾವೇ ಬೆಳೆದ ಗಿಡಗಳ ಹಣ್ಣುಗಳನ್ನು ಹರಿದು ತರುವ ಶ್ರಮ ಮಾಡಿದ ಹೊರ್ತು, ಅವು ಸಂಪತ್ತಾಗುವದಿಲ್ಲ. ಅರಣ್ಯದೊಳಗಿನ ಮೊಲ, ಚಿಗರಿ, ಮುಂತಾದ ಪ್ರಾಣಿಗಳನ್ನು ಬೇಟೆಯಾಡಿ ತರುವ ಶ್ರಮ ಮಾಡಿದನಂತರವೇ ಅವು ಸಂಪತ್ತಾಗುತ್ತವೆ. ಇಂಗ್ಲೀಷರು ಅಮೇರಿಕೆಯಲ್ಲಿ ಒಕ್ಕಲಿಕ್ಕಿ ವಾಸ ಮಾಡುವ ಪೂರ್ವದಲ್ಲಿ, ಅಲ್ಲಿ ಎಲ್ಲ ಮೂಲದ್ರವ್ಯಗಳು ಸಮೃದ್ಧಿಯಾಗಿದ್ದವು. ಕಸುವುಳ್ಳ ಭೂಮಿ, ಕಲ್ಲಿದ್ದಲಿ, ಧಾತುಗಳು, ಮೊದಲಾದವುಗಳ ಕಣಿಗಳು ದಿಕ್ಕಿಲ್ಲದೆ ಬಿದ್ದಿದ್ದವು. ಆದರೂ ಅಲ್ಲಿಯ ಮೂಲನಿವಾಸಿಗಳಿಗೆ ತಕ್ಕಷ್ಟು ಜ್ಞಾನವೂ, ಮನಮುಟ್ಟಿ ಶ್ರಮ ಮಾಡುವ ಬುದ್ಧಿಯೂ, ಇಲ್ಲದ್ದರಿಂದ ಅವರು ಸಾವಿರಾರು ವರ್ಷ ತಾಪತ್ರಯದಲ್ಲಿ ಮುಳುಗಿದ್ದರು. ಉಪೋದ್ಘಾತದಲ್ಲಿ ಸಂಪತ್ತಿನ ಸ್ವರೂಪವನ್ನು ನಿರ್ಣೈಸುವಾಗ, ಮೊದಲು ಸಂಪತ್ತೆನಿಸದ ಒಡವೆಗಳು ದೇಶ ಕಾಲ ಭೇದದಿಂದ ಸಂಪತ್ತೆನಿಸುವ ಬಗೆಯನ್ನು ವಿವರಿಸಿದ್ದೇವೆ. ಈ ಪ್ರಕಾರ ನೀರು ಶ್ರಮವಿಲ್ಲದೆ ವಿಪುಲವಾಗಿ ದೊರೆಯುವಲ್ಲಿ ನೀರಿಗೆ ಬೆಲೆ ಬರುವದಿಲ್ಲ. ಆದರೆ ನೀರು ಬೇಕಾಗಿರುವ ಸ್ಥಳಕ್ಕೆ ಅದನ್ನು ತಂದು ಕೊಡುವ ಶ್ರಮ ಮಾಡುವದರಿಂದ ನೀರಿಗೆ ಸಹ ಸಂಪತ್ತಿನ ಸ್ವರೂಪ ಬರುತ್ತದೆ. ಈ ಮೇರೆಗೆ ವಿನಿಮಯದಿಂದ ಬೆಲೆ ಬರುವ ಯಾವತ್ತು ಸರಕುಗಳು, ಬೇರೆಬೇರೆ ತರದ ಶ್ರಮದಿಂದ ಉಂಟಾಗಿರುವವೆಂದು ಕಂಡು ಬರುವದು. ನಾವು ತಿನ್ನುವ ಭಕ್ಕರಿಯು ತೀರ ಸಾಧಾರಣ ವಸ್ತುವಾಗಿದೆ. ಆದರೂ ಈ ವಸ್ತುವನ್ನು ಉಂಟು ಮಾಡಲಿಕ್ಕೆ ಎಷ್ಟು ಜನರು ಶ್ರಮಪಟ್ಟಿದ್ದಾರೆಂಬದನ್ನು ಹೇಳುವದು ಕೂಡ ಅಸಾಧ್ಯವಾಗುವದು. ಭಕ್ಕರೀ

ಸುಡುವವನ ಶ್ರಮವು, ಭಕ್ಕರಿಯನ್ನು ಉಂಟು ಮಾಡುವದಕ್ಕೆ ಬೇಕಾದ ಯಾವತ್ತೂ ಶ್ರಮದ ಅತ್ಯಲ್ಪ ಭಾಗವಾಗಿದೆ. ಯಾಕಂದರೆ, ಭಕ್ಕರೀ ಸುಡುವವನ ಕೈಗೆ ಹಿಟ್ಟು ಬರುವ ವರೆಗೆ, ಅದಕ್ಕಾಗಿ, ಹೊಲ ಹಸನ ಮಾಡಿದವರು, ಕಾಳು ಬಿತ್ತಿದವರು, ಪೈರು ಕೊಯಿದವರು, ರಂಟೆ, ಕುಂಟೆ, ಕೂರಗಿ, ಕುಡಗೋಲು, ಮೊದಲಾದ ಒಕ್ಕಲತನದ ಮುಟ್ಟುಗಳನ್ನು ಮಾಡಿದ ಶಿಲ್ಪಗಾರರು, ಕುಡಗೋಲು ಮುಂತಾದ ವುಗಳಿಗೆ ಬೇಕಾಗುವ ಧಾತುಗಳ ಕಣಿಗಳಲ್ಲಿ ಕೆಲಸ ಮಾಡಿದವರು, ಇವರಲ್ಲದೆ ಬೇರೆಬೇರೆ ಮೂಲ ದ್ರವ್ಯಗಳನ್ನು, ಅವುಗಳು ಬೇಕಾಗಿರುವ ಸ್ಥಳಗಳಿಗೆ ವೈದು ಮುಟ್ಟಿಸಿದ ಬಂಡಿಯವರು, ನಾವಿಕರು, ಹಡಗ ನಡಿಸುವವರು, ಹಡಗಗಳನ್ನು ಮಾಡಿದವರು ಮೊದಲಾದ ಅಸಂಖ್ಯ ಜನರು ದುಡಿದಿರುವರು. ಈ ಸಂಗತಿಗಳಿಂದ ತಿಳಿಯುವದೇನಂದರೆ, ಸಂಪತ್ತು ಹುಟ್ಟಿಸುವದಕ್ಕೆ ವಿಪುಲವಾದ ಮೂಲದ್ರವ್ಯ ಗಳಿಗಿಂತಲೂ ಜಾಣತನದಿಂದಲೂ ಏಕಪ್ರಕಾರವಾಗಿಯೂ ಮಾಡಿದ ಶ್ರಮವೇ ಹೆಚ್ಚು ಪ್ರಯೋಜನವುಳ್ಳದ್ದಾಗಿದೆ.

ಸಂಪತ್ತನ್ನು ಹುಟ್ಟಿಸುವಲ್ಲಿ ಶ್ರಮದಿಂದಾಗುವ ಕಾರ್ಯದ ಯಥಾರ್ಥ ಸ್ವರೂಪದ ವ್ಯಾಖ್ಯೆ.—ಸಂಪತ್ತನ್ನು ಹುಟ್ಟಿಸುವ ಕೆಲಸದಲ್ಲಿ ಶ್ರಮದಿಂದಾಗುವ ಕಾರ್ಯದ ನಿಜವಾದ ಸ್ವರೂಪದ ವಿಷಯವಾಗಿ, ಮಿಲ್‌ನೆಂಬ ಅರ್ಥಶಾಸ್ತ್ರಜ್ಞನು ಹೇಳಿದ ವ್ಯಾಖ್ಯೆಯು ಯಾವದಂದರೆ, "ಪದಾರ್ಥಗಳನ್ನು ಯೋಗ್ಯವಾದ ಸ್ಥಳಗ ಳಲ್ಲಿ ಇರಿಸೋಣ," ಅಥವಾ "ಯಾವದೊಂದು ಪದಾರ್ಥವನ್ನು ಮತ್ತೊಂದು ಪದಾರ್ಥದ ಸಮೀಪಕ್ಕೆ ವೈಯೋಣ, ಇಲ್ಲವೆ ಅದನ್ನು ಮತ್ತೊಂದು ಪದಾರ್ಥ ದಿಂದ ಅಗಲಿಸೋಣ," ಇಷ್ಟೇ ಕಾರ್ಯವು ಶ್ರಮದಿಂದ ಆಗುತ್ತದೆ. ಈ ವ್ಯಾ ಖ್ಯೆಯು ಸಣ್ಣದಾಗಿದ್ದರೂ ಅತ್ಯಂತ ವ್ಯಾಪಕವಾದ ಅರ್ಥವುಳ್ಳದ್ದಾಗಿದೆ. ಯಾಕಂ ದರೆ, ನಾನಾ ತರದ ಯಾವತ್ತೂ ಕೈಗಾರಿಕೆಯ ಉದ್ಯೋಗಗಳು ಈ ವ್ಯಾಖ್ಯೆ ಯೊಳಗೆ ಬರುತ್ತವೆಂದು ಕಂಡು ಬರುವದು. ಈ ಮೇರೆಗೆ "ಭೌತಿಕ ಸೃಷ್ಟಿಯಲ್ಲಿ ಶ್ರಮವು, ಯಾವಾಗಲೂ ಪದಾರ್ಥಗಳಲ್ಲ ಗತಿಯನ್ನುಂಟು ಮಾಡುವದೊಂದೇ ಕೆಲಸದಲ್ಲಿ ತೊಡಗಿರುತ್ತದೆ. ಉಳಿದ ಕಾರ್ಯವು, ಸೃಷ್ಟಪದಾರ್ಥಗಳ ನೈಸರ್ಗಿಕ ಗುಣಗಳಿಂದಲೂ, ಸೃಷ್ಟಿಯ ನಿಯಮಗಳಿಂದಲೂ, ಆಗುತ್ತದೆ". ಈ ಸಂಗತಿಗ ಳನ್ನು ಕೆಲ ಉದಾಹರಣಗಳನ್ನು ಕೊಟ್ಟು ವ್ಯಕ್ತ ಪಡಿಸುವ.

ಮನೆ ಕಟ್ಟುವ ಕೆಲಸದಲ್ಲಿ ಶ್ರಮದಿಂದ ನೆರವೇರುವ ಕಾರ್ಯವನ್ನು ಆಲೋ ಚಿಸಿರಿ. ಇಟ್ಟಂಗಿಗಳನ್ನು ಮಾಡುವ ಬಗೆ ಹ್ಯಾಗೆ? ಒಂದು ತರದ ಅರ್ಲನ್ನು ಅದಿದ್ದ ಸ್ಥಳದಿಂದ ತಂದು, ಅದನ್ನು ಇಟ್ಟಂಗಿಯ ಅಚ್ಚಿನಲ್ಲಿ ಹಾಕಿ ಒತ್ತಿ, ಅಸಂ

ತರ ಅದನ್ನು ಬೆಂಕಿಯ ಸಮೀಪಕ್ಕೆ ತರುವದರಿಂದ, ಇಟ್ಟಂಗಿಗಳಾಗುತ್ತವೆ. ಹಲಿಗೆಗಳು ಹ್ಯಾಗೆ ಆಗುತ್ತವೆ? ಗಿಡದೊಳಗಿಂದ ಕೊಡ್ಲಿಯನ್ನು ಹಾಯಿಸುವದರಿಂದ ಮತ್ತು ಬಿದ್ದ ಮರದ ಬಡ್ಡಿಯೊಳಗಿಂದ ಕರಗಸವನ್ನು ಹಾಯಿಸುವದರಿಂದ, ಹಲಿಗೆಗಳುಂಟಾಗುತ್ತವೆ. ಅನ್ನವು ಹ್ಯಾಗೆ ಸಿದ್ಧವಾಗುತ್ತದೆ? ಅಡಿಗೆಯವನು ಅಕ್ಕಿಯನ್ನು ತಂದು ಪಾತ್ರೆಯಲ್ಲಿ ಹಾಕಿ, ಪಾತ್ರೆಯಲ್ಲಿ ನೀರು ಸುರುವಿ, ಬೆಂಕಿಯ ಮೇಲಿಟ್ಟು ಅಕ್ಕಿಗೂ, ನೀರಿಗೂ, ಅಗ್ನಿಗೂ ಸಂಯೋಗವಾಗುವಂತೆ ಮಾಡುತ್ತಾನೆ. ಮುಂದಿನ ಕಾರ್ಯವು, ಅಂದರೆ ಅಕ್ಕಿಯು ಬೇಯೋಣ, ಅದರಲ್ಲಿ ರುಚಿಯೂ, ಸ್ವಾದವೂ, ಹುಟ್ಟೋಣ ಈ ಕಾರ್ಯವು ಅಕ್ಕಿ, ನೀರು, ಅಗ್ನಿ, ಇವುಗಳ ನೈಸರ್ಗಿಕ ಗುಣಗಳಿಂದ ಆಗುತ್ತದೆ. ಈ ಮೇರಿಗೆ "ಮನುಷ್ಯನಿಗೆ ಸೃಷ್ಟಪದಾರ್ಥಗಳ ಮೇಲೆ ತನ್ನ ಕಾರ್ಯ ನಡಿಸುವದಕ್ಕೆ, ಆ ಪದಾರ್ಥಗಳಲ್ಲಿ ಚಲನೆಯನ್ನುಂಟು ಮಾಡುವದೊಂದೇ ಸಾಧನ ಉಂಟು." ಈ ತತ್ವದ ಸತ್ಯತೆಯನ್ನು ಸಿದ್ಧಮಾಡುವದಕ್ಕೆ, ಇದಕ್ಕೂ ಹೆಚ್ಚಿಗೆ ಉದಾಹರಣಗಳನ್ನು ಹೇಳುವ ಅವಶ್ಯವಿಲ್ಲ. (ಮಿಲ್ ಧೊರೆಯ "ಅರ್ಥಶಾಸ್ತ್ರದ ತತ್ವಗಳು" ಪುಟ ೩೨. ೩೩.)

ಕೌಶಲ್ಯವುಳ್ಳ ಶ್ರಮದಿಂದ ಬೇರೆಬೇರೆ ಪದಾರ್ಥಗಳ ಬೆಲೆಯು ಎಷ್ಟು ಏರುವದೆಂಬದನ್ನು ತೋರಿಸುವ ಉದಾಹರಣಗಳು.—ಶ್ರಮದಿಂದ ಪದಾರ್ಥಗಳ ಬೆಲೆ ಎಷ್ಟು ಏರುತ್ತದೆಂಬುವದು ಸಣ್ಣ ಗಡಿಯಾಲದಲ್ಲಿ ಉಪಯೋಗಿಸಲ್ಪಡುವ ಬೇರೆಬೇರೆ ಸಾಮಾನುಗಳ ಉದಾಹರಣಗಳಿಂದ ಸ್ಪಷ್ಟವಾಗುವದು. ಸಣ್ಣ ಗಡಿಯಾಲಗಳಲ್ಲಿ ಕೆಲ ಅತಿ ಸೂಕ್ಷ್ಮವಾದ ಉಕ್ಕಿನ ಮೊಳೆಗಳಿರುತ್ತವೆ. ಇಂಥ ಒಂದು ಪೌಂಡು ಮೊಳೆಗಳ ಬೆಲೆ, ಆರು ಪೌಂಡು ಶುದ್ಧ ಭಂಗಾರದ ಬೆಲೆಗೆ ಸರಿಯಾಗಿರುವದು. ಅಂದರೆ, ಅವುಗಳ ಬೆಲೆ ೪೦೦೦ ರೂಪಾಯಿಗಿಂತ ಹೆಚ್ಚಾಗಿರುವದು. ಪ್ರತಿಯೊಂದು ಸಣ್ಣ ಗಡಿಯಾಲದಲ್ಲಿ "ಹೇಅರಸ್ಪ್ರಿಂಗ್" ಎಂಬದೊಂದು ಕೂದಲಿನಷ್ಟು ಸೂಕ್ಷ್ಮವಾದ ಕಮಾನು ಇರುತ್ತದೆ. ಈ ಕಮಾನಿನ ವಿಷಯವಾಗಿ, ಮಿಸ್ ಫೇಥಫುಲ್ ಎಂಬ ಧೊರೆಸಾನಿಯು ಗಡಿಯಾಲದ ಸಂಬಂಧವಾಗಿ ಬರೆದ ಲೇಖದಲ್ಲಿ ಹೇಳಿದ್ದೇನಂದರೆ—"ಒಂದು ಹೇಅರಸ್ಪ್ರಿಂಗ್ ಎಂಬ ಕಮಾನಿನ ತೂಕವು ಒಂದು ಪೌಂಡಿನ $\frac{೧}{೧೫೦೦೦}$ ಇರುವದು. ಇದರ ಉದ್ದಳತೆ ಒಂದು ಫೂಟು. ಈ ಕಮಾನು ಪ್ರತಿಯೊಂದು ತಾಸಿನೊಳಗೆ ೧೮೦೦೦ ಸಾರೆ ಹಿಂದಕ್ಕೂ ಮುಂದಕ್ಕೂ ಹಾರಬೇಕಾಗುತ್ತದೆ. ಈ ಪ್ರಕಾರ ಎಷ್ಟೋ ವರ್ಷಗಳ ವರೆಗೆ ಅದು ಹಾರಬೇಕಾಗುವದು. ಆದ್ದರಿಂದ ಅದಕ್ಕೆ ಬಹಳ ಉತ್ಕೃಷ್ಟವಾಗಿ ನೀರು ಕೊಡಬೇಕಾಗುತ್ತದೆ. ಒಂದು ಪೌಂಡು ಉಕ್ಕಿನ ಗಟ್ಟಿಗೆ ಒಂದು "ಡೋಲರ್" (ಅಮೇರಿ

ಕೆಯೊಳಗಿನ ಸುಮ್ಮಾರು ಎರಡು ರೂಪಾಯಿ ಬೆಲೆಯ ಸಾಣ್ಯ) ಬೀಳ ಬಹುದು. ಆದರೆ ಆ ಗಟ್ಟಿಯಿಂದ ಮಾಡಿದ ಕಮಾನುಗಳ ಬೆಲೆ ೪೦೦೦ "ಡೋಲರು" ಅಂದರೆ ಸುಮಾರು ೮೦೦೦ ರೂಪಾಯಿಯಾಗುತ್ತದೆ."

ಶ್ರಮದ ಹೊರ್ತು ಯಾವ ಬಗೆಯ ಸಂಪತ್ತಾದರೂ ಹುಟ್ಟುವದಿಲ್ಲ ಸರಿ. ಆದರೆ ಕೆಲವು ವಿಧದ ಶ್ರಮವು ಬಹಳ ಉಪಯುಕ್ತವಾಗಿದ್ದಾಗ್ಯೂ ಅದರಿಂದ ಸಂಪತ್ತನ್ನು ಹುಟ್ಟಿಸುವದಕ್ಕೆ ಏನೂ ಸಹಾಯವಾಗುವದಿಲ್ಲ. ಇಂಥ ಶ್ರಮಕ್ಕೆ "ಅನುತ್ಪಾದಕ" ಶ್ರಮವೆಂಬ ಹೆಸರು. "ಅನುತ್ಪಾದಕ" ಶ್ರಮದ ವ್ಯಾಖ್ಯೆಯನ್ನು ಕುರಿತು ಅರ್ಥಶಾಸ್ತ್ರಜ್ಞರೊಳಗೆ ಬಹಳ ಮತಭೇದವುಂಟು. ಹಲವು ಅರ್ಥಶಾಸ್ತ್ರಜ್ಞರು, "ಅನುತ್ಪಾದಕ ಶ್ರಮವು" ದೋಷವುಳ್ಳದ್ದೆಂದು ಭಾವಿಸುವ ಕಾರಣ, ಈ ಬಗೆಯ ಮತಭೇದವುಂಟಾಗಿದೆ. ಆದರೆ "ಅನುತ್ಪಾದಕ" ಶ್ರಮವು ದೋಷಾರ್ಹವಾದದ್ದೆಂದು ಎಷ್ಟು ಮಾತ್ರವೂ ಎಣಿಸ ಕೂಡದು. ಯಾಕಂದರೆ, ಜಗತ್ತಿನಲ್ಲಿ ಸಂಪತ್ತು ಗಳಿಸುವದೊಂದೇ ಯೋಗ್ಯವಾದ ಕರ್ತವ್ಯವೆಂದು ಯಾರೂ ಹೇಳರು. ಮಿಲ್ ಧೊರೆಯು ಹೇಳಿದ ಉತ್ಪಾದಕ ಶ್ರಮದ ವ್ಯಾಖ್ಯೆಯು ಯಾವದಂದರೆ, "ಸೃಷ್ಟಪದಾರ್ಥಗಳಲ್ಲಿ ಸ್ಥಿರವಾದ ಉಪಯೋಗಿತ್ವವನ್ನು ಉಂಟು ಮಾಡುವ ಶ್ರಮವು ಉತ್ಪಾದಕಶ್ರಮವೆನಿಸುವದು." ಒಕ್ಕಲಿಗರು, ಕಾರಖಾನೆಗಳಲ್ಲಿ ದುಡಿಯುವವರು, ಉಪ್ಪಾರರು, ಮೊದಲಾದವರ ಶ್ರಮದಿಂದ ಬೇರೆಬೇರೆ ಪದಾರ್ಥಗಳಲ್ಲಿ ಉಪಯೋಗಿತ್ವವು ಉಂಟಾಗುವದು ಸ್ಪಷ್ಟವದೆ. ಆದ್ದರಿಂದ, ಇವರೆಲ್ಲರ ಶ್ರಮವು ಉತ್ಪಾದಕಶ್ರಮವಾಗಿದೆ. ಇದೇ ಮೇರಿಗೆ ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಮುಟ್ಟಿಸುವ ಬಂಡಿಯವರು, ಪೆಂಡಾರೇರು, ಅಂಬಿಗರು, ಮೊಟ್ಟಿಗಾರರು, ಹಡಗ ಮುಂತಾದವುಗಳನ್ನು ಮಾಡುವವರು, ಸರಕುಗಳಲ್ಲಿ, ಅವು ಬೇಕಾಗಿದ್ದ ಸ್ಥಳದಲ್ಲಿ ದೊರಿಯುವ ಉಪಯೋಗಿತ್ವವನ್ನು ಉಂಟು ಮಾಡುವದರಿಂದ ಇವರ ಶ್ರಮವೂ ಉತ್ಪಾದಕ ಶ್ರಮವಾಗಿದೆ. ಇವರಲ್ಲದೆ, ನ್ಯಾಯಾಧೀಶರು, ಪೋಲೀಸರು, ಮೊದಲಾದವರ ಶ್ರಮದಿಂದ ಜನರಿಗೆ ತಾವು ಗಳಿಸಿದ ಆಸ್ತಿಯು ಸುರಕ್ಷಿತವಾಗಿರುವದೆಂಬ ಭರವಸ ಉಂಟಾಗುತ್ತದೆ. ಆದ್ದರಿಂದ, ಅವರು ಹೆಚ್ಚು ಸಂಪತ್ತು ಹುಟ್ಟಿಸುವದಕ್ಕೆ ಯತ್ನ ಮಾಡುತ್ತಾರೆ. ಈ ಮೇರಿಗೆ ಈ ಅಧಿಕಾರಿಗಳ ಶ್ರಮದಿಂದ ಪದಾರ್ಥಗಳಲ್ಲಿ ಸುರಕ್ಷಿತತ್ವವೆಂಬ ಉಪಯುಕ್ತತೆಯು ಉಂಟಾಗುವ ಕಾರಣ, ಇವರ ಶ್ರಮವೂ ಉತ್ಪಾದಕಶ್ರಮವೇ ಸರಿ.

**ಪರಂಪರೆಯಿಂದ ಉತ್ಪಾದಕವಾದ ಶ್ರಮ.**—ಆದರೆ ಮೇಲಿನ ಬರಹದ ಮೇಲಿಂದ "ಶಿಕ್ಷಕನ ಶ್ರಮವು ಅನುತ್ಪಾದಕ ಶ್ರಮವೋ ಹ್ಯಾಗೆ?" ಎಂಬ ಪ್ರಶ್ನವು

ಹುಟ್ಟುತ್ತದೆ. ಶಾಲೆಯೊಳಗಿನ ಶಿಕ್ಷಕನ ಸ್ವಂತ ಹಸ್ತದಿಂದ "ಸೃಷ್ಟಪದಾರ್ಥಗಳಲ್ಲಿ ಸ್ಥಿರವಾದ ಉಪಯೋಗಿತ್ವವು" ಉಂಟಾಗುವದಿಲ್ಲ. ಆದರೆ, ಅವನ ಶ್ರಮದ ಮೂಲಕವಾಗಿ ಉತ್ಪಾದಕ ಶ್ರಮ ಮಾಡುವವರ ಸಂಖ್ಯೆಯು ಬಹಳ ವೃದ್ಧಿಯಾಗಬಹುದು. ಒಂದು ಪಟ್ಟದೊಳಗೆ ಬೀದಿಬೀದಿಗಳಲ್ಲಿ ತಿರುಗಾಡಿ ಸೋಮಾರಿತನದಿಂದಲೂ, ದುರ್ವ್ಯಸನದಿಂದಲೂ, ಆಯುಷ್ಯವನ್ನು ಕಳೆಯುವ ೫೦ ಹುಡುಗರಿಗೆ ಒಬ್ಬ ಶಿಕ್ಷಕನು ವಿದ್ಯಾಬುದ್ಧಿಯನ್ನು ಕಲಿಸಿದನೆಂದು ಕಲ್ಪಿಸುವ. ಈ ಶಿಕ್ಷಕನು ಅವರಿಗೆ ಜಾಣತನದಿಂದ ಉದ್ಯೋಗ ಮಾಡುವ ರೂಢಿಯನ್ನು ಹಚ್ಚಿ ಕೊಟ್ಟದ್ದಾದರೆ, ಅವರಲ್ಲಿ ಅನೇಕರು ಉತ್ಪಾದಕಶ್ರಮ ಮಾಡುವವರಾಗಬಹುದು. ಶಿಕ್ಷಿತರಾದ ಕೂಲಿಕಾರರ ಕೆಲಸಕ್ಕೂ ಅಶಿಕ್ಷಿತರಾದ ಕೂಲಿಕಾರರ ಕೆಲಸಕ್ಕೂ ಮಹದಂತರ ಉಂಟೆಂದು, ಈಗ ಯಾವತ್ತು ಸುಧಾರಿಸಿದ ರಾಷ್ಟ್ರದವರು ಮನಗಂಡಿದ್ದಾರೆ. ಕೆಲಸ ಮಾಡುವದಕ್ಕೆ ಬಲಿಷ್ಠವಾದ ಶರೀರವಿದ್ದಂತೆಯೇ ತಿದ್ದಲ್ಪಟ್ಟ ಮನಸೂ ಇರುವದರಿಂದ ಕೆಲಸವು ಹೆಚ್ಚಾಗಿಯೂ ಬಹು ಸರಸಾಗಿಯೂ ಆಗುತ್ತದೆ. ಶಿಕ್ಷಣದಿಂದ ಬರುವ ಚಾತುರ್ಯ, ಹಸ್ತಕೌಶಲ್ಯ, ಸದಾಚರಣದ ಬುದ್ಧಿ, ಉದ್ಯೋಗ ಮಾಡುವ ಉತ್ಸಾಹ, ಇವುಗಳಿಂದ ಸಂಪತ್ತು ನಿಃಸಂದೇಹವಾಗಿ ವೃದ್ಧಿಯಾಗುತ್ತದೆ. ಇದೇ ಮೇರಿಗೆ ಹೊಸ ಕಲ್ಪನೆಗಳನ್ನೂ, ಹೊಸ ಶೋಧಗಳನ್ನೂ, ಹೊಸ ಯಂತ್ರಗಳನ್ನೂ, ಹುಡುಕಿ ತೆಗಿಯುವವರ ಶ್ರಮದಿಂದ ಬೇರೆ ಜನರ ಶ್ರಮವು ಸಹಸ್ರಾವಧಿ ಹೆಚ್ಚು ಉತ್ಪಾದಕವಾಗುತ್ತದೆ. ಆದರೆ ಇವರೆಲ್ಲರ ಶ್ರಮವು ಅನುತ್ಪಾದಕ ಶ್ರಮವೆಂದು ಎಣಿಸ ಬಹುದೋ? ಎಷ್ಟು ಮಾತ್ರವೂ ಎಣಿಸ ಕೂಡದು. ಆದ್ದರಿಂದ ಉತ್ಪಾದಕ ಶ್ರಮದೊಳಗೆ, ಪ್ರತ್ಯಕ್ಷ ಉತ್ಪಾದಕ ಶ್ರಮವೆಂತಲೂ, ಪರಂಪರೆಯಿಂದ ಉತ್ಪಾದಕವಾದ ಶ್ರಮವೆಂತಲೂ, ಭೇದವನ್ನು ಮಾಡುವದು ಅವಶ್ಯವಾಗಿದೆ. ಸೃಷ್ಟಪದಾರ್ಥಗಳಲ್ಲಿ ತಮ್ಮ ಸ್ವಂತ ಹಸ್ತದಿಂದ ಸ್ಥಿರವಾದ ಉಪಯೋಗಿತ್ವವನ್ನುಂಟು ಮಾಡುವ ಯಾವತ್ತು ಶ್ರಮಕರ್ತರು, ಮೊದಲನೆ ವಿಧದ ಶ್ರಮ ಮಾಡುವವರು. ಶಿಕ್ಷಕನು, ಹೊಸ ಶೋಧಗಳನ್ನು ಮಾಡುವವರು, ಮೊದಲಾದವರು ಎರಡನೆ ವಿಧದ ಶ್ರಮ ಮಾಡುವವರು.

**ಅನುತ್ಪಾದಕಶ್ರಮ.**—ಸಾಕ್ಷಾತ್ ರೀತಿಯಿಂದಾಗಲಿ, ಪರಂಪರೆಯಿಂದಾಗಲಿ, ಭೌತಿಕ ಸಂಪತ್ತನ್ನು ವರ್ಧಿಸದ ಶ್ರಮವು ಅನುತ್ಪಾದಕಶ್ರಮವೆನಿಸುತ್ತದೆ. ಈ ತರದ ಶ್ರಮದಿಂದ ಸೃಷ್ಟಪದಾರ್ಥಗಳಲ್ಲಿ ಸ್ಥಿರವಾದ ಉಪಯೋಗಿತ್ವವು ಹುಟ್ಟುವದಿಲ್ಲ; ಕ್ಷಣ ಮಾತ್ರ ಬಾಳುವ ಗುಣಗಳು ಹುಟ್ಟುತ್ತವೆ. ಗಾಯಕರು, ನರ್ತಕರು, ಪಾತರದವರು, ಬೇರೆಬೇರೆ ಆಟಗಳನ್ನು ಆಡುವವರು, ಮೊದಲಾದವರ

ಶ್ರಮವು ಕ್ಷಣಿಕವಾದ ಆನಂದವನ್ನು ಮಾತ್ರ ಹುಟ್ಟಿಸುವದಾಗಿದೆ. ಈ ಆನಂದದಿಂದ ಸಾಕ್ಷಾತ್ ರೀತಿಯಿಂದಾಗಲಿ, ಪರಂಪರೆಯಿಂದಾಗಲಿ, ಪದಾರ್ಥಗಳಲ್ಲಿ ಸ್ಥಿರವಾದ ಉಪಯೋಗಿತ್ವವು ಹುಟ್ಟದೆ, ಅದು ಅಲ್ಪಕಾಲದಲ್ಲಿ ನಷ್ಟವಾಗುತ್ತದೆ. ಇಂಥ ಶ್ರಮವು ಅನುತ್ಪಾದಕಶ್ರಮವೆಂದು ಹೇಳಲ್ಪಡುತ್ತದೆ. ವಾಡಿಕೆಯಾಗಿ ರಾಜಕಾರಭಾರಿಗಳ ಶ್ರಮವು, ಅನುತ್ಪಾದಕಶ್ರಮವಾಗಿರುತ್ತದೆ. ಕೆಲವು ಸಾರೆ ಮಾತ್ರ ಅವರ ಶ್ರಮದಿಂದ ಪರಂಪರೆಯಾಗಿ ಸಂಪತ್ತು ಹುಟ್ಟುವದು. ಇಂಗ್ಲಂಡದಲ್ಲಿ ಧಾನ್ಯಗಳ ಮೇಲೆ ಸುಂಕ ತಕ್ಕೊಳ್ಳುವ ಕಾಯಿದೆಯನ್ನು ಮುರಿದು, ನಿರಾತಂಕವ್ಯಾಪಾರದ ಪದ್ಧತಿಯನ್ನು ಕೈಕೊಂಡದ್ದರಿಂದ ಆ ದೇಶದ ಸಂಪತ್ತು ಅದ್ಭುತವಾಗಿ ಬೆಳೆದದೆ. ಆದರೆ ಇಂಗ್ಲಂಡಕ್ಕೆ ಬರುವ ಧಾನ್ಯದ ಮೇಲಿನ ಸುಂಕವನ್ನು ನಿಲ್ಲಿಸಿ ವ್ಯಾಪಾರವನ್ನು ಸ್ವತಂತ್ರವಾಗಿ ನಡಿಯಗೊಟ್ಟ ರಾಜಕಾರಭಾರಿಗಳು, ಹಿಂದಿನ ಕಾಲದ ಕಾರಭಾರಿಗಳು ತಪ್ಪು ತಿಳುವಳಿಕೆಯಿಂದ ವ್ಯಾಪಾರಕ್ಕೆ ಮಾಡಿದ್ದ ಅಟ್ಟಕಗಳನ್ನು ದೂರ ಮಾಡಿದರೇ ಹೊರ್ತು, ಹೆಚ್ಚಿನದೇನು ಮಾಡಲಿಲ್ಲ. ಅನೇಕ ಸಾರೆ ರಾಜಕಾರಭಾರಿಗಳು, ಹಿಂದಿನ ರಾಜಕಾರಭಾರಿಗಳು ಮಾಡಿದ ತಪ್ಪುಗಳನ್ನು ತಿದ್ದುವದರಿಂದಲೇ, ಅವರ ಶ್ರಮವು ಪರಂಪರೆಯಿಂದ ಬಹು ಉತ್ಪಾದಕವಾದದ್ದೆಂದು ತೋರುತ್ತದೆ. ರಾಜಕಾರಭಾರಿಗಳ ಶ್ರಮದಿಂದ ಜನರ ಜೀವವೂ, ಆಸ್ತಿಯೂ, ರಕ್ಷಿಸಲ್ಪಡುತ್ತವೆಂಬದು ಹೊರ್ತಾಗಿ, ಬೇರೆ ರೀತಿಯಿಂದ ರಾಜಕಾರಭಾರಿಗಳ ಶ್ರಮವು, ಒಟ್ಟಿನ ಮೇಲೆ ಪರಂಪರೆಯಿಂದ ಸಂಪತ್ತನ್ನು ಹುಟ್ಟಿಸುವದಾಗಿದೆಯೋ, ಇಲ್ಲವೋ, ಎಂಬುವದನ್ನು ಹೇಳುವದು ಕಠಿಣವಾಗಿದೆ.

ಕೆಲವು ಬಾರಿ ಉತ್ಪಾದಕ ಶ್ರಮ ಮಾಡುವವರ ಶ್ರಮವೂ ಅನುತ್ಪಾದಕವಾಗುತ್ತದೆ. ಮುಗಿಸದೆ ಬಿಟ್ಟ ನೀರಿನ ಕಾಲುವೆಗಳೂ, ಹೊಗೆಬಂಡಿಯ ಮಾರ್ಗಗಳೂ, ಈ ತರದ ಉದಾಹರಣಗಳು. ಇದಕ್ಕೆ ವಿಪರೀತವಾಗಿ, ಅನುತ್ಪಾದಕಶ್ರಮ ಮಾಡುವವರ ಶ್ರಮದಿಂದಲೂ ಕೆಲವು ಸಾರೆ ಅಕಸ್ಮಾತ್ತಾಗಿ ಸಂಪತ್ತು ಹುಟ್ಟುತ್ತದೆ. ರಸಾಯನ ಶಾಸ್ತ್ರದ ವ್ಯಾಸಂಗ ಮಾಡುವವರ ಶ್ರಮದಿಂದಾದ ಅನೇಕ ಶೋಧಗಳಿಂದ, ವಿಷ್ಟೋ ಉದ್ಯೋಗಗಳೊಳಗಿನ ಕೆಲಸಗಳು ಬಹಳ ಸುಲಭವಾಗಿವೆ. ಇದರಿಂದ ತಿಳಿಯುವದೇನಂದರೆ, ಯಾವದೊಂದು ವರ್ಗದ ಜನರ ಶ್ರಮವು ಉತ್ಪಾದಕವಾಗುವದೋ, ಇಲ್ಲವೆ ಅನುತ್ಪಾದಕವಾಗುವದೋ, ಎಂಬುವದನ್ನು ಹೇಳುವದು, ಒಂದೊಂದು ಪ್ರಸಕ್ತಿಯಲ್ಲಿ ಬಹಳ ಕಠಿಣವಾಗಿರುವದು. ಈ ಮಾತಿನ ವಿಷಯವಾಗಿ ಯಾವದೊಂದು ಖಂಡಿತವಾದ ನಿರ್ಣಯವನ್ನು ಹೇಳುವ ಪೂರ್ವದಲ್ಲಿ ಅವರ ಕೆಲಸದ ಪರಿಣಾಮವನ್ನು ತಿಳಿದುಕೊಳ್ಳಬೇಕಾಗು

ತ್ತದೆ. ಕೆಲಸವು ಹೆಚ್ಚು ಹೆಚ್ಚು ಕಠಿಣವಾಗಿದ್ದ ಹಾಗೆ, ಆ ಕೆಲಸದಿಂದ ಏನಾದರೂ ಪ್ರಯೋಜನವಾಗುವದೋ, ಅಥವಾ ಅದು ನಿಷ್ಪ್ರಯೋಜನವಾಗುವದೋ ಎಂಬದರ ನಿರ್ಣಯವನ್ನು ಮೊದಲಿಗೆ ಹೇಳುವದು ಹೆಚ್ಚು ಅಸಾಧ್ಯವಾಗಿರುವದು.

**ಅಡಾಮ್‌ಸ್ಮಿಥನು ವರ್ಣಿಸಿದ, ಶ್ರಮವಿಭಾಗದಿಂದ ಆಗುವ ಮೂರು ಲಾಭಗಳು.**—ಶ್ರಮದ ಉತ್ಪಾದಕ ಶಕ್ತಿಯನ್ನು ಬಹಳವಾಗಿ ಹೆಚ್ಚಿಸುವಂಥ ಅನೇಕ ಸಂಗತಿಗಳುಂಟು. ಈ ಯಾವತ್ತೂ ಸಂಗತಿಗಳಲ್ಲಿ ಶ್ರಮವಿಭಾಗವು ಶ್ರೇಷ್ಠವಾದದ್ದು. ಯಾವದೊಂದು ಕೆಲಸದ ಯಾವತ್ತೂ ಭಾಗಗಳನ್ನು ಒಬ್ಬನೇ ಮಾಡದೆ, ಆ ಕೆಲಸದಲ್ಲಿ ಆದಷ್ಟು ಸೂಕ್ಷ್ಮವಾದ ವಿಭಾಗಗಳನ್ನು ಮಾಡಿ, ಅವುಗಳನ್ನು ಬೇರೆಬೇರೆ ಜನರಿಗೆ ಕೊಡುವದರಿಂದ, ಶ್ರಮವು ಬಹಳ ಫಲವುಳ್ಳದ್ದಾಗುತ್ತದೆ. ಒಬ್ಬ ಪಾತ್ರೆಗಳನ್ನು ಮಾಡುವವನ ಕೆಲಸ ನೋಡಿದರೆ, ಅದರಲ್ಲಿ ಧಾತುಗಳನ್ನು ಕರಗಿಸುವ ಕೆಲಸ, ಮೂಸೆಗಳನ್ನು ಮಾಡುವ ಕೆಲಸ, ಎರಕ ಹೊಯ್ಯುವ ಕೆಲಸ, ಪಾತ್ರೆಗಳ ಆಕಾರವನ್ನು ಹುಟ್ಟಿಸುವ ಕೆಲಸ, ಗಾಡಕ್ಕೆ ಹಚ್ಚುವ ಕೆಲಸ, ಇವು ಮೊದಲಾದ ಅನೇಕ ಕೆಲಸಗಳಿರುವವು. ಈ ಯಾವತ್ತೂ ಕೆಲಸಗಳನ್ನು ಒಬ್ಬನೇ ಮಾಡತೊಡಗದೆ ಬೇರೆಬೇರೆ ಜನರು ಮಾಡುವದರಿಂದ, ಕೆಲಸವು ಬಹು ಸರಸಾಗಿ ಆಗುವದಲ್ಲದೆ, ಬಹಳ ಹೆಚ್ಚು ಕೆಲಸವಾಗುತ್ತದೆ. ಗುಂಡುಸೂಜಿಗಳನ್ನು ಮಾಡುವ ಕಾರಖಾನೆಯಲ್ಲಿ, ತಂತಿಯನ್ನು ಎಳಿಯೋಣ, ಅದನ್ನು ಬೇಕಾದಷ್ಟು ಉದ್ದಳತೆ ಇಟ್ಟು ಕಡಿಯೋಣ, ಆ ತುಂಡುಗಳ ತುದಿಗಳನ್ನು ಮೊನೆ ಮಾಡೋಣ, ಅವುಗಳ ಚಂಡುಗಳನ್ನು ಮಾಡೋಣ, ಅವುಗಳನ್ನು ಆ ತುಂಡುಗಳಿಗೆ ಕೂಡ್ರಿಸೋಣ, ಉಜ್ಜೋಣ, ಮೊದಲಾದ ಒಟ್ಟಿಗೆ ಹದಿನೆಂಟು ಕೆಲಸಗಳಿರುತ್ತವೆ. ಈ ಕೆಲಸಗಳನ್ನು ಬೇರೆಬೇರೆ ಜನರು ಮಾಡದೆ ಒಬ್ಬನೇ ಮಾಡಿದರೆ, ಅವನು ದಿನ ಒಂದಕ್ಕೆ ೨೦ ಗುಂಡುಸೂಜಿಗಳನ್ನು ಮಾಡುವದು ಸಹ ಕಷ್ಟವಾಗುವದು. ಆದರೆ ಈ ಬೇರೆಬೇರೆ ಕೆಲಸಗಳನ್ನು ಹತ್ತು ಜನರು ಹಂಚಿಕೊಂಡು ಮಾಡಲಾಗಿ ದಿನ ೪೮,೦೦೦ ಗುಂಡುಸೂಜಿಗಳಾಗುತ್ತವೆ. ಈ ಹತ್ತು ಜನರು ಬೇರೆಬೇರೆಯಾಗಿ ಗುಂಡುಸೂಜಿಗಳನ್ನು ಮಾಡಿದರೆ, ಎಲ್ಲರ ಸೂಜಿಗಳೂ ಕೂಡಿ ೨೦೦ ಸೂಜಿಗಳಿಗಿಂತ ಹೆಚ್ಚಾಗಲಾರವು. ಈ ಮೇರೆಗೆ ಈ ಸೂಕ್ಷ್ಮವಾದ ಶ್ರಮವಿಭಾಗದಿಂದ ೨೦೦ ಪಾಲು ಹೆಚ್ಚು ಕೆಲಸವಾಗುತ್ತದೆಂಬದು ಸ್ಪಷ್ಟವಾಗಿದೆ. ಆದ್ದರಿಂದಲೇ ಗುಂಡುಸೂಜಿಗಳು, ಸೂಜಿಗಳು, ದೀಪದ ಕಡ್ಡಿಗಳು, ಮೊದಲಾದವುಗಳು ಅತಿಶಯ ಅಗ್ಗವಾಗಿ ದೊರಿಯುತ್ತವೆ. ಇದೇ [illegible] ಇಸ್ಪೇಟುಗಳನ್ನು ಮಾಡುವ

[library stamp]

ಕೆಲಸದಲ್ಲಿ ಬೇರೆಬೇರೆ ೭೨ ಕೆಲಸಗಳಿರುತ್ತವೆಂದು ಹೇಳುತ್ತಾರೆ. ಈ ಕೆಲಸಗಳನ್ನು ೩೦ ಮಂದಿ ಹಂಚಿಕೊಂಡು ಮಾಡಿದರೆ, ದಿನ ೧೫,೫೦೦ ಇಸ್ಪೇಟಿನ ಎಲೆಗಳಾಗುತ್ತವೆ. ಈ ಮೂವತ್ತು ಜನರು ಇಸ್ಪೇಟುಗಳನ್ನು ಬೇರೆಬೇರೆಯಾಗಿ ಮಾಡಿದರೆ ಒಬ್ಬೊಬ್ಬನು ದಿನ ಒಂದೆರಡು ಎಲೆಗಳಿಗಿಂತ ಹೆಚ್ಚು ಮಾಡಲಾರನು. ಈ ಪ್ರಕಾರ ಶ್ರಮವಿಭಾಗದಿಂದ ಅದ್ಭುತವಾದ ಲಾಭವಾಗುವದಕ್ಕೆ ಮೂರು ಕಾರಣಗಳುಂಟೆಂದು ಅಡಾಮ್‌ಸ್ಮಿಥನೆಂಬ ಅರ್ಥಶಾಸ್ತ್ರಜ್ಞನು ಹೇಳಿದ್ದಾನೆ. ಆ ಮೂರು ಕಾರಣಗಳು ಯಾವವಂದರೆ:—

೧. ಶ್ರಮವಿಭಾಗದಿಂದ, ಕೈಗಾರಿಕೆಯ ಕೆಲಸವನ್ನು ಮಾಡುವ ಪ್ರತಿಯೊಬ್ಬನ ಹಸ್ತಕೌಶಲ್ಯವು ಬೆಳೆಯುತ್ತದೆ.

೨. ಒಬ್ಬನೇ ಅನೇಕ ಕೆಲಸಗಳನ್ನು ಮಾಡ ಬೇಕಾದರೆ, ಒಂದು ಕೆಲಸವನ್ನು ಬಿಟ್ಟು ಮತ್ತೊಂದು ಕೆಲಸಕ್ಕೆ ಹತ್ತುವ ಮಧ್ಯಂತರದಲ್ಲಿ ಸ್ವಲ್ಪ ಹೊತ್ತು ಬಹುತರ ವ್ಯರ್ಥವಾಗಿ ಹೋಗುತ್ತದೆ. ಶ್ರಮವಿಭಾಗದಿಂದ, ಇಂಥ ಹೊತ್ತು ಕಳೆಯುವದಕ್ಕೆ ಮಾರ್ಗ ಉಳಿಯುವದಿಲ್ಲ.

೩. ಶ್ರಮವಿಭಾಗದ ಮೂಲಕವಾಗಿ, ಕೆಲಸ ಮಾಡುವವನ ಮನಸು ಒಂದೇ ಕೆಲಸದ ಕಡೆಗೆ ಹತ್ತುವದರಿಂದ, ಆ ಕೆಲಸವನ್ನು ಸುಲಭವಾಗಿ ಮಾಡುವ ಹೊಸ ಯಂತ್ರಗಳ ಶೋಧವಾಗುತ್ತದೆ.

**ಮೊದಲನೇ ಲಾಭದ ವಿವರಣೆ.**—ಶ್ರಮವಿಭಾಗದಿಂದ ಆಗುವ ಲಾಭಗಳಲ್ಲಿ ಕೆಲಸ ಮಾಡುವವರ ಹಸ್ತಕೌಶಲ್ಯವು ಬೆಳೆಯುತ್ತದೆಂಬ ಲಾಭವು ಬಹಳ ಗೌರವವುಳ್ಳದ್ದು. ತಿರುತಿರುಗಿ ಅದೇ ಕೆಲಸವನ್ನು ಮಾಡುವವರ ಕೈಯಲ್ಲಿ ಆ ಕೆಲಸವನ್ನು ಮಾಡುವ ಕೌಶಲ್ಯವು ಎಷ್ಟು ಉಂಟಾಗುತ್ತದೆಂಬದರ ವಿಷಯವಾಗಿ ಬಹಳ ಹೇಳುವ ಪ್ರಯೋಜನವಿಲ್ಲ. ಬೇರೆಬೇರೆ ಕಾರಖಾನೆಗಳಲ್ಲಿ ಕೆಲಸದೊಳಗೆ ನುರತವರ ಹಸ್ತಕೌಶಲ್ಯವು ಅತ್ಯಾಶ್ಚರ್ಯಕರವಾಗಿರುತ್ತದೆ. "ಬರ್ಮಿಂಗ್ಹಾಮು" ದಂಥಾ ಪಟ್ಟಣಗಳಲ್ಲಿ ನಡಿಯುವ ಕಾರಖಾನೆಗಳೊಳಗೆ ಕೆಲಸ ಮಾಡುವವರ ಹಸ್ತಕೌಶಲ್ಯವನ್ನು ನೋಡಿದರೆ ಮನುಷ್ಯರ ಕೈಯಲ್ಲಿ ಇಷ್ಟು ಚಪಲತೆ ಹ್ಯಾಗೆ ಉಂಟಾಗಿರ ಬಹುದೆಂಬದರ ವಿಷಯವಾಗಿ ವಿಸ್ಮಯವಾಗುತ್ತದೆ. ಬರೆಯುವ ಟಾಕುಗಳ ಕಾರಖಾನೆಯಲ್ಲಿ, ಕೆಲವರ ಕೆಲಸವು ಯಂತ್ರದೊಳಗೆ ಸಿದ್ಧವಾದ ಟಾಕುಗಳನ್ನು ತೆಗಿಯುವದೊಂದೇ ಆಗಿರುತ್ತದೆ. ಆದ್ದರಿಂದ, ಅವರು ಈ ಕೆಲಸವನ್ನು ಅತ್ಯಾಶ್ಚರ್ಯಕರವಾದ ತ್ವರೆಯಿಂದ ಮಾಡುತ್ತಾರೆ. ಅವರ ಕೈಗಳು ಅಗಳಾಡುವದನ್ನು ನೋಡುವದಕ್ಕೆ ದೃಷ್ಟಿಯು ಸಹ ಸಾಲುವದಿಲ್ಲ.

ಈ ಬಗೆಯ ಚಪಲತೆಯು, ಯಾವಾಗಲೂ ಒಂದೇ ಕೆಲಸವನ್ನು ಮಾಡುವದರಿಂದ ಮಾತ್ರವೇ ಬರುವದು. ಅಭ್ಯಾಸದಿಂದ ಬೇರೆಬೇರೆ ಅವಯವಗಳ ಶಕ್ತಿಯೂ, ಮಾನಸಿಕ ಶಕ್ತಿಗಳೂ, ಅದ್ಭುತವಾಗಿ ಬೆಳೆಯುತ್ತವೆ. ಗಾಯಕರೂ, ವಾದ್ಯಗಳನ್ನು ಬಾರಿಸುವವರೂ, ಕಸರತ್ತುಗಳನ್ನು ಮಾಡುವ ಡೊಂಬರೂ, ಜಾತಿಗಾರರೂ, ಗಾರುಡಿಗರೂ ಮಾಡಿ ತೋರಿಸುವ ಅವರವರ ಕಸಬುಗಳ ಚಮತ್ಕಾರಗಳನ್ನು ನೋಡಿದರೆ, ಅಭ್ಯಾಸದಿಂದ ಬರುವ ಕೌಶಲ್ಯವು ಸಹಜವಾಗಿ ತಿಳಿಯುವದು. ಒಬ್ಬನೇ ಬೇರೆಬೇರೆ ಅನೇಕ ಕೆಲಸಗಳನ್ನು ಮಾಡ ಬೇಕಾದರೆ ಪ್ರತಿಯೊಂದು ಕೆಲಸದಲ್ಲಿ ಕೌಶಲ್ಯವು ಬರುವಷ್ಟು ಅವನಿಗೆ ಅಭ್ಯಾಸವು ಆಗುವದಿಲ್ಲ. ಆದ್ದರಿಂದ ಯಾವ ಕೆಲಸದಲ್ಲಿಯೂ ಅವನಿಗೆ ಒಳ್ಳೇ ಕೌಶಲ್ಯವು ಉಂಟಾಗದೆ ಎಲ್ಲ ಕೆಲಸಗಳೂ ಅಡ್ಡಾತಿಡ್ಡಿಯಾಗುವವು. ಕೌಶಲ್ಯದಿಂದ ಕೆಲಸವು ಸರಸಾಗಿ ಆಗುವದಲ್ಲದೆ ತ್ವರೆಯಾಗಿಯೂ, ಬಹಳವಾಗಿಯೂ, ಆಗುವದರಿಂದ ಶ್ರಮವು ಹೆಚ್ಚು ಫಲವುಳ್ಳದ್ದಾಗುತ್ತದೆ.

**ಎರಡನೆ ಲಾಭದ ವಿವರಣೆ.**—ವೇಳೆಯು ವ್ಯರ್ಥವಾಗಿ ಹೋಗುವದಿಲ್ಲೆಂಬದು, ಶ್ರಮವಿಭಾಗದಿಂದ ಆಗುವ ಎರಡನೆ ಲಾಭವು. ಪದೆಪದೆ ಒಂದು ಕೆಲಸವನ್ನು ಬಿಟ್ಟು ಮತ್ತೊಂದು ಕೆಲಸಕ್ಕೆ ಹೋಗದೆ, ಒಂದೇ ಸಮನಾಗಿ ಒಂದೇ ಕೆಲಸವನ್ನು ಮಾಡುವದರಿಂದ ಆಗುವ ಲಾಭದ ಒಂದು ಉದಾಹರಣವನ್ನು ಹೊಗೆಬಂಡಿಯ ಸ್ಟೇಶನದಲ್ಲಿ ಬಹು ಜನರು ನೋಡಿರ ಬಹುದು. ಅದೇನಂದರೆ, ಬಂಡಿಗಳೊಳಗಿನ ದೀಪದ ಕಂದೀಲುಗಳನ್ನು ಇಳಿಸ ಬೇಕಾದರೆ, ಒಬ್ಬನು ಬಂಡಿಗಳ ಮೇಲೆ ಹತ್ತಿ ಒಂದೊಂದು ಕಂದೀಲವನ್ನು ತೆಗಿದುಕೊಂಡು, ಕೆಳಗೆ ನಿಂತ ಮತ್ತೊಬ್ಬನ ಕೈಗೆ ಕೊಡುತ್ತಾನೆ. ಇವನು ಅವನ್ನು, ಕಂದೀಲುಗಳನ್ನು ಇಡುವದಕ್ಕಾಗಿ ಮಾಡಿದ ಸಣ್ಣ ಕೈಬಂಡಿಗಳಲ್ಲಿ ಇಡುತ್ತಾನೆ. ಈ ಮೇರೆಗೆ ಅವರಿಬ್ಬರು ಕೆಲವು ಕ್ಷಣದೊಳಗೆ ಮೂವತ್ತು ನಾಲ್ವತ್ತು ಕಂದೀಲುಗಳನ್ನು ಕೆಳಗೆ ಇಳಿಸುತ್ತಾರೆ. ಆದರೆ ಹೀಗೆ ಮಾಡದೆ ಒಬ್ಬನೇ ಆ ಎಲ್ಲ ಕೆಲಸವನ್ನು ಮಾಡ ಬೇಕಾದರೆ, ಒಂದೆರಡು ಕಂದೀಲುಗಳನ್ನು ತಕ್ಕೊಂಡ ಕೂಡ್ಲೆ ಕೆಳಗೆ ಇಳಿದು ಮತ್ತೆ ಮೇಲೆ ಹತ್ತಿ ಕಂದೀಲುಗಳನ್ನು ತರಬೇಕಾಗುವದರಿಂದ ಅಷ್ಟೇ ಕಂದೀಲುಗಳನ್ನು ಕೆಳಗೆ ಇಳಿಸುವದಕ್ಕೆ ಅವನಿಗೆ ಅರ್ಧ ತಾಸು ಬೇಕಾಗಬಹುದು. ಅದೇ, ಅವನಿಗೆ ಮತ್ತೊಬ್ಬ ಆಳಿನ ಸಹಾಯವಿದ್ದರೆ, ಈ ಕೆಲಸವನ್ನು ಅವನು ಕೆಲನಿಮಿಷಗಳಲ್ಲಿ ಮಾಡುವನು. ಒಬ್ಬನೇ ಅನೇಕ ಕೆಲಸಗಳನ್ನು ಬೇರೆಬೇರೆ ಆಯುಧಗಳಿಂದ ಬೇರೆಬೇರೆ ಸ್ಥಳಗಳಲ್ಲಿ ಮಾಡಬೇಕಾದರೆ, ಒಂದು ಕೆಲಸವನ್ನು ಬಿಟ್ಟು ಮತ್ತೊಂದು ಕೆಲಸಕ್ಕೆ ಹತ್ತುವ

ಮಧ್ಯಂತರದಲ್ಲಿ ವೇಳೆಯು ವ್ಯರ್ಥವಾಗಿ ಹೋಗುವ ಕಾರಣವೇನಂದರೆ, ಮೊದಲು ಒಂದು ಕೆಲಸದ ಆಯುಧಗಳನ್ನು ತೆಗೆದಿಟ್ಟು ಮತ್ತೊಂದು ಕೆಲಸದ ಆಯುಧಗಳನ್ನು ತಕ್ಕೊಳ್ಳುವದಕ್ಕೆ, ಇಲ್ಲವೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವದಕ್ಕೆ, ಕೆಲವೇಳೆಯು ಬೇಕಾಗುವದು. ಇದಲ್ಲದೆ, ಮನುಷ್ಯನಿಗೆ ಒಂದು ಕೆಲಸವನ್ನು ಬಿಟ್ಟ ಕ್ಷಣಕ್ಕೆ ಮತ್ತೊಂದು ಕೆಲಸವನ್ನು ಕೈಯಲ್ಲಿ ತಕ್ಕೊಳ್ಳುವದು ಸೊಗಸಾಗುವದಿಲ್ಲ. ನಡುವೆ ಏನಾದರೂ ಒಂದು ನೆವದಿಂದ ವಿಶ್ರಾಂತಿಯನ್ನು ತೆಗೆದುಕೊಳ್ಳುವ ಮನಸಾಗುತ್ತದೆ. ಆದ್ದರಿಂದ ಒಂದು ಕೆಲಸ ಮುಗಿದ ಕೂಡಲೆ ಅವನು ನೀರು ಕುಡಿಯುವನು, ಇಲ್ಲವೆ ತಂಬಾಕ ತಿನ್ನುವನು, ಇಲ್ಲವೆ ಬತ್ತಿಯನ್ನಾದರೂ ಸೇದುವನು, ಇಲ್ಲವೆ ಮನೆಯಲ್ಲಿ ಕೆಲಸ ಮಾಡುತ್ತಿದ್ದರೆ ಸಣ್ಣ ಕೂಸುಗಳನ್ನಾದರೂ ಎತ್ತಿಕೊಂಡು ಸ್ವಲ್ಪ ಹೊತ್ತು ಆಡಿಸುವನು. ಇದು ಹೊರ್ತಾಗಿ, ಹೊಸ ಕೆಲಸ ಆರಂಭಿಸಿದನಂತರ ಕೆಲವುಕಾಲದ ವರೆಗೆ ಆ ಕೆಲಸದ ಕಡೆಗೆ ಮನಸು ಹತ್ತುವದಿಲ್ಲ. ಆದ್ದರಿಂದ ಅಷ್ಟರ ವರೆಗೆ ಕೆಲಸವು ನೆಟ್ಟಗಾಗುವದಿಲ್ಲ. ಇದಲ್ಲದೆ ಈ ಮೇರಿಗೆ ಅವನಿಗೆ ಹೊತ್ತುಕಳೆಯುವ ರೂಢಿಯಾಗಿ ಆಡಆಡುತ್ತ ಕೆಲಸ ಮಾಡುವ ಚಾಳಿ ಹತ್ತುವದರಿಂದ ಅವನು ಸೋಮಾರಿಯೂ, ಕೆಲಸ ತಪ್ಪಿಸುವವ್ಯೆಗಳ್ಳನೂ ಆಗುತ್ತಾನೆ. ಶ್ರಮವಿಭಾಗದಿಂದ ಇಂಥ ವೇಳೆಯೇ ಉಳಿಯುವದಲ್ಲವಾದ್ದರಿಂದ, ಈ ಯಾವತ್ತೂ ಕೇಡುಗಳು ತಪ್ಪಿ, ಬಹಳ ಹೆಚ್ಚು ಕೆಲಸವಾಗುತ್ತದೆ.

ಮೂರನೆ ಲಾಭದ ವಿವರಣೆ.—ಶ್ರಮವಿಭಾಗದಿಂದ ಶ್ರಮವನ್ನು ಉಳಿಸುವಂಥ, ಮತ್ತು ಒಬ್ಬನಿಗೆ ಬಹು ಜನರಷ್ಟು ಕೆಲಸ ಮಾಡುವ ಸಾಮರ್ಥ್ಯವನ್ನುಂಟು ಮಾಡುವಂಥ, ಅನೇಕ ಯಂತ್ರಗಳ ಶೋಧವಾಗುತ್ತದೆ. ಇದು ಶ್ರಮವಿಭಾಗದಿಂದ ಆಗುವ ಮೂರನೆ ಲಾಭವೆಂದು ಅಡಾಮ್‌ಸ್ಮಿಥನು ಹೇಳಿದ್ದಾನೆ. ಯಾವನೊಬ್ಬನ ಲಕ್ಷ್ಯವು ಯಾವಾಗಲೂ ಒಂದೇ ಕೆಲಸದ ಕಡೆಗೆ ಹತ್ತಿದ್ದರೆ, ಅವನು ಆ ಕೆಲಸದ ವಿಷಯವಾಗಿ ವಿಶೇಷ ವಿಚಾರ ಮಾಡುವದು ಸ್ವಾಭಾವಿಕವಾಗಿದೆ. ಇದಲ್ಲದೆ, ಆದಷ್ಟು ಕಡಿಮೆ ಶ್ರಮದಿಂದ ತನ್ನ ಕೆಲಸವನ್ನು ಮಾಡಿಕೊಳ್ಳಬೇಕೆಂದು ಬಯಸುವದು ಮನುಷ್ಯನ ಹುಟ್ಟುಗುಣವಾದ್ದರಿಂದ, ಅವನು ಯಾವಾಗಲೂ, ತನ್ನ ಕೆಲಸವು ಸುಲಭವಾಗುವ ಹಂಚಿಕೆಯನ್ನು ಹುಡುಕುತ್ತಿರುವನು. ಇದರಿಂದ, ಒಮ್ಮೊಮ್ಮೆ ಬಹು ಸೋಜಿಗವಾದ ಯುಕ್ತಿಗಳು ಹೊರಡುತ್ತವೆ. ಅಡಾಮ್‌ಸ್ಮಿಥನು ಈ ವಿಷಯದಲ್ಲಿ ಒಂದು ಉತ್ಕೃಷ್ಟವಾದ ಉದಾಹರಣವನ್ನು ಕೊಟ್ಟಿದ್ದಾನೆ. ಉಗಿಯಂತ್ರಗಳನ್ನು ಮೊದಲು ಹೊಸದಾಗಿ ಮಾಡಿದಾಗ ಅದರೊಳಗಿನ ಒಂದು ಮುಚ್ಚಳವನ್ನು ತೆರೆಯುವದಕ್ಕೂ, ಮುಚ್ಚುವದಕ್ಕೂ, ಒಬ್ಬ

ಹುಡುಗನನ್ನು ಇಡಬೇಕಾಗುತ್ತಿತ್ತು. ಇದಿಷ್ಟೆ ಆ ಹುಡುಗನ ಕೆಲಸವಾಗಿತ್ತು. ಆದ್ದರಿಂದ, ಅವನು ಯಾವದಾದರೊಂದು ಹಂಚಿಕೆಯಿಂದ ಆ ಮುಚ್ಚಳವು ತನ್ನಿಂದ ತಾನೇ ತೆರೆದು ಮುಚ್ಚುವಂತೆ ಮಾಡಿದರೆ, ತಾನು ಯಾವಾಗಲು ಆಡ ಬಹುದೆಂಬ ಆಲೋಚನೆಯಲ್ಲಿರುವನು. ಕಟ್ಟಕಡೆಗೆ ಅವನಿಗೆ ಒಂದು ಹಂಚಿಕೆಯು ತೋಚಿತು. ಅವನು ಒಂದು ದಾರವನ್ನು ತಕ್ಕೊಂಡು, ಅದನ್ನು ಆ ಮುಚ್ಚಳದ ಹಿಡಿಕೆಗೂ ಯಂತ್ರದ ಮತ್ತೊಂದು ಭಾಗಕ್ಕೂ ಕಟ್ಟಿಬಿಟ್ಟನು. ಕೂಡಲೆ ಆ ಮುಚ್ಚಳವು, ಬೇಕಾದಾಗ ತನ್ನಿಂದ ತಾನೇ ತೆರೆಯಲೂ ಮುಚ್ಚಲೂ ಆರಂಭಿಸಿತು. ಆಗ ತಾನು ಆಡ ಹತ್ತಿದನು. ಈ ಯುಕ್ತಿಯು, ಉಗಿಯಂತ್ರವನ್ನು ಹುಟ್ಟಿಸಿದ ವ್ಯಾಟನೆಂಬ ವಿಖ್ಯಾತನಾದ ಯಂತ್ರಶಾಸ್ತ್ರಜ್ಞನಿಗೆ ಸಹ ತೋಚಿದ್ದಿಲ್ಲ. ಈ ಬಗೆಯ ಅನೇಕ ಶೋಧಗಳು ಮೂಢರಾದ ಕೂಲಿಕಾರರಿಂದ ಸಹ ಆಗಿವೆ.

**ಶ್ರಮವಿಭಾಗದಿಂದ ಉಂಟಾಗುವ ನಾಲ್ಕನೆ ಲಾಭವು.**—ಶ್ರಮವಿಭಾಗದಿಂದ ಉಂಟಾಗುವ ಅತ್ಯಂತ ಮಹತ್ವವುಳ್ಳ ನಾಲ್ಕನೆ ಲಾಭವನ್ನು ಅಡ್ಡಾಮ್ ಸ್ಮಿಥನು ಉಲ್ಲೇಖಿಸಲಿಲ್ಲ. ಈ ಲಾಭವನ್ನು "ಬ್ಯಾಬೇಜ"ನೆಂಬ ಅರ್ಥಶಾಸ್ತ್ರಜ್ಞನು ಮೊದಲಿಗೆ ತೋರಿಸಿ ಕೊಟ್ಟವನು. ಈ ಲಾಭವು ಯಾವದಂದರೆ, ಶ್ರಮವಿಭಾಗದಿಂದ ಕೆಲಸ ಮಾಡುವ ಕೂಲಿಕಾರರನ್ನು, ಅವರವರ ಯೋಗ್ಯತೆಯ ಪ್ರಕಾರ ಬೇರೆ ಬೇರೆ ಕೆಲಸಗಳಿಗೆ ಹಚ್ಚುವದಕ್ಕೆ ಅನುಕೂಲವಾಗುತ್ತದೆ. ಇದರಿಂದ ಪ್ರತಿಯೊಬ್ಬ ಶ್ರಮ ಮಾಡುವವನು, ಅವನಿಗೆ ಉತ್ಕೃಷ್ಟವಾಗಿ ಬರುವ ಕೆಲಸಕ್ಕೆ ಹಚ್ಚಲ್ಪಡುತ್ತಾನೆ. ಅದರಿಂದ ಶ್ರಮವೂ, ಕೌಶಲ್ಯವೂ, ವ್ಯರ್ಥವಾಗದೆ ಅವುಗಳಿಂದ ದೊರೆಯು ತಕ್ಕ ಎಲ್ಲ ಲಾಭವು ದೊರೆಯುತ್ತದೆ. ಯಾವದೊಂದು ಕೆಲಸದ ಯಾವತ್ತೂ ಭಾಗಗಳನ್ನು ಮಾಡುವದಕ್ಕೆ ಕೌಶಲ್ಯವೂ, ಸಾಮರ್ಥ್ಯವೂ, ಸಮನಾಗಿ ಬೇಕಾಗುವದಿಲ್ಲ. ಕೆಲವು ಭಾಗಗಳು ಸ್ವಲ್ಪ ಶ್ರಮದಿಂದಲೂ, ಕೌಶಲ್ಯದಿಂದಲೂ, ಆಗುತ್ತವೆ; ಬೇರೆ ಕೆಲವುಗಳಿಗೆ ಬಹಳ ಕೌಶಲ್ಯವೂ, ಸಾಮರ್ಥ್ಯವೂ, ಬೇಕಾಗುತ್ತವೆ. ಶ್ರಮವಿಭಾಗದಿಂದ ಕೆಲಸದಲ್ಲಿ ವಿಭಾಗಗಳಾಗುವ ಕಾರಣ, ಕೆಲಸ ಮಾಡುವವರ ಕೌಶಲ್ಯ ಸಾಮರ್ಥ್ಯಾದಿಗಳ ಪ್ರಕಾರ ಅವರನ್ನು ಬೇರೆಬೇರೆ ಕೆಲಸಗಳಿಗೆ ಹಚ್ಚುವದಕ್ಕೆ ಅನುಕೂಲವಾಗುತ್ತದೆ. ಇದರಿಂದ ಬಹಳ ಲಾಭನಾಗುವದು. ಹ್ಯಾಗಂದರೆ, ಕೂಲಿಕಾರರಲ್ಲಿ ಕೌಶಲ್ಯವೂ, ಸಾಮರ್ಥ್ಯವೂ, ಹೆಚ್ಚುಕಡಿಮೆಯಾಗಿದ್ದಂತೆ ಅವರಿಗೆ ಹೆಚ್ಚುಕಡಿಮೆ ಕೂಲಿಯನ್ನು ಕೊಡಬೇಕಾಗುತ್ತದೆಂಬುವದನ್ನು ಎಲ್ಲರೂ ಬಲ್ಲರು. ಆದ್ದರಿಂದ, ದಿನಾಲು ೫ ರೂಪಾಯಿಯ ಕೂಲಿಯವನನ್ನು, ದಿನ ೧ ರೂಪಾಯಿ ಕೂಲಿಯ ಕೌಶಲ್ಯವಿಲ್ಲದ ಕೆಲಸಕ್ಕೆ ಹಚ್ಚುವದರಿಂದ, ಅವನ

ಕೌಶಲ್ಯದ ಯೋಗ್ಯ ಉಪಯೋಗವಾಗದೆ, ಅದು ವ್ಯರ್ಥವಾಗುವದು ಸಹಜವಾಗಿದೆ. ಕಾಜಿನ ಪಾತ್ರೆಗಳನ್ನು ಮಾಡುವ ಕಾರಖಾನೆಯಲ್ಲಿ ಕಾಜಿನ ಪಾತ್ರೆಗಳ ಮೇಲೆ ಚಿತ್ರಗಳನ್ನು ಕೊರೆಯುವ ಕೆಲಸವು ಬಹಳ ಕೌಶಲ್ಯವುಳ್ಳದ್ದಾಗಿರುವದು. ಈ ಕೆಲಸವನ್ನು ಮಾಡುವ ಕೂಲಿಕಾರರಿಗೆ, ದಿನ ಬಹುತರ ೫ ರೂಪಾಯಿ ಕೊಡಬೇಕಾಗುವದು. ಮತ್ತು ಬೇರೆ ಕೆಲವು ಕೆಲಸಗಳು ಬಹಳ ಸುಲಭವಾಗಿರುವದರಿಂದ, ದಿನ ೨ ಆಣೆ ಕೂಲಿಯ ಹುಡುಗರನ್ನು ಹಚ್ಚಿದರೂ ಕೆಲಸ ಸಾಗುತ್ತದೆ. ಹೀಗಿರಲಾಗಿ, ಯಾವತ್ತೂ ಕೆಲಸಗಳನ್ನು ಒಬ್ಬನಿಂದಲೇ ಮಾಡಿಸ ಬೇಕಾದರೆ, ಒಳ್ಳೇ ಕುಶಲನಾದವನನ್ನೇ ಹಚ್ಚ ಬೇಕಾಗುವದು. ಯಾಕಂದರೆ ಬೇರೊಬ್ಬನಿಂದ ಕೌಶಲ್ಯದ ಭಾಗಗಳು ಆಗಲಾರವು. ಹೀಗಾಗುವದರಿಂದ ದಿನ ೫ ರೂಪಾಯಿಯ ಕೂಲಿಕಾರನು, ಕೆಲಹೊತ್ತು ೨ ಆಣೆ ಕೂಲಿಯ ಕೆಲಸವನ್ನೂ, ಕೆಲಹೊತ್ತು ಒಂದು, ಎರಡು, ಮೂರು, ಇಲ್ಲವೆ ನಾಲ್ಕು ರೂಪಾಯಿ ಕೂಲಿಯ ಕೆಲಸವನ್ನೂ ಮಾಡ ಬೇಕಾಗಿ, ಸ್ವಲ್ಪ ಹೊತ್ತು ಮಾತ್ರ ೫ ರೂಪಾಯಿ ಕೂಲಿಯ ಕೆಲಸವನ್ನು ಮಾಡುವನು. ಆದ್ದರಿಂದ ಅವನ ಕೌಶಲ್ಯದಿಂದ ಆಗತಕ್ಕ ಲಾಭವು ಆಗದೆ, ಅದು ವ್ಯರ್ಥವಾಗಿ ಕಿರುಕುಳ ಕೆಲಸಗಳಲ್ಲಿ ನಷ್ಟವಾಗುತ್ತದೆಂಬುವದು ಸ್ಪಷ್ಟವಾಗಿದೆ. ಕೆಲವು ಉದ್ಯೋಗಗಳಲ್ಲಂತೂ, ಬೇರೆ ಬೇರೆ ಕೆಲಸಗಳ ಕೂಲಿಯ ದರಗಳು ಬಹಳ ಹೆಚ್ಚು ಕಡಿಮೆಯಾಗಿರುವವು. ಗಡಿಯಾಲಗಳನ್ನು ಮಾಡುವ ಕಾರಖಾನೆಯಲ್ಲಿ ದಿನ ೪ ಆಣೆ ದರದ ಕೂಲಿಯ ಕೆಲಸದಿಂದ ದಿನ ೧೦ ರೂಪಾಯಿಯ ದರದ ಕೂಲಿಯ ಕೆಲಸದವರಿಗೆ ಒಟ್ಟಿಗೆ ೧೦೦ ಕೆಲಸಗಳಿರುತ್ತವೆಂದು ಹೇಳುತ್ತಾರೆ. ಗುಂಡುಸೂಜಿಗಳನ್ನು ಮಾಡುವ ಕೆಲಸದಲ್ಲಿ ದಿನ ಮೂರು ಆಣೆ ಕೂಲಿಯ ಕೆಲಸದಿಂದ ದಿನ ೩ ರೂಪಾಯಿ ಕೂಲಿಯ ಕೆಲಸಗಳಿರುತ್ತವೆ. ಶ್ರಮವಿಭಾಗವಿಲ್ಲದಿದ್ದರೆ, ಈ ಯಾವತ್ತೂ ಕೆಲಸಗಳಲ್ಲಿ ಹೆಚ್ಚು ಕೂಲಿಯವರನ್ನು ಕಡಿಮೆ ಕೂಲಿಯ ಕೆಲಸಕ್ಕೆ ಹಚ್ಚ ಬೇಕಾಗುತ್ತಿತ್ತು.

ಆದರೆ, ಶ್ರಮವಿಭಾಗದಿಂದ ಉಂಟಾಗುವ ಒಂದೆರಡು ಹಾನಿಗಳನ್ನು ಇಲ್ಲಿ ಹೇಳುವದು ಅಪ್ರಸಂಗಿಕವಾಗಲಿಕ್ಕಿಲ್ಲವೆಂದು ತಿಳಿಯುತ್ತೇವೆ. ಈ ಹಾನಿಗಳು ಯಾವವಂದರೆ, ಶ್ರಮವಿಭಾಗದಿಂದ ಕೂಲಿಕಾರನ ಬುದ್ಧಿಯೂ, ತನ್ನ ಶಿಲ್ಪದ ಮರ್ಮವನ್ನು ತಿಳಿದುಕೊಳ್ಳುವ ಸೂಕ್ಷ್ಮದೃಷ್ಟಿಯೂ ಜಾಗೃತವಾಗಿರುವದಿಲ್ಲ. ಒಬ್ಬ ಬಡಿಗನು ತನ್ನ ಆಯುಷ್ಯವನ್ನೆಲ್ಲ ಖುರ್ಚಿಯ ಮುಂಗಾಲುಗಳನ್ನು ಮಾತ್ರ ಮಾಡುವಲ್ಲಿ ಕಳೆದಿದ್ದಾನೆಂದು ಕಲ್ಪಿಸಿರಿ. ಈ ಬಡಿಗನಿಗೆ ಇಡೀ ಖುರ್ಚಿಯ ವಿಷಯದಲ್ಲಿ ಏನೂ ವಿಚಾರವಿರುವದಿಲ್ಲ. ಅವನು ತನಗೆ ಕೊಟ್ಟ ಮಾದರಿಯಂತೆ,

ಎಂಟು ದಿವಸಕ್ಕಾಗಲಿ, ತಿಂಗಳಿಗಾಗಲಿ, ಇಂತಿಷ್ಟು ಖುರ್ಚಿಯ ಮುಂಗಾಲುಗಳನ್ನು ಮಾಡಿದರೆ ತೀರಿತು. ಆದ್ದರಿಂದ, ಈ ರೀತಿಯಿಂದ ಮಾಡಿದ ಖುರ್ಚಿಗಳು ಘಟ್ಟಿಯಾಗಿಯೂ ಇರುವದಿಲ್ಲ, ಸೌಕರ್ಯವುಳ್ಳವಾಗಿಯೂ ಇರುವದಿಲ್ಲ, ಚಂದವಾಗಿಯೂ ಇರುವದಿಲ್ಲ. ಶ್ರಮವಿಭಾಗದ ಮೂಲಕವಾಗಿ, ಇಡೀ ಖುರ್ಚಿಯ ಬಗ್ಗೆ ಯಾರೂ ಹೊಣೆಯಾಗಿರುವದಿಲ್ಲವಾದ್ದರಿಂದ ಈ ಬಗೆಯ ಹಾನಿಯಾಗುತ್ತದೆಂದು ತೋರುತ್ತದೆ. ಇದಲ್ಲದೆ, ಶ್ರಮವಿಭಾಗವು ಬಹಳ ಸೂಕ್ಷ್ಮವಾದ ಹಾಗೆ, ಕೂಲಿಕಾರನು ತೀರ ಯಂತ್ರದಂತೆ ಕೆಲಸ ಮಾಡುವವನಾಗುತ್ತಾನೆ. ಅಂದರೆ, ಅವನು ಯಾವದೊಂದು ಕೆಲಸದ ಯಾವದೊಂದು ವಿಶೇಷ ಭಾಗವನ್ನು ಮಾತ್ರ ಬಹಳ ಕೌಶಲ್ಯದಿಂದ ಮಾಡ ಬಲ್ಲವನಾಗುತ್ತಾನೆ; ಬೇರೆ ಭಾಗಗಳ ಜ್ಞಾನವು ಅವನಿಗೆ ಏನು ಇರುವದಿಲ್ಲ. ಆದ್ದರಿಂದ, ಅವನು ಬಹಳ ದಿವಸದಿಂದ ಮಾಡುತ್ತಾ ಬಂದ ಕೆಲಸವು ಬದಲಾದರೆ ಅವನ ಕೌಶಲ್ಯವೂ, ಉಪಯೋಗಿತ್ವವೂ ಮಣ್ಣುಪಾಲಾಗುತ್ತವೆ. ಈ ಕೂಲಿಕಾರನ ಬುದ್ಧಿಯು ಸ್ವಾಭಾವಿಕವಾಗಿ ಚುರುಕಾಗಿರಬಹುದು. ಆದರೆ, ಅವನ ಚುರುಕು ಬುದ್ಧಿಯು, ಅವನು ದಿನಂಪ್ರತಿ ಮಾಡುವ ಕೆಲಸದಿಂದ ಎಷ್ಟು ಮಾತ್ರವೂ ವಿಕಾಸ ಹೊಂದುವದಿಲ್ಲ.

**ನಿರಾತಂಕ ವ್ಯಾಪಾರವು ಶ್ರಮವಿಭಾಗವೇ.**—ಶ್ರಮವಿಭಾಗವೆಂಬ ವಿಷಯವು ಬಹಳ ಗೌರವವುಳ್ಳದ್ದು. ಇದರ ಉಪಯೋಗವು ಕೇವಲ ಕಾರಖಾನೆಗಳಲ್ಲಿ, ಅಥವಾ ಶಿಲ್ಪಶಾಲೆಗಳಲ್ಲಿಯೇ ಇರುವದಿಲ್ಲ, ಇವುಗಳಿಗಿಂತಲೂ ಅತ್ಯಂತ ಮಹತ್ವವುಳ್ಳ ಕೆಲಸಗಳಲ್ಲಿ ಸಹ ಗೋಚರವಾಗುವದು. ನಿರಾತಂಕ ವ್ಯಾಪಾರವು ಶ್ರಮವಿಭಾಗದ್ದೇ ಒಂದು ವ್ಯಾಪಕ ಉದಾಹರಣವಾಗಿದೆ. ಬೇರೆ ಬೇರೆ ರಾಷ್ಟ್ರಗಳ ನಡುವೆ ಜನರು ಕಲ್ಪಿಸಿದಂಥ ಪ್ರತಿಬಂಧಗಳನ್ನು ಮುರಿದು ಹಾಕಲಾಗಿ, ಪ್ರತಿಯೊಂದು ದೇಶದವರು ತಮ್ಮ ದೇಶದಲ್ಲಿ ಹುಟ್ಟುವ ಪದಾರ್ಥಗಳಿಂದ ಮಾತ್ರವೇ ಚರಿತಾರ್ಥ ಸಾಗಿಸುವ ಅಗತ್ಯ ತಪ್ಪುತ್ತದೆ. ಅವರಿಗೆ ತಮ್ಮ ದೇಶದಲ್ಲಿ ಸುಲಭವಾಗಿಯೂ ವಿಪುಲವಾಗಿಯೂ ಹುಟ್ಟುವ ಪದಾರ್ಥಗಳನ್ನು ಮಾತ್ರ ಹುಟ್ಟಿಸಿ, ಅವುಗಳನ್ನು ಪರದೇಶದವರಿಗೆ ಕೊಟ್ಟು, ಪರದೇಶದವರಿಂದ ತಮಗೆ ಬೇಕಾದ ಒಡವೆಗಳನ್ನು ಸಂಪಾದಿಸುವದಕ್ಕೆ ಅನುಕೂಲವಾಗುತ್ತದೆ. ಬೇರೆ ಬೇರೆ ದೇಶಗಳ ನಡುವೆ ವ್ಯಾಪಾರವು ಪ್ರತಿಬಂಧವಿಲ್ಲದೆ ನಡಿಯುವದರಿಂದ ಪ್ರತಿಯೊಂದು ದೇಶದವರು ತಮ್ಮ ದೇಶದ ಸ್ವಾಭಾವಿಕ ಸ್ಥಿತಿಗೂ, ಜನರ ಸ್ಥಿತಿಗೂ ಉತ್ಕೃಷ್ಟವಾಗಿ ಅನುಕೂಲವಾಗಿರುವ ಪದಾರ್ಥಗಳನ್ನೇ ಹುಟ್ಟಿಸಿ, ತಮಗೆ ಅನಾವಶ್ಯಕವಾದ ಪದಾರ್ಥಗಳನ್ನು ಪರರಾಷ್ಟ್ರಗಳ ಜನರಿಗೆ ಕೊಟ್ಟು, ಅವರಿಂದ ತಮಗೆ

ಅವಶ್ಯವಾದ ಪದಾರ್ಥಗಳನ್ನು ದೊರಕಿಸುವರು. ಅದರಿಂದ ಯಾವತ್ತು ರಾಷ್ಟ್ರಗಳಿಗೂ ಕಲ್ಯಾಣವಾಗುವದು. ಈ ಮೇರಿಗೆ ನಿರಾತಂಕ ವ್ಯಾಪಾರವೂ ಶ್ರಮವಿಭಾಗವೇ ಎಂಬದು ಸ್ಪಷ್ಟವದೆ.

**ಶ್ರಮಸಂಯೋಗ.**—ಶ್ರಮವಿಭಾಗದಿಂದ ಶ್ರಮದ ಫಲವು ಹೆಚ್ಚುತ್ತದೆಂಬದಕ್ಕೆ ಸಂದೇಹವಿಲ್ಲ. ಆದರೂ, ಶ್ರಮದ ಉತ್ಪಾದಕ ಶಕ್ತಿಯನ್ನು ಹೆಚ್ಚಿಸುವಲ್ಲಿ ಶ್ರಮಸಂಯೋಗವು ಅದಕ್ಕೂ ಬಲವತ್ತರವಾಗಿರುವದು. "ಅನೇಕ ಜನರು ಒಟ್ಟುಗೂಡಿ ಮಾಡುವ ಶ್ರಮಕ್ಕೆ" ಶ್ರಮಸಂಯೋಗವೆಂಬ ಹೆಸರು. ಯಾವದೊಂದು ಕೆಲಸವನ್ನು ಬೇರೆ ಬೇರೆ ಜನರು ಬೇರೆ ಬೇರೆಯಾಗಿ ಮಾಡುವದಕ್ಕಿಂತಲೂ, ಅವರು ಒಬ್ಬರಿಗೊಬ್ಬರು ಸಹಾಯ ಮಾಡಿ ಕೂಡಿ ಮಾಡುವದರಿಂದ ಬಹಳ ಕೆಲಸವಾಗುತ್ತದೆಂದು ಅನುಭವದಿಂದ ಗೊತ್ತಾಗಿದೆ. ಒಂದು ದೊಡ್ಡ ಹಡಗದ ಲಂಗರವನ್ನು ಮೇಲಕ್ಕೆ ಎಳಿಯ ಬೇಕಾದರೆ, ಅನೇಕ ಜನರು ಕೂಡಿ ಶ್ರಮ ಮಾಡಬೇಕಾಗುತ್ತದೆ. ಅದರಿಂದ ಲಂಗರವು ಸ್ವಲ್ಪ ಹೊತ್ತಿನಲ್ಲಿ ಎತ್ತಲ್ಪಡುತ್ತದೆ. ಒಬ್ಬನೇ ಆ ಲಂಗರವನ್ನು ಎತ್ತಲೆತ್ನಿಸಿದರೆ, ಅವನ ಶ್ರಮವೆಲ್ಲಾ ವ್ಯರ್ಥವಾಗುವದು. ಎರಡು ಬೇಟೆಯ ನಾಯಿಗಳು ಬೇರೆ ಬೇರೆಯಾಗಿ ಓಡಿ ಬೇಟೆಯಾಡುವದರಿಂದ ದೊರಿಯುವ ಮೊಲಗಳಿಕ್ಕಿಂತಲೂ, ಎರಡೂ ನಾಯಿಗಳು ಕೂಡಿ ಓಡುವದರಿಂದ ಹೆಚ್ಚು ಮೊಲಗಳು ದೊರಿಯುತ್ತವೆಂದು ಬೇಟೆಗಾರರು ಹೇಳುತ್ತಾರೆ.

**ಸಾಕ್ಷಾತ್ ಶ್ರಮಸಂಯೋಗವೂ, ಫಲದ್ವಾರಕ ಶ್ರಮಸಂಯೋಗವೂ.**—ಶ್ರಮಸಂಯೋಗದಲ್ಲಿ ಎರಡು ಭೇದಗಳು:

೧. **ಸಾಕ್ಷಾತ್ ಶ್ರಮಸಂಯೋಗ.**—ಒಂದೇ ಕೆಲಸವನ್ನು ಮಾಡುವಲ್ಲಿ ಅನೇಕರು ಒಬ್ಬರಿಗೊಬ್ಬರು ಸಹಾಯ ಮಾಡುವದು, ಸಾಕ್ಷಾತ್ ಶ್ರಮಸಂಯೋಗವೆನಿಸುತ್ತದೆ. ಯಾಕಂದರೆ, ಈ ಶ್ರಮಸಂಯೋಗದಲ್ಲಿ ಎಲ್ಲರ ಶ್ರಮದಿಂದ ಪ್ರತ್ಯಕ್ಷವಾಗಿ ಒಂದೇ ಕೆಲಸವಾಗುತ್ತದೆ. ದೊಡ್ಡ ದೊಡ್ಡ ಒಜ್ಜೆಗಳನ್ನು ಎತ್ತೋಣ, ದೊಡ್ಡ ಮರಗಳನ್ನು ಕಡಿದು ಕೆಡವೋಣ, ತೊಲಿಗಳನ್ನು ಕೊರಿಯೋಣ, ಹಡಗದ ಲಂಗರಗಳನ್ನು ಎತ್ತೋಣ ಇವು ಮೊದಲಾದ ಕೆಲಸಗಳು ಸಾಕ್ಷಾತ್ ಶ್ರಮಸಂಯೋಗದ ಉದಾಹರಣಗಳಾಗಿವೆ. ಈ ಯಾವತ್ತೂ ಕೆಲಸಗಳಲ್ಲಿ ಜನರು ಒಂದೇ ಕೆಲಸದಲ್ಲಿ ಒಂದೇ ತರದ ಶ್ರಮ ಮಾಡಿ ಪರಸ್ಪರರಿಗೆ ಸಹಾಯ ಮಾಡುತ್ತಾರೆ.

೨. **ಫಲದ್ವಾರಕ ಶ್ರಮಸಂಯೋಗ.**—ಅನೇಕ ಜನರು ಯಾವದೊಂದು ಕೆಲಸದ ಬೇರೆ ಬೇರೆ ಭಾಗಗಳನ್ನು ಮಾಡಿ, ಅದರ ದ್ವಾರದಿಂದ ಮುಖ್ಯ ಕೆಲಸ

ವನ್ನು ಕೊನೆಗಾಣಿಸುವದಕ್ಕೆ ಮಾಡಿದ ಸಹಾಯವು ಫಲದ್ವಾರಕ ಶ್ರಮಸಂಯೋಗವೆನಿಸುತ್ತದೆ. ಫಲದ್ವಾರಕ ಶ್ರಮಸಂಯೋಗದ ಮಹತ್ವವು, ನಾವು ಹೊದಿಯುವ ಒಂದು ಸಾಧಾರಣವಾದ ನೂಲಿನ ವಸ್ತ್ರವನ್ನು ಮಾಡುವಲ್ಲಿ ಎಷ್ಟು ಜನರು ಎಷ್ಟು ವಿಧದಿಂದ ಶ್ರಮ ಮಾಡಿ ಪರಸ್ಪರರಿಗೆ ಸಹಾಯ ಮಾಡಿದ್ದಾರೆಂಬದನ್ನು ವಿಚಾರಿಸಿ ನೋಡಿದರೆ, ಚನ್ನಾಗಿ ತಿಳಿಯುವದು. ಈ ವಸ್ತ್ರವನ್ನು ಹುಟ್ಟಿಸ ಬೇಕಾದರೆ, ಬೇರೆ ಬೇರೆ ತರದಿಂದ ಬೇರೆ ಬೇರೆ ಸ್ಥಳಗಳಲ್ಲಿ ಅನೇಕರು ಶ್ರಮ ಮಾಡಿ ಒಬ್ಬರಿಗೊಬ್ಬರು ಸಹಾಯ ಮಾಡಿದ್ದಾರೆ. ಹಿಂದುಸ್ತಾನದಲ್ಲಿ, ಇಲ್ಲವೆ ಅಮೇರಿಕೆಯಲ್ಲಿ ಹತ್ತಿಯನ್ನು ಬಿತ್ತಿದ ಒಕ್ಕಲಿಗರು, ಹತ್ತಿಯು ಬೆಳೆದ ತರುವಾಯ ಹತ್ತಿಯ ಅಂಡಿಗೆಗಳನ್ನು ಕಟ್ಟಿ ವಿಲಾಯತಿಗೆ ಕಳಿಸುವದಕ್ಕಾಗಿ ಬಂದರಗಳಿಗೆ ಹೇರಿಕೊಂಡು ವೈದವರು, ಅಲ್ಲಿಂದ ಆ ಅಂಡಿಗೆಗಳನ್ನು ಇಂಗ್ಲಂಡಕ್ಕೆ ವೈದ ಹಡಗದವರು, ಇಂಗ್ಲಂಡಕ್ಕೆ ಅಂಡಿಗೆಗಳು ಮುಟ್ಟಿದನಂತರ ಅವುಗಳನ್ನು ಮ್ಯಾಂಚೆಸ್ಟರ ಪಟ್ಣದ ವರೆಗೆ ವೈದ ಹೊಗೆಬಂಡಿಯವರು, ಆ ಅರಳಿಯು ಮ್ಯಾಂಚೆಸ್ಟರ ಪಟ್ಣದ ಯಂತ್ರಗಳಿಂದ ನೂತು ಬಟ್ಟೆಯಾಗುವ ವರೆಗೆ ದುಡಿದ ಅಸಂಖ್ಯ ಕೂಲಿಕಾರರು, ಇವರೆಲ್ಲರೂ ನಾವು ಹೊದಿಯುವ ಒಂದು ನೂಲಿನ ಬಟ್ಟೆಯನ್ನು ಸಿದ್ಧ ಮಾಡುವದಕ್ಕಾಗಿ ಪರಸ್ಪರರಿಗೆ ಸಹಾಯ ಮಾಡಿದ್ದಾರೆ. ಇದೇ ಮೇರಿಗೆ ಒಕ್ಕಲತನ ಮಾಡುವವರೂ, ಶಿಲ್ಪಗಾರರೂ, ತಮ್ಮ ತಮ್ಮ ಉದ್ಯೋಗಗಳನ್ನು ನಡಿಸಿ ಒಬ್ಬರಿಗೊಬ್ಬರು ಮಾಡುವ ಸಹಾಯವಾದರೂ ಫಲದ್ವಾರಕ ಶ್ರಮಸಂಯೋಗದ ಮತ್ತೊಂದು ಉದಾಹರಣವಾಗಿದೆ. ಅಂದರೆ, "ಕೆಲವು ಜನರು ಕೂಡಿ ಶ್ರಮ ಮಾಡಿ ತಮಗೆ ಅವಶ್ಯವಾದದ್ದಕ್ಕಿಂತಲೂ ಹೆಚ್ಚು ಅನ್ನವನ್ನು ಹುಟ್ಟಿಸಲಾಗಿ, ಬೇರೆ ಕೆಲವರು ಕೂಡಿ ಶ್ರಮ ಮಾಡಿ ತಮಗೆ ಬೇಕಾಗುವದಕ್ಕಿಂತಲೂ ಹೆಚ್ಚು ಅರಿವೆಗಳನ್ನು ಹುಟ್ಟಿಸಲಿಕ್ಕೂ, ತಮಗೆ ಹೆಚ್ಚಾದ ಅರಿವೆಗಳನ್ನು ಹೆಚ್ಚು ಅನ್ನವನ್ನು ಹುಟ್ಟಿಸಿದವರಿಗೆ ಕೊಟ್ಟು, ಅವರಿಗೆ ಹೆಚ್ಚಾದ ಅನ್ನವನ್ನು ಕೊಳ್ಳುವದಕ್ಕೂ ಮನಸ್ಸುಳ್ಳವರಾಗುತ್ತಾರೆ". ಇದರಿಂದ ಪ್ರತಿಯೊಬ್ಬನಿಗೆ ಯಾವತ್ತು ಪದಾರ್ಥಗಳನ್ನು ತಾನೇ ಮಾಡಿಕೊಳ್ಳ ಬೇಕಾಗುವದಿಲ್ಲ. ಬೇರೆ ಬೇರೆ ಜನರು ಬೇರೆ ಬೇರೆ ಪದಾರ್ಥಗಳನ್ನು ಹುಟ್ಟಿಸುವ ಕೆಲಸವನ್ನು ವಹಿಸಿಕೊಂಡು, ಎಲ್ಲರಿಗೂ ಅನ್ನವಸ್ತ್ರಗಳನ್ನು ದೊರಕಿಸಿ ಕೊಡುವ ಕೆಲಸದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ. ಈ ಪ್ರಕಾರ ಇಡೀ ಜನಸಮೂಹವೆಂಬುವದೊಂದು ಸಹಸ್ರಾವಧಿ ಚಕ್ರಗಳೂ, ಒಳಚಕ್ರಗಳೂ ಇರುವ ಚಮತ್ಕಾರವಾದ ಯಂತ್ರವಾಗಿದೆಂದು ಹೇಳ ಬಹುದು. ಈ ದೊಡ್ಡ ಯಂತ್ರದಲ್ಲಿ ಎಡೆಬಿಡದೆ, ತಮ್ಮ ತಮ್ಮ ಉದ್ಯೋಗ

ಗಳನ್ನು ನಡಿಸುವ ಉದ್ಯೋಗಸ್ಥರೆಂಬ ಸಾವಿರಾರು ಒಳಚಕ್ರಗಳು ಯಾವಾಗಲೂ ತಿರುಗಿ ಒಂದಕ್ಕೊಂದು ಸಹಾಯ ಮಾಡುವದರಿಂದ, ಈ ದೊಡ್ಡ ಸಮಾಜಯಂತ್ರವು ಅವ್ಯಾಹತವಾಗಿ ಸಾಗುತ್ತದೆ.

**ಹೊಸದಾಗಿ ವಸಾಹತುಗಳನ್ನು ಮಾಡುವ ಕ್ರಮವನ್ನು ಕುರಿತು, ವೇಕಫಿಲ್ಡನೆಂಬ ಗ್ರಂಥಕರ್ತನ ನಿಯಮವು.**—ಪಟ್ಟದ ನಿವಾಸಿಗಳೂ ಹಳ್ಳಿಯ ನಿವಾಸಿಗಳೂ ತಮ್ಮ ತಮ್ಮ ವ್ಯವಸಾಯಗಳಿಂದ ಹುಟ್ಟಿದ ಹೆಚ್ಚಿನ ಉತ್ಪನ್ನಗಳನ್ನು ಒಬ್ಬರಿಗೊಬ್ಬರು ಕೊಡುವದರಿಂದ ಇಬ್ಬರಿಗೂ ಹಿತವಾಗುತ್ತದೆ. ಈ ತತ್ವವನ್ನೇ, ವೇಕಫಿಲ್ಡ ಧೊರೆಯು ಹೊಸ ವಸಾಹತುಗಳನ್ನು ಸ್ಥಾಪಿಸುವದನ್ನು ಕುರಿತು ಹಾಕಿಕೊಟ್ಟ ನಿಯಮವು ಆಧರಿಸಿ ಇದೆ.

ಹೊಸದಾಗಿ ಒಕ್ಕಲಾದ ಪ್ರದೇಶದಲ್ಲಿ ಪ್ರತಿಯೊಂದು ಕುಟುಂಬಕ್ಕೆ, ಅದರ ಯಾವತ್ತೂ ಕೊರತೆಗಳು ಪೂರ್ಣವಾಗುವಷ್ಟು ವಿಸ್ತಾರವುಳ್ಳ ಫಲವತ್ತಾದ ಭೂಮಿಯನ್ನು ಕೊಡುವ ಪದ್ಧತಿಯಿಂದ, ವ್ಯಾಪಾರದ ಬೆಳುವಣಿಗೆಗೂ ಸುಧಾರಣೆಯ ಹಬ್ಬುವಿಕೆಗೂ ಬಹಳ ಅಡ್ಡಿಯಾಗುತ್ತದೆಂಬದನ್ನು ವೇಕಫಿಲ್ಡ ಧೊರೆಯು ತೋರಿಸಿದನು. ಇಂಥ ಕುಟುಂಬದವರಿಗೆ, ಪ್ರಯೋಜನವಿಲ್ಲದಂಥ ಕೆಲವು ಪದಾರ್ಥಗಳು ವಿಪುಲವಾಗಿ ದೊರಿಯುತ್ತವೆ. ಆದರೆ ಒಂದು ಕುಟುಂಬಕ್ಕೂ, ಮತ್ತೊಂದು ಕುಟುಂಬಕ್ಕೂ ವ್ಯವಹಾರವು ನಡಿಯದಂತೆ, ಪ್ರತಿಯೊಂದು ಕುಟುಂಬವು ಒತ್ತಟ್ಟಿಗೆ ಸ್ವತಂತ್ರವಾಗಿ ಇರುವದರಿಂದ, ಉದ್ಯೋಗ ಸಾಹಸಗಳಿಗೆ ಪ್ರೋತ್ಸಾಹವಾಗಲಿ ಪ್ರಸಂಗವಾಗಲಿ ಏನು ಇರುವದಿಲ್ಲ. ಮತ್ತು ತಮ್ಮದೊಂದು ಕುಟುಂಬದ ಉದರ ನಿರ್ವಾಹಕ್ಕೆ ಬೇಕಾಗುವ ಪದಾರ್ಥಗಳಿಗಿಂತಲೂ ಹೆಚ್ಚು ಪದಾರ್ಥಗಳನ್ನು ಹುಟ್ಟಿಸುವ ಪ್ರಯೋಜನವೂ ಅವರಿಗೆ ಇರುವದಿಲ್ಲ. ಈ ಅಹಿತಕರವಾದ ಸ್ಥಿತಿಯನ್ನು ನಿವಾರಣೆ ಮಾಡುವದಕ್ಕಾಗಿ, ವೇಕಫಿಲ್ಡ ಧೊರೆಯು ಸೂಚಿಸಿದ್ದೇನಂದರೆ, ಪ್ರತಿಯೊಂದು ಹೊಸದಾಗಿ ಒಕ್ಕಲಾದ ಪ್ರದೇಶದಲ್ಲಿ ಬೇರೆ ಬೇರೆ ಶಿಲ್ಪಗಳನ್ನು ನಡಿಸುವ ಪಟ್ಣಗಳ ವಾಸಸ್ಥರೂ, ಒಕ್ಕಲತನ ಮಾಡುವವರೂ ಒಬ್ಬರಿಗೊಬ್ಬರು ಸಮೀಪದಲ್ಲಿರುವಂತೆ ಆದಷ್ಟು ಯತ್ನ ಮಾಡ ಬೇಕು. ಇದರಿಂದ ಶ್ರಮವಿಭಾಗವು ಬೆಳಿಯುವದಕ್ಕೆ ಬಹಳ ಉತ್ತೇಜನ ದೊರೆದು, ಸಂಪತ್ತು ಬಹಳ ತ್ವರೆಯಾಗಿ ಬೆಳಿಯಲಾರಂಭಿಸುವದು. ಯಾಕಂದರೆ, ಒಕ್ಕಲತನ ಮಾಡುವವರು ಉತ್ಪನ್ನ ಮಾಡಿದ ಹೊಲದ ಹುಟ್ಟುವಳಿಯು ಪಟ್ಣದಲ್ಲಿ ಮಾರಾಟವಾಗುವದು. ಹಾಗೂ ಆ ಹುಟ್ಟುವಳಿಗೆ ಬದಲಾಗಿ ಪಟ್ಣಸ್ಥರು ಶಿಲ್ಪದ ಪದಾರ್ಥಗಳನ್ನು ಕೊಡುವರು.

**ಆಯುಧಗಳನ್ನೂ, ಯಂತ್ರಗಳನ್ನೂ ಉಪಯೋಗಿಸುವದು.**—ಶ್ರಮವನ್ನು ಬಹಳ ಫಲವುಳ್ಳದ್ದಾಗಿ ಮಾಡುವಂಥ ಶ್ರಮವಿಭಾಗ, ಮತ್ತು ಶ್ರಮಸಂಯೋಗವೆಂಬ ಎರಡು ಕಾರಣಗಳನ್ನು ಉಲ್ಲೇಖಿಸಿದನಂತರ ಮೂರನೇ ಕಾರಣವನ್ನು ಉಲ್ಲೇಖಿಸುತ್ತೇವೆ. ಯಾವದೊಂದು ಉದ್ಯೋಗದಲ್ಲಿ ಆಯುಧಗಳನ್ನೂ, ಯಂತ್ರಗಳನ್ನೂ ಉಪಯೋಗಿಸುವದು ಶ್ರಮದ ಉತ್ಪಾದಕತ್ವವನ್ನು ವರ್ಧಿಸುವ ಮೂರನೇ ಉಪಾಯವು. ಇದರ ಮಹತ್ವವು ಸ್ಪಷ್ಟವಾಗಿದೆ. ಒಂದಿಲ್ಲ ಒಂದು ತರದ ಆಯುಧವನ್ನು ಉಪಯೋಗಿಸದೆ ನಡಿಯುವ ಉದ್ಯೋಗವು ಒಂದೂ ಇಲ್ಲ. ಸಲಿಕೆ ಇಲ್ಲದೆ, ಎಂಥ ಕಾಡು ತರದ ಒಕ್ಕಲತನವೂ ನಡೆಯಲಾರದು. ಎಂಥ ಸಾದಾ ಹೊಲಿಗೆಯಾದರೂ ಸೂಜಿಯ ಹೊರ್ತು ನಡೆಯದು. ಯಾವತ್ತೂ ಉದ್ಯೋಗಗಳಲ್ಲಿ ಬರಬರುತ್ತಾ ಯಂತ್ರಗಳನ್ನು ಉಪಯೋಗಿಸುವದು ಸರ್ವಸಾಧಾರಣವಾಗುತ್ತಾ ನಡೆದದೆ. ಯಂತ್ರಗಳು ಶ್ರಮದ ಉತ್ಪಾದಕ ಶಕ್ತಿಯನ್ನು ಎರಡು ಬಗೆಯಾಗಿ ಹೆಚ್ಚಿಸುವವು. ಯಂತ್ರಗಳು ಆಳುಗಳ ಶ್ರಮವನ್ನು ತಾವು ಮಾಡಿ, ಆಳುಗಳು ಮಾಡುವ ಶ್ರಮವನ್ನು ಉಳಿಸುತ್ತವೆಂಬುವದು ಮೊದಲನೆ ಬಗೆಯು. ಹೊಲಿಯುವ ಯಂತ್ರ, ತುಳಿಸುವ ಯಂತ್ರ ಇವು ಮೊದಲಾದವುಗಳು ಈ ಬಗೆಯ ಉದಾಹರಣಗಳಾಗಿವೆ. ಮನುಷ್ಯ ಮಾತ್ರರ ಶ್ರಮವನ್ನು ಎಷ್ಟು ಉಪಯೋಗಿಸಿದರೂ ಮಾಡಲಿಕ್ಕೆ ಅಸಾಧ್ಯವಾದ ಎಷ್ಟೋ ಕೆಲಸಗಳು ಯಂತ್ರಗಳಿಂದ ಕಡೆಗಾಣುವವು. ಇದು ಎರಡನೆ ಬಗೆಯು. ಹೊಗೆಬಂಡಿಯನ್ನು ತಾಸಿಗೆ ೬೦ ಮೈಲುಗಳಂತೆ ನಡಿಸುವ ಕೆಲಸದಂಥ ಕೆಲಸಗಳು ಈ ಬಗೆಯ ಉದಾಹರಣಗಳು. ಮೊದಲನೆ ಬಗೆಯಿಂದ, ಬಹಳ ಜನರು ಮಾಡ ಬೇಕಾದ ಕೆಲಸವನ್ನು ಸ್ವಲ್ಪ ಜನರು ಮಾಡಲಿಕ್ಕೆ ಸಮರ್ಥರಾಗುತ್ತಾರೆ. ಆದ್ದರಿಂದ ಬಹಳ ಶ್ರಮವು ಕೆಲಸವಿಲ್ಲದೆ ಉಳಿಯುವದು. ಈ ಶ್ರಮವು ಬೇರೆ ಬೇರೆ ಹೊಸ ಉದ್ಯೋಗಗಳಲ್ಲಿ ತೊಡಗುವದು. ಎರಡನೆ ಬಗೆಯಿಂದ, ಸಾಹಸದ ಹೊಸ ಉದ್ಯೋಗಗಳ ದ್ವಾರವು ತೆರಿಯುತ್ತದೆ. ಈ ಹೊಸ ಉದ್ಯೋಗಗಳಿಂದ, ಬೇರೆ ಬೇರೆ ಉದ್ಯೋಗಗಳಲ್ಲಿ ಯಂತ್ರಗಳನ್ನು ಉಪಯೋಗಿಸಿದ್ದರ ಮೂಲಕವಾಗಿ ಕೆಲಸ ತಪ್ಪಿದ ಕೂಲಿಕಾರರಿಗೆ ಕೆಲಸ ದೊರಿಯುತ್ತದೆ.

**ಶ್ರಮದ ಉತ್ಪಾದಕತ್ವವು ಕೂಲಿಕಾರರ ಕೌಶಲ್ಯ, ಬುದ್ಧಿ, ಸದಾಚರಣೆ, ಪ್ರಾಮಾಣಿಕತನ ಇವುಗಳಿಂದ ಬೆಳಿಯುತ್ತದೆ.**—ಶ್ರಮವನ್ನು ಹೆಚ್ಚು ಫಲವುಳ್ಳದ್ದಾಗಿ ಮಾಡುವಂಥ ಮೂರು ಮುಖ್ಯವಾದ ವಸ್ತುಗತ ಕಾರಣಗಳನ್ನು ಇದುವರೆಗೆ ವಿವರಿಸಿದೆವು. ಆದರೆ, ಇವಲ್ಲದೆ ಕೆಲವು ಮಾನಸಿಕ ಕಾರಣಗಳಾದರೂ

ಇರುವವು. ಈ ಕಾರಣಗಳನ್ನು ಹೇಳದೆ ಬಿಡುವದು ಸರಿಯಾಗಲಾರದು. ಈ ಕಾರಣಗಳು ಯಾವವಂದರೆ—ಕೂಲಿಕಾರರ ಕೌಶಲ್ಯ, ಬುದ್ಧಿ, ಸದಾಚರಣೆ, ಮತ್ತು ಪ್ರಾಮಾಣಿಕತನ ಎಂಬಿವು ನಾಲ್ಕು.

ಕೂಲಿಕಾರರು ಕುಶಲರಾಗಿದ್ದರೆ ಅವರ ಶ್ರಮದಿಂದ ಬಹಳ ಕೆಲಸವಾಗುತ್ತದೆಂಬದು ಎಲ್ಲರಿಗೂ ಸಹಜವಾಗಿ ತಿಳಿಯುವದರಿಂದ, ಉದಾಹರಣಗಳನ್ನು ಹೇಳಿ ಈ ಮಾತನ್ನು ವಿಶೇಷ ಸ್ಪಷ್ಟ ಮಾಡುವದು ಅಗತ್ಯವಿಲ್ಲ. ಅನೇಕ ಉದ್ಯೋಗಗಳಲ್ಲಿ ಬೇಕಾಗುವ ಕೌಶಲ್ಯವು ಬರಬೇಕಾದರೆ, ಎಷ್ಟೋ ಕಾಲವನ್ನು ಆ ಉದ್ಯೋಗಗಳನ್ನು ಕಲಿಯುವದರಲ್ಲಿ ಕಳಿಯ ಬೇಕಾಗುತ್ತದೆ. ಮತ್ತು ಯೋಗ್ಯವಾದ ಕೌಶಲ್ಯವು ಬರುವ ವರೆಗೆ ಅವರ ಶ್ರಮದಿಂದ ಏನು ಪ್ರಯೋಜನವಾಗುವದಿಲ್ಲ. ಯಾಕಂದರೆ, ಅಡ್ಡ ಕಸಬಿಯು ಕೆಲಸವನ್ನು ಸಾವಕಾಶವಾಗಿಯೂ, ಅಸಡ್ಡಾಳವಾಗಿಯೂ ಮಾಡುವದಲ್ಲದೆ, ಒಮ್ಮೊಮ್ಮೆ ತನ್ನ ಕೆಲಸದ ಆಯುಧಗಳನ್ನು ಸಹ ಕೆಡಿಸಿ ಹಾಳು ಮಾಡುವನು.

**ಕೂಲಿಕಾರರ ಬುದ್ಧಿ.**—ಶ್ರಮವನ್ನು ಹೆಚ್ಚು ಫಲವುಳ್ಳದ್ದಾಗಿ ಮಾಡುವದಕ್ಕೆ ಕೂಲಿಕಾರರೊಳಗೆ ಜ್ಞಾನವು ಹಬ್ಬುವಂತೆ ಮಾಡುವದೊಂದು ಬಹಳ ದೊಡ್ಡ ಸಾಧನವಾಗಿದೆ. ಈ ಸಾಧನದ ಮಹತ್ವವನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ ಸರಿ. ಮೂಢ ಕೂಲಿಕಾರನಿಗೆ ತನ್ನ ಕೆಲಸದ ಉಪಪತ್ತಿಯು ತಿಳಿದಿರುವದಿಲ್ಲ. ಅವನು ಕೆಲಸವನ್ನು ತಿಳುವಳಿಕೆ ಇಲ್ಲದೆ, ಯಂತ್ರದಂತೆ ಮಾಡುತ್ತಿರುವನು. ಅವನು ತನಗೆ ಕಲಿಸಿದ್ದನ್ನಷ್ಟೇ ಮಾಡುವನೇ ಹೊರ್ತು, ಕೆಲಸದ ಇಂಗಿತವನ್ನು ತಿಳಿಯಲಾರನು. ಆದ್ದರಿಂದ ತನ್ನ ಕೆಲಸದಲ್ಲಿ ಮಾಡತಕ್ಕ ಸುಧಾರಣೆಗಳು ಅವನ ಲಕ್ಷ್ಯದಲ್ಲಿ ಬರುವದಿಲ್ಲ. ಅವನು ನಿತ್ಯದಲ್ಲಿ ಮಾಡುವ ಉದ್ಯೋಗವು ಮಂದವಾಗಿ ಕೆಲಸ ಹೋದರೆ, ಅವನ ಯಾವತ್ತೂ ಆಧಾರವು ತಪ್ಪಿದಂತಾಗುತ್ತದೆ. ಯಾಕಂದರೆ ಮತ್ತ್ಯಾವ ಕೆಲಸವನ್ನಾದರೂ ಮಾಡುವಷ್ಟು ಜ್ಞಾನವು ಅವನಿಗೆ ಇರುವದಿಲ್ಲ. ಆದ್ದರಿಂದ ಅವನಿಗೂ ಅವನ ಕುಟುಂಬದವರಿಗೂ ಭಿಕ್ಷೆ ಬೇಡ ಬೇಕಾಗುತ್ತದೆ.

**ಕೂಲಿಕಾರರ ಸದಾಚರಣೆ.**—ಶ್ರಮದಿಂದ ಹೆಚ್ಚು ಫಲವಾಗುವದಕ್ಕೆ ಕೂಲಿಕಾರರ ಸದಾಚರಣೆಯೂ ಒಂದು ಮಹತ್ವವುಳ್ಳ ಕಾರಣವಾಗಿದೆ. ಮಿತಿಮೀರಿ ಸರಾಯಿ ಕುಡಿಯೋಣ, ಅಫೀಮು ತಿನ್ನೋಣ, ಗಾಂಜೀ ಸೇದೋಣ ಮುಂತಾದ ವ್ಯಸನಗಳಿಂದ ಕೂಲಿಕಾರರ ಬಲವು ಬಹಳ ಕುಂದುವದು. ಕುಡಿಕನಾದ ಕೂಲಿಕಾರನು ಎಚ್ಚರದಿಂದಿದ್ದಾಗಲೂ ಅವನಿಂದ ಬಹಳ ಶ್ರಮ ಮಾಡುವದು ಆಗುವದಿಲ್ಲ. ಮತ್ತು ಈ ಬಗೆಯ ದುರಾಚರಣೆಯಿಂದ ಬಹುತರವಾಗಿ, ಕಸಬು

ಗಾರರು ಶಕ್ತಿಹೀನರೂ ಅಲ್ಪಾಯುಷಿಗಳೂ ಆಗುತ್ತಾರೆ. ನಮ್ಮಲ್ಲಿ ಹೆಸರಾದ ಶಿಲ್ಪಿಗರು ಕೆಟ್ಟ ವ್ಯಸನಗಳಿಲ್ಲದೆ ಇರುವದು ಅಪರೂಪ. ಸದಾಚರಣೆಗೂ, ಜ್ಞಾನಕ್ಕೂ ನಿಕಟವಾದ ಸಂಬಂಧವಿರುವದು. ಜ್ಞಾನವಿಲ್ಲದ ಕೂಲಿಕಾರರಿಗೆ ವಿದ್ಯೆಯಿಂದ ಆಗುವ ಆನಂದದ ಅಭಿರುಚಿಯು ಇರುವದಿಲ್ಲಾದ್ದರಿಂದ, ಅಂಥ ಆನಂದಗಳಲ್ಲಿ ಅವರು ಎಷ್ಟು ಮಾತ್ರವೂ ಮನಸು ಹಾಕುವದಿಲ್ಲ. ಆದ್ದರಿಂದ ಅವರಿಗೆ ಜ್ಞಾನದಿಂದುಂಟಾಗುವ ಶುದ್ಧವಾದ ಆನಂದದ ಅನುಭವವು ಎಂದಿಗೂ ಆಗುವದಿಲ್ಲ. ಆ ಕಾರಣ ಜನರೊಳಗೆ ವಿದ್ಯೆಯು ಒಳಿತಾಗಿ ಹಬ್ಬುಗೊಳ್ಳುವದು ಅರ್ಥಶಾಸ್ತ್ರದ ದೃಷ್ಟಿಯಿಂದಲೂ ಬಹಳ ಅವಶ್ಯವಾದದ್ದು. ವಿದ್ಯೆಯಿಂದ ಕೂಲಿಕಾರರ ಬುದ್ಧಿಯು ತೀಕ್ಷ್ಣವಾಗಿ ಅವರ ಶ್ರಮದಿಂದ ಹೆಚ್ಚು ಫಲವಾಗುವದಲ್ಲದೆ, ಅವರ ದುರ್ವ್ಯಸನಗಳು ಕಡಿಮೆಯಾಗಿ ಅವರ ಆಚರಣೆಯೂ ಶುದ್ಧವಾಗುತ್ತದೆ. ಯಾಕಂದರೆ, ವಿದ್ಯೆಯಿಂದ ಅವರಿಗೆ ಹಿತಕರವಾದ ಮತ್ತು ಶುದ್ಧವಾದ ಆನಂದದ ಮಾರ್ಗಗಳೂ, ಮನೋರಂಜನದ ಮಾರ್ಗಗಳೂ ದೊರಿಯುತ್ತದೆ. ಇಂಗ್ಲಂಡ ಮತ್ತು ಸ್ಕಾಟಲಂಡ ದೇಶಗಳಲ್ಲಿ ಸನ್ ೧೮೭೦ನೇ ಇಸವಿಯಲ್ಲಿ ಪ್ರಾಥಮಿಕ ಶಿಕ್ಷಣದ ಕಾಯಿದೆಯನ್ನು ಮಾಡಿದಂದಿನಿಂದ ಈಚೆಗೆ, ಆ ದೇಶಗಳೊಳಗಿನ ಅಪರಾಧಗಳ ಸಂಖ್ಯೆಯೂ, ಭಿಕ್ಷೆ ಬೇಡುವವರ ಸಂಖ್ಯೆಯೂ, ಕುಡಿಕರ ಸಂಖ್ಯೆಯೂ ಕಡಿಮೆಯಾದದ್ದು ಸ್ಪಷ್ಟವಾಗಿ ಕಾಣಿಸುತ್ತದೆ. ಮತ್ತೂ ಈ ಪರಿಣಾಮವು ಬಹುತರವಾಗಿ ವಿದ್ಯಾಪ್ರಸಾರದ ಮೂಲಕವಾಗಿಯೇ ಉಂಟಾಯಿತೆಂದು ಹೇಳಬಹುದು. ಸನ್ ೧೮೭೦ರಿಂದ ೧೮೮೩ರ ವರೆಗೆ ಸುಮಾರು ೧೦೦ಕ್ಕೆ ೨೫ರಂತೆ ಅಪರಾಧಿಗಳ ಮತ್ತು ಭಿಕ್ಷೆಗಾರರ ಸಂಖ್ಯೆಯು ಕಡಿಮೆಯಾಯಿತು. ಮತ್ತೂ ಜನರೊಳಗೆ ಕುಡಿಕತನವು ಕಡಿಮೆಯಾದ್ದರಿಂದ, ಸರಕಾರಕ್ಕೆ ಬರುವ ಸರಾಯಿಗಳ ಮೇಲಿನ ಕಂದಾಯವು ವರ್ಷಕ್ಕೆ ೫೦,೦೦,೦೦೦ ಪೌಂಡುಗಳಂತೆ ಕಡಿಮೆಯಾಯಿತೆಂದು ಸನ್ ೧೮೮೩ನೇ ಇಸವಿಯ ಮಾರ್ಚ ತಿಂಗಳದಲ್ಲಿ ಇಂಗ್ಲಂಡದ ಭಂಡಾರದ ಮುಖ್ಯಸ್ಥನಾದ ಮಂತ್ರಿಯು ಅಂದಾಜು ಮಾಡಿದನು.

**ಕೂಲಿಕಾರರ ಪ್ರಾಮಾಣಿಕತನದ ಬೆಲೆ.**— ವಿಶ್ವಾಸ ಇಡಿ ಕೂಡದ ಕೂಲಿಕಾರರನ್ನು ಕೆಲಸಕ್ಕೆ ಹಚ್ಚಿದಾಗ ಅವರು ತಮ್ಮ ಕೆಲಸವನ್ನು ಸರಿಯಾಗಿ ಮಾಡುವದನ್ನೂ, ಮಾಡದ್ದನ್ನೂ ನೋಡುವದಕ್ಕಾಗಿ ಬೇರೆ ಜನರನ್ನು ಇಡಬೇಕಾಗುತ್ತದೆ. ಆದರೆ ಕೂಲಿಕಾರರು ಪ್ರಾಮಾಣಿಕತನದಿಂದ ಕೆಲಸ ಮಾಡುವವರಾದರೆ, ಅವರನ್ನು ಕಾಯುವವರ ಕೆಲಸ ಕಡಿಮೆಯಾಗುವದು. ಹಾಗೂ, ಇವರನ್ನು ಬೇರೆ ಕೆಲಸಕ್ಕೆ ಹಚ್ಚಬಹುದು. ಕೂಲಿಕಾರರ ಕೆಲಸದ ಮೇಲೆ ದೃಷ್ಟಿ ಇಡುವವ

ರನ್ನು ನೇಮಿಸಿದಾಗ್ಯೂ ಕೂಲಿಕಾರರು ಯಾವಾಗಲೂ ತಮ್ಮ ಕೆಲಸವನ್ನು ಸರಿಯಾಗಿ ಮಾಡುವರೆಂಬ ಭರವಸವಿರುವದಿಲ್ಲ. ಮೇಲ್ವಿಚಾರಕರು ಎಷ್ಟು ಎಚ್ಚರದಿಂದ ಇದ್ದಾಗ್ಯೂ, ಅವರು ಸ್ವಲ್ಪ ಕಣ್ಣು ಮರೆಯಾದ ಕೂಡ್ಲೆ ಕೂಲಿಕಾರರು ಮೈಗಳ್ಳತನ ಮಾಡುವದು ನಿಶ್ಚಯ. ಯಾವದೊಂದು ಉದ್ಯೋಗದಲ್ಲಿ ಬೇರೆ ಬೇರೆ ಕೆಲಸಗಳು ಬಹಳ ದೂರವಾಗಿ ಮಾಡತಕ್ಕವಿದ್ದರಂತೂ ಕೂಲಿಕಾರರನ್ನು ಕಾಯುವದು ವಿಶೇಷ ಕಷ್ಟವಾಗುತ್ತದೆ. ಇಂಗ್ಲಂಡದಲ್ಲಿ ಬಹಳ ದೊಡ್ಡ ಹೊಲಗಳನ್ನು ಮಾಡುವ ಪದ್ಧತಿ ಇರುವದರಿಂದ, ಅಲ್ಲಿ ಈ ತೊಂದರೆಯು ಒಕ್ಕಲತನದಲ್ಲಿ ವಿಶೇಷವಾಗಿರುವದು.

ಉತ್ಪಾದಕ ಮತ್ತು ಅನುತ್ಪಾದಕ ಶ್ರಮಗಳ ವಿಷಯವನ್ನು ಮುಗಿಸುವ ಪೂರ್ವದಲ್ಲಿ ಶ್ರಮದ ಉತ್ಪಾದಕತ್ವವನ್ನು ವರ್ಧಿಸುವ ಕಾರಣಗಳನ್ನು ಮತ್ತೊಮ್ಮೆ ಹೇಳುವದು ಸರಿಯಾಗಿದೆ. ಈ ಕಾರಣಗಳಲ್ಲಿ ಎರಡು ಭೇದಗಳು:

| ವಸ್ತುಗತ ಕಾರಣಗಳು. | ಮಾನಸಿಕ ಕಾರಣಗಳು: | |
|---|---|---|
| ೧. ಶ್ರಮವಿಭಾಗ. | ಕೂಲಿಕಾರನ | ೧. ಕೌಶಲ್ಯ. |
| ೨. ಶ್ರಮಸಂಯೋಗ. | | ೨. ಬುದ್ಧಿ. |
| ೩. ಆಯುಧಗಳನ್ನು ಮತ್ತು ಯಂತ್ರಗಳನ್ನು ಉಪಯೋಗಿಸೋಣ. | | ೩. ಸದಾಚರಣೆ. |
| | | ೪. ಪ್ರಾಮಾಣಿಕತನ. |

ಉತ್ಪಾದಕ ಮತ್ತು ಅನುತ್ಪಾದಕ ಶ್ರಮಗಳ ವಿವರವನ್ನು ಹೇಳುವದು ಇಲ್ಲಿಗೆ ಮುಗಿಯಿತು. ಆದರೆ ಮುಂದೆ ಬಂಡವಲದ ಕಾರ್ಯಗಳನ್ನು ವ್ಯಕ್ತ ಪಡಿಸುವ ಪೂರ್ವದಲ್ಲಿ ವಿದ್ಯಾರ್ಥಿಗಳಿಗೆ ಉತ್ಪಾದಕ ವ್ಯಯ, ಮತ್ತು ಅನುತ್ಪಾದಕ ವ್ಯಯ ಇವುಗಳ ಅರ್ಥವು ಚನ್ನಾಗಿ ತಿಳಿಯುವದು ಅವಶ್ಯವಾಗಿದೆ.

**ಉತ್ಪಾದಕ ಮತ್ತು ಅನುತ್ಪಾದಕ ವ್ಯಯ.**—ಶ್ರಮದಲ್ಲಿ ಉತ್ಪಾದಕ ಶ್ರಮವೆಂತಲೂ, ಅನುತ್ಪಾದಕ ಶ್ರಮವೆಂತಲೂ ಭೇದವಿದ್ದಂತೆ ಸಂಪತ್ತನ್ನು ವ್ಯಯ ಮಾಡುವಲ್ಲಿಯೂ ಉತ್ಪಾದಕ ವ್ಯಯವೆಂತಲೂ, ಅನುತ್ಪಾದಕ ವ್ಯಯವೆಂತಲೂ ಭೇದವುಂಟು. ಹುಟ್ಟಿದ ಎಲ್ಲ ಸಂಪತ್ತೂ ನಾಶವಾಗತಕ್ಕದ್ದೇ ಸರಿ. ಆದರೆ ಹೊಸ ಸಂಪತ್ತನ್ನು ಹುಟ್ಟಿಸುವ ಕೆಲಸದಲ್ಲಿ ನಾಶ ಹೊಂದಿದ ಸಂಪತ್ತಿನ ವ್ಯಯವು ಉತ್ಪಾದಕ ವ್ಯಯವೆನಿಸುವದು. ಮತ್ತು ಹೊಸ ಸಂಪತ್ತನ್ನು ಹುಟ್ಟಿಸದ ಕೆಲಸದಲ್ಲಿ ನಾಶ ಹೊಂದಿದ ಸಂಪತ್ತಿನ ವ್ಯಯವು ಅನುತ್ಪಾದಕ ವ್ಯಯವೆನಿಸುವದು.

ಆದ್ದರಿಂದ, ಉತ್ಪಾದಕ ಶ್ರಮ ಮಾಡುವವರು ವ್ಯಯ ಮಾಡಿದ ಸಂಪತ್ತಿನ ವ್ಯಯವು ಉತ್ಪಾದಕ ವ್ಯಯವಾಗಿದೆ, ಮತ್ತು ಅನುತ್ಪಾದಕ ಶ್ರಮ ಮಾಡುವವರು ಮಾಡುವ ವ್ಯಯವು ಅನುತ್ಪಾದಕ ವ್ಯಯವಾಗಿದೆ, ಎಂಬದು ಲಕ್ಷ್ಯದಲ್ಲಿ ಸಹಜವಾಗಿ ಬರುವದು. ಆದರೆ ಉತ್ಪಾದಕ ಶ್ರಮ ಮಾಡುವವರು ಮಾಡಿದ ಯಾವತ್ತೂ ವ್ಯಯವು ಉತ್ಪಾದಕ ವ್ಯಯವಲ್ಲ; ಅವರು ಹೊಸ ಸಂಪತ್ತನ್ನು ಹುಟ್ಟಿಸುವ ಕೆಲಸದಲ್ಲಿ ತೊಡಗಿದಾಗ್ಯೆ, ಅವರ ಚರಿತಾರ್ಥಕ್ಕೆ ಸಲ್ಲುವ ಸಂಪತ್ತಿನ ವ್ಯಯವು ಮಾತ್ರ ಉತ್ಪಾದಕ ವ್ಯಯವಾಗಿದೆ. ಹೊಸ ಸಂಪತ್ತನ್ನು ಹುಟ್ಟಿಸುವ ಕೂಲಿಕಾರನು ಕೂಡ ತನ್ನ ಆರೋಗ್ಯವನ್ನಾಗಲಿ, ಬಲವನ್ನಾಗಲಿ, ಹೆಚ್ಚಿಸದಂಥ ಸುಖೋಪಭೋಗದ ಮತ್ತು ಆರಾಮಿನ ಒಡವೆಗಳಲ್ಲಿ ವೆಚ್ಚ ಮಾಡಿದ ಸಂಪತ್ತು ಅನುತ್ಪಾದಕವಾಗಿ ವ್ಯಯವಾದದ್ದೇ ಸರಿ. ಯಾಕಂದರೆ, ಈ ವ್ಯಯದಿಂದ ಹೊಸ ಸಂಪತ್ತು ಹುಟ್ಟುವದಕ್ಕೆ ಸಹಾಯವಾಗುವದಿಲ್ಲ. ಹೊಸ ಸಂಪತ್ತನ್ನು ಹುಟ್ಟಿಸದಂಥ ಶ್ರಮ ಮಾಡುವ ಹಾಡುವವರೂ, ಆಟಗಳನ್ನು ಆಡುವವರೂ, ಸುಮ್ಮನೆ ಕೂತು ತಿನ್ನುವವರೂ, ದುಂದುತನದಿಂದ ಕಾಲ ಕಳಿಯುವ ಶ್ರೀಮಂತರೂ ಮಾಡಿದ ಯಾವತ್ತೂ ವ್ಯಯವು ಅನುತ್ಪಾದಕ ವ್ಯಯವಾಗಿದೆ. ಯಾಕಂದರೆ, ಈ ವ್ಯಯದಿಂದ ಹೊಸ ಸಂಪತ್ತಿನ ಉತ್ಪತ್ತಿಗೆ ಏನು ಸಹಾಯವಾಗುವದಿಲ್ಲ. ತಾತ್ಪರ್ಯವೇನಂದರೆ, ಹೊಸ ಸಂಪತ್ತನ್ನು ಹುಟ್ಟಿಸುವದಕ್ಕೆ ಅವಶ್ಯವಾದ ಸಂಪತ್ತಿನ ವ್ಯಯವು ಮಾತ್ರ ಉತ್ಪಾದಕ ವ್ಯಯವಾಗಿದೆ. ಉಳಿದ ಯಾವತ್ತೂ ವ್ಯಯವು ಅನುತ್ಪಾದಕ ವ್ಯಯವೇ ಸರಿ. ಆದರೆ, ಕೆಲವು ಒಡವೆಗಳನ್ನು ಉತ್ಪಾದಕವಾಗುವಂತೆ ವ್ಯಯ ಮಾಡುವದು ಯಾರಿಂದಲೂ ಆಗುವದಿಲ್ಲ. ಇವುಗಳು ಅನುತ್ಪಾದಕವಾಗಿಯೇ ವ್ಯಯವಾಗತಕ್ಕವು. ಜರತಾರೀ ಪೈಠಣಿ, ತಂಬಾಕ, ಅಫೀಮು, ಪರಿಮಳಗಳು ಮುಂತಾದ ವಿಲಾಸದ ಒಡವೆಗಳೆಲ್ಲ ಈ ವರ್ಗದವು. ಯಾಕಂದರೆ ಈ ಪದಾರ್ಥಗಳ ವೆಚ್ಚದಿಂದ ಕೆಲಸಗಾರರ ಆರೋಗ್ಯತೆ, ಶ್ರಮ ಮಾಡುವ ಸಾಮರ್ಥ್ಯ ಮೊದಲಾದವುಗಳಿಗೆ ಏನೊಂದು ಸಹಾಯವಾಗುವದಿಲ್ಲ. ಸುಮ್ಮನೆ ಹಾಳು ಮಾಡಿದ ಯಾವತ್ತೂ ಸಂಪತ್ತಿನ ನಾಶವೂ ಅನುತ್ಪಾದಕ ವ್ಯಯವಾಗಿದೆ. ಇಂಥ ನಾಶದಿಂದ ಕೆಲವು ಜನರಿಗೆ ಉದ್ಯೋಗಗಳು ದೊರಿಯುವದರಿಂದ, ಇಂಥ ನಾಶವೂ ಒಳ್ಳೇದೆಂದು ಕೆಲವರು ತಿಳಿಯುವರು. ಆದರೆ ಇಂಥ ನಾಶದಿಂದ ಸಮಾಜಕ್ಕೆ ಏನು ಹಿತವಾಗದೆ ಬಹಳ ಹಾನಿಯಾಗುತ್ತದೆ. ಉಪಯೋಗದ ಕೆಲಸಕ್ಕೇ ಆಗಲಿ, ಉಪಯೋಗವಿಲ್ಲದ ಕೆಲಸಕ್ಕೇ ಆಗಲಿ, ಹ್ಯಾಗಾದರೂ ವೆಚ್ಚ ಮಾಡಿದ ಸಂಪತ್ತಿನಿಂದ

ಹೊಸ ಸಂಪತ್ತು ಹುಟ್ಟಿದ್ದಾದರೆ, ಯಾವತ್ತು ಜನಾಂಗದವರಿಗೆ ಶೀಘ್ರವಾಗಿ ಬಹಳ ಸಂಪತ್ತುಳ್ಳವರಾಗುವದಕ್ಕೆ ಒಂದು ಅತಿ ಸುಲಭ ಉಪಾಯವು ದೊರೆದ ಹಾಗಾಗುವದು. ಅದು ಯಾವದಂದರೆ, ಅವರು ದೇಶದೊಳಗಿನ ಯಾವತ್ತು ಮನೆಗಳನ್ನೂ, ಕಾರಖಾನೆಗಳನ್ನೂ, ದೊಡ್ಡ ಸಾರ್ವಜನಿಕ ಇಮಾರತುಗಳನ್ನೂ ಸುಟ್ಟು ನೆಲಸಮಾನ ಮಾಡ ಬೇಕು! ಹೊಗೆಬಂಡಿಯ ಮಾರ್ಗಗಳನ್ನೂ, ಹಡಗಗಳನ್ನು ಮಾಡುವ ಕಾರಖಾನೆಗಳನ್ನೂ ಹಾಳು ಮಾಡ ಬೇಕು! ತಂತಿಟಪಾಲಿನ ತಂತಿಗಳನ್ನು ನೆಲಕ್ಕೆ ಎಳಿದು ಬಿಡಬೇಕು! ಈ ಕೃತ್ಯಗಳಿಂದ ಮನೆಗಳನ್ನು ಕಟ್ಟುವವರಿಗೂ, ಹೊಸ ಮಾರ್ಗಗಳನ್ನು ಮಾಡುವವರಿಗೂ ವಿಪುಲ ಕೆಲಸ ದೊರಿದು, ಅವರ ಉದ್ಯೋಗಕ್ಕೆ ತೇಜ ಬರುವದು! ಆದರೆ, ಇದರಿಂದ ಇವರಿಗೆ ಲಾಭವಾದರೂ ಇಡೀ ದೇಶಕ್ಕೆ ಹಾನಿಯಾಗುವದು. ಅಮೇರಿಕೆಯೊಳಗಿನ "ಶಿಕ್ಯಾಗೊ" ಪಟ್ಟದಲ್ಲಿ ಬೆಂಕಿಯಿಂದ ಸಾವಿರಾರು ಮನೆಗಳು ಸುಟ್ಟಾಗ್ಯೆ ಒಬ್ಬ ತಿಳಿಗೇಡಿಯಾದ ವರ್ತಮಾನಪತ್ರಕರ್ತನು, ಆ ಅನರ್ಥವು ಮನೆಗಳನ್ನು ಕಟ್ಟುವ ಉದ್ಯೋಗ ಮಾಡುವವರಿಗೆ ಉತ್ಕೃಷ್ಟವಾದ ಸಂಗತಿಯಾಯಿತೆಂಬ ಅರ್ಥದ ಲೇಖವನ್ನು ಬರೆದಿದ್ದನು. ಆದರೆ ಮನೆಗಳನ್ನು ಕಟ್ಟುವವರಿಗೆ ದೊರಿಯುವ ಲಾಭಕ್ಕಿಂತಲೂ, ಮನೆಗಳನ್ನು ಕಳಕೊಂಡವರ ಹಾನಿ ಎಷ್ಟೋ ಪಾಲು ಹೆಚ್ಚಾಗಿತ್ತೆಂಬದು ಈ ಪತ್ರಕರ್ತನ ಧ್ಯಾನದಲ್ಲಿ ಬಂದಂತೆ ತೋರಲಿಲ್ಲ. ಸಂಪತ್ತನ್ನು ಹಾಳು ಮಾಡುವದರಿಂದಲೂ, ದುಂದುತನದಿಂದ ಕಳೆಯುವದರಿಂದಲೂ ವ್ಯಾಪಾರಕ್ಕೆ ಎಷ್ಟು ಮಾತ್ರವೂ ಉತ್ತೇಜನ ಬರುವದಿಲ್ಲ. ಈ ವಿಷಯವನ್ನು ಕುರಿತು, ಎಮ್. ಎಫ್. ಬ್ಯಾಸ್ಟಿಯಟ್‌ನೆಂಬ ಫ್ರೆಂಚ ಅರ್ಥಶಾಸ್ತ್ರಜ್ಞನೊಬ್ಬನು ಒಂದು ಬಹು ಮನೋಹರವಾದ ದೃಷ್ಟಾಂತವನ್ನು ಕೊಟ್ಟಿದ್ದಾನೆ. ಅದರ ಸಾರಾಂಶವೇನಂದರೆ—ಒಂದಾನೊಂದು ದಿವಸ ಒಬ್ಬ ಅಂಗಡಿಕಾರನು ಅಂಗಡಿಯಲ್ಲಿ ಕುಳಿತಿರುವಾಗ ಅವನ ಮಗನು ಎಚ್ಚರವಿಲ್ಲದೆ ಒಂದು ಕಿಟಕಿಯ ಕನ್ನಡಿಯನ್ನು ಒಡೆದನು. ಇದನ್ನು ನೋಡಿ ಅಂಗಡಿಕಾರನು ತನ್ನ ಮಗನಿಗೆ ಶಿಟ್ಟು ಮಾಡ ಹತ್ತಿದ ಕೂಡ್ಲೆ ಸುತ್ತಲೆ ನೆರೆದಿದ್ದವರಲ್ಲೊಬ್ಬನು ಅವನಿಗೆ ಸಮಾಧಾನದ ಮಾತು ಹೇಳಿದ್ದೇನಂದರೆ, "ಏನಪ್ಪಾ, ನಿನ್ನ ಕಿಟಕಿಯ ಕನ್ನಡಿ ಒಡೆದು ನಿನಗೆ ಲುಕಸಾನವಾದದ್ದಂತೂ ಸರಿ. ಆದರೂ ಕಿಟಕಿಗಳ ಕನ್ನಡಿಗಳು ಎಂದೂ ಒಡೆಯದಿದ್ದರೆ, ಕನ್ನಡಿಗಳನ್ನು ಹಚ್ಚುವವನ ಹೊಟ್ಟೆ ಹ್ಯಾಗೆ ತುಂಬೀತು? ಹೇಳು." ಬಹುತರವಾಗಿ, ಯಾರೊಬ್ಬರ ಲುಕಸಾನುವಾದಾಗ ಜನರು ಇಂಥ ಸಮಾಧಾನ ಹೇಳುವದುಂಟು. ಆದರೆ ಇಂಥ ಸಮಾಧಾನದ ಮಾತುಗಳಲ್ಲಿ ಒಂದು ದೊಡ್ಡ ಸುಳ್ಳು ಸಿದ್ಧಾಂತವು ಗರ್ಭಿತವಾಗಿರುವದು. ಅದೇನಂ

ದರೆ, ಅಂಗಡಿಕಾರನದೊಂದು ಕನ್ನಡಿ ಒಡೆಯುವದರಿಂದ, ಅವನು ನಾಲ್ಕಾರು ಆಣೆ ಕೊಟ್ಟು ಕಿಟಕಿಗೆ ಹೊಸ ಕನ್ನಡಿಯನ್ನು ಹಚ್ಚಿಸುವನಾದ್ದರಿಂದ, ಕನ್ನಡಿ ಹಚ್ಚುವವನ ಉದ್ಯೋಗಕ್ಕೆ ಅಷ್ಟರ ಮಟ್ಟಿಗೆ ಉತ್ತೇಜನ ದೊರಿಯುವದು. ಅಂದರೆ ಕಿಟಕಿಗಳ ಕನ್ನಡಿಗಳನ್ನು ಒಡೆಯುವದರಿಂದ ಜನರೊಳಗೆ ವಿಶೇಷ ವ್ಯವಹಾರ ನಡೆದು, ಸಾಮಾನ್ಯವಾಗಿ ಎಲ್ಲ ಉದ್ಯೋಗಗಳಿಗೆ ಉತ್ತೇಜನವಾಗುವ ಕಾರಣ, ಕಿಟಕಿಗಳನ್ನು ಒಡೆಯುವದು ಹಿತಕರವಾದದ್ದೆಂಬ ಅರ್ಥವು. ಈ ಸಿದ್ಧಾಂತದಲ್ಲಿದ್ದ ದೋಷವೇನಂದರೆ, ಇದರಲ್ಲಿ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸುವ ಪರಿಣಾಮವಷ್ಟೇ ವಿಚಾರಿಸಲ್ಪಟ್ಟಿತೇ ಹೊರ್ತು, ಹಿಂದೆ ಆಗುವ ಪರಿಣಾಮವು ವಿಚಾರಿಸಲ್ಪಡಲಿಲ್ಲ. ಹ್ಯಾಗಂದರೆ ಹುಡುಗನು ಕನ್ನಡಿ ಒಡೆದದ್ದರಿಂದ ಕನ್ನಡಿ ಹಚ್ಚುವವನಿಗೆ ನಾಲ್ಕಾರು ಆಣೆ ದೊರೆದದ್ದು ಸ್ಪಷ್ಟವಾಗಿ ಕಾಣಿಸುವದು. ಆದರೆ ಆ ಅಂಗಡಿಕಾರನು ಆ ಹಣವನ್ನು ಒಂದು ಕೆಲಸದಲ್ಲಿ ವೆಚ್ಚ ಮಾಡಿದ ಮೇಲೆ, ಅದನ್ನೇ ಮತ್ತೊಂದು ಕೆಲಸಕ್ಕೆ ವೆಚ್ಚ ಮಾಡುವದಕ್ಕೆ ಬರುವದಿಲ್ಲ; ಅವನಿಗೆ ಹೊಸ ಕನ್ನಡಿ ಕೂಡ್ರಿಸುವ ಖರ್ಚು ಬೀಳದಿದ್ದರೆ ಆ ಹಣ ಕೊಟ್ಟು ಅವನು ಒಂದು ಅಂಗಿಯನ್ನು ಹೊಲಿಸುತ್ತಿದ್ದನು, ಇಲ್ಲವೆ ಉಪಯುಕ್ತವಾದ ಒಂದು ಪುಸ್ತಕವನ್ನಾದರೂ ಕೊಳ್ಳುತ್ತಿದ್ದನು, ಇಲ್ಲವೆ ಬೇರೆ ಹ್ಯಾಗಾದರೂ ಆ ಹಣವನ್ನು ಉಪಯೋಗಿಸುತ್ತಿದ್ದನು; ಈ ಮಾತು ಮೇಲಿನ ಬಗೆಯ ಸಮಾಧಾನ ಹೇಳುವವರಿಗೆ ಗೋಚರವಾಗದೆ ಇದ್ದದ್ದು. ಇನ್ನು, ಈ ಸಂಗತಿಯಿಂದ ಯಾವತ್ತೂ ಉದ್ಯೋಗಗಳ ಮೇಲೆ ಉಂಟಾಗುವ ಪರಿಣಾಮವನ್ನು ವಿಚಾರಿಸುವ. ಕಿಟಕಿಯು ಒಡೆದದ್ದರಿಂದ ಕನ್ನಡಿ ಹಚ್ಚುವವನ ಉದ್ಯೋಗಕ್ಕೆ ನಾಲ್ಕಾರು ಆಣೆಗಳ ಉತ್ತೇಜನವಾಯಿತು. ಈ ಮಾತು ಕಣ್ಣಿಗೆ ಸ್ಪಷ್ಟವಾಗಿ ಕಂಡದ್ದು. ಆದರೆ ಇದಕ್ಕೆ ವಿಪರೀತವಾಗಿ, ಕಿಟಕಿಯು ಒಡೆಯದೆ ಇದ್ದರೂ ಚಿಂಪಿಗನ ಉದ್ಯೋಗಕ್ಕಾಗಲಿ, ಬೇರೆ ಯಾವ ಉದ್ಯೋಗಕ್ಕಾಗಲಿ ನಾಲ್ಕಾರು ಆಣೆಗಳಷ್ಟು ಉತ್ತೇಜನ ಆಗೇ ಆಗುತ್ತಿತ್ತು. ಈ ಮಾತು ಲಕ್ಷಿಸಲ್ಪಡುವದಿಲ್ಲ.

ಈ ಪ್ರಕಾರ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸುವ ಸಂಗತಿಯನ್ನೂ, ಸ್ವಲ್ಪ ವಿಚಾರದಿಂದ ತಿಳಿಯುವ ಸಂಗತಿಯನ್ನೂ ಸರಿಯಾಗಿ ಲಕ್ಷ್ಯಕ್ಕೆ ತಂದರೆ, ತಿಳಿಯುವದೇನಂದರೆ, ಕಿಟಕಿಗಳು ಒಡೆಯಲಿ, ಅಥವಾ ಒಡೆಯದೆ ಇರಲಿ, ಜನರ ಉದ್ಯೋಗಗಳಲ್ಲಾಗಲಿ, ಕೂಲಿಕಾರರಿಗೆ ಕೆಲಸ ದೊರಿಯುವದರಲ್ಲಾಗಲಿ ಏನೂ ಹೆಚ್ಚು ಕಡಿಮೆಯಾಗುವದಿಲ್ಲ.

ಇನ್ನು, ಇವೆರಡೂ ಸಂಗತಿಗಳಿಂದ ಮೇಲೆ ಹೇಳಿದ ಅಂಗಡಿಕಾರನಿಗೆ ಆಗುವ ಒಳಿತು ಹೀನಗಳನ್ನು ವಿಚಾರಿಸುವ. ಅವನ ಕಿಟಕಿಯು ಒಡೆದರೆ, ನಾಲ್ಕಾರು ಆಣೆ ವೆಚ್ಚ ಮಾಡಿ ಅದನ್ನು ನೆಟ್ಟಗೆ ಮಾಡಿಸುವನು. ಈ ವೆಚ್ಚದಿಂದ ಅವನಿಗೆ ಮೊದಲಿನಂತೆ ಕಿಟಕಿಯ ಉಪಭೋಗವು ಮಾತ್ರ ದೊರೆಯ ಹತ್ತಿತು; ಹೆಚ್ಚಿನದೇನು ದೊರೆಯಲಿಲ್ಲ. ಅದೇ, ಅವನ ಕಿಟಕಿಯು ಒಡೆಯದೆ ಇದ್ದರೆ, ಅವನಿಗೆ ಮೊದಲಿನಂತೆಯೇ ಕಿಟಕಿಯ ಉಪಯೋಗವಾಗುವದಲ್ಲದೆ, ಅದರ ಹೊರ್ತು ಒಂದು ಅಂಗಿ, ಇಲ್ಲವೆ ಪುಸ್ತಕ, ಇಲ್ಲವೆ ಬೇರೆ ಯಾವದಾದರೂ ಒಡವೆಯ ಉಪಭೋಗವು ದೊರಿಯುತ್ತಿತ್ತು.

ಈ ಅಂಗಡಿಕಾರನು ಇಡೀ ಜನಸಮೂಹದ ಒಂದು ಭಾಗವಾಗಿರುವನು. ಆ ಕಾರಣ, ಇಂಥ ಬೇರೆ ಬೇರೆ ಭಾಗಗಳನ್ನು ಒಟ್ಟುಗೂಡಿಸಿ ಜನಸಮೂಹದ ಸೌಖ್ಯಗಳನ್ನೂ, ಉದ್ಯೋಗಾಭಿವೃದ್ಧಿಯನ್ನೂ ಕುರಿತು ವಿಚಾರಿಸಲಾಗಿ ಸಿದ್ಧವಾಗುವದೇನಂದರೆ, ಕಿಟಕಿಯು ಒಡೆಯುವದರಿಂದ ಇಡೀ ಜನಸಮೂಹಕ್ಕೆ ಆ ಕಿಟಕಿಯ ಬೆಲೆಯಷ್ಟು ನಷ್ಟವಾಗುವದು.

ಸಂಪತ್ತನ್ನು ನಾಶ ಮಾಡುವದೂ, ದುಂದುತನದಿಂದ ಹಾಳು ಮಾಡುವದೂ, ಉದ್ಯೋಗವೃದ್ಧಿಗೆ ಒಳ್ಳೇದೆಂದು ಹೇಳಿ, ಅದರ ದೋಷವನ್ನು ಮುಚ್ಚಲೆತ್ನಿಸುವವರ ಮೂರ್ಖತನವು ಈ ದೃಷ್ಟಾಂತದಿಂದ ವ್ಯಕ್ತವಾಗುತ್ತದೆ.

ದುಂದುಗಾರರ ಅಳತೆಗೆಟ್ಟ ವೆಚ್ಚದಿಂದ ಸಮಾಜಕ್ಕೆ ಏನೂ ಪ್ರಯೋಜನ ಉಂಟಾಗುವದಿಲ್ಲವೆಂಬದನ್ನು ತೋರಿಸುವದಕ್ಕೆ, ಅರ್ಥಶಾಸ್ತ್ರದ ಮೂಲತತ್ವಗಳೊಳಗಿನ ಒಂದು ಮೂಲತತ್ವವು ತಿಳಿದರೆ ಸಾಕು. ಈ ವಿಷಯದ ವಿವೇಚನವನ್ನು ಇದಕ್ಕೂ ಹೆಚ್ಚು ಮಾಡ ಬೇಕಾದರೆ, ಬಂಡವಲದ ಕಾರ್ಯಗಳನ್ನು ವಿವರಿಸ ಬೇಕಾಗುವದು. ಆ ಕಾರಣ, ಇಲ್ಲಿ ಅರ್ಥಶಾಸ್ತ್ರದ ಮತ್ತೊಂದು ಶಾಖೆಯ ಉಪಕ್ರಮವಾಗುತ್ತದೆ. ಈ ಶಾಖೆಯ ವಿವರವು ಮುಂದಿನ ಅಧ್ಯಾಯದಲ್ಲಿ ಬರುವದು.

### ಎರಡನೆ ಅಧ್ಯಾಯದ ಮೇಲಿನ ಪ್ರಶ್ನಗಳು.

೧. ಸಂಪದುತ್ಪಾದನಕ್ಕೆ ಶ್ರಮವು ಅತ್ಯವಶ್ಯಕವಿದ್ದೆಂಬದನ್ನು ಸಿದ್ಧ ಮಾಡಿರಿ.

೨. ಭಕ್ಕರಿಯೆಂಬದೊಂದು ಸರಕನ್ನು ಹುಟ್ಟಿಸುವದಕ್ಕೆ ಬೇಕಾಗುವ ನಾನಾತರದ ಶ್ರಮಗಳನ್ನು ವಿವರಿಸಿರಿ.

೩. ಸಂಪದುತ್ಪಾದನದಲ್ಲಿ ಶ್ರಮದಿಂದ ಆಗುವ ನಿಜವಾದ ಕಾರ್ಯದ ವ್ಯಾಖ್ಯೆಯನ್ನು ಹೇಳಿರಿ.

೪. ಉತ್ಪಾದಕ ಶ್ರಮವೆಂದರೇನು?

೫. ಅನುತ್ಪಾದಕ ಶ್ರಮವು ಅನೇಕ ಬಾರಿ ಪರಂಪರೆಯಿಂದ ಉತ್ಪಾದಕವಾಗಿರುವದೆಂಬದನ್ನು ತೋರಿಸಿರಿ.

೬. ಶ್ರಮವಿಭಾಗದಿಂದ ಶ್ರಮದ ಉತ್ಪಾದಕತ್ವವು ಹೆಚ್ಚುವದು ಹ್ಯಾಗೆ? ಅಡಾಮ್‌ಸ್ಮಿಥ್‌ನು ವಿವರಿಸಿದ ಶ್ರಮವಿಭಾಗದ ಮೂರು ಲಾಭಗಳನ್ನು ವಿವರಿಸಿರಿ.

೭. ಬಾಬೇಜ್ ಧೊರೆಯು ತೋರಿಸಿದ ನಾಲ್ಕನೇ ಲಾಭವು ಯಾವದು?

೮. ಶ್ರಮವಿಭಾಗದ ಉಪಯುಕ್ತತೆಯಲ್ಲಿ ದೋಷವೇನಾದರೂ ಉಂಟೋ?

೯. ನಿರಾತಂಕವ್ಯಾಪಾರವು ಶ್ರಮವಿಭಾಗವೆಂಬದನ್ನು ಸಿದ್ಧ ಮಾಡಿರಿ.

೧೦. ಶ್ರಮಸಂಯೋಗವೆಂದರೇನು?

೧೧. ಸಾಕ್ಷಾತ್ ಶ್ರಮಸಂಯೋಗ ಮತ್ತು ಫಲದ್ವಾರಕ ಶ್ರಮಸಂಯೋಗ ಇವುಗಳ ವ್ಯಾಖ್ಯೆಗಳನ್ನು ಹೇಳಿರಿ.

೧೨. ವೇಕಫೀಲ್ಡ್ ಧೊರೆಯ, ವಸಾಹತುಗಳಿಗೆ ಸಂಬಂಧಿಸಿದ ಸಿದ್ಧಾಂತವು ಯಾವದು?

೧೩. ಯಂತ್ರಗಳಿಂದ ಶ್ರಮವು ಹೆಚ್ಚು ಫಲದ್ರೂಪವಾಗುವ ಬಗೆ ಹ್ಯಾಗೆ?

೧೪. ಶ್ರಮದ ಉತ್ಪಾದಕತೆಯನ್ನು ಹೆಚ್ಚಿಸುವ ಮಾನಸಿಕ ಕಾರಣಗಳ್ಯಾವವು?

೧೫. ಉತ್ಪಾದಕ ಮತ್ತು ಅನುತ್ಪಾದಕ ವ್ಯಯವೆಂದರೇನು?

---

೧. ಮುಳುಗುವ ಗಂಟೆಯೊಳಗಿನ ಹವೆಯು ಸಂಪತ್ತಾಗಿರುವದೋ? ಸಂಪತ್ತಾದದ್ದಾದರೆ, ಯಾಕೆ?

೨. ಒಬ್ಬ ವಿದ್ಯಾರ್ಥಿಯು, ಗುರುಗಳು ಕೊಟ್ಟ ಶಿಕ್ಷೆಯಂತೆ ತನ್ನ ಓದುವ ಪುಸ್ತಕದ ಪ್ರತಿಯನ್ನು ಬರೆದರೆ, ಅವನ ಶ್ರಮವು ಉತ್ಪಾದಕ ಶ್ರಮವಾಯಿತೋ, ಅನುತ್ಪಾದಕ ಶ್ರಮವಾಯಿತೋ?

೩. ಮನುಷ್ಯನ ಶರೀರದ ಬೇರೆ ಬೇರೆ ಭಾಗಗಳಲ್ಲಿ ಶ್ರಮವಿಭಾಗವು ಯಾವ ಬಗೆಯಾಗಿರುವದು?

೪. ಆಟಗಳಲ್ಲಿ ಶ್ರಮವಿಭಾಗ ಮತ್ತು ಶ್ರಮಸಂಯೋಗ ಇವುಗಳಿಂದ ಆಗುವ ಲಾಭಗಳು ಯಾವವು?

೫. ಈಗ್ಯೆ ಸರ್ವತ್ರ ವ್ಯಾಪಿಸಿದಂಥ ಶ್ರಮವಿಭಾಗದ ಪರಿಣಾಮವು ಅತ್ಯುನ್ನತವಾದ ಕಲೆಗಳಲ್ಲಿ ಹ್ಯಾಗೆ ಆಗಿರುವದು? ಉದಾಹರಣಾರ್ಥವಾಗಿ, ರುದ್ರವೀಣೆಯನ್ನು ಅತ್ಯುತ್ಕೃಷ್ಟವಾಗಿ ಬಾರಿಸುವವನ ಕೌಶಲ್ಯದ ಮೇಲೆ ಶ್ರಮವಿಭಾಗದಿಂದ ಏನು ಪರಿಣಾಮವಾಗಿರ ಬಹುದು?

೬. ಫಣಿಚಂಡಿನ ಆಟದಲ್ಲಿ ಯಾವ ಬಗೆಯ ಶ್ರಮಸಂಯೋಗವಿರುವದು?

೭. ಫಣಿಚಂಡಿನ ಆಟದಲ್ಲಿ ಆಡುವವರ ಶ್ರಮವು ಹೊರತಾಗಿ ಬೇರೆಯವರ ಶ್ರಮಸಂಯೋಗವು ಬೇಕೋ?

೮. ತಂಬಾಕ ಸೇದೋಣವು ಸಂಪತ್ತಿನ ಉತ್ಪಾದಕ ವ್ಯಯವೋ ಅನುತ್ಪಾದಕ ವ್ಯಯವೋ?

೯. ಈ ಪಟ್ಟಣದೊಳಗಿನ ಯಾವತ್ತು ಮನೆಗಳು ಭೂಕಂಪದಿಂದ ಬಿದ್ದು ಹೋದರೆ, ವ್ಯಾಪಾರಕ್ಕೆ ಒಳಿತು ಆಗುವದೋ?

೧೦. ಮದ್ದಿನಿಂದ ಪಾರ್ಲಮೆಂಟ ಸಭೆಯನ್ನೆಲ್ಲ ಹಾರಿಸಿ ಬಿಟ್ಟರೆ ವ್ಯಾಪಾರಕ್ಕೆ ಒಳಿತಲ್ಲವೋ?

೧೧. ಒಬ್ಬ ತೋಟಗಾರನು ತನ್ನ ಯಜಮಾನನ ಒಂದು ಬಾಟ್ಲೆ ಸರಾಯಿಯನ್ನು ಕುಡಿದು ಬಿಟ್ಟನು. ಈ ಕೃತ್ಯದಿಂದ ಅರ್ಥಶಾಸ್ತ್ರದೃಷ್ಟ್ಯಾ ಆಗುವ ಪರಿಣಾಮವೇನು?

೧೨. ಜನರು ಸಾಯುವದನ್ನು ಬಿಟ್ಟರೆ ಹೆಣ ಹೊರುವ ಉದ್ಯೋಗ ಮಾಡುವವರ ಗತಿ ಏನು? ಜನರು ಬೇನೆ ಬೀಳುವದನ್ನು ವರ್ಜಿಸಿದರೆ, ವೈದ್ಯರ ಅವಸ್ಥೆ ಏನು?

# ೩ನೇ ಅಧ್ಯಾಯ.

## ಬಂಡವಲದ ವಿಷಯದಲ್ಲಿ.

**ಬಂಡವಲ ಮತ್ತು ಹಣ ಇವು ಒಂದೇ ಅರ್ಥವುಳ್ಳ ಶಬ್ದಗಳೆಂದು ತಿಳಿಯುವದು ತಪ್ಪು.**—ಜನರು ಬಂಡವಲದ ವಿಷಯದಲ್ಲಿ ಮಾತಾಡುವಾಗ ಕೆಲವು ಸಾರಿ, ಹಣವೇ ಬಂಡವಲವಾಗಿದ್ದಂತೆ ಮಾತಾಡುವರು. ಹಾಗಾದರೆ, ಬಂಡವಲವು ಸಂಪತ್ತನ್ನು ಹುಟ್ಟಿಸುವದಕ್ಕೆ ಅವಶ್ಯವಾದ ಮೂರು ಸಾಧನಗಳಲ್ಲಿ ಒಂದಾಗಿದೆ ಎಂಬ ಮಾತು ಯಥಾರ್ಥವಾಗಲಾರದು. ಯಾಕಂದರೆ ಹಣದಿಂದ ಪ್ರತ್ಯಕ್ಷವಾಗಿ ಸಂಪದುತ್ಪಾದನಕ್ಕೆ ಏನೂ ಸಹಾಯವಾಗುವದಿಲ್ಲ. ಹಣವು ತಿನ್ನಲಿಕ್ಕೆ ಬರುವದಿಲ್ಲ ಅಥವಾ ಉಡಲಿಕ್ಕೆ ಬರುವದಿಲ್ಲ. ಹಿಂದೆ ಹೇಳಲ್ಪಟ್ಟ ಹಣದ ಉಪಯೋಗವನ್ನೂ, ಹಣದ ಕಾರ್ಯಗಳನ್ನೂ ಲಕ್ಷ್ಯದಲ್ಲಿ ಇಟ್ಟರೆ, ಹಣವು ಸಂಪತ್ತೂ ಅಲ್ಲ, ಬಂಡವಲವೂ ಅಲ್ಲ, ಎಂಬುವದು ಚನ್ನಾಗಿ ಮನವರಿಕೆಯಾಗುವದು. ಹಣವು ಬೆಲೆಯ ಪರಿಮಾಣವೂ, ವಿನಿಮಯದ ಸಾಧನವೂ ಆಗಿದೆ, ಎಂಬದನ್ನು ಮರೆಯ ತಕ್ಕದ್ದಲ್ಲ. ಅಂದರೆ, ಯಾವತ್ತೂ ಜನರು ಒಪ್ಪಿಕೊಂಡು ಬೇರೆ ಎಲ್ಲ ವಸ್ತುಗಳ ಬೆಲೆಗಳ ಪರಿಮಾಣವನ್ನು ತಿಳಿಸುವದಕ್ಕಾಗಿ ಹಣವೆಂಬ ಪದಾರ್ಥವನ್ನು ನೇಮಕ ಮಾಡಿದ್ದಾರೆ. ಆದ್ದರಿಂದ ಹಣಕೊಟ್ಟು ಬೇರೆ ಯಾವತ್ತೂ ವಸ್ತುಗಳನ್ನು ಕೊಳ್ಳುವದಕ್ಕೆ ಬರುತ್ತದೆ.

**ಬಂಡವಲವೆಂದರೇನು? ಬಂಡವಲದ ವ್ಯಾಖ್ಯೆ.**—ಹೊಸ ಸಂಪತ್ತನ್ನು ಹುಟ್ಟಿಸುವದಕ್ಕೆ ಸಹಾಯವಾಗುವದಕ್ಕಾಗಿ ಹಿಂದೆ ಗಳಿಸಿದ ಸಂಪತ್ತಿನೊಳಗಿಂದ ಉಳಿಸಿಟ್ಟ ಭಾಗವು ಬಂಡವಲವೆನಿಸುವದು. ಆದರೆ ಕೆಲವರು ಆಕ್ಷೇಪಿಸುವದೇನಂದರೆ, ಸಂಪದುತ್ಪಾದನಕ್ಕೆ ಬಂಡವಲವು ಕೇವಲ ಅವಶ್ಯವಾದದ್ದಲ್ಲ. ಬಂಡವಲವಿಲ್ಲದೆಯಾದರೂ ಸಂಪತ್ತು ಹುಟ್ಟ ಬಹುದು. ಹ್ಯಾಗಂದರೆ, ಕಾಡಜನರು ಹಿಂದಿನ ಸಂಪತ್ತಿನೊಳಗಿಂದ ಏನೂ ಉಳಿಸದೆ, ಕಂದ, ಮೂಲ, ಫಲಾದಿಗಳನ್ನು ಆಗಿಂದಾಗ್ಗೆ ತಂದು ಉಪಜೀವನ ಮಾಡಬಹುದು. ಇದೇ ಮೇರಿಗೆ, ಸುಧಾರಿಸಿದ ಮನುಷ್ಯನೊಬ್ಬನೇ ಯಾವದೊಂದು ನಿರ್ಜನವಾದ ನಡುಗಡ್ಡೆಯಲ್ಲಿ ಇದ್ದರೂ, ಅಲ್ಲಿಯ ಭೂಮಿ ಮತ್ತು ತನ್ನ ಶ್ರಮ ಇವುಗಳಿಂದ ಹೊಸ ಸಂಪತ್ತನ್ನು ಹುಟ್ಟಿಸಿ, ಕೂಡ ಹಾಕ ಬಹುದು. ಆದರೆ ಈ ಆಕ್ಷೇಪವು ಕಾಲ್ಪನಿಕವಾದದ್ದೇ ಹೊರ್ತು ನಿಜವಾದದ್ದಲ್ಲ. ಯಾಕಂದರೆ, ಕಾಡಜನರಾದರೂ ತಮ್ಮ ಭಕ್ಷ್ಯವನ್ನು ದೊರಕಿಸುವದಕ್ಕಾಗಿ, ಒಂದು ಬೆಣಚುಕಲ್ಲಿನ ಚೂರಿಯನ್ನು ಮಾಡಿ, ಅದನ್ನು ಆಯುಧ

ವಾಗಿ ಉಪಯೋಗಿಸ ಹತ್ತಿದಕೂಡ್ಲೆ ಅವರ ಹತ್ತರ ಬಂಡವಲವು ಇದ್ದಂತಾಗುತ್ತದೆ. ಕಾಡಜನರಾದರೂ, ನಾಳೆ ಫಲಮೂಲಾದಿಗಳು ಶಿಕ್ಕುವ ವರೆಗೆ ಹೊಟ್ಟೆಗಾಗಿ, ಈ ಹೊತ್ತು ತಂದ ಫಲಮೂಲಾದಿಗಳ ಅಲ್ಪ ಭಾಗವನ್ನು ಇಟ್ಟ ಕೂಡ್ಲೆ ಅವರು ಬಂಡವಲವನ್ನು ಕೂಡಿಸಿದಂತಾಗುತ್ತದೆ. ಹಡಗ ಒಡೆದು, ಒಂದು ನಿರ್ಜನವಾದ ನಡುಗಡ್ಡೆಗೆ ಹತ್ತಿದ "ರಾಬಿನ್ಸನ್ ಕ್ರೂಸೋ" ಎಂಬವನು, ತನಗೆ ಮಂಗಳವಾರದ ದಿವಸ ಒಂದೇ ಸಮನಾಗಿ ತನ್ನ ಡೋಣಿಯನ್ನು ಮಾಡಲಿಕ್ಕೆ ಬರ ಬೇಕೆಂದು, ಸೋಮವಾರದ ದಿವಸ ದೊರಕಿಸಿದ ಹಣ್ಣುಗಳ ಭಾಗವನ್ನು ಇಟ್ಟ ಕೂಡ್ಲೆ ಅವನು ಬಂಡವಲ ಕೂಡಿಸಿದಂತಾಯಿತು. ಇದರಿಂದ ತಿಳಿಯುವದೇನಂದರೆ, ಯಾವದೊಂದು ಬಹಳ ಸಣ್ಣ ಉದ್ಯೋಗವನ್ನು ನಡಿಸುವದಕ್ಕಾದರೂ, ಕನಿಷ್ಟಪಕ್ಷಕ್ಕೆ ಒಂದಿನ ಒಪ್ಪತ್ತು ಹೊಟ್ಟೆ ಸಾಗುವಷ್ಟು ಬಂಡವಲ ಬೇಕಾಗುವದು. ಮತ್ತು ಈಗಿನ ಸುಧಾರಿಸಿದ, ಮತ್ತು ದೊಡ್ಡ ಉದ್ಯೋಗಗಳು ನಡಿಯುವಂಥ ಕಾಲದಲ್ಲಂತೂ ಬಂಡವಲವು ಸಂಪದುತ್ಪಾದನಕ್ಕೆ ಅತ್ಯವಶ್ಯವಾದ ಸಾಧನವಾಗಿದೆಂದು ಹೇಳ ಬಹುದು.

**ಸಂಪದುತ್ಪಾದನಕ್ಕೆ ಬಂಡವಲದಿಂದ ಆಗುವ ಸಹಾಯದ ಉದಾಹರಣವು.**—ಒಕ್ಕಲತನದ ಕೂಲಿಕಾರರ ಉಪಜೀವನವು ಹಿಂದೆ ಗಳಿಸಿಟ್ಟಿದ್ದ ಸಂಪತ್ತಿನಿಂದ ಸಾಗದಿದ್ದರೆ ಹೊಲದ ಕೆಲಸಗಳು ಎಂದಿಗೂ ಸಾಗಲಾರವು. ಭೂಮಿಯಲ್ಲಿ ಬೀಜ ಬಿತ್ತಿದಂದಿನಿಂದ ಪೈರು ಬಂದು ಆ ಕಾಳಿನಿಂದ ಭಕ್ಕರಿಯಾಗುವ ವರೆಗೆ ನಾಲ್ಕಾರು ತಿಂಗಳ ಅವಧಿಯು ಬೇಕಾಗುತ್ತದೆ. ಆದ್ದರಿಂದ ಶ್ರಮ ಮಾಡುವವರ ಉಪಜೀವನವು ಅವರು ಮುಂದೆ ಹುಟ್ಟಿಸುವ ಸಂಪತ್ತಿನಿಂದ ನಡಿಯುವದಿಲ್ಲವೆಂಬದಂತೂ ಮೇಲೆಯೇ ಕಾಣಿಸುತ್ತದೆ. ಅವರ ಉಪಜೀವನವು, ಅವರೇ ಇಲ್ಲವೆ ಬೇರೆಯವರು ಹಿಂದೆ ಗಳಿಸಿಟ್ಟ ಸಂಪತ್ತಿನಿಂದಲೇ ಸಾಗ ಬೇಕು. ಈ ಹಿಂದೆ ಗಳಿಸಿಟ್ಟ ಸಂಪತ್ತೇ ಬಂಡವಲವು. ಕೂಲಿಯವರಿಗೆ ಕೂಲಿಯ ನಗದು ಹಣವನ್ನು ಕೊಡದೆ, ಭತ್ತ, ಜೋಳ ಮೊದಲಾದ ಉಪಜೀವನದ ಪದಾರ್ಥಗಳನ್ನು ಕೊಡುವ ಪ್ರಚಾರವಿದ್ದಲ್ಲಿ, ಹಿಂದಿನ ಶ್ರಮದಿಂದ ಹುಟ್ಟಿದ ಸಂಪತ್ತಿನಿಂದ ಹೊಸ ಸಂಪತ್ತಿನ ಉತ್ಪಾದನಕ್ಕೆ ಆಗುವ ಸಹಾಯವು ಸ್ಪಷ್ಟವಾಗಿ ಕಾಣಿಸುತ್ತದೆ. ಅದೇನಂದರೆ, ಈ ಹಿಂದೆ ಗಳಿಸಿಟ್ಟ ಸಂಪತ್ತಿನಿಂದ, ಹೊಸ ಸಂಪತ್ತನ್ನು ಹುಟ್ಟಿಸುವ ಕೆಲಸದಲ್ಲಿ ಶ್ರಮ ಮಾಡುವವರ ಚರಿತಾರ್ಥ ಸಾಗುತ್ತದೆ. ಆದರೆ ಎಷ್ಟೋ ಕಡೆಯಲ್ಲಿ, ಒಕ್ಕಲಿಗರು ತಮ್ಮ ಹುಟ್ಟುವಳಿಯನ್ನು ಹಣಕ್ಕೆ ಮಾರಿ, ಆ ಹಣದೊಳಗಿಂದ ಕೂಲಿಯವರಿಗೆ ಸಲ್ಲುವ ಕೂಲಿಯ ಭಾಗವನ್ನು ಹಣದ ರೂಪದಿಂದಲೇ ಕೊಡುವರು.

ಯಾವತ್ತು ಉದ್ಯೋಗಗಳಲ್ಲಿ ಈಗ್ಯೆ ಕೂಲಿಯನ್ನು ಹಣದ ರೂಪದಿಂದಲೇ ಕೊಡುವದುಂಟು. ಈ ಹಣವು ಹಿಂದೆ ಗಳಿಸಿದ ಸಂಪತ್ತಿನ ದರ್ಶಕವಾಗಿದೆ. ಮತ್ತು ಈ ಹಣದಿಂದ, ಕೂಲಿಕಾರರಿಗೆ ಕಾಳು ಮುಂತಾದ ಉಪಜೀವನದ ಪದಾರ್ಥಗಳನ್ನು ಕೊಟ್ಟದ್ದರಿಂದ ಆಗುವ ಕಾರ್ಯವೇ ಆಗುತ್ತದೆ. ಆದ್ದರಿಂದ, ಉತ್ಪಾದಕ ಶ್ರಮಕರ್ತರಿಗೆ ಕೂಲಿಯ ರೂಪದಿಂದ ಸಂದ ಸಂಪತ್ತು ಬಂಡವಲವಾಗಿದೆ. ಮತ್ತು ಈ ಸಂಪತ್ತಿನಿಂದ ಹೊಸ ಸಂಪತ್ತನ್ನು ಹುಟ್ಟಿಸುವ ಕೆಲಸದಲ್ಲಿ ಕೂಲಿಕಾರರು ತೊಡಗಿರುವಾಗ ಅವರ ಹೊಟ್ಟೆ ಸಾಗುವ ಕಾರಣ, ಸಂಪದುತ್ಪಾದನಕ್ಕೆ ಅದರಿಂದ ಮಹದುಪಯೋಗವಾಗುತ್ತದೆಂಬದನ್ನು ಲಕ್ಷ್ಯದಲ್ಲಿಡ ತಕ್ಕದ್ದು. ಕೂಲಿಯ ಹಣವು ಬಂಡವಲವಲ್ಲ; ಆದರೆ ಆ ಹಣವನ್ನು ಕೊಟ್ಟು ಕೂಲಿಯವರು ಕೊಳ್ಳುವ ಅನ್ನ, ಅರಿವೆ ಮೊದಲಾದ ಉಪಜೀವನದ ಪದಾರ್ಥಗಳು ಬಂಡವಲವಾಗಿವೆಂಬ ಮಾತನ್ನು ಯಾವಾಗಲೂ ಚನ್ನಾಗಿ ನೆನಪಿನಲ್ಲಿಡ ತಕ್ಕದ್ದು. ಚಿನ್ನ ಬೆಳ್ಳಿಗಳಿಂದ ಪ್ರತ್ಯಕ್ಷವಾಗಿ ಶ್ರಮಕರ್ತರ ಚರಿತಾರ್ಥವು ಸಾಗಲಾರದು. ಅವುಗಳನ್ನು ಕೊಟ್ಟು ಉಪಜೀವನಕ್ಕೆ ಅವಶ್ಯವಾದ ಪದಾರ್ಥಗಳನ್ನು ಕೊಳ್ಳದೆ ಹೋದಲ್ಲಿ ಅವುಗಳಿಂದ ಏನು ಪ್ರಯೋಜನವಿಲ್ಲ. "ಮಾಸ್ಕೋ" ಎಂಬ ಪಟ್ಟಣದಿಂದ ಫ್ರೆಂಚರ ದಂಡಿನವರು ತಮ್ಮ ದೇಶಕ್ಕೆ ಮರಳಿ ಬರುವಾಗ ಮಾರ್ಗದಲ್ಲಿ ಅತಿ ಘೋರವಾದ ಥಳಿಯಿಂದ ಬಳಲುವ ಕಾಲದಲ್ಲಿ ತಮ್ಮ ಖಜಾನೆಯ ಪೆಟ್ಟಿಗೆಯನ್ನು ವೈಯ್ಯುವದು ಕಷ್ಟವಾದ್ದರಿಂದ, ಅದನ್ನು ಅಲ್ಲೇ ಬಿಟ್ಟು ಬಿಡ ಬೇಕಾಯಿತು. ಆದರೆ, ಕೆಲವು ದಂಡಾಳುಗಳು ಅತ್ಯಾಶೆಯಿಂದ ಅದರೊಳಗಿನ ಬಂಗಾರವನ್ನು ತಕ್ಕೊಂಡು ತಮ್ಮ ಕಿಶೆಗಳನ್ನೂ, ಒಟ್ಟೆ ಚೀಲಗಳನ್ನೂ ಒಳಿತಾಗಿ ತುಂಬಿಕೊಂಡರು. ಆದರೆ ಬರೇ ಬಂಗಾರವು ಯಾತಕ್ಕೆ ಬರುವದು! ಅವರು ಅದನ್ನು ಬಹಳ ಹೊತ್ತು ಇಟ್ಟು ಕೊಳ್ಳಲಿಲ್ಲ. ಅವರ ಸಂಕಟವನ್ನು ಪರಿಹರಿಸುವದಕ್ಕೆ ಅವರ ಬಂಗಾರವು ಎಷ್ಟು ಮಾತ್ರವೂ ಉಪಯೋಗಿಸಲಿಲ್ಲ. ಬಂಗಾರದ ಒಜ್ಜೆಯಿಂದ ಅವರಿಗೆ ಹೆಚ್ಚು ತೊಂದರೆ ಮಾತ್ರ ಉಂಟಾಯಿತು. ಸ್ವಲ್ಪ ಹೊತ್ತಿನಲ್ಲಿ ಅವರು ಬಂಗಾರವನ್ನು ವೈಯ್ಯುವ ಶ್ರಮವನ್ನು ತಾಳಲಾರದೆ ಅದನ್ನು ಸುತ್ತುಮುತ್ತಲಿದ್ದ ಬರ್ಫಿನ ಮೇಲೆ ಬಿಸಾಡಿ ಬಿಟ್ಟರು. ಹಣದಿಂದ ಜೀವವನ್ನು ಬದುಕಿಸುವಂಥ ಇಲ್ಲವೆ ಸುಖ ಪಡಿಸುವಂಥ ನಾನಾ ತರದ ಒಡವೆಗಳನ್ನು ದೊರಕಿಸುವದಕ್ಕೆ ಬರುತ್ತದೆ. ಇದಿಷ್ಟು ಉಪಯೋಗವು ಹೊರ್ತಾಗಿ, ಹಣವು ಕೇವಲ ನಿಷ್ಪ್ರಯೋಜನವಾದದ್ದು, ಎಂಬದಕ್ಕೆ ಈ ಸಂಗತಿಯು ಒಳ್ಳೇ ದೃಷ್ಟಾಂತವಾಗಿದೆ.

ಆದರೆ "ಮಿಸ್ಟರ ಹೇನ್ರಿ ಜಾರ್ಜ"ನೆಂಬ ಗ್ರಂಥಕರ್ತನು ಬರೆದ "ಬೆಳವಣಿಗೆ

ಮತ್ತು ಬಡತನ" ಎಂಬ ಗ್ರಂಥದಲ್ಲಿ, ಕೂಲಿಯು ಬಂಡವಲದೊಳಗಿಂದ ಕೊಡಲ್ಪಡುತ್ತದೆಂದು ಹೇಳುವದು ತೀರ ತಪ್ಪಾಗಿದೆ, ಎಂಬ ಆಕ್ಷೇಪವನ್ನು ತೆಗೆದಿದ್ದಾನೆ. ಈ ಗ್ರಂಥಕರ್ತನು ಪ್ರತಿಪಾದಿಸುವದೇನಂದರೆ, "ಕೂಲಿಯು ಶ್ರಮದಿಂದ ಉಂಟಾಗುವ ಉತ್ಪನ್ನದೊಳಗಿಂದಲೇ ಕೊಡಲ್ಪಡುತ್ತದೆ; ಮತ್ತು ಈ ಮೇರೆಗೆ ಶ್ರಮವು ತನ್ನ ಪ್ರತಿಫಲವನ್ನು ತಾನೇ ಹುಟ್ಟಿಸುವದು. ಒಬ್ಬ ಕೂಲಿಯವನಿಗೆ ಒಂದು ಹೊಲದಲ್ಲಿ ಒಂದು ವಾರದ ವರೆಗೆ ನೇಗಿಲ ಹೊಡೆದದ್ದಕ್ಕಾಗಿ ೮ ರೂಪಾಯಿ ಕೊಟ್ಟಿತೆಂದು ಕಲ್ಪಿಸಿರಿ. ಈ ಎಂಟು ರೂಪಾಯಿ ಕೊಟ್ಟ ಕಾರಣವೇನಂದರೆ, ನೇಗಿಲ ಹೊಡೆದ ಹೊಲದ ಬೆಲೆಯು, ನೇಗಿಲ ಹೊಡೆಯದ ಹೊಲಕ್ಕಿಂತಲೂ ಹೆಚ್ಚಾಗಿರುವದು. ಅಂದರೆ, ನೇಗಿಲ ಹೊಡೆದವನು ಹೊಸ ಸಂಪತ್ತನ್ನು ಹುಟ್ಟಿಸಿದಂತಾಯಿತು. ಆದಕಾರಣ, ಅವನು ಈ ಪ್ರಕಾರ ಹುಟ್ಟಿಸಿದ ಸಂಪತ್ತು ಇಲ್ಲವೆ ಸಂಪತ್ತಿನ ಕೆಲವೊಂದು ಭಾಗವು ಅವನ ಕೂಲಿಯಾಗಿರುವದು." ಇದಕ್ಕೆ ಸಮಾಧಾನವೇನಂದರೆ—ಶ್ರಮ ಮತ್ತು ಬಂಡವಲ ಇವೆರಡೂ ಕೂಡಿದ್ದರಿಂದ ಆಗುವ ಉತ್ಪನ್ನವೇ ಕೂಲಿಯ ಮತ್ತು ಲಾಭದ ಕಟ್ಟಕಡೆಯ ಉಗಮವಾಗಿದೆಂಬದು ನಿಜ. ಆದರೂ, ಯಾವದೊಂದು ಉದ್ಯೋಗದಲ್ಲಿ ಸಾವುಕಾರನು ಬಂಡವಲ ಹಾಕಿ, ಲಾಭ ಲುಕಸಾನುಗಳಿಗೆ ತಲೆಕೊಟ್ಟು ನಿಂತು, ಆ ಉದ್ಯೋಗದಲ್ಲಿ ತೊಡಗಿದ ಕೂಲಿಕಾರರಿಗೆ ವಾರವಾರಕ್ಕೆ ನಿಯಮಿತವಾದ ಕೂಲಿಯನ್ನು ಸರಕು ಮಾರಾಟಕ್ಕೆ ಸಿದ್ಧವಾಗುವ ತನಕ ಎಷ್ಟೋ ತಿಂಗಳ ವರೆಗೆ, ಒಮ್ಮೊಮ್ಮೆ ಎಷ್ಟೋ ವರ್ಷಗಳ ವರೆಗೆ ಸಹ ಕೊಡುತ್ತಿರುವನು. ಮತ್ತು ಅವನ ಸರಕು ಕಡೆಗೆ ಮಾರಾಟವಾಗದೆ ಹಾಗೇ ಬಿದ್ದರೂ, ಅವನು ಕೂಲಿಯನ್ನು ಕೊಡುವದೇನು ತಪ್ಪುವದಿಲ್ಲ; ಈ ಕೂಲಿಯನ್ನು ಕೊಟ್ಟೇ ಕೊಡುತ್ತಾನೆ. ಈ ಸಂಗತಿಗಳ ಮೇಲಿಂದ, ಕೂಲಿಯು ಬಂಡವಲದೊಳಗಿಂದಲೇ ಕೊಡಲ್ಪಡುತ್ತದೆ, ಅಂದರೆ, ಮುಂದೆ ಸಂಪತ್ತನ್ನು ಹುಟ್ಟಿಸುವದಕ್ಕೆ ಸಹಾಯವಾಗುವದಕ್ಕಾಗಿ ಹಿಂದೆ ಗಳಿಸಿದ ಸಂಪತ್ತಿನೊಳಗಿಂದ ಉಳಿಸಿಟ್ಟ ಸಂಪತ್ತಿನೊಳಗಿಂದಲೇ ಕೂಲಿಯವರಿಗೆ ಕೂಲಿಯು ದೊರಿಯುತ್ತದೆಂಬದು ಸ್ಪಷ್ಟವಾಗಿ ಕಾಣಿಸುತ್ತದೆ. ಹತ್ತಿಯ ಹೊಲ ಮಾಡುವ ಒಕ್ಕಲಿಗನು, ಹತ್ತೀ ಬಿತ್ತೋಣ, ಕಳೆ ತೆಗಿಯೋಣ ಮೊದಲಾದ ಕೆಲಸಗಳಿಗಾಗಿ ಕೂಲಿಕಾರರಿಗೆ ಕೂಲಿಯನ್ನು ಕೊಡುತ್ತಾನೆ. ಈ ಒಕ್ಕಲಿಗನು, ತನ್ನ ಹೊಲದ ಹತ್ತಿಯ ಮಾರಾಟದಿಂದ ತಾನು ಕೊಟ್ಟ ಕೂಲಿಯು ಹೋಗಲಾಗಿ ತನಗೇನಾದರೂ ಉಳತಾಯವಾಗುವದೆಂಬ ಆಶೆಯಿಂದಲೇ ಕೂಲಿಯನ್ನು ಕೊಡುತ್ತಾನೆಂಬದು ಸರಿ. ಆದರೂ ಹದ ತಪ್ಪಿ ಬಿದ್ದ ಮಳೆಯಿಂದಾಗಲಿ, ಛಳಿಯಿಂದಾಗಲಿ, ಅವನ

ಹತ್ತಿಯ ಪೈರು ಕೆಟ್ಟು ಏನೂ ಕೈಗೆ ಹತ್ತದೆ ಹೋಗ ಬಹುದು. ಈ ಪ್ರಸಕ್ತಿಯಲ್ಲಿ, ಶ್ರಮದಿಂದ ಉಂಟಾಗುವ ಸರಕಿನ ಬೆಲೆಯೊಳಗಿಂದಲೇ ಕೂಲಿಯವರಿಗೆ ಕೂಲಿಯು ದೊರಕತಕ್ಕದ್ದಾಗಿದ್ದರೆ, ಹೊಲದಲ್ಲಿ ದುಡಿದ ಕೂಲಿಕಾರರಿಗೆ ಏನೂ ಶಿಕ್ಕತಕ್ಕದ್ದಲ್ಲ. ಆದರೆ ಸಮಾಜದ ಸಾಂಪ್ರತದ ಸ್ಥಿತಿಯನ್ನು ನೋಡಲಾಗಿ, ಕೂಲಿಯವರಿಗೆ ಈ ಪ್ರಕಾರ ಲಾಭ ಲುಕಸಾನುಗಳಿಗೆ ತಲೆಕೊಟ್ಟು ನಿಲ್ಲುವ ತ್ರಾಣವಿಲ್ಲ. ಅವರ ಶ್ರಮವು ನಿಷ್ಫಲವಾಗಿ ಲುಕಸಾನು ಬಡಿದರೂ ತಮ್ಮ ಚರಿತಾರ್ಥ ಸಾಗಿಸುವಷ್ಟು ಅವರಲ್ಲಿ ಸಂಗ್ರಹವಿರುವದಿಲ್ಲ. ಆದ್ದರಿಂದ ಅವರು ತಮ್ಮ ಶ್ರಮವನ್ನು ನಿಯಮಿತವಾದ ಕ್ರಯಕ್ಕೆ ಸಾವುಕಾರನಿಗೆ ಮಾರುವದು ಅಗತ್ಯವಾಗುತ್ತದೆ. ಈ ಬಗೆಯಾಗಿ ಅವರಿಗೆ ದೊರಿಯುವ ಕೂಲಿಯು, ವ್ಯಾಪಾರದಲ್ಲಿ ಆಗುವ ಲಾಭ ಲುಕಸಾನಗಳಿಗೆ ಅವರೇ ಹೊಣೆಯಾಗಿದ್ದರೆ ದೊರಿಯ ಬಹುದಾದ ಕೂಲಿಗಿಂತ ಕಡಿಮೆಯಾಗಿದ್ದರೂ ಇರಬಹುದು. ಆದರೆ ಸಾಂಪ್ರತದ ಸ್ಥಿತಿಯಲ್ಲಿ ಕಾಲಕಾಲಕ್ಕೆ ನಿಶ್ಚಯವಾಗಿ ದೊರಿಯುವ ಕೂಲಿಯೇ ಅವರಿಗೆ ವಿಶೇಷ ಮಹತ್ವವುಳ್ಳದ್ದಾಗಿರುವದರಿಂದ, ಕೂಲಿಕಾರರು ಇದಕ್ಕೇ ದೃಷ್ಟಿಯನ್ನು ಕೊಡುವದು ಸಹಜವಾಗಿದೆ.

**ಕೂಲಿಯ ಮೊಬಲಗು.**—ಕೆಲವು ಅರ್ಥಶಾಸ್ತ್ರಜ್ಞರು, ಕೂಲಿಯ ರೂಪದಿಂದ ವೆಚ್ಚವಾಗುವ ಸಂಪತ್ತಿಗೆ "ಕೂಲಿಯ ಮೊಬಲಗು" ಎಂಬ ಹೆಸರನ್ನು ಕೊಟ್ಟಿದ್ದಾರೆ. ಅಂದರೆ, ಪ್ರತಿಯೊಬ್ಬ ಸಾವುಕಾರನು ಕೆಲವೊಂದು ವಿಶೇಷ ರಕಮು ಬೇರೆ ಇಟ್ಟುಕೊಂಡು, ಅದನ್ನು ಕೂಲಿಯನ್ನು ಕೊಡುವದರೊಳಗೇ ವೆಚ್ಚ ಮಾಡ ಬೇಕು, ಬೇರೆ ಯಾವ ಕೆಲಸಕ್ಕೂ ಹಚ್ಚ ಬಾರದು ಎಂಬ ಅಭಿಪ್ರಾಯವಲ್ಲ. ವ್ಯಾಪಾರ ಉದ್ಯೋಗಗಳಲ್ಲಿ ಬಹಳ ಹೆಚ್ಚುಕಡಿಮೆಗಳು ಆಗದೆ ಇದ್ದಾಗ, ಪ್ರತಿಯೊಂದು ಉದ್ಯೋಗದಲ್ಲಿ ಕಾರಖಾನೆ, ಯಂತ್ರಗಳು, ಮೂಲದ್ರವ್ಯ ಮೊದಲಾದವುಗಳಿಗೆ ವೆಚ್ಚವಾಗುವ ಬಂಡವಲದ ಭಾಗದ ಪ್ರಮಾಣದಿಂದ ತುಸು ಹೆಚ್ಚು ಕಡಿಮೆಯಾಗಿ, ಕೂಲಿಯ ರೂಪದಿಂದ ಕೊಡ ತಕ್ಕ ಬಂಡವಲದ ಭಾಗವೂ ಇರಬೇಕಾಗುವದು. ಇಷ್ಟೇ ಕೂಲಿಯ ಮೊಬಲಗು ಎಂಬದರ ಅರ್ಥವು. ಆದ್ದರಿಂದ, ಯಾವದೊಂದು ಉದ್ಯೋಗದ ಸ್ವರೂಪವು ಇದ್ದಕ್ಕಿದ್ದ ಹಾಗೆ ಇರಲಾಗಿ, ಕೂಲಿಯಲ್ಲದ ಬಂಡವಲದ ಭಾಗವನ್ನು ಬೆಳಿಸಿದಂತೆ, ಕೂಲಿಯ ಬಂಡವಲವನ್ನು, ಅಂದರೆ ಕೂಲಿಯ ಮೊಬಲಗನ್ನು ಹೆಚ್ಚಿಸ ಬೇಕಾಗುವದು. ಕೂಲಿಯ ಮೊಬಲಗಿನ ವಿಷಯದ ಉಪಪತ್ತಿಯನ್ನು ಕುರಿತು ಅರ್ಥಶಾಸ್ತ್ರಜ್ಞರೊಳಗೆ ಬಹಳ ವಾಗ್ವಾದವಿರುವದು. ಆದರೆ, ಈ ಉಪಪತ್ತಿಯನ್ನು ಈ ಚಿಕ್ಕ ಪುಸ್ತಕದಲ್ಲಿ ಹೇಳ ತೊಡಗುವದು ಇಷ್ಟವಲ್ಲ.

ಕೂಲಿಯಾಗಿ ಕೊಡಲ್ಪಟ್ಟ ಯಾವತ್ತು ಸಂಪತ್ತು ಉತ್ಪಾದಕ ಶ್ರಮ ಮಾಡುವವರ ಉಪಜೀವನಕ್ಕೆ ಸಲ್ಲುವದಿಲ್ಲವೆಂಬದನ್ನು ನೆನಪಿನಲ್ಲಿಡ ಬೇಕು. ಅದರೊಳಗಿನ ಹೆಚ್ಚಿನ ಭಾಗವು ಕೇವಲ ಅನುತ್ಪಾದಕ ಶ್ರಮ ಮಾಡುವವರಿಗೆ ಸಲ್ಲುವದು. ಕೂಲಿಯ ಮೊಬಲಗಿನೊಳಗಿಂದ ಉತ್ಪಾದಕ ಶ್ರಮ ಮಾಡುವವರ ಉಪಜೀವನಕ್ಕಾಗಿ ವೆಚ್ಚವಾಗುವ ಭಾಗವು ಮಾತ್ರ ಬಂಡವಲವಾಗಿದೆ. ಆದ್ದರಿಂದ ಕೂಲಿಯ ಮೊಬಲಗಿನಲ್ಲಿ ಎರಡು ಮುಖ್ಯವಾದ ಭಾಗಗಳಾಗುತ್ತವೆ:—೧ನೇದು, ಉತ್ಪಾದಕ ಶ್ರಮಕರ್ತರ ಚರಿತಾರ್ಥಸಾಗಿಸುವದು. ಆದ್ದರಿಂದ, ಈ ಭಾಗವು ದೇಶದೊಳಗಿನ ಒಟ್ಟು ಬಂಡವಲದ ಅಂಶವಾಗುವದು. ೨ನೇದು, ಸಂಪತ್ತನ್ನು ಹುಟ್ಟಿಸದ ಶ್ರಮಕರ್ತರ ಉಪಜೀವನವನ್ನು ಸಾಗಿಸುತ್ತದೆ. ಆದ್ದರಿಂದ ಈ ಭಾಗವು ಅನುತ್ಪಾದಕ ವೆಚ್ಚದಲ್ಲಿ ಕಳೆದು ಹೋಗುವದು.

**ಸಂಪದುತ್ಪಾದನದಲ್ಲಿ ಬಂಡವಲದಿಂದಾಗುವ ಮತ್ತೊಂದು ಕಾರ್ಯದ ಉದಾಹರಣವು.**—ಸಂಪತ್ತನ್ನು ಹುಟ್ಟಿಸುವ ಕೆಲಸದಲ್ಲಿ, ಬಂಡವಲದಿಂದ ಶ್ರಮಕರ್ತನ ಹೊಟ್ಟೆ ಸಾಗಿಸುವದಷ್ಟೇ ಕಾರ್ಯವಾಗುವದಿಲ್ಲ. ಹೊಸ ಸಂಪತ್ತನ್ನು ಹುಟ್ಟಿಸುವ ಕೆಲಸಕ್ಕೆ ಸಹಾಯವಾಗುವದಕ್ಕಾಗಿ ಬೇರೆ ತೆಗೆದಿಟ್ಟ ಯಾವತ್ತು ಸಂಪತ್ತು ಬಂಡವಲವಾಗಿದೆ. ಆದಕಾರಣ ಸಂಪದುತ್ಪಾದನಕ್ಕೆ ಸಹಾಯ ಮಾಡುವ ಕಾರಖಾನೆಯ ಇಮಾರತುಗಳು, ಯಂತ್ರಗಳು, ಆಯುಧಗಳು ಇವುಗಳಾದರೂ ಬಂಡವಲವಾಗಿವೆ. ಎಷ್ಟೋ ಕೈಗಾರಿಕೆಗಳು ದೊಡ್ಡ ಇಮಾರತುಗಳೂ ಬಹಳ ಬೆಲೆಯುಳ್ಳ ಯಂತ್ರಗಳೂ ಇರದೆ, ಚನ್ನಾಗಿ ನಡಿಯುವದಿಲ್ಲ. ಉಣ್ಣೆಯ ವಸ್ತ್ರಗಳನ್ನು ಮಾಡುವ ಉದ್ಯೋಗದ ಉದಾಹರಣವನ್ನು ತಕ್ಕೊಳ್ಳಿರಿ. ಈ ಕಾರಖಾನೆಯ ಸಾವುಕಾರನ ಹತ್ತರ ಕೂಲಿಗಾಗಿ ಬೇಕಾಗುವ ಬಂಡವಲವಲ್ಲದೆ ಇಮಾರತುಗಳು, ಯಂತ್ರಗಳು, ಆಯುಧಗಳು ಮುಂತಾದವುಗಳಿಗಾಗಿ ಬಹಳ ಬಂಡವಲವು ಇರ ಬೇಕಾಗುವದು. ಆದರೆ, ಕಾರಖಾನೆಯುವನ ಯಾವತ್ತು ಸಂಪತ್ತು ಬಂಡವಲವಾಗಿದೆಂದು ತಿಳಿಯ ಬಾರದು. ಯಾಕಂದರೆ, ಅವನ ಸಂಪತ್ತಿನ ಕೆಲ ಒಂದು ಭಾಗವು, ನಾನಾ ತರದ ವಿಲಾಸದ ಒಡವೆಗಳಲ್ಲಿ ವೆಚ್ಚವಾಗುತ್ತದೆ. ಆದ್ದರಿಂದ ಅವನು ತನ್ನ ಸಂಪತ್ತಿನೊಳಗಿಂದ "ಹೊಸ ಸಂಪತ್ತನ್ನು ಹುಟ್ಟಿಸುವ ಉದ್ಯೋಗದಲ್ಲಿ ಹಾಕ ಬೇಕೆಂದು ಅಪೇಕ್ಷಿಸುವ" ಭಾಗವು ಮಾತ್ರ ಬಂಡವಲವಾಗಿದೆ. "ಯಾವದೊಂದು ಉದ್ಯೋಗಕ್ಕೆ ಬೇಕಾಗುವ ಮನೆ, ಸಂರಕ್ಷಣದ ಸಾಧನಗಳು, ಆಯುಧಗಳು, ಮೂಲ ದ್ರವ್ಯಗಳು ಇವುಗಳನ್ನು ಪೂರೈಸುವದಕ್ಕೂ, ಮತ್ತು ಉದ್ಯೋಗವು ನಡಿದಿರುವ ಕಾಲದಲ್ಲಿ ಶ್ರಮ ಕರ್ತರ ಹೊಟ್ಟೆ ಬಟ್ಟೆಗೆ

ಕೊಟ್ಟು, ಅವರ ನಿರ್ವಾಹ ಸಾಗಿಸುವದಕ್ಕೂ, ಬಂಡವಲವು ಉಪಯೋಗಿಸುತ್ತದೆ. ಸದ್ಯಃಕಾಲದ ಶ್ರಮಕ್ಕೆ ಗತಕಾಲದ ಶ್ರಮದಿಂದಲೂ ಗತಕಾಲದ ಶ್ರಮದ ಫಲದಿಂದಲೂ ದೊರಿಯ ಬೇಕಾಗುವ ಸಹಾಯವು ಇದೇ. ಈ ಬಗೆಯ ಉಪಯೋಗಕ್ಕಾಗಿ ಮುಂಚಿತವಾಗಿ ಗೊತ್ತು ಮಾಡಲ್ಪಟ್ಟ ಯಾವತ್ತು ಒಡವೆಗಳು, ಅಂದರೆ ಉತ್ಪಾದಕ ಶ್ರಮಕ್ಕೆ ಬೇಕಾಗುವ ಮೇಲೆ ಹೇಳಿದ ಬಗೆಯ ನಾನಾ ತರದ ಅವಶ್ಯವಾದ ಸಾಧನಗಳನ್ನು ಪೂರೈಸುವ ಯಾವತ್ತು ಒಡವೆಗಳು ಬಂಡವಲವೆನಿಸುತ್ತವೆ" ಎಂದು ಮಿಲ್ ಧೊರೆಯು ಉದಹರಿಸಿದ್ದಾನೆ.

**ಸರಕುಗಳ ಬೇಡಿಕೆ ಶ್ರಮದ ಬೇಡಿಕೆಗೆ ಕಾರಣವಲ್ಲ.**—ಕಾರಖಾನೆಯವನು ಹೊಸ ಸಂಪತ್ತನ್ನು ಹುಟ್ಟಿಸುವ ಉದ್ಯೋಗದಲ್ಲಿ ಉಪಯೋಗಿಸಿದ ಸಂಪತ್ತಿನ ಭಾಗವು ಮಾತ್ರ ಬಂಡವಲವಾಗಿದೆ. ಅವನು, ವಿಲಾಸದ ಒಡವೆಗಳನ್ನು ಕೊಳ್ಳುವಲ್ಲಿ ವೆಚ್ಚ ಮಾಡಿದ ಸಂಪತ್ತು ಬಂಡವಲವಲ್ಲವೆಂದು ಮೇಲೆ ಹೇಳಲ್ಪಟ್ಟಿತು. ಆದರೆ, ಅವನು ವಿಲಾಸದ ಒಡವೆಗಳಲ್ಲಿ ಹಾಕಿದ ಸಂಪತ್ತಾದರೂ ಶ್ರಮಕರ್ತರ ಚರಿತಾರ್ಥಕ್ಕೇ ಸಲ್ಲುತ್ತದೆ. ಅವನು ೫೦೦ ರೂಪಾಯಿ ಕೊಟ್ಟು ಜರದ ರುಮಾಲ, ಪೀತಾಂಬರ, ಪರಿಮಳಗಳು ಮೊದಲಾದ ವಿಲಾಸದ ಒಡವೆಗಳನ್ನು ಕೊಂಡರೆ, ಆ ೫೦೦ ರೂಪಾಯಿಗಳು ಆ ವಿಲಾಸದ ಒಡವೆಗಳನ್ನು ಉತ್ಪನ್ನ ಮಾಡಿದ ಕೂಲಿಕಾರರ ಉಪಜೀವನ ಸಾಗಿಸುವವು. ಆ ಕಾರಣ ಈ ಕಾರಖಾನೆಯವನು ಈ ರೂಪಾಯಿಗಳನ್ನು ತನ್ನ ಕಾರಖಾನೆಯಲ್ಲಿಯೇ ಹಾಕಿದ್ದರೆ ಅವು ಬಂಡವಲವಾಗುವಂತೆಯೇ, ಅವುಗಳಿಂದ ವಿಲಾಸದ ಒಡವೆಗಳನ್ನು ಕೊಂಡರೂ ಅವು ಬಂಡವಲವಾದವೆಂದು ಯಾಕೆ ಎಣಿಸ ಬಾರದು? ಎಂಬ ಆಕ್ಷೇಪವನ್ನು ಯಾರಾದರೂ ತೆಗಿಯ ಬಹುದು.

ಈ ಆಕ್ಷೇಪದಿಂದ ಅರ್ಥಶಾಸ್ತ್ರದೊಳಗಿನ ಬಂಡವಲದ ವಿಷಯದ ಒಂದು ಅತ್ಯಂತ ಮಹತ್ವವುಳ್ಳ ಸಿದ್ಧಾಂತದ ವಿಚಾರವು ಹೊರಡುತ್ತದೆ. ವಿದ್ಯಾರ್ಥಿಗಳು ಈ ಸಿದ್ಧಾಂತವನ್ನು ಸಾದ್ಯಂತವಾಗಿ ತಿಳುಕೊಳ್ಳುವದು ಅತ್ಯವಶ್ಯಕವಾದದ್ದು.

ಈ ಸಿದ್ಧಾಂತವು ಯಾವದಂದರೆ:—ಸರಕುಗಳ ಬೇಡಿಕೆ ಶ್ರಮದ ಬೇಡಿಕೆಗೆ ಕಾರಣವಲ್ಲ.

ಶ್ರಮದ ಬೇಡಿಕೆಯಂದರೆ, ಶ್ರಮ ಮಾಡುವ ಕೂಲಿಕಾರರಿಗೆ ಹೆಚ್ಚು ಕೆಲಸ ದೊರಿಯೋಣ, ಇಲ್ಲವೆ ಕಡಿಮೆ ಕೆಲಸ ದೊರಿಯೋಣ. ಇದು ಕೂಲಿಯವರಿಗೆ ಸಾಕ್ಷಾತ್ತಾಗಿ ಕೂಲಿಯ ರೂಪದಿಂದ ಕೊಡ ತಕ್ಕ ಬಂಡವಲದ ರಕಮನ್ನು ಅವಲಂಬಿಸಿರುವದು. ಯಾವದೊಂದು ಉದ್ಯೋಗದಲ್ಲಿ, ಬಂಡವಲವು ಹೆಚ್ಚು ಕಡಿಮೆ

ಯಾದಂತೆ ಕೆಲಸ ಮಾಡುವವರಿಗೆ ಕೆಲಸವು ಹೆಚ್ಚುಕಡಿಮೆಯಾಗಿ ದೊರಿಯುವದು. ಕೂಲಿಕಾರರಿಗೆ ಹೆಚ್ಚು ಅಥವಾ ಕಡಿಮೆ ಸಂಬಳ ದೊರಿಯುವದಕ್ಕೆ, ಅವರು ಹುಟ್ಟಿಸುವ ಸರಕುಗಳ ಬೇಡಿಕೆ ಕಾರಣವಲ್ಲ. ಯಾವದೊಂದು ಸರಕಿಗೆ ಬೇಡಿಕೆ ಹೆಚ್ಚಾಗಿ ಆ ಸರಕು ಬಹಳ ಮಾರಾಟವಾಗುವದರಿಂದ, ಕೂಲಿಕಾರರಿಗೆ ಯಾವ ಉದ್ಯೋಗದಲ್ಲಿ ಕೆಲಸ ಶಿಕ್ಕುವದೆಂಬದು ಮಾತ್ರ ಗೊತ್ತಾಗುತ್ತದೆ. ಯಾವದೊಂದು ಸರಕಿನ ಮಾರಾಟ ಹೆಚ್ಚಾಗಲಾಗಿ, ಸಾವುಕಾರರು ಆ ಸರಕನ್ನು ಹುಟ್ಟಿಸುವ ಉದ್ಯೋಗಗಳಲ್ಲಿಯೇ ಹೆಚ್ಚು ಬಂಡವಲ ಹಾಕುವರು; ಅಂದರೆ, ಸರಕಿನ ಬೇಡಿಕೆಯಿಂದ ಬಂಡವಲದ ಪ್ರವಾಹವು ಎತ್ತ ಹರಿಯುವದೆಂಬುವದು ಮಾತ್ರ ಗೊತ್ತಾಗುತ್ತದೇ ಹೊರ್ತು, ಅದರಿಂದ ಕೂಲಿಕಾರರ ಉದ್ಯೋಗವು ಹೆಚ್ಚುವದಿಲ್ಲ. ಈ ಸಿದ್ಧಾಂತದ ಸತ್ಯತೆಯು ಕೆಳಗೆ ಬರೆದ ಕೆಲವು ಉದಾಹರಣಗಳ ಮೇಲಿಂದ ಸ್ಪಷ್ಟವಾಗುವದು.

**ಉದಾಹರಣ.**—ಒಬ್ಬ ಉಣ್ಣೆಯ ವಸ್ತ್ರಗಳನ್ನು ನೇಯುವ ಕಾರಖಾನೆಯ ಸಾವುಕಾರನು ಪ್ರತಿ ವರ್ಷ ೫೦೦ ರೂಪಾಯಿಯ ಜರತಾರೀ ವಸ್ತ್ರಗಳನ್ನು ಕೊಳ್ಳುತ್ತಾನೆಂದು ಕಲ್ಪಿಸುವಾ. ಇವನು ಈ ೫೦೦ ರೂಪಾಯಿ ಕೊಟ್ಟು ಜರತಾರಿಯ ವಸ್ತ್ರಗಳನ್ನು ಕೊಳ್ಳದೆ, ಆ ರೂಪಾಯಿಗಳನ್ನು ತನ್ನ ಉಣ್ಣೆಯ ವಸ್ತ್ರದ ಕೆಲಸದಲ್ಲಿಯೇ ಖರ್ಚು ಮಾಡಿದರೆ ಇದರಲ್ಲಿ ಏನು ಭೇದವಾದಂತಾಯಿತು? ಅವನು ಜರತಾರೀ ವಸ್ತ್ರಗಳನ್ನು ಕೊಳ್ಳುವದು ಬಿಟ್ಟು ಆ ರೂಪಾಯಿಗಳನ್ನು ತನ್ನ ಉಣ್ಣೆಯ ಅರಿವೆಗಳ ಕಾರಖಾನೆಯಲ್ಲಿ ಹಾಕಿದರೆ, ಅವುಗಳಿಂದ ಉಣ್ಣೆಯ ಅರಿವೆಗಳನ್ನು ಮಾಡುವ ಹೆಚ್ಚು ಕೂಲಿಕಾರರ ಚರಿತಾರ್ಥ ಸಾಗುವಂತೆಯೇ ಅವನು ಜರತಾರೀ ವಸ್ತ್ರಗಳನ್ನು ಕೊಳ್ಳುವಲ್ಲಿ ವೆಚ್ಚಮಾಡಿದ ರೂಪಾಯಿಗಳು ಜರತಾರಿಯ ಉದ್ಯೋಗದಲ್ಲಿ ಶ್ರಮ ಮಾಡುವವರಿಗೆ ಸಲ್ಲುವದಿಲ್ಲವೋ? ತನ್ನ ಅರಿವೆಯ ಕಾರಖಾನೆಯನ್ನು ಬೆಳಿಸುವದಕ್ಕಾಗಿ ಅವನು ಜರತಾರೀ ವಸ್ತ್ರಗಳನ್ನು ಕೊಳ್ಳುವದು ಬಿಟ್ಟರೆ, ೫೦೦ ರೂಪಾಯಿಗಳು ಜರತಾರಿಯನ್ನು ಮಾಡುವವರ ಕಡೆಯಿಂದ ಉಣ್ಣೆಯ ಅರಿವೆಗಳನ್ನು ಮಾಡುವವರ ಕಡೆಗೆ ತಿರುಗಿದಂತೆ ಮಾತ್ರ ಆಗಲಿಲ್ಲವೋ? ಎಂದು ಕೆಲವರು ಕೇಳಬಹುದು. ಈ ಪ್ರಶ್ನಗಳಿಗೆ ಯೋಗ್ಯವಾದ ಉತ್ತರಗಳನ್ನು ಹೇಳುವದಕ್ಕಾಗಿ, ಆ ಕಾರಖಾನೆಯವನು ಜರತಾರಿಯನ್ನು ಕೊಳ್ಳುವದು ಬಿಟ್ಟು ೫೦೦ ರೂಪಾಯಿಗಳನ್ನು ತನ್ನ ಉದ್ಯೋಗದಲ್ಲಿಯೇ ಹಾಕಿ, ಅರಿವೆಗಳನ್ನು ಉತ್ಪನ್ನ ಮಾಡುವಂಥ ಹೆಚ್ಚು ಜನ ಕೂಲಿಕಾರರಿಗೆ ಕೂಲಿಯನ್ನು ಕೊಟ್ಟರೆ, ನಿಜವಾಗಿ ಏನು ಪರಿಣಾಮವಾಗುವದೆಂಬದನ್ನು ನೋಡುವಾ. ಇವನು ಜರತಾರಿಯನ್ನು

ಕೊಳ್ಳುವದ್ದು ಬಿಡುವವರಿಂದ ಜರತಾರಿಯ ಬೇಡಿಕೆ ಅಷ್ಟರ ಮಟ್ಟಿಗೆ ಕಡಿಮೆಯಾಗುವದು. ಆದ್ದರಿಂದ, ಜರತಾರಿಯನ್ನು ಮಾಡುವವನು ಕಡಿಮೆ ಜರತಾರಿಯನ್ನು ಹುಟ್ಟಿಸುವನು. ಮತ್ತು ಅದರ ಬೇಡಿಕೆ ಕಡಿಮೆಯಾದ ಮಟ್ಟಿಗೆ ಆ ಉದ್ಯೋಗದೊಳಗಿಂದ ಬಂಡವಲವನ್ನು ತೆಗೆಯುವನು. ಹಾಗೂ, ಈ ಮೇರೆಗೆ ಜರತಾರಿಯ ಉದ್ಯೋಗದೊಳಗಿಂದ ತೆಗೆದ ಬಂಡವಲವನ್ನು ಅವನು ಬೇರೆ ಉದ್ಯೋಗದಲ್ಲಿ ಹಾಕುವನು. ಯಾಕಂದರೆ, ತನ್ನ ಸರಕಿಗೆ ಗಿರಾಕಿಗಳು ಕಡಿಮೆಯಾದ ಕೂಡ್ಲೆ ಜರತಾರಿಯ ಉದ್ಯೋಗ ನಡಿಸುವವನು ಹೆಚ್ಚು ದುಂದುಗಾರನಾಗುವನೆಂದು ತಿಳಿಯುವದಕ್ಕೆ ಕಾರಣವಿಲ್ಲ. ಮತ್ತು ಅವನ ಕೈಯಲ್ಲಿ ಉಳಿದ ಬಂಡವಲದಿಂದ ಲಾಭ ಪಡಕೊಳ್ಳುವ ಆಶೆಯನ್ನು ಬಿಟ್ಟು ಬಿಡುವನೆಂದು ತಿಳಿಯುವದಕ್ಕೂ ಕಾರಣವಿಲ್ಲ. ಆದ್ದರಿಂದ ಇವನ ಬಂಡವಲವು ಮೊದಲಿನಷ್ಟೇ ಇದ್ದಂತಾಯಿತು.

ಉಣ್ಣೆಯ ಕಾರಖಾನೆಯವನು ತನ್ನ ಕಾರಖಾನೆಯಲ್ಲಿ ಹಾಕಿದ ಹೆಚ್ಚಿನ ೫೦೦ ರೂಪಾಯಿಗಳು ಕೇವಲ ಬೇರೆಯಾಗಿವೆ. ಈ ೫೦೦ ರೂಪಾಯಿ ಹೊಸ ಬಂಡವಲವಾಯಿತು. ಮತ್ತು ಮೊದಲು ಕೂಲಿಕಾರರಿಗೆ ೫೦೦ ರೂಪಾಯಿ ದೊರಿಯುತ್ತಿದ್ದಲ್ಲಿಯೇ ಈಗ ೧೦೦೦ ರೂಪಾಯಿಗಳು ದೊರಿಯ ಹತ್ತಿದವು. ಇದರಲ್ಲಿ ಜರತಾರಿಯ ಉದ್ಯೋಗದೊಳಗಿನ ಬಂಡವಲವು ಉಣ್ಣೆಯ ಅರಿವೆಗಳನ್ನು ಮಾಡುವವರ ಕಡೆಗೆ ತಿರುಗಿದಂತಾಗಲಿಲ್ಲ; ಉಣ್ಣೆಯ ಅರಿವೆಗಳನ್ನು ಮಾಡುವವರಿಗೆ ಹೊಸ ಕೆಲಸ ದೊರಿದಂತಾಯಿತು. ಮತ್ತು ಜರತಾರಿಯನ್ನು ಮಾಡುವ ಕೂಲಿಕಾರರಿಗೆ ದೊರಿಯುವ ಬಂಡವಲವು ಬೇರೊಂದು ಉದ್ಯೋಗದಲ್ಲಿ ಶೇರಿದ್ದರಿಂದ ಬೇರೆ ಕೂಲಿಕಾರರಿಗೆ ಕೆಲಸ ದೊರಿಯುವದು. (ಮಿಲ್ ಧೊರೆಯ "ಅರ್ಥಶಾಸ್ತ್ರದ ತತ್ವಗಳು" ೧ನೇ ಭಾಗ, ಪುಟ ೧೦೨.)

ದುಂದುಗಾರರ ಅಳತೆಗೆಟ್ಟ ವೆಚ್ಚವು ವ್ಯಾಪಾರಕ್ಕೆ ಹಿತಕರವಾದದ್ದೆಂಬ ಸಾಮಾನ್ಯ ಜನರ ತಿಳುವಳಿಕೆಯು ತೀರ ತಪ್ಪಾಗಿದೆಂಬದು ಈ ಉದಾಹರಣದಿಂದ ಸ್ಪಷ್ಟವಾಗುತ್ತಿದೆ. ವಿಲಾಸದ ಒಡವೆಗಳ ವ್ಯಯದಿಂದ ಕೂಲಿಕುಂಬಳಿ ಮಾಡಿ ಉಪಜೀವಿಸುವವರಿಗೆ ಯತ್ಕಿಂಚಿತವಾದರೂ ಕಲ್ಯಾಣವಾಗುವದಿಲ್ಲ. ಇದಲ್ಲದೆ, ವಿಲಾಸದ ಒಡವೆಗಳಲ್ಲಿ ವೆಚ್ಚವಾಗುವ ಸಂಪತ್ತನ್ನು ಒಕ್ಕಲತನದಂಥ ಉದ್ಯೋಗದೊಳಗಿಂದ ತೆಗೆದುಕೊಂಡು ವೆಚ್ಚ ಮಾಡಿದ್ದರಂತೂ ಕೂಲಿಕಾರರು ಎರಡು ಬಗೆಯಾಗಿ ಕೆಡುವರು. ಮೊದಲು, ಮೇಲೆ ಹೇಳಿದಂತೆ ವಿಲಾಸದ ಒಡವೆಗಳಲ್ಲಿ ವೆಚ್ಚವಾದ ಸಂಪತ್ತಿನಷ್ಟು, ದೇಶದೊಳಗಿನ ಕೂಲಿಯ ಮೊಬಲಗು ಅಂ

ದರೆ ಕೂಲಿಯಾಗಿ ಕೊಡಲ್ಪಡುವ ಬಂಡವಲದ ಭಾಗವು ಕಡಿಮೆಯಾಗುವದು; ಇದಲ್ಲದೆ, ಆ ವಿಲಾಸದ ಒಡವೆಗಳು ಉಪಯೋಗಿಸಲ್ಪಡಲಾಗಿ ಅವುಗಳಿಂದ ದುಂದುಗಾರರಿಗೆ ಕ್ಷಣಿಕ ಆನಂದವು ಮಾತ್ರ ಉಂಟಾಗಿ ಅವು ನಷ್ಟವಾಗುವ ಕಾರಣ, ಅವುಗಳಿಂದ ಹೊಸ ಸಂಪತ್ತು ಹುಟ್ಟುವದೂ, ಈ ಹೊಸ ಸಂಪತ್ತಿನಿಂದ ಬಂಡವಲವು ತಿರುತಿರುಗಿ ಉತ್ಪನ್ನವಾಗುವದೂ ಕಟ್ಟಾಗುತ್ತದೆ. ಈ ಸಂಗತಿಯನ್ನು ವಿವರಿಸುವದಕ್ಕಾಗಿ ಮತ್ತೊಂದು ಉದಾಹರಣವನ್ನು ತಕ್ಕೊಳ್ಳುವ.

**ಮತ್ತೊಂದು ಉದಾಹರಣವು.** — ಈ ಉದಾಹರಣದಿಂದ ಸರಕುಗಳ ಬೇಡಿಕೆ, ಶ್ರಮದ ಬೇಡಿಕೆಯಲ್ಲವೆಂಬ ಮಾತಿನ ಸತ್ಯತೆಯು ವಿಶೇಷವಾಗಿ ವ್ಯಕ್ತವಾಗುವದು. ಒಬ್ಬ ಒಕ್ಕಲಿಗನು ತನ್ನ ಹೊಲದ ಗೋಧಿಯನ್ನು ಮಾರಿ ಬೇರೆ ಸರಕುಗಳನ್ನು ಕೊಳ್ಳುತ್ತಾನೆಂದು ತಿಳಿಯುವ. ಈ ಬೇರೆ ಸರಕುಗಳನ್ನು ಅನುತ್ಪಾದಕವಾಗಿ ವೆಚ್ಚ ಮಾಡಿದರೆ ಅವುಗಳ ಬೆಲೆಯಷ್ಟು ರಕಮು ದೇಶದ ಬಂಡವಲದೊಳಗಿಂದ ಕಡಿಮೆಯಾಗುವದು. ಇದಕ್ಕೆ ವಿಪರೀತವಾಗಿ, ಆ ಸರಕುಗಳನ್ನು ಉತ್ಪಾದಕ ಕೆಲಸದಲ್ಲಿ ವ್ಯಯ ಮಾಡಿದರೆ ದೇಶದ ಬಂಡವಲವು ಹೆಚ್ಚಿದಂತೆ ಆಗುತ್ತದೆ. ಅಂದರೆ, ತನ್ನ ಗೋಧಿಯನ್ನು ಮಾರಿ ಬಂದ ಹಣದಿಂದ ಆ ಒಕ್ಕಲಿಗನು ಮಖಮಲ್ಲನ್ನು ಕೊಂಡರೆ, ಈ ಕೊಳ್ಳುವಿಕೆಯಿಂದ ಹೊಸ ಸಂಪತ್ತು ಹುಟ್ಟುವದಕ್ಕೆ ಏನೂ ಸಹಾಯವಾಗುವದಿಲ್ಲ. ಅದರಿಂದ ಕೊಳ್ಳುವವನ ಆನಂದವೂ, ಮನಸ್ಸಿನ ಸಮಾಧಾನವೂ ಹೆಚ್ಚಾಗ ಬಹುದು ಸರಿ; ಆದರೂ ಆ ಮಖಮಲ್ಲು ಹೊತ್ತು ಹರಿಯಿತಂದರೆ ಅಷ್ಟು ಸಂಪತ್ತು ಏನೇನು ಹೊಸ ಸಂಪತ್ತನ್ನು ಉತ್ಪನ್ನ ಮಾಡದೆ ನಷ್ಟವಾದಂತಾಗುತ್ತದೆ. ಇದಕ್ಕೆ ವಿಪರೀತವಾಗಿ, ಆ ಒಕ್ಕಲಿಗನು ತನ್ನ ಗೋಧಿಗೆ ಬಂದ ಹಣದಿಂದ ತನ್ನ ಕೂಲಿಯವರಿಗೆ ಕೂಲಿಯನ್ನು ಕೊಟ್ಟದ್ದಾದರೆ, ಅದರಿಂದ ಆ ಕೂಲಿಕಾರರು ತಮ್ಮ ಉಪಜೀವನದ ಪದಾರ್ಥಗಳನ್ನು ಕೊಳ್ಳುವರು. ಮತ್ತು ಈ ಉಪಜೀವನದ ಪದಾರ್ಥಗಳಿಂದ, ಆ ಕೂಲಿಕಾರರು ಹೊಸ ಸಂಪತ್ತನ್ನು ಹುಟ್ಟಿಸುವ ಕೆಲಸದಲ್ಲಿ ಸಹಾಯ ಮಾಡುವಾಗ ಅವರ ಚರಿತಾರ್ಥ ಸಾಗುವ ಕಾರಣ, ಈ ಉಪಜೀವನದ ಪದಾರ್ಥಗಳು ಉತ್ಪಾದಕ ವ್ಯಯವನ್ನು ಹೊಂದುತ್ತವೆ. ಈ ಪ್ರಕಾರ, ಮೊದಲನೇ ಪ್ರಸಕ್ತಿಯಲ್ಲಿ ಮಖಮಲ್ಲನ್ನು ಕೊಳ್ಳುವದರಿಂದ ಕೊಳ್ಳುವವನಿಗುಂಟಾಗುವ ಸಮಾಧಾನದ ಹೊರ್ತು ಮತ್ಯಾವ ಪರಿಣಾಮವೂ ಆಗುವದಿಲ್ಲ; ಎರಡನೇ ಪ್ರಸಕ್ತಿಯಲ್ಲಿ, ಶ್ರಮಕರ್ತರು ಅನ್ನ, ಅರಿವೆ ಮೊದಲಾದ ನಿರ್ವಾಹದ ಪದಾರ್ಥಗಳನ್ನು ಕೊಳ್ಳುವದರಿಂದ ಹೊಸ ಸಂಪತ್ತು ಹುಟ್ಟುವದಕ್ಕೆ ಮಾರ್ಗವಾಗುತ್ತದೆ. ಈ ಉದಾಹರಣದ ಮೇಲಿಂದ, ಸರಕುಗಳ ಬೇಡಿ

ಕೆಯು ಶ್ರಮದ ಬೇಡಿಕೆಯಲ್ಲವೆಂಬದು ಚನ್ನಾಗಿ ವ್ಯಕ್ತವಾಗುತ್ತದೆ. ವಿಲಾಸದ ಒಡವೆಗಳ ರೂಪದಿಂದ ಇದ್ದ ಸಂಪತ್ತಿನ ಭಾಗವನ್ನು ಉತ್ಪಾದಕವಾಗಿ ವ್ಯಯ ಮಾಡುವದಕ್ಕೆ ಬರುವದೇ ಇಲ್ಲ. ಆದ್ದರಿಂದ, ವಿಲಾಸದ ಒಡವೆಗಳ ವ್ಯಯವು ದೇಶದೊಳಗಿನ ಬಂಡವಲವನ್ನು ಕಡಿಮೆ ಮಾಡುತ್ತದೆ. ಯಾಕಂದರೆ, ಹೊಸ ಸಂಪತ್ತನ್ನು ಹುಟ್ಟಿಸುವದಕ್ಕೆ ಸಹಾಯ ಮಾಡುವದಕ್ಕಾಗಿ ತೆಗೆದಿಟ್ಟ ಸಂಪತ್ತಿನ ಭಾಗವು ಮಾತ್ರ ಬಂಡವಲವೆನಿಸುವದು. ಆದರೆ, ಇದರ ಮೇಲಿಂದ, ವಿಲಾಸದ ಒಡವೆಗಳನ್ನು ಮಾಡುವವರೇ ದೇಶದ ಸಂಪತ್ತನ್ನು ಕಡಿಮೆ ಮಾಡುತ್ತಾರೆ ಹೊರ್ತು; ಆ ಒಡವೆಗಳನ್ನು ಕೊಳ್ಳುವವರು ಕಡಿಮೆ ಮಾಡುವದಿಲ್ಲವೆಂದು ಯಾರಾದರೂ ಶಂಕಿಸ ಬಹುದು. ಆದರೆ, ವಿಲಾಸದ ಒಡವೆಗಳಿಗೆ ಬೇಡಿಕೆಯೇ ಇಲ್ಲದಿದ್ದರೆ, ವಿಲಾಸದ ಒಡವೆಗಳನ್ನು ಮಾಡುವವರಾದರೂ ಯಾಕೆ ಮಾಡ್ಯಾರು? ಎಂದಿಗೂ ಮಾಡಲಿಕ್ಕಿಲ್ಲ, ಎಂಬುವದನ್ನು ನೆನಪಿನಲ್ಲಿಟ್ಟರೆ, ಇಂಥ ಶಂಕೆಯು ಹುಟ್ಟಲಿಕ್ಕಿಲ್ಲ. ಕೂಲಿಕಾರರಿಗೆ ಹೆಚ್ಚು ಕೆಲಸ ದೊರಿಯ ಬೇಕಾದರೆ, ಹೆಚ್ಚು ಬಂಡವಲವು ಉದ್ಯೋಗಗಳಲ್ಲಿ ಶೇರಿದರೆ ಮಾತ್ರ ದೊರಿಯುವದು. ಯಾವದೊಂದು ಸರಕಿಗೆ ಬೇಡಿಕೆ ಹೆಚ್ಚಾಗುವದರಿಂದ ಬಂಡವಲ ಮತ್ತು ಶ್ರಮ ಇವುಗಳೇನು ಬೆಳಿಯುವದಿಲ್ಲ. ಯಾವದೊಂದು ಸರಕಿನ ಮಾರಾಟವು ಹೆಚ್ಚಾಗಲಾಗಿ ಸಾವುಕಾರರು ಬೇರೆ ಉದ್ಯೋಗಗಳೊಳಗಿಂದ ತಮ್ಮ ಬಂಡವಲ ತೆಗೆದು, ಈ ಸರಕನ್ನು ಹುಟ್ಟಿಸುವ ಉದ್ಯೋಗದಲ್ಲಿ ಶೇರಿಸುವರು. ಆದ್ದರಿಂದ ಸರಕುಗಳ ಬೇಡಿಕೆಯಿಂದ, ಬಂಡವಲ ಮತ್ತು ಶ್ರಮ ಇವು ಯಾವ ಕಡೆಗೆ ಉಪಯೋಗಿಸಲ್ಪಡುವವೆಂಬದು ಮಾತ್ರ ಗೊತ್ತಾಗುವದು.

**ಮತ್ತೊಂದು ದೃಷ್ಟಾಂತ.**— ಮೇಲೆ ಹೇಳಿದ ತತ್ವವನ್ನು ಮತ್ತಿಷ್ಟು ಸ್ಪಷ್ಟೀಕರಿಸುವದಕ್ಕಾಗಿ, ಒಬ್ಬನು ತನ್ನ ಬಹು ಬೆಲೆಯುಳ್ಳದೊಂದು ಚಿತ್ರವನ್ನು ಮಾರಿ, ರತ್ನಖಚಿತವಾದ ಆಭರಣಗಳನ್ನು ಕೊಳ್ಳಲಪೇಕ್ಷಿಸುತ್ತಾನೆಂದು ಕಲ್ಪಿಸಿರಿ. ಇವನು ತನ್ನ ಚಿತ್ರವನ್ನು ಮಾರಿ ಬಂದ ಹಣದಿಂದ ಆಭರಣಗಳನ್ನು ಕೊಂಡರೆ ಆಗುವ ಪರಿಣಾಮಕ್ಕೂ, ಆ ಚಿತ್ರವು ಸುಟ್ಟು ಹೋಗಿ ಅವನಿಗೆ ಆಭರಣಗಳನ್ನು ಕೊಳ್ಳಲಿಕ್ಕೆ ಬಾರದೆ ಹೋದರೆ ಆಗುವ ಪರಿಣಾಮಕ್ಕೂ, ಏನು ಹೆಚ್ಚುಕಡಿಮೆ ಇಲ್ಲ. ಯಾಕಂದರೆ, ಕೂಲಿಯ ಮೊಬಲಗಿನ ಹಾಗು ಕೂಲಿಕಾರರ ಹಿತಾಹಿತಗಳ ಸಂಬಂಧದಿಂದ ಇವೆರಡೂ ಸಂಗತಿಗಳು ಅಷ್ಟೇ ಪ್ರಯೋಜನವುಳ್ಳವು. ಆ ಚಿತ್ರವು ನಷ್ಟವಾದರೆ, ಚಿತ್ರದ ಒಡೆಯನಿಗೆ ಆಭರಣಗಳಿಂದ ಆಗುವ ನೇತ್ರಸುಖವು ಮಾತ್ರ ತಪ್ಪುವದು. ಬೇರೆ ಯಾವತ್ತೂ ಸ್ಥಿತಿಯು ಇದ್ದಕ್ಕಿದ್ದ ಹಾಗೆಯೇ ಇರುವದು.

ಯಾಕಂದರೆ, ಚಿತ್ರವು ನಷ್ಟವಾಗುವದರಿಂದ ಆ ಚಿತ್ರದ ಬೆಲೆಯಷ್ಟು ಆಭರಣಗಳ ಬೇಡಿಕೆ ಕಡಿಮೆಯಾಗುವದು. ಆದ್ದರಿಂದ ಅಷ್ಟು ಬಂಡವಲವನ್ನು ಆಭರಣಗಳನ್ನು ಮಾಡುವವನು ತನ್ನ ಉದ್ಯೋಗದೊಳಗಿಂದ ಕಡಿಮೆ ಮಾಡುವನು. ಮತ್ತು ಅವನು ಬಹುತರವಾಗಿ, ಈ ಉಳಿದ ಬಂಡವಲವನ್ನು ಬೇರೆ ಉದ್ಯೋಗದಲ್ಲಿ ಹಾಕಿ ಬಂಡವಲದಂತೆ ಉಪಯೋಗಿಸದೆ ಇರಲಿಕ್ಕಿಲ್ಲ. ಆದ್ದರಿಂದ, ಚಿತ್ರವು ಸುಟ್ಟು ಹೋದ್ದರಿಂದ ದೇಶದೊಳಗಿನ ಬಂಡವಲವು ಹೆಚ್ಚೂ ಆಗಲಿಲ್ಲ, ಕಡಿಮೆಯೂ ಆಗಲಿಲ್ಲ.

**ಈ ವಿಷಯದ ಮತ್ತೊಂದು ಸ್ವರೂಪವು.**—ವಿಲಾಸದ ಒಡವೆಗಳನ್ನು ಕೊಳ್ಳುವದರಿಂದ, ಕೂಲಿಯ ರೂಪದಿಂದ ಮುಟ್ಟುವ ಬಂಡವಲದ ಭಾಗದ ಮೇಲಾಗಲಿ, ಕೂಲಿಯವರ ಸ್ಥಿತಿಗತಿಯ ಮೇಲಾಗಲಿ ಏನೂ ಒಳ್ಳೇ ಪರಿಣಾಮವಾಗುವದಿಲ್ಲವೆಂದು ಮೇಲೆ ವಿವರಿಸಲ್ಪಟ್ಟಿತು. ಆದರೆ ಆ ವಿಷಯವಾಗಿ ಮತ್ತೊಂದು ಸಂಗತಿಯ ವಿಚಾರ ಮಾಡತಕ್ಕದ್ದುಳಿದದೆ. ಒಬ್ಬ ಒಕ್ಕಲಿಗನು ೨೦೦೦ ರೂಪಾಯಿಗಳನ್ನು ವೆಚ್ಚ ಮಾಡಿ ಕೂಲಿಯವರನ್ನು ಹಚ್ಚಿ ತನ್ನ ಹೊಲವನ್ನು ಸುಧಾರಿಸುವದಕ್ಕೆ ಬದಲಾಗಿ, ತನ್ನ ಮನೆಯ ಗೋಡೆಗಳ ಮೇಲೆ ಚಿತ್ರಗಳನ್ನು ಬರೆಯುವದಕ್ಕೂ, ಕಾಗದಗಳನ್ನು ಹಚ್ಚುವದಕ್ಕೂ, ಬೇರೆ ರೀತಿಯಿಂದ ತನ್ನ ಮನೆಯನ್ನು ಶೃಂಗರಿಸುವದಕ್ಕೂ ಕೂಲಿಕಾರರನ್ನು ಹಚ್ಚಿ, ಆ ಹಣ ವೆಚ್ಚ ಮಾಡುತ್ತಾನೆ. ಈ ಎರಡೂ ಪ್ರಸಕ್ತಿಗಳಲ್ಲಿ ೨೦೦೦ ರೂಪಾಯಿಗಳು ಕೂಲಿಕಾರರಿಗೇ ಸಲ್ಲುತ್ತವೆ. ಆದ್ದರಿಂದ, ಈ ಎರಡು ರೀತಿಗಳಲ್ಲಿ ಯಾವ ರೀತಿಯಿಂದ ಹಣವನ್ನು ವೆಚ್ಚ ಮಾಡಿದರೂ ಕೂಲಿಕಾರರಿಗೆ ಸಮನಾಗಿಯೇ ಕಲ್ಯಾಣವಾಗುವದೆಂದು ಕೆಲವರು ಭಾವಿಸ ಬಹುದು. ಆದರೆ, ಇವೆರಡೂ ಸಂಗತಿಗಳ ತಾತ್ಕಾಲಿಕ ಪರಿಣಾಮವು ಒಂದೇ ಆಗಿದ್ದರೂ ಕೊನೆಯ ಪರಿಣಾಮವು ಬಹಳ ಭಿನ್ನವಾಗ ಬಹುದು. ಮೊದಲನೆ ಪ್ರಸಕ್ತಿಯಲ್ಲಿ, ಕೂಲಿಯನ್ನು ತಕ್ಕೊಂಡು ವ್ಯಯ ಮಾಡುವ ಕೂಲಿಕಾರರು ಹೊಸ ಸಂಪತ್ತನ್ನು ಹುಟ್ಟಿಸುತ್ತಾರೆ. ಮತ್ತು ಈ ಹೊಸ ಸಂಪತ್ತಿನೊಳಗಿಂದ ಮತ್ತೂ ಬಂಡವಲ ಉಳಿಯುವದರಿಂದ ದೇಶದೊಳಗಿನ ಬಂಡವಲದ ಮೊಬಲಗು ಹೆಚ್ಚಾಗ ಬಹುದು. ಎರಡನೆ ಪ್ರಸಕ್ತಿಯಲ್ಲಿ, ಕೂಲಿಕಾರರಿಗೆ ಆ ಕೆಲಸದಲ್ಲಿ ಕೂಲಿಯು ದೊರೆಯುವ ವರೆಗೆ ಮಾತ್ರ ಹಿತವಾಗುತ್ತದೆ, ಮುಂದೆ ಆಗುವದಿಲ್ಲ. ಯಾಕಂದರೆ, ಅವರ ಶ್ರಮದಿಂದ ಹೊಸ ಸಂಪತ್ತು ಹುಟ್ಟುವದಿಲ್ಲ. ಆ ಕಾರಣ, ಅವರ ಶ್ರಮದಿಂದ ದೇಶದೊಳಗಿನ ಬಂಡವಲವು ವೃದ್ಧಿಯಾಗುವದಿಲ್ಲ.

ಬಂಡವಲವು ಸಂಗ್ರಹ ಮೂಲಕವಾಗಿದೆ.— ಬಂಡವಲವು ಮಿತವ್ಯಯ ಮಾಡಿ ಸಂಪತ್ತನ್ನು ಸಂಚಯ ಮಾಡುವದರ ಫಲವಾಗಿದೆಯೇ ಹೊರ್ತು, ಗಳಿಸಿದ ಯಾವತ್ತು ಸಂಪತ್ತನ್ನು ವೆಚ್ಚ ಮಾಡುವದರ ಫಲವಲ್ಲವೆಂಬದು ಮೇಲಿನ ಬರಹದ ಮೇಲಿಂದ ಸ್ಪಷ್ಟವಾಗಿ ತಿಳಿದಿರ ಬಹುದು. ಮಿತವ್ಯಯ ಮಾಡಿ ಉಳಿಸಿದ ಸಂಪತ್ತು ಮುಂದೆ ನಡಿಯುವ ಉದ್ಯೋಗಗಳಿಗೆ ಬಂಡವಲವಾಗುತ್ತದೆ. ಆದ್ದರಿಂದ, ಮಿತವ್ಯಯ ಮಾಡುವವರು ದೇಶದೊಳಗಿನ ಬಂಡವಲವನ್ನು ಹೆಚ್ಚಿಸುವ ಕಾರಣ ಅವರಿಂದ ದೇಶಕ್ಕೆ ಹಿತವಾಗುತ್ತದೆ. ತಮ್ಮ ಸಂಪತ್ತನ್ನು ತಾಳಗೆಟ್ಟು ವೆಚ್ಚ ಮಾಡಿ ಹಾಳು ಮಾಡುವ ದುಂದುಗಾರರು ದೇಶದ ಬಂಡವಲವನ್ನು ಕಡಿಮೆ ಮಾಡುತ್ತಾರಾದ್ದರಿಂದ, ಇವರಿಂದ ದೇಶಕ್ಕೆ ನಿಜವಾಗಿ ಹಾನಿಯುಂಟಾಗುತ್ತದೆ. ಬಂಡವಲದ ವಿಷಯದಲ್ಲಿ ತಪ್ಪು ತಿಳುವಳಿಕೆಗಳುಳ್ಳ ಜನರು ದುಂದುಗಾರರ ದುಂದುತನವು ವ್ಯಾಪಾರಕ್ಕೆ ಒಳ್ಳೇದೆಂಬ ಮರುಳತನದಿಂದ ಇಂಥವರನ್ನು ದೂಷಿಸದೆ, ಉದಾರರೆಂದು ಕೊಂಡಾಡುವರು; ತಮ್ಮ ಸಂಪತ್ತನ್ನು ಮಿತದಿಂದ ಖರ್ಚು ಮಾಡುವವರನ್ನು ಜೀನರೆಂದು ನಿಂದಿಸುವರು. ಒಂದು ಉತ್ಕೃಷ್ಟವಾದ ಪಕ್ವಾನ್ನವನ್ನು ಮಾಡುವದಕ್ಕೆ ೩೫ ರೂಪಾಯಿಗಳು ವೆಚ್ಚವಾದರೆ, ಈ ೩೫ ರೂಪಾಯಿಗಳಿಂದ ತೋರಿಸಲ್ಪಡುವ ಸಂಪತ್ತು ವ್ಯರ್ಥ ನಷ್ಟವಾದಂತಾಯಿತು. ಕನಿಷ್ಟ ಪಕ್ಷಕ್ಕೆ, ಈ ಸಂಪತ್ತಿನಿಂದ ಆಗುವ ಫಲವು ಬಹಳ ಕ್ಷುಲ್ಲಕವಾದದ್ದೆಂಬುವದಕ್ಕೆ ಏನು ಸಂದೇಹವಿಲ್ಲ. ಯಾಕಂದರೆ, ಅದರಿಂದ ಕೆಲವು ಕ್ಷಣಗಳ ವರೆಗೆ ಒಬ್ಬಿಬ್ಬರ ಬಾಯಿಗೆ ಮಧುರ ರುಚಿ ಹತ್ತುವದು ಹೊರ್ತಾಗಿ, ಬೇರೆ ಏನು ಫಲವಾಗುವದಿಲ್ಲ. ಆದರೆ ಇದೇ ಸಂಪತ್ತನ್ನು ಕಬ್ಬಿಣವನ್ನು ಕರಗಿಸುವ ಉದ್ಯೋಗದಲ್ಲಾಗಲಿ, ದೀಪದ ಎಣ್ಣೆಯನ್ನು ತೆಗೆಯುವ ಉದ್ಯೋಗದಲ್ಲಾಗಲಿ ವೆಚ್ಚ ಮಾಡಿದ್ದಾದರೆ, ಅದರಿಂದ ಬಹಳ ಹೆಚ್ಚು ಉತ್ಪಾದಕ ಫಲವಾಗುತ್ತಿತ್ತು.

ಅನುತ್ಪಾದಕ ವ್ಯಯವು ದೇಶದ ಬಂಡವಲವನ್ನು ಕಡಿಮೆ ಮಾಡುತ್ತದೆ, ಇಲ್ಲವೆ ಬಂಡವಲದ ಬೆಳೆಯುವಿಕೆಗೆ ಅಡ್ಡಿಯನ್ನಾದರೂ ಮಾಡುತ್ತದೆ. ಆದಕಾರಣ, ಕೂಲಿಕಾರರಿಗೆ ಸಂಪತ್ತಿನ ಉತ್ಪಾದಕ ವ್ಯಯದಿಂದ ಆಗುವಷ್ಟು ಕಲ್ಯಾಣವು ದಾನಧರ್ಮಗಳಿಂದ ಆಗುವದಿಲ್ಲ. ಯಾಕಂದರೆ, ಸಂಪದುತ್ಪಾದಕ ವ್ಯಯದಿಂದ ದೇಶದ ಬಂಡವಲವು ವೃದ್ಧಿಯಾಗುವದರಿಂದ ಕೂಲಿಕಾರರಿಗೆ ದೊರಿಯತಕ್ಕ ಕೂಲಿಯ ಮೊಬಲಗು ವೃದ್ಧಿಯಾಗುತ್ತದೆ. ಆದ್ದರಿಂದ, ಸಶಕ್ತರಾದ ಭಿಕ್ಷೆಗಾರರಿಗೆ ಭಿಕ್ಷೆ ಹಾಕೋಣ, ದಾನಧರ್ಮಗಳನ್ನು ಮಾಡೋಣ ಇವುಗಳಿಂದ ಆಗುವ ಹಿತಕ್ಕಿಂತಲೂ, ಅಂಥವರಿಂದ ಉತ್ಪಾದಕ ಕೆಲಸ ಮಾಡಿಸಿ ಅವರಿಗೆ ಕೂ

-*

ಲಿಯನ್ನು ಕೊಡುವದರಿಂದ ಹೆಚ್ಚು ಹಿತವಾಗುವದು. ಏನೂ ಕೆಲಸ ಮಾಡದಂಥ ಸಶಕ್ತರಾದ ಭಿಕ್ಷುಕರಿಗೆ ದಾನಮಾಡುವವರು ಅಷ್ಟರ ಮಟ್ಟಿಗೆ ದೇಶದ ಬಂಡವಲ ವನ್ನು ಕಡಿಮೆ ಮಾಡುತ್ತಾರೆಂದು ಹೇಳ ಬಹುದು.

**ಬಂಡವಲವು ಸಂಗ್ರಹದ ಫಲವಾದರೂ ಬಂಡವಲದ ವ್ಯಯವಾಗದೆ ಅದರಿಂದ ಆಗ ತಕ್ಕ ಕಾರ್ಯಗಳು ಆಗುವದಿಲ್ಲ.**—ಬಂಡವಲವು ಸಂಗ್ರಹ ದಿಂದ ಹುಟ್ಟುವಂಥಾದ್ದಾದರೂ, ವೆಚ್ಚಮಾಡದೆ ಹಾಗೇ ಕೂಡಿಸಿಟ್ಟ ಸಂಪತ್ತು ದೇಶದ ಬಂಡವಲವನ್ನು ಬೆಳಿಸುವದೆಂದು ಎಷ್ಟು ಮಾತ್ರವೂ ತಿಳಿಯ ಕೂಡದು. ಬಂಡವಲದಿಂದ ಆಗ ತಕ್ಕ ಕಾರ್ಯಗಳು ಆಗ ಬೇಕಾದರೆ, ಬಂಡವಲವು ಅವಶ್ಯ ವಾಗಿ ವೆಚ್ಚವಾಗ ಬೇಕಾಗುತ್ತದೆ. ಹೊಸ ಸಂಪತ್ತನ್ನು ಹುಟ್ಟಿಸುವದಕ್ಕೆ ಸಹಾಯ ಮಾಡುವದಕ್ಕಾಗಿ ತೆಗೆದಿಟ್ಟ ಸಂಪತ್ತಿನ ಭಾಗವೇ ಬಂಡವಲವಾಗಿದೆಂಬುವದನ್ನು ಲಕ್ಷ್ಯದಲ್ಲಿ ಇಡ ಬೇಕು. ಕೂಲಿಕಾರರ ಚರಿತಾರ್ಥ ಸಾಗಿಸೋಣ ಮತ್ತು ಉದ್ಯೋಗಕ್ಕೆ ಬೇಕಾಗುವ ಮೂಲದ್ರವ್ಯಗಳು, ಮನೆ, ಸಂರಕ್ಷಣ ಸಾಧನ, ಆಯುಧಗಳು, ಯಂತ್ರಗಳು ಮೊದಲಾದವುಗಳನ್ನು ಪೂರೈಸೋಣ ಇದೇ ಬಂಡ ವಲದಿಂದ ಸಂಪದುತ್ಪಾದನಕ್ಕೆ ಆಗತಕ್ಕ ಸಹಾಯವು. ಇದರ ಮೇಲಿಂದ, ಬಂ ಡವಲದಿಂದ ಆಗ ತಕ್ಕ ಕಾರ್ಯಗಳು ಆಗುವಾಗ "ಎಲ್ಲ "ಬಂಡವಲವಾಗಲಿ, ಬಂಡವಲದ ಕೆಲವೊಂದು ಭಾಗವಾಗಲಿ ನಷ್ಟವಾಗುತ್ತದೆಂಬದು ಸಹಜವಾಗಿ ತಿಳಿಯುವದು. ಕೂಲಿಕಾರರ ಹೊಟ್ಟೆಯನ್ನು ಸಾಗಿಸುವಂಥ ಅನ್ನವಂತೂ ತಾತ್ಕಾ ಲಕ್ಕೆ ನಷ್ಟವಾಗುತ್ತದೆ. ಕೆಲಸಕ್ಕೆ ಬೇಕಾಗುವ ಮೂಲದ್ರವ್ಯಗಳೂ, ಇಮಾರ ತುಗಳೂ, ಯಂತ್ರಗಳೂ, ಆಯುಧಗಳೂ ಕ್ರಮೇಣ ನಷ್ಟವಾಗುತ್ತವೆ, ಇಲ್ಲವೆ ಸವಿದು ಕೆಲಸಕ್ಕೆ ಬಾರದಂತೆ ಆಗುತ್ತವೆ. ಆದರೆ ಕೂಲಿಕಾರರ ಪೋಷಣವನ್ನು ಮಾಡುವ ಅನ್ನದಿಂದ ಆಗುವ ಕಾರ್ಯಗಳೂ, ಇಮಾರತುಗಳು, ಯಂತ್ರಗಳು, ಆಯುಧಗಳು ಮೊದಲಾದವುಗಳಿಂದ ಆಗುವ ಕಾರ್ಯಗಳೂ ಒಂದಕ್ಕೊಂದು ಹೋಲುವದಿಲ್ಲ; ಇವೆರಡೂ ಕೇವಲ ಭಿನ್ನ ಸ್ವರೂಪವುಳ್ಳವಾಗಿವೆ. ಈ ಭೇದವು ಬಹಳ ಮಹತ್ವವುಳ್ಳದ್ದು.

**ಚರಬಂಡವಲ.**—ಯಾವದೊಂದು ಉದ್ಯೋಗದಲ್ಲಿದ್ದ ಬಂಡವಲದ ಕೆಲ ವೊಂದು ಭಾಗವು ತನ್ನ ಕಾರ್ಯವನ್ನು ಒಂದೇ ಸಾರಿ ಮಾಡಿ ನಷ್ಟವಾಗುತ್ತದೆ. ಒಮ್ಮೆ ಉಪಯೋಗಿಸಿದನಂತರ ಈ ಭಾಗವು ತಿರುಗಿ ಬಂಡವಲದಂತೆ ಉಪಯೋ ಗಿಸುವದಕ್ಕೆ ಬರುವದಿಲ್ಲ. ಕೂಲಿಯವರ ಅನ್ನ ಹಾಗೂ ಯಂತ್ರಗಳಲ್ಲಿ ಸುಡುವ ಉರುವಲ ಮುಂತಾದವುಗಳನ್ನು, ಬಂಡವಲದ ಈ ಭಾಗವು ಪೂರೈಸುತ್ತದೆ.

ಇಂಥ ಬಂಡವಲಕ್ಕೆ ಚರಬಂಡವಲವೆಂಬ ಹೆಸರು. ಮಿಲ್ ಧೊರೆಯು ಕೊಟ್ಟ ಚರಬಂಡವಲದ ವ್ಯಾಖ್ಯೆಯು ಯಾವದಂದರೆ,—"ಸಂಪದುತ್ಪಾದನದ ಉದ್ಯೋಗದಲ್ಲಿ ಒಂದೇ ಬಾರಿ ಉಪಯೋಗಿಸಲ್ಪಡಲಾಗಿ, ಯಾವ ಬಂಡವಲದಿಂದ ಆಗ ತಕ್ಕ ಯಾವತ್ತೂ ಕಾರ್ಯವು ಮುಗಿದು ಹೋಗುತ್ತದೋ ಆ ಬಂಡವಲಕ್ಕೆ ಚರಬಂಡವಲವೆಂಬ ಹೆಸರು." (ಅರ್ಥಶಾಸ್ತ್ರದ ತತ್ವಗಳು ಭಾಗ ೧. ಪುಟ ೧೧೨.)

**ಸ್ಥಿರಬಂಡವಲ.**—ಶ್ರಮಕರ್ತರಿಗೆ ಅನ್ನವ ಕೊಡುವಲ್ಲಿಯೂ, ಮೂಲ ದ್ರವ್ಯಗಳನ್ನೂ ಉರುವಲವನ್ನೂ ಪೂರೈಸುವಲ್ಲಿಯೂ ವ್ಯಯವಾಗುವ ಬಂಡವಲ ವಲ್ಲದೆ, ಬಹುತರ ಪ್ರತಿಯೊಂದು ಉದ್ಯೋಗದಲ್ಲಿ ಇದಕ್ಕೂ ಬಹಳ ಹೆಚ್ಚು ಸ್ಥಿರವಾದದ್ದೊಂದು ಬಂಡವಲದ ದೊಡ್ಡ ಭಾಗವಿರುವದು. ಕಾರಖಾನೆಗಳ ಇಮಾರತುಗಳು, ಯಂತ್ರಗಳು ಮೊದಲಾದವು ಈ ತರದ ಬಂಡವಲವಾಗಿವೆ. ಇವು ತಮ್ಮ ತಮ್ಮ ಕೆಲಸವನ್ನು ಒಂದೇ ಸಾರಿ ಮಾಡಿ ನಷ್ಟ ಹೊಂದುವದಿಲ್ಲ. ನೆಲವನ್ನು ಪೊಳ್ಳು ಮಾಡುವ ಕೆಲಸವನ್ನು ನೇಗಿಲವು ಒಂದೇ ಬಾರಿ ಮಾಡಿ ನಷ್ಟವಾಗದೆ, ಅನೇಕ ಬಾರಿ ತನ್ನ ಕೆಲಸವನ್ನು ಮಾಡಿ ನಷ್ಟವಾಗುವದು. ಕೂಲಿಕಾರರ ಮತ್ತು ಅವರು ಕೆಲಸ ಮಾಡ ತಕ್ಕ ಮೂಲದ್ರವ್ಯಗಳ ಸಂರಕ್ಷಣಕ್ಕಾಗಿ ಕಟ್ಟಿದ ಇಮಾರತುಗಳು ಇದಕ್ಕೂ ಹೆಚ್ಚು ಶಾಶ್ವತ್ವವಾಗಿರುವವು. ಈ ಮೇರೆಗೆ, ಒಂದೇ ಸಾರಿ ಉಪಯೋಗಿಸುವದರಿಂದ ನಾಶ ಹೊಂದದೆ, ಬಹಳ ದಿವಸಗಳ ವರೆಗೆ ಬಾಳು ವಂಥ ಬಂಡವಲವು ಸ್ಥಿರಬಂಡವಲವೆಂದೆನ್ನಿಸುತ್ತದೆ.

**ಚರಬಂಡವಲದ ಯಾವತ್ತು ಪ್ರತಿಫಲವು ತಾತ್ಕಾಲಕ್ಕೆ ದೊರಿಯುತ್ತದೆ; ಸ್ಥಿರಬಂಡವಲದ ಪ್ರತಿಫಲವು ಈ ಬಂಡವಲವು ಉಪಯೋಗಿಸಲ್ಪಡುವ ಸಮಗ್ರ ಅವಧಿಯೊಳಗೆಲ್ಲ ಕೂಡಿ ಬರುತ್ತದೆ.**—ಚರಬಂಡವಲವು ನಾಶವಾದ ಕೂಡ್ಲೆ, ಆ ಬಂಡವಲದ ಬೆಲೆ ಹಾಗೂ ಅದರ ಮೇಲಿನ ಲಾಭ ಇವುಗಳಿಗೆ ಸರಿಯಾದ ಬೆಲೆಯುಳ್ಳ ಹೊಸ ಸಂಪತ್ತು ಹುಟ್ಟುತ್ತದೆ. ಆದರೆ ಸ್ಥಿರಬಂಡವಲದ ಮಾತು ಬೇರೆ. ಈ ಬಗೆಯ ಬಂಡವಲವು ಸವಿದು ಇಲ್ಲವೆ ಹಳೇದಾಗಿ ನಾಶ ಹೊಂದುತ್ತಾ ನಡೆದಂತೆ, ಆಯಾ ಕಾಲದಲ್ಲಿ ಅದರಿಂದ ಹುಟ್ಟಿದ ಉತ್ಪನ್ನದ ಬೆಲೆಯು ಆಯಾ ಕಾಲದಲ್ಲಿ ನಾಶವಾದ ಭಾಗದ ಹಾಗೂ ಇಡೀ ಬಂಡವಲದ ಮೇಲಿನ ಲಾಭದ ಬೆಲೆಗೆ ಸರಿಯಾಗಿರುವದು. ಆದ್ದರಿಂದ, ಒಕ್ಕಲಿಗನು ತನ್ನ ಪೈರಿನ ಮಾರಾಟದಿಂದ, ತಾನು ಕೂಲಿಕಾರರಿಗೆ ಕೂಲಿಯನ್ನು ಕೊಡುವದಕ್ಕೂ ಬೀಜಕ್ಕೂ ವೆಚ್ಚ ಮಾಡಿದ ಯಾವತ್ತು ಬಂಡವಲದ ಪ್ರತಿಫಲ ದೊರಿಯ

ಬೇಕೆಂದು ಬಯಸುವನು. ಆದರೆ ಅವನು ನೇಗಿಲವನ್ನಾಗಲಿ ಎತ್ತನ್ನಾಗಲಿ ಕೊಂಡರೆ, ಇವುಗಳನ್ನು ಅನೇಕ ವರ್ಷಗಳ ವರೆಗೆ ಉಪಯೋಗಿಸುವನು. ಆದ್ದರಿಂದ, ಇವುಗಳಿಗಾಗಿ ವೆಚ್ಚವಾದ ಯಾವತ್ತು ಬಂಡವಲದ ಫಲವು ಒಂದೇ ವರ್ಷದ ಪೈರಿನೊಳಗಿಂದ ಹುಟ್ಟದೆ, ಇವುಗಳು ಉಪಯೋಗಿಸಲ್ಪಡುವ ಯಾವತ್ತೂ ಅವಧಿಯಲ್ಲಿ ಕೂಡಿ ಹುಟ್ಟುವದು.

ಈ ಸಂಗತಿಯ ಮೇಲಿಂದ, ಚರಬಂಡವಲವನ್ನು ಕಡಿಮೆ ಮಾಡಿ ಅದಕ್ಕೆ ಬದಲಾಗಿ ಸ್ಥಿರಬಂಡವಲವನ್ನು ಉಪಯೋಗಿಸುವದರಿಂದ ಕೂಲಿಕಾರರಿಗೆ ಕೆಲವು ಕಾಲ ಪರ್ಯಂತರ ಹಾನಿಯಾಗುವ ಕಾರಣವು ವ್ಯಕ್ತವಾಗುತ್ತದೆ. ಕೂಲಿಯ ಮೊಬಲಗು, ಅಂದರೆ ಕೂಲಿಕಾರರಿಗೆ ದೊರಿಯುವ ಕೂಲಿಯು ಚರಬಂಡವಲವಾಗಿದೆಂಬುವದನ್ನು ಹಿಂದೆ ಹೇಳಿದ್ದೇವಷ್ಟೇ. ಆದ್ದರಿಂದ ಯಾವ ಕಾರಣದಿಂದಾದರೂ ಚರಬಂಡವಲ ಕಡಿಮೆಯಾದರೆ, ಅಷ್ಟರ ಮಟ್ಟಿಗೆ ಕೂಲಿಯು ಕಡಿಮೆಯಾಗುವದು ಸಹಜವಾಗಿದೆ. ಈ ಮೇರೆಗೆ ಒಬ್ಬ ಕಾರಖಾನೆಯವನು ತನ್ನ ಕಾರಖಾನೆಯೊಳಗಿಂದ ೧೦೦೦ ರೂಪಾಯಿ ಬಂಡವಲ ತೆಗೆದು, ಆ ಹಣದಿಂದ ಯಂತ್ರಗಳನ್ನು ಕೊಂಡರೆ ಎಷ್ಟೋ ಜನ ಕೂಲಿಕಾರರು ಹೋರೆಗೇಡಿಯಾಗುತ್ತಾರೆ. ಹಾಗೂ ಈ ಹೋರೆಗೇಡಿಯಾದವರು ಹೊಸ ಹೋರೆಯನ್ನು ಹಿಡಿಯಲಿಕ್ಕೆ ಹವಣಿಸುವದರಿಂದ ಕೂಲಿಕಾರರೊಳಗೆ ನಡಿಯುವ ಮೇಲಾಟವು ಹೆಚ್ಚಾಗಿ, ಅದರಿಂದ ಕೂಲಿಯ ದರವು ಅವಶ್ಯವಾಗಿ ಇಳಿಯುವದು.

ಆದರೆ ಚರಬಂಡವಲ ಕಡಿಮೆಯಾಗಿ ಅದಕ್ಕೆ ಬದಲಾಗಿ ಸ್ಥಿರಬಂಡವಲ ಉಂಟಾಗುವದರಿಂದ ಕೂಲಿಕಾರರಿಗೆ ಆಗುವ ನಷ್ಟವು ಬಹುತರ ಸ್ವಲ್ಪ ಕಾಲ ಇರುತ್ತದೆ. ಅವರಿಗೆ ಬಹಳ ದಿವಸ ವಿಪತ್ತನ್ನು ಅನುಭೋಗಿಸ ಬೇಕಾಗುವದಿಲ್ಲ. ಯಾಕಂದರೆ, ಯಂತ್ರಗಳನ್ನು ಉಪಯೋಗಿಸುವದರಿಂದ ಶ್ರಮದ ಉತ್ಪಾದಕಶಕ್ತಿಯು ಬೆಳೆಯುತ್ತದೆ. ಮತ್ತು ಅದರಿಂದ ಬಂಡವಲವು ತೀವ್ರ ವೃದ್ಧಿಯಾಗಿ, ಕೂಲಿಕಾರರಿಗೆ ದೊರಿಯ ತಕ್ಕ ಸಂಬಳದ ಮೊಬಲಗು ಹೆಚ್ಚುತ್ತದೆ. ಈ ವಿಷಯದಲ್ಲಿ ಒಂದು ದೃಷ್ಟಾಂತವನ್ನು ಕೊಡ ಬಹುದು. ಅದು ಯಾವದಂದರೆ, ಇಂಗ್ಲಂಡದಲ್ಲಿ ಹೊಗೆಬಂಡಿಗಳ ಮಾರ್ಗಗಳನ್ನು ಮಾಡಿದಾಗ ಈ ಕೆಲಸಕ್ಕೆ ಬಹಳ ಬಂಡವಲ ಬೇಕಾಯಿತು. ಈ ಬಂಡವಲದ ಕೆಲ ಭಾಗವು ದೇಶದೊಳಗಿನ ಚರಬಂಡವಲದೊಳಗಿಂದ ಬಂದಿರ ಬಹುದು. ಆದ್ದರಿಂದ ಸಂಬಳದ ಮೊಬಲಗು ಕೆಲವು ಕಾಲ ಪರ್ಯಂತರ ಕಡಿಮೆಯಾಗಿ, ಕೂಲಿಯವರಿಗೆ ನಷ್ಟವಾಯಿತು. ಆದರೆ ಇಂಗ್ಲಂಡದಲ್ಲಿ ಲೋಹಮಾರ್ಗಗಳು ಆದಂದಿನಿಂದ ಆ

ದೇಶದ ಸಂಪತ್ತು ಅದ್ಭುತವಾಗಿ ಬೆಳೆದು, ಅದರಿಂದ ಕೂಲಿಕಾರರಿಗೆ ಬಹಳ ಹೆಚ್ಚು ಕೆಲಸ ಉಂಟಾದ ಕಾರಣ ಸಂಬಳದ ದರವು ಏರಿರುವದು. ಹಾಗೂ ಕೂಲಿಕಾರರಿಗೆ ಕೆಲವು ಕಾಲದ ವರೆಗೆ ಆದ ನಷ್ಟಕ್ಕಿಂತಲೂ ಎಷ್ಟೋ ಪಾಲು ಹೆಚ್ಚು ಲಾಭ ಆಗ ಹತ್ತಿದೆ.

**ಸಂಗ್ರಹ ಮಾಡ ಬೇಕೆಂಬ ಬಯಕೆಯನ್ನು ಹುಟ್ಟಿಸುವಂಥ ಉದ್ದೇಶಗಳು ಎರಡು.** - ಬಂಡವಲವು ಸಂಗ್ರಹಮೂಲಕವಾಗಿದೆಂದು ಹಿಂದೆ ಹೇಳಿದ್ದೇವಷ್ಟೇ. ಇದರ ಮೇಲಿಂದ, ಹೆಚ್ಚು ಬಂಡವಲ ಕೂಡ ಬೇಕಾದರೆ ಹೆಚ್ಚು ಸಂಗ್ರಹವಾಗ ಬೇಕೆಂಬುವದು ಸ್ಪಷ್ಟವದೆ. ಬೇರೆ ಬೇರೆ ದೇಶಗಳಲ್ಲಿಯೂ, ಬೇರೆ ಬೇರೆ ಕಾಲಗಳಲ್ಲಿಯೂ, ಸಂಗ್ರಹ ಮಾಡ ಬೇಕೆಂಬ ಬುದ್ಧಿಯು ಬಹಳ ಹೆಚ್ಚು ಕಡಿಮೆಯಾಗಿ, ಬಲವತ್ತರವಾಗಿರುವದು. ಈ ಅಭಿಲಾಷೆಯು ಬಹುತರವಾಗಿ ಎರಡು ಉದ್ದೇಶಗಳ ಫಲವಾಗಿರುತ್ತದೆ. ಅವು ಯಾವವಂದರೆ, (೧) ದೀರ್ಘದೃಷ್ಟಿ, ಮತ್ತು (೨) ಸಂಪತ್ತನ್ನು ವ್ಯಾಪಾರ ಉದ್ಯೋಗಗಳಲ್ಲಿ ಹಾಕಿ, ಇಲ್ಲವೆ ಠೇವುಗಳನ್ನು ಕೊಂಡು ಲಾಭ ಮಾಡಿಕೊಳ್ಳುವ ಅಪೇಕ್ಷೆ. ಇಂಗ್ಲಂಡದಲ್ಲಿ ಈ ಎರಡೂ ಉದ್ದೇಶಗಳು ಬಹಳ ಪ್ರಬಲವಾಗಿರುವವು. ಅಲ್ಲಿಯ ಜನರೊಳಗೆ ಮುಂದಿನ ಚಿಂತೆಯೂ, ವ್ಯಾಪಾರ ಉದ್ಯೋಗಗಳಿಂದ ಸಂಪತ್ತು ಗಳಿಸಬೇಕೆಂಬ ಹವಣಿಕೆಯೂ ವಿಶೇಷವಾಗಿರುವವು. ಆ ದೇಶದಲ್ಲಿ ಇಂಥ ಸ್ಥಿತಿಯು ಉಂಟಾಗಲಿಕ್ಕೆ, ಅಂಶತಃ ಆ ಜನಾಂಗದವರ ಜಾತಿ ಸ್ವಭಾವ ಹಾಗೂ ರೂಢಿಗಳು ಕಾರಣವಾಗಿರುವವು; ಮತ್ತು ಅಂಶತಃ ಆ ದೇಶದಲ್ಲಿದ್ದ ಆಸ್ತಿ ಜೀವಿತ್ವಗಳ ಭದ್ರತೆಯೂ ಕಾರಣವಾಗಿರುವದು. ಸುಧಾರಿಸದೆ ಇದ್ದ ಕಾಡಜನರೊಳಗೆ ಸಂಗ್ರಹೇಚ್ಛೆಯು ಬಹುತರ ಯಾವಾಗಲೂ ಹಬ್ಬುಗೊಳ್ಳುವದಿಲ್ಲ. ಯಾಕಂದರೆ, ಸುಧಾರಿಸದೆ ಇದ್ದ ಜನರಿಗೆ ಮುಂದಿನ ವಿಚಾರ ಹುಟ್ಟುವಷ್ಟು ಜ್ಞಾನವಿರುವದಿಲ್ಲ. ಇಂಥವರಿಗೆ, ಮುಂದೆ ಆಗುವ ಲಾಭಕ್ಕೋಸ್ಕರ ಪ್ರಕೃತೋಪಭೋಗವನ್ನು ತ್ಯಾಗ ಮಾಡುವಷ್ಟು ಮನಸ್ಸಿನ ನಿಗ್ರಹ ಮಾಡುವ ಶಕ್ತಿಯು ಇರುವದಿಲ್ಲ. ಅವರಿಗೆ ತಾತ್ಕಾಲಿಕ ಫಲವೇ ಸರ್ವಸ್ವವಾಗಿರುವದು; ಭಾವಿಕಾಲವೆಂಬುವದು ಅವರ ಪಾಲಿಗೆ ಶೂನ್ಯವಾಗಿರುವದು. ಅವರು ಯಾವಾಗಲೂ ಈ ಹೊತ್ತಿನ ವಿಚಾರದಲ್ಲಿ ಮುಳುಗಿರುವರೇ ಹೊರ್ತು ನಾಳಿನ ವಿಚಾರವು ಅವರ ಕನಸಿನಲ್ಲಿ ಸಹ ಬರುವದಿಲ್ಲ. ಕೆಲವು ದೇಶಗಳಲ್ಲಿ, ಗಳಿಸಿದ ಆಸ್ತಿಯು ಸುರಕ್ಷಿತವಾಗಿರಲಿಕ್ಕಿಲ್ಲೆಂಬ ಭಯ ಇರುವದರಿಂದಲೂ ಸಂಗ್ರಹ ಮಾಡುವ ಇಚ್ಛೆಗೆ ಅಡ್ಡಿ ಬರುವದು. ರಾಜ್ಯದಾಡಳಿತೆಯು ಚನ್ನಾಗಿ ನೆಲೆಗೊಳ್ಳದ ದೇಶಗಳಲ್ಲಿ ಆಸ್ತಿಯ ಒಡೆಯನಿಗೆ ತನ್ನ ಆಸ್ತಿಯು ತನ್ನ ವಶದಲ್ಲಿ ಉಳಿದು, ತನ್ನ

ಉಪಭೋಗಕ್ಕೆ ಬರುವದೆಂಬ ಭರವಸವಿರುವದಿಲ್ಲ. ಅವನು ಯಾವಾಗಲೂ ತನ್ನ ನೆರೆಹೊರೆಯುವರ ಮತ್ಸರಭಾವಕ್ಕೂ, ಪುಂಡತನಕ್ಕೂ ಗುರಿಯಾಗಿರುವನು. ಅವನ ನೆರೆಹೊರೆಯವರೆಲ್ಲರೂ ಬಹುತರ ಅವನನ್ನು ಹ್ಯಾಗಾದರೂ ಸುಲಿಯುವ ಸಂಧಿಯನ್ನು ನೋಡುತ್ತಿರುವರು.

**ಕಂಪನಿಗಳು ಅಂದರೆ ಸಮೂಹಿಕ ವ್ಯಾಪಾರದ ಸಂಘಗಳು.**— ಬಂಡವಲದ ಸಣ್ಣ ಸಣ್ಣ ರಕಮುಗಳನ್ನು ಬೇರೆ ಬೇರೆಯಾಗಿ ವ್ಯಾಪಾರದಲ್ಲಿ ಹಾಕುವದರಿಂದ ಕೆಲವು ಸಾರಿ ಲಾಭವಾಗುವದಿಲ್ಲ. ಆದರೆ ಇಂಥ ಸಣ್ಣ ಸಣ್ಣ ಬಂಡವಲಗಳನ್ನು ಒತ್ತಟ್ಟಿಗೆ ಕೂಡಿಸಿ, ಒಂದು ದೊಡ್ಡ ಬಂಡವಲ ಮಾಡಿ ವ್ಯಾಪಾರ ನಡಿಸುವದರಿಂದ ಲಾಭವಾಗುವದು. ಈ ಪ್ರಕಾರ ಅನೇಕ ಜನರ ಕಡೆಯಿಂದ ಸಣ್ಣ ಸಣ್ಣ ಬಂಡವಲಗಳನ್ನು ಕೂಡಿಸಿ, ಅವರೆಲ್ಲರ ಹೆಸರಿನಿಂದ ವ್ಯಾಪಾರ ನಡಿಸುವಂಥ ಸಂಘಕ್ಕೆ ಕಂಪನಿ, ಅಥವಾ ಸಮೂಹಿಕ ವ್ಯಾಪಾರಸಂಘ*ವೆನ್ನುವರು. ಈ ಬಗೆಯ ಸಣ್ಣ ಸಣ್ಣ ಬಂಡವಲಗಳನ್ನು ಇಡುವ ಸಾಧನಗಳು ಇಂಗ್ಲಂಡ ಮೊದಲ್ಾದ ದೇಶಗಳಲ್ಲಿ ಬಹಳವಾಗಿರುವದರಿಂದ ಆ ದೇಶದವರ ಸಂಗ್ರಹೇಚ್ಛೆಯು ಮತ್ತಿಷ್ಟು ಬಲವಾಗಿದೆ. ಉದಾಹರಣಾರ್ಥವಾಗಿ, ಯಾವನೊಬ್ಬ ಉದ್ಯೋಗಸ್ಥನು ೧೦೦ ರೂಪಾಯಿಗಳನ್ನು ಸಂಚಯ ಮಾಡಿದ್ದು, ಅವನಿಗೆ ಆ ರಕಮಿನಿಂದ ತಾನಾಗಿ ಯಾವದೊಂದು ಉದ್ಯೋಗ ನಡಿಸುವ ಅನುಕೂಲತೆ, ಇಲ್ಲವೆ ಅಭಿಲಾಷೆ ಇಲ್ಲದಿದ್ದರೆ, ಅವನು ತನ್ನ ಹಣವನ್ನು ಯಾವದಾದರೊಂದು ವ್ಯಾಪಾರ ಸಂಘದಲ್ಲಿ ಇಡುತ್ತಾನೆ. ಇಡಗಂಟುಗಳನ್ನು ಇಡುವದಕ್ಕೆ ಇಂಥ ಸಂಘಗಳು ಇಲ್ಲದಿದ್ದರೆ, ಸಣ್ಣ ಪುಟ್ಟ ಬಂಡವಲಗಳೆಲ್ಲ ನಿರರ್ಥಕವಾಗಿ ನೆಲ ಹಿಡಿದುಕೊಂಡು ಕೂಡ್ರುವವು. ಈ ಮೇರಿಗೆ, ವ್ಯಾಪಾರಸಂಘಗಳಿಂದ ದೇಶದೊಳಗೆ ಬಂಡವಲವಾಗಿ ಉಪಯೋಗಿಸಲ್ಪಡುವ ಸಂಪತ್ತು ಹೆಚ್ಚಾಗುವದರಿಂದ ಇಂಥ ಸಂಘಗಳು ದೇಶಕ್ಕೆ ಬಹಳ ಹಿತಕರವಾಗಿರುವವೆಂಬದು ಸ್ಪಷ್ಟವಾಗಿದೆ.

ಆದರೆ, ಇಂಥ ಸಂಘಗಳು ಉದಯಕ್ಕೆ ಬರಬೇಕಾದರೆ, ದೇಶದೊಳಗೆ ಆಸ್ತಿಯ ಸುರಕ್ಷತೆಯ ವಿಷಯವಾಗಿ ಜನರೊಳಗೆ ಭರವಸವಿರುವದು ಅತ್ಯಾವಶ್ಯಕವಾಗಿದೆ. ಇಟ್ಟ ಗಂಟು ಸಂಘಗಳ ಅಧ್ಯಕ್ಷರೂ, ವ್ಯವಸ್ಥಾಪಕರೂ ನುಂಗುವರೆಂಬ ಭಯವು ಜನರ ಮನಸ್ಸಿನಲ್ಲಿ ಹೊಳೆಯುವ ವರೆಗೆ ವ್ಯಾಪಾರದ ಸಂಘಗಳು ಎಂದಿಗೂ ಅಭ್ಯುದಯ ಹೊಂದವು.

---

* ಇಂಥ ಸಂಘಗಳಿಗೆ ಸಂಸ್ಕೃತ ಭಾಷೆಯಲ್ಲಿ ಮನು ಮೊದಲಾದವರ ಕಟ್ಟಳೆಗಳಲ್ಲಿ ಸಂಭೂಯ ಸಮುತ್ಥಾನವೆಂಬ ಹೆಸರುಂಟು.

**ಬಂಡವಲದ ಮಿತಿಮಿಾರಿದ ಸಂಚಯ.**—ಕೆಲವರು ಬಂಡವಲದ ಸಂಗ್ರಹಕ್ಕೆ ಅಡ್ಡಿ ಮಾಡುವದರಿಂದ ಏನೂ ಕೇಡಿಲ್ಲವೆಂದು ಭಾವಿಸುವರು. ಯಾಕಂದರೆ ಇವರು ತರ್ಕಿಸುವದೇನಂದರೆ, ಮೇಲೆ ಹೇಳಿದ ರೀತಿಯಿಂದಲೂ ಶ್ರೀಮಂತರ ದುಂದುತನದಿಂದಲೂ ಬಂಡವಲವು ಕಡಿಮೆಯಾಗದಿದ್ದರೆ, ಬಂಡವಲವು ಮಿತಿಮಿಾರಿ ಸಂಚಯವಾಗಿ ಅದನ್ನು ಉಪಯೋಗಿಸುವದಕ್ಕೆ ಉದ್ಯೋಗಗಳಿಲ್ಲದೆ ಹೋಗುವವು. ಆದರೆ ಬಂಡವಲದ ಸ್ವರೂಪವನ್ನು ಚನ್ನಾಗಿ ಲಕ್ಷ್ಯದಲ್ಲಿ ಇಟ್ಟುಕೊಂಡಿದ್ದಾದರೆ, ಬಂಡವಲದ ಅಭಿವೃದ್ಧಿಯಿಂದ ಏನೂ ಕೇಡಾಗಲರಿಯದೆಂಬದು ಧ್ಯಾಸಕ್ಕೆ ಬರುವದು. ಹೊಸ ಸಂಪತ್ತನ್ನು ಹುಟ್ಟಿಸುವ ಕೆಲಸಕ್ಕೆ ಬೇಕಾಗುವ ಇಮಾರತುಗಳು, ಸಂರಕ್ಷಣೆಯ ಸಾಧನಗಳು, ಯಂತ್ರಗಳು, ಮೂಲದ್ರವ್ಯಗಳು ಮುಂತಾದವುಗಳನ್ನು ಪೂರೈಸುವದಕ್ಕಾಗಿಯೂ, ಸಂಪದುತ್ಪಾದನದ ಕೆಲಸವು ನಡೆದಿರುವಾಗ ಕೂಲಿಕಾರರ ಹೊಟ್ಟೆಯನ್ನು ಸಾಗಿಸುವದಕ್ಕಾಗಿಯೂ, ಅವರನ್ನು ಸಂರಕ್ಷಿಸುವದಕ್ಕಾಗಿಯೂ ಬೇರೆ ತೆಗೆದಿಟ್ಟ ಸಂಪತ್ತಿನ ಭಾಗವೇ ಬಂಡವಲವಾಗಿರುವದೆಂಬದನ್ನು ಬಾರಿಬಾರಿಗೆ ಹೇಳಿದ್ದೇವೆ. ಆದಕಾರಣ ಬಂಡವಲದ ಪೂರೈಕೆ ಹೆಚ್ಚಾದರೆ, ಅದು ಹೊಸ ಉದ್ಯೋಗಗಳಲ್ಲಿ ತೊಡಗುವದು, ಇಲ್ಲವೆ ಮೊದಲು ನಡಿಯುತ್ತಿದ್ದ ಉದ್ಯೋಗಗಳಲ್ಲಿ ಸೇರುವದು. ಹ್ಯಾಗಾದರೂ, ಚರಬಂಡವಲವು ಬೆಳೆಯುವದರಿಂದ ಸಂಬಳದ ಮೊಬಲಗು ಹೆಚ್ಚುವದು. ಸಂಬಳದ ಮೊಬಲಗು ಹೆಚ್ಚಿದ ಪ್ರಮಾಣದಿಂದ ಕೂಲಿಕಾರರ ಸಂಖ್ಯೆ ಬೆಳೆಯದೆ ಹೋದಲ್ಲಿ ಸಂಬಳದ ದರ ಏರುವದು. ಅದರಿಂದ ದುಡಿದು ಹೊಟ್ಟೆ ತುಂಬಿಸಿಕೊಳ್ಳುವ ಬಡ ಜನರ ಸ್ಥಿತಿಯು ಸುಧಾರಿಸುವದು.

ಬಂಡವಲವನ್ನು ವೃದ್ಧಿಪಡಿಸುವಂಥ ಯಾವತ್ತು ಸಂಗತಿಗಳಿಂದ ಬಡ ಜನರ ಸ್ಥಿತಿಗತಿಯು ನೆಟ್ಟಗಾಗುವದಕ್ಕೆ ಬಹಳ ಸಹಾಯವಾಗುತ್ತದೆಂಬದು ಈ ವಿವರಣೆಯಿಂದ ಸ್ಪಷ್ಟವಾಗಿ ಕಾಣಿಸುತ್ತದೆ. ಈ ಸಂಗತಿಯು ಬಹು ಗೌರವವುಳ್ಳದ್ದು. ಯಾಕಂದರೆ, ಇದರಿಂದ ಸಿದ್ಧವಾಗುವದೇನಂದರೆ, ನಿಜವಾದ ಸ್ವಹಿತವನ್ನೂ ಪರಹಿತವನ್ನೂ ಸಾಧಿಸುವದಕ್ಕೆ ಬಂಡವಲವುಳ್ಳ ಸಾವುಕಾರರೇ ಸಮರ್ಥರು. ಇಂಥ ಹಿತವು ಸಂಪತ್ತನ್ನು ಹಾಳು ಮಾಡುವ ದುಂದುಗಾರರಿಂದಲೂ ವಿಚಾರಶೂನ್ಯರಾದ ಧಾರ್ಮಿಕರಿಂದಲೂ ಎಂದಿಗೂ ಆಗುವದಿಲ್ಲ.

ಈ ಮೇರಿಗೆ, ಭೂಮಿ, ಶ್ರಮ, ಮತ್ತು ಬಂಡವಲ ಎಂಬ ಮೂರು ಅಧ್ಯಾಯಗಳಲ್ಲಿ, ಸಂಪದುತ್ಪಾದನದ ವಿಷಯದ ಮುಖ್ಯ ಸಿದ್ಧಾಂತಗಳನ್ನು ಇದುವರೆಗೆ ಹೇಳಿದಂತಾಯಿತು. ಬಂಡವಲದಿಂದ ಆಗುವ ಕಾರ್ಯಗಳ ವಿವರ

ವನ್ನು ತಿಳಿದುಕೊಳ್ಳುವದು ನೂತನಾಭ್ಯಾಸಿಗಳಿಗೆ ಸ್ವಲ್ಪ ಗಡಚು ಕಂಡಿರಬಹುದು. ಆದರೂ, ಈ ಕಠಿಣ ವಿಷಯದೊಳಗಿಂದ ಪಾರಾಗುವದು ಅತ್ಯಾವಶ್ಯಕವಾಗಿದೆ. ಯಾಕಂದರೆ, ಈ ವಿಷಯವನ್ನು ಪರಿಪೂರ್ಣವಾಗಿ ಗ್ರಹಿಸಿ ಕೊಂಡ ಹೊರ್ತು "ಸಂಪತ್ತಿನ ವಿಭಾಗ"ವೆಂಬ ಭಾಗದಲ್ಲಿ ಹೇಳಲಾಗುವ ಇದಕ್ಕೂ ಕಠಿಣವಾದ ಪ್ರಶ್ನಗಳು ಚನ್ನಾಗಿ ತಿಳಿಯುವದು ಅಸಾಧ್ಯವಾಗುವದು.

## ಮೂರನೆ ಅಧ್ಯಾಯದ ಮೇಲಿನ ಪ್ರಶ್ನಗಳು.

## ಬಂಡವಲದ ವಿಷಯದಲ್ಲಿ.

೧. ಬಂಡವಲವೆಂದರೇನು?

೨. ಬಂಡವಲವು ಸಂಪದುತ್ಪಾದನಕ್ಕೆ ಅವಶ್ಯವಾದ ಸಾಧನವೆಂಬುವದನ್ನು ಉದಾಹರಣಗಳನ್ನು ಹೇಳಿ ಸ್ಪಷ್ಟ ಮಾಡಿರಿ.

೩. "ಸಂಬಳದ ಮೊಬಲಗು," ಅಂದರೇನು?

೪. ಬಂಡವಲದಿಂದ ಸಂಪದುತ್ಪಾದನಕ್ಕೆ ಆಗುವ ಬಗೆಬಗೆಯ ಸಹಾಯವನ್ನು ವಿವರಿಸಿರಿ.

೫. ದುಂದುತನದಲ್ಲಿ ವೆಚ್ಚ ಮಾಡಿದ ಸಂಪತ್ತು ಬಂಡವಲವಲ್ಲವೆಂಬುವದನ್ನೂ, ಅದರಿಂದ ಹೊಸ ಸಂಪತ್ತು ಹುಟ್ಟಿಸುವದಕ್ಕೆ ಸಹಾಯವಾಗುವದಿಲ್ಲವೆಂಬುವದನ್ನೂ ಸಿದ್ಧ ಮಾಡಿರಿ.

೬. ಸರಕುಗಳ ಬೇಡಿಕೆಯು ಶ್ರಮದ ಬೇಡಿಕೆಯಲ್ಲವೆಂಬುವದನ್ನು ಉದಾಹರಣಗಳಿಂದ ಸಿದ್ಧ ಮಾಡಿರಿ.

೭ ದುಂದುತನದ ವೆಚ್ಚವು ವ್ಯಾಪಾರಕ್ಕೆ ಒಳ್ಳೇದೆಂದು ತಿಳಿದುಕೊಳ್ಳುವದು ಯಾಕೆ ತಪ್ಪು? ಉದಾಹರಣಗಳನ್ನು ಕೊಡಿರಿ.

೮. ಬಂಡವಲವು ಸಂಗ್ರಹ ಮೂಲಕವಾಗಿದೆ. ಆದರೆ, ಹೂಳಿಟ್ಟ ಸಂಪತ್ತಿನಿಂದ ದೇಶದ ಬಂಡವಲವು ಬೆಳೆಯುವದೋ?

೯. ಸ್ಥಿರ ಮತ್ತು ಚರಬಂಡವಲಗಳಲ್ಲಿ ಏನು ಭೇದವು?

೧೦. ಚರಬಂಡವಲವು ಬಹಳ ಮಾಡಿ ಯಾವ ರೂಪದಿಂದ ಇರುವದು?

೧೧. ಚರಬಂಡವಲವು ಸ್ಥಿರಬಂಡವಲವಾಗುವದರಿಂದ ಕೆಲವು ಸಾರಿ ಕೆಲವು ಕಾಲದ ವರೆಗೆ ಕೂಲಿಕಾರರಿಗೆ ಹಾನಿಯಾಗುವ ಬಗೆ ಹ್ಯಾಗೆ?

೧೨. ಸಂಗ್ರಹದ ಅಭಿಲಾಷೆಯನ್ನು ಹುಟ್ಟಿಸುವಂಥ ಮತ್ತು ಬೆಳಿಸುವಂಥ ಸಂಗತಿಗಳು ಯಾವವು?

೧೩. ವ್ಯಾಪಾರ ಉದ್ಯಮಿಗಳೊಳಗಿನ ನೀತಿ ಅನೀತಿಗಳಿಂದ ಬಂಡವಲದ ಸಂಚಯದ ಮೇಲೆ ಯಾವ ಬಗೆಯ ಪರಿಣಾಮವಾಗುವದು?

೧೪. ಬಂಡವಲದ "ಮಿತಿಮೀರಿದ ಸಂಚಯ"ವೆಂದರೇನು?

೧೫. ಬಂಡವಲವು ಮಿತಿಮೀರಿ ಬೆಳೆಯುವದೆಂಬ ಅಂಜಿಕೆಯು ನಿರಾಧಾರವಾದ ಕಲ್ಪನೆ, ಎಂಬುವದನ್ನು ತೋರಿಸಿರಿ.

೧೬. ಈ ಅಧ್ಯಾಯದಲ್ಲಿ ಹೇಳಿದ ಸಿದ್ಧಾಂತಗಳ ಮೇಲಿಂದ, ಕೂಲಿಕುಂಬಳಿಯಿಂದ ಜೀವಿಸುವವರ ನಿಜವಾದ ಹಿತಕರ್ತರು ಸಾವುಕಾರರೇ ಹೊರ್ತು, ದುಂದುಗಾರರೂ ದಾನಧರ್ಮ ಮಾಡುವವರೂ ಅಲ್ಲ, ಎಂಬದನ್ನು ಸಿದ್ಧ ಮಾಡಿರಿ.

೧. ನನ್ನ ಹೊತಿಯೊಳಗಿನ ಮತಿಯು ಬಂಡವಲವೋ? ನನ್ನ ಹತ್ತರ ೫೦೦,೦೦೦ ಗ್ಯಾಲನು ಮತಿ ಇದ್ದರೆ, ಅದು ಬಂಡವಲದ "ಮಿತಿಮೀರಿದ ಸಂಚಯ"ವಾಗುವದೋ?

೨. ಬಂಡಿಯ ಎತ್ತು ಬಂಡವಲವೆನಿಸುವದೋ? ಅದು ಬಂಡವಲವಾದರೆ ಸ್ಥಿರಬಂಡವಲವಾದೀತೋ ಚರಬಂಡವಲವಾದೀತೋ?

೩. ತೋಫು, ತುಬಾಕಿ, ಮುಂತಾದವುಗಳು ಬಂಡವಲವೆನಿಸುವವೋ?

೪. ಒಬ್ಬ ಹುಡುಗನು ದಿನಾಲು ಅರ್ಧರೂಪಾಯಿಯ ಮಿಠಾಯಿಯನ್ನು ತಿಂದರೆ, ಅವನು ಶ್ರಮದ ಬೇಡಿಕೆಯನ್ನು ಬೆಳೆಸಿದಂತಾಗುವದೋ?

೫. ಒಬ್ಬ ಗೃಹಸ್ಥನು ೫೦,೦೦೦ ರೂಪಾಯಿಗಳನ್ನು ಪೆಟ್ಟಿಗೆಯಲ್ಲಿ ಹಾಕಿ ಬಂದೋಬಸ್ತು ಮಾಡಿಟ್ಟರೆ ಅವು ಬಂಡವಲವಾಗುವವೋ?

೬. ಆ ಗ್ರಹಸ್ಥನು ತನ್ನ ಹಣವನ್ನು ಒಂದು ರೇಲ್ವೆ ಕಂಪನಿಯಲ್ಲಿ ಇಟ್ಟರೆ, ಅದು ಬಂಡವಲವಾಗುವದೋ?

೭. ಆ ಗ್ರಹಸ್ಥನು ತನ್ನ ಹಣವನ್ನು ಸರಕಾರದವರಿಗೆ ಯುದ್ಧ ನಡಿಸಲಿಕ್ಕೆ ಸಹಾಯವಾಗುವದಕ್ಕಾಗಿ ಸರಕಾರಕ್ಕೆ ಸಾಲ ಕೊಟ್ಟರೆ ಅದು ಬಂಡವಲವಾಗುವದೋ?

೮. ಬೇಕಾದವರು ಬೇಕಾದವರನ್ನು ಸುಲಿಯ ಬಹುದೆಂತಲೂ, ಸುಲಿಸಿ ಕೊಂಡವರಿಗೆ ಏನೂ ನ್ಯಾಯ ದೊರಿಯದೆಂತಲೂ ಕಟ್ಟಳೆಯಾಯಿತೆಂದು ಕಲ್ಪಿಸಿರಿ. ಈ ಕಟ್ಟಳೆಯಿಂದ ಸಂಪತ್ತಿನ ಸಂಚಯದ ಮೇಲೆ ಏನು ಪರಿಣಾಮವಾಗುವದು?

೯. ಅಡಿಗೆಯವನ ಶ್ರಮವು ಉತ್ಪಾದಕ ಶ್ರಮವೋ ಅನುತ್ಪಾದಕ ಶ್ರಮವೋ?

# ೨ನೇ ಭಾಗ.

## ಸಂಪತ್ತಿನ ವಿನಿಮಯವು.

### ಆರಂಭದ ಸೂಚನೆಗಳು.

ವಿನಿಮಯವು ಜನರಿಗೆ ತಮ್ಮ ತಮ್ಮ ಆಸ್ತಿಯ ಮೇಲೆ ಸ್ವಾಮಿತ್ವವಿರುವದೆಂಬದನ್ನು ಸೂಚಿಸುತ್ತದೆ. — ಜನರಿಗೆ ಆಸ್ತಿಯ ಮೇಲೆ ತಮ್ಮ ಹಕ್ಕೇ ಇಲ್ಲದೆ ಹೋದಲ್ಲಿ, ಸಂಪತ್ತಿನ ವಿನಿಮಯ, ಅಂದರೆ ಕೊಡಕೊಳ್ಳೋಣವು ಸಂಭವಿಸುವದಿಲ್ಲ. ಆದದರಿಂದ, ಸಂಪತ್ತಿನ ವಿನಿಮಯವೆಂಬ ಶಬ್ದಗಳಿಂದ ಜನರಿಗೆ ತಮ್ಮ ತಮ್ಮ ಆಸ್ತಿಯ ಮೇಲೆ ಸ್ವಾಮಿತ್ವ ಉಂಟು, ಹಾಗೂ ಯಾವತ್ತೂ ಆಸ್ತಿಯ ಒಡೆತನವು ಒಟ್ಟು ಜನಸಮೂಹದ ಕಡೆಗೆ ಇಲ್ಲದೆ, ಬೇರೆ ಬೇರೆ ವ್ಯಕ್ತಿಗಳೂ ಬೇರೆ ಬೇರೆ ವರ್ಗದವರೂ ತಮ್ಮ ತಮ್ಮ ಆಸ್ತಿಗೆ ಬಾಧ್ಯಸ್ಥರಾಗಿರುವರು, ಎಂಬ ಅರ್ಥವು ಫಲಿತವಾಗುತ್ತದೆ. ಕ್ರಿಸ್ತಮತದ ಪ್ರಾರಂಭದಲ್ಲಿ, ಆ ಮತಾನುಯಾಯಿಗಳೊಳಗೆ ಆಸ್ತಿಯು ಬೇರೆ ಬೇರೆ ವ್ಯಕ್ತಿಗಳ ವಶದಲ್ಲಿ ಇದ್ದಿಲ್ಲ. ಅವರೊಳಗೆ ಸಾಮಾನ್ಯ ಸ್ವಾಮಿತ್ವದ ಪದ್ಧತಿಯು ಪ್ರಚಾರದಲ್ಲಿತ್ತಂತೆ. ಈ ವ್ಯವಸ್ಥೆಯನ್ನು 'ಬಾಯಬಲ' ಎಂಬ ಕ್ರಿಸ್ತರ ಧರ್ಮಗ್ರಂಥದೊಳಗಿನ 'ನಿಜ ಭಕ್ತರ ಕೃತ್ಯಗಳು' ಎಂಬ ಭಾಗದಲ್ಲಿ ವರ್ಣಿಸಿದ್ದು ಹ್ಯಾಗಂದರೆ, "ಅವರೊಳಗೆ, ತಮ್ಮಲ್ಲಿದ್ದ ಯಾವ ಒಡ್ಡವೆಯಾದರೂ ತಮ್ಮದೆಂದು ಯಾರು ಎಣಿಸುತ್ತಿದ್ದಿಲ್ಲ. ಯಾವತ್ತು ಒಡವೆಗಳು ಸರ್ವರಿಗೂ ಸಾಮಾನ್ಯವಾಗಿದ್ದವು. ಅವರೊಳಗೆ, ಯಾರಿಗೂ ಯಾವ ಕೊರತೆಯೂ ಇದ್ದಿಲ್ಲ. ಯಾಕಂದರೆ ಭೂಮಿಗಳಿದ್ದವರೆಲ್ಲರು ಭೂಮಿಗಳನ್ನೂ, ಮನೆಗಳಿದ್ದವರೆಲ್ಲರು ಮನೆಗಳನ್ನೂ ಮಾರಿ, ಬಂದ ಬೆಲೆಗಳನ್ನು ತಂದು, ಅಪೊಸ್ತಲರೆಂಬ ಕ್ರಿಸ್ತನ ನಿಜ ಶಿಷ್ಯರ ಪಾದಗಳಿಗೆ ಒಪ್ಪಿಸುವರು; ಮತ್ತು ಪ್ರತಿಯೊಬ್ಬನಿಗೆ ಅವಶ್ಯವಾಗಿದ್ದಷ್ಟು ಸಂಪತ್ತಿನ ಭಾಗವು ಈ ನಿಜ ಶಿಷ್ಯರ ಕಡೆಯಿಂದ ದೊರಿಯುವದು."

ಮೇಲೆ ಹೇಳಿದ ಬಗೆಯ ಸಾಮಾನ್ಯ ಸ್ವಾಮಿತ್ವದ ಪದ್ಧತಿಯ ವ್ಯವಸ್ಥೆಯು ಎಲ್ಲ ಕಡೆಗೂ ಹಬ್ಬಿಗೊಂಡರೆ, ಆಸ್ತಿಯ ಮೇಲೆ ಸಾಮಾನ್ಯ ಸ್ವಾಮಿತ್ವವಿರ

ಬೇಕೆಂದು, ಪ್ರತಿಪಾದಿಸುವ ಗ್ರಂಥಕರ್ತರ ಮನೋರಥವು ಕೈಗೂಡಿದಂತಾಗುವದು. ಹೀಗಾದಲ್ಲಾದರೂ ಆಸ್ತಿ ಎಂಬುವದು ಉಳಿದೇ ಉಳಿಯುವದು, ಅದೇನು ನಷ್ಟವಾಗಲಿಕ್ಕಿಲ್ಲ. ಆದರೆ "ಸಂಪತ್ತಿನ ವಿನಿಮಯ" ಎಂಬ ಶಬ್ದಗಳು ಮಾತ್ರ ಏನು ಅರ್ಥವಿಲ್ಲದವಾಗುವವು. ಯಾಕಂದರೆ, ಪ್ರತಿ ಒಂದು ಒಡವೆಯ ಮೇಲೆ ತನ್ನ ಅಧಿಕಾರವಿದ್ದಷ್ಟೇ ಬೇರೆ ಪ್ರತಿಯೊಬ್ಬನ ಅಧಿಕಾರವಿದ್ದ ಮೇಲೆ, ಒಂದು ಪದಾರ್ಥ ಕೊಟ್ಟು ಅದಕ್ಕೆ ಬದಲಾಗಿ ಮತ್ತೊಂದು ಪದಾರ್ಥವನ್ನು ಕೊಳ್ಳುವ ಕಾರಣವಿಲ್ಲ. ಆದಕಾರಣ, ಸಂಪತ್ತಿನ ವಿನಿಮಯದಿಂದ ಆಸ್ತಿಯ ಮೇಲೆ ವಿಶೇಷ ಸ್ವಾಮಿತ್ವವಿರುವದು, ಅಂದರೆ ಬೇರೆ ಬೇರೆ ವ್ಯಕ್ತಿಗಳಿಗೆ ಅವರವರ ಸ್ವತ್ತು ಇರುವದು, ಎಂಬ ಬೋಧವಾಗುತ್ತದೆ. ಆದದರಿಂದ, "ಸಂಪತ್ತಿನ ವಿನಿಮಯದ" ವಿಷಯವನ್ನು ವಿವರಿಸುವ ಪೂರ್ವದಲ್ಲಿ, ಈ ಸಂಪತ್ತು ಬೇರೆ ಬೇರೆ ಜನರಲ್ಲಿಯೂ, ವರ್ಗಗಳಲ್ಲಿಯೂ ವಿಭಾಗಿಸಲ್ಪಡುವ ನಿಯಮಗಳನ್ನು ಕುರಿತು ಹೇಳುವದು ತಕ್ಕದ್ದಾಗಿದೆಂದು ತೋರಬಹುದು. ಆದರೆ ಈ ಗ್ರಂಥದಲ್ಲಿ ಮೊದಲು ಸಂಪತ್ತಿನ ವಿಭಾಗದ ವಿಷಯವನ್ನು ಹೇಳದೆ, ವಿನಿಮಯದ ವಿಷಯವನ್ನೇ ಹೇಳುವ ಕಾರಣವೇನಂದರೆ, "ಬೆಲೆ" ಮತ್ತು "ಕ್ರಯ" ಎಂಬ ಶಬ್ದಗಳ ಅರ್ಥವೂ, ಬೇರೆ ಬೇರೆ ಸರಕುಗಳ ಬೆಲೆಗಳು ಹೆಚ್ಚು ಕಡಿಮೆಯಾಗುವ ಕಾಡೂಗಳೂ ಚನ್ನಾಗಿ ತಿಳಿದ ಹೊರ್ತು, ಸಂಪತ್ತಿನಲ್ಲಿ ಗೇಣಿ, ಸಂಬಳ, ಲಾಭ, ಎಂಬ ಮೂರು ವಿಭಾಗಗಳಾಗುವ ಕ್ರಮವು ಸ್ವಲ್ಪದರಲ್ಲಿ ಸುಲಭವಾಗಿ ತಿಳಿಯಲಿಕ್ಕಿಲ್ಲ. ಆದಕಾರಣ, ಈ ಭಾಗದಲ್ಲಿ ಬೆಲೆ, ಕ್ರಯ, ಸಂಪದುತ್ಪಾದನದ ಖರ್ಚು, ಎಂಬ ಶಬ್ದಗಳ ಅರ್ಥವನ್ನೂ, ನಿಯಮಿತ ಪೂರೈಕೆಯುಳ್ಳ ಸರಕುಗಳ ಮತ್ತು ಉತ್ಪನ್ನ ಮಾಡುವ ಖರ್ಚು ಬೆಳಿಯದೆ ಹೆಚ್ಚಿಸಲಿಕ್ಕೆ ಬಾರದಂಥ ಸರಕುಗಳ, ಹಾಗೂ ಉತ್ಪಾದನದ ಖರ್ಚು ಬೆಳಿಯದೆ ಬೇಕಾದಷ್ಟು ಹೆಚ್ಚಿಸಲಿಕ್ಕೆ ಬರುವಂಥ ಸರಕುಗಳ ಬೆಲೆಗಳನ್ನು ನಿರ್ಣೈಸುವಂಥ ಕಾರಣಗಳ ವಿವರವನ್ನೂ, ಹಣದ ಸ್ವರೂಪವನ್ನೂ, ಅದರ ಕಾರ್ಯಗಳನ್ನೂ ವಿವೇಚಿಸುವೆವು.

ಈ ಪ್ರಾರಂಭದ ಸೂಚನೆಗಳನ್ನು ಮುಗಿಸುವ ಮೊದಲು, ಹಿಂದೆ ಸೂಚಿಸಿದ ಸಾಮಾನ್ಯ ಸ್ವಾಮಿತ್ವದ ಪದ್ಧತಿಯನ್ನು ಕುರಿತು ಸ್ವಲ್ಪ ಹೆಚ್ಚು ವಿವರಿಸುವದು ತಕ್ಕದ್ದಾಗಿದೆ. ಈ ಪದ್ಧತಿಗೆ ಆಧಾರವಾದ ತತ್ವವು ಯಾವದಂದರೆ: ವ್ಯಕ್ತಿ ಮಾತ್ರರಿಗೆ ಆಸ್ತಿಯ ಸ್ವಾಮಿತ್ವವು ಇರಬಾರದು; ಅಂದರೆ, ಎಲ್ಲರು ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ದುಡಿಯ ತಕ್ಕದ್ದು; ಎಲ್ಲರೂ ತಮ್ಮ ತಮ್ಮ ಸಂಸಾರಕ್ಕೆ ಅವಶ್ಯ

ವಿದ್ದಷ್ಟು ಸಂಪತ್ತಿನ ಭಾಗವನ್ನು ಮಾತ್ರ ತಕ್ಕೊಳ್ಳ ಬೇಕೇ ಹೊರ್ತು, ತಾವು ಮಾಡಿದ ಕೆಲಸದ ಮಾನದಿಂದ ತಕ್ಕೊಳ್ಳಬಾರದು.

ಸಾಮಾನ್ಯ ಸ್ವಾಮಿತ್ವದ ಪದ್ಧತಿಯಲ್ಲಿ ಅರ್ಥಶಾಸ್ತ್ರದ ದೃಷ್ಟಿಯಿಂದ ಅನೇಕ ದೋಷಗಳುಂಟು. ಮೊದಲಿನ ದೋಷವು ಯಾವದಂದರೆ, ಈ ಬಗೆಯ ವ್ಯವಸ್ಥೆ ಇದ್ದಲ್ಲಿ ಮನುಷ್ಯರಿಗೆ ಉದ್ಯೋಗ ಮಾಡಲಿಕ್ಕೆ ಅತ್ಯಂತ ಪ್ರೋತ್ಸಾಹಕರವಾದ ಸ್ವಾರ್ಥವೆಂಬ ಕಾರಣವು ನಷ್ಟವಾಗುತ್ತದೆ. ಯಾವನೊಬ್ಬನಿಗೆ, ತನ್ನ ಶ್ರಮದ ಯಾವತ್ತು ಫಲವು ತನಗೂ ತನ್ನ ಕುಟುಂಬದವರಿಗೂ ದೊರಿಯುವದೆಂಬ ಭರವಸವಿದ್ದರೆ, ಅವನು ಉತ್ಸಾಹದಿಂದ ಆದಷ್ಟು ಹೆಚ್ಚು ಪ್ರಯಾಸ ಪಟ್ಟು ಕೆಲಸ ಮಾಡುತ್ತಾನೆ. ಆದರೆ ಅವನ ಶ್ರಮದ ಫಲವನ್ನೆಲ್ಲ, ಅವನ ನೆರೆಹೊರೆಯುವರಿಗೆ ಹಂಚಿ ಕೊಡುವದಾದರೆ, ಅವನು ಎಂದಿಗೂ ಅಷ್ಟು ಉತ್ಸಾಹದಿಂದ ಶ್ರಮ ಮಾಡಲಿಕ್ಕಿಲ್ಲ. ಎರಡನೆ ಅಡ್ಡಿ ಏನಂದರೆ, ಈಗಿನ ಸಮಾಜದ ವ್ಯವಸ್ಥೆಯಲ್ಲಿ ಎಲ್ಲರೂ ಮುಂದಿನ ವಿಚಾರ ತಿಳಿದು, ಎಚ್ಚರದಿಂದಲೂ ಮಿತಿಯಿಂದಲೂ ಇರುತ್ತಾರೆ. ಸಾಮಾನ್ಯ ಸ್ವಾಮಿತ್ವದ ವ್ಯವಸ್ಥೆಯು ಪ್ರಚಾರಗೊಂಡಲ್ಲಿ, ಇಂಥ ಮುಂದಿನ ಚಿಂತೆಯೆಂಬುವದು ನಿಷ್ಪ್ರಯೋಜನವಾಗುತ್ತದೆ. ಸಾಂಪ್ರತದ ವಿಶೇಷ ಸ್ವಾಮಿತ್ವದ ವ್ಯವಸ್ಥೆಯಲ್ಲಿ ಅವಿಚಾರದ ನಡತೆಗೆ ಉಂಟಾಗುವ ಪ್ರತಿಬಂಧಗಳು ತಪ್ಪಿ ಹೋಗುತ್ತವೆ. ಸಾಮಾನ್ಯ ಸ್ವಾಮಿತ್ವದ ಪದ್ಧತಿಯನ್ನು ಅನುಸರಿಸುವವರೊಳಗೆ, "ತನ್ನಂತೆ ದುಡಿಯುವ ಪರರಿಗೆ ಹಿತಮಾಡುವದು ತನ್ನ ಅತ್ಯಂತ ಹೆಚ್ಚಿನ ಕರ್ತವ್ಯವಾಗಿದೆಂಬ ಉದಾರಬುದ್ಧಿಯು ಪ್ರತಿಯೊಬ್ಬನ ಮನಸ್ಸಿನಲ್ಲಿ ಜಾಗೃತವಾಗಿರುತ್ತದೆ" ಎಂದು ಗ್ರಹಿಸಲ್ಪಡುತ್ತದೆ. ಈಗಿನ ಸಮಾಜವ್ಯವಸ್ಥೆಯ ಪ್ರಕಾರ ಬಡವರು ತಮ್ಮ ಸಂರಕ್ಷಣಕ್ಕಾಗಿಯೂ ತಮ್ಮ ಕುಟುಂಬದವರ ಸಂರಕ್ಷಣಕ್ಕಾಗಿಯೂ ಮೈ ಮುರಿದು ದುಡಿಯ ಬೇಕಾಗುವದು. ಮಕ್ಕಳು ಮರಿಗಳು ಹುಟ್ಟಿ ತಮ್ಮ ಕುಟುಂಬ ಬೆಳೆದ ಹಾಗೆ ತಮಗೆ ವಿಶೇಷ ಖರ್ಚು ತಗಲುವದೆಂಬುವದನ್ನು ಅವರು ಚನ್ನಾಗಿ ತಿಳಿದಿರುವರು. ಆದ್ದರಿಂದ ಯಾವಾಗಲೂ ಮುಂದಿನ ಎಚ್ಚರ ಹಿಡಿದು ಉದ್ಯೋಗ ಮಾಡುವದಕ್ಕೆ ಅವರಿಗೆ ಬಹಳ ಉತ್ತೇಜನವಿರುತ್ತದೆ. ಆದರೆ ಸಾಮಾನ್ಯ ಸ್ವಾಮಿತ್ವದ ಪದ್ಧತಿ ಇದ್ದಲ್ಲಿ, ಜನರಿಗೆ ತಾವು ಪ್ರಯಾಸ ಪಟ್ಟು ಕೆಲಸ ಮಾಡಿದರೇನು, ಮಾಡದಿದ್ದರೇನು, ತಮ್ಮ ಚರಿತಾರ್ಥವೂ, ತಮ್ಮ ಕುಟುಂಬವು ಎಷ್ಟೇ ದೊಡ್ಡದಿದ್ದರೂ ಆ ಕುಟುಂಬದ ಚರಿತಾರ್ಥವೂ ನಿರ್ವಿವಾದವಾಗಿ ಸಾಗುವದೆಂದು ತಿಳಿದಿರುವದು; ಮತ್ತು ಪ್ರತಿಯೊಬ್ಬನಿಗೆ ತನ್ನ ಪಶ್ಚಾತ್ ತನ್ನ ಕುಟುಂಬದವರ ನಿರ್ವಾಹವು ನಿರ್ವಿವಾದವಾಗಿ ಸಾಗುವದೆಂಬದು ಗೊತ್ತಿರುವದರಿಂದ, ತಾನು ಸತ್ತನಂತರ

ತನ್ನ ಮಕ್ಕಳ ಮರಿಗಳ ಉಪಜೀವನ ಸಾಗುವದಕ್ಕಾಗಿ ಸಂಪತ್ತನ್ನು ಗಳಿಸಿಡು ವದು ಅವನಿಗೆ ಕೇವಲ ಅಪ್ರಯೋಜಕವಾಗಿ ಕಾಣಿಸುವದು.

ಪ್ರಜಾವೃದ್ಧಿಗೆ ಜನರ ದೀರ್ಘದೃಷ್ಟಿಯಿಂದ ಉಂಟಾಗ ತಕ್ಕ ಪ್ರತಿಬಂಧವು ಸಾಮಾನ್ಯ ಸ್ವಾಮಿತ್ವದ ಪದ್ಧತಿಯಿಂದ ಕಡಿಮೆಯಾಗುವದು. ಈ ಮಾತನ್ನು ಅಮೇರಿಕೆಯಲ್ಲಿ ಸಾಮಾನ್ಯ ಸ್ವಾಮಿತ್ವದ ಪದ್ಧತಿಯನ್ನು ಅನುಸರಿಸುವ ಸಮಾಜ ದವರು ತಿಳುಕೊಂಡು, ತಮ್ಮೊಳಗಾಗುವ ವಿವಾಹಗಳನ್ನೂ ಜನನಗಳನ್ನೂ ಅನೇಕ ವಿಧಗಳಿಂದ ಪ್ರತಿಬಂಧಿಸುವದುಂಟು. ಅಮೇರಿಕೆಯೊಳಗಿನ ಈ ಬಗೆಯು ಎರಡು ಸಮಾಜಗಳಂತೂ ಅಖಂಡಿತವಾದ ಬ್ರಹ್ಮಚರ್ಯವನ್ನು ಆಚರಿಸುವವು. ಹಾಗೂ ಬೇರೆ ಕೆಲವು ಸಮಾಜಗಳಲ್ಲಿ ಬ್ರಹ್ಮಚರ್ಯವು ಬಹು ಮಾನಾರ್ಹವಾದದ್ದೆಂತಲೂ ಬಹು ಗೌರವವುಳ್ಳದ್ದೆಂತಲೂ ಹೇಳಿ, ಬ್ರಹ್ಮಚರ್ಯವ್ರತವನ್ನು ಪ್ರೋತ್ಸಾಹ ಪಡಿಸು ವರು. ಬೇರೆ ಕೆಲವುಗಳಲ್ಲಿ ಈ ಬಗೆಯ ಅಖಂಡಿತವಾದ ಬ್ರಹ್ಮಚರ್ಯವನ್ನು ಪಾಲಿಸುವ ನಿಯಮಗಳಿಲ್ಲದಿದ್ದರೂ, ಸರಕಾರದವರೇ ತಮ್ಮ ಪ್ರಜೆಗಳ ಅಭ್ಯು ದಯವನ್ನೂ ಹೀನಾವಸ್ಥೆಯನ್ನೂ ನೋಡಿ, ಆ ಪ್ರಕಾರ ಪ್ರಜಾವೃದ್ಧಿಗೆ ಉತ್ತೇಜನ ಕೊಡುವರು, ಇಲ್ಲವೆ ಅಡ್ಡಿಮಾಡುವರು. ಈ ಪ್ರಕಾರ ವಿಚಾರಿಸಿ ನೋಡಲಾಗಿ, ಸಾಮಾನ್ಯ ಸ್ವಾಮಿತ್ವದ ಪದ್ಧತಿಯಿಂದ ಪ್ರಜಾವೃದ್ಧಿಗೆ ಕಟ್ಟು ಇಲ್ಲದೆ ಹೋಗುವ ದೆಂಬ ದೋಷವನ್ನು ತೆಗೆದು ಹಾಕುವದಕ್ಕಾಗಿ, ವ್ಯಕ್ತಿಮಾತ್ರರ ಸ್ವಾತಂತ್ರ್ಯವನ್ನು ಭಂಗ ಪಡಿಸಿ, ಸರಕಾರದವರಿಗೆ ಜನರ ಗೃಹಕೃತ್ಯಗಳ ಆಡಳಿತದಲ್ಲಿ ಬೇಕಾದ ಹಾಗೆ ಕೈ ಹಾಕುವದಕ್ಕೆ ಆಸ್ಪದ ಕೊಡ ಬೇಕಾಗುವದು. ಈ ಪ್ರಕಾರದ ಸರಕಾ ರದ ಮಿತಿಮೀರಿದ ಅಧಿಕಾರವನ್ನು ಸ್ವಾತಂತ್ರ್ಯಾಭಿಮಾನಿಗಳಾದ ಜನರು ಎಂದಿ ಗೂ ಸಹಿಸಲಾರರು. ಆ ಕಾರಣ ಸಾಮಾನ್ಯ ಸ್ವಾಮಿತ್ವದ ಪದ್ಧತಿಯನ್ನು ಅನು ಸರಿಸುವವರು, ಆ ಪದ್ಧತಿಯಲ್ಲಿ ಅರ್ಥಶಾಸ್ತ್ರ ದೃಷ್ಟ್ಯಾ ಕಂಡು ಬರುವ ದೋಷ ವನ್ನು ತಪ್ಪಿಸುವದಕ್ಕಾಗಿ, ರಾಜನೀತಿಗೆ ಸಂಬಂಧಿಸಿದ ಮತ್ತೊಂದು ದೋಷಕ್ಕೆ ಒಳಗಾಗುವರೆಂಬದು ಸ್ಪಷ್ಟವದೆ. ಪ್ರಾಚೀನ ಕಾಲದಲ್ಲಿ ಗ್ರೀಸ ದೇಶದೊಳಗಿನ ಸ್ಪಾರ್ಟಾ ಎಂಬ ಸಂಸ್ಥಾನದಲ್ಲಿದ್ದ ಸಾಮಾನ್ಯ ಸ್ವಾಮಿತ್ವದ ರಾಜ್ಯಪದ್ಧತಿಯಲ್ಲಿ ಇದೇ ಬಗೆಯ ವ್ಯವಸ್ಥೆ ಇತ್ತು. ಅಲ್ಲಿ ಸರಕಾರದವರು ಪ್ರಜೆಗಳ ಸಂಸಾರದ ಸಣ್ಣ ಸಣ್ಣ ಕೆಲಸಗಳ ಮೇಲೆ ಸಹ ದೃಷ್ಟಿಯನ್ನಿಟ್ಟು, ಅವುಗಳಲ್ಲಿ ತಮ್ಮ ಅಧಿ ಕಾರ ನಡಿಸುತ್ತಿದ್ದರು.

ಈ ಪ್ರಕಾರ ಸಾಮಾನ್ಯ ಸ್ವಾಮಿತ್ವದ ಪದ್ಧತಿಯಲ್ಲಿ ಬಹಳ ಕುಂದುಗಳಿರು ವವು. ಆದಾಗ್ಯೂ, ಸಾಂಪ್ರತದಲ್ಲಿದ್ದ ಸಾಮಾಜಿಕ ವ್ಯವಸ್ಥೆಯೇ ಒಳ್ಳೇದೆಂದು

ಪ್ರತಿಪಾದಿಸುವವರು, ಸಾಮಾನ್ಯ ಸ್ವಾಮಿತ್ವದ ಪದ್ಧತಿಯು ಸೃಷ್ಟಿನಿಯಮಕ್ಕೂ, ನೀತಿಗೂ ಕೇವಲ ವಿರುದ್ಧವಾದದ್ದೆಂದು ದೂಷಣೆ ಇಡುವದು ಸರಿಯಲ್ಲ. ಯಾಕಂದರೆ, ಈಗಿನ ಸಾಮಾಜಿಕ ವ್ಯವಸ್ಥೆಯು ಸಹ ನಿರ್ದೋಷವಾದದ್ದಲ್ಲ; ಇದರಲ್ಲಿಯೂ ತಿದ್ದತಕ್ಕಂಥ ಸಂಗತಿಗಳಿರುವವು. ಈಗಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮಾಡತಕ್ಕ ಹೆಚ್ಚುಕಡಿಮೆಗಳನ್ನು ಸಾಮಾನ್ಯ ಸ್ವಾಮಿತ್ವದ ಪದ್ಧತಿಗೆ ಅನುಸಾರವಾಗಿ ಮಾಡಬೇಕೆಂದು ಹೇಳುವದು ಒಂದು ವೇಳೆ ಸರಿಯಾಗಿ ಕಾಣಿಸಲಿಕ್ಕಿಲ್ಲ. ಆದಾಗ್ಯೂ ಈಗಿನ ವ್ಯವಸ್ಥೆಯಿಂದ ಎಷ್ಟೋ ಜನರಿಗೆ ಹೊಟ್ಟೆ ತುಂಬ ಅಶನ ಸಿಗದೆ ಭಿಕ್ಷಾವೃತ್ತಿಯಿಂದ ಜೀವಿಸ ಬೇಕಾಗುವದನ್ನು ನೋಡಿ ನೋಡಿ, ಈಗಿನ ವ್ಯವಸ್ಥೆಯು ಕೇವಲ ದೋಷರಹಿತವಾದದ್ದೆಂದು ಹೇಳುವದು ಸಮಂಜಸವಾಗಲಿಕ್ಕಿಲ್ಲ. ಆ ಕಾರಣ ಈಗಿನ ಸಾಮಾಜಿಕ ವ್ಯವಸ್ಥೆಯಲ್ಲಿ ಸಹ ಕೆಲ ಏರ್ಪಾಡುಗಳನ್ನು ಮಾಡುವದು ಅವಶ್ಯವಾಗಿರುವದೆಂಬದಕ್ಕೆ ಎಲ್ಲರೂ ಒಪ್ಪಿಕೊಳ್ಳತಕ್ಕದ್ದು. ಇದಲ್ಲದೆ, ಸಾಮಾನ್ಯ ಸ್ವಾಮಿತ್ವದ ಕೆಲವು ದೋಷಗಳೇ ಈಗಿನ ಸಾಮಾಜಿಕ ಸ್ಥಿತಿಯಲ್ಲಿಯೂ ಇರುವವು. ಉದಾಹರಣಾರ್ಥವಾಗಿ, ವ್ಯವಹಾರ ದೃಷ್ಟಿಯಿಂದ ನೋಡಲಾಗಿ, ಇಂಗ್ಲಂಡದಲ್ಲಿ ನಡಿಯುವ ದರಿದ್ರಸಂರಕ್ಷಕ ಕಾಯಿದೆಯ ಪದ್ಧತಿಯಲ್ಲಿ ಸಾಮಾನ್ಯ ಸ್ವಾಮಿತ್ವದ ಪದ್ಧತಿಯ ದೋಷಗಳಿರುವವು. ಕೂಲಿಕಾರರಿಗೆ ವಾರಕ್ಕೆ ನಿಯಮಿತ ದರದಿಂದ ಕೂಲಿಯನ್ನು ಕೊಡುವ ಪದ್ಧತಿಯು ದೋಷಾಸ್ಪದವಾಗಿರುವದು. ಯಾಕಂದರೆ, ಸ್ವಹಿತಕ್ಕಾಗಿ ಕೆಲಸ ಮಾಡುವ ಉತ್ಸಾಹವು ಸಾಮಾನ್ಯ ಸ್ವಾಮಿತ್ವದ ಪದ್ಧತಿಗಿಂತಲೂ, ನಿಯಮಿತವಾದ ಕೂಲಿಯನ್ನು ಕೊಡುವ ಪದ್ಧತಿಯಿಂದ ವಿಶೇಷ ಕುಂದುವದು. ಕೂಲಿಕಾರರಿಗೆ ನಿಯಮಿತ ಕೂಲಿಯನ್ನು ಕೊಡುವದರಿಂದ, ಅವರು ಯಾವಾಗಲೂ ಸಾಧ್ಯವಾದ ಮಟ್ಟಿಗೆ ಕಡಿಮೆ ಕೆಲಸ ಮಾಡುವದೊಂದೇ ಹಂಚಿಕೆಯಲ್ಲಿರುವರು. ಸರಕಾರದ ಎಷ್ಟೋ ಉದ್ಯೋಗಸ್ಥರಿಗೆ ದೊರಿಯುವ ಸಂಬಳವು ಅವರು ಮಾಡಿದ ಕೆಲಸದ ಮಾನದಿಂದ ದೊರಿಯುವದಿಲ್ಲ; ಅವರು ಕೆಲಸ ಚನ್ನಾಗಿ ಮಾಡಿದರೇನು ಕೆಡಿಸಿದರೇನು, ಮುಗಿಸಿದರೇನು ಬಿಟ್ಟು ಬಿಟ್ಟರೇನು, ಅವರಿಗೆ ದೊರಿಯ ತಕ್ಕ ಸಂಬಳವು ಅಷ್ಟೇ ದೊರಿಯುವದು. ಈ ಸಂಗತಿಗಳನ್ನು ಸಾಮಾನ್ಯ ಸ್ವಾಮಿತ್ವದ ಪದ್ಧತಿಯ ಪುಷ್ಟ್ಯರ್ಥವಾಗಿ ಹೇಳಿಲ್ಲ. ಇವುಗಳನ್ನು ಹೇಳಿದ ಕಾರಣವೇನಂದರೆ, ಎಲ್ಲರಿಗೂ ತಮ್ಮ ಪಕ್ಷದ ಪ್ರತಿಪಾದನವನ್ನು ಮಾಡುವದಕ್ಕೆ ಸ್ವಾತಂತ್ರ್ಯವಿರಬೇಕೆಂದು ಬಯಸುವಂಥ ಯಾವತ್ತೂ ಜನರು, ಸಾಮಾನ್ಯ ಸ್ವಾಮಿತ್ವದ ಪಕ್ಷದವರು ಹೇಳುವ ಮಾತುಗಳನ್ನು ಕಿವಿಗೊಟ್ಟು ಕೇಳಿ, ಅವುಗಳ ಯುಕ್ತಾಯುಕ್ತತೆ

ಗಳನ್ನು ಆದರದಿಂದ ವಿಚಾರಿಸ ಬೇಕಲ್ಲದೆ, ಅವುಗಳನ್ನು ನಿಷ್ಕಾರಣವಾಗಿ ದ್ವೇಷಿಸಿ, ತಿರಸ್ಕರಿಸ ಬಾರದು. ಸದ್ಯಃಕಾಲದ ವ್ಯವಸ್ಥೆಯಲ್ಲಿದ್ದ ಕುಂದುಗಳನ್ನೂ, ಬೇರೆ ಧರ್ಮಸಮಾಜಗಳಂತೆ ಪುರಾತನ ಕಾಲದ ಕ್ರಿಸ್ತಮತಾನುಯಾಯಿಗಳೊಳಗೆ ಸಹ ಸಾಮಾನ್ಯ ಸ್ವಾಮಿತ್ವದ ಪದ್ಧತಿಯು ಪ್ರಚಾರಗೊಂಡಿತ್ತೆಂಬದನ್ನೂ, ಚನ್ನಾಗಿ ನೆನಪಿನಲ್ಲಿಡ ತಕ್ಕದ್ದು. ಜನರು ಈ ಮಾತನ್ನು ಲಕ್ಷ್ಯದಲ್ಲಿಟ್ಟರೆ, ಅವರು ಸಾಮಾನ್ಯ ಸ್ವಾಮಿತ್ವದ ಪದ್ಧತಿಗಳನ್ನು ಈಗಿನಷ್ಟು ಕೋಪದಿಂದ ದೂಷಿಸಲಿಕ್ಕಿಲ್ಲವೆಂದು ತೋರುತ್ತದೆ.

ಫ್ರಾನ್ಸ ದೇಶದಲ್ಲಿ ಫುರಿಯರ್ ಮತ್ತು ಸೇಂಟ್ ಸಾಯಮನ್‍ರೆಂಬ ಗ್ರಂಥಕರ್ತರೂ, ಇಂಗ್ಲಂಡದಲ್ಲಿ ರಾಬರ್ಟ ಒವೆನ್‍ನೆಂಬ ಗ್ರಂಥಕರ್ತನೂ, ಸಾಮಾನ್ಯ ಸ್ವಾಮಿತ್ವದ ಮತದ ಹಲವು ಬಗೆಗಳನ್ನು ಪ್ರತಿಪಾದಿಸಿರುವರು. ಆದರೆ ಸ್ಥಳ ಸಂಕೋಚದ ಮೂಲಕವಾಗಿ, ಆ ಬಗೆಗಳನ್ನೆಲ್ಲ ಈ ಚಿಕ್ಕ ಪುಸ್ತಕದಲ್ಲಿ ವರ್ಣಿಸುವದು ಸಾಧ್ಯವಲ್ಲ.

### ಎರಡನೆ ಭಾಗದ ಆರಂಭದ ಸೂಚನೆಗಳ ಮೇಲಿನ ಪ್ರಶ್ನೆಗಳು

### ಸಂಪತ್ತಿನ ವಿನಿಮಯದ ವಿಷಯದಲ್ಲಿ.

೧. "ಸಾಮಾನ್ಯ ಸ್ವಾಮಿತ್ವದ ಪದ್ಧತಿ" ಅಂದರೇನು?

೨. ಅರ್ಥಶಾಸ್ತ್ರದೃಷ್ಟ್ಯಾ ಸಾಮಾನ್ಯ ಸ್ವಾಮಿತ್ವದ ಪದ್ಧತಿಯ ದೋಷಗಳು ಯಾವವು?

೩. ಸಾಮಾನ್ಯ ಸ್ವಾಮಿತ್ವದ ಪದ್ಧತಿಗಳನ್ನು ಪ್ರೋತ್ಸಾಹ ಪಡಿಸಿದಂಥ ಹಲವು ಗ್ರಂಥಕರ್ತರ ಹೆಸರುಗಳನ್ನು ಹೇಳಿರಿ.

---

೧. ಸಾಮಾನ್ಯ ಸ್ವಾಮಿತ್ವದ ವ್ಯವಸ್ಥೆಯಿಂದ ಸಾಂಪ್ರತದ ಶ್ರಮವಿಭಾಗಕ್ಕೆ ತೊಂದರೆ ಬರ ಬಹುದೋ? ಯಾವ ಕೆಲಸ ಮಾಡಿದರೂ ಸಮನಾಗಿಯೇ ಪ್ರತಿಫಲ ದೊರಿಯುವದಾದರೆ, ಮನಸಿಗೆ ಅಸಹ್ಯವಾದ ಹೊಲಸು ಉದ್ಯೋಗಗಳನ್ನು ಯಾರು ಕೈಕೊಳ್ಳುವರು?

೨. ಸಾಮಾನ್ಯ ಸ್ವಾಮಿತ್ವದ ವ್ಯವಸ್ಥೆಯಿಂದ ಸಂಪತ್ತಿನ ಉತ್ಪತ್ತಿಯು ಕಡಿಮೆಯಾಗಿ, ಸಂಪತ್ತನ್ನು ಉಪಯೋಗ ಮಾಡುವವರ ಸಂಖ್ಯೆಯು ಮಾತ್ರ ಬೆಳೆದದ್ದಾದರೆ, ಅದರಿಂದ ಪರಿಣಾಮದಲ್ಲಿ ತೀರ ಬಡವರಿಗಾದರೂ ಒಳಿತಾಗ ಬಹುದೋ?

## ೧ನೇ ಅಧ್ಯಾಯ.

### ಬೆಲೆ ಹಾಗೂ ಕ್ರಯ.

ಅರ್ಥಶಾಸ್ತ್ರದ ಬಹುತರ ಯಾವತ್ತೂ ತತ್ವಗಳ ಸಂಪೂರ್ಣ ಜ್ಞಾನವನ್ನು ಸಂಪಾದಿಸ ಬೇಕಾದರೆ, "ಬೆಲೆ" ಮತ್ತು "ಕ್ರಯ" ಎಂಬ ಶಬ್ದಗಳ ಅರ್ಥವನ್ನೂ, ಇವುಗಳೊಳಗಿನ ತಾರತಮ್ಯವನ್ನೂ, ಪರಸ್ಪರ ಸಂಬಂಧವನ್ನೂ ಸಾದ್ಯಂತವಾಗಿ ತಿಳುಕೊಳ್ಳುವದು ಅತ್ಯವಶ್ಯವಾಗಿದೆ.

ಬೆಲೆಯ ವ್ಯಾಖ್ಯೆ.—ಯಾವದೊಂದು ಸರಕಿನ ಬೆಲೆಯು, ಆ ಸರಕನ್ನು ಬೇರೆ ಸರಕುಗಳಿಗೆ ಹೊಂದಿಸಿ ನೋಡುವದರಿಂದ ತಿಳಿಯುವದು. ಅಂದರೆ, ಆ ಸರಕು ಕೊಟ್ಟರೆ ಅದಕ್ಕೆ ಬದಲಾಗಿ ಬೇರೆ ಸರಕುಗಳು ಎಷ್ಟು ಬರುವವು ಎಂಬ ದರ ಮೇಲಿಂದ ತಿಳಿಯುವದು. ಈ ಮೇರಿಗೆ, ಒಂದು ಶೇರು ಗೋಧಿಗೆ ನಾಲ್ಕು ಶೇರು ಜೋಳ ಬಂದರೆ, ಒಂದು ಶೇರು ಗೋಧಿಯ ಬೆಲೆ ನಾಲ್ಕು ಶೇರು ಜೋಳ ವಾಯಿತು. ಆದದರಿಂದ, ಬೆಲೆ ಎಂಬ ಶಬ್ದದಲ್ಲಿ ತುಲನೆಯ ಅರ್ಥವು ಗರ್ಭಿತವಾಗಿರುವದೆಂಬುವದು ಸ್ಪಷ್ಟವದೆ. ಯಾಕಂದರೆ, ಒಂದು ಶೇರು ಗೋಧಿಯ ಬೆಲೆ ನಾಲ್ಕು ಶೇರು ಜೋಳವೆಂದು ಹೇಳಲಾಗಿ, ಗೋಧಿಗೂ ಜೋಳಕ್ಕೂ ತುಲನೆ ಮಾಡಿದಂತಾಗುವದು.

ಬೆಲೆಯು ಅನ್ಯಸಾಪೇಕ್ಷವಾದ್ದರಿಂದ, ಯಾವದೊಂದು ಸರಕಿನ ಬೆಲೆಯು ಕೆಳಗೆ ಬರೆದ ಎರಡು ಕಾರಣಗಳಲ್ಲಿ ಯಾವದಾದರೂ ಒಂದು ಕಾರಣದಿಂದ ಹೆಚ್ಚುಕಡಿಮೆಯಾಗ ಬಹುದು:—(೧) ಆ ಸರಕಿನಲ್ಲಿ ಅಂತರ್ಗತವಾದ ಕಾರಣದಿಂದ; (೨) ಬಾಹ್ಯಕಾರಣದಿಂದ. ಅಂದರೆ, ಯಾವದೊಂದು ಸರಕಿನ ಬೆಲೆಯು ಆ ಸರಕಿನಲ್ಲಿ ಹುಟ್ಟುವಂಥ ಕೆಲ ಕಾರಣದಿಂದ, ಇಲ್ಲವೆ ಆ ಸರಕಿಗೆ ಬದಲಾಗಿ ಕೊಳ್ಳುವ ಬೇರೆ ಸರಕುಗಳಲ್ಲಿ ಹುಟ್ಟುವಂಥ ಕೆಲ ಕಾರಣದಿಂದ ಹೆಚ್ಚುಕಡಿಮೆಯಾಗುವದು. ಉದಾಹರಣಾರ್ಥವಾಗಿ, ಗೋಧಿಯ ಬೆಲೆ ಏರಿದೆಂದು ತಿಳಿಯುವ. ಈ ಪ್ರಕಾರ ಬೆಲೆ ಏರಿದ್ದು ಗೋಧಿಯ ಪೂರೈಕೆ ಕಡಿಮೆಯಾದ್ದರಿಂದ ಏರಿರ ಬಹುದು, ಇಲ್ಲವೆ ಗೋಧಿಯನ್ನು ಕೊಟ್ಟುಕೊಳ್ಳುವ ಬೇರೆ ಯಾವದೊಂದು ಸರಕಿನ ಬೆಲೆ ಇಳಿದದ್ದರಿಂದ ಏರಿರ ಬಹುದು. ಮೊದಲನೆ ಪ್ರಸಕ್ತಿಯಲ್ಲಿ ಗೋಧಿಯ ಬೆಲೆ ಅಂತರ್ಗತ ಕಾರಣದಿಂದ ಏರಿದಂತಾಯಿತು, ಎರಡನೆ ಪ್ರಸಕ್ತಿಯಲ್ಲಿ ಬಾಹ್ಯಕಾರಣದಿಂದ ಏರಿದಂತಾಯಿತು. ಮೊದಲು, ಒಂದು ಬುಟ್ಟಿ ಗೋಧಿಗೆ ಐದು ಮೊಳ ಅರಿವೆ ಬರುತ್ತಿದ್ದು, ಈಗ ಅಷ್ಟೇ ಗೋಧಿಗೆ ಹತ್ತು ಮೊಳ

ಅರಿವೆ ಒರುತ್ತದೆಂದು ಕಲ್ಪಿಸಿರಿ. ಇಲ್ಲಿ ಅರಿವೆಯ ಮಾನದಿಂದ ಗೋಧಿಯ ಬೆಲೆಯು ಇವ್ಮಡಿ ಏರಿದಂತಾಯಿತು. ಈ ಪ್ರಕಾರ ಗೋಧಿಯ ಬೆಲೆ ಏರಿದ್ದು, ಗೋಧಿಯ ಬೆಳೆ ಕಡಿಮೆಯಾಗಿ ಗೋಧಿಯ ಪೂರೈಕೆ ಕಡಿಮೆಯಾದ ಮೂಲಕ ಆಗಿರ ಬಹುದು, ಇಲ್ಲವೆ ಗೋಧಿಯ ಪೂರೈಕೆ ಇದ್ದಕ್ಕಿದ್ದಷ್ಟೇ ಇದ್ದು, ಅರಿವೆ ಹೆಚ್ಚಾದ್ದರಿಂದ ಅರಿವೆಯ ಬೆಲೆ ಅರ್ಧ ಇಳಿದದ್ದರ ಮೂಲಕ ಆಗಿರ ಬಹುದು. ಇದೇ ಮೇರೆಗೆ ಯಾವದೊಂದು ಸರಕಿನ ಬೆಲೆ ಇಳಿಯ ಬೇಕಾದರೆ, ಆ ಸರಕಿನ ಪೂರೈಕೆ ಮೊದಲಿನದಕ್ಕಿಂತ ಹೆಚ್ಚಾಗ ಬೇಕು, ಇಲ್ಲವೆ ಆ ಸರಕನ್ನು ಸರಿ ಮಾಡಿ ನೋಡುವಂಥ ಬೇರೆ ಸರಕುಗಳ ಪೂರೈಕೆ ಕಡಿಮೆಯಾಗಿ, ಅವುಗಳ ಬೆಲೆ ಏರಬೇಕು. ಈ ಮೇರಿಗೆ ಬೆಲೆ ಎಂಬ ಶಬ್ದವು ಯಾವತ್ತು ಸರಕುಗಳೊಳಗಿನ ಪರಸ್ಪರ ಸಂಬಂಧವನ್ನು ತೋರಿಸುವಂಥಾದಾದ್ದರಿಂದ ಸಿದ್ಧವಾಗುವದೇನಂದರೆ, ಯಾವತ್ತು ಸರಕುಗಳ ಬೆಲೆಗಳು ಏರುವದು ಇಲ್ಲವೆ ಇಳಿಯುವದು ಎಂದಿಗೂ ಸಂಭವಿಸದು. ಯಾಕಂದರೆ "ಯಾವತ್ತು ಪದಾರ್ಥಗಳ ಬೆಲೆಯು" ಏರೋಣವೆಂದರೆ, ಯಾವತ್ತು ಪದಾರ್ಥಗಳನ್ನು ಕೊಡಲಾಗಿ, ಬೇರೆ ಯಾವತ್ತು ಪದಾರ್ಥಗಳು ಮೊದಲಿಗಿಂತ ಹೆಚ್ಚು ಬರುವವೆಂದು ಹೇಳಿದಂತಾಗುವದು. ಆದರೆ ಹೀಗೆನ್ನುವದು, ಒಂದು ತೋಟದೊಳಗಿನ ಪ್ರತಿಯೊಂದು ಗಿಡವು ಬೇರೆ ಪ್ರತಿಯೊಂದು ಗಿಡಕ್ಕಿಂತಲೂ ಎತ್ತರವಾಗಿದೆಂದು ಹೇಳುವಂತೆಯೇ ಕೇವಲ ಅಬದ್ಧವಾಗಿರುವದು. ಯಾವದೊಂದು ಸರಕಿನ ಬೆಲೆ ಏರಲಾಗಿ, ಅಷ್ಟರ ಮಟ್ಟಿಗೆ ಬೇರೆ ಯಾವದೊಂದು ಸರಕಿನ ಬೆಲೆ ಇಳಿಯಲಿಕ್ಕೇ ಬೇಕು. ಈ ಮೇರೆಗೆ, ಅಕ್ಕಿಯ ಬೆಲೆ ಇಪ್ಪತ್ತು ವರುಷದ ಹಿಂದಿನದಕ್ಕಿಂತಲೂ ಈಗ ಏರಿದೆ ಎಂದು ಹೇಳಿದರೆ, ಇಂತಿಷ್ಟು ಅಕ್ಕಿಯನ್ನು ಕೊಟ್ಟರೆ ಇಪ್ಪತ್ತು ವರುಷದ ಹಿಂದಿನದಕ್ಕಿಂತಲೂ ಈಗ ಅರಿವೆ ಇಲ್ಲವೆ ಮತ್ತ್ಯಾವದಾದರೂ ಸರಕು ಹೆಚ್ಚು ಬರುತ್ತದೆಂದು ಹೇಳಿದಂತಾಯಿತು. ಈ ಪ್ರಸಕ್ತಿಯಲ್ಲಿ ಅರಿವೆಯನ್ನು ಅಕ್ಕಿಗೆ ಸರಿ ಮಾಡಿ ನೋಡಲಾಗಿ, ಅರಿವೆಯ ಬೆಲೆ ಇಳಿದಂತಾಯಿತು. ಯಾವದೊಂದು ಪದಾರ್ಥದ ಬೆಲೆಯ ನಿರ್ಣಯವು ವಿನಿಮಯದಿಂದ, ಅಂದರೆ ಅದನ್ನು ಕೊಟ್ಟರೆ ಬೇರೆ ಪದಾರ್ಥಗಳು ಎಷ್ಟು ಬರುವವೆಂಬುವದನ್ನು ತಿಳುಕೊಳ್ಳುವದರಿಂದ ಮಾತ್ರವೇ ಆಗುವ ಕಾರಣ, ಬೆಲೆ ಎಂಬ ಶಬ್ದದ ಅರ್ಥದಲ್ಲಿ ವಿನಿಮಯದ ಅಸ್ತಿತ್ವವು ಗರ್ಭಿತವಾಗುತ್ತದೆ.

**ವಿನಿಮಯ ಮಾಡುವಲ್ಲಿ ಅದಲುಬದಲೆಂಬ ಸಾಧನದ ಉಪಯೋಗ.**— ಕೆಲವು ಕಾಡಜನರು ಯಾವತ್ತು ಕ್ರಯವಿಕ್ರಯಗಳನ್ನು ಹಣ ಉಪಯೋಗಿಸದೆ

ಕೇವಲ ಅದಲುಬದಲಿನಿಂದಲೇ ಮಾಡುವರು. ಈ ಪ್ರಕಾರ ಯಾವನೊಬ್ಬನ ಹತ್ತರ ತನಗೆ ಅವಶ್ಯವಾದದ್ದಕ್ಕಿಂತಲೂ ಹೆಚ್ಚು ಆಹಾರವಿದ್ದರೆ, ಅವನು ಆ ಆಹಾರವನ್ನು ತಕ್ಕೊಂಡು ತನಗೆ ಬೇಕಾದ ಅಂಗಿ ಇಲ್ಲವೆ ಬಿಲ್ಲುಬಾಣಗಳನ್ನು ಕೊಡುವವನನ್ನು ಹುಡುಕಿ ತೆಗೆದು, ಅವನಿಗೆ ತನ್ನ ಹೆಚ್ಚಾದ ಆಹಾರವನ್ನು ಕೊಟ್ಟು, ಅವನಿಂದ ಅಂಗಿಯನ್ನು ಇಲ್ಲವೆ ಬಿಲ್ಲುಬಾಣಗಳನ್ನು ತಕ್ಕೊಳ್ಳುವನು. ಈ ಪ್ರಕಾರ ನಡಿಸಿದ ವಿನಿಮಯವು ಅದಲುಬದಲು ಎನಿಸುವದು. ವಿನಿಮಯದ ಈ ರೀತಿಯು ಕೇವಲ ಕಾಡುತರದ್ದಾಗಿಯೂ, ಬಹು ತೊಂದರೆಯುಳ್ಳದ್ದಾಗಿಯೂ ಇರುವದೆಂಬದು ಸಹಜವಾಗಿ ತಿಳಿಯುವದು. ದೇಶದಲ್ಲಿ ಯಾವತ್ತು ಕೊಡಕೊಳ್ಳೋಣಗಳು ಈ ಬಗೆಯಿಂದಲೇ ನಡಿಯುವ ವರೆಗೆ, ವ್ಯಾಪಾರಕ್ಕೆ ಬಹಳ ಪ್ರತಿಬಂಧವಾಗುತ್ತದೆ. ಅದಲುಬದಲಿನಿಂದ ಆಗುವ ತೊಂದರೆಗಳನ್ನು ತಪ್ಪಿಸುವಸಲುವಾಗಿಯೇ ಹಣವನ್ನು ಉಪಯೋಗಿಸುವ ಹಂಚಿಕೆಯು ಹೊರಟಿತು. ಹಾಗೂ ಯಾವತ್ತು ಜನರು ಒಂದು ಪದಾರ್ಥವನ್ನು ಗೊತ್ತು ಮಾಡಿ, ಬೇರೆ ಯಾವತ್ತು ಪದಾರ್ಥಗಳ ಬೆಲೆಗಳನ್ನು ಆ ಪದಾರ್ಥದಿಂದ ಹೇಳ ಬೇಕೆಂತಲೂ, ಹಾಗೂ ಆ ಪದಾರ್ಥವನ್ನೇ ವಿನಿಮಯದ ಸಾಧನವಾಗಿ ಉಪಯೋಗಿಸ ಬೇಕೆಂತಲೂ ತಮ್ಮೊಳಗೆ ಒಪ್ಪಿಕೊಂಡರು. ಇಂಥ ಪದಾರ್ಥವನ್ನು ಉಪಯೋಗಿಸುವದರಿಂದ ಕ್ರಯವಿಕ್ರಯಗಳನ್ನು ಅದಲುಬದಲಿನಿಂದ ನಡಿಸುವ ಅವಶ್ಯಕತೆಯು ಉಳಿಯುವದಿಲ್ಲ. ಈ ಪ್ರಕಾರದ ಹಣವು ಪ್ರಚಾರದಲ್ಲಿ ಬಂದನಂತರ, ಯಾವನೊಬ್ಬನ ಹತ್ತರ ಅವನಿಗೆ ಬೇಕಾಗುವದಕ್ಕಿಂತಲೂ ಹೆಚ್ಚು ಎತ್ತುಗಳಿದ್ದರೆ, ಆ ಹೆಚ್ಚಾದ ಎತ್ತುಗಳನ್ನು ಕೊಟ್ಟು, ತನಗೆ ಬೇಕಾದ ಅರಿವೆಗಳನ್ನೂ ಆಯುಧಗಳನ್ನೂ ದೊರಕಿಸುವದಕ್ಕಾಗಿ, ಇವುಗಳನ್ನು ಕೊಡುವಂಥ ಮತ್ತೊಬ್ಬನನ್ನು ಹುಡುಕುತ್ತ ಹೋಗ ಬೇಕಾಗುವದಿಲ್ಲ. ಅವನು ತನ್ನ ಎತ್ತುಗಳನ್ನು ಹಣಕ್ಕೆ ಮಾರಿ, ಬಂದ ಹಣದಿಂದ ತನಗೆ ಬೇಕಾದ ಪದಾರ್ಥಗಳನ್ನು, ಅವುಗಳನ್ನು ಮಾರುವಂಥ ಬೇಕಾದವರ ಕಡೆಯಿಂದ ಕೊಳ್ಳುವದಕ್ಕೆ ಸುಲಭವಾಗುತ್ತದೆ.

ಕ್ರಯದ ವ್ಯಾಖ್ಯೆ.—ಯಾವದೊಂದು ಸರಕಿನ ಬೆಲೆ ಬೇರೊಂದು ಇಂತಿಷ್ಟು ಸರಕಿಗೆ ಸರಿಯಾಗಿದೆ ಎಂದು ಹೇಳುವದಕ್ಕೆ ಬದಲಾಗಿ, ಇಂತಿಷ್ಟು ಹಣಕ್ಕೆ ಸರಿಯಾಗಿದೆಂದು ಹೇಳಿದರೆ, ಆ ಹಣವು ಆ ಸರಕಿನ ಕ್ರಯ ಅಥವಾ ಕಿಮ್ಮತ್ತು ಎಂದೆನಿಸುತ್ತದೆ. ಬೆಲೆಗೂ ಕ್ರಯಕ್ಕೂ ವಸ್ತುತಃ ಭೇದವಿಲ್ಲದ ಕಾರಣ, ಕೆಲವರು ಕ್ರಯವು ಬೆಲೆಯ ಒಂದು ಪ್ರಕಾರವಾಗಿದೆಂಬ ವ್ಯಾಖ್ಯೆಯನ್ನು ಹೇಳಿದ್ದಾರೆ. ಯಾಕಂದರೆ, ಯಾವದೊಂದು ಪದಾರ್ಥದ ಬೆಲೆಯು ಆ ಪದಾರ್ಥಕ್ಕೆ ಪ್ರತಿ

ಯಾಗಿ ಬರುವ ಪದಾರ್ಥದಷ್ಟು ಇರುವದೆಂದು ಹಿಂದೆ ಹೇಳಿದ್ದೇವೆ. ಅಂದ ಮೇಲೆ, ಯಾವದೊಂದು ಸರಕಿಗೆ, ಉದಾಹರಣಾರ್ಥವಾಗಿ ಒಂದು ವಾರ ಅಕ್ಕಿ ವೆಗೆ ವಿನಿಮಯದಿಂದ ಎರಡು ರೂಪಾಯಿ ಬಂದದ್ದಾದರೆ, ಈ ಎರಡು ರೂಪಾಯಿ ಗಳು ಒಂದು ವಾರ ಅರಿವೆಯ ಬೆಲೆಯೇ ಸರಿ ಆದರೆ ಯಾವತ್ತು ಪದಾರ್ಥಗಳ ಬೆಲೆಯ ಪರಿಮಾಣವನ್ನು ಹೇಳುವದಕ್ಕೂ, ಯಾವತ್ತು ಪದಾರ್ಥಗಳ ಕ್ರಯ ವಿಕ್ರಯಗಳನ್ನು ನಡಿಸುವದಕ್ಕೂ ಹಣವನ್ನೇ ಸರ್ವರೂ ಆರಿಸಿ ಗೊತ್ತು ಮಾಡಿ ರುವದರಿಂದ, ಹಣದಲ್ಲಿರುವ ಕ್ರಯವಿಕ್ರಯ ಶಕ್ತಿಗೆ, ಬೆಲೆಯ ಹೊರ್ತು ಮತ್ತೊಂ ದು ಹೆಸರು ಕೊಡುವದು ವಿಶೇಷ ಅನುಕೂಲವಾಗಿರುವದು. ಆದ್ದರಿಂದ, ಯಾ ವದೊಂದು ಸರಕಿಗೆ ವಿನಿಮಯದಿಂದ ಬರುವ ಹಣದ ರಕಮಿಗೆ, ಆ ಸರಕಿನ ಕ್ರಯ, ಅಥವಾ ಕಿಮ್ಮತ್ತು, ಎಂದು ಹೇಳ ತಕ್ಕದ್ದು.

ಗೋಧಿ, ಇಲ್ಲವೆ ಬೇರೆ ಯಾವ ಸರಕಿನ ಕ್ರಯ ಹೇಳುವಾಗ, ಅದನ್ನು ಹಣ ಮಾಡುವ ಚಿನ್ನ ಬೆಳ್ಳಿ ಮೊದಲಾದ ಬೆಲೆಯುಳ್ಳ ಧಾತುಗಳಿಗೆ ಸರಿ ಮಾಡಿ ನೋ ಡುತ್ತೇವೆ; ಆದರೆ, ಗೋಧಿ ಇಲ್ಲವೆ ಬೇರೆ ಯಾವ ಸರಕಿನ ಬೆಲೆ ಹೇಳ ಬೇಕಾದರೆ, ಅದಕ್ಕೂ ಬೇರೆ ಯಾವತ್ತೂ ಸರಕುಗಳಿಗೂ ತುಲನೆ ಮಾಡುತ್ತೇವೆ. ಆ ಕಾರಣ ಯಾವತ್ತು ಸರಕುಗಳ ಬೆಲೆಗಳು ಏರುವದು ಇಲ್ಲವೆ ಇಳಿಯುವದು ಅಸಂಭವ ವಾದರೂ, ಯಾವತ್ತು ಸರಕುಗಳ ಕ್ರಯಗಳು ಏರ ಬಹುದು, ಇಲ್ಲವೆ ಇಳಿಯ ಬಹುದೆಂಬದು ಸ್ಪಷ್ಟವಾಗಿದೆ. ಯಾಕಂದರೆ, ಅನೇಕ ಕಾರಣಗಳಿಂದ ಯಾವತ್ತು ಸರಕುಗಳಿಗೆ ವಿನಿಮಯದಿಂದ ಹೆಚ್ಚು ಹಣ ಬರ ಬಹುದು, ಇಲ್ಲವೆ ಕಡಿಮೆ ಬರ ಬಹುದು. ಉದಾಹರಣಾರ್ಥವಾಗಿ, ಯಾವದೊಂದು ದೇಶದೊಳಗಿನ ಜನಸಂ ಖ್ಯೆಯೂ ವ್ಯಾಪಾರವೂ ಇದ್ದಕ್ಕಿದ್ದ ಹಾಗೇ ಇದ್ದು, ಬಳಿಕೆಯಲ್ಲಿದ್ದ ಹಣವು ಮಾತ್ರ ಒಮ್ಮಿಂದೊಮ್ಮೆ ಇಮ್ಮಡಿಯಾದರೆ, ಯಾವತ್ತು ಸರಕುಗಳ ಕ್ರಯಗಳು ಅವಶ್ಯವಾಗಿ ಏರುವವು.

ಮೇಲೆ ಹೇಳಿದ ವ್ಯಾಖ್ಯೆಗಳಿಂದ ಸಿದ್ಧವಾಗುವದೇನಂದರೆ, ಸರಕುಗಳ ಕ್ರಯ ಗಳು ಇಮ್ಮಡಿ ಇಲ್ಲವೆ ಮುಮ್ಮಡಿ ಏರಿದರೂ, ಹಣವು ಹೊರ್ತಾಗಿ ಉಳಿದ ಯಾವತ್ತು ಸರಕುಗಳ ಬೆಲೆಗಳಲ್ಲಿ ಏನೂ ಹೆಚ್ಚು ಕಡಿಮೆಯಾಗದೆ ಇರಬಹುದು. ಅಂದರೆ, ಕ್ರಯಗಳು ಏರಿದರೂ, ಬೇರೆ ಬೇರೆ ಸರಕುಗಳೊಳಗಿದ್ದ ಪರಸ್ಪರ ಸಂಬಂ ಧಕ್ಕೆ ಏನೂ ದಕ್ಕಿಯಾಗದೆ ಇರಬಹುದು. ಮೊದಲು ಒಂದು ವಾರ ಅರಿವೆಗೆ ೨ ಶೇರು ಅಕ್ಕಿ ಬರುತ್ತಿತ್ತೆಂದು ಕಲ್ಪಿಸಿರಿ. ಇನ್ನು, ದೇಶದೊಳಗಿನ ಹಣವು ಮುಮ್ಮಡಿಯಾಯಿತೆಂದು ತಿಳಿದರೆ, ಹಣದ ಬೆಲೆ ಮೂರು ಪಾಲು ಇಳಿದು,

ಮೊದಲು ಒಂದುವಾರ ಅರಿವೆಗೆ ೪ ಆಣೆ ಬೀಳುತ್ತಿದ್ದರೆ, ಈಗ ೧೨ ಆಣೆ ಬೀಳುವವು; ಮತ್ತು ಒಂದು ಶೇರು ಅಕ್ಕಿಗೆ ಮೊದಲು ೨ ಆಣೆ ಬೀಳುತ್ತಿದ್ದರೆ, ಈಗ ಒಂದು ಶೇರಿಗೆ ೬ ಆಣೆ ಬೀಳುವವು. ಅಂತೂ, ಅರಿವೆ ಮತ್ತು ಅಕ್ಕಿ ಇವುಗಳ ಪರಸ್ಪರ ಬೆಲೆಗಳಲ್ಲಿ ಏನೂ ಹೆಚ್ಚು ಕಡಿಮೆಯಾಗಲಿಕ್ಕಿಲ್ಲ. ಆದ್ದರಿಂದ, ಯಾವತ್ತು ಕ್ರಯಗಳು ಏರಿದಾಗ್ಯೂ, ಅದರಿಂದ ಹಣವು ಹೊರ್ತಾಗಿ ಬೇರೆ ಯಾವ ಸರಕಿನ ಬೆಲೆಯೂ ಹೆಚ್ಚುಕಡಿಮೆಯಾಗುವದಿಲ್ಲ. ಕ್ರಯಗಳು ಏರಿದರೆ, ಸರಕುಗಳನ್ನು ಕೊಳ್ಳಬೇಕಾದರೆ ಹೆಚ್ಚು ಹಣ ಕೊಡಬೇಕಾಗುವದು; ಅಂದರೆ, ಹಣದ ಬೆಲೆಯು ಇಳಿದಂತಾಗುವದು. ಇದಕ್ಕೆ ವಿಪರೀತವಾಗಿ, ಕ್ರಯಗಳು ಇಳಿದದ್ದಾದರೆ, ಅಷ್ಟೇ ಹಣದ ರಕಮಿಗೆ ಬೇರೆ ಪದಾರ್ಥಗಳು ಮೊದಲಿಗಿಂತ ಹೆಚ್ಚು ಬರುವವು; ಅಂದರೆ, ಹಣದ ಬೆಲೆ ಏರಿದಂತಾಗುವದು. ಈ ವಿಚಾರಗಳು, ಹಣದ ಸ್ವರೂಪವನ್ನೂ ಕಾರ್ಯಗಳನ್ನೂ ಇದಕ್ಕೂ ವಿಶೇಷವಾಗಿ ವ್ಯಕ್ತ ಪಡಿಸುವ ಅವಶ್ಯಕತೆಯನ್ನು ಸೂಚಿಸುತ್ತವೆ. ಆ ಕಾರಣ, ಈ ವಿಷಯದ ವಿವೇಚನವನ್ನು ಮುಂದಿನ ಅಧ್ಯಾಯದಲ್ಲಿ ಮಾಡುವೆವು.

### ಒಂದನೆ ಅಧ್ಯಾಯದ ಮೇಲಿನ ಪ್ರಶ್ನಗಳು.

### ಬೆಲೆ ಮತ್ತು ಕ್ರಯ.

೧. ಬೆಲೆಯೆಂದರೇನು?

೨. ಯಾವತ್ತು ಪದಾರ್ಥಗಳ ಬೆಲೆಗಳು ಏರುವದು ಅಸಂಭಾವ್ಯವಾಗಿದೆಂಬದನ್ನು ಸಿದ್ಧ ಮಾಡಿರಿ.

೩. ಸರಕುಗಳ ಅದಲುಬದಲು ಮಾಡೋಣವೆಂದರೇನು?

೪. ಯಾವ ಉಪಾಯಗಳಿಂದ ಅದಲುಬದಲಿನ ಅಗತ್ಯವಿಲ್ಲದಂತೆ ಆಗಿದೆ.

೫. ಕ್ರಯವೆಂದರೇನು?

೬. ಯಾವತ್ತು ಪದಾರ್ಥಗಳ ಕ್ರಯಗಳು ಏರ ಬಹುದೋ ಅಥವಾ ಇಳಿಯ ಬಹುದೋ?

೭. ಕ್ರಯಗಳು ಒಮ್ಮಿಂದೊಮ್ಮೆ ಇಮ್ಮಡಿಯಾದರೆ, ಅದರಿಂದ ಪದಾರ್ಥಗಳ ಬೆಲೆಗಳ ಮೇಲೆ ಏನು ಪರಿಣಾಮವಾಗುವದು?

---

೧. ಪೈರು ನೆಟ್ಟಗೆ ಬಾರದ್ದರಿಂದ ಜೋಳದ ಬೆಲೆ ಏರಿದರೆ, ಈ ಏರೋಣವು ಅಂತರ್ಗತ ಕಾರಣದಿಂದಾಯಿತೋ ಬಾಹ್ಯಕಾರಣದಿಂದಾಯಿತೋ?

೨. ಯಾವತ್ತು ಸರಕುಗಳ ಕ್ರಯಗಳು ಏರಿದರೆ ದೇಶವು ಹೆಚ್ಚು ಐಶ್ವರ್ಯವುಳ್ಳದ್ದಾಗುವದೋ?

## ೨ನೇ ಅಧ್ಯಾಯ.

### ಹಣದ ವಿಷಯದಲ್ಲಿ.

**ಹಣದಿಂದಾಗುವ ಕಾರ್ಯಗಳು.**— ಕೊಡಕೊಳ್ಳುವ ವ್ಯವಹಾರವನ್ನು ಅದಲುಬದಲಿನಿಂದ ನಡಿಸಿದರೆ ಉಂಟಾಗುವ ತೊಂದರೆಗಳನ್ನೂ, ಈ ತೊಂದರೆಗಳನ್ನು ತಪ್ಪಿಸುವದಕ್ಕಾಗಿ ಯಾವತ್ತು ಸುಧಾರಿಸಿದ ದೇಶಗಳಲ್ಲಿ ಹಣವನ್ನು ಉಪಯೋಗಿಸುತ್ತಾರೆಂಬದನ್ನೂ ಹಿಂದೆ ವಿವರಿಸಿದ್ದೇವೆ. ಹಣವು, ಬೇರೆ ಯಾವತ್ತೂ ಪದಾರ್ಥಗಳ ಬೆಲೆಯನ್ನು ತಿಳಿಸುವ ಪರಿಮಾಣವಾಗುವದಕ್ಕಾಗಿಯೂ, ಕೊಡಕೊಳ್ಳುವ ಸಾಧನವಾಗುವದಕ್ಕಾಗಿಯೂ ಗೊತ್ತು ಮಾಡಲ್ಪಟ್ಟ ಪದಾರ್ಥವಾಗಿದೆ. ಬೆಲೆಯನ್ನು ತಿಳಿಸುವದಕ್ಕೆ ಇಂಥಾದ್ದೊಂದು ಪದಾರ್ಥವಿಲ್ಲದ ಪಕ್ಷದಲ್ಲಿ, ಯಾವನೊಬ್ಬನ ಸಂಪತ್ತು ಇಷ್ಟೆಂದು ಹೇಳ ಬೇಕಾದರೆ, ಅವನ ಆಸ್ತಿಯ ಉದ್ದವಾದ ಪಟ್ಟಿಯನ್ನು ಓದಿ ಹೇಳ ಬೇಕಾಗುವದೇ ಹೊರ್ತು, ಬೇರೆ ಬಗೆಯಿಂದ ಹೇಳುವದು ಸಾಧ್ಯವಾಗದು. ಈ ಮೇರಿಗೆ ಒಬ್ಬ ದೊಡ್ಡ ಜಮೀನದಾರನ ಸಂಪತ್ತನ್ನು ಹೇಳ ಬೇಕಾದರೆ ಅವನ ಭೂಮಿಗಳನ್ನೂ, ಭೂಮಿಗಳೊಳಗಿನ ಸಣ್ಣ ದೊಡ್ಡ ಗಿಡಗಳನ್ನೂ, ಅವನ ಮನೆಯೊಳಗಿನ ಆಸ್ತಿಯನ್ನೂ, ಕುದುರೆಗಳನ್ನೂ ಎತ್ತುಗಳನ್ನೂ, ಬಂಡಿ ಮೊದಲಾದವುಗಳನ್ನೂ ಸಾಙ್ಗವಾಗಿ ಹೇಳ ಬೇಕಾಗುವದು. ಈ ಪ್ರಕಾರ ಅವನ ಯಾವತ್ತು ಆಸ್ತಿಯ ಪಟ್ಟಿಯನ್ನು ಬರೆಯ ಬೇಕಾದರೆ ಎಷ್ಟೋ ದಿವಸಗಳು ಬೇಕಾಗ ಬಹುದು. ಇಷ್ಟೆಲ್ಲ ಆದನಂತರವಾದರೂ, ಆ ಪಟ್ಟಿಯನ್ನು ಓದುವದರಿಂದ ಅವನ ಸಂಪತ್ತು ಇಷ್ಟೇ ಎಂದು ಸ್ಪಷ್ಟವಾಗಿ ತಿಳಿಯಲಾರದು. ಯಾವದೊಂದು ದೇಶದ ಸಂಪತ್ತು ಎಷ್ಟೆಂದು ಕೇಳಿದ್ದಕ್ಕೆ, ಈ ಪ್ರಕಾರ ಆ ದೇಶದವರ ಯಾವತ್ತು ಸಂಪತ್ತಿನ ಒಡವೆಗಳನ್ನು ಉಲ್ಲೇಖಿಸ ಬೇಕಾದರೆ, ನಮ್ಮ ಉತ್ತರವು ಎಂದೂ ಮುಗಿಯಲಿಕ್ಕಿಲ್ಲ.

ಹಣವನ್ನು ಉಪಯೋಗಿಸಿದ್ದರಿಂದ ಈ ತೊಂದರೆಯು ಪರಿಹಾರವಾಗಿದೆ. ಹ್ಯಾಗಂದರೆ, ಈಗ್ಯೆ ಬೇರೆ ಬೇರೆ ವ್ಯಕ್ತಿಗಳ ಮತ್ತು ದೇಶಗಳ ಸಂಪತ್ತು, ಉಚ ಧಾತುಗಳ ಪ್ರಮಾಣದಿಂದ ಎಣಿಕೆ ಮಾಡಲ್ಪಡುವದು. ಅದರಿಂದ ಯಾವದೊಂದು ದೇಶದ ಇಲ್ಲವೆ ಯಾವನೊಬ್ಬ ಮನುಷ್ಯನ ಸಂಪತ್ತು ಇಂತಿಷ್ಟು ಸಾವಿರ ರೂಪಾಯಿ, ಇಲ್ಲವೆ ಇಂತಿಷ್ಟು ಸಾವಿರ ಪೌಂಡುಗಳಾಗಿರುವದೆಂದು ಹೇಳುವದಕ್ಕೆ ಅನುಕೂಲವಾಗುತ್ತದೆ.

ಕೊಡಕೊಳ್ಳುವ ವ್ಯವಹಾರಗಳನ್ನು ಹಣದ ದ್ವಾರಾ ನಡಿಸಲಾಗಿ ಉಂಟಾಗುವ ಪ್ರಯೋಜನಗಳನ್ನು ಹಿಂದೆ ಅದಲುಬದಲಿನ ವಿಷಯವಾಗಿ ಹೇಳಿದ ಸ್ಥಳದಲ್ಲಿ ವಿವರಿಸಿದ್ದೇವೆ. ಜನರು, ಕೊಡಕೊಳ್ಳುವ ವ್ಯವಹಾರಗಳನ್ನು ಅದಲುಬದಲಿನಿಂದ ನಡಿಸುವದನ್ನು ಬಿಟ್ಟು, ಅದಕ್ಕೂ ಅನುಕೂಲವಾದ ಬೇರೆ ಯಾವದಾದರೊಂದು ಪದ್ಧತಿಯನ್ನು ಅನುಸರಿಸಿದ ಹೊರ್ತು, ಯಾವ ದೇಶವೂ ವ್ಯಾಪಾರದಲ್ಲಿ ಉನ್ನತಿಯನ್ನು ಪಡಿಯಲಾರದು. ಮೊಳೆಗಳನ್ನು ಜಡಿಯುವದಕ್ಕೆ ಸುತ್ತಿಗೆಯು ಉಪಯೋಗಿಸುವಂತೆಯೇ, ಕೊಡಕೊಳ್ಳುವ ವ್ಯವಹಾರವನ್ನು ನಡಿಸುವದಕ್ಕೆ ಹಣವೆಂಬದೊಂದು ಸಾಧನವಾಗಿರುವದೆಂದು, ಪ್ರೊಫೆಸರ ಬೋನಮಿ ಪ್ರಾಯಿಸನೆಂಬವನು ಹೇಳಿದ್ದಾನೆ. ಹಣವನ್ನು ಬೆಲೆಯ ಪರಿಮಾಣವಾಗಿ, ಇಲ್ಲವೆ ವಿನಿಮಯದ ಸಾಧನವಾಗಿ ಉಪಯೋಗಿಸದೆ, ಸರಕುಗಳನ್ನು ಕೊಡಕೊಳ್ಳುವ ವ್ಯವಹಾರವನ್ನು ನಡಿಸುವದು ಕೇವಲ ಅಶಕ್ಯವೇನೂ ಅಲ್ಲ. ಆದರೂ ಈ ತರದ ವ್ಯವಹಾರವು, ಬಡಿಗನು ಉಳಿ, ಬಾಚಿಗಳಿಲ್ಲದೆ ನಡಿಸುವ ಬಡಿಗತನದಷ್ಟೇ ಅಂದವಾಗಿಯೂ, ಸುಕರವಾಗಿಯೂ ಸಾಗುವದು.

ಹಣವೆಂದು ಗೊತ್ತು ಮಾಡಲ್ಪಟ್ಟ ಪದಾರ್ಥವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಲಭವಾಗಿ ವೈಯುವದಕ್ಕೆ ಬರುವ ಹಾಗಿರ ಬೇಕೆಂಬುವದು ಸ್ಪಷ್ಟವದೆ. ಕಟ್ಟಿಗೆ, ಕಬ್ಬಿಣ, ಮೊದಲಾದವುಗಳು ಸ್ವಲ್ಪ ಸ್ಥಳವನ್ನು ವ್ಯಾಪಿಸಿ, ಬಹಳ ಬೆಲೆ ಬಾಳುವಂಥ ಪದಾರ್ಥಗಳಲ್ಲ. ಇಂಥಾದ್ದೊಂದು ಪದಾರ್ಥವನ್ನು ಹಣವಾಗಿ ಉಪಯೋಗಿಸಿದರೆ, ಅದರಿಂದ ಅದಲುಬದಲಿನಿಂದ ಉಂಟಾಗುವಷ್ಟೇ ತೊಂದರೆಯಾಗ ಬಹುದು. ಇಂಥ ಪದಾರ್ಥವನ್ನು ಹಣವಾಗಿ ಉಪಯೋಗಿಸಿದ್ದಾದರೆ, ಸಣ್ಣ ಸಣ್ಣ ಖರೀದಿಗಳನ್ನು ಮಾಡ ಬೇಕಾದಾಗ್ಯೂ, ಸಂಗಡ ಹಣವನ್ನು ವೈಯುವದಕ್ಕೆ ಎತ್ತುಗಳೂ, ಬಂಡಿಗಳೂ ಬೇಕಾಗುವವು. ಇದರಿಂದ ಸಿದ್ಧವಾಗುವದೇನಂದರೆ, ಭಂಗಾರ, ಇಲ್ಲವೆ ಬೆಳ್ಳಿಯನ್ನೇ ಹಣವಾಗಿ ಉಪಯೋಗಿಸ ಬೇಕೆಂಬುವದು ಅವಶ್ಯವಿಲ್ಲದಿದ್ದಾಗ್ಯೂ, ಬೆಲೆಯ ಪರಿಮಾಣವಾಗಿಯೂ, ವಿನಿಮಯದ ಸಾಧನವಾಗಿಯೂ, ಉಪಯೋಗಿಸಲ್ಪಡುವ ಪದಾರ್ಥದಲ್ಲಿ ಇರಲವಶ್ಯವಾದ ಯಾವತ್ತು ಗುಣಗಳು ಈ ಎರಡು ಧಾತುಗಳಲ್ಲಿ ವಿಲಕ್ಷಣವಾಗಿ ಒಟ್ಟುಗೂಡಿರುವದರಿಂದ, ಸುಧಾರಿಸಿದ ರಾಷ್ಟ್ರಗಳಲ್ಲೆಲ್ಲ ವಾಡಿಕೆಯಾಗಿ ಈ ಧಾತುಗಳನ್ನೇ ಉಪಯೋಗಿಸುತ್ತಾರೆ.

**ಬೇರೆ ಬೇರೆ ದೇಶಗಳಲ್ಲಿ ನಾನಾ ತರದ ಪದಾರ್ಥಗಳು ಹಣವಾಗಿ ಉಪಯೋಗಿಸಲ್ಪಟ್ಟಿರುವವು.**—ವಾಡಿಕೆಯಾಗಿ, ಹಣವಾಗಿ ಉಪಯೋಗಿಸುವ

ದಕ್ಕೆ ಬೆಳ್ಳಿ ಭಂಗಾರಗಳೇ ಉತ್ಕೃಷ್ಟವಾದ ಪದಾರ್ಥಗಳೆಂದು ತಿಳಿಯುವದುಂಟು; ಆದರೂ ಕೆಲವು ದೇಶದವರು ಈ ಕೆಲಸಕ್ಕೆ ಬೇರೆ ಪದಾರ್ಥಗಳನ್ನು ಉಪಯೋಗಿಸಿದ್ದಾರೆ. ಪೂರ್ವಕಾಲದಲ್ಲಿ ಚೀನ ದೇಶದವರು ಚಹಾ ಎಲೆಯಿಂದ ಒತ್ತಿ ಮಾಡಿದ ಬಿಲ್ಲೆಗಳನ್ನು ಉಪಯೋಗಿಸುತ್ತಿದ್ದರು. ಆಫ್ರಿಕಾ ಖಂಡದೊಳಗೆ ಕೆಲವು ಜಾತಿಯ ಜನರು ಒಂದು ತರದ ಶಿಂಪುಗಳನ್ನು ಉಪಯೋಗಿಸುತ್ತಾರೆ. ಗ್ರೀಕರು, ಅರಬರು ಮೊದಲಾದ ಅನೇಕ ಪ್ರಾಚೀನರು ದನಕರಗಳನ್ನು ಉಪಯೋಗಿಸಿರುವರು. ಅಬಿಸಿನಿಯಾ ದೇಶದಲ್ಲಿ ಉಪ್ಪು ಹಣವಾಗಿ ಉಪಯೋಗಿಸಲ್ಪಟ್ಟದೆ. ಬೇರೆ ದೇಶಗಳಲ್ಲಿ ತೊಗಲನ್ನೂ, ಹದಹಾಕಿದ ಚರ್ಮವನ್ನೂ ಉಪಯೋಗಿಸಿದ್ದಾರೆ. ಆದರೆ, ಬೇರೆ ಎಲ್ಲ ಪದಾರ್ಥಗಳಿಗಿಂತಲೂ ಬೆಳ್ಳಿ ಭಂಗಾರಗಳೇ ಹಣದ ಕಾರ್ಯಗಳನ್ನು ಉತ್ಕೃಷ್ಟವಾಗಿ ನೆರವೇರಿಸುತ್ತವೆಂಬುವದು ಅನುಭವದಿಂದ ಸಿದ್ಧವಾಗಿದೆಂದು ಹೇಳ ಬಹುದು. ಯಾಕಂದರೆ, ಹಣವಾಗಿ ಉಪಯೋಗಿಸುವದಕ್ಕೆ ಆರಿಸಲ್ಪಟ್ಟ ಪದಾರ್ಥದಿಂದ ಎರಡು ಕಾರ್ಯಗಳು ಆಗ ತಕ್ಕವುಗಳೆಂಬದನ್ನು ನೆನಪಿನಲ್ಲಿಡ ಬೇಕು. ಈ ಎರಡು ಕಾರ್ಯಗಳು ಯಾವವಂದರೆ:—

೧. ಬೆಲೆಯ ಸಾರ್ವತ್ರಿಕ ಪ್ರಮಾಣವಾಗುವದು.

೨. ವಿನಿಮಯದ ಸಾಮಾನ್ಯ ಸಾಧನವಾಗುವದು.

**ಹಣವಾಗಿ ಆರಿಸಲ್ಪಟ್ಟ ಪದಾರ್ಥದಲ್ಲಿ ಏಳು ಗುಣಗಳಿರ ಬೇಕು.**— ಇತ್ತಲಾಗಿ ತೀರಿಕೊಂಡ ಪ್ರೊಫೆಸರ ಜೇವ್ಹನ್ಸರೆಂಬುವರು ತಮ್ಮ 'ಹಣ'ವೆಂಬ ಹೆಸರಿನ ಗ್ರಂಥದಲ್ಲಿ ಹಣವಾಗಿ ಆರಿಸಲ್ಪಟ್ಟ ಪದಾರ್ಥದಲ್ಲಿ ಇರ ತಕ್ಕ ಏಳು ಗುಣಗಳನ್ನು ವಿವರಿಸಿದ್ದಾರೆ. ಅವು ಯಾವವಂದರೆ:—

೧. ಸ್ವತಃಸಿದ್ಧ ಬೆಲೆ.
೨. ಸುವಾಹ್ಯತ್ವ.
೩. ಅವಿನಾಶಿತ್ವ.
೪. ಏಕಜಾತೀಯತ್ವ.
೫. ವಿಭಾಜ್ಯತ್ವ.
೬. ಬೆಲೆಯ ಸ್ಥಿರತ್ವ.
೭. ಜ್ಞೇಯತ್ವ.

**ಸ್ವತಃಸಿದ್ಧ ಬೆಲೆ ಎಂಬ ಮೊದಲನೆ ಗುಣವು.**— ಈ ಗುಣಗಳಲ್ಲಿ ಮೊದಲನೆ ಗುಣದ ಮಹತ್ವವು ಸಹಜವಾಗಿ ಧ್ಯಾನದಲ್ಲಿ ಬರುವದು. ಹಣವಾಗಿ ಸಂಕೇತಿಸಲ್ಪಟ್ಟ ಪದಾರ್ಥವು ವಿನಿಮಯದ ಸಾಧನವೂ, ಬೆಲೆಯ ಪರಿಮಾಣವೂ ಆಗುವದರಿಂದ ಅದಕ್ಕೆ ಬರುವ ಬೆಲೆಯಲ್ಲದೆ, ಅದಕ್ಕೆ ಸ್ವಂತ ಬೆಲೆಯೂ ಇರ ಬೇಕು. ಅಂದರೆ, ಆ ಪದಾರ್ಥವನ್ನು ಹಣವಾಗಿ ಉಪಯೋಗಿಸದಿದ್ದರೂ ಅದು ಜನರಿಗೆ

ಬೇಕಾದ ಪದಾರ್ಥವಾಗಿರ ಬೇಕು. ಯಾಕಂದರೆ ಜನರು ವಾಡಿಕೆಯಾಗಿ ಬೆಲೆಯುಳ್ಳದ್ದೆಂದು ತಿಳಿಯುವಂಥ ಪದಾರ್ಥದಿಂದಲೇ ಹಣವನ್ನು ಮಾಡದಿದ್ದರೆ, ಆ ಹಣವನ್ನು ಬೇರೆ ಸರಕುಗಳಿಗೆ ಬದಲಾಗಿ ತಕ್ಕೊಳ್ಳಲಿಕ್ಕೆ ಜನರು ಸರ್ವತ್ರ ಒಪ್ಪಿಕೊಳ್ಳಲಿಕ್ಕಿಲ್ಲ. ಒಂದು ದೇಶದಲ್ಲಿ ನಡಿಯುವ ಹಣಕ್ಕೆ ಬೇರೊಂದು ದೇಶದಲ್ಲಿ ಏನು ಬೆಲೆ ಬರಲಿಕ್ಕಿಲ್ಲ. ಒಂದು ದೇಶದಲ್ಲಿ ಕವಡಿಗಳನ್ನು ಇಲ್ಲವೆ ತೊಗಲಿನ ಚೂರುಗಳನ್ನು ರೂಪಾಯಿಗಳಂತೆ ಉಪಯೋಗಿಸಿದರೆ, ಪರದೇಶದವರು ಈ ನಾಣ್ಯಗಳನ್ನು ಹ್ಯಾಗೆ ಹಿಡಿದಾರು? ಹಿಡಿಯಲಿಕ್ಕಿಲ್ಲ. ಬ್ಯಾಂಕಿನ ನೋಟುಗಳು ಈ ನಿಯಮಕ್ಕೆ ಅಪವಾದವಾಗಿವೆಂದು ಯಾರಾದರೂ ಆಲೋಚಿಸ ಬಹುದು. ಆದರೆ ಇವು ತೋರಿಕೆಯಲ್ಲಿ ಮಾತ್ರ ಅಪವಾದವಾಗಿ ಕಾಣಿಸುತ್ತವೇ ಹೊರ್ತು ನಿಜವಾದ ಅಪವಾದಗಳಲ್ಲ. ಬ್ಯಾಂಕಿನ ನೋಟು ಭಂಗಾರದ (ಇಂಗ್ಲಂಡದಲ್ಲಿ) ಪ್ರತಿನಿಧಿಯಾಗಿ ವರ್ತಿಸುತ್ತದೆ. ಬ್ಯಾಂಕಿನ ನೋಟೆಂಬುವದು ಬೇಡಿದ ಕ್ಷಣಕ್ಕೆ ನಗದು ಹಣ ಕೊಡುವ ವಚನವಾಗಿರುವದು. ಈ ವಚನಕ್ಕೆ ಸರಿಯಾಗಿ ತಮ್ಮ ನೋಟಿಗೆ ಬೇಕಾದಾಗ ಹಣ ದೊರಿಯ ಬಹುದೆಂಬ ಭರವಸವಿರುವ ವರೆಗೆ ಮಾತ್ರ ಜನರು ನೋಟುಗಳು ಅವುಗಳಲ್ಲಿ ಕಾಣಿಸಿದ ಹಣದ ರಕಮಿಗೆ ಸರಿಯಾಗಿವೆಂದು ತಿಳಿದು, ಅವುಗಳನ್ನು ತೆಗೆದು ಕೊಳ್ಳುವರು. ಈ ಬಗೆಯ ನಂಬಿಗೆಯು ಇಲ್ಲದಿದ್ದರೆ ನೋಟುಗಳು ಎಂದಿಗೂ ನಡಿಯಲಾರವು. ಆದರೆ ಚಿನ್ನ ಬೆಳ್ಳಿಗಳ ಮಾತು ಹೀಗಲ್ಲ; ಯಾಕಂದರೆ, ಅನೇಕ ಕಾರಣಗಳಿಂದ ಅತಿ ಪ್ರಾಚೀನ ಕಾಲದಿಂದ ತೀರ ಕಾಡು ದೇಶಗಳಲ್ಲಿ ಸಹ ಚಿನ್ನ ಬೆಳ್ಳಿಗಳು ಬಹಳ ಬೆಲೆಯುಳ್ಳವೆಂದು ಎಣಿಸಲ್ಪಟ್ಟವೆ. ಈ ಧಾತುಗಳ ಹೊಳವು ಅವಿನಾಶಿತ್ವ ಘನವರ್ಧನೀಯತ್ವಗಳ ಮೂಲಕವಾಗಿ, ಅಲಂಕಾರಗಳನ್ನೂ ಆಭರಣಗಳನ್ನೂ ಮಾಡುವ ಕೆಲಸದಲ್ಲಿ ಯಾವಾಗಲೂ ಈ ಧಾತುಗಳಿಗೆ ಎಲ್ಲ ದೇಶಗಳಲ್ಲಿ ಬಹಳ ಬೆಲೆಯುಂಟು. ಆ ಕಾರಣ, ಹಣವಾಗಿ ಉಪಯೋಗಿಸಲ್ಪಡುವ ಪದಾರ್ಥಗಳಲ್ಲಿ ಇರಲವಶ್ಯವಾದ ಸ್ವತಃಸಿದ್ಧ ಬೆಲೆ ಎಂಬ ಮೊದಲನೆ ಗುಣವು ಬೆಳ್ಳಿ ಭಂಗಾರಗಳಲ್ಲಿ ಪರಿಪೂರ್ಣವಾಗಿದೆ.

**ಸುವಾಹ್ಯತ್ವವು ಎರಡನೆ ಗುಣವು.**—ಈ ಗುಣಕ್ಕೆ, ಸ್ವಲ್ಪ ಸ್ಥಳವನ್ನು ವ್ಯಾಪಿಸಿ ಬಹಳ ಬೆಲೆ ಬಾಳುವಂಥ ಗುಣವೆಂತಲೂ ಹೇಳುವದುಂಟು. ಚಿನ್ನ ಬೆಳ್ಳಿಗಳಲ್ಲಿ ಈ ಗುಣವು ಬಹಳ ಪ್ರಮಾಣದಿಂದ ವಾಸಿಸುವದೆಂಬದು ಸ್ಪಷ್ಟವೇ ಸರಿ. ಬೆಳ್ಳಿ ಭಂಗಾರಗಳನ್ನು ಶೋಧಿಸಿ ತೆಗೆಯುವದು ಬಹಳ ಶ್ರಮ. ಆದ್ದರಿಂದ, ಈ ಧಾತುಗಳು ಅಪರೂಪವಾಗಿ ದೊರೆಯುವವು. ಮತ್ತು ಇವುಗಳನ್ನು ಸಂಪಾ

ದಿಸುವದಕ್ಕೆ ಜನರಾದರೂ ಹವಣಿಸುವದು ಬಹಳ. ಆ ಕಾರಣ ಈ ಧಾತುಗಳು ಬಹಳ ಬೆಲೆಗಾಣುವದು ಸಹಜವಾದದ್ದು. ಚಿನ್ನ ಬೆಳ್ಳಿಗಳಿಗಿಂತಲೂ ಹೆಚ್ಚು ಬೆಲೆ ಬಾಳಿ, ಕಡಿಮೆ ಸ್ಥಳ ವ್ಯಾಪಿಸುವಂಥ ವಜ್ರ ಮುಂತಾದ ಹರಳುಗಳ ಬಗೆಯ ಪದಾರ್ಥಗಳೂ ಇರುವವೆಂಬದು ನಿಜ. ಆದರೂ, ವಜ್ರದ ನಾಣ್ಯಗಳನ್ನು ಮಾಡಲಾಗಿ ಅನುಕೂಲ್ಯಕ್ಕಿಂತಲೂ ತೊಂದರೆಯೇ ವಿಶೇಷವಾಗುವದು. ಯಾಕಂದರೆ, ಹತ್ತು ಇಲ್ಲವೆ ಹದಿನೈದು ರೂಪಾಯಿಗಳ ಬೆಲೆಯ ವಜ್ರವು ಸೂಜಿಯ ತಲೆಯಷ್ಟು ಇರುವದು. ಇಂಥ ಸೂಕ್ಷ್ಮವಾದ ನಾಣ್ಯಗಳನ್ನು ಉಪಯೋಗಿಸುವ ಬಗೆ ಹ್ಯಾಗೆ? ಇಂಥ ನಾಣ್ಯಗಳು ದಿನಾಲು ಎಷ್ಟೋ ಕಳೆದು ಹೋಗುವವು. ಆದ್ದರಿಂದ, ಬೆಳ್ಳಿ ಭಂಗಾರಗಳಿಗೆ ಬದಲಾಗಿ ವಜ್ರಗಳನ್ನು ಹಣದಂತೆ ಉಪಯೋಗಿಸಿದರೆ, ಲಾಭಕ್ಕಿಂತಲೂ ನಷ್ಟಗಳೇ ಹೆಚ್ಚಾಗುವವು. ಆದಕಾರಣ, ಹಣವಾಗಿ ಉಪಯೋಗಿಸುವ ಪದಾರ್ಥವು ಸ್ವಲ್ಪ ಸ್ಥಳ ವ್ಯಾಪಿಸಿ ಬಹಳ ಬೆಲೆ ಬಾಳುವಂಥಾದ್ದಾಗಿರ ಬೇಕೆಂದು ಹೇಳಿದಾಗ್ಯಾದರೂ, ಆ ಪದಾರ್ಥದ ಆಕಾರಕ್ಕೂ ಬೆಲೆಗೂ ಇರುವ ವ್ಯತ್ಯಾಸವು ಕೆಲವೊಂದು ಪ್ರಮಾಣವನ್ನು ಮೀರ ಬಾರದೆಂಬುವದು ಸ್ಪಷ್ಟವದೆ. ಸಣ್ಣ ಸಣ್ಣ ರಕಮುಗಳನ್ನು ಕೊಡುವಾಗ ಭಂಗಾರದ ನಾಣ್ಯಗಳನ್ನು ಉಪಯೋಗಿಸುವದು ಎಷ್ಟು ಮಾತ್ರವೂ ಅನುಕೂಲವಾಗದು. ಹತ್ತು ರೂಪಾಯಿ ಬೆಲೆಯ ವಜ್ರವನ್ನು ಉಪಯೋಗಿಸುವದರಿಂದ ಆಗುವ ತೊಂದರೆಯಷ್ಟೇ ತೊಂದರೆಯು, ಎರಡು ಆಣೆ ಬೆಲೆಯ ಬೆಳ್ಳಿಯ ಚವಲಗಳನ್ನು ಉಪಯೋಗಿಸದೆ ಭಂಗಾರದ ನಾಣ್ಯಗಳನ್ನು ಉಪಯೋಗಿಸುವದರಿಂದ ಉಂಟಾಗುವದು. ಇದರಂತೆಯೇ ತಾಮ್ರದ ನಾಣ್ಯಗಳಿಗೆ ಬದಲಾಗಿ ಬೆಳ್ಳಿಯ ನಾಣ್ಯಗಳನ್ನೂ ಉಪಯೋಗಿಸಲಾಗದು. ಈ ದೇಶದಲ್ಲಿ ಚಿನ್ನದ ನಾಣ್ಯಗಳಿಲ್ಲದರಿಂದ ಪ್ರಯಾಣಸ್ಥರಿಗೆ ದಿನಂಪ್ರತಿಯ ಖರ್ಚು ವೆಚ್ಚಕ್ಕಾಗಿ ಸಾಕಾಗುವಷ್ಟು ರೂಪಾಯಿಗಳ ಒಜ್ಜೆಯನ್ನು ಸಂಗಡ ಒಯ್ಯುವದು ಬಹಳ ತೊಂದರೆಯಾಗುತ್ತದೆ. ಆದಕಾರಣ ಕೆಲವರು ತಮ್ಮ ಸಂಗಡ ನಗದು ರೂಪಾಯಿಗಳನ್ನು ಒಯ್ಯದೆ ಚೇಕುಗಳನ್ನು ಒಯ್ಯುವರು. ಹಾಗೂ ಎರಡನೆಯವರಿಗೆ ಹಣ ಕೊಡಬೇಕಾದಾಗ ಚೇಕುಗಳನ್ನೇ ಕೊಡುವರು.

**ಅವಿನಾಶಿತ್ವವೆಂಬುವದು ಮೂರನೆ ಗುಣವು.**—ಹಣದಲ್ಲಿರ ಬೇಕಾದ ಏಳು ಗುಣಗಳಲ್ಲಿ ಈ ಗುಣವು ಅತ್ಯವಶ್ಯವಾದದ್ದು. ಬೇಗನೆ ನಷ್ಟ ಹೊಂದುವ ಮತ್ತು ಸಹಜವಾಗಿ ಕೆಡುವ ಒಂದು ಪದಾರ್ಥವನ್ನು ಹಣವಾಗಿ ಉಪಯೋಗಿಸಿದರೆ ಆಗುವ ತೊಂದರೆಗಳನ್ನು ನೆನಸಿದರೆ, ಹಣವು ಬೇಗನೆ ನಷ್ಟವಾಗದಂಥಾದ್ದಾಗಿರುವದರಿಂದ ಉಂಟಾಗುವ ಮಹತ್ಪ್ರಯೋಜನಗಳು ಚನ್ನಾಗಿ ಲಕ್ಷ್ಯದಲ್ಲಿ

ಬರುವವು. ಉದಾಹರಣಾರ್ಥವಾಗಿ, ಕಾಳು ಹಣವಾಗಿ ಉಪಯೋಗಿಸಲ್ಪಟ್ಟಿತೆಂದು ತಿಳಿಯುವ. ಕಾಳು, ನೀರು ಹತ್ತುವದರಿಂದಾಗಲಿ, ಬಹಳ ದಿವಸ ಇಟ್ಟಿದ್ದರಿಂದಾಗಲಿ, ಅಥವಾ ಬೇರೆ ಕಾರಣಗಳಿಂದ ಕೆಟ್ಟು ಹೋಗಬಹುದು. ಈ ಪ್ರಕಾರ ಕಾಳು ಕೆಡಲಾಗಿ ಅದರಲ್ಲಿ ಹಣದ ಧರ್ಮವು ಉಳಿಯಲಿಕ್ಕಿಲ್ಲ, ಅಂದರೆ ಅದಕ್ಕೆ ಬೇರೆ ಪದಾರ್ಥಗಳು ಬರಲಿಕ್ಕಿಲ್ಲ. ಸಂಪೂರ್ಣವಾಗಿ ಅವಿನಾಶಿಯಾದ ಪದಾರ್ಥವಂತೂ ಇಲ್ಲೇ ಇಲ್ಲ. ಆದರೂ, ಭಂಗಾರದಲ್ಲಿ ಅವಿನಾಶಿತ್ವವೆಂಬ ಗುಣವು ಎಲ್ಲಕ್ಕೂ ವಿಶೇಷವಾಗಿ ವಾಸ ಮಾಡುತ್ತದೆ. ಬೆಂಕಿಯಿಂದಾಗಲಿ, ನೀರಿನಿಂದಾಗಲಿ, ಭಂಗಾರಕ್ಕೆ ಏನೂ ದಕ್ಕಿಯಾಗುವದಿಲ್ಲ. ಸಾವಿರಾರು ವರ್ಷಗಳ ಹಿಂದೆ ಹೂಳಿಟ್ಟ ಚಿನ್ನದ ಆಭರಣಗಳನ್ನು ಡಾಕ್ಟರ ಶಿಲಿಮನ್‌ನೆಂಬವನು ಶೋಧಿಸಿ ತೆಗೆದಿದ್ದಾನೆ. ಈ ಆಭರಣಗಳು ಅಣುಮಾತ್ರವಾದರೂ ಕೆಡದೆ, ಈ ಹೊತ್ತು ಮಾಡಿದ ಚಿನ್ನದ ಆಭರಣಗಳೇನೋ ಎಂಬುವಂತೆ ಥಳಥಳಿಸುತ್ತವೆ.

**ಏಕಜಾತೀಯತ್ವವೆಂಬುವದು ನಾಲ್ಕನೆ ಗುಣವು.**— ಹಣವಾಗಿ ಉಪಯೋಗಿಸುವ ಪದಾರ್ಥವು ಎಲ್ಲ ಕಡೆಗೂ ಒಂದೇ ಗುಣವುಳ್ಳದ್ದಾಗಿರ ಬೇಕೆಂಬುವದೇ ಏಕಜಾತೀಯತ್ವವೆಂಬದರ ಅರ್ಥ. ಈ ಗುಣವು ಇಲ್ಲದೆ ಹೋದಲ್ಲಿ, ಹಣಕ್ಕೆ ಎಲ್ಲ ಕಡೆಯಲ್ಲಿ ಒಂದೇ ಬೆಲೆ ಇರಲಾರದು. ಶುದ್ಧ ಬೆಳ್ಳಿ ಭಂಗಾರಗಳು ಯಾವತ್ತು ಕಡೆಯಲ್ಲಿ ಒಂದೇ ಒರೆಯುಳ್ಳವಾಗಿರುವವು. ಶುದ್ಧ ಮಾಡುವ ಅನೇಕ ವಿಧಗಳಿಂದ ಈ ಧಾತುಗಳನ್ನು ಒಂದೇ ಒರೆಗೆ ಹತ್ತುವ ತನಕ ಶುದ್ಧಮಾಡಬಹುದು. ಅದರಿಂದ ಒಂದು ತೊಲೆ ಭಂಗಾರದ ಬೆಲೆ ಮತ್ತೊಂದು ತೊಲೆ ಭಂಗಾರದ ಬೆಲೆಯಷ್ಟೇ ಇರುತ್ತದೆ, ಹೆಚ್ಚುಕಡಿಮೆಯಾಗಿರುವದಿಲ್ಲ. ವಜ್ರ ಮುಂತಾದ ಬಹು ಮೌಲ್ಯದ ಹರಳುಗಳಲ್ಲಿ ಈ ಗುಣವು ಇರುವದಿಲ್ಲವಾದ್ದರಿಂದ ಬೆಳ್ಳಿ ಭಂಗಾರಗಳಿಗೆ ಬದಲಾಗಿ ಇವುಗಳನ್ನು ಹಣವಾಗಿ ಉಪಯೋಗಿಸುವದು ಬಹಳ ತೊಂದರೆಗೆ ಕಾರಣವಾಗುವದು. ವಜ್ರದ ಬೆಲೆಯು ಅದರ ಹೊಳಪು ಬಣ್ಣಗಳನ್ನು ಅವಲಂಬಿಸಿರುವದು. ಒಂದು ಹರಳಿಗಿದ್ದ ಹೊಳಪೂ ಬಣ್ಣವೂ ಮತ್ತೊಂದಕ್ಕಿರುವದಿಲ್ಲ. ಆದ್ದರಿಂದ, ಅಷ್ಟೇ ತೂಕದ ಹಾಗು ಆಕಾರದ ಮತ್ತು ಅಷ್ಟೇ ಸರಸಾಗಿ ಕೆತ್ತಿದ ಎರಡು ಹರಳುಗಳು ಸರಿಯಾದ ಬೆಲೆ ಬಾಳುವವೆಂಬುವ ನಿಶ್ಚಯವಿಲ್ಲ.

**ಐದನೆ ಗುಣವು ವಿಭಾಜ್ಯತ್ವವು.**— ಬೆಲೆ ಕಡಿಮೆಯಾಗದೆ ವಿಭಾಗಿಸಲಿಕ್ಕೆ ಬರುವಂಥ ಗುಣವು ವಿಭಾಜ್ಯತ್ವವೆನಿಸುವದು. ಎರಡು ಅರ್ಧತೊಲೆ ಭಂಗಾರದ ಬೆಲೆಯು ಒಂದು ತೊಲೆ ಭಂಗಾರದ ಬೆಲೆಯಷ್ಟೇ ಇರುವದು, ಹೆಚ್ಚುಕಡಿಮೆ

ಯಾಗಿರುವದಿಲ್ಲ. ನಾಲ್ಕು ಪಾವಲಿಗಳು ತೂಕದಲ್ಲಿಯೂ, ಬೆಲೆಯಲ್ಲಿಯೂ, ಒಂದು ರೂಪಾಯಿಗೆ ಸರಿಯಾಗಿರುವವು. ಆದರೆ, ಎಷ್ಟೋ ಪದಾರ್ಥಗಳ ಬೆಲೆಯು ವಿಭಾಗ ಮಾಡುವದರಿಂದ ಬಹಳ ಕಡಿಮೆಯಾಗುತ್ತದೆ. ಒಂದು ವಜ್ರದ ಹರಳಿನ ಕ್ರಯವು ೧೦೦೦ ರೂಪಾಯಿಗಳಾಗಿದ್ದರೆ, ಆ ಹರಳಿನಲ್ಲಿ ಸರಿಯಾಗಿ ಎರಡು ಭಾಗಗಳನ್ನು ಮಾಡಲಾಗಿ, ಒಂದರ ಕ್ರಯವು ೫೦೦ ರೂಪಾಯಿಗಳಾಗಲಿಕ್ಕಿಲ್ಲ. ಉದಾಹರಣಾರ್ಥವಾಗಿ, ಕೆತ್ತದ ವಜ್ರಗಳ ಬೆಲೆಯನ್ನು ತಿಳಿದುಕೊಳ್ಳುವ ರೀತಿಯನ್ನು ಹೇಳುವ. ಈ ರೀತಿಯು ಯಾವದಂದರೆ—ಯಾವದೊಂದು ವಜ್ರದ ಹರಳಿನ ಬೆಲೆಯು, ಅದರ ರತಿಗಳ ಸಂಖ್ಯೆಯ ವರ್ಗಕ್ಕೆ ಒಂದು ರತಿಯ ಬೆಲೆಯಿಂದ ಗುಣಿಸಲಾಗಿ ಹೊರಡುತ್ತದೆ. ಈ ಮೇರಿಗೆ ಒಂದು ರತಿಯ ಬೆಲೆಯು ಎರಡು ಪೌಂಡು ಉಂಟೆಂದು ತಿಳದರೆ, ಆರು ರತಿ ತೂಕದ ವಜ್ರಕ್ಕೆ ೭೨ ಪೌಂಡುಗಳು ಬೀಳುವವು. ಮತ್ತು ೧೨ ರತಿ ತೂಕದ ವಜ್ರಕ್ಕೆ ೨೮೮ ಪೌಂಡುಗಳು ಬೀಳುವವು: ೬×೬×೨=೭೨. ೧೨×೧೨×೨=೨೮೮. ಇದರ ಮೇಲಿಂದ ಕಾಣಿಸುವದೇನಂದರೆ, ೧೨ ರತಿ ತೂಕದ ವಜ್ರದಲ್ಲಿ ೬ ರತಿಯ ಎರಡು ಭಾಗಗಳನ್ನು ಮಾಡ ಬೇಕಾದರೆ, ಅವುಗಳ ಬೆಲೆಯನ್ನು ಅರ್ಧ ಕಡಿಮೆ ಮಾಡದೆ, ಮಾಡಲಿಕ್ಕೆ ಬರುವದಿಲ್ಲ. ಆದ್ದರಿಂದ, ಆ ವಜ್ರದಲ್ಲಿ ಎರಡು ಭಾಗಗಳನ್ನು ಮಾಡಲಾಗಿ, ಅದರ ಅರ್ಧ ಬೆಲೆಯು ಕಡಿಮೆಯಾಗುತ್ತದೆಂಬದು ಸ್ಪಷ್ಟವಾಗಿದೆ.

**ಆರನೆ ಗುಣವು ಬೆಲೆಯ ಸ್ಥಿರತ್ವವು.**— ಹಣವು ಬೇರೆ ಯಾವತ್ತು ಪದಾರ್ಥಗಳ ಬೆಲೆಯ ಪ್ರಮಾಣವಾದ ಕಾರಣ, ಹಣದ ಸ್ವಂತ ಬೆಲೆಯು ಸ್ಥಿರವಾಗಿರುವದು ಅತ್ಯವಶ್ಯವಾದದ್ದು. ಎಂದಿಗೂ ಅಲ್ಪಸ್ವಲ್ಪಾದರೂ ಹೆಚ್ಚುಕಡಿಮೆಯಾಗದಂಥ ಸ್ಥಿರವಾದ ಬೆಲೆಯುಳ್ಳ ಪ್ರಮಾಣವು ಈ ಜಗತ್ತಿನಲ್ಲಿ ದೊರಿಯುವದು ವಸ್ತುತಃ ಅಸಂಭಾವ್ಯವೇ. ರಾಬರ್ಟ ಒವೆನ್‌ನೆಂಬವನೊಬ್ಬ ಅರ್ಥಶಾಸ್ತ್ರಜ್ಞನು, ಅರ್ಥಶಾಸ್ತ್ರದ ಸಂಬಂಧದ ಕೆಲವು ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾನೆ. ಅವುಗಳಲ್ಲೊಂದರಲ್ಲಿ ಅವನು ಪ್ರತಿಪಾದಿಸಿದ್ದೇನಂದರೆ, ಪದಾರ್ಥಗಳ ಬೆಲೆಯನ್ನು ಅಳಿಯುವದಕ್ಕೆ ಶ್ರಮವೆಂಬ ಪ್ರಮಾಣವನ್ನು ಉಪಯೋಗಿಸಿ, ಒಂದು ತಾಸಿನ ಶ್ರಮದ ಬೆಲೆಯು ಯಾವಾಗಲೂ ಇಂತಿಷ್ಟೇ ಎಂದು ತಿಳಿಯ ಬೇಕೆಂದು ಕಟ್ಟಳೆ ಮಾಡ ಬೇಕು. ಈ ಸಿದ್ಧಾಂತದಲ್ಲಿದ್ದ ದೋಷವು ಮೇಲೆಯೇ ಕಾಣಿಸುತ್ತದೆ. ಅದೇನಂದರೆ, ಶ್ರಮದ ಬೆಲೆಯು ಅಸ್ಥಿರವಾಗಿದ್ದಷ್ಟು ಬೇರೆ ಯಾವದರ ಬೆಲೆಯೂ ಅಸ್ಥಿರವಾಗಿರುವದಿಲ್ಲ. ಚಿತ್ರಕಳೆಯಲ್ಲಿ ಅತ್ಯಂತ ಪ್ರವೀಣನಾದ ಒಬ್ಬ ಚಿತ್ರಗಾರನ ಒಂದು ತಾಸಿನ ದುಡತದ ಬೆಲೆಯೂ, ಆ ಚಿತ್ರಗಾರನ ಕಾಲೊಳಗಿನ ಮೊಚೆ

ಜೋಡು ಹೊಲಿದವನ ಒಂದು ತಾಸಿನ ದುಡತದ ಬೆಲೆಯೊ, ಒಂದಕ್ಕೊಂದು ಸರಿಯಾಗಿವೆಂದು ನಿರ್ಣೈಸುವದು ಎಂಥಾ ಬುದ್ಧಿವಂತಿಗೆ! ಈ ಬಗೆಯ ನಿರ್ಣಯುವು ನ್ಯಾಯುದ ರೀತಿಗೂ ನಮ್ಮ ಸರ್ವಸಾಧಾರಣ ತಿಳುವಳಿಕೆಗೂ ಕೇವಲ ವಿರುದ್ಧವಾದದ್ದು. ಒವೆನನ ಸಿದ್ಧಾಂತವು ಸನ್ ೧೮೩೨ನೇ ಇಸವಿಯಲ್ಲಿ ಜನರಿಗೆ ಕೆಲವು ಕಾಲದ ವರೆಗೆ ಬಹು ಸೊಗಸಾಗಿ ಕಂಡಿತು. ಆದರೆ ಎಲ್ಲ ತರದ ಶ್ರಮವು ಸಮನಾದ ಬೆಲೆಯುಳ್ಳದ್ದೆಂಬ ಅಬದ್ಧವಿಚಾರವು ಈ ಸಿದ್ಧಾಂತಕ್ಕೆ ಮೂಲಾಧಾರವಾದ್ದರಿಂದ, ಈ ಸಿದ್ಧಾಂತವು ಸ್ವಲ್ಪಕಾಲ ಮಾತ್ರ ಬಾಳಿ ಲಯ ಹೊಂದಿತು.

ನಮಗೆ ಗೊತ್ತಿರುವ ಯಾವತ್ತು ಪದಾರ್ಥಗಳ ಬೆಲೆಯು ಅಲ್ಪಸ್ವಲ್ಪಾದರೂ ಹೆಚ್ಚುಕಡಿಮೆಯಾಗೇ ಆಗುತ್ತದೆ. ಬೆಲೆಯು ಯತ್ಕಿಂಚಿತವಾದರೂ ಬದಲಿಸದಂಥ ಪದಾರ್ಥವೇ ಇಲ್ಲ. ಆದಕಾರಣ, ಯಾವತ್ತು ಪದಾರ್ಥಗಳಲ್ಲಿ, ಆದಷ್ಟು ಸ್ವಲ್ಪ ಮತ್ತು ಸಾವಕಾಶವಾಗಿ ಬೆಲೆ ಹೆಚ್ಚುಕಡಿಮೆಯಾಗುವಂಥ ಪದಾರ್ಥವನ್ನು ಹಣ ಮಾಡುವದಕ್ಕಾಗಿ ಆರಿಸಿಕೊಳ್ಳುವದಿಷ್ಟೇ ನಾವು ಮಾಡತಕ್ಕಂಥಾದ್ದು. ಹಣವಾಗಿ ಉಪಯೋಗಿಸಲ್ಪಡುವ ಪದಾರ್ಥದ ಬೆಲೆಯು ಬಹಳ ಸ್ವಲ್ಪ ಕಾಲದಲ್ಲಿ ಹೆಚ್ಚುಕಡಿಮೆಯಾದರೆ, ಹಣದ ಸಂಬಂಧದ ಪ್ರತಿಯೊಂದು ವ್ಯವಹಾರದಲ್ಲಿ ಬಹಳ ತೊಂದರೆಯುಂಟಾಗುವದು. ಉದಾಹರಣಾರ್ಥವಾಗಿ, ಗೋಧಿಯು ಬೆಲೆಯ ಸರ್ವಸಾಮಾನ್ಯವಾದ ಪ್ರಮಾಣವೆಂದು ಸಂಕೇತಿಸಲ್ಪಟ್ಟಿತೆಂದು ಕಲ್ಪಿಸಿರಿ. ಈ ಪ್ರಸಕ್ತಿಯಲ್ಲಿ, 'ಅ' ಎಂಬವನು 'ಬ' ಎಂಬವನಿಂದ ೧೦,೦೦೦ ಚಿಟ್ಟಿ ಗೋಧಿಯನ್ನು ಆರು ತಿಂಗಳ ಕೊನೆಗೆ ತಿರುಗಿ ಕೊಡುವ ಕರಾರಿನಿಂದ ಸಾಲಾ ತಂದರೆ, ಆ ಆರು ತಿಂಗಳು ಮುಗಿದು ಸಾಲಾ ತೀರಿಸುವ ಸಮಯ ಒದಗುವಷ್ಟರೊಳಗೆ ಅನಾವೃಷ್ಟಿ, ಅತಿವೃಷ್ಟಿ ಮುಂತಾದ ಅನೇಕ ದೈವಿಕ ಕಾರಣಗಳಿಂದ ನೂರಕ್ಕೆ ೨೦ ಇಲ್ಲವೆ ೩೦ರಂತೆ ಗೋಧಿಯ ಬೆಲೆಯು ಏರಿಳ ಬಹುದು; ಇಲ್ಲವೆ ಕಾಲಕಾಲಕ್ಕೆ ಮಳೆಯಾಗಿ ಬೆಲೆ ಇಳಿದಿರ ಬಹುದು. ಗೋಧಿಯ ಬೆಲೆ ನೂರಕ್ಕೆ ೩೦ರಂತೆ ಏರಿತೆಂದು ತಿಳಿದರೆ, 'ಅ' ಎಂಬವನು ಮೊದಲು ತಂದಷ್ಟೇ ಗೋಧಿಯನ್ನು ತಿರುಗಿ ಕೊಟ್ಟರೂ, ತಾನು ತಂದ ಸಾಲಕ್ಕಿಂತಲೂ ನೂರಕ್ಕೆ ೩೦ರಂತೆ ಹೆಚ್ಚು ಗೋಧಿಯನ್ನು 'ಬ'ನಿಗೆ ತಿರುಗಿ ಕೊಟ್ಟಂತಾಗುವದು. ಯಾಕಂದರೆ, ಗೋಧಿಯ ಬೆಲೆಯು ಈಗ ನೂರಕ್ಕೆ ೩೦ರಂತೆ ಏರಿದ್ದರಿಂದ 'ಅ' ಎಂಬವನು ಆರು ತಿಂಗಳ ಹಿಂದೆ ಸಾಲಾ ತಂದಷ್ಟೇ ಗೋಧಿಗೆ, ಆಗಿನದಕ್ಕಿಂತಲೂ ಈಗ ನೂರಕ್ಕೆ ೩೦ರಂತೆ ಹೆಚ್ಚು ಪ್ರಮಾಣದಿಂದ ಸಂಪತ್ತು ಬರ ಬಹುದು. ಇದರಂತೆಯೇ ಗೋಧಿಯ ಬೆಲೆಯು ನೂರಕ್ಕೆ ೩೦ರಂತೆ ಇಳಿದದ್ದಾದರೆ, ಸಾಲಾ ಕೊಟ್ಟ

ವನಿಗೆ ಅಷ್ಟೇ ಪ್ರಮಾಣದಿಂದ ಲುಕಸಾನು ಸಹಿಸ ಬೇಕಾಗುವದು. ಆದಕಾರಣ ಹಣವಾಗಿ ಉಪಯೋಗಿಸಲ್ಪಡುವದಕ್ಕೆ ಆರಿಸಿದ ಪದಾರ್ಥದ ಬೆಳೆಯು ಬೇಗನೆ ಹೆಚ್ಚು ಕಡಿಮೆಯಾಗುವಂಥಾದ್ದಾಗಿದ್ದರೆ, ವ್ಯಾಪಾರದ ಕೆಲಸವು ಜುಗಾರಿನ ಆಟ ವಾಗುವದು. ಯಾಕಂದರೆ ನಾಲ್ಕಾರು ತಿಂಗಳುಗಳಲ್ಲಿ ಹಣದ ಬೆಲೆಯು ಎಷ್ಟು ಏರುವದು, ಇಲ್ಲವೆ ಎಷ್ಟು ಇಳಿಯುವದೆಂಬದು ಯಾರಿಂದಲೂ ನಿಶ್ಚಿತವಾಗಿ ಹೇಳುವದಾಗುವದಿಲ್ಲ.

ಬಹುತರ ಬೇರೆ ಯಾವತ್ತು ಸರಕುಗಳ ಬೆಲೆಗಿಂತಲೂ ಚಿನ್ನ ಬೆಳ್ಳಿಗಳ ಬೆಲೆಯು ಕಡಿಮೆ ಬದಲಾಗುವದು. ಇದಲ್ಲದೆ, ಹಣದ ಕಾರ್ಯಗಳನ್ನು ನೆರವೇರಿಸುವದಕ್ಕೆ ಯೋಗ್ಯವಾದ ಬೇರೆ ಅನೇಕ ಗುಣಗಳೂ ಬೆಳ್ಳಿ ಭಂಗಾರಗಳಲ್ಲಿ ವಾಸ ಮಾಡುತ್ತವೆ.

**ಏಳನೆ ಗುಣವು ಜ್ಞೇಯತ್ವವು.**— ಹಣವು ಚಲೋದಾಗಿದ್ದದ್ದನ್ನೂ, ಇಲ್ಲದ್ದನ್ನೂ ಸುಲಭವಾಗಿ ಪರೀಕ್ಷಿಸುವದಕ್ಕೆ ಬರುವ ಹಾಗಿರ ಬೇಕು. ಬೆಳ್ಳಿ ಭಂಗಾರಗಳ ನಾಣ್ಯಗಳನ್ನು ಕಠಿಣವಾದ ಪದಾರ್ಥಗಳ ಮೇಲೆ ಬಾರಿಸಿದರೆ ಉಂಟಾಗುವ ಶಬ್ದದಿಂದ, ಅವುಗಳು ಚಲೋವಾಗಿದ್ದದ್ದನ್ನೂ, ಸುಳ್ಳಾಗಿದ್ದದ್ದನ್ನೂ ಬಹುತರವಾಗಿ ತಿಳುಕೊಳ್ಳುವದುಂಟು. ಕೆಲವು ಸಾರಿ, ರುಚಿ ಹಾಗೂ ಗಂಧದ ಮೇಲಿಂದ ಸಹ ಚಲೋ ನಾಣ್ಯಗಳನ್ನು ಸುಳ್ಳು ನಾಣ್ಯಗಳಿಂದ ವಿಂಗಡಿಸುವದುಂಟು. ಹಣದ ಪರೀಕ್ಷೆಯನ್ನು ಸುಲಭವಾಗಿ ಮಾಡುವದಕ್ಕೆ ಬರಬೇಕಾದರೆ, ಹಣವಾಗಿ ಉಪಯೋಗಿಸಲ್ಪಡುವ ಪದಾರ್ಥದಿಂದ ನಾಣ್ಯಗಳನ್ನು ಮಾಡಲಿಕ್ಕೆ ಬರುವ ಹಾಗಿರ ಬೇಕು. ನಾಣ್ಯಗಳನ್ನು ಮಾಡುವ ಕೆಲಸವನ್ನು ಸರಕಾರದವರೇ ಮಾಡ ತಕ್ಕದ್ದು. ಯಾಕಂದರೆ, ಸರಕಾರದವರೇ ನಾಣ್ಯಗಳನ್ನು ಮಾಡಿಸುವದರಿಂದ, ಬಳಿಕೆಯಲ್ಲಿದ್ದ ಬೆಲೆಯ ಪ್ರಮಾಣಭೂತವಾದ ಹಣವು ಪೂರ್ಣವಾದ ತೂಕವುಳ್ಳದ್ದಾಗಿಯೂ, ಸರಿಯಾದ ಒರೆಯುಳ್ಳದ್ದಾಗಿಯೂ ಇರುವದಕ್ಕೆ, ಸರಕಾರದ ಪತ್ತೇ ಹೊಣೆಯಾಗುತ್ತದೆ. ಸ್ವಲ್ಪ ವಿಚಾರ ಮಾಡಿ ನೋಡಿದರೆ, ಮೇಲೆ ಹೇಳಿದ ಏಳು ಗುಣಗಳಲ್ಲಿ, ಅನೇಕ ಗುಣಗಳೊಳಗೆ ಇರುವ ಪರಸ್ಪರ ಸಂಬಂಧವು ಸ್ಪಷ್ಟವಾಗಿ ಗೋಚರವಾಗುವದು. ಉದಾಹರಣಾರ್ಥವಾಗಿ, ಭಂಗಾರದಲ್ಲಿದ್ದ ಸುವಾಹ್ಯತೆಯೂ ಅವಿನಾಶಿತ್ವವೂ ಅದರಲ್ಲಿ ಬೆಲೆಯ ಸ್ಥಿರತ್ವವೆಂಬ ಆರನೆ ಗುಣವು ಬರಲಿಕ್ಕೆ ಮುಖ್ಯವಾದ ಕಾರಣಗಳಾಗಿವೆ. ಹ್ಯಾಗಂದರೆ, ಬೆಲೆಯ ಮಾನದಿಂದ ನೋಡಲಾಗಿ ಬಹಳ ಸ್ಥಳ ಬೇಕಾಗುವ ಸರಕಿಗೆ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಬೆಲೆಯುಂಟಾಗುತ್ತದೆ. ಒಂದು ಟನ್ (೪ ಖಂಡಿ) ಕಲ್ಲಿ

ದ್ದಲಿಯ ಬೆಲೆಯು ಅನೇಕ ಬಾರಿ ಕಣಿಯ ಮುಖದ ಹತ್ತರೆ ಆರು ಶಿಲಿಂಗುಗಳಾಗಿದ್ದರೂ, ಅಷ್ಟೇ ಕಲ್ಲಿದ್ದಲಿಗೆ ಲಂಡನದಲ್ಲಿ ೧ ಪೌಂಡು ೨ ಶಿಲಿಂಗು ಬೀಳುತ್ತವೆ. ಆದರೆ, ಯಾವದೊಂದು ಸರಕಿನ ಬೆಲೆ ಒಂದು ಕಡೆಗೆ ಏರಲಾಗಿ ಅಲ್ಲಿಗೆ ಆ ಸರಕನ್ನು ಕಡಿಮೆ ಬೆಲೆ ಇದ್ದಲ್ಲಿಂದ ಅತ್ಯಲ್ಪ ಖರ್ಚಿನಿಂದ ತರುವದು ಸಾಧ್ಯವಾಗಿದ್ದರೆ, ಆ ಸರಕಿನ ಬೆಲೆಯು ನಾಲ್ಕೂ ಕಡೆಯಲ್ಲಿ ಯಾವಾಗಲೂ ಬಹುತರ ಒಂದೇ ಸಮನಾಗಿ ಆಗುವ ಕ್ರಮ ನಡಿದಿರುತ್ತದೆ. ಬೇಗನೆ ನಾಶ ಹೊಂದುವಂಥ ಯಾವತ್ತೂ ಸರಕುಗಳ ಬೆಲೆಯೂ, ವರ್ಷದಲ್ಲಿ ಆಗುವ ಪೂರೈಕೆಯೆಲ್ಲಾ ಆ ವರ್ಷದಲ್ಲಿಯೇ ವೆಚ್ಚವಾಗುವಂಥ ಸರಕುಗಳ ಬೆಲೆಯೂ ಬಹಳ ಹೆಚ್ಚುಕಡಿಮೆಯಾಗುವದು. ಮೀನಗಳಂಥ ಬೇಗನೆ ಕೆಡುವ ಸರಕನ್ನು ನಿಯಮಿತ ಕಾಲದಲ್ಲಿ ಮಾರ ಬೇಕಾಗುವದು. ಅಷ್ಟು ಅವಧಿಯಲ್ಲಿ ಅದನ್ನು ಅಗ್ಗವಾಗಿಯಾಗಲಿ, ತುಟ್ಟಿಯಾಗಿಯಾಗಲಿ, ಹ್ಯಾಗಾದರೂ ಗಿರಾಕಿಗಳಿಗೆ ಹಾಕಲಿಕ್ಕೇ ಬೇಕು. ಆದ ಕಾರಣ ಬಿಲಿಂಗ್ಸಗೇಟ ಮಾರ್ಕೇಟಿನಲ್ಲಿ ಅನೇಕ ಸಾರಿ ಒಂದೇ ದಿವಸದೊಳಗೆ ಮೀನಗಳ ಕ್ರಯವು ನೂರಕ್ಕೆ ೫೦ ಇಲ್ಲವೆ ೧೦೦ರಂತೆ ಹೆಚ್ಚುಕಡಿಮೆಯಾಗುತ್ತದೆ. ಕಾಳು ಚನ್ನಾಗಿ ಭದ್ರ ಮಾಡಿ ಸಂಗ್ರಹಿಸಿಟ್ಟರೆ ಬೇಗನೆ ಕೆಡುವದಿಲ್ಲ. ಆದರೂ, ಒಂದು ವರ್ಷ ಬೆಳೆದ ಕಾಳು ಬಹುತರ ಆ ವರ್ಷದೊಳಗೇ ಜನರ ಉಪಜೀವನಕ್ಕೆ ವೆಚ್ಚವಾಗಿ ಹೋಗುವದರಿಂದ, ಅದರ ಬೆಲೆಯಲ್ಲಿ ಬಹಳ ಹೆಚ್ಚು ಕಡಿಮೆಯಾಗುವದಕ್ಕೆ ಆಸ್ಪದವಾಗುತ್ತದೆ. ಪೃಥ್ವಿಯೊಳಗೆ ಎಲ್ಲ ಕಡೆಗೆ ಒಂದು ವರ್ಷ ಬೆಳೆಯು ಸರ್ವ ಸಾಧಾರಣಮಾನಕ್ಕಿಂತಲೂ ನೂರಕ್ಕೆ ೩೦ರಂತೆ ಕಡಿಮೆಯಾದರೆ, ಪೃಥ್ವಿಯೊಳಗೆ ಎಲ್ಲ ಕಡೆಯಲ್ಲಿದ್ದ ಕಾಳಿನ ಸಂಗ್ರಹವು ನೂರಕ್ಕೆ ೩೦ರಂತೆ ಕಡಿಮೆಯಾಗುವದರಿಂದ ಕಾಳಿನ ಬೆಲೆಯು ಅದ್ಭುತವಾಗಿ ಏರುವದು. ಆದರೆ ಚಿನ್ನದ ಮಾತು ಹೀಗಲ್ಲ. ಒಂದು ವರ್ಷ ಚಿನ್ನದ ಹುಟ್ಟುವಳಿಯು ದರವರ್ಷದ ಸರ್ವ ಸಾಧಾರಣಮಾನಕ್ಕಿಂತಲೂ ನೂರಕ್ಕೆ ೩೦ರಂತೆ ಕಡಿಮೆಯಾದರೆ, ಅದರಿಂದ ಚಿನ್ನದ ಬೆಲೆಯ ಮೇಲೆ ಆಗುವ ಯತ್ಕಿಂಚಿತ ಪರಿಣಾಮವು ಲಕ್ಷ್ಯದಲ್ಲಿ ಸಹ ಬರಲಿಕ್ಕಿಲ್ಲ. ಯಾಕೆಂದರೆ, ಚಿನ್ನದ ಪೂರೈಕೆಯು ಒಂದು ವರ್ಷ ನೂರಕ್ಕೆ ೩೦ರಂತೆ ಕಡಿಮೆಯಾದರೂ, ಈ ಪ್ರಕಾರ ಕಡಿಮೆಯಾದದ್ದನ್ನು ಇದುವರೆಗೆ ಸಾವಿರಾರು ವರ್ಷ ಕೂಡಿ ಬಿದ್ದ ಚಿನ್ನದ ಸಂಗ್ರಹಕ್ಕೆ ಹೊಂದಿಸಿ ನೋಡಲಾಗಿ, ಅತ್ಯಲ್ಪವಾಗಿದೆ. ಆದ್ದರಿಂದ, ಅದರಿಂದ ಜಗತ್ತಿನೊಳಗಿದ್ದ ಎಲ್ಲ ಭಂಗಾರದ ಮೇಲೆ ತೀರ ಕ್ಷುಲ್ಲಕವಾದ ಪರಿಣಾಮವಾಗುವದು.

**ಬೆಲೆಯ ದ್ವಿವಿಧಪ್ರಮಾಣವೆಂದರೇನು?**— ದೇಶದಲ್ಲಿ ಬೆಲೆಯ ದ್ವಿವಿಧ

ಪ್ರಮಾಣವಿರುವದು ಒಳ್ಳೇದೆಂದು ಕೆಲವರು ಮೇಲೆ ಮೇಲೆ ಸೂಚಿಸುವದುಂಟು. ದ್ವಿವಿಧಪ್ರಮಾಣವೆಂಬದರ ಅರ್ಥವೇನಂದರೆ, ಎಷ್ಟೇ ಸಾಲವನ್ನು ತೀರಿಸಬೇಕಾದರೂ, ಅದಕ್ಕಾಗಿ ಸಾವುಕಾರನಿಗೆ ಭಂಗಾರದ ನಾಣ್ಯಗಳನ್ನಾಗಲಿ, ಬೆಳ್ಳಿಯ ನಾಣ್ಯಗಳನ್ನಾಗಲಿ, ಬೇಕಾದ ನಾಣ್ಯಗಳನ್ನು ಕೊಡುವದಕ್ಕೆ ಕಾಯಿದೆಯಿಂದ ಅಡ್ಡಿ ಇರ ಬಾರದು. ಭಂಗಾರದ ನಾಣ್ಯಗಳನ್ನೇ ಕೊಡಬೇಕೆಂಬ ನಿರ್ಬಂಧವಿರ ಬಾರದು. ಆದರೆ, ಈ ಬಗೆಯ ವ್ಯವಸ್ಥೆಯಿಂದ ಅನೇಕ ಹಾನಿಗಳುಂಟಾಗುವವೆಂಬುವದು ಮೇಲೆಯೇ ಕಾಣಿಸುತ್ತದೆ. ಹ್ಯಾಗಂದರೆ, ಸಾಲವನ್ನು ತಂದಂದಿನಿಂದ ತಿರುಗಿ ಕೊಡುವ ವರೆಗೆ ಮಧ್ಯಂತರದಲ್ಲಿ ಯಾವ ಕಾರಣಗಳಿಂದಾದರೂ ಬೆಳ್ಳಿಯ ಬೆಲೆಯು ಇಳಿಯಿತೆಂದು ಕಲ್ಪಿಸಿರಿ. ಹೀಗಾದಲ್ಲಿ, ಭಂಗಾರದ ನಾಣ್ಯಗಳನ್ನು ಕೊಡುವದಕ್ಕೆ ಬದಲಾಗಿ ಬೆಳ್ಳಿಯ ನಾಣ್ಯಗಳನ್ನು ಕೊಟ್ಟು ಸಾಲ ತೀರಿಸುವದೇ ಸಾಲಾತಂದವನಿಗೆ ಲಾಭವುಳ್ಳದ್ದಾಗುವದು; ಹಾಗೂ ಸಾಲಾ ತೀರಿಸಿಕೊಳ್ಳುವವನಿಗೆ ಲುಕಸಾನು ತಗಲುವದು. ಸಾಲಾ ತಂದು ತಿರುಗಿ ಕೊಡುವ ಅವಧಿಯಲ್ಲಿ ಬೆಲೆಯ ಪ್ರಮಾಣವಾದ ಹಣದ ಬೆಲೆಯೇ ಬದಲಿಸಿದರೆ, ಹಣ ಕೊಡುಕೊಳ್ಳುವ ಪ್ರತಿಯೊಂದು ಕರಾರಿನಲ್ಲಿ ಬಹಳ ತೊಂದರೆಯುಂಟಾಗಿ, ವ್ಯಾಪಾರಕ್ಕೆ ಬಹಳ ಹಾನಿಯುಂಟಾಗುವದೆಂದು ಹಿಂದೆ ಒಮ್ಮೆ ಉದಹರಿಸಿದ್ದೇವೆ. ಉದಾಹರಣಾರ್ಥವಾಗಿ, 'ಬ' ಎಂಬವನು 'ಅ' ಎಂಬವನ ಕಡೆಯಿಂದ ೫೦೦ ಪೌಂಡುಗಳನ್ನು ಒಂದು ವರ್ಷದ ಕೊನೆಗೆ ತಿರುಗಿ ಕೊಡುವ ಮಾತು ಮಾಡಿ ಸಾಲಾತಂದನೆಂದು ಕಲ್ಪಿಸಿರಿ. ಸಾಲವನ್ನು ತೀರಿಸುವ ವೇಳೆಯು ಬರುವದರೊಳಗೆ ಭಂಗಾರ ಬೆಳ್ಳಿಗಳ ಬೆಲೆಗಳ ಪರಸ್ಪರ ಪ್ರಮಾಣವು ಬದಲಾಗಿರ ಬಹುದು. ಭಂಗಾರದ ನಾಣ್ಯಗಳನ್ನೇ ಆಗಲಿ, ಬೆಳ್ಳಿಯ ನಾಣ್ಯಗಳನ್ನೇ ಆಗಲಿ, ತನ್ನ ಮನಸಿಗೆ ಬಂದಂತೆ ಬೇಕಾದ ನಾಣ್ಯಗಳನ್ನು ಕೊಟ್ಟು ಸಾಲಾತೀರಿಸುವ ಸ್ವತಂತ್ರವು 'ಬ'ನಿಗಿದ್ದರೆ, 'ಬ'ನು ಬೆಳ್ಳಿ ಇಲ್ಲವೆ ಭಂಗಾರದ ಬೆಲೆಯಲ್ಲುಂಟಾಗಿದ್ದ ಹೆಚ್ಚುಕಡಿಮೆಯನ್ನು ನೋಡಿಕೊಂಡು, ತನಗೆ ಲಾಭವಾಗುವಂತೆ ಸಾಲಾತೀರಿಸುವನು. ಭಂಗಾರದ ಬೆಲೆಯು ಇಳಿದಿದ್ದರೆ, ಅವನು ಭಂಗಾರದ ನಾಣ್ಯಗಳನ್ನು ಕೊಟ್ಟು ಸಾಲಾತೀರಿಸುವನು. ಬೆಳ್ಳಿಯು ಕಡಿಮೆ ಬೆಲೆಯುಳ್ಳದ್ದಾಗಿದ್ದರೆ, ಬೆಳ್ಳಿಯಿಂದಲೇ ಸಾಲಾತೀರಿಸುವನು. ಬೆಲೆಯ ಪ್ರಮಾಣವು ಒಂದೇ ಇದ್ದಲ್ಲಿ, ಹಣದ ಸಂಬಂಧದ ಕರಾರುಗಳಲ್ಲಿ ಅವ್ಯವಸ್ಥೆಯನ್ನುಂಟು ಮಾಡುವದಕ್ಕೆ ಒಂದೇ ಪದಾರ್ಥದ ಬೆಲೆಯಲ್ಲಾಗುವ ಹೆಚ್ಚುಕಡಿಮೆಗಳು ಕಾರಣವಾಗುತ್ತವೆ. ಆದರೆ ಬೆಲೆಯ ದ್ವಿವಿಧಪ್ರಮಾಣವಿದ್ದರೆ, ಹಣದ ಸಂಬಂಧದ ಕರಾರುಗಳಲ್ಲಿ ತೊಂದರೆಗಳನ್ನು ಉಂಟು ಮಾಡುವದಕ್ಕೆ ಎರಡು

ಪದಾರ್ಥಗಳ ಬೆಲೆಯಲ್ಲಾಗುವ ಹೆಚ್ಚುಕಡಿಮೆಗಳು ಕಾರಣವಾಗುವವು. ಆದ್ದರಿಂದ, ಬೆಲೆಯ ದ್ವಿವಿಧಪ್ರಮಾಣವನ್ನು ಸ್ವೀಕರಿಸುವದು ಹಿತಕರವಲ್ಲ.

ಈ ದೇಶದಲ್ಲಿ ಬೆಲೆಯ ದ್ವಿವಿಧಪ್ರಮಾಣವಿಲ್ಲ.— ಈ ದೇಶದಲ್ಲಿ ಬೆಳ್ಳಿ ಮತ್ತು ತಾಮ್ರ ಎಂಬ ಎರಡು ಧಾತುಗಳ ನಾಣ್ಯಗಳು ನಡಿಯುವದರಿಂದ ಇಲ್ಲಿ ದ್ವಿವಿಧಪ್ರಮಾಣ ಉಂಟೆಂದು ಯಾರಾದರೂ ತಿಳಿಯ ಬಹುದು. ಇದೇ ಮೇರೆಗೆ ಇಂಗ್ಲಂಡದಲ್ಲಿ ಚಿನ್ನ, ಬೆಳ್ಳಿ, ಬ್ರೋನ್ಝ, ಈ ಮೂರು ಧಾತುಗಳ ನಾಣ್ಯಗಳು ನಡಿಯುವದರಿಂದ, ಆ ದೇಶದಲ್ಲಂತೂ ತ್ರಿವಿಧಪ್ರಮಾಣ ಉಂಟೆಂದು ಮೊದಲಿಗೆ ಕಾಣಿಸ ಬಹುದು. ಆದರೆ ಎರಡೂ ದೇಶಗಳಲ್ಲಿ ಬೆಲೆಯ ಪ್ರಮಾಣವು ಒಂದೇ ಉಂಟು. ಇಂಗ್ಲಂಡದಲ್ಲಿ ಚಿನ್ನದ ನಾಣ್ಯಗಳು (ಪೌಂಡುಗಳು) ಮಾತ್ರವೇ ಬೆಲೆಯ ಪ್ರಮಾಣವಾಗಿವೆ. ಈ ದೇಶದಲ್ಲಿ ಬೆಳ್ಳಿಯ ನಾಣ್ಯಗಳು (ರೂಪಾಯಿಗಳೂ, ಅರ್ಧ ರೂಪಾಯಿಗಳೂ) ಮಾತ್ರ ಬೆಲೆಯ ಪ್ರಮಾಣವಾಗಿವೆ. ಇಂಗ್ಲಂಡದಲ್ಲಿ ಭಂಗಾರದ ನಾಣ್ಯಗಳು ಮುಖ್ಯ ನಾಣ್ಯಗಳು. ಬೆಳ್ಳಿಬ್ರೋನ್ಝಗಳ ನಾಣ್ಯಗಳು ಉಪನಾಣ್ಯಗಳು. ಈ ದೇಶದಲ್ಲಿ ಬೆಳ್ಳಿಯ ನಾಣ್ಯಗಳೇ ಮುಖ್ಯ ನಾಣ್ಯಗಳು, ತಾಮ್ರದ ನಾಣ್ಯಗಳು ಉಪನಾಣ್ಯಗಳು. ಈ ಉಪನಾಣ್ಯಗಳ ವಾಸ್ತವಿಕ ಬೆಲೆಗಿಂತಲೂ ಅವುಗಳಿಂದ ತೋರಿಸಲ್ಪಡುವ ಬೆಲೆಯು ಹೆಚ್ಚಾಗಿರುವದು. ಇಪ್ಪತ್ತು ಶಿಲಿಂಗುಗಳಲ್ಲಿದ್ದ ಬೆಳ್ಳಿಯನ್ನು ಕರಗಿಸಿದರೆ, ಅದರ ವಿನಿಮಯದ ಬೆಲೆಯು ಒಂದು ಪೌಂಡಿಗಿಂತಲೂ ಕಡಿಮೆಯಾಗುವದು. ಎರಡು ಹೊಸ ಅರ್ಧ ಕ್ರೌನಗಳ ತೂಕವು ಒಂದು ಔಂಸು ಆಗಿರುತ್ತದೆ. ಆದರೆ, ಈಗ ಅನೇಕ ವರ್ಷಗಳಿಂದ ಒಂದು ಔಂಸು ಬೆಳ್ಳಿಯ ಕ್ರಯವು ಅರವತ್ತು ಪೇನ್ಸಗಳಿಗಿಂತಲೂ ಕಡಿಮೆಯಾಗಿದೆಂಬದನ್ನು ವರ್ತಮಾನ ಪತ್ರಗಳಲ್ಲಿ ಪ್ರತಿ ದಿವಸ ಕಾಣ ಬಹುದು. ಬೆಳ್ಳಿಯ ಈಗಿನ ಕ್ರಯವು ಔಂಸಿಗೆ ೪೭ ಪೇನ್ಸಗಳಾಗಿದೆ. ಇದೇ ಮೇರೆಗೆ ಒಂದು ರೂಪಾಯಿಯ ರೊಕ್ಕದ ತೂಕವು ೧೩ ಶೇರು ಆಗುವದು. ಆದರೆ ೧೩ ಶೇರು ತಾಮ್ರಕ್ಕೆ ಸುಮಾರು ೮ ಆಣೆಗಳು ಬೀಳುವವು. ಇಂಗ್ಲಂಡದಲ್ಲಿ ಬೆಳ್ಳಿ ತಾಮ್ರಗಳ ನಾಣ್ಯಗಳೂ, ಈ ದೇಶದಲ್ಲಿ ತಾಮ್ರದ ನಾಣ್ಯಗಳೂ, ಸಣ್ಣ ಸಣ್ಣ ಕ್ರಯವಿಕ್ರಯಗಳನ್ನು ಮಾಡುವದಕ್ಕೆ ಸುಲಭವಾಗುವದಕ್ಕಾಗಿಯೇ ಮಾಡಲ್ಪಟ್ಟವೆ. ಒಂದು ನಿಯಮಿತವಾದ ರಕಮಿನ ಪರಿಯಂತರ ಮಾತ್ರ ಈ ನಾಣ್ಯಗಳನ್ನು ಕೊಟ್ಟರೆ ತಕ್ಕೊಳ್ಳಲೇ ಬೇಕೆಂಬ ಕಾಯಿದೆಯ ನಿರ್ಬಂಧ ಉಂಟು. ಈ ರಕಮಿಗಿಂತಲೂ ಹೆಚ್ಚಿನ ರಕಮು ಈ ನಾಣ್ಯಗಳ ದ್ವಾರಾ ಕೊಟ್ಟರೆ, ಹಿಡಿಯ ಬೇಕೆಂಬ ಕಾಯಿದೆಯ ನಿರ್ಬಂಧವಿಲ್ಲ. ಇಂಗ್ಲಂಡದಲ್ಲಿ ೪೦ ಶಿಲಿಂಗುಗಳಿಗಿಂತಲೂ

ಹೆಚ್ಚಿನ ಸಾಲವನ್ನು ಸಾಲಗಾರನ ಸಮ್ಮತಿಯ ಹೊರ್ತು, ಬೆಳ್ಳಿಯ ನಾಣ್ಯಗಳನ್ನು ಕೊಟ್ಟು ತೀರಿಸುವದಕ್ಕೆ ಬರುವದಿಲ್ಲ. ಇದರಂತೆಯೇ, ೧ ಶಿಲ್ಲಿಂಗಿಗಿಂತಲೂ ಹೆಚ್ಚಿನ ಸಾಲವನ್ನು ತಾಮ್ರದ ನಾಣ್ಯಗಳನ್ನು ಕೊಟ್ಟು ತೀರಿಸಲಿಕ್ಕೆ ಬರುವದಿಲ್ಲ. ಪೇನ್ಸುಗಳನ್ನೂ ಅರ್ಧ ಪೇನ್ಸುಗಳನ್ನೂ ಮಾಡುವ ಬ್ರೋನ್ಝವೆಂಬ ಮಿಶ್ರಧಾತುವಿನ ಒಂದು ಪೌಂಡು ತೂಕದ ಧಾತುವಿಗೆ ಸುಮಾರು ೧೦ ಪೇನ್ಸುಗಳು ಬೀಳುತ್ತವೆ. ಈ ತೂಕದ ಧಾತುವಿನಿಂದ ಸುಮಾರು ೪೦ ಪೇನ್ಸುಗಳನ್ನು ಮಾಡ ಬಹುದು. ಆದ್ದರಿಂದ ಬೆಳ್ಳಿ, ತಾಮ್ರ, ಬ್ರೋನ್ಝ ಈ ಧಾತುಗಳಿಂದ ಮಾಡಿದ ಎಲ್ಲ ನಾಣ್ಯಗಳಿಂದ ಸರಕಾರದವರು ಲಾಭವನ್ನು ದೊರಕಿಸುತ್ತಾರೆ. ಈ ಉಪನಾಣ್ಯಗಳ ಅಥವಾ ಚಿನ್ಹೀಭೂತವಾದ ನಾಣ್ಯಗಳ ವಾಸ್ತವಿಕ ಬೆಲೆಯು ಅವುಗಳಿಂದ ತೋರಿಸಲಾಗುವ ಬೆಲೆಗಿಂತಲೂ ಕಡಿಮೆಯಾಗಿರುವ ಮಟ್ಟಿಗೆ, ಈ ನಾಣ್ಯಗಳು ನಿಜವಾಗಿ ಬ್ಯಾಂಕಿನ ನೋಟುಗಳಂತೆ ಇರುವವು. ಎಷ್ಟು ಹಣವನ್ನಾದರೂ ಈ ಚಿನ್ಹೀಭೂತವಾದ ನಾಣ್ಯಗಳಿಂದ ಕೊಡುವದಕ್ಕೆ ಕಾಯಿದೆಯ ಸಮ್ಮತಿ ಇದ್ದರೆ ಬಹಳ ಅನ್ಯಾಯವಾಗುವದು. ಆದರೆ, ಸಾಂಪ್ರತದಲ್ಲಿ ನಡಿಯುವ ವ್ಯವಸ್ಥೆಯಿಂದ ಯಾರಿಗೂ ಅನ್ಯಾಯವಾಗುವದಿಲ್ಲ. ಹಾಗೂ ಸರಕಾರಕ್ಕೆ ದೊರೆಯುವ ಲಾಭದಿಂದ ಭಂಗಾರದ ಗಟ್ಟಿಗಳನ್ನು ಕೊಟ್ಟರೆ ಅವುಗಳ ನಾಣ್ಯಗಳನ್ನು ಪುಗಸಾಟಿ ಮಾಡಿ ಕೊಡುವದು ಸರ್ಕಾರಕ್ಕೆ ಅನುಕೂಲವಾಗುತ್ತದೆ. ಇದಲ್ಲದೆ ಈ ಲಾಭದಿಂದ ಟಂಕಸಾಲೆಯ ಖರ್ಚು ವೆಚ್ಚ ನಡಿದು, ಸರಕಾರಕ್ಕೆ ಅಲ್ಪಸ್ವಲ್ಪ ಉಳತಾಯವಾದರೂ ಆಗುತ್ತದೆ. ಮತ್ತು ಇದರಿಂದ ಜನರಿಗೂ ವಿಶೇಷ ಅನುಕೂಲವಾದ ನಾಣ್ಯಗಳು ಶಿಗುತ್ತವೆ. ಒಂದು ಪೇನ್ಸಿನಲ್ಲಿ ಪೌಂಡಿನ $\frac{೧}{೨೪೦}$ನೇ ಭಾಗದಷ್ಟು ಬೆಲೆಯುಳ್ಳ ತಾಮ್ರವಿದ್ದಲ್ಲಿ, ಒಂದು ಪೇನ್ಸಿನ ತೂಕವು ಸುಮಾರು ೨ ಔಂಸು (ಲೆ ಅರ್ಧ ಕ್ರೌನಿನಷ್ಟು) ಆಗುವದರಿಂದ ಇಂಥ ನಾಣ್ಯಗಳನ್ನು ಸಂಗಡ ಒಯ್ಯುವದಕ್ಕೆ ಎಲ್ಲರಿಗೂ ಬಹಳ ತೊಂದರೆಯಾಗುವದು. ಇದಲ್ಲದೆ ಒಂದೊಂದು ಪೇನ್ಸು ಏನೂ ಹೆಚ್ಚುಕಡಿಮೆ ಇಲ್ಲದಂತೆ ಒಂದು ಪೌಂಡಿನ $\frac{೧}{೨೪೦}$ ಭಾಗದ ಬೆಲೆಯಷ್ಟೇ ಬೆಲೆಯುಳ್ಳದ್ದಾಗಿ ಮಾಡ ಬೇಕೆಂದು ಯತ್ನ ನಡಿಸಿದರೆ, ಮತ್ತೊಂದು ತೊಂದರೆ ಸಂಭವಿಸ ಬಹುದು. ಅದೇನಂದರ್ರೆ, ತಾಮ್ರದ ಬೆಲೆಯು ಹೆಚ್ಚುಕಡಿಮೆಯಾದಂತೆ ಯಾವಾಗಲೂ ಹೆಚ್ಚುಕಡಿಮೆ ತೂಕವುಳ್ಳ ಪೇನ್ಸು ಮಾಡ ಬೇಕಾಗುವದು. ನಮ್ಮ ದೇಶದಲ್ಲಿ ಬೆಳ್ಳಿಯು ಮತ್ತು ತಾಮ್ರದ ನಾಣ್ಯಗಳೊಳಗಾದರೂ ಇದೇ ತರದ ಸಂಬಂಧ ಉಂಟು. ಆದ್ದರಿಂದ ಅವುಗಳನ್ನು ಕುರಿತು ಪ್ರತ್ಯೇಕವಾಗಿ ಹೇಳುವ ಅವಶ್ಯವಿಲ್ಲ.

ದ್ವಿಧಾತುಪ್ರಚಾರನಿರ್ಣಯವು.— ಹಣದ ದ್ವಿವಿಧಪ್ರಮಾಣವಿಹ ಬೇಕೆಂದು ಪ್ರತಿಪಾದಿಸುವಂಥ ಕೆಲವರು ಸಾಧಿಸುವದೇನಂದರೆ, ಅನೇಕ ದೇಶಗಳ ಜನರು ಕೂಡಿ ಬೆಳ್ಳಿ ಭಂಗಾರಗಳ ಪರಸ್ಪರ ಬೆಲೆಯ ಪ್ರಮಾಣವನ್ನು ಕಾಯಿದೆಯಿಂದ ನಿರ್ಣೈಸಿದ್ದಾದರೆ, ಉದಾಹರಣಾರ್ಥವಾಗಿ ೧ ಭಾಗ ಚಿನ್ನವು ೧೫½ ಭಾಗ ಬೆಳ್ಳಿಗೆ ಸರಿಯಾದದ್ದೆಂದು ಕಾಯಿದೆಯಿಂದ ನಿರ್ಣೈಸಿದರೆ, ಈ ಕಾಯಿದೆಯಿಂದ ನಿರ್ಣೈಸಲ್ಪಟ್ಟ ಬೆಲೆಗೂ ಈ ಎರಡು ಧಾತುಗಳ ನಿಜವಾದ ಬೆಲೆಗೂ ವ್ಯತ್ಯಾಸ ಉಂಟಾದ ಕೂಡ್ಲೆ, ಎಲ್ಲರಿಗೂ ಬೆಲೆ ಇಳಿದ ಧಾತುವಿನ ನಾಣ್ಯಗಳಿಂದಲೇ ತಮ್ಮ ತಮ್ಮ ಸಾಲಗಳನ್ನೆಲ್ಲ ತೀರಿಸುವದು ಲಾಭವುಳ್ಳದ್ದಾಗುವದು. ಅದರಿಂದ ಬೆಲೆ ಇಳಿದ ಧಾತುವಿನ ಬೇಡಿಕೆ ವಿಶೇಷವಾಗುವದು. ಹಾಗೂ ಬೆಲೆ ಏರಿದ ಧಾತುವಿನ ಬೇಡಿಕೆ ಕಡಿಮೆಯಾಗುವದು. ಈ ಪ್ರಕಾರ ಎರಡೂ ಧಾತುಗಳ ಬೇಡಿಕೆಯಲ್ಲಿ ಹೆಚ್ಚುಕಡಿಮೆ ಉಂಟಾಗುವದರಿಂದ ಬೆಲೆ ಇಳಿದ ಧಾತುವಿನ ಬೆಲೆಯು ಏರ ಹತ್ತುವದು. ಮತ್ತು ಎರಡೂ ಧಾತುಗಳ ಪರಸ್ಪರ ಬೆಲೆಯ ಪ್ರಮಾಣವು ಕಾಯಿದೆಯಿಂದ ನಿರ್ಣೈಸಲ್ಪಟ್ಟ ಪ್ರಮಾಣಕ್ಕೆ ಸಮೀಪಿಸುವದು. ಈ ಸೂಚನೆಯು "ದ್ವಿಧಾತುಪ್ರಚಾರನಿರ್ಣಯ"ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಬೇಕಾದಷ್ಟು ಹೆಚ್ಚು ಪೂರೈಸಲಿಕ್ಕೆ ಬರುವ ಸರಕುಗಳ ಬೆಲೆಯು, ಆ ಸರಕುಗಳನ್ನು ಹುಟ್ಟಿಸಲಿಕ್ಕೆ ತಗಲುವ ಖರ್ಚಿನಂತಲ್ಲದೆ ಬೇರೆ ಕಾರಣಗಳಿಂದ ಹೆಚ್ಚುಕಡಿಮೆಯಾಗ ಬಹುದೆಂಬ* ಗ್ರಹಿಕೆಯೇ ಈ ತಪ್ಪು ತಿಳುವಳಿಕೆಯ ಮೂಲವು. ಚಿನ್ನ ಬೆಳ್ಳಿಗಳ ಬೆಲೆಯ ಪ್ರಮಾಣವು ೧೫½: ೧ರಂತೆ ಎಂದು ಕಾಯಿದೆಯಿಂದ ನಿರ್ಣಯ ಆಯಿತೆಂದು ಕಲ್ಪಿಸಿರಿ. ಅನಂತರದಲ್ಲಿ ಒಂದು ಅಕಲ್ಪಿತ ಶೋಧದಿಂದ ೧ ಔಂಸು ಭಂಗಾರಕ್ಕಿಂತಲೂ ೧೫½ ಔಂಸು ಬೆಳ್ಳಿಯನ್ನು ಕಣಿಗಳಿಂದ ತೆಗಿಯುವದು ಸುಲಭವಾಯಿತೆಂದು ಕಲ್ಪಿಸಿರಿ. ಈ ಬಗೆಯ ಸ್ಥಿತಿಯು ಸ್ಥಿರವಾಗಿ ನಿಂತರೆ, ಪಾರ್ಲಿಮೆಂಟಿನವರು ಎಷ್ಟೇ ಕಟ್ಟಳೆಗಳನ್ನು ಮಾಡಿದಾಗ್ಯೂ ೧ಕ್ಕೆ ೧೫½ ಈ ಪ್ರಮಾಣದಿಂದ ಚಿನ್ನ ಬೆಳ್ಳಿಗಳನ್ನು ಕೊಡುಕೊಳ್ಳುವದಕ್ಕೆ ಜನರಿಗೆ ಮನಸಾಗದು.

ಎಮ್ ಬ್ಯಾಸ್ಟಿಯಟ್‌ನು ಕೊಟ್ಟ ದೃಷ್ಟಾಂತವು.— ಹಣದ ವಿಷಯವನ್ನು ಕುರಿತು ಮತ್ತೊಂದು ವಿಚಾರವನ್ನು ಹೇಳಿ, ಈ ಅಧ್ಯಾಯವನ್ನು ಮುಗಿಸುವೆವು. ಹಣವೆಂಬುವದೇ ಮಾತ್ರ ಸಂಪತ್ತಿನ ಉಗಮವೆಂಬ ಭ್ರಾಂತಿಯು ಎಷ್ಟೋ

* ಬೇರೆ ಬೇರೆ ಸರಕುಗಳ ಬೆಲೆಯನ್ನು ಕ್ರಮಗೊಳಿಸುವಂಥ ಕಾರಣಗಳ ವಿಷಯವು ಮುಂದಿನ ಅಧ್ಯಾಯದಲ್ಲಿ ವಿವರಿಸಲ್ಪಡುವದು.

ಮಿಥ್ಯಾಗ್ರಹಗಳಿಗೆ ಕಾರಣವಾಗಿರುವದು. ಪ್ರತಿಯೊಬ್ಬನ ಹತ್ತರ ಹೆಚ್ಚು ಹಣ ವಿದ್ದ ಹಾಗೆ ಅವನಿಗೆ ಹೆಚ್ಚು ಉಪಜೀವನದ ಪದಾರ್ಥಗಳನ್ನು ಕೊಳ್ಳುವ ಸಾಮರ್ಥ್ಯ ಉಂಟಾಗುತ್ತದೆ. ಆದರೆ, ಈ ಮಾತು ವ್ಯಕ್ತಿ ಮಾತ್ರರ ವಿಷಯವಾಗಿ ಸರಿಯಾಗಿದ್ದರೂ, ಇಡೀ ದೇಶದ ಸಂಬಂಧದಿಂದ ನೋಡಲಾಗಿ ಸರಿ ಬೀಳುವದಿಲ್ಲವೆಂಬುವದನ್ನು ಲಕ್ಷ್ಯಕ್ಕೆ ತಾರದೆ, ದೇಶದೊಳಗೆ ಬಳಿಕೆಯಲ್ಲಿದ್ದ ಹಣವು ವೃದ್ಧಿಯಾದ ಹಾಗೆ ದೇಶದ ಸಂಪತ್ತಾದರೂ ಅಭಿವೃದ್ಧಿಯಾಗುವದೆಂದು ಜನರು ತಿಳುಕೊಳ್ಳುವರು. ಎಮ್ ಬ್ಯಾಸ್ಟಿಯಟನೆಂಬ ಗ್ರಂಥಕರ್ತನು ಹೇಳಿದ ಕೆಳಗೆ ಬರೆದ ದೃಷ್ಟಾಂತದಿಂದ ಈ ಅನುಮಾನವು ಭ್ರಾಂತಿಮೂಲಕವಾದದ್ದೆಂಬದು ಚನ್ನಾಗಿ ವ್ಯಕ್ತವಾಗುತ್ತದೆ.—"ಹತ್ತು ಮಂದಿ ಜೂಜಾಡುವದಕ್ಕೆ ಕೂತು, ಒಬ್ಬೊಬ್ಬನು ೧೦೦ ರೂಪಾಯಿಗಳಂತೆ ಒಟ್ಟಿಗೆ ೧೦೦೦ ರೂಪಾಯಿಗಳನ್ನು ಜೂಜು ಇಟ್ಟರು. ಪ್ರತಿಯೊಬ್ಬನ ಬಳಿಯಲ್ಲಿ ೧೦ ರೂಪಾಯಿಗಳ ದರ್ಶಕವಾದ ಒಂದು ಎಣಿಕೆಯ ನಾಣ್ಯದಂತೆ, ಹತ್ತು ನಾಣ್ಯಗಳು ಕೊಡಲ್ಪಟ್ಟವು. ಆಟವು ಮುಗಿದ ನಂತರ ಪ್ರತಿಯೊಬ್ಬನಿಗೆ ತನ್ನ ಹತ್ತರವಿದ್ದ ಎಣಿಕೆಯ ನಾಣ್ಯಗಳ ಸಂಖ್ಯೆಯ ಹತ್ತರಷ್ಟು ರೂಪಾಯಿಗಳು ದೊರೆದವು. ಅವರಲ್ಲೊಬ್ಬನ ಬುದ್ಧಿಯು ತರ್ಕಶಾಸ್ತ್ರಕ್ಕಿಂತಲೂ ಗಣಿತಶಾಸ್ತ್ರದಲ್ಲಿ ವಿಶೇಷ ಹರಿಯುತ್ತಿದ್ದದರಿಂದ ಅವನು ಪ್ರತಿಯೊಂದು ಆಟವು ಮುಗಿದನಂತರ ತನ್ನ ಹತ್ತರ ಎಣಿಕೆಯ ನಾಣ್ಯಗಳು ಹೆಚ್ಚಾದ ಮಾನದಿಂದ ತಾನು ಹೆಚ್ಚು ಹಣವಂತನಾದದ್ದನ್ನೂ, ಬೇರೆಯವರ ಅನುಭವವೂ ತನ್ನಂತೆಯೇ ಇದ್ದದ್ದನ್ನೂ ತಿಳುಕೊಂಡು, ಅವರಿಗೆ ಅಂದದ್ದೇನಂದರೆ, "ನಾನು ನನ್ನ ಅನುಭವದಿಂದ ಸತ್ಯವೆಂದೆಣಿಸಿದ ಸಂಗತಿಯೇ ನಿಮ್ಮ ಅನುಭವಕ್ಕಾದರೂ ಬರಲಿಕ್ಕೆ ಬೇಕು. ಯಾಕಂದರೆ, ಪ್ರತಿಯೊಬ್ಬನ ಅನುಭವಕ್ಕೆ ಸತ್ಯವೆಂದು ತೋರುವ ಸಂಗತಿಯು ಎಲ್ಲರಿಗೂ ಸತ್ಯವಾಗಿ ತೋರುವದು". ಹೀಗಂದು ಈ ಗಣಿತ ಶಾಸ್ತ್ರಪಂಡಿತನು ಪ್ರತಿಯೊಬ್ಬನ ಬಳಿಯಲ್ಲಿ ಮೊದಲಿನ ಇಮ್ಮಡಿ ಎಣಿಕೆಯ ನಾಣ್ಯಗಳನ್ನು ಕೊಡ ಬೇಕೆಂದು ಸೂಚಿಸಿದನು. ಈ ಪ್ರಕಾರ ಸೂಚಿಸಿದ್ದೊಂದೇ ತಡ, ಕೂಡ್ಲೆ ಮೊದಲಿನ ಎರಡಷ್ಟು ಎಣಿಕೆಯ ನಾಣ್ಯಗಳು ಹಂಚಲ್ಪಟ್ಟವು. ಆದರೂ, ಆಟ ಮುಗಿದನಂತರ ಮೊದಲಿಗಿಂತಲೂ ತಾವು ಹಣವಂತರಾದಂತೇನೂ ಅವರಿಗೆ ಕಂಡು ಬರಲಿಲ್ಲ. ಜೂಜಿಗೆ ಹಚ್ಚಿದ ಹಣವನ್ನೇನು ಹೆಚ್ಚಿಸಿದ್ದಿಲ್ಲ. ಹಣದ ಗುರುತುಗಳಾದ ಎಣಿಕೆಯ ನಾಣ್ಯಗಳನ್ನು ಮಾತ್ರ ಇಮ್ಮಡಿ ಮಾಡಿದ್ದರಿಂದ, ಪ್ರತಿಯೊಂದು ಎಣಿಕೆಯ ನಾಣ್ಯವು ೧೦ ರೂಪಾಯಿಯ ಬೆಲೆಯನ್ನು ತೋರಿಸುವದಕ್ಕೆ ಬದಲಾಗಿ ೫ ರೂಪಾಯಿಯ ಬೆಲೆ ತೋರಿಸುವದಾ

ಯಿತು. ಆದ್ದರಿಂದ, ಪ್ರತಿಯೊಬ್ಬನಿಗೆ ಮೊದಲಿನ ಇಮ್ಮಡಿ ಎಣಿಕೇ ಸೊಣ್ಯಗಳು ದೊರೆದಾಗ್ಯೂ ಅವನು ಮೊದಲಿಗಿಂತ ಇಮ್ಮಡಿ ಹಣವಂತನಾಗಲಿಲ್ಲ. ಆಗ ಕಟ್ಟ ಕಡೆಗೆ, ಪ್ರತಿಯೊಬ್ಬ ವ್ಯಕ್ತಿಯ ಸಂಬಂಧವಾಗಿ ನಿಜವಾದ ಸಂಗತಿಯು ಎಲ್ಲರ ಸಂಬಂಧವಾಗಿ ಯಾವಾಗಲೂ ನಿಜವಾಗಿರುವದಿಲ್ಲೆಂಬದು ಅವರಿಗೆ ಗೊತ್ತಾಯಿತು.

## ಎರಡನೆ ಅಧ್ಯಾಯದ ಮೇಲಿನ ಪ್ರಶ್ನಗಳು.

### ಹಣದ ವಿಷಯದಲ್ಲಿ.

೧. ಹಣದ ಕಾರ್ಯಗಳು ಯಾವವು?

೨. ಬೆಲೆಯ ಪರಿಮಾಣವೆಂಬದರ ಅರ್ಥವನ್ನು ವಿವರಿಸಿ, ಒಂದು ಉದಾಹರಣವನ್ನು ಕೊಡಿರಿ.

೩. ವಿನಿಮಯದ ಸಾಧನವೆಂಬದರ ಅರ್ಥವನ್ನು ವಿವರಿಸಿ, ಒಂದು ದೃಷ್ಟಾಂತವನ್ನು ಹೇಳಿರಿ.

೪. ನಾಣ್ಯಗಳನ್ನು ಮಾಡುವ ಪದಾರ್ಥವು ಬೆಳ್ಳಿ ಇಲ್ಲವೆ ಭಂಗಾರವಾಗಿರುವದು ಅವಶ್ಯವೋ?

೫. ಬೇರೆ ಬೇರೆ ಕಾಲಗಳಲ್ಲಿಯೂ, ಬೇರೆ ಬೇರೆ ದೇಶಗಳಲ್ಲಿಯೂ, ಯಾವಪದಾರ್ಥಗಳು ಹಣವಾಗಿ ಉಪಯೋಗಿಸಲ್ಪಟ್ಟವೆ?

೬. ಹಣವಾಗಿ ಆರಿಸಲ್ಪಡುವ ಪದಾರ್ಥದಲ್ಲಿ ಇರಬೇಕಾದ ಗುಣಗಳನ್ನು ಹೇಳಿರಿ.

೭. ಈ ಗುಣಗಳಲ್ಲಿ ಪ್ರತಿಯೊಂದು ಗುಣದ ಮಹತ್ವವನ್ನು ಉದಾಹರಣ ಮೂಲಕವಾಗಿ ವರ್ಣಿಸಿರಿ.

೮. ಯಾವಪದಾರ್ಥಗಳಲ್ಲಿ ಈ ಗುಣಗಳು ಬಹಳ ಪ್ರಮಾಣದಿಂದ ವಾಸಿಸುವವು?

೯. ಶ್ರಮವನ್ನು ಬೆಲೆಯ ಪ್ರಮಾಣವಾಗಿ ಉಪಯೋಗಿಸುವದರಿಂದುಂಟಾಗುವ ವಿಶೇಷ ತೊಂದರೆಗಳು ಯಾವವು?

೧೦. ಬೆಲೆಯ ದ್ವಿವಿಧ ಪ್ರಮಾಣವೆಂದರೇನು?

೧೧. ದ್ವಿವಿಧ ಪ್ರಮಾಣದಿಂದ ಉಂಟಾಗುವ ನಷ್ಟಗಳು ಯಾವವು?

೧೨. ಈ ದೇಶದಲ್ಲಿ ಬೆಲೆಯ ದ್ವಿವಿಧ ಪ್ರಮಾಣವಿರುವದೋ?

೧೩. ದ್ವಿಧಾತು ಪ್ರಚಾರ ನಿರ್ಣಯವೆಂದರೇನು? ಈ ವಾದಕ್ಕೆ ಮೂಲವಾದ ಮಿಥ್ಯಾಗ್ರಹಿಕೆಯು ಯಾವದು?

೧೪. ಹಣದ ನಿಜಸ್ವರೂಪವನ್ನು ಸ್ಪಷ್ಟವಾಗಿ ತಿಳಿಸುವದಕ್ಕಾಗಿ ಎಮ್ ಬ್ಯಾಷ್ಟಿಯಟನು ಕೊಟ್ಟ ಉತ್ಕೃಷ್ಟವಾದ ದೃಷ್ಟಾಂತವನ್ನು ಹೇಳಿರಿ.

---

೧. ಹಿಂದುಸ್ತಾನದಲ್ಲಿ ಭಂಗಾರದ ನಾಣ್ಯಗಳು ಇಲ್ಲ. ಇದರಿಂದ, ಸಣ್ಣಸಣ್ಣ ರಕಮುಗಳ ಸಾಲವನ್ನು ತೀರಿಸುವಾಗ ಬರುವ ತೊಂದರೆಗಳು ಯಾವವು? ಬೇರೆಬೇರೆ ಹತ್ತು ಅಂಗಡಿಗಳಲ್ಲಿ ಕೂಡಿ ೧೦ ಪೌಂಡು ಕೊಡತಕ್ಕದ್ದಿದ್ದರೆ, ಕಿಸೆಯಲ್ಲಿ ೧೦೦ ರೂಪಾಯಿ ಹಾಕಿಕೊಂಡು ಅಂಗಡಿಯಿಂದ ಅಂಗಡಿಗೆ ತಿರುಗುವದು ನಿಮ್ಮ ಮನಸಿಗೆ ಬರುವದೋ?

೨. ಯಾವನೊಬ್ಬನು ಭಂಗಾರದ ಖಣಿಯನ್ನು ಹುಡುಕಿ ತೆಗೆದರೆ, ಅವನು ದೇಶದ ಸಂಪತ್ತನ್ನು ಬೆಳಿಸಿದಂತಾಗುವದೋ?

೩. ಪ್ರತಿಯೊಬ್ಬನ ಬಳಿಯಲ್ಲಿದ್ದ ಹಣವು ಒಮ್ಮಿಂದೊಮ್ಮೆ ಇಮ್ಮಡಿಯಾದದ್ದು ಕಂಡು ಬಂದರೆ, ಅದರಿಂದ ದೇಶದೊಳಗಿನ ಇಡೀ ಸಂಪತ್ತಿನ ಮೇಲೆ ಏನು ಪರಿಣಾಮವಾಗುವದು?

೪. ಪೃಥ್ವಿಯೊಳಗಿನ ಎಲ್ಲ ಚಿನ್ನ ಬೆಳ್ಳಿ ತಾಮ್ರಗಳನ್ನು ನಾಶ ಮಾಡಿ ಬಿಟ್ಟರೆ, ಅದರಿಂದ ವ್ಯಾಪಾರೋದೀಮ ಕೊಳ್ಕೊಡುವೆಲ್ಲ ನಿಂತು ಹೋಗುವದೋ?

## ೩ನೇ ಅಧ್ಯಾಯ.

## ಸರಕುಗಳ ಬೆಲೆ.

**ಬೇರೆ ಬೇರೆ ಸರಕುಗಳ ಬೆಲೆಯ ಸಂಬಂಧದಿಂದ ವಿಚಾರ ಮಾಡಿ ನೋಡಲಾಗಿ, ಅವುಗಳಲ್ಲಿ ಮೂರು ವರ್ಗಗಳನ್ನು ಮಾಡ ಬಹುದು: —**

೧. ಕೆಲವು ಸರಕುಗಳು ಕೇವಲ ನಿಯಮಿತ ಪೂರೈಕೆಯುಳ್ಳವಾಗಿರುವವು. ಈ ಸರಕುಗಳ ಬೆಲೆಯು ಎಷ್ಟು ಹೆಚ್ಚಾದಾಗ್ಯಾದರೂ, ಅವುಗಳನ್ನು ಹೆಚ್ಚಿಗೆ ಉತ್ಪನ್ನ ಮಾಡಲಿಕ್ಕೆ ಬರುವದಿಲ್ಲ. ಆದ್ದರಿಂದ, ಇಂಥ ಸರಕುಗಳು ಗುತ್ತೇ ತೆಗೆದು ಕೊಂಡ ಸರಕುಗಳಂತೆ ಬಹಳ ಬೆಲೆಗಾಣುವವು. ಪುರಾತನ ಚಿತ್ರಗಳು, ಶಿಲ್ಪದ ಒಡವೆಗಳು, ಪ್ರಾಚೀನ ಗ್ರಂಥಗಳು, ನಾಣ್ಯಗಳು, ಪುರಾಣ ಪ್ರಸಿದ್ಧ ಪುರುಷರ ಗುರುತುಗಳು ಮೊದಲಾದವುಗಳು ಈ ವರ್ಗದ ಒಡವೆಗಳು.

೨. ಕೆಲವು ಸರಕುಗಳ ಪೂರೈಕೆಯನ್ನು ಬೇಕಾದಷ್ಟು ಬೆಳಿಸ ಬಹುದು. ಆದರೆ, ಈ ಸರಕುಗಳನ್ನು ಹೆಚ್ಚು ಉತ್ಪನ್ನ ಮಾಡಿದ ಹಾಗೆ ಉತ್ಪನ್ನ ಮಾಡುವ ಖರ್ಚು ಹೆಚ್ಚು ಪ್ರಮಾಣದಿಂದ ತಗಲುವದು. ಬೇಸಾಯದ ಹುಟ್ಟುವಳಿಗಳೂ ಕಣಿಗಳ ಹುಟ್ಟುವಳಿಗಳೂ ಈ ವರ್ಗದವು.

೩. ಕೆಲವು ಸರಕುಗಳು ಉತ್ಪನ್ನ ಮಾಡುವ ಖರ್ಚು ಹೆಚ್ಚಾಗದೆ ಬೇಕಾದಷ್ಟು ಪೂರೈಸಲಿಕ್ಕೆ ಬರುವವು. ಶಿಲ್ಪದ ಸರಕುಗಳು ಈ ವರ್ಗಕ್ಕೆ ಸೇರಿದವುಗಳು.

**ಉತ್ಪನ್ನ ಮಾಡುವ ಖರ್ಚು.** — ಮೇಲೆ ಹೇಳಿದ ಸರಕುಗಳ ವರ್ಗೀಕರಣದಲ್ಲಿ "ಉತ್ಪನ್ನ ಮಾಡುವ ಖರ್ಚು" ಎಂಬ ಶಬ್ದಗಳು ಉಪಯೋಗಿಸಲ್ಪಟ್ಟವೆ. "ಉತ್ಪನ್ನ ಮಾಡುವ ಖರ್ಚು ಎಂಬ ಶಬ್ದಗಳ ಅರ್ಥದಲ್ಲಿ ಸಂಬಳ ಮತ್ತು ಲಾಭ ಇವೆರಡೇ ಮುಖ್ಯವಾಗಿ ಬರುತ್ತವೆಂದು ಮಿಲ್ ಧೊರೆಯು ಹೇಳಿದ್ದಾನೆ. ಆದರೆ ಪ್ರೊಫೆಸರ ಕೇರ್ನ್ಸ್ ಧೊರೆಯು ಬೇರೆ ವ್ಯಾಖ್ಯೆಯನ್ನು ಸ್ವೀಕರಿಸಿದ್ದಾನೆ. ಕೇರ್ನ್ಸ್ ಧೊರೆಯ ವ್ಯಾಖ್ಯೆಯೇ ಈ ವಿಷಯದ ನಿಜವಾದ ಸಂಗತಿಗಳನ್ನು ವಿಶೇಷ ಚನ್ನಾಗಿ ವಿವರಿಸುವದಾಗಿ ತೋರುತ್ತದೆ. ಈ ಧೊರೆಯು ಸಿದ್ಧ ಮಾಡಿದ್ದೇನಂದರೆ, ಉತ್ಪನ್ನ ಮಾಡುವ ಖರ್ಚಿನ ಮೂಲಕಾರಣಗಳು ಶ್ರಮ, ಮಿತಭೋಗ, ಲುಕಸಾನಿಗೆ ತಲೆ ಕೊಟ್ಟು ನಿಲ್ಲುವ ಧೈರ್ಯ, ಇವು ಮೂರು; ಶ್ರಮ ಮಾಡುವವರು ಕೂಲಿಕಾರರು; ಮಿತಭೋಗವನ್ನು ಆಚರಿಸುವವರು ಬಂಡವಲ ಹಾಕುವ ಸಾವುಕಾರರು; ಲುಕಸಾನಿಗೆ ತಲೆ ಕೊಟ್ಟು ನಿಲ್ಲುವ ಧೈರ್ಯವನ್ನು ಹೆಚ್ಚುಕಡಿಮೆ

ಯಾಗಿ ಕೂಲಿಕಾರರೂ, ಸಾವುಕಾರರೂ, ಇಬ್ಬರೂ ಮಾಡುವರು. ಸಂಬಳವೆಂಬುವದು ಕೂಲಿಕಾರನ ಶ್ರಮದ ಮತ್ತು ಧೈರ್ಯದ ಪ್ರತಿಫಲವಾಗಿದೆ. ಲಾಭವೆಂಬುವದು ಸಾವುಕಾರನ ಮಿತಭೋಗದ ಮತ್ತು ಧೈರ್ಯದ ಪ್ರತಿಫಲವಾಗಿದೆ. ಇದರ ಮೇಲಿಂದ ಸ್ಪಷ್ಟವಾಗುವದೇನಂದರೆ, ಯಾವತ್ತು ವ್ಯವಸಾಯಗಳಲ್ಲಿ ಆಯಾ ವ್ಯವಸಾಯಕ್ಕೆ ಬೇಕಾಗುವ ಶ್ರಮ ಮಿತಭೋಗ ಧೈರ್ಯಗಳ ಪ್ರಮಾಣದಂತೆಯೇ ಸಂಬಳ ಮತ್ತು ಲಾಭವು ದೊರೆಯುವಂತೆ ಕೂಲಿಕಾರರೊಳಗೂ ಸಾವುಕಾರರೊಳಗೂ ಮೇಲಾಟವು ಅಪ್ರತಿಬಂಧವಾಗಿ ನಡೆದರೆ, ಸಂಬಳ ಲಾಭಗಳು, ಉತ್ಪನ್ನ ಮಾಡುವದಕ್ಕೆ ತಾಗಿದ ನಿಜವಾದ ಖರ್ಚಿನ ಹಣದ ಪರಿಮಾಣವನ್ನು ಸರಿಯಾಗಿ ತೋರಿಸುವವು. ಇಂಥ ಪ್ರಸಕ್ತಿಗಳಲ್ಲಿ, ಅರ್ಥಶಾಸ್ತ್ರದ ದೃಷ್ಟಿಯಿಂದ ಉತ್ಪನ್ನದ ಖರ್ಚು, ಸಂಬಳ ಹಾಗೂ ಲಾಭ ಇವುಗಳಿಂದ ಉಂಟಾಗುತ್ತದೆಂದು ಹೇಳಿದರೂ ಚಿಂತೆ ಇಲ್ಲ; ಅಥವಾ ಶ್ರಮ ಮಿತಭೋಗ ಹಾಗೂ ಧೈರ್ಯ ಇವುಗಳಿಂದ ಉಂಟಾಗಿರುತ್ತದೆಂದರೂ ಚಿಂತೆ ಇಲ್ಲ.

ಮೇಲೆ ಹೇಳಿದ ಮೂರು ವರ್ಗಗಳ ಸರಕುಗಳ ಬೆಲೆಯನ್ನು ಕ್ರಮಗೊಳಿಸುವಂಥ ಕಾರಣಗಳನ್ನು ವಿವರಿಸಿ ಹೇಳುವ ಪೂರ್ವದಲ್ಲಿ, ಸರಕುಗಳ ಬೇಡಿಕೆ ಪೂರೈಕೆಗಳಿಗೂ ಬೆಲೆಗೂ ಇರುವ ಸಂಬಂಧವನ್ನು ಕುರಿತು ಹೇಳುವದು ಅವಶ್ಯವಾಗಿದೆ. ಈ ವಿಷಯದ ವಿವರಣೆಯಲ್ಲಿ "ಬೆಲೆ" ಎಂಬ ಶಬ್ದಕ್ಕೆ ಬದಲಾಗಿ "ಕ್ರಯ"ವೆಂಬ ಶಬ್ದವನ್ನು ಉಪಯೋಗಿಸಿದಲ್ಲಿ, ಈ ವಿಷಯದ ವಿವೇಚನವು ಸುಗಮವಾಗಬಹುದು. ಹಾಗೂ ಇದರಲ್ಲಿ ತಪ್ಪೇನೂ ಇಲ್ಲ. ಯಾಕಂದರೆ, ಕ್ರಯವೆಂಬುವದು ಬೆಲೆಯ ವಿಶೇಷ ಪ್ರಕಾರವಾಗಿದೆಂಬುವದನ್ನು ಮುಂಚಿತವಾಗಿಯೇ ಹೇಳಿದ್ದೇವೆ. ಆದರೆ, ಈ ಸ್ಥಳದಲ್ಲಿ ಗ್ರಹಿಸಿಕೊಳ್ಳ ತಕ್ಕದ್ದೊಂದು ಸಂಗತಿ ಏನಂದರೆ, ಯಾವದೊಂದು ಸರಕಿನ ಕ್ರಯದಲ್ಲಿ ಆಗುವ ಹೆಚ್ಚುಕಡಿಮೆಯು ಆ ಸರಕಿನ ಬೆಲೆಯುಲ್ಲುಂಟಾದ ಹೆಚ್ಚುಕಡಿಮೆಯಿಂದಲೇ ಆಗುತ್ತದೇ ಹೊರ್ತು, ಬೆಳ್ಳಿಯ ಬೆಲೆಯು ಹೆಚ್ಚುಕಡಿಮೆಯಾಗುವದರಿಂದ ಆಗುವದಿಲ್ಲ. ಉದಾಹರಣಾರ್ಥವಾಗಿ ಜೋಳದ ಕ್ರಯವು ಏರಿದ್ದಾದರೆ, ಈ ಏರೋಣವು ಜೋಳದ ಬೆಲೆಯು ಹೆಚ್ಚಾಗುವದರಿಂದ ಉಂಟಾಯಿತೆಂದು ತಿಳಿಯ ಬೇಕಲ್ಲದೆ, ಬೆಳ್ಳಿಯ ಬೆಲೆಯು ಕಡಿಮೆಯಾದ್ದರಿಂದ ಉಂಟಾಯಿತೆಂದು ತಿಳಿಯಬಾರದು.

**ಬೇಡಿಕೆ ಪೂರೈಕೆಗಳಿಗೂ ಕ್ರಯಗಳಿಗೂ ಇರುವ ಸಂಬಂಧ.**— ಯಾವದೊಂದು ಸರಕಿನ ಕ್ರಯವು ಅದರ ಬೇಡಿಕೆ ಪೂರೈಕೆಗಳನ್ನು ಅನುಸರಿಸುವದೆಂದು ಜನರು ಆಗಾಗ್ಯೆ ಹೇಳುವದು ಯಥಾರ್ಥವಾದದ್ದೇ ಸರಿ. ಆದರೆ ಅದರ ಅರ್ಥ

ವನ್ನು ಮಾತ್ರ ಚನ್ನಾಗಿ ತಿಳಿದು ಕೊಳ್ಳ ಬೇಕು. ಯಾಕಂದರೆ, ಎಷ್ಟೋ ಜನರು ಈ ಮಾತಿನ ಅರ್ಥವನ್ನು ತಿಳಿಯದಲೇ ಮಾತಾಡುತ್ತಾರೆ. ಬೇಡಿಕೆ ಪೂರೈಕೆಗಳಿಗೂ ಕ್ರಯಗಳಿಗೂ ಇರುವ ಯಥಾರ್ಥವಾದ ಸಂಬಂಧವನ್ನು ಸ್ವಲ್ಪದರಲ್ಲಿ ಈ ಪ್ರಕಾರ ವರ್ಣಿಸ ಬಹುದು. ಸರಕುಗಳ ಕ್ರಯವು ಅವುಗಳ ಬೇಡಿಕೆಯನ್ನು ಪೂರೈಕೆಗೆ ಸರಿಯಾಗಿ ಮಾಡುವ ಹಾಗೆ ಇರಬೇಕು. ಯಾವದೊಂದು ಸರಕಿನ ಕ್ರಯ ಇಳಿದ ಹಾಗೆ ಜನರು ಅದನ್ನು ಹೆಚ್ಚು ಕೊಳ್ಳುವದಕ್ಕೆ ಅಪೇಕ್ಷಿಸುವದರಿಂದ ಅದರ ಬೇಡಿಕೆ ಹೆಚ್ಚಾಗುವದು; ಮತ್ತು ಅದರ ಕ್ರಯ ಏರಿದ ಹಾಗೆ ಅದರ ಬೇಡಿಕೆ ಕಡಿಮೆಯಾಗುವದು. ಇದು ಸರ್ವಸಾಧಾರಣವಾದ ನಿಯಮವು. ಉದಾಹರಣಾರ್ಥವಾಗಿ ಒಂದು ಮನೆಯನ್ನು ಲಿಲಾವಿನಿಂದ ಮಾರ ತಕ್ಕದ್ದುಂಟೆಂತಲೂ ಅದನ್ನು ಕೊಳ್ಳ ಬೇಕೆಂಬುವರು ಆರು ಮಂದಿ ಉಂಟೆಂತಲೂ ಕಲ್ಪಿಸಿರಿ. ಈ ಆರು ಮಂದಿ ಆ ಮನೆಯನ್ನು ಕೊಳ್ಳಬೇಕೆಂದು ಹವಣಿಸುವರು. ಇಲ್ಲಿ ಪೂರೈಕೆ ೧, ಬೇಡಿಕೆ ೬, ಈ ಪ್ರಮಾಣದಿಂದ ಇದ್ದಂತಾದವು. ಈ ಪ್ರಮಾಣವು ಸ್ಥಿರವಾಗಿ ನಿಂತಿರುವ ವರೆಗೆ ಆ ಮನೆಯ ಕ್ರಯದ ನಿರ್ಣಯವಾಗಲಾರದು. ಆದ್ದರಿಂದ, ಆ ಮನೆಯ ಕ್ರಯವು ಕ್ರಮೇಣ ಏರುತ್ತ ನಡಿಯಲಾಗಿ, ಕಡೆಗೆ ಆರು ಗಿರಾಕಿಗಳಲ್ಲಿ ಐದು ಮಂದಿ ಆ ಮನೆ ಬೇಡುವದನ್ನು ಬಿಡುವರು. ಮತ್ತು ಎಲ್ಲಕ್ಕೂ ಹೆಚ್ಚು ಹಣಕ್ಕೆ ಬೇಡಿದವನಿಗೆ ಆ ಮನೆ ಸಿಕ್ಕುವದು. ಈ ಹಣದ ರಕಮು ಬೇರೆ ಐದು ಮಂದಿ ಬೇಡುವವರು ಬೇಡುವದನ್ನು ಬಿಡುವಷ್ಟು, ಅಂದರೆ ತಮ್ಮ ಬೇಡಿಕೆಯನ್ನು ಕಡಿಮೆ ಮಾಡುವಷ್ಟು ಇರಬೇಕು. ಯಾಕಂದರೆ, ಹೀಗಾಗದೆ ಬೇರೆ ಸವಾಲು ಮಾಡುವವರೂ ಅವನಷ್ಟೇ, ಇಲ್ಲವೆ ಹೆಚ್ಚು ಹಣಕ್ಕೆ ಸವಾಲು ಮಾಡಿದರೆ, ಸವಾಲು ಮುಗಿಯಲಾರದು. ಇದರಿಂದ ತಿಳಿಯುವದೇನಂದರೆ, ಸರಕುಗಳನ್ನು ಮಾರುವವರೊಳಗೂ ಕೊಳ್ಳುವವರೊಳಗೂ ಸ್ಪರ್ಧೆಯು ನಿರಾತಂಕವಾಗಿ ನಡಿಯಲು, ಯಾವದೊಂದು ಪದಾರ್ಥದ ಪೇಟೇಧಾರಣೆಯು ಆ ಪದಾರ್ಥದ ಪೂರೈಕೆಯನ್ನು ಅದರ ಬೇಡಿಕೆಗೆ ಸರಿಯಾಗಿ ಮಾಡುವ ಹಾಗೆ ಏರುವದು, ಇಲ್ಲವೆ ಇಳಿಯುವದು. ಮೇಲೆ ಹೇಳಿದ ಉದಾಹರಣದಲ್ಲಿ ಅ, ಬ, ಕ, ಡ, ಇ, ಫ, ಎಂಬ ಆರುಮಂದಿ ಒಂದು ಮನೆಯನ್ನು ಕೊಳ್ಳಲಿಕ್ಕೆ ಹವಣಿಸುವರು. ಆದ್ದರಿಂದ, ಬ, ಕ, ಡ, ಇ, ಫ, ಎಂಬ ಐವರು ಆ ಮನೆಯನ್ನು ಕೊಳ್ಳುವ ಆಶೆ ಬಿಡುವಷ್ಟು ಆ ಮನೆಯ ಕ್ರಯವು ಏರಿಸಲ್ಪಟ್ಟಿತು. ಅನಂತರ ಅನೆಂಬುವನೊಬ್ಬನೇ ಗಿರಾಕಿಯು ಉಳಿದದ್ದರಿಂದ, ಅವನೊಬ್ಬನ ಬೇಡಿಕೆ ಮಾತ್ರ ಉಳಿದಾಗ ಬೇಡಿಕೆ ಪೂರೈಕೆಗಳ ಸಮೀಕರಣವಾಯಿತು.

ಆದರೆ, ಮೇಲೆ ಹೇಳಿದ ಉದಾಹರಣದೊಳಗಿನ ಮನೆಗೆ, ಒಂದು ವೇಳೆ ಆ ಮನೆಯನ್ನು ಕಟ್ಟಲಿಕ್ಕೆ ಬೇಕಾಗುವ ಬಂಡವಲ ಶ್ರಮಗಳಿಗೆ ಆ ಉದ್ಯೋಗ ದಲ್ಲಿ ವಾಡಿಕೆಯಾಗಿ ದೊರೆಯುವ ಲಾಭಕ್ಕಿಂತಲೂ ಹೆಚ್ಚು ಲಾಭವು ದೊರೆಯು ವಷ್ಟು ಕ್ರಯ ಬರ ಬಹುದು. ಹೀಗಾಗಲಾಗಿ, ಮನೆಗಳನ್ನು ಕಟ್ಟುವ ಉದ್ಯೋ ಗಕ್ಕೆ ತೇಜ ಬಂದು ಮನೆಗಳ ಪೂರೈಕೆಯು ಆದಷ್ಟು ಬೇಗನೆ ಬೆಳಿಯುವದು. ಈ ಪ್ರಕಾರ ಮನೆಗಳ ಪೂರೈಕೆಯು ಹೆಚ್ಚುವದರಿಂದ, ಮನೆಗಳ ಕ್ರಯವು ಆ ವ್ಯಾಪಾರದಲ್ಲಿ ಬಂಡವಲ ಶ್ರಮಗಳಿಗೆ ವಾಡಿಕೆಯಾಗಿ ಬರುವ ದರದ ಲಾಭವು ಮಾತ್ರ ಬರುವಷ್ಟು ಇಳಿಯುವದು. ಇದರಂತೆಯೇ ಬಂಡವಲ ಶ್ರಮಗಳಿಗೆ ವಾಡಿಕೆಯಾಗಿ ದೊರೆಯುವ ಪ್ರತಿಫಲಕ್ಕಿಂತಲೂ, ಕಡಿಮೆ ಪ್ರತಿಫಲ ದೊರೆಯು ವಂತೆ ಆ ಮನೆಗೆ ಕ್ರಯ ಬಂದರೆ, ಮನೆ ಕಟ್ಟುವ ವ್ಯಾಪಾರ ಮಾಡುವ ಯಜ ಮಾನರೂ ಅವರ ಕೂಲಿಯ ಆಳುಗಳೂ ತಮ್ಮ ಬಂಡವಲ ಶ್ರಮಗಳನ್ನು ಆ ಉದ್ಯೋಗದೊಳಗಿಂದ ತೆಗೆದು, ಬೇರೆ ಉದ್ಯೋಗದಲ್ಲಿ ಹಾಕಲಾರಂಭಿಸುವರು. ಅದರಿಂದ, ಮನೆ ಕಟ್ಟುವಉದ್ಯೋಗದಲ್ಲಿ ಸಾವುಕಾರರಿಗೂ ಕೂಲಿಕಾರರಿಗೂ ಲಾಭ ಸಂಬಳಗಳು ವಾಡಿಕೆಯ ದರದಿಂದ ದೊರೆಯುವ ಹಾಗೆ ಆಗುವ ವರೆಗೆ, ಮನೆಗಳ ಪೂರೈಕೆಯು ಕಡಿಮೆಯಾಗುವದು.

ಪದಾರ್ಥಗಳನ್ನು ಉತ್ಪನ್ನ ಮಾಡುವದಕ್ಕೆ ತಾಗುವ ಖರ್ಚನ್ನು ಅನುಸರಿಸಿ ಇರುವಂಥ ಕ್ರಯವು ಆ ಪದಾರ್ಥಗಳ ಸ್ವಾಭಾವಿಕ ಕ್ರಯವೆನಿಸುವದು. ಪೇಟೆ ಧಾರಣೆಯು ಈ ಸ್ವಾಭಾವಿಕ ಕ್ರಯಕ್ಕಿಂತಲೂ ಕೆಲವು ಸಾರಿ ಏರುವದು, ಕೆಲವು ಸಾರಿ ಇಳಿಯುವದು. ಈ ಪ್ರಕಾರ ಯಾವಾಗಲೂ ಸ್ವಾಭಾವಿಕ ಕ್ರಯಕ್ಕಿಂತಲೂ ಏರುವಂಥ ಇಲ್ಲವೆ ಇಳಿಯುವಂಥ ಪೇಟೆಯ ಧಾರಣೆಯ ಕ್ರಮಕ್ಕೆ, ಮಿಲ್‌ಧೊರೆಯು ತೆರಪಿಲ್ಲದೆ ಏರಿಳಿಯುವಂಥ ಸಮುದ್ರದ ತೆರೆಗಳ ಸಾಮ್ಯವನ್ನು ಕೊಟ್ಟಿ ದ್ದಾನೆ. "ಸಮುದ್ರದ ನೀರುಯಾವತ್ತು ಕಡೆಯಲ್ಲಿ ಸಮ ಪಾತಳಿಯಲ್ಲಿರುವದಕ್ಕೆ ಯತ್ನಿಸುವದು. ಅದರ ಮೇಲ್ಭಾಗವು ಎಡೆಬಿಡದೆ ತೆರೆಗಳಿಂದ ಕದಲಿಸ್ಪಡುವದು, ಬಿರುಘಾಳಿಗಳಿಂದ ಆಗಾಗ್ಯೆ ಅಲ್ಲೋಲ ಕಲ್ಲೋಲವಾಗುವದು. ಬೈಲಾದ ಸಮು ದ್ರದಲ್ಲಿ ಯಾವ ಭಾಗವೂ ಬೇರೆ ಭಾಗಗಳಿಗಿಂತ ಸ್ಥಿರವಾಗಿ ಏರಿ ನಿಲ್ಲದಿದ್ದರೆ ತೀ ರಿತು. ಪ್ರತಿಯೊಂದು ಭಾಗವು ಒಮ್ಮೆ ಏರುವದು, ಒಮ್ಮೆ ಇಳಿಯುವದು. ಆದ ರೂ ಇಡೀ ಸಮುದ್ರವು ಸಮ ಪಾತಳಿಯಲ್ಲಿಯೇ ಇರುವದು".

**ಮೇಲೆ ಹೇಳಿದ ಮೂರು ವರ್ಗದ ಸರಕುಗಳಲ್ಲಿ ಮೊದಲನೆ ವರ್ಗದ ಸರಕುಗಳ ಕ್ರಯವನ್ನು ಕ್ರಮಗೊಳಿಸುವಂಥ ಸಂಗತಿಗಳು.**—ಯಾವ

ದೊಂದು ಸರಕಿನ ಮಾರಾಟದಿಂದ ಅತಿಶಯ ಲಾಭ ಬರಲಾಗಿ, ಆ ಸರಕನ್ನು ಹೆಚ್ಚು ಪೂರೈಸುವದಕ್ಕೆ ಉತ್ತೇಜನವಾಗುತ್ತದೆ. ಅದರಿಂದ, ಲಾಭದ ದರವೂ, ಪೇಟೆಯ ಧಾರಣೆಯೂ ಇಳಿದು, ತಮ್ಮ ಸ್ವಾಭಾವಿಕ ಸ್ಥಿತಿಯನ್ನು ಹೊಂದುವವು. ಈ ಪರಿಣಾಮವು ಮೇಲ್ಗಡೆಯಲ್ಲಿ ಉಲ್ಲೇಖಿಸಲ್ಪಟ್ಟದೆ.

ಆದರೆ, ಕೆಲವು ಸರಕುಗಳಿಗೆ ಎಷ್ಟು ಭಾರಿ ಕ್ರಯ ಬಂದರೂ, ಅವುಗಳ ಪೂರೈಕೆಯನ್ನು ಹೆಚ್ಚಿಸಲಿಕ್ಕೆ ಬರುವದಿಲ್ಲ. ಆ ಕಾರಣ, ಪ್ರಾಚೀನ ಚಿತ್ರಗಾರರು ಬರೆದ ಚಿತ್ರಗಳು, ಪುರಾತನ ಶಿಲ್ಪದ ಒಡವೆಗಳು, ವಿವಕ್ಷಿತವಾದ ಸುಗ್ಗಿಯಲ್ಲಿ ತೆಗೆದ ದ್ರಾಕ್ಷೆರಸವು, ಅನುಪಲಬ್ಧವಾದ ಗ್ರಂಥಗಳು, ಇವು ಮೊದಲಾದ ಪದಾರ್ಥಗಳ ಕ್ರಯುವು ಅವುಗಳನ್ನು ಉತ್ಪನ್ನ ಮಾಡುವದಕ್ಕೆ ಮೊದಲು ತಗಲಿದ ಖರ್ಚಿಗೆ ಎಂದಿಗೂ ಸ್ಥಿರವಾಗಿ ಸಮೀಪಿಸುವದಿಲ್ಲ. ಆದಕಾರಣ, ಇಂಥ ಪದಾರ್ಥಗಳ ಕ್ರಯುವು ಯಾವ ನಿಯಮಗಳಿಂದ ಗೊತ್ತಾಗುತ್ತದೆಂಬ ಪ್ರಶ್ನವನ್ನು ಕೇಳ ಬಹುದು. ಹಿಂದೆ ಹೇಳಿದಂತೆ, ಈ ಪದಾರ್ಥಗಳ ಕ್ರಯುವು ಅವುಗಳ ಬೇಡಿಕೆಯನ್ನು ಅವುಗಳ ಪೂರೈಕೆಗೆ ಸರಿಯಾಗಿ ಮಾಡುವ ಹಾಗೆ ಇರ ಬೇಕು. ಕೆಲವರಿಗೆ ಈ ಮಾತು ಅಸಂಭವವಾಗಿ ತೋರ ಬಹುದು. ಯಾಕಂದರೆ, ಹೆಸರಾದ ಪುರಾತನ ಚಿತ್ರಗಾರನು ಬರೆದ ಚಿತ್ರವು ಯಾರಿಗೂ ಬೇಡಾಗಿರುವದಿಲ್ಲ, ಎಲ್ಲರಿಗೂ ಬೇಕೇ ಬೇಕು. ಅದರಿಂದ, ಅದರ ಬೇಡಿಕೆ ಅತಿಶಯುವಾಗಿರುವದು; ಪೂರೈಕೆ ತೀರ ನಿಯಮಿತವಾಗಿಯೂ ಹೆಚ್ಚಿಸಲಿಕ್ಕೆ ಬಾರದಂಥಾದ್ದಾಗಿಯೂ ಇರುವದು. ಹೀಗಾದ ಮೇಲೆ ಸಮೀಕರಣವಾಗುವ ಬಗೆ ಹ್ಯಾಗೆ? ಈ ಸ್ಥಳದಲ್ಲಿ, ಬೇಡಿಕೆ ಎಂಬ ಶಬ್ದದ ಅರ್ಥವನ್ನು ಸ್ಪಷ್ಟವಾಗಿ ವಿವರಿಸುವದು ಅವಶ್ಯವಾಗಿದೆ. ಯಾವದೊಂದು ಒಡವೆಯನ್ನು ಸಂಪಾದಿಸುವ ಇಚ್ಛೆ ಮಾತ್ರವೇ ಬೇಡಿಕೆ ಎಂದೆನಿಸುವದಿಲ್ಲ. ಯಾಕಂದರೆ, ಅಪೂರ್ವವಾದ ಚಿತ್ರವನ್ನು ಸಂಪಾದಿಸುವದಕ್ಕೆ ಎಲ್ಲರೂ ಅಪೇಕ್ಷಿಸುವರು. ಯಾವದೊಂದು ಒಡವೆಯನ್ನು ಸಂಪಾದಿಸುವ ಅಪೇಕ್ಷೆಯು ಕೊಳ್ಳುವ ಶಕ್ತಿಯಿಂದೊಡಗೂಡಿದ್ದ ಹೊರ್ತು, ಬೇಡಿಕೆಯಾಗದು. ಯಾವದೊಂದು ಒಡವೆಯನ್ನು ದೊರಕಿಸುವ ಅಪೇಕ್ಷೆ ಇದ್ದದ್ದಲ್ಲದೆ, ಅದನ್ನು ಕೊಳ್ಳುವ ಶಕ್ತಿಯು ಸಹ ಇದ್ದರೆ ಮಾತ್ರ ಆ ಅಪೇಕ್ಷೆಯು ಬೇಡಿಕೆಯೆನಿಸುವದು. ಕೊಳ್ಳುವ ಶಕ್ತಿಯಿಂದ ಯುಕ್ತವಾದ ಸಂಪಾದಿಸುವ ಅಪೇಕ್ಷೆಗೆ "ಕಾರ್ಯಕ್ಷಮವಾದ ಬೇಡಿಕೆ" ಎಂಬ ಹೆಸರು ಚನ್ನಾಗಿ ಒಪ್ಪುತ್ತದೆ. ಈ ಕಾರ್ಯಕ್ಷಮವಾದ ಬೇಡಿಕೆಯಿಂದ ಮಾತ್ರ, ಕ್ರಯುಗಳ ಮೇಲೆ ಏನಾದರೂ ಪರಿಣಾಮವಾಗ ಬಹುದು. ಮೇಲಿನ ಉದಾಹರಣದಲ್ಲಿ ಬೇಡಿಕೆಯೂ ಕ್ರಯುವೂ ಒಂದರ ಮೇಲೊಂದು ಅವಲಂಬಿಸಿ

ಕೊಂಡು ಇರುವವು. ಕ್ರಯ ಏರಿದಂತೆ ಬೇಡಿಕೆ ಕಡಿಮೆಯಾಗುವದರಿಂದ ಬೇಡಿಕೆಯು ಕ್ರಯವನ್ನವಲಂಬಿಸಿರುವದು; ಹಾಗೂ ಕ್ರಯವು ಬೇಡಿಕೆಯನ್ನು ಅವಲಂಬಿಸಿರುವದು. ಸರಕಿನ ಪೂರೈಕೆಯಂತೂ ನಿಯಮಿತವಾಗಿದೆ. ಆ ಕಾರಣ ಕಟ್ಟಕಡೆಗೆ ಬೇಡಿಕೆ ಪೂರೈಕೆಗಳಲ್ಲುಂಟಾಗ ತಕ್ಕ ಸಮೀಕರಣವು, ಸರಕಿನ ಪೂರೈಕೆಯು ವೃದ್ಧಿಯಾಗಿ ಆಗಲಾರದು. ಆದಕಾರಣ, ಪೂರೈಕೆಗೆ ಸರಿಯಾದಷ್ಟು ಬೇಡಿಕೆಯು ಹೊರ್ತಾಗಿ, ಮಿಕ್ಕಾದ ಯಾವತ್ತು ಬೇಡಿಕೆ ಕಡಿಮೆಯಾಗುವ ಮಟ್ಟಿಗೆ ಕ್ರಯವು ಏರುವದರಿಂದ ಮಾತ್ರವೇ ಬೇಡಿಕೆಯು ಪೂರೈಕೆಗೆ ಸಮಾನವಾಗುವದು. ಒಬ್ಬ ಪುರಾತನ ಚಿತ್ರಗಾರನ ಚಿತ್ರವು ಮಾರಾಟಕ್ಕೆ ಬಂದಿದೆಂದು ಕಲ್ಪಿಸಿರಿ. ಅದರ ಕ್ರಯ ೧೦೦ ರೂಪಾಯಿ ಇಟ್ಟರೆ ಸಾವಿರಾರು ಜನರು ಅದನ್ನು ಅಪೇಕ್ಷಿಸುವರು; ಕ್ರಯವನ್ನು ೫೦೦ ರೂಪಾಯಿಗಳ ವರೆಗೆ ಏರಿಸಿದರೆ, ೫೦ ಮಂದಿಯ ಬೇಡಿಕೆ ಮಾತ್ರ ಉಳಿಯ ಬಹುದು; ಕ್ರಯವನ್ನು ಇನ್ನೂ ೧೦೦೦ ರೂಪಾಯಿಗಳ ವರೆಗೆ ಏರಿಸಿದರೆ, ೧೦ ಮಂದಿ ಗಿರಾಕಿಗಳು ಮಾತ್ರ ನಿಲ್ಲ ಬಹುದು. ಈ ಹತ್ತು ಮಂದಿ ಆ ಚಿತ್ರವನ್ನು ಸಂಪಾದಿಸುವ ಹವಣಿಕೆಯಿಂದ ಒಬ್ಬರ ಮೇಲೊಬ್ಬರು ಕ್ರಯವನ್ನು ಏರಿಸುವರು. ಕಡೆಗೆ ಅದರ ಕ್ರಯವು ೧೮೦೦ ರೂಪಾಯಿ ಕಾಣ ಬಹುದು. ಆಗ ಮಿಕ್ಕಾದ ಬೇಡಿಕೆಯೆಲ್ಲ ಓಡಿ ಹೋಗಿ 'ಅ', 'ಬ' ಎಂಬಿಬ್ಬರ ಬೇಡಿಕೆ ಮಾತ್ರ ಉಳಿಯ ಬಹುದು. 'ಬ'ನು ಆ ಚಿತ್ರಕ್ಕೆ ೧೯೦೦ ರೂಪಾಯಿಗಳಿಗಿಂತ ಹೆಚ್ಚು ಕೊಡ ಬಾರದೆಂದು ಮನಸಿನಲ್ಲಿ ನಿಶ್ಚೈಸಿರ ಬಹುದು. 'ಅ' ಎಂಬವನು ೨೦೦೦ ರೂಪಾಯಿಗಳ ತನಕ ಬಿಡಬಾರದೆಂದು ಮನಸಿನಲ್ಲಿ ಮಾಡಿರ ಬಹುದು. ಆದ್ದರಿಂದ ಆ ಚಿತ್ರದ ಕ್ರಯವು ಕಡೆಗೆ ೧೯೦೦, ೨೦೦೦ ರೂಪಾಯಿಗಳ ನಡುವೆ ಎಲ್ಲಿಗಾದರೂ ನಿಲ್ಲುವದು. ಈ ಎರಡು ರಕಮುಗಳ ನಡುವೆ ಎಲ್ಲಿಗೆ ಕ್ರಯ ನಿಲ್ಲುವದೆಂಬದು ಪೇಟೆಯಲ್ಲಿ ನಡಿಯುವ ಅರದಾಟದಿಂದ ಗೊತ್ತಾಗುವದು. ಒಂದು ವೇಳೆ, ಆ ಚಿತ್ರದ ಒಡೆಯನಿಗೆ 'ಅ'ನು ೨೦೦೦ ರೂಪಾಯಿಗಳನ್ನಾದರೂ ಕೊಟ್ಟು ಚಿತ್ರವನ್ನು ಕೊಂಡಾನೇ ಹೊರ್ತು, ಬಿಡಲಿಕ್ಕಿಲ್ಲವೆಂದು ತಿಳದಿರ ಬಹುದು. ಆದರೆ, 'ಬ'ನು ೧೯೦೦ ರೂಪಾಯಿಗಳಿಗಿಂತಲೂ ಹೆಚ್ಚು ಕೊಡ ಬಾರದೆಂದು ನಿಶ್ಚಯ ಮಾಡಿದ್ದು 'ಅ'ನಿಗೆ ತಿಳಿಯದೇ ಇರ ಬಹುದು. ಹೀಗಿದ್ದಲ್ಲಿ, ಚಿತ್ರದವನು ಸ್ವಲ್ಪ ಬಿಗಿ ಹಿಡಿದು, 'ಅ'ನಿಂದ ೨೦೦೦ ರೂಪಾಯಿಗಳನ್ನು ಎಳಿಯ ಬಹುದು. ಆದರೆ, 'ಬ'ನಿಗೆ ೧೯೦೦ ರೂಪಾಯಿಗಳಿಗಿಂತಲೂ ಹೆಚ್ಚು ಕೊಡುವ ಮನಸಿಲ್ಲೆಂತಲೂ, ಚಿತ್ರದವನು ಚಿತ್ರವನ್ನು ಮಾರಬೇಕೆಂದು ನಿಶ್ಚಯ ಮಾಡಿದ್ದಾನೆಂತಲೂ, 'ಅ'ನಿಗೆ ಗೊತ್ತಿದ್ದರೆ, 'ಅ'ನು ೧೯೦೦

ರೂಪಾಯಿಗಳಿಗಿಂತ ಸ್ವಲ್ಪ ಹೆಚ್ಚು ಕ್ರಯಕ್ಕೆ ಆ ಚಿತ್ರವನ್ನು ಬೇಡುವನು. 'ಅ'ನು ಹಾಗೆ ೧೯೧೦ ರೂಪಾಯಿಗಳಿಗೆ ಬೇಡಿದನೆಂದು ತಿಳಿಯುವ. ಇಲ್ಲಿಗೆ "ಕಾರ್ಯಕ್ಷಮವಾದ ಬೇಡಿಕೆಯು" ಪೂರೈಕೆಗೆ ಸರಿಯಾಯಿತು; ಯಾಕಂದರೆ, ೧೯೦೦ ರೂಪಾಯಿಗಳ ಮೇಲೆ ಕ್ರಯ ಏರಿದ ಕೂಡ್ಲೆ 'ಬ'ನು ಬೇಡುವದನ್ನು ಬಿಟ್ಟು ಬಿಡುತ್ತಾನೆ. ಆದ್ದರಿಂದ, 'ಅ'ನ ಬೇಡಿಕೆ ಮಾತ್ರ ಉಳಿದು, ಅವನಿಗೆ ಆ ಚಿತ್ರವು ದೊರೆಯುತ್ತದೆ.

**ವಿನಿಮಯದಿಂದ ಬೆಲೆ ಬರುವ ಪ್ರತಿಯೊಂದು ಒಡವೆಯು ಎರಡು ಗುಣಗಳಿಂದ ಯುಕ್ತವಾಗಿರುವದು. ಅವು ಯಾವವಂದರೆ,—ಉಪಯೋಗ ಮೂಲಕವಾದ ಬೆಲೆ ಹಾಗೂ ಸಂಪಾದನ ಶ್ರಮ ಎಂಬಿವು.**—ಪ್ರಾಚೀನ ಚಿತ್ರಗಾರನ್ನು, ಬರೆದ ಚಿತ್ರದ ಬಗೆಯ ಸರಕಿನ ಕ್ರಯವನ್ನು ಕ್ರಮಗೊಳಿಸುವಂಥ ಕಾರಣಗಳ ವಿವೇಚನವು ಇನ್ನೂ ಮುಗಿದಿಲ್ಲ. ಯಾಕಂದರೆ, ಆ ಚಿತ್ರಕ್ಕೆ 'ಅ'ನು ೨೦೦೦ ರೂಪಾಯಿಗಳನ್ನು ಕೊಡುವದಕ್ಕೆ ಯಾಕೆ ಒಡಂಬಡ ಬೇಕು, 'ಬ'ನು ೧೯೦೦ ರೂಪಾಯಿಗಳಿಗಿಂತಲೂ ಹೆಚ್ಚು ಕೊಡುವದಕ್ಕೆ ಯಾಕೆ ಒಡಂಬಡ ಬಾರದು, ಎಂದು ಯಾರಾದರೂ ಕೇಳ ಬಹುದು. ಆ ಕಾರಣ, ಬೆಲೆಯ ಮೂಲ ಕಾರಣಗಳನ್ನು ಕುರಿತು ಇನ್ನೂ ವಿಶೇಷ ವಿಚಾರಿಸುವದು ಅಗತ್ಯವಾಗಿ ತೋರುತ್ತದೆ. ಪ್ರತಿಯೊಂದು ಸರಕಿಗೆ ವಿನಿಮಯದಿಂದ ಉಂಟಾಗುವ ಬೆಲೆಯು ಎರಡು ಸಂಗತಿಗಳಿಂದ ಹೆಚ್ಚು ಕಡಿಮೆಯಾಗುತ್ತದೆ. ಅವು ಯಾವವಂದರೆ: ೧. ಆ ಸರಕಿನ ಪ್ರಯೋಜನ, ಅಥವಾ ಅದರ ಉಪಯೋಗದ ಮಾನದಿಂದ ಅದಕ್ಕೆ ಬರುವ ಬೆಲೆ. ೨. ಸಂಪಾದನ ಶ್ರಮ.

ಉಪಯೋಗದ ಮೂಲಕವಾಗಿ ಉಂಟಾಗುವ ಬೆಲೆ, ಎಂಬ ಲಕ್ಷಣದ ಅರ್ಥದಲ್ಲಿ ಯಾವದಾದರೊಂದು ಕೊರತೆಯನ್ನು ಪೂರೈಸುವಂಥ ಇಲ್ಲವೆ ಅಭಿಲಾಷೆಯನ್ನು ತೃಪ್ತಿಗೊಳಿಸುವಂಥ ಗುಣಗಳ ಸಮಾವೇಶವಾಗುತ್ತದೆ. ವಿನಿಮಯದಿಂದ ಬೆಲೆ ಬರುವ ಪ್ರತಿಯೊಂದು ಒಡವೆಯು ಇವೆರಡೂ ಲಕ್ಷಣಗಳಿಂದ ಯುಕ್ತವಾಗಿರುವದು. ದೊರಕಿಸುವದಕ್ಕೆ ಶ್ರಮ ಬೀಳದ ಒಡವೆಯು ಎಷ್ಟು ಅವಶ್ಯವಾಗಿಯೂ ಅಂದವಾಗಿಯೂ ಇದ್ದರೂ, ಅದಕ್ಕೆ ವಿನಿಮಯದಿಂದ ಏನು ಬೆಲೆ ಬರುವದಿಲ್ಲ. ಈ ಮೇರೆಗೆ ಹವೆಯು ಪ್ರಾಣರಕ್ಷಣೆಗೆ ಅತ್ಯಂತ ಅವಶ್ಯಕವಾದಾಗ್ಯೂ, ಅದು ಪ್ರತಿಯೊಬ್ಬನಿಗೆ ಆಯಾಸವಿಲ್ಲದೆ ಬೇಕಾದಷ್ಟು ದೊರೆಯುವದರಿಂದ, ಅದಕ್ಕೆ ವಿನಿಮಯದಲ್ಲಿ ಏನು ಬೆಲೆ ಬರುವದಿಲ್ಲ. ಆದರೆ ಮುಳಗು

ವ ಗಂಟೆಯಲ್ಲಿ ಶ್ರಮ ಬಂಡವಲಗಳನ್ನು ವೆಚ್ಚ ಮಾಡದೆ ಹವೆಯು ಸಿಕ್ಕುವದಿಲ್ಲ ವಾದ್ದ ಕಾರಣ, ಅದಕ್ಕೆ ವಿನಿಮಯದಿಂದ ಬೆಲೆ ಬರುತ್ತದೆ.

ಹುಲ್ಲುಗದ್ದೆಗಳಲ್ಲಿಯೂ ಅಡವಿಗಳಲ್ಲಿಯೂ ಅರಳಿದ ಅತ್ಯಂತ ಮನೋಹರವಾದ ಹೂವುಗಳಿಗೆ ಅಲ್ಲಿ ಏನು ಬೆಲೆ ಇರುವದಿಲ್ಲ. ಯಾಕಂದರೆ, ಅಲ್ಲಿ ಅವುಗಳು ಪ್ರತಿಯೊಬ್ಬನಿಗೆ ಬೇಕಾದಷ್ಟು ದೊರೆಯುವವು. ಆದರೆ ಅವುಗಳನ್ನು ಊರೊಳಗೆ ತಂದ ಮೇಲೆ ಅವುಗಳಿಗೆ ವಿನಿಮಯದಿಂದ ಬೆಲೆ ಬರುತ್ತದೆ. ಯಾಕಂದರೆ, ಊರಿಗೆ ತಂದ ಕೂಡ್ಲೆ ಅವುಗಳಲ್ಲಿ "ಸಂಪಾದನ ಶ್ರಮ" ಎಂಬ ಲಕ್ಷಣವು ಬೆಲೆ ಬರುತ್ತದೆ.

ಮತ್ತೊಂದು ಪಕ್ಷದಲ್ಲಿ, ಯಾವದಾದರೊಂದು ಒಡವೆಯನ್ನು ಸಂಪಾದಿಸುವದು ಎಷ್ಟೇ ಪ್ರಯಾಸವಾದದ್ದಾದರೂ, ಅದಕ್ಕೆ ಉಪಯೋಗಮೂಲಕವಾಗಿ ಬರುವ ಬೆಲೆ ಇಲ್ಲದಿದ್ದರೆ ಆ ಒಡವೆಯು ವಿನಿಮಯದಲ್ಲಿ ಏನೂ ಬೆಲೆ ಹೊಂದದು. ಯಾಕಂದರೆ, ಯಾವ ಕೊರತೆಯನ್ನೂ ಪೂರೈಸದಂಥ, ಇಲ್ಲವೆ ಅಭಿಲಾಷೆಯನ್ನು ತೃಪ್ತಿಗೊಳಿಸದಂಥ ಒಡವೆಯನ್ನು ಯಾರೂ ಕೊಳ್ಳರು. ಒಂದು ಬಳ್ಳೇ ಎತ್ತರವಾದ ಗೋಡೆಯ ತುದಿಯ ಹೆಂಟೆಯನ್ನು ತರುವದಕ್ಕೆ ಬಹಳ ಪ್ರಯಾಸವಾಗುವದು ಸರಿ. ಆದರೆ ಅದರ ಉಪಯೋಗದ ಮಾನದಿಂದ ಅದರ ಬೆಲೆಯು ಬೇರೊಂದು ಹೆಂಟೆಗಿಂತಲೂ ಹೆಚ್ಚಿಲ್ಲವಾದ್ದರಿಂದ ಅದಕ್ಕೆ ವಿನಿಮಯದಿಂದ ಹೆಚ್ಚಿಗೆ ಬೆಲೆ ಬರಲಾರದು.

ಸರಕುಗಳ ಕ್ರಯವನ್ನು ಹೆಚ್ಚುಕಡಿಮೆ ಮಾಡುವಲ್ಲಿ, ಇವೆರಡು ಗುಣಗಳ ಕಾರ್ಯವು ಬೇರೆ ಬೇರೆ ಪ್ರಮಾಣದಿಂದ ನಡಿಯುವದು. ಬಹುತರವಾಗಿ ಯಾವದೊಂದು ಒಡವೆಯ ಕ್ರಯವನ್ನು ನಿರ್ಣೈಸುವಲ್ಲಿ "ಉಪಯೋಗ ಮೂಲಕವಾದ ಬೆಲೆ"ಗಿಂತಲೂ "ಸಂಪಾದನ ಶ್ರಮವೇ" ವಿಶೇಷ ಬಲವುಳ್ಳದ್ದಾಗಿರುವದು. ಉದಾಹರಣಾರ್ಥವಾಗಿ ಹೊದಿಯುವ ಬಟ್ಟೆಯನ್ನು ತಕ್ಕೊಳ್ಳುವ. ಹೊದಿಯುವ ಬಟ್ಟೆಯು ಅತ್ಯಂತ ಉಪಯುಕ್ತವಾಗಿರುವದರಿಂದ, ಅದಕ್ಕೆ ಎಷ್ಟು ಕ್ರಯ ಬಿದ್ದರೂ ಅದನ್ನು ಬಹುತರವಾಗಿ ಎಲ್ಲರೂ ಕೊಳ್ಳಲೇ ಬೇಕು. ಇಂಥ ಪ್ರಸಕ್ತಿಯಲ್ಲಿ "ಉಪಯೋಗ ಮೂಲಕವಾದ ಬೆಲೆ" ಎಂಬ ಕಾರಣದ ಕಾರ್ಯವು ಅಂಶತಃ ಮಾತ್ರ ನಡಿದು, ಕ್ರಯದ ನಿರ್ಣಯವು ಬಹುತರವಾಗಿ "ಸಂಪಾದನ ಶ್ರಮ" ಎಂಬ ಕಾರಣದಿಂದಲೇ ಆಗುತ್ತದೆ. ಆದರೆ, ಉಪಯೋಗ ಮೂಲಕವಾದ ಬೆಲೆಯಂತೂ ಅಲ್ಪಸ್ವಲ್ಪಾದರೂ ಇರಲಿಕ್ಕೇ ಬೇಕೆಂಬುವದನ್ನು ನೆನ

ಪಿನಲ್ಲಿಡ ತಕ್ಕದ್ದು. ಈ ಬೆಲೆ ಇಲ್ಲದೆ ಹೋದಲ್ಲಿ, ಆ ಒಡವೆಯು ಏನೂ ಬೆಲೆ ಬಾಳಲಿಕ್ಕಿಲ್ಲ. ಪದಾರ್ಥಗಳ "ಕಾರ್ಯಕ್ಷಮವಾದ ಬೇಡಿಕೆ"ಯಂದರೆ ಕೊಳ್ಳುವ ಶಕ್ತಿಯಿಂದೊಡಗೂಡಿದ ಸಂಪಾದನಾಪೇಕ್ಷೆ, ಎಂದು ಹಿಂದೆ ವಿವರಿಸಲ್ಪಟ್ಟಿದೆ. ಸರಕುಗಳ ಕ್ರಯವನ್ನು ಹೆಚ್ಚುಕಡಿಮೆ ಮಾಡುವಂಥಾದ್ದು ಈ ಕಾರ್ಯಕ್ಷಮವಾದ ಬೇಡಿಕೆಯೇ. ಯಾವದೊಂದು ಒಡವೆಯನ್ನು "ಸಂಪಾದಿಸುವ ಅಪೇಕ್ಷೆಯು" ಸಂಪೂರ್ಣವಾಗಿ ಆ ಪದಾರ್ಥದ ಉಪಯೋಗದ ಬೆಲೆಯ ಮಾನದಿಂದಲೇ ಹೆಚ್ಚುಕಡಿಮೆಯಾಗುವದು; ಅಂದರೆ, ಆ ಪದಾರ್ಥದಲ್ಲಿ ಇರುವ ಯಾವದೊಂದು ಕೊರತೆಯನ್ನು ಪೂರೈಸುವ ಇಲ್ಲವೆ ಬಯಕೆಯನ್ನು ತೃಪ್ತಿಗೊಳಿಸುವ ಶಕ್ತಿಯನ್ನವಲಂಬಿಸಿರುವದೆಂಬದು ಸ್ಪಷ್ಟವಾದದ್ದೇ ಸರಿ. ಹಾಗೂ, ಯಾವದೊಂದು ಪದಾರ್ಥವನ್ನು ಕೊಳ್ಳುವ ಶಕ್ತಿಯು, ಆ ಪದಾರ್ಥವನ್ನು ಸಂಪಾದಿಸುವ ಶ್ರಮವನ್ನನುಸರಿಸಿ ಹೆಚ್ಚುಕಡಿಮೆಯಾಗುವದು. ಉದಾಹರಣಾರ್ಥವಾಗಿ, ಯಾವನೊಬ್ಬನು ನನ್ನ ಬಳಿಗೆ ಬಂದು, ಹೆಣ ಒಯ್ಯುವ ೧೦೦ ಗಾಡಿಗಳನ್ನು ಬಹಳ ಸುಲಭ ಕ್ರಯದಿಂದ ಕೊಡುತ್ತೇನೆ ತಕ್ಕೊಳ್ಳಿರಿ, ಎಂದು ಹೇಳಿದರೂ ಅವುಗಳನ್ನು ಕೊಳ್ಳುವದಕ್ಕೆ ನನಗೆ ಸ್ವಲ್ಪಾದರೂ ಮನಸಾಗಲಿಕ್ಕಿಲ್ಲ. ಯಾಕಂದರೆ, ಆ ಗಾಡಿಗಳಿಂದ ನನಗೆ ಪ್ರಯೋಜನವಿಲ್ಲದ್ದರಿಂದ ಅವುಗಳು "ಉಪಯೋಗದ ಮಾನದಿಂದ ಬೆಲೆ"ಯುಳ್ಳವೆಂದು ನಾನು ತಿಳಿಯುವದಿಲ್ಲ. ಆದ್ದರಿಂದ, ನನಗೆ ಅವುಗಳನ್ನು "ಸಂಪಾದಿಸುವ ಅಪೇಕ್ಷೆಯು" ಆಗಲಿಕ್ಕಿಲ್ಲ. ಮತ್ತೊಂದು ಪಕ್ಷದಲ್ಲಿ, ಇಂಥಾದ್ದೊಂದು ದಿವಸ ರಾಷ್ಟ್ರೀಯ ಪ್ರದರ್ಶನಶಾಲೆಯಲ್ಲಿ ಅಪೂರ್ವವಾದ ಚಿತ್ರಗಳು ಲಿಲಾವಿನಿಂದ ಮಾರಲ್ಪಡುವವೆಂದು ನನಗೆ ತಿಳಿದರೆ, ಅವುಗಳಲ್ಲಿ ನಾನೂ ಒಂದು ಕೊಳ್ಳ ಬಹುದೆಂದು ತಿಳಿಯಲಾರೆನು. ಅವುಗಳನ್ನು "ಸಂಪಾದಿಸ ಬೇಕೆಂಬ ಅಪೇಕ್ಷೆಯು" ನನ್ನಲ್ಲಿ ಕಡಿಮೆಯಂತಲ್ಲ. ಈ ಅಪೇಕ್ಷೆಯು ನನ್ನಲ್ಲಿ ಅತ್ಯಂತ ಉತ್ಕಟವಾಗಿ ಇರ ಬಹುದು. ಆದರೂ ಅದನ್ನು "ಕೊಳ್ಳುವ ಶಕ್ತಿ"ನನ್ನಲ್ಲಿ ಎಷ್ಟು ಮಾತ್ರವೂ ಇರಲಿಕ್ಕಿಲ್ಲ. ಯಾಕಂದರೆ, ಇಂಥ ಅಮೂಲ್ಯವಾದ ವಸ್ತುಗಳನ್ನು "ಸಂಪಾದಿಸುವ ಶ್ರಮವು" ಬಹಳವಾದ್ದರಿಂದ, ಅವುಗಳ ಕ್ರಯವು ಸಹಜವಾಗಿ ನನ್ನ ಶಕ್ತಿಯನ್ನು ಮಿಾರುವಷ್ಟು ಏರ ಬಹುದು.

ಉತ್ಕೃಷ್ಟವಾದ ಪ್ರಾಚೀನ ಚಿತ್ರಗಳ ವರ್ಗಕ್ಕೆ ಶೇರಿದ ಸರಕಿನ ಕ್ರಯವನ್ನು ನಿರ್ಣೈಸುವಂಥ ಕಾರಣಗಳನ್ನು ಕುರಿತು ಹೇಳಿದ ಮೇಲಿನ ಉದಾಹರಣದಲ್ಲಿ "ಸಂಪಾದನ ಶ್ರಮು"ವೆಂಬ ಕಾರಣಕ್ಕಿಂತಲೂ "ಉಪಯೋಗ ಮೂಲಕವಾದ ಬೆಲೆ" ಎಂಬ ಕಾರಣವು ಬಲವತ್ತರವಾಗಿದೆ. 'ಅ' 'ಬ' ಇವರಿಬ್ಬರಿಗೂ "ಸಂ

ಪಾದನಶ್ರಮವು" ಸಮಾನವಾದದ್ದೇ ಸರಿ. ಸರಕಿನ ಪೂರೈಕೆಯಂತೂ ಕೇವಲ ನಿಯಮಿತವಾದದ್ದು. ಅಂದ ಮೇಲೆ, ಅ, ಬ, ಎಂಬವರಿಗೆ ಆ ಚಿತ್ರದಿಂದಾಗುವ ಮನೋರಂಜನವು ಬಹಳ ಬೆಲೆಯುಳ್ಳದ್ದಾಗಲಿ, ತುಸುಬೆಲೆಯುಳ್ಳದ್ದಾಗಲಿ, ತೋರಿದ ಮೇರೆಗೆ ಆ ಚಿತ್ರದ ಕ್ರಯವು ನಿರ್ಣೈಸಲ್ಪಡುವದು. 'ಅ'ನು ಆ ಚಿತ್ರದಿಂದ ತನಗುಂಟಾಗುವ ಆನಂದದ ಬೆಲೆಯು ೨೦೦೦ ರೂಪಾಯಿಗಳಾಗಿದೆಂದು ಯಾಕೆ ತಿಳಿಯ ಬೇಕು; ಅದೇ, 'ಬ'ನು ತನ್ನ ಬಯಕೆಯು ೧೯೦೦ ರೂಪಾಯಿಗಳಿಗಿಂತ ಹೆಚ್ಚು ಯೋಗ್ಯತೆಯದಲ್ಲವೆಂದು ಯಾಕೆ ಭಾವಿಸ ಬೇಕು, ಎಂಬದರ ಕಾರಣಗಳನ್ನು ಪೂರಾ ವಿವರಿಸುವದು ಸಾಧ್ಯವಲ್ಲವು. ಆ ಚಿತ್ರವನ್ನು ದೊರಕಿಸ ಬೇಕೆಂಬ ಇಚ್ಛೆಯು ಇಬ್ಬರಲ್ಲಿಯೂ ಸಮಾನವಾಗಿ ಬಲವತ್ತರವಾಗಿರ ಬಹುದು; ಆ ಚಿತ್ರದಿಂದ ಇಬ್ಬರಿಗೂ ಮನೋರಂಜನವಾಗ ಬಹುದು; ಆದರೂ 'ಬ'ನು 'ಅ'ನಿಗಿಂತಲೂ ಕಡಿಮೆ ಧನಿಕನಾಗಿರ ಬಹುದು. ಆದ್ದರಿಂದ 'ಅ'ನಷ್ಟು ಹಣವನ್ನು ಆ ಚಿತ್ರವನ್ನುಕೊಳ್ಳುವಲ್ಲಿ ಹಾಕುವದು 'ಬ'ನಿಗೆ ಸರಿಯಾಗಿ ತೋರದೆ ಹೋಗಿದ್ದೀತು.

ಈ ವಿವೇಚನದಿಂದ ಸ್ಪಷ್ಟವಾಗುವದೇನಂದರೆ, ಕೇವಲ ನಿಯಮಿತ ಪರಿಮಿತಿಯುಳ್ಳ ಒಡವೆಯ ಕ್ರಯವು, ಆ ಒಡವೆಯಲ್ಲಿ ಯಾವದೊಂದು ಕೊರತೆಯನ್ನು ಪೂರೈಸುವ ಇಲ್ಲವೆ ಬಯಕೆಯನ್ನು ತೃಪ್ತಿಗೊಳಿಸುವ ಸಾಮರ್ಥ್ಯವು ಹೆಚ್ಚು ಇಲ್ಲವೆ ಕಡಿಮೆಯಾಗಿರುವದೆಂದು ಜನರು ತಿಳಿದ ಮೇರಿಗೆ ನಿರ್ಣೈಸಲ್ಪಡುವದು; ಈ ಪ್ರಸಕ್ತಿಯಲ್ಲ್ಯಾದರೂ "ಸಂಪಾದನ ಶ್ರಮವು" ಇದ್ದೇ ಇರುವದು. ಯಾಕಂದರೆ, "ಸಂಪಾದನ ಶ್ರಮವು" ಕಡಿಮೆಯಾದ ಹಾಗೆ ಕ್ರಯವೂ ಕಡಿಮೆಯಾಗುತ್ತದೆ. ಮತ್ತು "ಸಂಪಾದನ ಶ್ರಮವು" ಏನೂ ಇಲ್ಲದೆ ಹೋದರೆ, ಕ್ರಯವಾದರೂ ಏನೂ ಉಳಿಯದು.

**ಬೇಸಾಯದ ಹುಟ್ಟುವಳಿಯ ಕ್ರಯವು.**—ಹೆಚ್ಚು ಪ್ರಮಾಣದಿಂದ ಶ್ರಮ ಬಂಡವಲಗಳನ್ನು ವೆಚ್ಚ ಮಾಡಿದರೆ ಮಾತ್ರ ಹೆಚ್ಚು ಪೂರೈಸಲಿಕ್ಕೆ ಬರುವಂಥ, ಅಂದರೆ ಪೂರೈಕೆಯನ್ನು ಬೆಳಿಸಿದ ಹಾಗೆ ತುಟ್ಟಿಯಾಗುವಂಥ ಸರಕುಗಳ ಕ್ರಯವನ್ನು ನಿರ್ಣೈಸುವಂಥ ಕಾರಣಗಳನ್ನು ಇನ್ನು ಮುಂದೆ ಪರೀಕ್ಷಿಸ ತಕ್ಕದ್ದು. ಈ ವರ್ಗಕ್ಕೆ ಶೇರುವ ಸರಕುಗಳಲ್ಲಿ ಬೇಸಾಯದ ಹುಟ್ಟುವಳಿಗಳು ಮುಖ್ಯವಾದವುಗಳು: ಈ ವರ್ಗದಲ್ಲಿ ಕಣಿಗಳ ಹುಟ್ಟುವಳಿಯೂ ಮೀನಗಳ ಹುಟ್ಟುವಳಿಯೂ ಸಹ ಬರುತ್ತವೆ. ಯಾವದೊಂದು ಸರಕನ್ನು ಹೆಚ್ಚು ಹುಟ್ಟಿಸಿದಂತೆ ಹೆಚ್ಚು ಖರ್ಚು ತಗಲುವ ಬಗೆಯನ್ನು ವಿವರಿಸುವದಕ್ಕಾಗಿ ಒಂದು ಉದಾಹರಣವನ್ನು ತಕ್ಕೊಳ್ಳುವ. ಕೆಲವರು ಗೂಳೆ ಕಟ್ಟಿಕೊಂಡು ಹೋಗಿ ಸುಭಿಕ್ಷವಾದ ಒಂದು ಹೊಸ

ಪ್ರಾಂತವನ್ನು ನೋಡಿ, ಅಲ್ಲಿ ಒಂದು ಹಳ್ಳಿಯನ್ನು ಮಾಡಿಕೊಂಡು ನಿಂತಿದ್ದಾರೆಂದು ಕಲ್ಪಿಸಿರಿ. ಈ ಹಳ್ಳಿಯಲ್ಲಿ ೫೦ ಜನರುಂಟೆಂತಲೂ, ಅವರಿಗೆ ಬೇಕಾದ ಯಾವತ್ತೂ ಅನ್ನವನ್ನು ಅವರು ತಮ್ಮ ಹಳ್ಳಿಗೆ ಹತ್ತಿ ಸುತ್ತಲಿದ್ದ ಫಲಭರಿತವಾದ ಭೂಮಿಯಲ್ಲೇ ಹುಟ್ಟಿಸುತ್ತಾರೆಂತಲೂ ಕಲ್ಪಿಸುವಾ; ಕೆಲವು ವರ್ಷಗಳಲ್ಲಿ ಆ ಹಳ್ಳಿಯ ಜನಸಂಖ್ಯೆಯು ೫೦ರಿಂದ ೧೫೦ ವರೆಗೆ ಬೆಳೆಯುವದು. ಆಗ ಆ ಹಳ್ಳಿಯ ಜನರಿಗೆ ಅವರು ಅಲ್ಲಿ ಬಂದು ನಿಂತಾಗಿನದಕ್ಕಿಂತ ಮೂರು ಪಾಲು ಹೆಚ್ಚು ಅನ್ನದ ಪೂರೈಕೆಯು ಆಗ ಬೇಕಾಗುವದೆಂಬದು ಸ್ಪಷ್ಟವದೆ. ಈ ಹೆಚ್ಚಿನ ಪೂರೈಕೆಯು ಎಲ್ಲಿಂದ ಬರ ಬೇಕು? ಈ ಪ್ರಶ್ನಕ್ಕೆ—"ಆ ಹಳ್ಳಿಯಿಂದ ಕೆಲವು ಮೈಲು ದೂರ ಹೋದರೆ, ಅಲ್ಲಿ ಫಲಭರಿತವಾದ ಭೂಮಿಯು ವಿಪುಲವಾಗಿರುವದು. ಆ ಭೂಮಿಯಿಂದ ಹೆಚ್ಚಿನ ಅನ್ನದ ಪೂರೈಕೆ ಆಗುವದು." ಎಂದು ಒಂದು ವೇಳೆ ಉತ್ತರ ಹೇಳ ಬಹುದು. ಈ ಉತ್ತರವು ಯಥಾರ್ಥವಾದದ್ದೇ ಸರಿ. ಯಾಕಂದರೆ, ಆ ಹಳ್ಳಿಯು ಫಲವತ್ತಾದ ಭೂಮಿಯ ಮಧ್ಯದಲ್ಲಿ ಉಂಟೆಂದು ಕಲ್ಪಿಸಿದ್ದೇವೆ. ಆದರೆ, ಆ ಹಳ್ಳಿಯಿಂದ ಕೆಲವು ಮೈಲು ದೂರವಾಗಿದ್ದ ಭೂಮಿಯ ಹುಟ್ಟುವಳಿಯನ್ನು ಆ ಹಳ್ಳಿಗೆ ತರುವದು ತೀರ ಸಮೀಪವಾದ ಸುತ್ತಲಿನ ಭೂಮಿಯ ಹುಟ್ಟುವಳಿಯನ್ನು ತರುವದಕ್ಕೆ ತಗಲುವಷ್ಟು ಸ್ವಲ್ಪ ಖರ್ಚಿನೊಳಗೆ ಆಗದು. ಈ ಹೆಚ್ಚಿನ ತರುವ ಖರ್ಚು ಆ ಹುಟ್ಟುವಳಿಯನ್ನು ಕೊಳ್ಳುವವರ ತಲೆಯ ಮೇಲೆ ಬೀಳ ತಕ್ಕದ್ದು. ಹಳ್ಳಿಯ ಸುತ್ತಲೂ ಸಮೀಪದಲ್ಲಿ ಬೆಳೆದ ಜೋಳದ ಧಾರಣೆಯು ಗೋಣಿ ಒಂದಕ್ಕೆ ೫ ರೂಪಾಯಿಯುಂಟೆಂದು ಕಲ್ಪಿಸಿರಿ. ಆ ಹಳ್ಳಿಯಿಂದ ಕೆಲವು ಮೈಲು ದೂರವಾಗಿದ್ದ ಅಷ್ಟೇ ಕಸುವುಳ್ಳ ಭೂಮಿಯಲ್ಲಿ ಬೆಳೆಯುವ ಜೋಳಕ್ಕೆ ಮೇಲಿನ ಜೋಳದಷ್ಟೇ ಖರ್ಚು ಬೀಳುವದು. ಆದರೆ, ಈ ಧಾನ್ಯವು ಬೇಕಾಗಿದ್ದ ಸ್ಥಳದಲ್ಲಿ ಅದನ್ನು ವೈದು ಮುಟ್ಟಿಸುವ ಶ್ರಮ ಮಾಡುವ ಕೂಲಿಕಾರರಿಗೆ ಸಂಬಳ ಕೊಡ ಬೇಕಾಗುವದು. ಧಾನ್ಯವನ್ನು ಒಯ್ಯುವ ಖರ್ಚು ಗೋಣಿ ಒಂದಕ್ಕೆ ೪ ಆಣೆ ಬೀಳುತ್ತದೆಂದು ತಿಳಿಯುವ. ಆದ್ದರಿಂದ, ಆ ಧಾನ್ಯವು ಹಳ್ಳಿಗೆ ಮುಟ್ಟಿದ ಕೂಡ್ಲೆ ಅದರ ಧಾರಣೆಯು ಗೋಣಿ ಒಂದಕ್ಕೆ ೫ ರೂಪಾಯಿ ೪ ಆಣೆಯಾಗುವದು. ಹೀಗಾಗಲು, ಆ ಹಳ್ಳಿಯಲ್ಲಿ ಮಾರಾಟವಾಗುವ ಯಾವತ್ತು ಧಾನ್ಯದ ಕ್ರಯ ಏರುವದು. ಯಾಕಂದರೆ, ಹಳ್ಳಿಯ ಸಮೀಪದ ಭೂಮಿಯ ಯಜಮಾನರು ತಮ್ಮ ಧಾನ್ಯದಂಥ ಧಾನ್ಯವೇ ಗೋಣಿ ಒಂದಕ್ಕೆ ೫ ರೂಪಾಯಿ ೪ ಆಣೆಯಂತೆ ಮಾರುತ್ತಿರಲಾಗಿ, ತಮ್ಮ ಧಾನ್ಯವನ್ನು ೫ ರೂಪಾಯಿಯಂತೆ ಮಾರಲಿಕ್ಕಿಲ್ಲ. ಈ ಉದಾಹರಣದಲ್ಲಿ, ಈ ಹಳ್ಳಿಯ ಸುತ್ತಲೂ ಒಂದೇ ಸಮ

ನಾದ ಬೆಳವಿಗೆಯ ಫಲಭರಿತವಾದ ಭೂಮಿಯು ವಿಪುಲವಾಗಿ ಉಂಟೆಂದು ಕಲ್ಪಿಸಲ್ಪಟ್ಟದೆ. ಆದ್ದರಿಂದ, ಅನ್ನದ ಹೆಚ್ಚು ಪೂರೈಕೆ ಮಾಡ ಬೇಕಾದರೆ, ಧಾನ್ಯವನ್ನು ಪೇಟೆಗೆ ತರುವ ಖರ್ಚು ಮಾತ್ರವೇ ಹೆಚ್ಚಿನ ಖರ್ಚು, ಬೇರೆ ಹೆಚ್ಚಿನ ಖರ್ಚಿಲ್ಲ. ಆದರೆ, ಹೆಚ್ಚಿಗೆ ಬೇಕಾದ ಧಾನ್ಯವನ್ನು ಕಡಿಮೆ ಅನುಕೂಲತೆಯುಳ್ಳ ದೂರವಾದ ಭೂಮಿಯಲ್ಲಿ ಬೆಳಕೊಳ್ಳ ಬೇಕಾಗುವದಲ್ಲದೆ, ಕಡಿಮೆ ಕಸುವುಳ್ಳ ಭೂಮಿಯಲ್ಲಿ ಬೆಳಕೊಳ್ಳ ಬೇಕಾದರಂತೂ ಮೇಲೆ ಹೇಳಿದ್ದಕ್ಕಿಂತಲೂ ಅತಿಶಯ ಹೆಚ್ಚು ಶ್ರಮವು ಬೇಕಾಗುವದೆಂಬ ಮಾತು ಸಹಜವಾಗಿ ಲಕ್ಷ್ಯದಲ್ಲಿ ಬರಬಹುದು. ಕಡಿಮೇ ತರದ ಬೆಳವಿಗೆಯುಳ್ಳ ಭೂಮಿಯಲ್ಲಿ ಬೆಳೆಯುವ ಪ್ರತಿಯೊಂದು ಗೋಣಿ ಧಾನ್ಯವನ್ನು ಬೆಳಿಸುವದಕ್ಕೂ ಪೇಟೆಗೆ ತರುವದಕ್ಕೂ ಕೂಡಿ, ನೂರಕ್ಕೆ ಮೂವತ್ತರಂತೆ ಹೆಚ್ಚು ಬಂಡವಲ ಶ್ರಮಗಳು ಬೇಕಾಗ ಬಹುದು. ಹೀಗಾದಲ್ಲಿ, ಆ ಹಳ್ಳಿಯಲ್ಲೆಲ್ಲ ಧಾನ್ಯದ ಧಾರಣೆಯು ನೂರಕ್ಕೆ ಮೂವತ್ತರಂತೆ ಏರುವದು.

ಹೆಚ್ಚಿಗೆ ಬೇಕಾದ ಧಾನ್ಯದ ಪೂರೈಕೆಯನ್ನು ಬಹಳ ಹೆಚ್ಚು ಖರ್ಚು ತಗಲದೆ ಮಾಡಲಿಕ್ಕೆ ಬಾರದಂಥ ಮತ್ತೊಂದು ಬಗೆಯುಂಟು. ಮೇಲೆ ಹೇಳಿದ ಹಳ್ಳಿಯವರು ಒಂದು ಸಣ್ಣ ನಡುಗಡ್ಡೆಯಲ್ಲಿ, ಇಲ್ಲವೆ ಸುತ್ತಲೂ ಬಂಡೆಗಲ್ಲುಗಳುಳ್ಳ ಗುಡ್ಡದ ವಾರೆಯಲ್ಲಿ ವಸಾಹತು ಮಾಡಿದ್ದ ಕಾರಣ, ಸಾಗುವಳಿಯಾಗುವಂಥ ವಿಸ್ತಾರವಾದ ಭೂಮಿಯು ಇದ್ದಿಲ್ಲವೆಂದು ಕಲ್ಪಿಸುವಾ. ಈ ಪಕ್ಷದಲ್ಲಿ, ಈ ಹಳ್ಳಿಯ ಜನಸಂಖ್ಯೆಯು ಬೆಳೆದ ಮಾನದಿಂದ ಬೇಕಾಗುವ ಹೆಚ್ಚಿನ ಅನ್ನದ ಪೂರೈಕೆಯನ್ನು ಮೊದಲು ಸಾಗುವಳಿಯಾದ ಭೂಮಿಯಲ್ಲಿಯೇ ಹೆಚ್ಚು ಬಂಡವಲವನ್ನೂ, ಶ್ರಮವನ್ನೂ ವೆಚ್ಚ ಮಾಡಿ ಮಾಡ ಬೇಕಾಗುವದು. ಕೆಲವೊಂದು ಮಟ್ಟು ಮೀರಿದನಂತರ, ಎಷ್ಟೇ ಸುಧಾರಿಸಿದ ಯಂತ್ರಗಳನ್ನೂ ಮತ್ತು ಬೇಸಾಯದ ಉತ್ಕೃಷ್ಟವಾದ ಶಾಸ್ತ್ರೀಯ ಪದ್ಧತಿಗಳನ್ನೂ ಉಪಯೋಗಿಸಿದಾಗ್ಯೂ ಹೆಚ್ಚು ಬಂಡವಲ ಶ್ರಮಗಳನ್ನು ವೆಚ್ಚ ಮಾಡಿದ ಪ್ರಮಾಣದಿಂದ ಬೆಳೆಯು ವೃದ್ಧಿಯಾಗುವದಿಲ್ಲ. ಉದಾಹರಣಾರ್ಥವಾಗಿ, ಕೆಲವೊಂದು ಮರ್ಯಾದೆಯು ಮಿಕ್ಕಿದ ನಂತರ, ಇಮ್ಮಡಿ ಬಂಡವಲ ಶ್ರಮಗಳನ್ನು ವೆಚ್ಚ ಮಾಡಿದರೆ, ಹೊಲವು ಇಮ್ಮಡಿ ಬೆಳೆಯುವದಿಲ್ಲ. ಈ ಮೇರಿಗೆ, ಹೆಚ್ಚಿಗೆ ಬೇಕಾದ ಅನ್ನವನ್ನು ಹುಟ್ಟಿಸುವ ಖರ್ಚು ಮೊದಲು ಜನಸಂಖ್ಯೆ ಸ್ವಲ್ಪ ಇದ್ದ ಕಾಲಕ್ಕಿಂತಲೂ ಇಮ್ಮಡಿಯಾದರೂ ಏರಬಹುದು.

**ಜನಸಂಖ್ಯೆ ಬೆಳೆಯುವದರಿಂದ ಕಾಳಿನ ಕ್ರಯವು ಏರುವ ಮಾರ್ಗಕ್ಕೆ**

ಹತ್ತುವದು.—ಜನಸಂಖ್ಯೆ ಹೆಚ್ಚಾದ ಮಾನದಿಂದ ಬೇಕಾಗುವ ಹೆಚ್ಚು ಉಪಜೀವನದ ಪದಾರ್ಥಗಳನ್ನು ಉತ್ಪನ್ನ ಮಾಡುವ ಖರ್ಚು ಹೆಚ್ಚಾಗದಂತೆ ಬೆಳಿಸಲಿಕ್ಕೆ ಬರುವದಿಲ್ಲವೆಂಬುವದು ಮೇಲಿನ ಉದಾಹರಣಗಳ ಮೇಲಿಂದ ಸ್ಪಷ್ಟವದೆ. ಆದ್ದರಿಂದ, ಜನಸಂಖ್ಯೆಯ ವೃದ್ಧಿಯು ಬೇಸಾಯದ ಹುಟ್ಟುವಳಿಗಳ ಕ್ರಯ ಏರಿಸುವದಕ್ಕೆ ಪ್ರತ್ಯಕ್ಷ ಸಹಾಯ ಮಾಡುವದು. ಉಪಜೀವನದ ಪದಾರ್ಥಗಳ ಪೂರೈಕೆಯು, ಬೇಡಿಕೆಗೆ ಸರಿಯಾಗಿ ಹ್ಯಾಗಾದರೂ ಆಗಲಿಕ್ಕೇ ಬೇಕು. ಜನಸಂಖ್ಯೆಯು ಬೆಳೆದ ಪ್ರಮಾಣದಿಂದ ಹೆಚ್ಚು ಅನ್ನವು ಬೇಕಾಗುವದರಿಂದ ಅನ್ನದ ಬೇಡಿಕೆಯು ಹೆಚ್ಚಾಗುವದು. ಈ ಹೆಚ್ಚಿನ ಪೂರೈಕೆಯು ಹೆಚ್ಚು ಖರ್ಚು ಮಾಡದೆ ಆಗಲಾರದು. ಆದರೆ, ಜನಸಂಖ್ಯೆಯ ಅಭಿವೃದ್ಧಿಯಿಂದ ಏರುವಂಥ ಬೇಸಾಯದ ಹುಟ್ಟುವಳಿಗಳ ಕ್ರಯಕ್ಕೆ ತಕ್ಕ ಮಟ್ಟಿಗೆ ಎರಡು ಪ್ರತಿಬಂಧಗಳಾದರೂ ಉಂಟು. ಇವು ಯಾವವಂದರೆ:—

೧. ಬೇರೆ ದೇಶಗಳಿಂದ ಬೇಸಾಯದ ಹುಟ್ಟುವಳಿಯನ್ನು ತರುವದು.

೨. ಸುಧಾರಿಸಿದ ಬೇಸಾಯದ ಯಂತ್ರಗಳನ್ನು ಉಪಯೋಗಿಸುವದು; ಮತ್ತು ರಸಾಯನ ಶಾಸ್ತ್ರಗಳ ಶೋಧಗಳಿಂದ ಗೊತ್ತಾದ ಕಸುವುಳ್ಳ ಗೊಬ್ಬರ ಮುಂತಾದವುಗಳನ್ನು ಉಪಯೋಗಿಸುವದು.

ಈ ಪ್ರತಿಬಂಧಕ ಕಾರಣಗಳಲ್ಲಿ ಮೊದಲನೇ ಕಾರಣದಿಂದ ಇಂಗ್ಲಂಡದಲ್ಲಿ ಬಹಳ ಕಾರ್ಯಭಾಗವಾಗಿರುವದು. ಸನ್ ೧೮೪೧ನೇ ಇಸವಿಯ ತರುವಾಯ ಇಂಗ್ಲಂಡದಲ್ಲಿ ಜನಸಂಖ್ಯೆಯು ಬಹಳವಾಗಿ ಬೆಳೆದಾಗ್ಯೂ, ಧಾನ್ಯದ ಕ್ರಯವು ಬಹಳ ಏರಿಲ್ಲ. ಸನ್ ೧೮೪೬ನೇ ಇಸವಿಯಲ್ಲಿ ಹೊರಗಿಂದ ಬರುವ ಧಾನ್ಯದ ಮೇಲೆ ಕಪ್ಪಗಳನ್ನು ಕೂಡ್ರಿಸುವ ಕಾಯಿದೆಯನ್ನು ರದ್ದು ಮಾಡಿದ್ದರಿಂದಲೇ ಈ ಹೆಚ್ಚಿನ ಜನಸಂಖ್ಯೆ ಬದುಕಿರುವದು ಶಕ್ಯವಾಯಿತು. ತತ್ಪೂರ್ವದಲ್ಲಿ, ಇಂಗ್ಲಂಡಕ್ಕೆ ಬರುವ ಧಾನ್ಯಗಳ ಮೇಲೆ ಭಾರಿಯಾದ ಕಪ್ಪಗಳನ್ನು ಕೂಡ್ರಿಸಿದ್ದರಿಂದ, ಪರದೇಶಗಳಿಂದ ಧಾನ್ಯವು ಬರುವದಕ್ಕೆ ಬಹಳ ಅಡ್ಡಿಯಾಗಿ, ಇಂಗ್ಲಂಡದ ಜನರಿಗೆ ತಮ್ಮ ದೇಶದ ಭೂಮಿಯಲ್ಲಿ ಬೆಳೆದ ಕಾಳಿನ ಪೂರೈಕೆಯಿಂದಲೇ ಉಪಜೀವನ ಸಾಗಿಸ ಬೇಕಾಗುತ್ತಿತ್ತು. ಆದ್ದರಿಂದ, ಬೇಸಾಯದ ಹುಟ್ಟವಳಿಯ ಕ್ರಯ ಏರಿಸುವದಕ್ಕೆ ಜನಸಂಖ್ಯೆಯ ವೃದ್ಧಿಯು ಬಲವತ್ತರವಾದ ಕಾರಣವಾಯಿತು. ಧಾನ್ಯದ ಮೇಲಿನ ಕಪ್ಪಗಳ ಕಾಯಿದೆಗಳನ್ನು ರದ್ದು ಮಾಡದೆ ಇದ್ದರೆ, ಒಂದಿಲ್ಲ ಒಂದು ಮಾರ್ಗದಿಂದ ಜನಸಂಖ್ಯೆಯ ಬೆಳವಿಕೆಗೆ ಪ್ರತಿಬಂಧವಾಗಲಿಕ್ಕೇ ಬೇಕಾಗಿತ್ತು. ಜನಸಂಖ್ಯೆ ಬೆಳೆಯುವದು ಕಟ್ಟಾಗದಿದ್ದರೆ, ಧಾನ್ಯದ ಧಾರಣೆಯು ಬರ

ಗಾಲದಂತೆ ಏರುತ್ತಿತ್ತು. ಪರದೇಶಗಳಿಂದ ಬಹಳವಾಗಿ ತರಲಿಕ್ಕೆ ಬಾರದಂಥ ಸರಕುಗಳನ್ನು ಕುರಿತು ಆಲೋಚಿಸಿ ನೋಡಲಾಗಿ, ಜನಸಂಖ್ಯೆಯ ವೃದ್ಧಿಯಿಂದ ಧಾನ್ಯದ ಧಾರಣೆಯ ಮೇಲೆ ಆಗುವ ಪರಿಣಾಮವು ತಕ್ಕ ಮಟ್ಟಿಗೆ ತಿಳಿಯುವದು. ಹಾಲು, ಬೆಣ್ಣೆ ಮುಂತಾದ ಪದಾರ್ಥಗಳ ಕ್ರಯವು ಇತ್ತಲಾಗಿ ಇಂಗ್ಲಂಡದಲ್ಲಿ ಒಂದೇ ಸಮನಾಗಿ ತ್ವರೆಯಿಂದ ಏರುತ್ತ ನಡಿದದೆ. ಈ ಪದಾರ್ಥಗಳನ್ನು ಕೆಡದಂತೆ ಇಡುವ ಹೊಸ ಶಾಸ್ತ್ರೀಯ ಶೋಧಗಳು ಆಗದೆ ಹೋದಲ್ಲಿ, ಜನಸಂಖ್ಯೆಯು ಬೆಳೆದ ಹಾಗೆ, ಈ ಪದಾರ್ಥಗಳು ಇನ್ನೂ ತುಟ್ಟಿಯಾಗ ತಕ್ಕವೇ ಸರಿ. ಇಂಗ್ಲಂಡದಲ್ಲಿ ಒಮ್ಮೆ ತಾಜಾ ಮಾಂಸದ ಕ್ರಯವು ಬಹಳ ಏರುವ ಭಯ ಉಂಟಾಗಿತ್ತು. ಆದರೆ, ಅಮೇರಿಕೆ ಮೊದಲಾದ ದೂರ ದೇಶಗಳಿಂದ ತಾಜಾ ಮಾಂಸವನ್ನು ತಂದದ್ದರಿಂದ ಅದರ ಕ್ರಯದ ಏರುವಿಕೆಗೆ ತಕ್ಕ ಮಟ್ಟಿಗೆ ಪ್ರತಿಬಂಧವಾಗಿದೆ. ಅಮೇರಿಕೆಯಿಂದಲೂ, ಹೊಸ ವಸಾಹತುಗಳಿಂದಲೂ ಇಂಗ್ಲಂಡಕ್ಕೆ ಮಾಂಸದ ಪೂರೈಕೆಯನ್ನು ಮಾಡುವ ಬಗೆಯನ್ನು ಕುರಿತು ಇನ್ನೂ ಚನ್ನಾಗಿ ಶೋಧವಾಗಿಲ್ಲ. ಇಂಗ್ಲಂಡಕ್ಕೆ ಪರದೇಶಗಳಿಂದ ಮಾಂಸವನ್ನು ತರುವದಕ್ಕೆ ಉಂಟಾಗುವ ಅಡ್ಡಿಯು ಯಾವದಂದರೆ, ಇಂಗ್ಲಂಡಕ್ಕೆ ಮಾಂಸವು ಬಂದು ಮುಟ್ಟಿದ ಕೂಡ್ಲೆ ಅದು ಮಾರಾಟವಾಗಲಿಕ್ಕೆ ಬೇಕು. ಯಾಕಂದರೆ, ಪರದೇಶಗಳಿಂದ ಮಾಂಸವನ್ನು ತರುವಾಗ ಹಾದಿಯಲ್ಲಿ ಅದನ್ನು ತಂಪು ಕೋಣೆಗಳೊಳಗಿಂದ ಇಟ್ಟು ಸುರಕ್ಷಿತವಾಗಿ ತರಬಹುದು. ಆದರೆ, ಆ ಕೋಣೆಗಳೊಳಗಿಂದ ಮಾಂಸವನ್ನು ಹೊರಗೆ ತೆಗೆದನಂತರ ಅದು ಸ್ವಲ್ಪ ಕಾಲದಲ್ಲಿ ಕೊಳೆಯ ಹತ್ತುತ್ತದೆ. ಆದರೆ, ಕೆಲವು ಕಾಲದನಂತರ ಈ ತೊಂದರೆಯಾದರೂ ಪರಿಹಾರವಾಗುವಂತೆ ತೋರುತ್ತದೆ.

**ಬೇಸಾಯದ ಹುಟ್ಟುವಳಿಗಳ ಕ್ರಯವನ್ನು ನಿರ್ಣೈಸುವಂಥ ನಿಯಮಗಳ ಸಾರಾಂಶವು.**— ಬೇಸಾಯದ ಹುಟ್ಟುವಳಿಯ ಕ್ರಯವನ್ನು ಕ್ರಮಗೊಳಿಸುವಂಥ ಕಾರಣಗಳ ಸಾರಾಂಶವು ಸ್ವಲ್ಪದರಲ್ಲಿ ಕೆಳಗೆ ಬರೆದ ಪ್ರಕಾರ ಇರುವದು.

ಈ ಸರಕುಗಳ ಬೇಡಿಕೆ ಪೂರೈಕೆಗಳ ಸಮೀಕರಣವು ಆಗಲಿಕ್ಕೇ ಬೇಕು. ಪೂರೈಕೆಗಿಂತಲೂ ಬೇಡಿಕೆ ವಿಶೇಷವಾದಾಗ, ಬೇರೆ ಕೆಲವು ಸರಕುಗಳಂತೆ ಈ ಸರಕುಗಳ ಹೆಚ್ಚಾದ ಬೇಡಿಕೆ ಕಡಿಮೆ ಮಾಡಿ, ಬೇಡಿಕೆ ಪೂರೈಕೆಗಳನ್ನು ಸರಿಯಾಗಿ ಮಾಡಲಿಕ್ಕೆ ಬರುವದಿಲ್ಲ. ಯಾಕಂದರೆ, ಉಪಜೀವನಕ್ಕೆ ಅವಶ್ಯವಾದ ಪದಾರ್ಥಗಳ ಬೇಡಿಕೆಯು ಯಾವಾಗಲೂ ಜನಸಂಖ್ಯೆಯ ಕೆಲವೊಂದು ಪ್ರಮಾಣದಂತೆ ಇರಲಿಕ್ಕೇ ಬೇಕು. ಉದಾಹರಣಾರ್ಥವಾಗಿ, ಜನರ ಮುಖ್ಯ ಆಹಾರವಾದ

ಧಾನ್ಯದ ಬೇಡಿಕೆ ಅದರ ಕ್ರಯದ ವ್ಯತ್ಕ್ರಮ ಪ್ರಮಾಣದಿಂದ ಹೆಚ್ಚುಕಡಿಮೆ ಯಾಗಲಾರದು. ಈ ಧಾನ್ಯವು ತುಟ್ಟಿಯಾಗಲಿ, ಅಗ್ಗವಾಗಲಿ, ಜನರು ಅದನ್ನು ಕೊಳ್ಳ ಬೇಕು ಇಲ್ಲವೆ ಸಾಯಬೇಕು. ಈ ಕಾಳಿನ ಬೇಡಿಕೆಯ ಮೇಲೆ ಅದರ ಕ್ರಯದ ಪರಿಣಾಮವು ಅಲ್ಪವಾಗಿರುವದು. ಯಾಕಂದರೆ, ಜನರು ಬೇರೆ ಯಾವತ್ತು ಅನವಶ್ಯಕವಾದ ಖರ್ಚು ಕಡಿಮೆ ಮಾಡಿಯಾದರೂ ಈ ಕಾಳು ಮೊದಲಿನಷ್ಟೇ ಕೊಳ್ಳುವರು. ಬೇರೆ ಸರಕುಗಳ ಬೇಡಿಕೆಯನ್ನು ಕಡಿಮೆ ಮಾಡಲಿಕ್ಕೆ ಬಂದಂತೆ, ಉಪಜೀವನದ ಪದಾರ್ಥಗಳ ಬೇಡಿಕೆಯನ್ನು ಕಡಿಮೆ ಮಾಡುವದಕ್ಕೆ ಬರುವದಿಲ್ಲೆಂದು ಮೇಲೆ ಹೇಳಲ್ಪಟ್ಟಿದೆ. ಆದರೆ, ಈ ಪದಾರ್ಥಗಳ ಬೇಡಿಕೆ ಕೇವಲ ಬೇರೆ ಪದಾರ್ಥಗಳ ಬೇಡಿಕೆಯಂತೆಯೇ ಕಡಿಮೆಯಾಗದಿದ್ದರೂ, ಈ ಬೇಡಿಕೆಯು ಸಹ ಕೆಲವು ಸಾರಿ ಜನರು ಉಪವಾಸ ಬೀಳುವದರಿಂದಲೂ ಅರಹೊಟ್ಟೆ ಉಣ್ಣುವದರಿಂದಲೂ ಕಡಿಮೆಯಾಗುವದುಂಟು. ಆದರೆ ಬೇಡಿಕೆಯು ಈ ರೀತಿಯಿಂದ ಕಡಿಮೆಯಾಗಲಾಗಿ, ಜನಸಂಖ್ಯೆಯು ಅವಶ್ಯವಾಗಿ ಕಡಿಮೆಯಾಗಲಿಕ್ಕೇ ಬೇಕು. ಆದ್ದರಿಂದ, ಜನಸಂಖ್ಯೆಯ ಕೆಲವೊಂದು ಪ್ರಮಾಣದಿಂದ ಉಪಜೀವನಕ್ಕೆ ಅವಶ್ಯವಾದ ಪದಾರ್ಥಗಳ ಬೇಡಿಕೆಯು ಯಾವಾಗಲೂ ಇರುವದೆಂಬ ನಿಯಮವು ಈ ಪ್ರಸಕ್ತಿಯಲ್ಲಿಯೂ ನಿಜವಾದದ್ದೆಂದು ಕಂಡು ಬರುತ್ತದೆ. ಆದಕಾರಣ, ಪೂರೈಕೆಗಿಂತಲೂ ಬೇಡಿಕೆ ಹೆಚ್ಚಾದಾಗ, ಪೂರೈಕೆಯು ಬೇಡಿಕೆಗೆ ಸರಿಯಾಗಿ ಆಗುವಂತೆ ಪೂರೈಕೆಯನ್ನೇ ಬೆಳಿಸಬೇಕಾಗುವದೇ ಹೊರ್ತು, ಬೇಡಿಕೆಯನ್ನು ಕಡಿಮೆ ಮಾಡಲಾಗದು. ಪೂರೈಕೆಯನ್ನು ಬೆಳಿಸ ಬೇಕಾದರೆ, ಕಡಿಮೆ ಕಸುವುಳ್ಳ, ಇಲ್ಲವೆ ಕಡಿಮೆ ಅನುಕೂಲವಾದ ಸ್ಥಳದಲ್ಲಿದ್ದ ಭೂಮಿಯನ್ನು ಆಶ್ರಯಿಸ ಬೇಕಾಗುವದು. ಹೀಗಾಗಲು, ಹೆಚ್ಚಿನ ಅನ್ನದ ಭಾಗವನ್ನು ಹುಟ್ಟಿಸುವದಕ್ಕೆ ಹೆಚ್ಚು ಶ್ರಮವನ್ನೂ, ಬಂಡವಲವನ್ನೂ ಹಾಕ ಬೇಕಾಗುವದು; ಅಂದರೆ, ಉತ್ಪನ್ನ ಮಾಡುವ ಖರ್ಚು ಬೆಳೆದು, ಅದರಿಂದ ಕ್ರಯಗಳು ಏರುವವೆಂಬ ಅರ್ಥವು. ಇದರಿಂದ ತಿಳಿಯುವದೇನಂದರೆ, ಉಪಜೀವನಕ್ಕೆ ಅವಶ್ಯವಾದ ಪದಾರ್ಥಗಳನ್ನು ಕುರಿತು ವಿಚಾರಿಸಲಾಗಿ, ಬೇಡಿಕೆ ಕ್ರಯವನ್ನವಲಂಬಿಸಿರುವದಿಲ್ಲ; ಕ್ರಯವೇ ಬೇಡಿಕೆಯನ್ನವಲಂಬಿಸಿರುವದು; ಅಂದರೆ, ಬೇರೆ ಎಲ್ಲ ಸ್ಥಿತಿಯು ಇದ್ದಕ್ಕಿದ್ದ ಹಾಗೆ ಇರಲಾಗಿ, ಕ್ರಯವು ಜನಸಂಖ್ಯೆಯ ಮೇಲೆ ಅವಲಂಬಿಸಿರುವದೆಂಬ ಫಲಿತಾರ್ಥವು. ಆದರೆ ಈ ಸ್ಥಳದಲ್ಲಿ ನೆನಪಿನಲ್ಲಿಡ ತಕ್ಕದ್ದೇನಂದರೆ, ಜನಸಂಖ್ಯೆ ಬೆಳೆದ ಪ್ರಮಾಣದಿಂದ ಉಪಜೀವನದ ಪದಾರ್ಥಗಳ ಕ್ರಯವು ಏರುವದನ್ನು ತಡೆಯುವಂಥ ಕೆಲವು ಪ್ರತಿಬಂಧಗಳಿರು

ವವು. ಈಗ ನಡಿಯುವ ಶತಮಾನದಲ್ಲಿ ಇಂಗ್ಲಂಡದಲ್ಲಿ ಜನಸಂಖ್ಯೆ ಬೆಳೆದ ವಣಾನದಿಂದ, ಗೋಧಿಯ ಕ್ರಯವು ಏರುವದಕ್ಕೆ, ನಿರಾತಂಕ ವ್ಯಾಪಾರ ಸುಲಭ ಹೊದ ವಾಹನಸಾಧನಗಳು ಮೊದಲಾದ ಅನೇಕ ಕಾರಣಗಳಿಂದ ಅಡ್ಡಿಯಾಗಿದೆ. ಇಲ್ಲದಿದ್ದರೆ, ಗೋಧಿಯ ಧಾರಣೆಯು ಬಹಳ ಏರುತ್ತಿತ್ತು.

**ಕಣಿಗಳ ಹಾಗು ಮೀನ ಹಿಡಿಯುವ ಸ್ಥಳಗಳ ಉತ್ಪನ್ನಗಳು:**— ಬೇಸಾಯದ ಹುಟ್ಟುವಳಿಗಳ ವಿಷಯವಾಗಿ ಹೇಳಿದ ನಿಯಮಗಳೇ ಕಣಿಗಳ ಉತ್ಪನ್ನಕ್ಕೂ ಮೀನಗಳನ್ನು ಹಿಡಿಯುವ ಸ್ಥಳಗಳ ಉತ್ಪನ್ನಕ್ಕೂ ಸರಿ ಬೀಳುತ್ತವೆ. ಮೀನಗಳಿಗೆ ಬೇಡಿಕೆ ವಿಶೇಷವಾದಾಗ ಬೇಡಿಕೆಗೂ ಪೂರೈಕೆಗೂ ಸಮೀಕರಣವಾಗ ಬೇಕಾದರೆ, ಕಡಿಮೆ ಮೀನ ಸಿಕ್ಕುವಂಥ, ಇಲ್ಲವೆ ದೂರವಾಗಿದ್ದ ಸ್ಥಳಗಳಿಗೆ ಹೋಗಿ, ಮೀನಗಳನ್ನು ಹಿಡಿಯ ಬೇಕಾಗುತ್ತದೆ. ಆದ್ದರಿಂದ, ಉತ್ಪನ್ನ ಮಾಡುವ ಖರ್ಚು (ಅಂದರೆ, ಉತ್ಪನ್ನ ಮಾಡಲಿಕ್ಕೆ ಬೇಕಾಗುವ ಶ್ರಮ ಹಾಗೂ ಸಾಹಸ) ಬೆಳೆದು, ಕ್ರಯಗಳು ಏರುವವು. ಇಂಗ್ಲಂಡದಲ್ಲಿ ೧೮೭೨ನೇ ಇಸವಿಯಲ್ಲಿ ಕಲ್ಲಿದ್ದಲಿಯ ಧಾರಣೆಯು ಬಹುತರವಾಗಿ ಇಂಥ ಕಾರಣಗಳ ಮೂಲಕವಾಗಿಯೇ ಅತಿಶಯವಾಗಿ ಏರಿತ್ತೆಂಬುವದು, ವಿಚಾರ ಮಾಡಿದರೆ ತಿಳಿಯುವದು. ೧೮೭೧-೭೨ ವರ್ಷಗಳಲ್ಲಿ ಕಬ್ಬಿಣದ ವ್ಯಾಪಾರಕ್ಕೆ ವಿಲಕ್ಷಣ ತೇಜ ಬಂದದ್ದರಿಂದ ಕಲ್ಲಿದ್ದಲಿಯ ಬೇಡಿಕೆ ಬಹಳ ಹೆಚ್ಚಿತು. ಈ ಬೇಡಿಕೆಗೆ ಸರಿಯಾಗಿ ಕಲ್ಲಿದ್ದಲಿಯನ್ನು ಪೂರೈಸುವದಕ್ಕೋಸ್ಕರ ಕಡಿಮೆ ಉತ್ಪಾದಕವಾದ ಕಣಿಗಳಲ್ಲಿ ಕೆಲಸ ನಡಿಸಬೇಕಾದ್ದರಿಂದ, ಕಲ್ಲಿದ್ದಲಿಯನ್ನು ತೆಗೆಯುವದಕ್ಕೆ ಮೊದಲಿನದಕ್ಕಿಂತಲೂ ಹೆಚ್ಚು ಖರ್ಚು ಬೀಳಹತ್ತಿತು. ಈ ಹೆಚ್ಚಿದ ಖರ್ಚಿನ ಮೂಲಕವಾಗಿ ಕಲ್ಲಿದ್ದಲಿಯ ಧಾರಣೆಯು ಏರಿತು. ಆ ಕಾಲಕ್ಕೆ ಕೆಲವರು ಈ ಪ್ರಕಾರ ಕಲ್ಲಿದ್ದಲಿಯ ಧಾರಣೆ ಏರುವದಕ್ಕೆ, ಕಲ್ಲಿದ್ದಲಿಯ ಕಣಿಗಳಲ್ಲಿ ದುಡಿಯುವ ಕೂಲಿಕಾರರ ಸಂಬಳ ಹೆಚ್ಚಿಸಿದ್ದೇ ಕಾರಣವಾಗಿತ್ತೆಂದು ನಂಬಿದ್ದರು. ಆದರೆ ವಾಸ್ತವ ಸ್ಥಿತಿಯನ್ನು ತಿಳಿದು ನೋಡಲಾಗಿ ಕಂಡು ಬಂದದ್ದೇನಂದರೆ, ಸಂಬಳವು ಹೆಚ್ಚಿದ್ದರಿಂದ ಕಲ್ಲಿದ್ದಲಿಯ ಧಾರಣೆ ಏರಿದ್ದಿಲ್ಲ, ಆದರೆ ಧಾರಣೆ ಏರಿದ್ದರಿಂದ ಕೂಲಿಕಾರರ ಸಂಬಳ ಏರಿತ್ತು. ಕಲ್ಲಿದ್ದಲಿಯ ವ್ಯಾಪಾರಕ್ಕೆ ಅತಿಶಯ ತೇಜ ಬಂದ ವೇಳೆ ಸಾಧಿಸಿ, ಕೂಲಿಕಾರರು ಹೆಚ್ಚು ಸಂಬಳ ಬೇಡ ಹತ್ತಿದ್ದರಿಂದ ಕೂಲಿಯನ್ನು ಅವಶ್ಯವಾಗಿ ಹೆಚ್ಚಿಸ ಬೇಕಾಯಿತು. ಒಂದು ವೇಳೆ ಕಲ್ಲಿದ್ದಲಿಯ ಧಾರಣೆಯು ಅವರ ಹೆಚ್ಚಿದ ಸಂಬಳದಿಂದಲೇ ಏರಿದ್ದರೂ ಒಂದು ಟನ್ನಿಗೆ ೨ ಶಿಲಿಂಗುಗಳಂತೆ ಮಾತ್ರ ಏರ ಬಹುದಾಗಿತ್ತು. ಆದರೆ, ಕಣಿಯ ಬಾಯಿಯ ಹತ್ತರ ಸಹ ಕಲ್ಲಿದ್ದಲಿಯ ಧಾರಣೆಯು

ಟನ್ನಿಗೆ ೧೦ ಶಿಲಿಂಗುಗಳಿಗಿಂತ ಹೆಚ್ಚು ಏರಿತ್ತು. ಇದರ ಮೇಲಿಂದ ಕಲ್ಲಿದ್ದಲಿಯ ಧಾರಣೆಯು ಕೂಲಿಕಾರರಿಗೆ ದೊರೆದ ಹೆಚ್ಚು ಕೂಲಿಯ ಮೂಲಕವಾಗಿ ಏರ ಲಿಲ್ಲವೆಂಬದು ಸ್ಪಷ್ಟವದೆ. ಸನ್ ೧೮೭೩ನೇ ಇಸವಿಯಲ್ಲಿ, ಕಲ್ಲಿದ್ದಲಿಗೆ ಬಂದ ವಿಲಕ್ಷಣವಾದ ತೇಜವು ಕಡಿಮೆಯಾಗ ಹತ್ತಿದ್ದರಿಂದ ಧಾರಣೆಯು ಮಂದವಾಗ ಹತ್ತಿತು. ಆದ್ದರಿಂದ, ಕಲ್ಲಿದ್ದಲಿಯು ತುಟ್ಟಿಯಾಗಿದ್ದಾಗ ಸಹ ಕೇವಲ ಸರ್ವ ಸಾಧಾರಣ ದರದಿಂದ ಕೂಲಿ ಲಾಭಗಳು ಹುಟ್ಟುವಂಥ ದರಿದ್ರ ಕಣಿಗಳಿಂದ, ಧಾರಣೆಯು ಮಂದವಾದ ಕೂಡ್ಲೆ ಏನೂ ಲಾಭ ಉಳಿಯದ ಹಾಗಾಯಿತು. ಆ ಕಾರಣ, ಅವೆಲ್ಲ ಕ್ರಮೇಣ ಒಂದರ ಹಿಂದೊಂದು ಬಿಡಲ್ಪಟ್ಟವು. ಒಂದು ಟನ್ನಿಗೆ ೩೦ ಶಿಲಿಂಗು ಬಂದಾಗ ತೀರ ಕಡಿಮೆ ಉತ್ಪಾದಕವಾದ ಬಡಕಣಿಗಳಿಂದ ಸಹ ಲಾಭವಾಗ ಬಹುದು. ಆದರೆ ಕಲ್ಲಿದ್ದಲಿಯ ಧಾರಣೆ ಟನ್ನಿಗೆ ೨೫ ಇಲ್ಲವೆ ೨೦ ಶಿಲಿಂಗುಗಳ ವರೆಗೆ ಇಳಿಯುವದರಿಂದ, ಇಂಥ ಕಣಿಗಳಿಂದ ಲಾಭವಾಗದೆ ಲುಕ ಸಾನು ಆಗುವದು. ಅದರಿಂದ, ಇಂಥ ಕಣಿಗಳ ಕೆಲಸ ನಿಂತು ಹೋಗುವದು.

**ಕೈಗಾರಿಕೆಯ ಸರಕುಗಳ ಕ್ರಯವನ್ನು ನಿರ್ಣೈಸುವ ನಿಯಮುಗಳು.**— ಬೆಲೆಯ ಸಾಮಾನ್ಯ ಸ್ವರೂಪವನ್ನು ವಿವರಿಸಿದ ಸ್ಥಳದಲ್ಲಿ ಕೈಗಾರಿಕೆಯ ಸರಕು ಗಳ ಕ್ರಯವನ್ನು ನಿರ್ಣೈಸುವಂಥ ನಿಯಮುಗಳ ದಿಗ್ದರ್ಶನ ಮಾಡಲ್ಪಟ್ಟಿತು. ಆದ ರೆ, ಕೈಗಾರಿಕೆಯ ಸರಕುಗಳು ಉತ್ಪನ್ನ ಮಾಡುವ ಖರ್ಚು ಹೆಚ್ಚಾಗದೆ ಪೂರೈಸ ಲಿಕ್ಕೆ ಬರುವಂಥ ಸರಕುಗಳಾಗಿರುವ ಕಾರಣ, ಇವು ಕ್ರಯವನ್ನು ಅನುಲಕ್ಷಿಸಿ ಸರಕುಗಳಲ್ಲಿ ಮಾಡಿದ ಮೂರು ವರ್ಗಗಳಲ್ಲಿ ಮೂರನೇ ವರ್ಗಕ್ಕೆ ಸೇರು ವವು. ಆದಕಾರಣ, ಈ ನಿಯಮುಗಳ ಸ್ವರೂಪವನ್ನು ವಿಶೇಷ ವಿವರಿಸಿರುವದು ಇಷ್ಟವಾಗಿದೆ.

ಇಂಥ ಸರಕುಗಳನ್ನು ಉತ್ಪನ್ನ ಮಾಡುವವರೊಳಗೆ ಸ್ಪರ್ಧೆಯು ನಿರಾತಂಕ ವಾಗಿ ನಡೆದ ಪ್ರಮಾಣದಿಂದ, ಅವುಗಳ ಕ್ರಯವು ಉತ್ಪನ್ನ ಮಾಡುವ ಖರ್ಚಿನಿಂದ ನಿರ್ಣೈಸಲ್ಪಡುತ್ತದೆಂದು ಹಿಂದೆ ಹೇಳಲ್ಪಟ್ಟದೆ. ಈ ಉತ್ಪನ್ನ ಮಾಡುವ ಖರ್ಚಿ ನಲ್ಲಿ ಯಾವ ಯಾವ ಅಂಶಗಳು ಕೂಡಿರುವವೆಂಬದನ್ನು ಇಲ್ಲಿ ಪೂರ್ಣವಾಗಿ ವಿವ ರಿಸುವದು ಅವಶ್ಯವಾದದ್ದು. ಕೈಗಾರಿಕೆಯ ಸರಕುಗಳ ಮೂಲದ್ರವ್ಯಗಳು ಯಾ ವಾಗಲೂ ಭೂಮಿಯಿಂದ ಹುಟ್ಟ ತಕ್ಕವುಗಳು. ಆ ಕಾರಣ, ಈ ಸರಕುಗಳ ಕ್ರಯ ವು ಸಹ ಬೇಸಾಯದ ಹಾಗೂ ಕಣಿಗಳ ಹುಟ್ಟುವಳಿಗಳ ಕ್ರಯದಂತೆಯೇ ನಿರ್ಣೈ ಸಲ್ಪಡ ಬಹುದೆಂದು ಯಾರಾದರೂ ಒಂದು ವೇಳೆ ತಿಳಿಯ ಬಹುದು. ಉದಾಹರ ಣಾರ್ಥವಾಗಿ, ನೂಲಿನ ಬಟ್ಟೆಗಳು ಅರಳೆಯಿಂದ ಆಗುತ್ತವೆ. ಆದ್ದರಿಂದ, ಹೆಚ್ಚು

ನೂಲಿನ ವಸ್ತ್ರಗಳನ್ನು ಹುಟ್ಟಿಸಿದ ಹಾಗೆ ಹೆಚ್ಚು ಅರಳೆ ಬೇಕಾಗುವದು. ಹೆಚ್ಚು ಅರಳೆ ಹುಟ್ಟಿಸಬೇಕಾದ್ದರಿಂದ ಹತ್ತಿಯನ್ನು ಬೆಳಿಸುವ ಖರ್ಚು ಹೆಚ್ಚಾಗಿ, ನೂಲಿನ ವಸ್ತ್ರಗಳನ್ನು ಹುಟ್ಟಿಸುವ ಖರ್ಚು ಬೆಳೆಯುವದು, ಎಂದು ತೋರಬಹುದು. ಆದರೆ ಕೈಗಾರಿಕೆಯ ಸರಕುಗಳ ಕ್ರಯದಲ್ಲಿ ಮೂಲದ್ರವ್ಯದ ಕ್ರಯದ ಅಂಶವು ಇದ್ದಾಗ್ಯೂ, ಬಹುತರ ಯಾವತ್ತು ಕೈಗಾರಿಕೆಯ ಸರಕುಗಳ ಕ್ರಯದಲ್ಲಿ ಈ ಅಂಶವು ಅತ್ಯಲ್ಪವಾಗಿರುವ ಕಾರಣ, ಅದು ಎಣಿಕೆಯಲ್ಲಿ ತಕ್ಕೊಳ್ಳುವ ಹಾಗಿರುವದಿಲ್ಲ. ಒಂದು ನೂಲಿನ ಬಟ್ಟೆಯ ಉದಾಹರಣವನ್ನೇ ತಕ್ಕೊಳ್ಳಿರಿ. ಅರಳೆಯು ನೂತು ಬಟ್ಟೆಯಾಗುವ ವರೆಗೆ ಅದರಲ್ಲಿ ಅಸಂಖ್ಯ ವಿಧಗಳಿಂದ ಕೆಲಸ ಮಾಡ ಬೇಕಾಗುವದು. ಆ ಎಲ್ಲ ಕೆಲಸಗಳಿಗೆ ಬೀಳುವ ಖರ್ಚಿಗೆ ಮೂಲದ್ರವ್ಯದ ಕ್ರಯವನ್ನು ಹೊಂದಿಸಿ ನೋಡಲಾಗಿ, ಮೂಲದ್ರವ್ಯದ ಖರ್ಚು ಬಟ್ಟೆಯನ್ನು ಉತ್ಪನ್ನ ಮಾಡುವ ಇಡೀ ಖರ್ಚಿನ ಅತ್ಯಲ್ಪ ಭಾಗವಾಗಿರುವದು. ಅರಳೆಯು ಅಮೇರಿಕೆಯಲ್ಲಿ ಇಲ್ಲವೆ ಹಿಂದುಸ್ತಾನದಲ್ಲಿ ಬೆಳೆಯುವದು. ಅನಂತರ ಅದನ್ನು ಬಂದರಕ್ಕೆ ತಂದು ಹಡಗಗಳಲ್ಲಿ ತುಂಬಬೇಕು. ಆ ಮೇಲೆ ಸಮುದ್ರವನ್ನು ದಾಟಿಸಿ ಅದನ್ನು ಲಿವ್ಹರಪೂಲ ಪಟ್ಣಕ್ಕೆ ಮುಟ್ಟಿಸ ಬೇಕು. ಅರಳೆ ಇಂಗ್ಲಂಡಕ್ಕೆ ಮುಟ್ಟಿದನಂತರ ಅದು ಬೇರೆ ಬೇರೆ ಉದ್ಯೋಗಗಳನ್ನು ಮಾಡುವ ಬಹುತರ ಲೆಖ್ಖವಿಲ್ಲದಷ್ಟು ಕೆಲಸಗಾರರ ಕೈಯೊಳಗಿಂದ ರೂಪಾಂತರ ಹೊಂದಿ ಹೋಗಬೇಕು. ಈ ಎಲ್ಲ ಕೆಲಸಗಾರರಿಗೆ ಸಂಬಳ ಸಿಕ್ಕಬೇಕು. ಈ ನಾನಾ ತರದ ಉದ್ಯೋಗಗಳಲ್ಲೆಲ್ಲ ಹಾಕಿದ ಬಂಡವಲವು ತಿರಿಗಿ ಬಂದು, ಮೇಲೆ ಸರ್ವಸಾಧಾರಣ ದರದಂತೆ ಲಾಭ ಬರಬೇಕು. ಹಿಂದೆ ೧೬ನೇ ಪುಟದಲ್ಲಿ, ಒಂದು ಉಕ್ಕಿನ ಕಂಬಿಯಿಂದ ಗಡಿಯಾಲಗಳೊಳಗಿನ ಸೂಕ್ಷ್ಮವಾದ ಕಮಾನುಗಳನ್ನು ಮಾಡುವ ವರೆಗೆ ಅದರ ಬೆಲೆಯು ೪೦೦೦ ರೂಪಾಯಿ ಹೆಚ್ಚಾಗುವ ಉದಾಹರಣವು ಕೊಟ್ಟಿದೆಯಷ್ಟೇ.

**ಉತ್ಪನ್ನ ಮಾಡುವ ಖರ್ಚಿನೊಳಗಿನ ಮುಖ್ಯ ಅಂಶವು.**— ಮೇಲಿನ ಬರಹದಿಂದ ತಿಳಿಯುವದೇನಂದರೆ, ಕೈಗಾರಿಕೆಯ ಸರಕು ಉತ್ಪನ್ನ ಮಾಡುವ ಖರ್ಚಿನಲ್ಲಿ ಶ್ರಮವೇ ಮುಖ್ಯ ಅಂಶವಾಗಿರುವದು. ಬಂಡವಲ ಹಾಕಿದ ಸಾವುಕಾರನ ಮಿತಭೋಗವಾದರೂ ಉತ್ಪನ್ನ ಮಾಡುವ ಖರ್ಚಿನಲ್ಲಿ ಮಹತ್ವವುಳ್ಳ ಭಾಗವಾಗಿರುವದು. ಬಹುತರ ಯಾವಾಗಲೂ ಮೂಲದ್ರವ್ಯದ ಕ್ರಯವನ್ನು ಶ್ರಮ ಮತ್ತು ಮಿತಭೋಗ ಇವುಗಳ ಮೂಲಿಕವಾದ ಖರ್ಚಿಗೆ ಸರಿ ಮಾಡಿ ನೋಡಲಾಗಿ, ಮೂಲದ್ರವ್ಯದ ಕ್ರಯದ ಅಂಶವು ಕಡಿಮೆ ಮಹತ್ವವುಳ್ಳದ್ದಾಗಿರುವದು. ಹಿಂದೆ ಹೇಳಿದ ಮೇರಿಗೆ ಯಾವದೊಂದು ಸರಕಿಗೆ ಬಂದ ಕ್ರಯವು ಆ

ಸರಕನ್ನು ಉತ್ಪನ್ನ ಮಾಡುವ ಸಾವುಕಾರರಿಗೂ ಶ್ರಮಕರ್ತರಿಗೂ ತಮ್ಮ ಉದ್ಯೋಗವನ್ನು ನಡಿಸುವದಕ್ಕೆ ಮನಸ್ಸು ಆಗುವಷ್ಟು ಇದ್ದರಾಯಿತು.

ಕೈಗಾರಿಕೆಯ ಸರಕುಗಳನ್ನು ಹೆಚ್ಚು ಉತ್ಪನ್ನ ಮಾಡಿದ ಹಾಗೆ ಉತ್ಪನ್ನ ಮಾಡುವ ಖರ್ಚು ಬೆಳಿಯುವದಿಲ್ಲವೆಂಬದಿಷ್ಟೇ ಅಲ್ಲ, ಎಷ್ಟೋ ಬಾರಿ ಇಂಥ ಸರಕು ಹೆಚ್ಚು ಉತ್ಪನ್ನ ಮಾಡಿದ ಹಾಗೆ ಕಡಿಮೆ ಖರ್ಚು ಬೀಳುವದು. ಯಾವದೊಂದು ಸರಕನ್ನು ಉತ್ಪನ್ನ ಮಾಡುವ ಕೆಲಸವನ್ನು ದೊಡ್ಡ ಪಾಯದ ಮೇಲೆ ನಡಿಸ ಲಾಗಿ, ಕೈಗಾರಿಕೆಯ ಎಷ್ಟೋ ಒಳ ಕೆಲಸಗಳು ಕಡಿಮೆ ಖರ್ಚಿನಿಂದ ಆಗುತ್ತವೆ. ಉಗಿಯಂತ್ರಗಳನ್ನು ಉಪಯೋಗಿಸುವದಕ್ಕೆ ಬರುವಂಥ ಬಹುತರ ಯಾವತ್ತು ಉದ್ಯೋಗಗಳಲ್ಲಿ, ಈ ಯಂತ್ರಗಳನ್ನು ಉಪಯೋಗಿಸುವದರಿಂದ ಕೆಲಸವು ಬಹಳ ಕಡಿಮೆ ಬಂಡವಲ ಶ್ರಮಗಳಿಂದ ಆಗುತ್ತದೆ. ಆದರೆ ಉದ್ಯೋಗವನ್ನು ದೊಡ್ಡ ಪಾಯದ ಮೇಲೆ ನಡಿಸಿದ ಹೊರ್ತು ಉಗಿಯಂತ್ರಗಳನ್ನು ಉಪಯೋ ಗಿಸಿದರಿಂದ ಏನೂ ಲಾಭವಾಗುವದಿಲ್ಲ. ಉದಾಹರಣಾರ್ಥವಾಗಿ, ಇಂಗ್ಲಂಡದಲ್ಲಿ ಸಣ್ಣಸಣ್ಣ ಕಾರಖಾನೆಗಳಿಗೆ ಬದಲಾಗಿ ದೊಡ್ಡ ಕಾರಖಾನೆಗಳು ಸ್ಥಾಪಿಸಲ್ಪಡದೆ ಇದ್ದರೆ, ಕೈಮಗ್ಗಗಳ ಮೇಲೆ ವಸ್ತ್ರಗಳನ್ನು ನೇಯುವ ಉದ್ಯೋಗಗಳು ಹಿಂದಕ್ಕೆ ಬಿದ್ದು, ಉಗಿಯಂತ್ರಗಳು ಪ್ರಬಲವಾಗುತ್ತಿದ್ದಿಲ್ಲ. ಕಾರಖಾನೆಯು ಬೆಳೆದ ಪ್ರಮಾಣದಿಂದ ಕಾರಖಾನೆಯನ್ನು ನಡಿಸುವ ಖರ್ಚು ಬೆಳೆಯುವದಿಲ್ಲವೆಂಬ ದೊಂದು ಸಾಮಾನ್ಯ ನಿಯಮ ಉಂಟು. ಅನೇಕ ಸಾರಿ ಮೊದಲು ಇದ್ದ ಕಾರಖಾನೆಯ ಗೃಹಗಳಲ್ಲಿಯೇ ಹೆಚ್ಚು ಕೂಲಿಕಾರರನ್ನು ಹಚ್ಚುವದಕ್ಕೆ ಅನುವು ಇರುವದು. ಸ್ವಲ್ಪ ಜನ ಕೂಲಿಕಾರರೇ ಇರಲಿ, ಬಹಳ ಕೂಲಿಕಾರರೇ ಇರಲಿ, ಅವರ ಮೇಲೆ ದೃಷ್ಟಿ ಇಡುವದಕ್ಕೂ, ಅವರಿಗೆ ಕೆಲಸದ ರೀತಿಯನ್ನು ತೋರಿಸು ವದಕ್ಕೂ ಅಷ್ಟೇ ಮಂದಿ ಸಾಕಾಗುವರು. ಉದ್ಯೋಗವನ್ನು ಇಮ್ಮಡಿ ಇಲ್ಲವೆ ಮೂರು ಮಡಿಯಾಗಿ ಬೆಳಿಸಿದರೂ, ಅಷ್ಟೇ ಪ್ರಮಾಣದಿಂದ ಲೆಖ್ಖಪತ್ರಗಳನ್ನು ಬರಿಯುವವರನ್ನು ಹೆಚ್ಚಿಸ ಬೇಕಾಗುವದಿಲ್ಲ. ಇದಲ್ಲದೆ, ಉದ್ಯೋಗವನ್ನು ದೊಡ್ಡ ಪಾಯದ ಮೇಲೆ ನಡಿಸುವದರಿಂದ ಶ್ರಮವಿಭಾಗವನ್ನು ಪೂರ್ಣವಾಗಿ ಮಾಡುವದು ವಿಶೇಷ ಅನುಕೂಲವಾಗುತ್ತದೆಂಬದು ಸಹಜವಾಗಿದೆ. ಉದಾಹರಣಾರ್ಥವಾಗಿ, ಕೈಮಗ್ಗಗಳ ಮೇಲೆ ವಸ್ತ್ರಗಳನ್ನು ನೇಯುವಾಗ, ನೇಯುವ ಯಾವತ್ತು ಕೆಲಸಗ ಳನ್ನು ಒಬ್ಬನೇ ಮಾಡ ಬೇಕಾಗುವದು. ಆದರೆ ಯಂತ್ರಗಳನ್ನು ಉಪಯೋಗಿಸು ವದರಿಂದ ಒಂದೊಂದು ವಿಧದ ಕೆಲಸವನ್ನು ಬೇರೆ ಬೇರೆ ಕೂಲಿಕಾರರು ಮಾಡು ತ್ತಾರೆ. ಆದ್ದರಿಂದ, ಉತ್ಪನ್ನವು ವೃದ್ಧಿಯಾಗುವದಕ್ಕೆ ಬಹಳ ಸಹಾಯವಾಗುತ್ತದೆ.

ತುಸು ಬಂಡವಲವನ್ನು ಹಾಕಿ ಅಲ್ಪಸ್ವಲ್ಪ ಕೆಲಸವನ್ನು ನಡಿಸುವ ಸಾವುಕಾರನಿಗೆ ಬಹು ಕ್ರಯದ ಯಂತ್ರಗಳನ್ನು ಕೊಳ್ಳುವದಕ್ಕೆ ಶಕ್ತಿ ಸಾಲುವದಿಲ್ಲ. ಯಾಕಂದರೆ, ಆ ಯಂತ್ರಗಳು ಯಾವಾಗಲೂ ನಡೆಯುವದಕ್ಕೆ ಬೇಕಾಗುವಷ್ಟು ಕೆಲಸ ಪೂರೈಸಿ ಕೊಡುವದು ಅವನಿಂದ ಆಗುವದಿಲ್ಲ. ಕೆಲವು ಸರಕುಗಳು ಸ್ವಲ್ಪ ಬೇಕಾಗುವದರಿಂದ ಅವುಗಳ ಬೇಡಿಕೆಯು ನಿಯಮಿತವಾಗಿರುವದು. ಈ ಸರಕುಗಳು ಜನರಿಗೆ ಬಹಳ ಬೇಕಾದರೆ, ಅವುಗಳನ್ನು ಉತ್ಪನ್ನ ಮಾಡುವ ಖರ್ಚು ಬಹಳ ಕಡಿಮೆ ಬೀಳ ಬಹುದು. ಈ ವಿಷಯವಾಗಿ ಇಂಗ್ಲಂಡದೊಳಗಿನ ಸಣ್ಣ ಡೋಣಿಗಳನ್ನು ಮಾಡುವ ಉದ್ಯೋಗವು ಉತ್ಕೃಷ್ಟವಾದ ದೃಷ್ಟಾಂತವಾಗಿದೆ. ಕೆಲವು ವರ್ಷಗಳ ಹಿಂದೆ ಒಬ್ಬನು ಇಂಥ ಡೋಣಿಗಳನ್ನು ಮಾಡುವ ಒಂದು ಯಂತ್ರವನ್ನು ಮಾಡಿದನು. ಈ ಯಂತ್ರದಿಂದ ಡೋಣಿಗಳ ಕ್ರಯವು ನೂರಕ್ಕೆ ೩೦ರಂತೆ ಕಡಿಮೆಯಾಗುವ ಹಾಗಿತ್ತು. ಆದರೂ ಡೋಣಿಗಳನ್ನು ಮಾಡುವವರು ಈ ಯಂತ್ರವನ್ನು ಕೊಳ್ಳಲಿಲ್ಲ. ಯಾಕಂದರೆ, ಆ ಯಂತ್ರದಿಂದ ಕೆಲಸವು ಬಹು ತೀವ್ರವಾಗುವದರಿಂದ ಸ್ವಲ್ಪ ಅವಧಿಯೊಳಗೆ ಒಂದು ವರ್ಷದೊಳಗೆ ಮಾಡಲ್ಪಡುವ ಯಾವತ್ತು ಡೋಣಿಗಳಿಗೆ ಬೇಕಾಗುವ ಹಲಿಗೆಗಳಿಗಿಂತ ಹೆಚ್ಚು ಹಲಿಗೆಗಳು ಸಿದ್ಧವಾಗುತ್ತಿದ್ದವು. ಆದ್ದರಿಂದ ಯಾವನಾದರೊಬ್ಬ ಡೋಣಿಗಳನ್ನು ಮಾಡುವವನು ಬಹಳ ಬೆಲೆ ಕೊಟ್ಟು ಇಂಥಾದ್ದೊಂದು ಯಂತ್ರವನ್ನು ಕೊಂಡಿದ್ದರೂ, ಅದನ್ನು ವರ್ಷದೊಳಗೆ ಬಹುತರ ಒಂದು ತಿಂಗಳಿಗಿಂತಲೂ ಹೆಚ್ಚು ದಿವಸ ನಡಿಸ ಬೇಕಾಗುತ್ತಿದ್ದಿಲ್ಲ. ಉಳಿದ ಹನ್ನೊಂದು ತಿಂಗಳು ಈ ಯಂತ್ರವು ಕೆಲಸವಿಲ್ಲದೆ ಬೀಳುವವಾದ್ದರಿಂದ ಅದಕ್ಕೆ ವೆಚ್ಚವಾದ ಬಂಡವಲದ ಮೇಲೆ ಅದರ ಯಜಮಾನನಿಗೆ ಏನು ಲಾಭ ಬರುವ ಹಾಗಿದ್ದಿಲ್ಲ. ಆದಕಾರಣ, ಇಂಗ್ಲಂಡದಲ್ಲಿ ಡೋಣಿಗಳ ಬೇಡಿಕೆಯು ಅತಿಶಯವಾಗಿ ಬೆಳೆದ ಹೊರ್ತು, ಇಲ್ಲವೆ ಅನೇಕ ದೇಶಗಳಲ್ಲಿ ಬೇಕಾಗುವ ಯಾವತ್ತು ಡೋಣಿಗಳನ್ನು ಒಬ್ಬನಿಂದಲೇ ಮಾಡಿಸಿದ ಹೊರ್ತು, ಇಂಥ ಯಂತ್ರವನ್ನು ಬಹುತರ ಯಾರೂ ಉಪಯೋಗಿಸಲಿಕ್ಕಿಲ್ಲ.

**ಸಾವುಕಾರನಿಗೆ ಶ್ರಮದ ಮೂಲಕವಾಗಿ ತಗಲುವ ಖರ್ಚು ಸಂಬಳದ ಪ್ರಮಾಣದಿಂದ ಹೆಚ್ಚುಕಡಿಮೆಯಾಗುವದಿಲ್ಲ.**—ಕೂಲಿಯವರ ಶ್ರಮಕ್ಕಾಗಿ ಸಾವುಕಾರನಿಗೆ ಬೀಳುವ ಖರ್ಚು, ಕೂಲಿಕಾರರಿಗೆ ಕೊಟ್ಟ ಸಂಬಳದ ಮಾನದಂತೆ ಬೀಳುವದಿಲ್ಲವೆಂಬದನ್ನು ಲಕ್ಷ್ಯದಲ್ಲಿಡ ತಕ್ಕದ್ದು. ಸಾವುಕಾರನಿಗೆ ಬೀಳುವ ಖರ್ಚು ಕೂಲಿಕಾರರಿಗೆ ಕೊಟ್ಟ ಸಂಬಳಕ್ಕೂ, ಅವರ ಶ್ರಮದಿಂದುಂಟಾದ ಉತ್ಪನ್ನದ ಬೆಲೆಗೂ ಇರುವ ಪ್ರಮಾಣವನ್ನನುಸರಿಸಿ ಹೆಚ್ಚುಕಡಿಮೆಯಾಗುವದು.

ಉದಾಹರಣಾರ್ಥವಾಗಿ, ಗಡಿಯಾಲಗಳನ್ನು ಮಾಡುವ ಕೆಲಸದಲ್ಲಿ, ಇಲ್ಲವೆ ಕಾಜಿನ ಒಡವೆಗಳನ್ನು ಮಾಡುವ ಕೆಲಸದಲ್ಲಿ, ಬಹಳ ಸಂಬಳವನ್ನು ತಕ್ಕೊಳ್ಳುವ ಕುಶಲರಾದ ಶಿಲ್ಪಿಗರನ್ನು ಹಚ್ಚುವದು, ಅಡ್ಡ ಕಸಬಿಗಳನ್ನು ಕಡಿಮೆ ಸಂಬಳ ಕೊಟ್ಟು ಹಚ್ಚುವದಕ್ಕಿಂತಲೂ ವಿಶೇಷ ಲಾಭಕರವಾಗಿರುವದೆಂಬುವದು ಪ್ರಸಿದ್ಧವಾಗಿದೆ. ಅಡ್ಡ ಕಸಬಿಗಳಿಗೆ ಒಳ್ಳೇ ಕಸಬುದಾರರ ಅರ್ಧದಷ್ಟು ಕೂಲಿಯನ್ನೇ ಕೊಡ ಬೇಕಾದರೂ, ಕಸಬುದಾರರನ್ನೇ ಕೆಲಸಕ್ಕೆ ಹಚ್ಚುವದರಿಂದ ಒಟ್ಟು ಸಂಬಳದ ಖರ್ಚು ಕಡಿಮೆ ಬೀಳುತ್ತದೆ. ಫ್ರಾನ್ಸ ದೇಶದಲ್ಲಿ ಲೋಹಮಾರ್ಗವನ್ನು ಮಾಡುವ ಗುತ್ತಿಗೆಯನ್ನು ಹಿಡಿದ ಮಿಸ್ತರ ಬ್ರಾಸಿ ಎಂಬವನು, ಫ್ರಾನ್ಸ ದೇಶದಲ್ಲಿ ಕೆಲಸ ಮಾಡುವದಕ್ಕಾಗಿ ಇಂಗ್ಲಂಡದಿಂದ 'ನ್ಯಾಹ್ವೀಜ' ಎಂಬ ಉಪ್ಪಾರರ ಕೆಲಸ ಮಾಡುವ ಎಷ್ಟೋ ಆಳುಗಳನ್ನು ಒಯ್ದಿದ್ದನು. ಇದರಿಂದ ಅವನಿಗೆ ಬಹಳ ಲಾಭ ಉಂಟಾಯಿತು. ಯಾಕಂದರೆ, ಇಂಗ್ಲೀಷ 'ನ್ಯಾಹ್ವಿ'ಗಳಿಗೆ ಫ್ರೆಂಚ 'ನ್ಯಾಹ್ವಿ'ಗಳ ಇಮ್ಮಡಿ ಸಂಬಳವನ್ನು ಕೊಡ ಬೇಕಾದಾಗ್ಯೂ, ಇಂಗ್ಲೀಷ 'ನ್ಯಾಹ್ವಿಗಳು' ಫ್ರೆಂಚರ ಇಮ್ಮಡಿಗಿಂತಲೂ ಹೆಚ್ಚು ಕೆಲಸ ಮಾಡುವರು. ಆದಕಾರಣ ಇಂಗ್ಲೀಷ ಕೂಲಿಕಾರನಿಗೆ ಫ್ರೆಂಚ ಕೂಲಿಕಾರನ ಎರಡಷ್ಟು ಕೂಲಿಯನ್ನು ಕೊಡ ಬೇಕಾದರೂ, ಇಂಗ್ಲೀಷ ಕೂಲಿಕಾರನ ಶ್ರಮವು ಫ್ರೆಂಚ ಕೂಲಿಕಾರನ ಶ್ರಮಕ್ಕಿಂತಲೂ ಅಗ್ಗ ದೊರೆದಂತಾಯಿತು.

ಶ್ರಮದ ಉತ್ಪಾದಕತ್ವದಿಂದ ಉಂಟಾಗುವ ಮತ್ತೊಂದು ಪರಿಣಾಮವು ಉಂಟು. ಈ ಪರಿಣಾಮವನ್ನು ಇಲ್ಲಿ ಆಲೋಚಿಸ ತಕ್ಕದ್ದು. ಶ್ರಮವು ಹೆಚ್ಚು ಉತ್ಪಾದಕವಾಗುವದರಿಂದ ಸ್ವತಃ ಕೂಲಿಕಾರರಿಗೆ ಸಹ ಬಹಳ ಕಲ್ಯಾಣವಾಗುವದು. ಹ್ಯಾಗಂದರೆ, ಶ್ರಮವು ಹೆಚ್ಚು ಉತ್ಪಾದಕವಾಗುವದಂದರೆ, ಅಷ್ಟೇ ಬಂಡವಲ ಶ್ರಮಗಳಿಂದ ಹೆಚ್ಚು ಸಂಪತ್ತು ಹುಟ್ಟುವದೆಂಬ ಅರ್ಥವು. ಆದಕಾರಣ, ಕ್ರಯಗಳು ಯಥಾ ಪ್ರಕಾರವಾಗಿ ಇದ್ದದ್ದುಂಟಾದರೆ, ಶ್ರಮದ ಉತ್ಪಾದಕತ್ವವು ವೃದ್ಧಿಯಾಗುವದರಿಂದ ಬಂಡವಲಕ್ಕೆ ಬರುವ ಲಾಭವೂ, ಶ್ರಮಕರ್ತರಿಗೆ ಕೊಡಬೇಕಾಗುವ ಸಂಬಳವೂ, ಎರಡೂ ಒಮ್ಮೇಲೆ ಹೆಚ್ಚಾಗ ಬಹುದು. ಉದಾಹರಣಾರ್ಥವಾಗಿ ಒಕ್ಕಲತನ ಮಾಡುವ ಕೂಲಿಕಾರರೊಳಗೆ ವಿದ್ಯಾಪ್ರಸಾರವಾಯಿತೆಂದು ಕಲ್ಪಿಸಿರಿ. ಈ ವಿದ್ಯೆಯಿಂದ ಅವರು ಹೆಚ್ಚು ಕುಶಲರೂ, ಪ್ರಾಮಾಣಿಕರೂ, ಮಿತದಿಂದ ಇರುವಂಥವರೂ, ಆಗುವ ಕಾರಣ ಅವರ ಶ್ರಮವು ಹೆಚ್ಚು ಉತ್ಪಾದಕವಾಗ ಬಹುದು. ಹೀಗಾಗಲಾಗಿ, ಅವರನ್ನು ದುಡಿಸಿಕೊಳ್ಳುವ ಸಾವುಕಾರನು ತನಗೆ ಬರ ತಕ್ಕ ಲಾಭವನ್ನಾಗಲಿ, ಭೂಮಿಯ ಒಡೆಯನಿಗೆ ಕೊಡ

ತಕ್ಕ ಗೇಣಿಯನ್ನಾಗಲಿ ಕಡಿಮೆ ಮಾಡಿಕೊಳ್ಳದೆ, ಮತ್ತು ಹೊಲದ ಹುಟ್ಟುವಳಿಯ ಕ್ರಯವನ್ನು ಏರಿಸದೆ, ಅವರ ಸಂಬಳವನ್ನು ಹೆಚ್ಚಿಸುವ ಸಾಮರ್ಥ್ಯವುಳ್ಳವನಾಗುವನು.

ಬಂಡವಲದ ಲಾಭವು.—ಬೇರೆ ಬೇರೆ ಕಾಲಗಳಲ್ಲಿಯೂ, ಬೇರೆ ಬೇರೆ ದೇಶಗಳಲ್ಲಿಯೂ, ಲಾಭದ ಸರಾಸರಿ ದರವನ್ನು ಗೊತ್ತು ಮಾಡುವಂಥ ನಾನಾ ವಿಧದ ಕಾರಣಗಳನ್ನು ಇಲ್ಲಿ ಹೇಳುವದು ಶಕ್ಯವಲ್ಲವು. ಸಂಪತ್ತಿನ ವಿಭಾಗವನ್ನು ಕುರಿತು ಮುಂದೆ ಬರುವ ಒಂದು ಭಾಗದಲ್ಲಿ ಈ ವಿಷಯವು ವಿವೇಚಿಸಲ್ಪಡುವದು. ಇಲ್ಲಿ ತಿಳಿಸ ಬೇಕಾದ ಅಂಶವೇನಂದರೆ, ಒಂದೇ ದೇಶದಲ್ಲಿ ಒಂದೇ ಕಾಲಕ್ಕೆ ಯಾವತ್ತು ಉದ್ಯೋಗಗಳಲ್ಲಿ ಬಂಡವಲಕ್ಕೆ ಬರುವ ಬಡ್ಡಿಯು ಸರಾಸರಿ ಒಂದೇ ದರವನ್ನು ಸಮೀಪಿಸುವಂತೆ ಮಾಡುವ ಕೆಲವು ಕಾರಣಗಳು ಯಾವಾಗಲೂ ತಮ್ಮ ಕಾರ್ಯವನ್ನು ನಡಿಸುತ್ತಿರುವವು. ಒಂದು ಉದ್ಯೋಗಕ್ಕಿಂತಲೂ ಮತ್ತೊಂದು ಉದ್ಯೋಗದಲ್ಲಿ ಬಂಡವಲಕ್ಕೆ ಒಂದೇ ಸಮನಾಗಿ ಯಾವಾಗಲೂ ಹೆಚ್ಚು ಲಾಭ ಬರುವದು ಕಂಡು ಬಂದರೆ, ಈ ಹೆಚ್ಚು ಲಾಭವು ವಾಸ್ತವಿಕವಾಗಿ ಬಂಡವಲಕ್ಕೆ ಬರುವ ಲಾಭವೆಂದು ತಿಳಿಯಲಾಗದು. ಈ ಹೆಚ್ಚಿನ ಲಾಭವು ಒಂದು ವೇಳೆ ಶ್ರಮದ ಸಂಬಳವಾಗಿರ ಬಹುದು; ಇಲ್ಲವೆ ಲುಕಸಾನಿನ ಭಯಕ್ಕೋಸ್ಕರ ದೊರಿಯುವ ಪ್ರತಿಫಲವಾಗಿರ ಬಹುದು; ಇಲ್ಲವೆ ಆ ಉದ್ಯೋಗವು ಅಸಹ್ಯವಾಗಿರುವದರಿಂದಾಗಲಿ, ಕೀಳಾಗಿರುವದರಿಂದಾಗಲಿ ದೊರಿಯುವ ಅಂಶವಾಗಿರ ಬಹುದು; ಅಥವಾ ಆ ಉದ್ಯೋಗ ನಡಿಸುವವರಿಗೆ, ನೈಸರ್ಗಿಕವಾಗಿ ಅಥವಾ ಕೃತ್ರಿಮ ರೀತಿಯಿಂದ ಅವರ ಉದ್ಯೋಗದ ಗುತ್ತೆಯು ದೊರೆದದ್ದರಿಂದ ಸಹ ಈ ವಿಶೇಷ ಲಾಭವು ಬರುತ್ತಿರ ಬಹುದು. ಒಮ್ಮೊಮ್ಮೆ ಯಾವದೊಂದು ವ್ಯಾಪಾರವನ್ನು ನಡಿಸುವವರೆಲ್ಲರೂ ಕೂಡಿ ಮಾತಾಡಿಕೊಂಡು ದೇಶದೊಳಗಿನ ತಮ್ಮ ವ್ಯಾಪಾರದ ಯಾವತ್ತು ಸರಕನ್ನು ಕೊಂಡು, ಅದರ ಕ್ರಯವನ್ನು ತಮ್ಮ ಮನಸಿಗೆ ಬಂದಂತೆ ಏರಿಸುವರು. ಈ ಬಗೆಯ ಒಳಸಂಚಿಗೆ ಇಂಗ್ಲೀಷ ಭಾಷೆಯಲ್ಲಿ 'ರಿಂಗ' ಎಂಬ ಹೆಸರುಂಟು. ಕೆಲವು ವರ್ಷಗಳ ಹಿಂದೆ ಕೊಯಿನನದ ವಿಷಯದಲ್ಲಿ ಈ ಬಗೆಯ ಸಂಚು ಮಾಡಲ್ಪಟ್ಟಿತು. ಆಗ್ಯೆ ಕೆಲ ಸಾವುಕಾರರು ಕೂಡಿ, ಪೃಥ್ವಿಯೊಳಗಿನ ಯಾವತ್ತು ಕೊಯಿನನವನ್ನು ಕೊಳ್ಳುವ ನಿಶ್ಚಯ ಮಾಡಿ, ಆ ಪ್ರಕಾರ ಕೊಂಡರು. ಅನಂತರ ಅದರ ಧಾರಣೆಯನ್ನು ಇಮ್ಮಡಿ ಏರಿಸಿ, ಅಮಿತ ಲಾಭವನ್ನು ಗಳಿಸಿದರು. ಇದು, ಕೃತ್ರಿಮ ರೀತಿಯಿಂದ ಗುತ್ತೇ ಮಾಡಿಕೊಳ್ಳುವದರಿಂದ ಉಂಟಾಗುವ ಅಸಾಧಾರಣವಾದ ಲಾಭದ

ದೃಷ್ಟಾಂತವಾಗಿದೆ. ಆದರೆ ಈ ಯಾವತ್ತು ಅವಾಂತರ ಪ್ರತಿಬಂಧಕ ಕಾರಣ ಗಳನ್ನು ತೆಗೆದು ಹಾಕಲಾಗಿ, ಬಂಡವಲಕ್ಕೆ ಬರುವ ಬಡ್ಡಿಯು ಸರ್‍ವಸರಿ ಒಂದೇ ದರಕ್ಕೆ ಇಳಿಯುವ ಕ್ರಮವನ್ನು ಹಿಡಿಯುತ್ತದೆಂದು ಕಂಡು ಬರುವದು.

ಬಂಡವಲದ ಸ್ವರೂಪವನ್ನು ಮುಂಚಿತವಾಗಿಯೇ ವಿವರಿಸಿದ್ದೇವೆ. ಆದಕಾರಣ, ಭೂಮಿ, ಶ್ರಮ, ಬಂಡವಲ, ಎಂಬೀ ಮೂರು ಸಾಧನಗಳು ಏಕತ್ರ ಕೂಡುವದರಿಂದ ಉತ್ಪನ್ನವಾಗುವ ಸಂಪತ್ತಿನಲ್ಲಿ, ಬಂಡವಲಕ್ಕೆ ಸಲ್ಲ ತಕ್ಕಂಥ ಭಾಗವೇ ಲಾಭವೆಂದು ಇಲ್ಲಿ ಹೇಳಿದರೆ ಸಾಕು; ಇದಕ್ಕೂ ವಿಶೇಷ ಹೇಳುವ ಪ್ರಯೋಜನ ವಿಲ್ಲ. ಈ ಪ್ರತಿಫಲವು ಬೇರೆ ಬೇರೆ ಕಾಲಗಳಲ್ಲಿಯೂ ಬೇರೆ ಬೇರೆ ದೇಶಗಳಲ್ಲಿಯೂ ಹೆಚ್ಚುಕಡಿಮೆಯಾಗಿರುವದು. ಕೆಲವು ದೇಶಗಳಲ್ಲಿ ಸಾವುಕಾರರು ವ್ಯಾಪಾರದಲ್ಲಿ ಹಾಕಿದ ಪ್ರತಿ ನೂರು ರೂಪಾಯಿಗೆ ೧೦ ರೂಪಾಯಿಯಂತೆ ಲಾಭವು ನಿರ್ವಿವಾದವಾಗಿ ಬರುತ್ತದೆ. ಇದಲ್ಲದೆ ಸಾವುಕಾರರಿಗೆ ಕೆಲಸದ ಮೇಲೆ ದೃಷ್ಟಿ ಇಟ್ಟಿದ್ದಕ್ಕಾಗಿ ದೊರೆಯುವ ಸಂಬಳವೂ, ಅವರ ಸಾಹಸಕ್ಕಾಗಿ ದೊರೆಯುವ ಪ್ರತಿಫಲವೂ ಬೇರೆ. ಇಂಥ ಪ್ರಸಕ್ತಿಯಲ್ಲಿ ಬಡ್ಡಿಯ ದರವು ನೂರಕ್ಕೆ ೧೦ರಂತೆ ಉಂಟೆಂದು ಹೇಳುವರು. ಆದರೆ ಬಡ್ಡಿಯ ಸರಾಸರಿ ದರವು ಇದಕ್ಕೂ ಬಹಳ ಕಡಿಮೆ ಇದ್ದ ದೇಶಗಳೇ ಬಹಳ. ಇಂಗ್ಲಂಡದಲ್ಲಿ ಬಡ್ಡಿಯ ದರವು ನೂರಕ್ಕೆ ೩ರಕ್ಕಿಂತಲೂ ಕಡಿಮೆಯಾಗಿದೆಯೆಂದು ಅನ್ನ ಬಹುದು.

**ಲಾಭ ಕ್ರಯಗಳ ಪರಸ್ಪರ ಸಂಬಂಧ.**—ಸಾವುಕಾರರೂ ಶ್ರಮಕರ್ತರೂ ಕೂಡಿ ಉತ್ಪನ್ನ ಮಾಡಿದ ಸರಕಿನ ಕ್ರಯದಲ್ಲಿ, ಸಾವುಕಾರರಿಗೂ ಶ್ರಮಕರ್ತರಿಗೂ ಸಲ್ಲ ತಕ್ಕ ಪ್ರತಿಫಲದ (ಅಂದರೆ ಲಾಭ ಸಂಬಳಗಳ) ಸಮಾವೇಶವಾಗಲಿಕ್ಕೇ ಬೇಕು. ಮತ್ತು ಈ ಕ್ರಯವು, ಸಾವುಕಾರನಿಗೂ ಶ್ರಮಕರ್ತನಿಗೂ ಅವರ ಉದ್ಯೋಗದಲ್ಲಿ ವಾಡಿಕೆಯಾಗಿ ದೊರೆಯುವ ದರದ ಲಾಭ ಸಂಬಳಗಳು ದೊರೆಯುವದಕ್ಕೆ ಸಾಕಾಗುವಷ್ಟು ಅವಶ್ಯವಾಗಿ ಇರ ಬೇಕಾಗುವದು. ಹೀಗಿದ್ದರೆ ಮಾತ್ರ ಆ ಉದ್ಯೋಗವು ಮುಂದಕ್ಕೆ ಸಾಗುವದು, ಇಲ್ಲದಿದ್ದರೆ ಸಾಗಲಿಕ್ಕಿಲ್ಲ. ಕ್ರಯವು ಇದಕ್ಕೂ ಕಡಿಮೆಯಾದಲ್ಲಿ, ಸಾವುಕಾರನಿಗೂ ಶ್ರಮಕರ್ತನಿಗೂ ಬೇರೆ ಉದ್ಯೋಗವನ್ನು ಕೈಕೊಳ್ಳುವದೇ ವಿಶೇಷ ಲಾಭವುಳ್ಳದ್ದಾಗುವದು. ಅದರಿಂದ ಈ ಸರಕಿನ ಉತ್ಪತ್ತಿಗೆ ಪ್ರತಿಬಂಧ ಉಂಟಾಗಿ, ಕಡಿಮೆ ಉತ್ಪನ್ನವಾಗುವದು. ಇದರ ಮೇಲಿಂದ ಸಿದ್ಧವಾಗುವದೇನಂದರೆ, ಶ್ರಮ ಬಂಡವಲಗಳ ಉತ್ಪಾದಕ ಶಕ್ತಿಯು ಬೆಳೆಯದೆ ಯಾವದೊಂದು ಕಾರಣದಿಂದ ದೇಶದೊಳಗಿನ ವಾಡಿಕೆಯಾದ ಬಡ್ಡಿಯ ದರವು, ಇಲ್ಲವೆ ಯಾವದೊಂದು ಉದ್ಯೋಗದೊಳಗಿನ ಸಂಬ

ಳದ ದರವು ಏರಲಾಗಿ, ಆ ಉದ್ಯೋಗದಿಂದ ಹುಟ್ಟುವ ಸರಕಿಗೆ ಹೆಚ್ಚು ಕ್ರಯ ಕೊಡ ಬೇಕಾಗುವದು.

ಆದರೆ ಸ್ವಲ್ಪ ತಿಳಿದು ನೋಡಿದರೆ, ಲಾಭ ಸಂಬಳಗಳ ದರವು ಬಂಡವಲ ಶ್ರಮಗಳ ಉತ್ಪಾದಕತ್ವದ ಮೇಲೆಯೇ ಅವಲಂಬಿಸಿರುವದೆಂಬದು ಲಕ್ಷ್ಯದಲ್ಲಿ ಬರುವದು. ಹ್ಯಾಗಂದರೆ, ಅಷ್ಟೇ ಬಂಡವಲ ಶ್ರಮಗಳಿಂದ ಹೆಚ್ಚು ಸರಕುಗಳು ಹುಟ್ಟಲಾಗಿ ಅವುಗಳನ್ನು ಉತ್ಪನ್ನ ಮಾಡುವ ಖರ್ಚು ಕಡಿಮೆಯಾಗುವದು, ಹಾಗೂ ಅದರಿಂದ ಸಂಬಳ ಲಾಭಗಳು ಹೆಚ್ಚುವವು, ಮತ್ತು ಅದೇ ಕಾಲಕ್ಕೆ ಸರಕುಗಳ ಕ್ರಯಗಳು ಕಡಿಮೆ ಇರ ಬಹುದು. ಇದರ ಮೇಲಿಂದ ಕಂಡು ಬರುವದೇನಂದರೆ, ಲಾಭವು ಹೆಚ್ಚುಕಡಿಮೆಯಾಗುವದು ಯಾವಾಗಲೂ ಕ್ರಯಗಳು ಹೆಚ್ಚುಕಡಿಮೆಯಾಗುವದನ್ನು ಅವಲಂಬಿಸಿರುವದಿಲ್ಲ. ಅಂದರೆ, ಕ್ರಯಗಳು ಏರಿದರೆ ಅದರಿಂದ ಲಾಭವು ಹೆಚ್ಚಾಗುವದೆಂಬ, ಹಾಗೂ ಕ್ರಯಗಳು ಇಳಿದರೆ ಲಾಭವು ಕಡಿಮೆಯಾಗುವದೆಂಬ ನಿಶ್ಚಯವಿಲ್ಲ. ಉದಾಹರಣಾರ್ಥವಾಗಿ, ಒಂದು ಊರಲ್ಲಿ ಒಬ್ಬ ಬಡಿಗನು ಒಂದು ಹೊಸ ಯಂತ್ರವನ್ನು ಶೋಧಿಸಿ ತೆಗೆದಿದ್ದರಿಂದ ಅವನ ಬಂಡವಲ ಶ್ರಮಗಳ ಉತ್ಪಾದಕ ಶಕ್ತಿಯು ನೂರಕ್ಕೆ ೫೦ರಂತೆ ಬೆಳೆಯಿತೆಂದು ಕಲ್ಪಿಸಿರಿ. ಅಂದರೆ, ಮೊದಲು ಅವನಿಗೆ ೧೦ ಪೆಟ್ಟಿಗೆಗಳನ್ನು, ಇಲ್ಲವೆ ೧೦ ಮೇಜುಗಳನ್ನು ಮಾಡುವದಕ್ಕೆ ಬೇಕಾದ ಶ್ರಮ ಬಂಡವಲಗಳಿಂದಲೇ ಈಗ ಅವನಿಗೆ ೧೫ ಪೆಟ್ಟಿಗೆಗಳನ್ನು, ಇಲ್ಲವೆ ೧೫ ಮೇಜುಗಳನ್ನು ಮಾಡಲಿಕ್ಕೆ ಶಕ್ತನಾಗಿದ್ದಾನೆ. ಪೆಟ್ಟಿಗೆ ಮೇಜುಗಳ ಕ್ರಯಗಳು ಇಳಿಯದೆ ಇದ್ದ ಪಕ್ಷದಲ್ಲಿ, ಅವನ ಬಂಡವಲ ಶ್ರಮಗಳಿಗೆ ಮೊದಲಿನದಕ್ಕಿಂತ ನೂರಕ್ಕೆ ೫೦ರಂತೆ ಹೆಚ್ಚು ಪ್ರತಿಫಲ ಬರುವದೆಂಬದು ಸ್ಪಷ್ಟವಾಗಿದೆ. ಈ ಪ್ರಸಕ್ತಿಯಲ್ಲಿ ಅವನ ಸಂಬಳ ಲಾಭಗಳೆರಡೂ ಹೆಚ್ಚುವವು, ಮತ್ತು ಉತ್ಪನ್ನ ಮಾಡುವ ಖರ್ಚು ಇಳಿಯುವದು. ಆದರೆ, ಅವನ ಹೊಸ ಯಂತ್ರದ ಎಲ್ಲ ಲಾಭವು ಅವನಿಗೆ ಕಡೆತನಕ ದೊರೆದೀತೆಂಬುವದು ಸಂಭವಿಸುವದಿಲ್ಲ. ಯಾಕಂದರೆ ಈ ಶೋಧದಿಂದ ಪೆಟ್ಟಿಗೆಗಳು, ಕುರ್ಚಿಗಳು, ಮೇಜುಗಳು ಮುಂತಾದವುಗಳ ಪೂರೈಕೆ ಹೆಚ್ಚಾಗುವದರಿಂದ ಅವುಗಳ ಕ್ರಯವು ಅವಶ್ಯವಾಗಿ ಇಳಿಯುವದು. ಬೇಡಿಕೆಯನ್ನು ಪೂರೈಕೆಗೆ ಸರಿಯಾಗಿ ಹ್ಯಾಗಾದರೂ ಮಾಡಲಿಕ್ಕೇ ಬೇಕೆಂದು ಹಿಂದೆ ಅನೇಕ ಸಾರಿ ಹೇಳಿದ್ದೇವೆ. ಈ ಪ್ರಸಕ್ತಿಯಲ್ಲಿ ಪೂರೈಕೆಯು ನೂರಕ್ಕೆ ೫೦ರಂತೆ ಬೆಳೆದದೆ. ಈ ಹೆಚ್ಚಿನ ಪೂರೈಕೆಯು ಆಗುವದಕ್ಕಿಂತ ಮೊದಲು ಪೂರೈಕೆಯು ಬೇಡಿಕೆಗೆ ಸರಿಯಾಗಿತ್ತೆಂದು ಅನ್ನ ಬಹುದು. ಆದ್ದರಿಂದ, ಆ ಬಡಿಗನಿಗೆ ತಾನು ಮಾಡಿದ ಸಾಮಾನಿಗೆ ಗಿರಾಕಿ

ಗಳು ಬರ ಬೇಕಾದರೆ, ಅದರ ಕ್ರಯ ಇಳಿಸುವದು ಅಗತ್ಯವಾಗುವದು. ತನ್ನ ಸರಕಿನ ಕ್ರಯವನ್ನು ನೂರಕ್ಕೆ ೧೫ರಂತೆ ಇಳಿಸಿದರೆ, ತನ್ನಲ್ಲಿದ್ದ ಎಲ್ಲ ದಾಸ್ತಾನ ಮಾರಾಟವಾಗುವದೆಂದು ಅವನಿಗೆ ಒಂದು ವೇಳೆ ಅನುಭವದಿಂದ ತಿಳಿಯ ಬಹುದು. ಆ ಕಾರಣ ಅವನು ತನ್ನ ಶೋಧದಿಂದ ಉಂಟಾಗುವ ಎಲ್ಲ ಲಾಭದಲ್ಲಿ ನೂರಕ್ಕೆ ೧೫ರಂತೆ ಲಾಭವನ್ನು ಕಡಿಮೆ ಮಾಡಿಕೊಂಡು, ತನಗೆ ವಾಡಿಕೆಯಾಗಿ ದೊರೆಯುವ ಸಂಬಳ ಲಾಭಗಳಿಗಿಂತಲೂ ನೂರಕ್ಕೆ ೩೦ರಂತೆ ಮಾತ್ರಹೆಚ್ಚು ಲಾಭ ಕಟ್ಟಿ ತನ್ನ ಸರಕು ಮಾರುವನು. ಈ ಉದಾಹರಣದಲ್ಲಿ ಸಂಬಳ ಲಾಭಗಳೆರಡೂ ಹೆಚ್ಚಿದ್ದರೂ, ಅದೇ ಸಮಯಕ್ಕೆ ಉತ್ಪನ್ನ ಮಾಡುವ ಖರ್ಚು ಕಡಿಮೆಯಾದ್ದರಿಂದ ಸರಕಿನ ಧಾರಣೆ ಇಳಿದಿರುವದು.

ಮೇಲೆ ವಿಚಾರಿಸಿದ ಪ್ರಸಕ್ತಿಯಲ್ಲಿ, ಹೊಸ ಯಂತ್ರವನ್ನು ಹುಡುಕಿ ತೆಗೆದ ಊರ ಬಡಿಗನಿಗೆ ಅವನ ಊರಲ್ಲಿ ಪ್ರತಿಸ್ಪರ್ಧಿಗಳು ಇಲ್ಲವೆಂದು ಗ್ರಹಿಸಲ್ಪಟ್ಟದೆ. ಆದರೆ ಅದೇ ಊರಲ್ಲಿ ಬೇರೆ ಮೂರು ನಾಲ್ಕು ಬಡಿಗರಿದ್ದರೆಂದು ಕಲ್ಪಿಸಿರಿ. ಅವರೆಲ್ಲರೂ ಆದಷ್ಟು ತ್ವರೆಯಾಗಿ ಆ ಮಾದರಿಯ ಯಂತ್ರಗಳನ್ನು ತರುವರು. ಅದರಿಂದ, ಕುರ್ಚಿ, ಮೇಜು ಮುಂತಾದವುಗಳ ಪೂರೈಕೆಯು ಬಹಳವಾಗಿ ಹೆಚ್ಚುವದು. ಪ್ರತಿಯೊಬ್ಬ ಬಡಿಗನು ತನ್ನ ಕಡೆಗೆ ಗಿರಾಕಿಗಳು ಬರ ಬೇಕೆಂದು ಬೇರೆಯವರಿಗಿಂತಲೂ ತನ್ನ ಸರಕು ಅಗ್ಗವಾಗಿ ಮಾರಲೆತ್ನಿಸುವನು. ಈ ಪ್ರಕಾರ ಕಟ್ಟ ಕಡೆಗೆ ಎಲ್ಲ ಬಡಿಗರೂ ಆ ಶೋಧದಿಂದ ಉಂಟಾಗುವ ಯಾವತ್ತೂ ಲಾಭವನ್ನು ಗಿರಾಕಿಗಳ ಪಾಲಿಗೆ ಬಿಟ್ಟು ಬಿಡುವದಕ್ಕೆ ಸಿದ್ಧರಾಗುವರು, ಹಾಗೂ ಅವರ ಸಂಬಳ ಲಾಭಗಳು ಪೂರ್ವ ಸ್ಥಿತಿಗೆ ಬರುವವು, ಮತ್ತು ಕ್ರಯಗಳು ನೂರಕ್ಕೆ ೫೦ರಂತೆ ಇಳಿಯುವವು. ಈ ಉದಾಹರಣದಿಂದ ವ್ಯಕ್ತವಾಗುವದೇನಂದರೆ:—

೧. ಶ್ರಮ ಬಂಡವಲಗಳ ಉತ್ಪಾದಕ ಶಕ್ತಿಯು ಬೆಳೆಯಲು, ಸಂಬಳವೂ ಲಾಭವೂ ಏರುವವು, ಮತ್ತು ಉತ್ಪನ್ನ ಮಾಡುವ ಖರ್ಚು ಕಡಿಮೆಯಾಗುವದು.

೨. ಈ ಮೇರಿಗೆ ಬಂಡವಲ ಶ್ರಮಗಳ ಉತ್ಪಾದಕತ್ವವು ವೃದ್ಧಿಯಾಗಲಾಗಿ ಸಂಬಳವೂ ಲಾಭವೂ ಹೆಚ್ಚುವವು, ಮತ್ತು ಅದೇ ಕಾಲಕ್ಕೆ ಧಾರಣೆಗಳು ಇಳಿಯುವವು.

೩. ಒಂದು ಕಡೆಗೆ ಸಾವುಕಾರರೊಳಗೂ, ಮತ್ತೊಂದು ಕಡೆಗೆ ಶ್ರಮಕರ್ತರೊಳಗೂ ಮೇಲಾಟವು ಅಪ್ರತಿಹತವಾಗಿ ನಡಿದರೆ, ಶ್ರಮ ಬಂಡವಲಗಳ ಉತ್ಪಾದಕ ಶಕ್ತಿಯು ಬೆಳೆಯುವದರಿಂದ ಉಂಟಾಗುವ ಯಾವತ್ತು ಲಾಭವು ವಾಡಿಕೆಯಾಗಿ ಸರಕುಗಳನ್ನು ಉಪಯೋಗಿಸುವವರಿಗೆ ದೊರೆಯುವದು. ಅಂ

ದರೆ, ಈ ವೃದ್ಧಿಯಾದ ಉತ್ಪಾದಕ ಶಕ್ತಿಯಿಂದ ಕ್ರಯಗಳು ಮಾತ್ರ ಇಳಿಯುವವು; ಶ್ರಮಕರ್ತರ ಸಂಬಳವಾಗಲಿ, ಬಂಡವಲಗಾರರ ಲಾಭವಾಗಲಿ, ಕಡೆ ತನಕ ಹೆಚ್ಚುವದಿಲ್ಲ.

ಈ ಸ್ಥಳದಲ್ಲಿ ಹೇಳ ತಕ್ಕ ಮತ್ತೊಂದು ಅಂಶವೇನಂದರೆ, ಉತ್ಪಾದಕ ಶಕ್ತಿಯು ವೃದ್ಧಿಯಾಗುವದರಿಂದ ಯಾವದೊಂದು ವಿವಕ್ಷಿತ ಸರಕು ಮಾತ್ರ ಅಗ್ಗವಾಗಿ, ಕೂಲಿಕಾರರ ಸಂಬಳದ ಹಣವೂ ಸಾವುಕಾರರ ಲಾಭವೂ ಒಂದು ವೇಳೆ ಬೆಳೆಯದೆ ಇದ್ದಾಗ್ಯೂ, ಈ ಹೆಚ್ಚಿದ ಉತ್ಪಾದಕ ಶಕ್ತಿಯಿಂದ ಶ್ರಮಕರ್ತರಿಗೂ ಸಾವುಕಾರರಿಗೂ ಮತ್ತೊಂದು ಕಡೆಯಿಂದ ಹಿತವಾಗುವದು. ಹ್ಯಾಗಂದರೆ, ಹೊಸ ಶೋಧದ ಮೂಲಕವಾಗಿ ಅಗ್ಗವಾದ ಸರಕು ಅವರಿಬ್ಬರೂ ಸಂಸಾರದಲ್ಲಿ ಉಪಯೋಗಿಸುವಂಥ ಸರಕಾಗಿರ ಬಹುದು. ಆದ್ದರಿಂದ, ಅವರಿಗೆ ಮೊದಲಿನಷ್ಟೇ ಸಂಬಳ ಲಾಭಗಳು ಬಂದರೂ, ಅವುಗಳಿಂದ ಕೊಳ್ಳಲಾಗುವ ಸರಕು ಮೊದಲಿನದಕ್ಕಿಂತ ಹೆಚ್ಚು ಬರುವದು. ಅಂದರೆ, ಸಂಬಳ ಹಾಗೂ ಲಾಭವಾಗಿ ಹಂಚಲ್ಪಟ್ಟ ಹಣದಲ್ಲಿದ್ದ ಸರಕು ಕೊಳ್ಳುವಶಕ್ತಿಯು ಹೆಚ್ಚುವದೆಂಬ ಭಾವವು. ಉದಾಹರಣಾರ್ಥವಾಗಿ, ಈ ಬಗೆಯ ಶೋಧದಿಂದ ನೂಲಿನ ವಸ್ತ್ರಗಳು ಅಗ್ಗವಾದವೆಂದು ತಿಳಿದರೆ, ಸಂಬಳದ ರಕಮು ಮೊದಲಿನಷ್ಟೇ ಇದ್ದಾಗ್ಯೂ, ವಸ್ತುತಃ ಸಂಬಳವು ಹೆಚ್ಚಿದಂತಾಗುವದು. ಯಾಕಂದರೆ, ಮೊದಲಿನಷ್ಟೇ ಹಣಕ್ಕೆ ಮೊದಲಿನದಕ್ಕಿಂತಲೂ ಹೆಚ್ಚು ವಸ್ತ್ರ ಬರುವದು. ಈ ಮೇಲೆ ಹೇಳಿದ ವಿಧವಾಗಿ ಬೇರೆ ಬೇರೆ ಉದ್ಯೋಗಗಳಲ್ಲಿ ಉಗಿಯಂತ್ರಗಳನ್ನು ಉಪಯೋಗಿಸಿದ್ದರಿಂದ ಸಾವುಕಾರರಿಗೂ ಶ್ರಮಕರ್ತರಿಗೂ ಲಾಭ ಉಂಟಾಗಿರುವದು. ಉಗಿಯಂತ್ರಗಳಿಂದ ಶ್ರಮ ಬಂಡವಲಗಳ ಉತ್ಪಾದಕ ಶಕ್ತಿಯು ಅತಿಶಯ ಬೆಳೆದದ್ದರಿಂದ ಉಂಟಾದ ಅಮಿತ ಲಾಭವೆಲ್ಲ ಶ್ರಮಕರ್ತರಿಗೂ, ಸಾವುಕಾರರಿಗೂ, ಬಹಳ ಸಂಬಳದ ರೂಪದಿಂದಾಗಲಿ ಲಾಭದ ರೂಪದಿಂದಾಗಲಿ ದೊರೆಯಲಿಲ್ಲ. ಹೀಗಾಗುವದಕ್ಕೆ ಬೇರೆ ಸಾವುಕಾರರ ಸ್ಪರ್ಧೆಯಿಂದಲೂ, ಬೇರೆ ಶ್ರಮಕರ್ತರ ಸ್ಪರ್ಧೆಯಿಂದಲೂ ಪ್ರತಿಬಂಧವಾಯಿತು. ಆದರೆ ಈ ಹೆಚ್ಚಿದ ಉತ್ಪಾದಕ ಶಕ್ತಿಯಿಂದ ಅವರೆಲ್ಲರಿಗೆ ಅಂತ್ಯದಲ್ಲಿ ಉಂಟಾದ ಲಾಭವೇನಂದರೆ, ಶ್ರಮ ಬಂಡವಲಗಳ ಉತ್ಪಾದಕ ಶಕ್ತಿಯು ಅಭಿವೃದ್ಧಿಯಾದ್ದರಿಂದ ಯಾವತ್ತು ಕೈಗಾರಿಕೆಯ ಸರಕುಗಳು ಅವರಿಗೆ ಅಗ್ಗವಾಗಿ ದೊರೆಯ ಹತ್ತಿದವು. ಈ ಅಂಶವು ಮುಂದೆ ಇದಕ್ಕೂ ವಿಶೇಷವಾಗಿ ವಿವರಿಸಲ್ಪಡುವದು.

**ಬೇಡಿಕೆ ಪೂರೈಕೆಗಳಿಂದ ಕ್ರಯಗಳ ಮೇಲೆ ಆಗುವ ಪರಿಣಾಮಗಳ ಸಾರಾಂಶವು.**— ಮೇಲೆ ಹೇಳಿದ ಮೂರು ವರ್ಗದ ಸರಕುಗಳ ಕ್ರಯಗಳ

ಮೇಲೆ ಬೇಡಿಕೆ ಪೂರೈಕೆಗಳು ತಮ್ಮ ಕಾರ್ಯವನ್ನು ನಡಿಸುವ ರೀತಿಯನ್ನು ಕೆಳಗೆ ಸಂಕ್ಷೇಪವಾಗಿ ಹೇಳುತ್ತೇವೆ. ಈ ಯಾವತ್ತು ಬಗೆಯು ಸರಕುಗಳ ಕ್ರಯವು, ಅವುಗಳ ಬೇಡಿಕೆಯು ಪೂರೈಕೆಗೆ ಸರಿಯಾಗುವಂತೆ ಹೆಚ್ಚುಕಡಿಮೆ ಯಾಗುತ್ತದೆಂಬದನ್ನು ಲಕ್ಷ್ಯದಲ್ಲಿಡ ತಕ್ಕದ್ದು.

ಕೇವಲ ಮರ್ಯಾದಿತವಾದ ಮೊದಲನೆ ವರ್ಗದ ಸರಕುಗಳ ವಿಷಯದ ನಿಯಮವೇನಂದರೆ, ಈ ಬಗೆಯ ಸರಕುಗಳ ಬೇಡಿಕೆಯನ್ನು ಪೂರೈಕೆಗೆ ಸರಿಯಾಗಿ ಮಾಡ ಬೇಕಾದರೆ, ಪೂರೈಕೆಗಿಂತಲೂ ಹೆಚ್ಚಾಗಿದ್ದ ಬೇಡಿಕೆಯೆಲ್ಲ ಹಿಮ್ಮೆಟ್ಟುವ ವರೆಗೆ ಅವುಗಳ ಕ್ರಯವು ಏರಿಸಲ್ಪಡುವದು.

ಉತ್ಪನ್ನ ಮಾಡುವ ಖರ್ಚು ಬೆಳೆಯದೆ ಹೆಚ್ಚು ಹುಟ್ಟಿಸಲಿಕ್ಕೆ ಬಾರದಂಥ ಎರಡನೆ ವರ್ಗದ ಸರಕುಗಳನ್ನು ಕುರಿತು ಆಲೋಚಿಸಿ ನೋಡಲಾಗಿ ತಿಳಿಯುವದೇನಂದರೆ, ಈ ವರ್ಗದೊಳಗೆ ಬರುವ ಬಹುತರ ಯಾವತ್ತು ಪದಾರ್ಥಗಳು ಉಪಜೀವನಕ್ಕೆ ಅವಶ್ಯವಾದವುಗಳಾದ್ದರಿಂದ, ಅವುಗಳ ಬೇಡಿಕೆಯನ್ನು ವಿಶೇಷ ಕಡಿಮೆ ಮಾಡುವದು ಶಕ್ಯವಲ್ಲ. ಆದ್ದರಿಂದ, ಈ ಸರಕುಗಳ ಪೂರೈಕೆಗಿಂತಲೂ ಬೇಡಿಕೆ ಹೆಚ್ಚಾದಾಗ ಪೂರೈಕೆಯನ್ನೇ ಬೆಳಿಸುವದು ಅತ್ಯವಶ್ಯವಾಗುತ್ತದೆ. ಪೂರೈಕೆಯನ್ನು ಬೆಳಿಸುವದು ಹೆಚ್ಚು ಪ್ರಮಾಣದಿಂದ ಖರ್ಚು ಮಾಡಿದ ಹೊರ್ತು ಆಗುವದಿಲ್ಲ. ಮತ್ತು ಹೆಚ್ಚಿಗೆ ಖರ್ಚು ಮಾಡ ಬೇಕಾದ ಶ್ರಮ ಬಂಡವಲಗಳಿಗೆ ಪ್ರತಿಫಲ ಹುಟ್ಟ ಬೇಕಾಗುವದು. ಆ ಕಾರಣ ಈ ಪದಾರ್ಥಗಳ ಬೇಡಿಕೆ ಹೆಚ್ಚಾದ ಹಾಗೆ ಅವುಗಳ ಧಾರಣೆ ಏರುವದು. ಹೆಚ್ಚು ಖರ್ಚು ತಗಲದೆ ಬೇಕಾದಷ್ಟು ಹೆಚ್ಚು ಉತ್ಪನ್ನ ಮಾಡಲಿಕ್ಕೆ ಬರುವಂಥ ಮೂರನೆ ವರ್ಗದ ಸರಕುಗಳ ವಿಷಯವಾಗಿ ಹೇಳ ತಕ್ಕದ್ದೇನಂದರೆ, ಈ ಸರಕುಗಳ ಪೂರೈಕೆಗಿಂತಲೂ ಬೇಡಿಕೆ ಹೆಚ್ಚಾದಲು, ಅವುಗಳ ಕ್ರಯಗಳು ಏರಿ, ಬೇಡಿಕೆಯ ಕೆಲವೊಂದು ಭಾಗವು ಹಿಮ್ಮೆಟ್ಟುವದು. ಆದರೆ ಈ ಬಗೆಯ ಬೇಡಿಕೆ ಪೂರೈಕೆಗಳ ಸಮೀಕರಣದ ಕ್ರಮವು ಸ್ವಲ್ಪ ಕಾಲ ಮಾತ್ರ ನಡಿಯುವದು. ಯಾವದೊಂದು ಸರಕಿನ ಕ್ರಯವು ಅದನ್ನು ಉತ್ಪನ್ನ ಮಾಡುವವರಿಗೆ ವಾಡಿಕೆಯಾಗಿ ದೊರೆಯುವ ಸಂಬಳ ಲಾಭಗಳಿಗಿಂತಲೂ ಹೆಚ್ಚು ಉಳತಾಯವಾಗುವಷ್ಟು ಏರಿದ ಕೂಡ್ಲೆ, ಆ ಸರಕನ್ನೇ ಉತ್ಪನ್ನ ಮಾಡುವದಕ್ಕೆ ಉತ್ತೇಜನ ಉಂಟಾಗುವದು. ಈ ವೃದ್ಧಿಯಾದ ಉತ್ಪನ್ನದಿಂದ ಪೂರೈಕೆಯು ಹೆಚ್ಚಾಗುವ ಕಾರಣ ಕ್ರಯಗಳು ಇಳಿಯುವವು. ಈ ಪ್ರಸಕ್ತಿಯಲ್ಲಿ, ಕಟ್ಟಕಡೆಗೆ ಬೇಡಿಕೆ ಪೂರೈಕೆಗಳ ಸಮೀಕರಣವು ಪೂರೈಕೆ ಹೆಚ್ಚುವದರಿಂದ ಆಗುವದು.

ಮೂರೂ ವರ್ಗದ ಸರಕುಗಳ ಕ್ರಯಗಳನ್ನು ನಿರ್ಣೈಸುವಂಥ ಕಾರಣಗಳ ವಿವೇಚನವು ಇಲ್ಲಿಗೆ ಮುಗಿಯಿತು. ಮುಂದಿನ ಅಧ್ಯಾಯದಲ್ಲಿ, ಹಣದ ಬೆಲೆಯ ವಿವರವು ಹೇಳಲ್ಪಡುವದು.

## ಮೂರನೆ ಅಧ್ಯಾಯದ ಮೇಲಿನ ಪ್ರಶ್ನಗಳು.

## ಸರಕುಗಳ ಬೆಲೆ.

೧. ಬೆಲೆಯನ್ನು ಅನುಲಕ್ಷಿಸಿ ಸರಕುಗಳು ಎಷ್ಟು ವರ್ಗಗಳಾಗಿ ವಿಭಾಗಿಸಲ್ಪಡುತ್ತವೆ?

೨. "ಉತ್ಪನ್ನ ಮಾಡುವ ಖರ್ಚು" ಅಂದರೇನು?

೩. ಮಿಲ್ ಥೊರೆಯ ಅಭಿಪ್ರಾಯದ ಪ್ರಕಾರ ಉತ್ಪನ್ನ ಮಾಡುವ ಖರ್ಚಿನೊಳಗಿನ ಮುಖ್ಯವಾದ ಅಂಶಗಳು ಯಾವವು?

೪. ಉತ್ಪನ್ನ ಮಾಡುವ ಖರ್ಚನ್ನು ಕುರಿತು ಪ್ರೊಫೆಸರ್ ಕೆರ್ನ್ಸ್ ಥೊರೆಯು ಕೊಟ್ಟ ಮತ್ತೊಂದು ವ್ಯಾಖ್ಯೆಯು ಯಾವದು?

೫. "ಕ್ರಯಗಳು ಬೇಡಿಕೆ ಪೂರೈಕೆಗಳ ಮೇಲೆ ಅವಲಂಬಿಸಿರುವವೆಂ"ಬದರ ಯಥಾರ್ಥವಾದ ವಿವರಣೆ ಹ್ಯಾಗೆ?

೬. ಕ್ರಯಗಳು ಏರಿಳಿಯುವದರಿಂದ ಬೇಡಿಕೆ ಪೂರೈಕೆಗಳು ಸರಿಯಾಗುವ ಕ್ರಮದ ಒಂದು ದೃಷ್ಟಾಂತವನ್ನು ಕೊಡಿರಿ.

೭. ಯಾವದೊಂದು ಸರಕಿಗೆ ಪೇಟೆಯಲ್ಲಿ, ಆ ಸರಕು ಉತ್ಪನ್ನ ಮಾಡುವ ಶ್ರಮಕರ್ತರಿಗೂ ಸಾವುಕಾರರಿಗೂ ಕೇವಲ ವಾಡಿಕೆಯಾದ ದರದಿಂದ ಸಂಬಳ ಲಾಭಗಳು ದೊರೆಯುವಷ್ಟೇ ಧಾರಣೆ ಬರುವ ಪ್ರವೃತ್ತಿಯನ್ನು ವಿವರಿಸಿರಿ.

೮. ಸರಕಿನ ಪೂರೈಕೆಯನ್ನು ಬೆಳಿಸಲಿಕ್ಕೆ ಬರುವ ಹಾಗಿದ್ದರೆ ಮಾತ್ರ, ಮೇಲೆ ಹೇಳಿದ ಪ್ರವೃತ್ತಿಯು ಗೋಚರವಾಗುವದು. ಹಾಗಾದರೆ, ಕೇವಲ ಮರ್ಯಾದಿತ ಪೂರೈಕೆಯುಳ್ಳ ಸರಕುಗಳ ಕ್ರಯವು ಯಾವ ರೀತಿಯಾಗಿ ಕ್ರಮಗೊಳ್ಳುವದು?

೯. "ಕಾರ್ಯಕ್ಷಮವಾದ ಬೇಡಿಕೆ" ಅಂದರೇನು?

೧೦. ವಿನಿಮಯದಿಂದ ಬೆಲೆ ಬರುವ ಪ್ರತಿಯೊಂದು ಒಡವೆಯು ಯಾವ ಎರಡು ಲಕ್ಷಣಗಳಿಂದ ಯುಕ್ತವಾಗಿರುವದು?

೧೧. ಈ ಲಕ್ಷಣಗಳು ಯಾವಾಗಲೂ ಒಂದೇ ಸಮನಾದ ಪ್ರಮಾಣದಿಂದ ಇರುವವೋ?

೧೨. ಈ ವಿಷಯದ ದೃಷ್ಟಾಂತಗಳನ್ನು ಹೇಳಿರಿ.

೧೩. ಜಗದ್ವಿಖ್ಯಾತನಾದ ರಾಫಲನೆಂಬ ಚಿತ್ರಗಾರನ ಚಿತ್ರದ ಬಗೆಯ ಸರಕಿನ ಕ್ರಯವನ್ನು ನಿರ್ಣೈಸುವಲ್ಲಿ ವಿಶೇಷ ಕಾರ್ಯವನ್ನು ಮಾಡುವಂಥ ಗುಣ ಯಾವದು?

೧೪. ಪೂರೈಕೆಯನ್ನು ಬೆಳಿಸಿದಂತೆ ಹೆಚ್ಚು ಖರ್ಚು ತಗಲುವಂಥ ಸರಕುಗಳಲ್ಲಿ ಮುಖ್ಯವಾದವುಗಳು ಯಾವವು?

೧೫. ಉಪಜೀವನದ ಪದಾರ್ಥಗಳ ಹೆಚ್ಚು ಪೂರೈಕೆಯನ್ನು ಮಾಡ ಬೇಕಾದರೆ, ಹೆಚ್ಚು ಪ್ರಮಾಣದಿಂದ ಬಂಡವಲ ಶ್ರಮಗಳನ್ನು ವೆಚ್ಚಮಾಡ ಬೇಕಾಗುವ ಕಾರಣಗಳನ್ನು ಉದಾಹರಣದಿಂದ ವಿವರಿಸಿರಿ.

೧೬. ಅನ್ನದ ಹೆಚ್ಚು ಪೂರೈಕೆಯನ್ನು ಅಗತ್ಯ ಪಡಿಸುವ ಸಂಗತಿಯು ಯಾವದು?

೧೭. ಉಪಜೀವನದ ಪದಾರ್ಥಗಳ ಕ್ರಯವನ್ನು ಏರಿಸುವಲ್ಲಿ ಎಲ್ಲಕ್ಕೂ ಹೆಚ್ಚು ಬಲವಾದ ಸಂಗತಿಯು ಯಾವದು?

೧೮. ಈ ಸಂಗತಿಯಿಂದುಂಟಾಗುವ ಪರಿಣಾಮವು ಕೆಲವು ಸಾರಿ ಹ್ಯಾಗೆ ಪ್ರತಿಬಂಧಿಸಲ್ಪಡುವದು?

೧೯. ಬೇಸಾಯದ ಸರಕುಗಳ ಕ್ರಯವನ್ನು ಕ್ರಮಗೊಳಿಸುವಂಥ ಕಾರಣಗಳಿಗೆ ಒಳಗಾಗುವ ಬೇರೆ ಕೆಲವು ಸರಕುಗಳನ್ನು ಹೇಳಿರಿ.

೨೦. ಸರಕುಗಳ ಬೆಲೆಯನ್ನನುಲಕ್ಷಿಸಿ ಅವುಗಳಲ್ಲಿ ಮಾಡಿದ ಮೂರು ವರ್ಗಗಳಲ್ಲಿ ಕಡೆಯ ವರ್ಗವು ಯಾವದು?

೨೧. ಕೈಗಾರಿಕೆಯ ಸರಕುಗಳ ಕ್ರಯವನ್ನು ನಿರ್ಣೈಸುವಂಥ ನಿಯಮಗಳೂ ಬೇಸಾಯದ ಸರಕುಗಳ ಕ್ರಯವನ್ನು ನಿರ್ಣೈಸುವಂಥ ನಿಯಮಗಳೂ ಒಂದೇ ಆಗಿರುವವೋ?

೨೨. ಅವುಗಳಲ್ಲಿರುವ ಭೇದದ ಕಾರಣವನ್ನು ವಿವರಿಸಿರಿ.

೨೩. ಒಮ್ಮೊಮ್ಮೆ ಕೈಗಾರಿಕೆಯ ಸರಕುಗಳ ಪೂರೈಕೆಯನ್ನು ಹೆಚ್ಚಿಸಲಾಗಿ, ಅವುಗಳ ಕ್ರಯವು ಕಡಿಮೆಯಾಗುವ ಬಗೆಯನ್ನು ದೃಷ್ಟಾಂತ ಮೂಲಕವಾಗಿ ವಿವರಿಸಿರಿ.

೨೪. ಶ್ರಮದ ಉತ್ಪಾದಕತ್ವದ ಕಾರ್ಯವು ಉತ್ಪನ್ನ ಮಾಡುವ ಖರ್ಚಿನ ಮೇಲೆ ಹ್ಯಾಗೆ ನಡೆಯುವದು?

೨೫. ಸಂಬಳ, ಲಾಭ, ಉತ್ಪನ್ನ ಮಾಡುವ ಖರ್ಚು, ಕ್ರಯಗಳು, ಇವುಗಳಲ್ಲಿರುವ ಪರಸ್ಪರ ಸಂಬಂಧವೇನು?

೨೬. ಕೆಲವು ಸಂಗತಿಗಳಲ್ಲಿ ಕ್ರಯಗಳನ್ನು ಏರಿಸದೆ ಲಾಭವನ್ನೂ, ಸಂಬಳವನ್ನೂ ಏರಿಸಲಿಕ್ಕೆ ಬರ ಬಹುದೆಂಬದನ್ನು ಉದಾಹರಣವನ್ನು ಕೊಟ್ಟು ವಿವರಿಸಿರಿ.

೨೭. ಇದರ ಮೇಲಿಂದ ಕ್ರಯಗಳಿಗೂ ಮತ್ತು ಲಾಭದ ದರ, ಶ್ರಮದ ಸಂಬಳ, ಇವುಗಳಿಗೂ ಇರುವ ಸಂಬಂಧವನ್ನು ಕುರಿತು ವ್ಯವಹಾರದಲ್ಲಿ ಉಪಯೋಗಿಸುವಂಥ ಯಾವ ಅನುಮಾನವನ್ನು ಊಹಿಸ ಬಹುದು?

೨೮. ಶ್ರಮ ಬಂಡವಲಗಳ ಉತ್ಪಾದಕ ಶಕ್ತಿಯು ಸಾಮಾನ್ಯವಾಗಿ ಬೆಳೆಯಲು, ಶ್ರಮಕರ್ತರಿಗೂ ಸಾವುಕಾರರಿಗೂ ಸರಕುಗಳನ್ನು ಉಪಯೋಗಿಸುವವರಿಗೂ ಯಾವ ಬಗೆಯಿಂದ ಹಿತವಾಗುವದು?

೨೯. ಅಪೂರ್ವ ವಸ್ತುಗಳು, ಬೇಸಾಯದ ಹುಟ್ಟುವಳಿಯು, ಕೈಗಾರಿಕೆಯ ಸರಕುಗಳು, ಇವುಗಳ ಕ್ರಯವನ್ನು ಕ್ರಮಗೊಳಿಸುವ ನಿಯಮಗಳ ಸಾರಾಂಶವನ್ನು ಕೊಡಿರಿ.

---

೧. ಬಡ ಜನರು ಹುಲ್ಲು ತಿಂದು ಉಪಜೀವನ ಸಾಗಿಸ ಹತ್ತಿದರೆ, ಜೋಳವು ಅಗ್ಗವಾಗುವದೋ?

೨. ಉಪಜೀವನದ ಪದಾರ್ಥಗಳನ್ನು ಉತ್ಪನ್ನ ಮಾಡುವ ಖರ್ಚು ಮೊದಲಿನಷ್ಟೇ ಬೀಳುತ್ತಿದ್ದು, ಹಿಂದುಸ್ತಾನದ ಜನಸಂಖ್ಯೆಯು ಪ್ರತಿ ೬೦ ವರ್ಷಕ್ಕೆ ಇಮ್ಮಡಿಯಾಗುತ್ತಾ ನಡೆದರೆ ಏನು ಪರಿಣಾಮವಾಗುವದು?

೩. ಯಾವದೊಂದು ಸರಕನ್ನು ಬಹಳ ಸುಲಭವಾಗಿ ಉತ್ಪನ್ನ ಮಾಡಲಿಕ್ಕೆ ಬರುವಂಥ ಒಂದು ಯಂತ್ರದ ಶೋಧವಾಯಿತೆಂದು ತಿಳಿಯಿರಿ. ಆ ಯಂತ್ರವನ್ನು ಶೋಧಿಸಿ ತೆಗೆದವನು ತನ್ನ ಯಂತ್ರಕ್ಕಾಗಿ ಸನದನ್ನು ಪಡಕೊಂಡು, ಆ ಯಂತ್ರದಿಂದಾಗುವ ಲಾಭವನ್ನು ತಾನೇ

ನಿರ್ವಿವಾದವಾಗಿ ಸಂಪಾದಿಸುವದು ಒಳ್ಳೇದೋ? ಅಥವಾ, ಸ್ಪರ್ಧೆಯನ್ನು ನಿರಾತಂಕವಾಗಿ ನಡೆಯಗೊಟ್ಟು, ಆ ಯಂತ್ರದಿಂದಾಗುವ ಯಾವತ್ತು ಲಾಭವು, ಆದರಿಂದ ಹುಟ್ಟುವ ಸರಕುಗಳನ್ನು ಕೊಳ್ಳುವವರಿಗೆ ಆಗುವಂತೆ ಮಾಡುವದು ಒಳ್ಳೇದೋ? ಆವನು ಹ್ಯಾಗೆ ಮಾಡಿದರೆ ಒಳ್ಳೇದು?

ಯಾವದ್ದೊಂದು ಒಡವೆಯ ಕ್ರಯವು ಅದರ ಬೇಡಿಕೆಯನ್ನು ಅನುಸರಿಸಿ ಹೆಚ್ಚುಕಡಿಮೆಯಾಗುತ್ತದೆಂದು ಹೇಳುವದುಂಟು. ಒಬ್ಬ ತಿರುಕನಿಗೆ ಸಾರ್ವಟಿನ ಅಪೇಕ್ಷೆಯುಂಟಾಗಲಾಗಿ ಅದರಿಂದ ಸಾರ್ವಟುಗಳ ಕ್ರಯದ ಮೇಲೆ ಏನಾದರೂ ಪರಿಣಾಮವಾಗುವದೋ? ಆಗದಿದ್ದರೆ, ಯಾಕೆ ಆಗುವದಿಲ್ಲ?

ಒಬ್ಬ ಧೊರೆಯ ಮನೆ ಮಂದಿ ಎಲ್ಲರೂ ಅಮೇರಿಕೆಯಿಂದ ಬರುವ ಮಾಂಸವನ್ನು ತಿನ್ನಬಾರದೆಂದು ಕಟ್ಟು ಮಾಡಿದರೆಂದು ಕಲ್ಪಿಸಿರಿ. ಅದರಿಂದ ಅಮೇರಿಕೆಯಿಂದ ಬರುವ ಮಾಂಸದ ಧಾರಣೆಯಲ್ಲೇನಾದರೂ ಹೆಚ್ಚುಕಡಿಮೆಯಾಗುವದೋ?

ಮಾಂಸವು ಅಗ್ಗವಾಗಿ ಅದಕ್ಕೆ ೧/೪ ಕಡಿಮೆ ಹಣ ಬೀಳುತ್ತದೆಂದು ಕಲ್ಪಿಸಿರಿ. ಆದರೆ, ಅಷ್ಟರೊಳಗೆ ಅವನ ಮನೆಯಲ್ಲಿ ಆರು ಮಂದಿಗೆ ಬದಲಾಗಿ ಒಂಭತ್ತು ಮಂದಿ ತಿನ್ನುವವರಾದರೆ, ಆದರಿಂದ ಅವನಿಗೇನಾದರೂ ಕಡೆತನಕ ಒಳಿತು ಆಗ ಬಹುದೋ?

# ೪ನೇ ಅಧ್ಯಾಯ.

## ಹಣದ ಬೆಲೆ.

ಹಣದ ಕ್ರಯವನ್ನು ಕುರಿತು ಜನರು ಮೇಲೆ ಮೇಲೆ ಮಾತಾಡುವದುಂಟು. ಆದರೆ ಎಷ್ಟೋ ಸಾರಿ ಜನರು ಹಣದ ಕ್ರಯವೆಂಬ ಶಬ್ದಗಳನ್ನು ಬಡ್ಡಿಯ ದರವೆಂಬ ಅರ್ಥದಿಂದ ಉಪಯೋಗಿಸುವರು. ಹಣವನ್ನು ಸಾಲಾ ತಂದವರು ತಂದ ರಕಮಿಗಿಂತಲೂ ಬಹಳ ಹೆಚ್ಚು ರಕಮು ತಿರುಗಿ ಕೊಡ ಬೇಕಾದರೆ, ಹಣದ ಕ್ರಯ, ಅಥವಾ ಬಡ್ಡಿಯ ದರವು ಬಹಳ ಏರಿರುವದೆಂದು ಹೇಳುವರು. ಸಾಲಾ ತಂದವರು ತಂದ ಸಾಲಕ್ಕಾಗಿ ಬಹಳ ಸ್ವಲ್ಪ ಹಣವನ್ನು ಬಡ್ಡಿಯಾಗಿ ಕೊಡಬೇಕಾದರೆ, ಹಣದ ಕ್ರಯ, ಅಥವಾ ಬಡ್ಡಿಯ ದರವು ಬಹಳ ಇಳಿದಿದೆಂದು ಹೇಳುವರು. ಆದರೆ 'ಹಣದ ಕ್ರಯ' ಎಂಬ ಶಬ್ದಗಳಿಗೆ ಉದ್ದಮಿದಾರರೊಳಗೆ ಉಂಟಾಗಿದ್ದ ಅರ್ಥವನ್ನು ಲಕ್ಷ್ಯಕ್ಕೆ ತರದಿದ್ದರೆ ಬೇರೆ ಏನೇನೂ ಅರ್ಥವಾಗುವದಿಲ್ಲವೆಂಬದು ಮುಂದೆ ತೋರಿಸಲ್ಪಡುವದು. ಯಾವದೊಂದು ಪದಾರ್ಥದ ಬೆಲೆಯಂದರೆ ಅದರಲ್ಲಿದ್ದ ವಿನಿಮಯದ ಶಕ್ತಿ, ಅಥವಾ ಅದನ್ನು ಕೊಟ್ಟರೆ ಅದಕ್ಕೆ ಬದಲಾಗಿ ಬರುವ ಪದಾರ್ಥಗಳ ಸಂಖ್ಯೆ, ಎಂದು ಹಿಂದಿನ ಅಧ್ಯಾಯದಲ್ಲಿ ಹೇಳಲ್ಪಟ್ಟಿತು. ಹಾಗೂ ಕ್ರಯವು ಬೆಲೆಯ ಒಂದು ವಿಶೇಷ ಪ್ರಕಾರವಾಗಿದೆ,

ಅಂದರೆ ಯಾವದೊಂದು ಪದಾರ್ಥದ ಬೆಲೆಯನ್ನು ಹಣದ ದ್ವಾರಾ ಹೇಳಲಾ! ಅದೇ ಆ ಪದಾರ್ಥದ ಕ್ರಯ, ಎಂತಲೂ ಆಗ ವಿವರಿಸಲ್ಪಟ್ಟಿತು. ಆದಕಾರಣ ಮೇಲೆ ಉಲ್ಲೇಖಿಸಿದ ವ್ಯಾವಹಾರಿಕ ಅರ್ಥದ ವ್ಯತಿರಿಕ್ತವಾಗಿ, 'ಹಣದ ಕ್ರಯ ವೆಂಬ ಶಬ್ದಗಳನ್ನು ಬೇರೆ ಯಾವದಾದರೂ ಅರ್ಥದಿಂದ ಉಪಯೋಗಿಸಿದ್ದೆ ಆದರೆ, ಅವುಗಳ ಅರ್ಥವು "ಹಣದ ದ್ವಾರಾ ಹೇಳಲ್ಪಟ್ಟ ಹಣದ ಬೆಲೆ" ಎಂ ಆಗುವದು. ಆದರೆ, ಹೀಗೆ ಮಾತನಾಡುವದು ಕೇವಲ ಅಬದ್ಧವಾದದ್ದೆಂದು ಹೇಳುವ ಅಗತ್ಯವಿಲ್ಲ. ಹತ್ತು ರೂಪಾಯಿಗಳ ಕ್ರಯ ಗಾಡಿ ಸೂತಿಗೆ ೧೦ ರೂಪಾಯಿಯಾಗಿದೆ, ಇಲ್ಲವೆ ೧ ರೂಪಾಯಿಯ ಕ್ರಯ ನಾಲ್ಕು ಪಾವಲಿಗಳಾ ಗಿದೆ, ಇಲ್ಲವೆ ಎರಡು ಅರ್ಧ ರೂಪಾಯಿಗಳಾಗಿದೆಂತ ಹೇಳುವದು ಸಹ ಮೇಲಿ ನ ಮಾತಿನಷ್ಟೇ ಸಾರ್ಥವಾಗ ಬಹುದು. ಯಾವದೊಂದು ಸರಕಿನ ಬೆಲೆಯ ಪರಿಮಾಣವನ್ನು ಹೇಳ ಬೇಕಾದರೆ, ಆ ಸರಕನ್ನು ಅದಕ್ಕೇ ಹೊಂದಿಸಿ ನೋಡಿ ಹೇಳುವದು ಅಸಂಭಾವ್ಯವಾಗಿರುವದು.

**ಹಣದ ಬೆಲೆ.** – ಹಣದ ಬೆಲೆಯೆಂದರೆ ಅದರಲ್ಲಿದ್ದ ವಿನಿಮಯ ಶಕ್ತಿ: ಹಣ ವನ್ನು ಕೊಡಲಾಗಿ ಅದಕ್ಕೆ ಬದಲಾಗಿ ಬೇರೆ ಪದಾರ್ಥಗಳು ಬಹಳ ಬರುವಾಗ, ಅಂದರೆ ಕ್ರಯಗಳು ಇಳಿದಿರುವಾಗ, ಹಣದ ಬೆಲೆಯು ಉನ್ನತವಾಗಿರುವದು; ಹಣಕ್ಕೆ ಬೇರೆ ಪದಾರ್ಥಗಳು ಸ್ವಲ್ಪ ಬರುವಾಗ, ಅಂದರೆ ಕ್ರಯಗಳು ಬಹಳ ಏರಿದಾಗ, ಹಣದ ಬೆಲೆಯು ಕಡಿಮೆಯಾಗಿರುವದು.

**ಹಣದ ಬೆಲೆಯಾದರೂ ಬೇರೆ ಖನಿಜ ಪದಾರ್ಥಗಳ ಹುಟ್ಟುವಳಿಯ ಬೆಲೆಯನ್ನು ನಿರ್ಣೈಸುವಂಥ ನಿಯಮಗಳಿಂದಲೇ ನಿರ್ಣೈಸಲ್ಪಡುವದು.** – ಒಂದು ಔಂಸು ಚಿನ್ನಕ್ಕೆ ಯಾವಾಗಲೂ ಅಷ್ಟೇ ಹಣ ಬರುವ ಕಾರಣ, ಹಣದ ಬೆಲೆಯು ಯಾವಾಗಲೂ ಸ್ಥಿರವಾದದ್ದೆಂದು ಕೆಲವು ಸಾರಿ ಭ್ರಾಂತಿಯುಂಟಾಗು ವದುಂಟು. ಕ್ರಯಗಳು ಏರಿರಲಿ, ಇಳಿದಿರಲಿ, ಟಂಕಸಾಲೆಯಲ್ಲಿ ಒಂದು ಔಂಸು ಭಂಗಾರವನ್ನು ಕೊಟ್ಟರೆ, ಯಾವಾಗಲೂ ೩ ಪೌಂಡು ೧೭ ಶಿಲಿಂಗು ೧೦½ ಪೇನ್ಸು ಕೊಡುವರು. ಆದರೆ ಈ ಸಂಗತಿಯ ಮೇಲಿಂದ ಭಂಗಾರದ ಬೆಲೆಯು ಬದಲಾ ಗದೆ ಸ್ಥಿರವಾಗಿರುವದು ಸಿದ್ಧವಾಗುತ್ತದೆಂದು ತಿಳಿಯುವವರು, ಒಂದು ಎಕರೆ ಭೂಮಿಯಲ್ಲಿ ¼ ಎಕರಿನ ಒಂದು ತುಂಡಿನಂತೆ ನಾಲ್ಕು ತುಂಡುಗಳನ್ನು ಯಾವಾ ಗಲೂ ಮಾಡ ಬಹುದೆಂಬದರ ಮೇಲಿಂದ ಭೂಮಿಯ ಬೆಲೆಯಾದರೂ ಎಂದೆಂ ದಿಗೂ ಬದಲಾಗದೆ ಇರುತ್ತದೆಂದು ನಂಬ ಬಹುದು. ಒಂದು ಔಂಸು ಭಂಗಾರ ಕ್ಕೆ ಪ್ರತಿಯಾಗಿ ಯಾವಾಗಲೂ ೩ ಪೌಂಡು ೧೭ ಶಿಲಿಂಗು ೧೦½ ಪೇನ್ಸು

ಗಳು ಬರುತ್ತವೆಂಬದರ ಮೇಲಿಂದ ಒಂದು ಔಂಸು ಭಂಗಾರದಲ್ಲಿ ೩ ಪೌಂಡುಗಳ ನ್ನು ೧೭ ಶಿಳಿಂಗು ೧೦ತ್ತಿ ಪೇನ್ಸುಗಳಿಗೆ ಸರಿಯಾದ ಪೌಂಡಿನ ಭಾಗವನ್ನೂ ಮಾಡಲಿಕ್ಕೆ ಬರುತ್ತದೆಂಬದಿಷ್ಟೇ ಸಿದ್ಧವಾಗುತ್ತದೆ. ಬೇರೆ ಏನೂ ಸಿದ್ಧವಾಗುವದಿಲ್ಲ.

ಊಚ ಧಾತುಗಳ ಬೆಲೆಯು ಬೇರೆ ಖನಿಜ ಪದಾರ್ಥಗಳ ಬೆಲೆಯಂತೆಯೇ ಹೆಚ್ಚು ಕಡಿಮೆಯಾಗುತ್ತದೆಂಬದನ್ನು ನೆನಪಿನಲ್ಲಿಡ ತಕ್ಕದ್ದು. ಆದಕಾರಣ, ಊಚ ಧಾತುಗಳ ಬೆಲೆಯು ಬೇಡಿಕೆ ಪೂರೈಕೆಗಳ ಸಮಾಕರಣವಾಗುವ ರೀತಿಯಿಂದ ನಿರ್ಣೈಸಲ್ಪಡುತ್ತದೆ. ಈ ಧಾತುಗಳ ಬೇಡಿಕೆ ಹೆಚ್ಚಿದ ಪ್ರಮಾಣದಿಂದ ಅವುಗಳ ಬೆಲೆಯು ಏರುವದು; ಮತ್ತು ಅವುಗಳನ್ನು ಪೂರೈಸಲಿಕ್ಕೆ ಉತ್ತೇಜನವಾಗುವದು. ಈ ಹೆಚ್ಚಿನ ಪೂರೈಕೆಯನ್ನು ಕಡಿಮೆ ಉತ್ಪಾದಕವಾದ ಕಣಿಗಳಿಂದ ಮಾಡಲಾಗಿ ಉತ್ಪನ್ನ ಮಾಡುವ ಖರ್ಚು ಬೆಳೆಯುವದರಿಂದ, ಊಚ ಧಾತುಗಳ ಬೆಲೆ ಏರುವದು. ಇದಕ್ಕೆ ವಿಪರೀತವಾಗಿ, ಹೆಚ್ಚಿಗೆ ಬೇಕಾದ ಪೂರೈಕೆಯು ಹೆಚ್ಚು ಉತ್ಪಾದಕವಾದ ಹೊಸ ಕಣಿಗಳ ಶೋಧದಿಂದ ದೊರಿದರೆ ಉತ್ಪನ್ನ ಮಾಡುವ ಖರ್ಚು ಕಡಿಮೆಯಾಗುವದರಿಂದ, ಊಚ ಧಾತುಗಳ ಬೆಲೆ ಕಡಿಮೆಯಾಗುವದು. ಅಮೇರಿಕೆಯಲ್ಲಿ ಒಳಗಡೆಯಲ್ಲಿ ಬಹು ಉತ್ಪಾದಕವಾದ ಕಣಿಗಳ ಶೋಧವಾದ್ದರಿಂದ, ಇತ್ತಲಾಗಿ ಕೆಲವು ವರ್ಷ ಆ ದೇಶದಿಂದ ಬರುವ ಬೆಳ್ಳಿಯು ಅಪ್ರಮಾಣವಾಗಿ ಹೆಚ್ಚಾಗಿದೆ. ಸನ್ ೧೮೪೯ರಿಂದ ೧೮೫೮ ವರೆಗೆ ಅಮೇರಿಕೆಯ ಕಣಿಗಳಲ್ಲಿ ವರ್ಷಕ್ಕೆ ೧೦,೦೦೦ ಪೌಂಡು ಬೆಲೆಯ ಬೆಳ್ಳಿಯು ಉತ್ಪನ್ನವಾಯಿತು. ಸನ್ ೧೮೬೧ ನೇ ಇಸವಿಯ ಸುಮಾರಕ್ಕೆ ಬೆಳ್ಳಿಯ ಉತ್ಪನ್ನವು ಬಹಳವಾಗಿ ಹೆಚ್ಚಲಾರಂಭಿಸಿತು. ಸನ್ ೧೮೬೩ನೇ ಇಸವಿಯಲ್ಲಿ ಬೆಳ್ಳಿಯ ಉತ್ಪನ್ನವು ೨೧,೫೦,೦೦೦ ಪೌಂಡುಗಳ ವರೆಗೆ ಏರಿತು. ಮತ್ತು ೧೮೮೨ನೇ ಇಸವಿಯಲ್ಲಿ ೯೩,೬೦,೦೦೦ ಪೌಂಡುಗಳ ಬೆಳ್ಳಿಯು ಉತ್ಪನ್ನವಾಯಿತು. ಈ ಸ್ಥಿತಿಯಿಂದಲೂ, ಬೇರೆ ಕೆಲವು ಸಂಗತಿಗಳ ಮೂಲಕವಾಗಿಯೂ, ಬೆಳ್ಳಿಯ ಬೆಲೆಯು, ಅಂದರೆ ಬೆಳ್ಳಿಯಲ್ಲಿರುವ ಪದಾರ್ಥಗಳನ್ನು ಕೊಳ್ಳುವ ಶಕ್ತಿಯು ಮಿತಿಮಾರಿ ಕಡಿಮೆಯಾಗಿರುವದು. ಇದರಿಂದ, ಹಿಂದೂಸ್ತಾನದಂಥ ಬೆಳ್ಳಿಯ ನಾಣ್ಯಗಳನ್ನೇ ಮುಖ್ಯ ನಾಣ್ಯಗಳಾಗಿ ಉಪಯೋಗಿಸುವ ದೇಶಗಳಿಗೆ ಬಹಳ ಚಿಂತೆಯುಂಟಾಗಿದೆ. ಇಂಗ್ಲಂಡ ದೇಶದಲ್ಲಿ ನಡಿಯುವ ಬೆಳ್ಳಿಯ ನಾಣ್ಯಗಳು ಮುಖ್ಯ ನಾಣ್ಯಗಳಲ್ಲ, ಕೇವಲ ಚಿನ್ಹೀಭೂತವಾದ ಉಪನಾಣ್ಯಗಳಾಗಿ ಉಪಯೋಗಿಸಲ್ಪಡುವವು. ಆ ಕಾರಣ, ಬೆಳ್ಳಿಯ ಬೆಲೆ ಇಳಿಯುವದರಿಂದ ಇಂಗ್ಲಂಡದ ಹಣಕ್ಕೇನೂ ತೊಂದರೆ ಸಂಬವಿಸುವದಿಲ್ಲ. ೨೦ ಶಿಲಿಂಗುಗಳಲ್ಲಿದ್ದ ಬೆಳ್ಳಿಯು

ಬೆಲೆಯು ಇದು ವರೆಗೆ ಒಂದು ಪೌಂಡಿನಲ್ಲಿದ್ದ ಭಂಗಾರದ ಬೆಲೆಯಷ್ಟು ಬೇಯನ್ನು ಎಂದೂ ಕಂಡಿಲ್ಲ. ಇಂಗ್ಲಂಡದಲ್ಲಿ ಭಂಗಾರದ ನಾಣ್ಯಗಳೇ ಮುಖ್ಯವಾದ ನಾಣ್ಯಗಳು. ಮತ್ತು ೪೦ ಶಿಲಿಂಗುಗಳಿಗಿಂತಲೂ ಹೆಚ್ಚಿನ ರಕಮುಗಳನ್ನು ಕೊಡುವಾಗ ಕಾಯಿದೆಯ ಪ್ರಕಾರ ಈ ನಾಣ್ಯಗಳನ್ನೇ ಕೊಡ ತಕ್ಕದ್ದು. ಬೆಳ್ಳಿಯ ಬೆಲೆ ಈಗ್ಯೆ ೧೭ರಷ್ಟು, ಅಂದರೆ ನೂರಕ್ಕೆ ೪೩ರಂತೆ ಇಳಿದದೆ. ಆದಕಾರಣ, ಸೈನ್ಯದ ಖರ್ಚಿಗಾಗಿಯೂ ಬೇರೆ ಖರ್ಚುಗಳಿಗಾಗಿಯೂ ಹಿಂದುಸ್ಥಾನದಿಂದ ಪ್ರತಿ ವರ್ಷ ಇಂಗ್ಲಂಡಕ್ಕೆ ಕಳುಹಿಸ ಬೇಕಾಗುವ ೧,೬೦,೦೦,೦೦೦ ಪೌಂಡುಗಳಿಗಾಗಿ ಪ್ರತಿಯೊಂದು ಪೌಂಡಿಗೆ (ಒಂದು ಪೌಂಡು=ಹತ್ತು ರೂಪಾಯಿ) ಹತ್ತು ರೂಪಾಯಿಯನ್ನು ಕೊಡುವಲ್ಲಿ ೧೪ರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅಂದರೆ, ಬೆಳ್ಳಿಯ ಬೆಲೆ ಇಳಿದದ್ದರ ಮೂಲಕವಾಗಿ ಹಿಂದುಸ್ಥಾನದವರು ಇಂಗ್ಲಂಡಕ್ಕೆ ಪ್ರತಿ ವರ್ಷ ಸುಮಾರು ೭೦,೦೦,೦೦೦ ರೂಪಾಯಿಗಳನ್ನು ಹೆಚ್ಚು ಕೊಡಬೇಕಾಗುತ್ತದೆ. ಹಿಂದುಸ್ಥಾನದ ಸರಕಾರಕ್ಕೆ ವಿಶೇಷ ತೊಂದರೆಯಾಗುವ ಕಾರಣವೇನಂದರೆ, ಸರಕಾರದವರು ಭಂಗಾರದ ನಾಣ್ಯಗಳಿಂದ ಕೊಡತಕ್ಕ ರಕಮುಗಳು ವರ್ಷ ವರ್ಷಕ್ಕೆ ಬೆಳೆಯುತ್ತಾ ನಡೆದಿರಲು, ಸರಕಾರಕ್ಕೆ ಬರುವ ಕಂದಾಯದ ಮುಖ್ಯ ಭಾಗವಾದ ಭೂಮಿಯ ತೆರಿಗೆಯು ಬೆಳ್ಳಿಯ ನಾಣ್ಯಗಳ ದ್ವಾರಾ ಕೊಡಲ್ಪಡುತ್ತದೆ. ಮತ್ತು ಸರಕಾರಕ್ಕೆ ಕೊಡುವ ತೆರಿಗೆಯು ಇಷ್ಟೇ ಎಂದು ಕಾಯಿದೆಯಿಂದ ನಿರ್ಣೈಸಲ್ಪಟ್ಟಿರುವದರಿಂದ ಅದನ್ನು ಹೆಚ್ಚಿಸಲಿಕ್ಕೆ ಬರುವ ಹಾಗಿಲ್ಲ.

**ಚಿನ್ನ ಬೆಳ್ಳಿಗಳ ಬೇಡಿಕೆಯನ್ನು ಹೆಚ್ಚುಕಡಿಮೆ ಮಾಡುವಂಥ ಸಂಗತಿಗಳು.**— ಯಾವದೊಂದು ಸರಕಿನ ಬೇಡಿಕೆಯು ಅದರ ಬೆಲೆಗೆ ಅನುಸಾರವಾಗಿ ಹೆಚ್ಚುಕಡಿಮೆಯಾಗುತ್ತದೆಂದು ಹಿಂದೆ ವಿವರಿಸಿಯದೆ. ಈ ನಿಯಮಕ್ಕೆ ಹಣವು ಹೊರಗಾದದ್ದಲ್ಲ. ಬೆಳ್ಳಿಯು ಸಾಂಪ್ರತಕ್ಕೆ ಚಿನ್ನಕ್ಕಿಂತಲೂ ೨೨ ಪಾಲು ಕಡಿಮೆ ಬೆಲೆಯುಳ್ಳದ್ದಾಗಿರುವದು. ಆದಕಾರಣ, ಕೆಲವೊಂದು ಪರಿಮಿತಿಯ ವ್ಯಾಪಾರವು ನಡಿಯ ಬೇಕಾದರೆ, ಚಿನ್ನಕ್ಕಿಂತಲೂ ಸುಮಾರು ೨೨ ಪಾಲು ಹೆಚ್ಚು ಬೆಳ್ಳಿಯು ಬೇಕಾಗುವದು. ಯಾವದೊಂದು ದೇಶದಲ್ಲಿ ಬೇಕಾಗುವ ಹಣದ ಪರಿಮಿತಿಯು, ಅಂಶತಃ ಅದನ್ನು ಉತ್ಪನ್ನ ಮಾಡುವದಕ್ಕೆ ತಗಲುವ ಖರ್ಚಿನ ಮೇಲೆ ಹಾಗೂ ಅಂಶತಃ ಹಣದ ಬಳಿಕೆ ತ್ವರೆಯಾಗಿ ಇಲ್ಲವೆ ಸಾವಕಾಶವಾಗಿ ನಡೆಯುವದರ ಮೇಲೆ, ಅವಲಂಬಿಸಿರುವದು. ಚಿನ್ನ ಬೆಳ್ಳಿಗಳನ್ನು ಮುಖ್ಯವಾಗಿ ಹಣ ಮಾಡುವದಕ್ಕೆ ಉಪಯೋಗಿಸುವರು. ಇದಲ್ಲದೆ, ಈ ಧಾತುಗಳನ್ನು ಅನೇಕ

ಕಲಾಕೌಶಲ್ಯಗಳಲ್ಲಿ ಸಹ ಉಪಯೋಗಿಸುವದುಂಟು. ಆದ್ದರಿಂದ, ಪ್ರತಿಯೊಂದು ದೇಶದಲ್ಲಿರುವ ಚಿನ್ನ ಬೆಳ್ಳಿಗಳ ಬೇಡಿಕೆಯು (೧) ಅವುಗಳ ಬೆಲೆಯ ಮೇಲೂ, (೨) ಆ ದೇಶದ ಸಂಪತ್ತು ಹಾಗೂ ಲೋಕ ಸಂಖ್ಯೆ ಇವುಗಳ ಮೇಲೂ, (೩) ಆ ದೇಶದಲ್ಲಿ ಸರಕುಗಳ ಕ್ರಯವಿಕ್ರಯಗಳು ಹಣದ ದ್ವಾರಾ ಎಷ್ಟು ಬಾರಿ ನಡಿಯುವವೆಂಬುವದರ ಮೇಲೂ, (೪) ಚಿನ್ನ ಬೆಳ್ಳಿಗಳನ್ನು ಉಪಯೋಗಿಸುವ ಕಲಾಕೌಶಲ್ಯಗಳ ತೇಜದ ಮೇಲೂ ಅವಲಂಬಿಸಿರುವದು.

ಹಣದ ಬೇಡಿಕೆ ದೇಶದ ಸಂಪತ್ತನ್ನು ಅನುಸರಿಸಿ ಇರುವದೆಂದು ಹೇಳಿದ್ದರ ಮೇಲಿಂದ, ಯಾವದೊಂದು ದೇಶದ ಸಂಪತ್ತನ್ನು ಆ ದೇಶದಲ್ಲಿ ಬಳಿಕೆಯಲ್ಲಿದ್ದ ಚಿನ್ನ ಬೆಳ್ಳಿಗಳ ಪರಿಮಿತಿಯ ಮೇಲಿಂದ ಖಂಡಿತವಾಗಿ ಹೇಳ ಬಹುದೆಂದು ಭಾವಿಸಲಾಗದು. ಯಾವನೊಬ್ಬನ ಸಂಪತ್ತು ಇಷ್ಟೇ ಎಂದು ತಿಳಿಯುವದಕ್ಕೆ, ಅವನು ಬಳಿಸುವ ಹಣದ ಪರಿಮಿತಿಯು ಸರಿಯಾದ ಪ್ರಮಾಣವಲ್ಲ. ಯಾಕಂದರೆ ಅವನು ಬಹುತರವಾಗಿ ಯಾವತ್ತು ದೊಡ್ಡ ರಕಮುಗಳನ್ನು ಕೊಡಬೇಕಾದರೆ, ಹಣಕ್ಕೆ ಬದಲಾಗಿ ಉಪಯೋಗಿಸುವಂಥ ಹುಂಡೀ ಚೀಟುಗಳನ್ನೂ ಬ್ಯಾಂಕಿನ ನೋಟುಗಳನ್ನೂ ಉಪಯೋಗಿಸುವನು. ಸಣ್ಣಸಣ್ಣ ರಕಮುಗಳನ್ನು ಕೊಡುವಾಗ ಮಾತ್ರ ಹಣವನ್ನು ಉಪಯೋಗಿಸುವದು ಅವನಿಗೆ ಅಗತ್ಯವಾಗುವದು; ಆಳುಹೋಳುಗಳಿಗೂ ಕೂಲಿಕಾರರಿಗೂ ಕೊಡುವದಕ್ಕೂ ನಿತ್ಯದ ಕಿರುಕುಳ ಖರ್ಚಿಗೂ ಹಣ ಬೇಕಾಗುವದು. ಇದರ ಮೇಲಿಂದ ತಿಳಿಯ ತಕ್ಕದ್ದೇನಂದರೆ, ಯಾವನೊಬ್ಬನು ಉಪಯೋಗಿಸುವ ಹಣವು ಅವನ ಸಂಪತ್ತಿನ ಮಿತಿಯನ್ನು ತೋರಿಸುವ ಸರಿಯಾದ ಪ್ರಮಾಣವಾಗದೆ ಇದ್ದಾಗ್ಯೂ, ಅವನಿಗಿರುವ ಹಣದ ಗರಜು ಬಹುತರ ಅವನ ಸಂಪತ್ತಿನ ಕೆಲವೊಂದು ಪ್ರಮಾಣದಿಂದ ಇರುವದು. ಯಾಕಂದರೆ, ಅವನ ಸಂಪತ್ತು ಹೆಚ್ಚಿದ ಹಾಗೆ ಅವನು ಹೆಚ್ಚು ಆಳುಗಳನ್ನೂ ಹೆಚ್ಚು ಕೂಲಿಯವರನ್ನೂ ದುಡಿಸಿ ಕೊಳ್ಳುವನು, ಹೆಚ್ಚು ಖರ್ಚಿನ ಪ್ರಯಾಣಗಳನ್ನು ಮಾಡುವನು. ಮತ್ತು ಅವನ ನಿತ್ಯದ ಖರ್ಚು ಸಹ ಬಹುತರ ಬೆಳಿಯುವದು.

ವ್ಯಕ್ತಿ ಮಾತ್ರರ ವಿಷಯವಾಗಿ ಸರಿಬೀಳುವ ಮಾತೇ ಇಡೀ ರಾಷ್ಟ್ರದ ವಿಷಯವಾಗಿಯೂ ಸರಿಬೀಳುವದು. ಹಣದ ಬೇಡಿಕೆಯು ರಾಷ್ಟ್ರದ ಸಂಪತ್ತನ್ನು ತೋರಿಸುವಂಥ ನಿಶ್ಚಯಾತ್ಮಕವಾದ ಪ್ರಮಾಣವಲ್ಲದಿದ್ದರೂ, ಅದು ಯಾವಾಗಲೂ ದೇಶದ ಸಂಪತ್ತು ಜನಸಂಖ್ಯೆಗಳ ಕೆಲವೊಂದು ಪ್ರಮಾಣದಿಂದ ಇದ್ದೇ ಇರುವದು. ಈ ಪ್ರಕಾರ ೧,೦೦,೦೦,೦೦೦ ಪ್ರಜೆಯುಳ್ಳದೇಶಕ್ಕಿಂತಲೂ ೨,೦೦,೦೦,೦೦೦ ಪ್ರಜೆಯುಳ್ಳ ದೇಶದಲ್ಲಿ ನಗದು ಹಣವನ್ನು ಕೂಲಿಯಾಗಿ ದೊರಕಿಸುವವರು

ಬಹಳ ಹೆಚ್ಚಾಗಿರುವರು. ಆದರೆ ಇಂಗ್ಲಂಡದಲ್ಲಿ ಇತ್ತಲಾಗಿ ಇಪ್ಪತ್ತು ವರ್ಷ ಸಂಪತ್ತೂ, ಜನಸಂಖ್ಯೆಯೂ ಬೆಳೆದ ಪ್ರಮಾಣದಿಂದ ಹಣದ ಬೇಡಿಕೆ ಬೆಳೆದಿರುವ ದಿಲ್ಲ. ಹೀಗಾಗುವದಕ್ಕೆ ಕಾರಣವೇನಂದರೆ, ಇಂಗ್ಲಂಡದಲ್ಲಿ ಇತ್ತಲಾಗಿ ಹುಂಡೀ ವ್ಯಾಪಾರವು ಬಹಳ ಬೆಳೆದಿರುವದು. ಅಲ್ಲಿ ಪ್ರತಿದಿವಸ ನಡಿಯುವ ಎಷ್ಟೋ ಕ್ರಯ ವಿಕ್ರಯಗಳು ಯಾವ ತರದ ನಾಣ್ಯವೂ ನಡುವೆ ಬರದೆ, ಕೇವಲ ಚೇಕುಗಳಿಂ ದಲೇ ನಡಿಯುವವು. ಇಂಗ್ಲಂಡದ ವ್ಯಾಪಾರದ ವಿಸ್ತಾರದ ಪ್ರಮಾಣದಂತೆ ನೋಡಿದರೆ, ಬೇರೆ ಯಾವ ದೇಶಕ್ಕಿಂತಲೂ ಇಂಗ್ಲಂಡದಲ್ಲಿ ಕಡಿಮೆ ನಗದು ಹಣ ಉಪಯೋಗಿಸಲ್ಪಡುತ್ತದೆಂದು ಹಲವರು ಹೇಳುತ್ತಾರೆ. ಬೆಳ್ಳಿ ಭಂಗಾರಗಳನ್ನು ಉಪಯೋಗಿಸುವದರಿಂದ ಆಗುವ ಕಾರ್ಯಭಾಗವು ಚೇಕುಗಳನ್ನು ಉಪಯೋ ಗಿಸುವದರಿಂದ ನೆರವೇರುವ ಕ್ರಮವು, "ಪತ್ತು ಮತ್ತು ಅದರಿಂದ ಕ್ರಯಗಳ ಮೇಲೆ ಉಂಟಾಗುವ ಪರಿಣಾಮು" ಎಂಬ ಅಧ್ಯಾಯದಲ್ಲಿ ವಿವರಿಸಲ್ಪಡುವದು. ಚೇಕುಗಳನ್ನು ಉಪಯೋಗಿಸಿದ ಕ್ಷಣಕ್ಕೆ ಅವುಗಳಿಂದ ನಾಣ್ಯಗಳ ಕಾರ್ಯಭಾಗ ವಾಗುವ ಬಗೆಯು ಸಹಜವಾಗಿ ತಿಳಿಯುವ ಹಾಗಿರುವ ಕಾರಣ, ಅದರ ವಿಷ ಯದಲ್ಲಿ ಇಲ್ಲಿ ಹೇಳುವದು ಸಹ ಅಗತ್ಯವಿದ್ದಂತೆ ತೋರುವದಿಲ್ಲ. ಹಿಂದಕ್ಕೆ ಇಂ ಗ್ಲಂಡದಲ್ಲಿ ವ್ಯಾಪಾರದ ದೊಡ್ಡ ರಕಮುಗಳನ್ನೆಲ್ಲ ನಗದು ಕೊಡುತ್ತಿದ್ದರು. ಕಾಳಿನ ವ್ಯಾಪಾರಕ್ಕೆ, ಇಲ್ಲವೆ ದನಕರಗಳ ವ್ಯಾಪಾರಕ್ಕೆ ಪೇಟೆಗೆ ಬಂದ ಯಾವತ್ತು ಒಕ್ಕಲಿಗರಿಗೆ ಕ್ರಯವಿಕ್ರಯಗಳನ್ನು ನಗದು ಹಣದಿಂದಲೇ ಮಾಡ ಬೇಕಾಗುತ್ತಿ ತ್ತು. ಆದಕಾರಣ, ಸಂತೆಯ ದಿವಸ ಒಂದು ಊರೊಳಗೆ ಸಾವಿರಾರು ಪೌಂಡು ಗಳು ಬಳಿಸಲ್ಪಡುತ್ತಿದ್ದವು. ಆದರೆ ಈಗ್ಯೆ ಈ ಬಗೆಯ ಲೋಕ ವ್ಯವಹಾರಗಳ ಲ್ಲೆಲ್ಲ ಹಣವನ್ನು ಎಷ್ಟು ಮಾತ್ರವೂ ಉಪಯೋಗಿಸುವದಿಲ್ಲ. ಒಕ್ಕಲಿಗರು ತಮ್ಮ ಚೇಕುವಹಿಗಳನ್ನು ಸಂತೆಗೆ ತರುವರು. ಅವರಿಗೆ ಹಾದಿಯ ಖರ್ಚಿಗೆ ಬೇಕಾ ಗುವ ಚಿಲ್ಲರೆ ಹಣವು ಹೊರ್ತಾಗಿ, ಹೆಚ್ಚಿಗೆ ಹಣವನ್ನು ಉಪಯೋಗಿಸುವ ಕಾರಣ ವಿರುವದಿಲ್ಲ. ಈ ಎಲ್ಲ ಸಂಗತಿಗಳಿಂದ ಫಲಿತವಾಗುವದೇನಂದರೆ, ಹಣದ ಬೇಡಿಕೆ ಯು ಯಾವದೊಂದು ದೇಶದ ಸಂಪತ್ತು ಜನಸಂಖ್ಯೆಗಳ ಕೆಲವೊಂದು ಪ್ರಮಾ ಣದಿಂದ ಇದ್ದಾಗ್ಯಾದರೂ, ಈ ಪ್ರಮಾಣವು ಸ್ಥಿರವಾದದ್ದೂ ಅಲ್ಲ, ಹಾಗೂ ನಿ ಶ್ಚಯಾತ್ಮಕವಾದದ್ದೂ ಅಲ್ಲ. ಯಾಕಂದರೆ, ಸಂಪತ್ತಿನ ಮೇಲೆ ವ್ಯವಹಾರ ಮಾ ಡುವ ಪದ್ಧತಿಯು ಹೆಚ್ಚು ಹೆಚ್ಚಾಗಿ ಹಬ್ಬಿಗೊಂಡ ಹಾಗೆ ಈ ಪ್ರಮಾಣವು ಯಾ ವಾಗಲೂ ಬದಲಿಸುವದು.

ಸರಕುಗಳ ಕ್ರಯವಿಕ್ರಯಗಳು ಹಣದ ದ್ವಾರಾ ಬಹಳ ಸಾರಿ ಇಲ್ಲವೆ ತುಸು ಸಾರಿ ನಡೆದ ಮೇರೆಗಾದರೂ, ಊಚ ಧಾತುಗಳ ಬೇಡಿಕೆ ಹೆಚ್ಚುಕಡಿಮೆಯಾಗ ಬಹುದು. ಉದಾಹರಣಾರ್ಥವಾಗಿ, ಒಂದು ಮಾಂಜರಪಾಟಿನ ವಸ್ತ್ರವನ್ನು ತಕ್ಕೊಳ್ಳುವ. ಈ ವಸ್ತ್ರವನ್ನು ವಸ್ತ್ರಗಳ ಕಾರಖಾನೆಯವನು ಹಣ ತಕ್ಕೊಂಡು ಒಬ್ಬ ಠೋಕ ವ್ಯಾಪಾರ ಮಾಡುವವನಿಗೆ ಮಾರುವನು. ಈ ವ್ಯಾಪಾರಸ್ಥನು ಅದನ್ನು ಚಿಲ್ಲರೆ ವ್ಯಾಪಾರ ಮಾಡುವವನಿಗೆ ಹಣಕ್ಕೆ ಮಾರುವನು. ಆ ಚಿಲ್ಲರೆ ವ್ಯಾಪಾರಸ್ಥನಿಂದ ಒಬ್ಬ ಚಿಂಪಿಗನು ಅದನ್ನು ಹಣ ಕೊಟ್ಟು ಕೊಂಡು, ಅಂಗೀ ಹೊಲಿದು, ಮತ್ತೂ ಯಾರಿಗಾದರೂ ಮಾರುವನು. ಈ ಉದಾಹರಣದಲ್ಲಿ ಒಂದೇ ವಸ್ತ್ರವು ಅದರಿಂದ ಕಟ್ಟ ಕಡೆಗೆ ಅಂಗಿಯಾಗುವ ವರೆಗೆ ನಾಲ್ಕು ಸಾರಿ ಹಣಕ್ಕೆ ಮಾರಲ್ಪಟ್ಟಿತು. ಈ ಪ್ರಕಾರ ನಡಿಯುವ ಕ್ರಯವಿಕ್ರಯಪರಂಪರೆಯು ಸಾಗ ಬೇಕಾದರೆ, ಆ ವಸ್ತ್ರವನ್ನು ಕಾರಖಾನೆಯವನಿಂದ ಚಿಂಪಿಗನೇ ಕೊಂಡಿದ್ದರೆ ಬೇಕಾಗುತ್ತಿದ್ದ ಹಣಕ್ಕಿಂತಲೂ ಎಷ್ಟೋ ಪಾಲು ಹೆಚ್ಚು ಹಣ ಬೇಕಾಗುವದು ಸ್ಪಷ್ಟವೇ ಸರಿ. ಆದರೆ ಈ ಸ್ಥಳದಲ್ಲಿ ಹೇಳ ಬೇಕಾದದ್ದೇನಂದರೆ, ವ್ಯಾಪಾರದ ದೊಡ್ಡ ವ್ಯವಹಾರಗಳನ್ನು ಈಗ್ಯೆ ಬಹುತರವಾಗಿ ಹಣವನ್ನು ಉಪಯೋಗಿಸದೆ ನಡಿಸುವರು. ವಾಡಿಕೆಯಾಗಿ, ಠೋಕ ಖರೀದಿ ಮಾಡುವವನು ಕಾರಖಾನೆಯವನಿಗೆ ಚೇಕನ್ನಾಗಲಿ, ಮುದ್ದತಿ ಹುಂಡಿಯನ್ನಾಗಲಿ ಕೊಡುವನು. ಚಿಲ್ಲರೆ ವ್ಯವಹಾರ ಮಾಡುವವನಾದರೂ ಠೋಕವ್ಯವಹಾರ ಮಾಡುವವನಿಗೆ ಕೊಡ ತಕ್ಕ ಹಣವನ್ನು ಇದರಂತೆಯೇ ಕೊಡುವನು. ಈ ಪತ್ತಿನ ಸಾಧನಗಳ ಮೂಲಕವಾಗಿ ಬಳಿಕೆಯಲ್ಲಿರ ಬೇಕಾಗುವ ಹಣದ ಪರಿಮಿತಿಯು ಬಹಳ ಕಡಿಮೆ ಇದ್ದರೂ ಸಾಗುತ್ತದೆ. ಆದರೂ ಮೇಲಿನ ಉದಾಹರಣದಿಂದ, ಪ್ರತಿಯೊಂದು ದೇಶದಲ್ಲಿ ಚಿನ್ನ ಬೆಳ್ಳಿಗಳ ಬೇಡಿಕೆಯು ಅಂಶತಃ ಸರಕುಗಳು ಕಡೆಯ ಉಪಯೋಗಕ್ಕೆ ಹತ್ತುವ ಪೂರ್ವದಲ್ಲಿ ಅವುಗಳ ಕ್ರಯವಿಕ್ರಯವು ಎಷ್ಟು ಬಾರಿ ನಡೆಯುತ್ತದೆಂಬದರ ಮೇಲೆ ಅವಲಂಬಿಸಿರುತ್ತದೆಂಬದು ಚನ್ನಾಗಿ ವ್ಯಕ್ತವಾಗುತ್ತದೆ.

ಚಿನ್ನ ಬೆಳ್ಳಿಗಳನ್ನು ಕಲಾಕೌಶಲ್ಯಗಳಲ್ಲಿ ಉಪಯೋಗಿಸುವದರಿಂದ ಅವುಗಳ ಬೇಡಿಕೆ ಹೆಚ್ಚುಕಡಿಮೆಯಾಗುವ ಬಗೆಯನ್ನು ವಿವರಿಸುವದು ವಿಶೇಷ ಅವಶ್ಯವಿಲ್ಲ. ಬೇರೆ ಖನಿಜ ಪದಾರ್ಥಗಳ ಹುಟ್ಟುವಳಿಯ ಬೆಲೆಯನ್ನು ನಿರ್ಣೈಸುವಂಥ ನಿಯಮಗಳೇ ಚಿನ್ನ ಬೆಳ್ಳಿಗಳ ಬೆಲೆಯನ್ನೂ ನಿರ್ಣೈಸುತ್ತವೆಂದು ಹಿಂದೆ ಹೇಳಿಯದೆ. ಆದಕಾರಣ, ಬೇರೆ ಎಲ್ಲ ಸ್ಥಿತಿಯು ಯಥಾಪೂರ್ವವಾಗಿದ್ದು, ಕಲಾಕೌಶಲ್ಯಗಳಲ್ಲಿ ಹೆಚ್ಚು ಚಿನ್ನ ಬೆಳ್ಳಿಗಳನ್ನು ಉಪಯೋಗಿಸುವದಕ್ಕೆ ಏನಾದರೂ ಕಾರಣ

ಉಂಟಾದರೆ, ಆ ಕಾರಣದಿಂದ ಚಿನ್ನ ಬೆಳ್ಳಿಗಳ ಬೇಡಿಕೆ ಹೆಚ್ಚುವದು, ಮತ್ತು ಈ ಪ್ರಕಾರ ಹೆಚ್ಚಿದ ಬೇಡಿಕೆಯು ಅವುಗಳ ಬೆಲೆಯನ್ನು ಏರಿಸುವದಕ್ಕೆ ಕಾರಣವಾಗುವದು.

**ವೃದ್ಧಿ ಹೊಂದಿದ ಬೇಡಿಕೆ ಪೂರೈಕೆಗಳಿಂದ ಹಣದ ಬೆಲೆಯ ಮೇಲೆ ನಡಿಯುವ ಕಾರ್ಯವನ್ನು ವಿವರಿಸುವ ದೃಷ್ಟಾಂತಗಳು.**—ಚಿನ್ನ ಬೆಳ್ಳಿಗಳ ಬೆಲೆಯ ಮೇಲೆ ಅವುಗಳ ಬೇಡಿಕೆಯಿಂದುಂಟಾಗುವ ಕಾರ್ಯವನ್ನು ವಿಶೇಷ ವಾಗಿ ಸ್ಪಷ್ಟೀಕರಿಸುವದಕ್ಕಾಗಿ, ಹಣಕ್ಕೆ ಬದಲಾಗಿ ಉಪಯೋಗಿಸಲಾಗುವಂಥ ಬ್ಯಾಂಕಿನ ನೋಟುಗಳು ಹಾಗೂ ಮುದ್ದತಿ ಹುಂಡಿಗಳು ಇಲ್ಲವೆಂದು ಕಲ್ಪಿಸುವ. ಇದಲ್ಲದೆ, ಚಿನ್ನ ಬೆಳ್ಳಿಗಳ ಪೂರೈಕೆಯು ಹೊಸ ಕಣಿಗಳ ಶೋಧದಿಂದಾಗಲಿ ಪರದೇಶಗಳಿಂದ ಚಿನ್ನ ಬೆಳ್ಳಿಗಳು ಬರುವದರಿಂದಾಗಲಿ ಹೆಚ್ಚಾಗುವ ಹಾಗಿಲ್ಲವೆಂತಲೂ ಕಲ್ಪಿಸೋಣ. ಈ ಸಂಗತಿಗಳನ್ನು ಗ್ರಹಿಸುವದರಿಂದ, ನಿರ್ಣಯ ಮಾಡ ತಕ್ಕ ಪ್ರಶ್ನವು ಸುಲಭವಾಗುತ್ತದೆ. ಒಂದು ದೇಶದ ಜನರು ತಮ್ಮ ಯಾವತ್ತು ವ್ಯವಹಾರಗಳನ್ನು ಚಿನ್ನ ಬೆಳ್ಳಿಗಳ ನಾಣ್ಯಗಳಿಂದಲೇ ಹೊರ್ತು ಬೇರೆ ಯಾವದರಿಂದಲೂ ನಡಿಸುವದಿಲ್ಲವೆಂತಲೂ, ಅವರಿಗೆ ಚಿನ್ನ ಬೆಳ್ಳಿಗಳ ಪೂರೈಕೆಯನ್ನು ಬೆಳಿಸುವ ಸಾಧನಗಳಿಲ್ಲವೆಂತಲೂ ಕಲ್ಪಿಸುವ. ಈ ಜನರೊಳಗೆ ಬಹಳ ಸಂಪತ್ತು ಉತ್ಪನ್ನವಾಗಿ, ಯಾವತ್ತು ಕೈಗಾರಿಕೆಯ ಸರಕುಗಳು ಇಮ್ಮಡಿಯಾದವೆಂತಲೂ, ಜನಸಂಖ್ಯೆಯೂ ಬೆಳೆಯಿತೆಂತಲೂ ತಿಳಿಯಿರಿ. ಈ ಪ್ರಸಕ್ತಿಯಲ್ಲಿ, ಮೊದಲಿನಷ್ಟೇ ಹಣವು ಮೊದಲಿನ ಇಮ್ಮಡಿ ಕ್ರಯವಿಕ್ರಯಗಳನ್ನು ನಡಿಸುವದಕ್ಕೆ ಉಪಯೋಗಿಸಲ್ಪಡುವದು. ಅದರಿಂದ ಪೇಟೆಯ ಧಾರಣೆಗಳು ಅರ್ಧ ಇಳಿಯುವವು, ಅಂದರೆ ಚಿನ್ನ ಬೆಳ್ಳಿಗಳ ಬೆಲೆಯು ಇಮ್ಮಡಿ ಏರುವದು. ಇನ್ನು ಮತ್ತೊಂದು ಉದಾಹರಣವನ್ನು ತಕ್ಕೊಳ್ಳುವ. ಒಂದು ಜನಾಂಗದವರ ವ್ಯಾಪಾರ, ಜನಸಂಖ್ಯೆ, ಶಿಲಗಳು ಹೆಚ್ಚು ಕಡಿಮೆಯಾಗದೆ ಸ್ಥಿರವಾಗಿವೆಯೆಂತಲೂ, ಕೊಡ ತಕ್ಕ ಎಲ್ಲ ರಕಮುಗಳು ಹಣದ ದ್ವಾರಾ ಕೊಡಲ್ಪಡುತ್ತವೆಂತಲೂ ಕಲ್ಪಿಸುವ. ಈ ಜನರೊಳಗೆ ೧,೦೦,೦೦,೦೦೦ ಪೌಂಡು ಹಣವು ಬಳಿಕೆಯಲ್ಲುಂಟೆಂದು ತಿಳಿಯಿರಿ, ಮತ್ತು ಅವರ ದೇಶದಲ್ಲಿ ಚಿನ್ನ ಬೆಳ್ಳಿಗಳ ಹೊಸ ಕಣಿಗಳು ಶಿಕ್ಕಿದ್ದರಿಂದ, ಇಲ್ಲವೆ ಪರದೇಶದಿಂದ ಚಿನ್ನ ಬೆಳ್ಳಿಗಳು ಬಂದದ್ದರಿಂದ ಬಳಿಕೆಯಲ್ಲಿರುವ ಹಣವು ಮೊದಲಿನದಕ್ಕಿಂತಲೂ ೨೦,೦೦,೦೦೦ ಪೌಂಡು ಹೆಚ್ಚಾಯಿತೆಂದು ತಿಳಿಯುವ. ನಾವು ಗ್ರಹಿಸಿದ ಮೇರೆಗೆ, ಮೊದಲಿನಷ್ಟೇ ಸರಕುಗಳು ಮೊದಲಿನಷ್ಟೇ ಸಾರಿ ಕೊಡಕೊಳ್ಳಲ್ಪಡುವವು. ಪರಂತು, ದೇಶದೊಳಗೆ ಬಳಿಕೆಯಲ್ಲಿದ್ದ ಹಣವು ⅕ ಹೆಚ್ಚಿದೆ. ಈ ಪ್ರಸಕ್ತಿಯಲ್ಲಿ ಚಿನ್ನದ ಬೆಲೆ, ಅಂದರೆ ಚಿನ್ನದಲ್ಲಿದ್ದ ವಿನಿಮಯ ಶಕ್ತಿಯು ನೂರಕ್ಕೆ

೨೦ರಂತೆ ಕಡಿಮೆಯಾಗುವದರಿಂದ ಚಿನ್ನದಲ್ಲುಂಟಾದ ⅕ ಪಾಲು ವೃದ್ಧಿಗೆ ಸರಿಯಾಗಿ ಸಂಬಳದ ದರವೂ, ಪೇಟಿಯ ಧಾರಣೆಗಳೂ ಅವಶ್ಯವಾಗಿ ಏರುವವು. ಈ ದೃಷ್ಟಾಂತದಿಂದ ಸಿದ್ಧವಾಗುವದೇನಂದರೆ, ಪ್ರತಿಬಂಧಕ ಸಂಗತಿಗಳು ಇಲ್ಲದ ಪಕ್ಷಕ್ಕೆ, ಬಳಿಕೆಯಲ್ಲಿದ್ದ ಚಿನ್ನ ಬೆಳ್ಳಿಗಳ ಪರಿಮಿತಿಯು ಬೆಳೆದ ಪ್ರಮಾಣದಿಂದ ಚಿನ್ನದ ಬೆಲೆ, ಅಂದರೆ ಚಿನ್ನದಲ್ಲಿದ್ದ ಕೊಳ್ಳುವ ಶಕ್ತಿಯು ಕಡಿಮೆಯಾಗುವದು. ಮೊದಲನೆ ದೃಷ್ಟಾಂತದಿಂದ ಸಿದ್ಧವಾಗುವದೇನಂದರೆ, ಸಂಪತ್ತು ವೃದ್ಧಿಯಾದ ಮಾನದಿಂದ ಬಳಿಕೆಯಲ್ಲಿದ್ದ ಹಣದ ಪರಿಮಿತಿಯು ಹೆಚ್ಚಾಗದಿದ್ದರೆ, ಚಿನ್ನದ ಬೆಲೆ, ಅಂದರೆ ಅದರಲ್ಲಿದ್ದ ಬೇರೆ ಒಡವೆಗಳನ್ನು ಸಂಪಾದಿಸುವ ಶಕ್ತಿಯು ಬೆಳೆಯಲೇ ಬೇಕು. ಸರಕುಗಳ ಧಾರಣೆಗಳು ಏರುವದು ಸಂಪತ್ತಿನ ಅಭಿವೃದ್ಧಿಯ ಲಕ್ಷಣವಲ್ಲ.

ಆದರೆ ವಸ್ತುತಃ ನೋಡಿದರೆ, ಸಂಪತ್ತು ಬೆಳೆದದ್ದರಿಂದ ಉಂಟಾಗುವ ಪರಿಣಾಮವೇ ಆಗಲಿ, ಬಳಿಕೆಯೊಳಗಿನ ಹಣವು ಹೆಚ್ಚಿದ್ದರಿಂದ ಉಂಟಾಗುವ ಪರಿಣಾಮವೇ ಆಗಲಿ, ಚಿನ್ನ ಬೆಳ್ಳಿಗಳ ಬೆಲೆಯ ಮೇಲೆ ಪೂರ್ಣವಾಗಿ ಎಂದಿಗೂ ನಡಿಯುವದಿಲ್ಲ. ಈ ಮಾತು ಸಹಜವಾಗಿ ತಿಳಿಯುವದು. ಮೇಲೆ ಹೇಳಿದ ಉದಾಹರಣಗಳಲ್ಲಿ, ಪ್ರತಿಬಂಧಕ ಸಂಗತಿಗಳ ಅಭಾವವನ್ನು ಗ್ರಹಿಸ ಬೇಕಾಯಿತು. ಆದರೆ ವಾಸ್ತವಿಕವಾಗಿ ಈ ಪ್ರತಿಬಂಧಕ ಕಾರಣಗಳು ಯಾವಾಗಲೂ ಇದ್ದೇ ಇರುವವು. ಮೊದಲನೆ ದೃಷ್ಟಾಂತದಲ್ಲಿ, ಬಳಿಕೆಯಲ್ಲಿದ್ದ ಚಿನ್ನ ಬೆಳ್ಳಿಗಳ ಪರಿಮಿತಿಯು ಎಷ್ಟು ಮಾತ್ರವೂ ಬೆಳೆಯದೆ, ಕೈಗಾರಿಕೆಗಳೂ ಜನಸಂಖ್ಯೆಯೂ ಬಹಳವಾಗಿ ಹೆಚ್ಚಿದವೆಂದು ಗ್ರಹಿಸಲಾಯಿತು. ಹಾಗೂ ಅದಕ್ಕೆ ಅನುಸಾರವಾಗಿ ಹಣದ ಬೆಲೆಯು ಬಹಳ ಏರುವದೆಂದು ಊಹಿಸಲಾಯಿತು. ಆದರೆ ವಾಸ್ತವ ಸ್ಥಿತಿಯನ್ನು ನೋಡಿದರೆ ತಿಳಿಯುವದೇನಂದರೆ, ಹಣದ ಬೆಲೆ ಏರಿದ ಕೂಡ್ಲೆ ಹಣದ ಪೂರೈಕೆಗೆ ಉತ್ತೇಜನವಾಗುವದು. ವ್ಯಾಪಾರವು ಬೆಳೆದ ಹಾಗೆ ಹಣಕ್ಕೆ ಬದಲಾಗಿ ನಡಿಸಲ್ಪಡುವಂಥ ನಾನಾ ತರದ ಸಾಧನಗಳು ಬಹುತರವಾಗಿ ಪ್ರಚಾರದಲ್ಲಿ ಬಂದೇ ಬರುವವು. ಈ ಬಗೆಯ ಪ್ರತಿಬಂಧಕ ಸಂಗತಿಗಳು ವಾಡಿಕೆಯಾಗಿ ಹಣದ ಬೆಲೆಯನ್ನು ಒಮ್ಮಿಂದೊಮ್ಮೆ ಬಹಳ ಹೆಚ್ಚು ಕಡಿಮೆಯಾಗಗೊಡುವದಿಲ್ಲ.

**ಕ್ಯಾಲಿಫೋರ್ನಿಯಾ ಮತ್ತು ಆಸ್ಟ್ರೇಲಿಯದಲ್ಲಿ ಆದ ಚಿನ್ನದ ಕಣಿಗಳ ಶೋಧಗಳಿಂದ ಉಂಟಾದ ಪರಿಣಾಮವು.**— ಎರಡನೆ ದೃಷ್ಟಾಂತದಲ್ಲಿ, ಲೋಕಸಂಖ್ಯೆಯಾಗಲಿ ಸಂಪತ್ತಾಗಲಿ ಬೆಳೆಯದೆ, ಬಳಿಕೆಯಲ್ಲಿದ್ದ ಹಣವು ಮಾತ್ರ

ಬಹಳ ಹೆಚ್ಚಿತೆಂದು ಕಲ್ಪಿಸಲಾಯಿತು. ಸನ್ ೧೮೫೦ನೇ ಇಸವಿಯ ಸುಮಾರಿನಲ್ಲಿ ಆಸ್ಟ್ರೇಲಿಯ ಹಾಗೂ ಕ್ಯಾಲಿಫೋರ್ನಿಯ ದೇಶಗಳಲ್ಲಿ ಚಿನ್ನದ ಕಣಿಗಳ ದೊಡ್ಡ ಶೋಧಗಳು ಆದಾಗ, ಬಳಿಕೆಯಲ್ಲಿದ್ದ ಹಣದ ಪರಿಮಿತಿಯು ಬಹಳ ಹೆಚ್ಚಿತು. ೧೮೫೦ನೇ ವರ್ಷದ ಮುಂಚೆ ಎಲ್ಲ ಕಡೆಯಲ್ಲಿ ಕೂಡಿ ವರ್ಷಕ್ಕೆ ಸುಮಾರು ೧,೦೦,೦೦,೦೦೦ ಪೌಂಡುಗಳ ಚಿನ್ನವು ಹುಟ್ಟುತ್ತಿತ್ತು. ಆದರೆ ಇಷ್ಟೇ ಚಿನ್ನವು ಸನ್ ೧೮೫೨ನೇ ಇಸವಿಯಿಂದ ೧೮೫೭ರ ವರೆಗೆ ಐದು ವರ್ಷ ಆಸ್ಟ್ರೇಲಿಯ ಮತ್ತು ಕ್ಯಾಲಿಫೋರ್ನಿಯದ ಚಿನ್ನದ ಪ್ರದೇಶಗಳಲ್ಲಿ ಪ್ರತ್ಯೇಕವಾಗಿ ಹುಟ್ಟಿತು. ಆದ ಕಾರಣ, ಆ ಏಳು ವರ್ಷಗಳಲ್ಲಿ ಚಿನ್ನದ ವಾರ್ಷಿಕ ಪೂರೈಕೆಯು ಮುಮ್ಮಡಿಯಾಯಿತು. ಈ ಪ್ರಕಾರ ಚಿನ್ನದ ವಾರ್ಷಿಕ ಪೂರೈಕೆ ಅದ್ಭುತವಾಗಿ ಹೆಚ್ಚಾದ್ದರಿಂದ, ಚಿನ್ನದ ಬೆಲೆಯು ಬೇಗನೆ ಇಳಿಯುವದೆಂತಲೂ, ಯಾವತ್ತು ಸರಕುಗಳ ಧಾರಣೆಗಳು ಬಹಳ ಏರುವವೆಂತಲೂ, ಬಹುಮಾನ್ಯರಾದ ಗ್ರಂಥಕರ್ತರೆಲ್ಲರೂ ಭವಿಷ್ಯ ಹೇಳಿದರು. ಆದರೆ ಈ ಭವಿಷ್ಯವು ಇದು ವರೆಗೂ ಪೂರ್ಣವಾಗದೆ ಇದೆ. ಕೆಲ ವರ್ಷಗಳ ವರೆಗಂತೂ ಚಿನ್ನದ ಹೊಸ ಕಣಿಗಳ ಶೋಧಗಳಿಂದ ಪೇಟೆಯ ಧಾರಣೆಗಳ ಮೇಲೆ ಅಲ್ಪಸ್ವಲ್ಪಾದರೂ ಪರಿಣಾಮವಾಯಿತೋ, ಇಲ್ಲವೋ, ಎಂಬುವದೇ ಸಂಶಯವಾಗಿತ್ತು. ಬಹಳ ಸೂಕ್ಷ್ಮದೃಷ್ಟಿಯಿಂದ ಶೋಧ ಮಾಡಲಾಗಿ ಸನ್ ೧೮೫೦ನೇ ಇಸವಿಯಿಂದ ಸನ್ ೧೮೭೧ನೇ ಇಸವಿಯ ವರೆಗೆ, ನೂರಕ್ಕೆ ೧೫ರಂತೆ ಚಿನ್ನದ ಬೆಲೆಯು ಕಡಿಮೆಯಾಗಿರುವದು ಗೊತ್ತಾಯಿತು*. ಚಿನ್ನದ ಪೂರೈಕೆಯು ಹೆಚ್ಚಾದದ್ದನ್ನೂ, ಚಿನ್ನದ ಬೆಲೆಯು ಇಳಿದದ್ದನ್ನೂ ತುಲನೆ ಮಾಡಿ ನೋಡಿದರೆ, ಅವುಗಳಲ್ಲಿ ಪರಸ್ಪರ ಏನು ಪ್ರಮಾಣವಿಲ್ಲ. ಚಿನ್ನದ ಪೂರೈಕೆ ಹೆಚ್ಚಿದ ಮಾನದಿಂದ ನೋಡಲಾಗಿ, ಅದರ ಬೆಲೆ ಅತ್ಯಲ್ಪ ಪ್ರಮಾಣದಿಂದ ಇಳಿದಿರುವದು. ಚಿನ್ನದ ವಾರ್ಷಿಕ ಪೂರೈಕೆಯು ಬಹಳವಾಗಿ ಬೆಳೆದಾಗ್ಯೂ, ಅದರ ಬೆಲೆಯು ಇಷ್ಟು ಅಲ್ಪವಾಗಿ ಇಳಿದದ್ದರ ಕಾರಣವನ್ನು ಶೋಧಿಸುವದು ಬಹು ಮನೋಹರವಾದ ವಿಷಯವಾಗಿದೆ. ಚಿನ್ನದಲ್ಲಿದ್ದ ಅವಿನಾಶಿತ್ವವೆಂಬ ಗುಣವೇ ಈ ಕಾರಣವು. ಚಿನ್ನದ ಪೂರೈಕೆಯು ನೂರಕ್ಕೆ ೩೦೦ರಂತೆ ವೃದ್ಧಿಯಾದಾಗ್ಯೂ, ಇದುವರೆಗೆ ಜಗತ್ತಿನಲ್ಲೆಲ್ಲ ಕೂಡಿ ಸಂಚಯವಾಗಿದ್ದ ಒಟ್ಟು ಚಿನ್ನಕ್ಕೆ ಈ ಹೆಚ್ಚಾದ ಚಿನ್ನವನ್ನು ಸರಿ ಮಾಡಿ ನೋಡಿದರೆ, ಚಿನ್ನದ ಪೂರೈಕೆಯು ಬಹಳ ಹೆಚ್ಚಿದಂತೆ ಆಗುವದಿಲ್ಲ. ಒಂದು ದೊಡ್ಡ ಮಳೆಯ ಸರ್ರುವಿನಿಂದ ಊರ ಹತ್ತರವಿದ್ದ ಹಳ್ಳ ಕೊಳ್ಳ,

*ಚಿನ್ನದ ಕಣಿಗಳ ಶೋಧದಿಂದ ಕ್ರಯಗಳಲ್ಲುಂಟಾದ ಪರಿಣಾಮದ ವಿಷಯದಲ್ಲಿ ಪ್ರೊಫೆಸರ್ ಕೇರ್ನ್ಸ್ ಮತ್ತು ಪ್ರೊಫೆಸರ್ ಜೆವ್ಹನ್ಸ್ ಎಂಬವರ ಗ್ರಂಥಗಳು ಪ್ರಮಾಣಭೂತವಾದವುಗಳು.

ತಗ್ಗುಗಳು ಮುಂತಾದವುಗಳು ತುಂಬಿ ಹೊರಚಲ್ಲುವವಾದರೂ, ಅದೇ ಸರುವು ಸಮುದ್ರದ ನೆಲೆ ಇಲ್ಲದ ಮಹಾ ಜಲಸಂಚಯದಲ್ಲಿ ಹನಿಯಂತೆ ಅಡಗಿ ಹೋಗುವದು. ಸನ್ ೧೮೫೦ನೇ ಇಸವಿಯ ಪೂರ್ವದಲ್ಲಿ, ಯಾವತ್ತು ಕಡೆಯಲ್ಲಿ ಒಟ್ಟುಗೂಡಿಸಿ ಇಷ್ಟೇ ಚಿನ್ನವು ಬಳಿಕೆಯಲ್ಲಿತ್ತೆಂದು ನಿಶ್ಚಿತವಾಗಿ ಹೇಳುವದಕ್ಕೆ ಬರುವದಿಲ್ಲ. ಆದರೂ ಆಗ ೫೬,೦೦,೦೦,೦೦೦ ಪೌಂಡಿನ ಚಿನ್ನವು ಬಳಿಕೆಯಲ್ಲಿತ್ತೆಂದು ಮಾನ್ಯರಾದ ಗ್ರಂಥಕರ್ತರ ಅಭಿಪ್ರಾಯ ಉಂಟು. ಹೊಸದಾಗಿ ಆದ ಕಣಿಗಳ ಶೋಧದಿಂದ ಈ ಪರಿಮಿತಿಯು ಒಂದೇ ವರ್ಷದೊಳಗೆ ಎಂದಿಗೂ ನೂರಕ್ಕೆ೫ತ್ತಿಕ್ಕಿಂತಲೂ ಹೆಚ್ಚು ಬೆಳೆಯಲಿಲ್ಲ. ಆದ್ದರಿಂದ, ಪೃಥ್ವಿಯೊಳಗಿನ ಯಾವತ್ತು ಚಿನ್ನದ ಸಂಚಯವು ಇಮ್ಮಡಿಯಾಗ ಬೇಕಾದರೆ, ಚಿನ್ನದ ಹೊಸ ಪ್ರದೇಶಗಳ ಶೋಧವಾದಂದಿನಿಂದ ೨೦ಕ್ಕಿಂತಲೂ ಹೆಚ್ಚು ವರ್ಷಗಳು ಬೇಕಾದವು.

ಇದಲ್ಲದೆ ಮತ್ತೊಂದು ಸಂಗತಿ ಏನಂದರೆ, ಚಿನ್ನದ ಉತ್ಪನ್ನವು ಕೆಲವು ವರ್ಷ ಮಾತ್ರ ಬಹಳವಾಯಿತೇ ಹೊರ್ತು ಬಹಳ ವರ್ಷ ಆಗಲಿಲ್ಲ. ಅತ್ಯಂತ ಉತ್ಪಾದಕವಾದ ಕಣಿಗಳು ಸ್ವಲ್ಪ ಕಾಲದಲ್ಲಿಯೇ ತೀರಿ ಹೋದವು. ಮತ್ತು ಸನ್ ೧೮೫೮ನೇ ಇಸವಿಯಲ್ಲಿ ವಾರ್ಷಿಕ ಉತ್ಪನ್ನವು ೩,೨೦,೦೦,೦೦೦ ಪೌಂಡುಗಳವರೆಗೆ ಏರಿದ್ದು, ಸನ್ ೧೮೬೦ರಲ್ಲಿ ೧,೮೦,೦೦,೦೦೦ ಪೌಂಡಿಗೆ ಇಳಿಯಿತು. ಮತ್ತು ಸನ್ ೧೮೮೧ನೇ ಇಸವಿಯಲ್ಲಿ ಚಿನ್ನದ ಉತ್ಪನ್ನವು ೨,೧೫,೦೦,೦೦೦ ಪೌಂಡು ಆಯಿತು. ಆದರೆ, ಚಿನ್ನದ ಕಣಿಗಳ ಶೋಧಗಳಿಂದ ಚಿನ್ನದ ಬೆಲೆಯು ಇದಕ್ಕೂ ವಿಶೇಷವಾಗಿ ಇಳಿಯದೆ ಇರುವದಕ್ಕೆ ಬೇರೆ ಕೆಲವು ಬಹು ಗೌರವವುಳ್ಳ ಕಾರಣಗಳುಂಟು. ಚಿನ್ನದ ಕಣಿಗಳ ಶೋಧವಾದ ಕಾಲಕ್ಕೇ ವ್ಯಾಪಾರ ಉದ್ಯೋಗಗಳು ಬಹಳವಾಗಿ ಅಭಿವೃದ್ಧಿ ಹೊಂದುವದಕ್ಕೆ ಕಾರಣೀಭೂತವಾದ ಅನೇಕ ಸಂಗತಿಗಳೇ ಈ ಕಾರಣಗಳು. ಈ ಕಾರಣಗಳಿಂದ ಅಭಿವೃದ್ಧಿ ಹೊಂದಿದ ವ್ಯಾಪಾರ ಉದ್ಯೋಗಗಳಲ್ಲಿ ಹೊಸದಾಗಿ ಉತ್ಪನ್ನವಾದ ಚಿನ್ನವೆಲ್ಲ ಅಡಗಿ ಹೋದ ಕಾರಣ, ಧಾರಣೆಗಳು ವಿಶೇಷ ಏರದೆ ಹೋದವು. ಈ ಗೌರವವುಳ್ಳ ಸಂಗತಿಗಳು ಯಾವವಂದರೆ:—

೧. ಬೇರೆ ಬೇರೆ ಉದ್ಯೋಗಗಳಲ್ಲಿಯೂ, ವಾಹನ ಸಾಧನಗಳಲ್ಲಿಯೂ ಉಗಿಯಂತ್ರಗಳನ್ನು ಉಪಯೋಗಿಸ ಹತ್ತಿದ್ದರಿಂದ, ಸುಧಾರಿಸಿದ ಜಗತ್ತಿನಲ್ಲೆಲ್ಲ ವ್ಯಾಪಾರವು ಬಹಳ ಅಭಿವೃದ್ಧಿಯನ್ನು ಹೊಂದಿತು.

೨. ಇಂಗ್ಲಂಡದವರು ನಿರಾತಂಕ ವ್ಯಾಪಾರದ ಪದ್ಧತಿಯನ್ನು ಅಂಗೀಕರಿಸಿದ್ದರಿಂದ, ಇಂಗ್ಲಂಡದ ವ್ಯಾಪಾರವು ಅಪೂರ್ವವಾಗಿ ಬೆಳೆಯಿತು. ಸನ್ ೧೮೪೮ನೇ

ವರ್ಷದಿಂದ ಸನ್ ೧೮೭೦ನೇ ವರ್ಷದ ವರೆಗೆ ಇಂಗ್ಲಂಡದ ರಫ್ತುಗಳು ೭,೦೦,೦೦,೦೦೦ ಪೌಂಡುಗಳಿಂದ ೧೩,೫೦,೦೦,೦೦೦ ಪೌಂಡುಗಳ ವರೆಗೆ ಬೆಳೆದವು. ಹಾಗುಸ ಸನ್ ೧೮೮೩ನೇ ವರ್ಷ ೨೫,೦೦,೦೦,೦೦೦ ಪೌಂಡುಗಳಾದವು. ಮತ್ತು ಇಂಗ್ಲಂಡದ ಆಮದಗಳಂತೂ ಇದಕ್ಕೂ ಆಶ್ಚರ್ಯಕರವಾಗಿ ವೃದ್ಧಿ ಹೊಂದಿವೆ. ಈ ಪ್ರಕಾರ ವೃದ್ಧಿ ಹೊಂದಿದ ಆಮದ ರಫ್ತುಗಳ ಮೂಲಕವಾದ ಕ್ರಯವಿಕ್ರಯಗಳು ಹೊಸದಾಗಿ ಉತ್ಪನ್ನವಾದ ಚಿನ್ನವನ್ನೆಲ್ಲ ಹೀರಿಕೊಳ್ಳುವದಕ್ಕೆ ಬಲವತ್ತರವಾದ ಕಾರಣವಾದವು.

೩. ಹಿಂದುಸ್ತಾನದಲ್ಲಿ ಲೋಹಮಾರ್ಗಗಳೂ, ಸಾರ್ವಜನಿಕ ಹಿತದ ಬೇರೆ ಕೆಲಸಗಳೂ ಹೊಸದಾಗಿ ನಡಿದದ್ದರಿಂದ, ಕೂಲಿಕಾರರ ಸಂಬಳ ಮೊದಲಾದ ವೆಚ್ಚಗಳಿಗೋಸ್ಕರ ಲಕ್ಷಾವಧಿ ರೂಪಾಯಿಗಳ ಬೆಳ್ಳಿಯು ಹಿಂದುಸ್ತಾನಕ್ಕೆ ಕಳುಹಿಸಲ್ಪಟ್ಟಿತು. ಈ ಪ್ರಕಾರ ಹಿಂದುಸ್ತಾನಕ್ಕೆ ಬಂದ ಬೆಳ್ಳಿಯಲ್ಲಿ ದೊಡ್ಡ ಭಾಗವು ಫ್ರಾನ್ಸ ಮೊದಲಾದ ದೇಶಗಳಲ್ಲಿ ಬಳಿಕೆಯಲ್ಲಿದ್ದ ಬೆಳ್ಳಿಯೊಳಗಿಂದಲೇ ಬಂತು. ಹಾಗೂ ಇದರಿಂದ ಫ್ರಾನ್ಸ ಮೊದಲಾದ ದೇಶಗಳಲ್ಲಿ ಕಡಿಮೆಯಾದ ಹಣಕ್ಕೆ ಬದಲಾಗಿ ಚಿನ್ನದ ಹಣ ಮಾಡಲ್ಪಟ್ಟಿತು. ಈ ಮೇರೆಗೆ ಏಳು ವರ್ಷಗಳಲ್ಲಿ ೪,೩೦,೦೦,೦೦೦ ಪೌಂಡು ಇಂಗ್ಲಂಡದ ಬಂಡವಲವು ಹಿಂದುಸ್ತಾನದಲ್ಲಿ ವೆಚ್ಚವಾಯಿತೆಂದು ಅಂದಾಜು ಮಾಡಲ್ಪಟ್ಟಿದೆ.

೪. ಒಳಗಡೆಯಲ್ಲಿ ಫ್ರಾನ್ಸ, ಜರ್ಮನಿ, ಮೊದಲಾದ ದೇಶದವರು ಬೆಳ್ಳಿಯ ಮುಖ್ಯ ನಾಣ್ಯಗಳನ್ನು ನಿಲ್ಲಿಸಿ, ಚಿನ್ನದ ಮುಖ್ಯ ನಾಣ್ಯಗಳನ್ನು ಸ್ಥಾಪಿಸಿದರು. ಇದಲ್ಲದೆ ಇತಾಲಿ, ಯುನಾಯಿಟೆಡ್ ಸ್ಟೇಟ್ಸ್ ದೇಶಗಳಲ್ಲಿ ಮೊದಲು ಮುರಿಸಲಿಕ್ಕೆ ಬಾರದೆ ಇದ್ದ ನೋಟುಗಳಿಗೆ, ಇತ್ತಲಾಗಿ ನಗದು ಹಣವನ್ನು ಕೊಡಲಾರಂಭಿಸಿರುವರು. ಅದರಿಂದ ಚಿನ್ನದ ಬೇಡಿಕೆ ಮತ್ತಿಷ್ಟು ಹೆಚ್ಚಿದೆ.

ಈ ಯಾವತ್ತು ಸಂಗತಿಗಳಿಂದ ಸನ್ ೧೮೫೦ನೇ ವರ್ಷ ಉಂಟಾದ ಚಿನ್ನದ ಶೋಧಗಳ ಪರಿಣಾಮವು ಪ್ರತಿಬಂಧಿಸಲ್ಪಟ್ಟಿತೆಂಬುವದಿಷ್ಟೇ ಅಲ್ಲ, ಇದಕ್ಕೂ ಹೆಚ್ಚು ಕಾರ್ಯವಾಯಿತೆಂದು ಮಾನ್ಯರಾದ ಕೆಲ ಗ್ರಂಥಕರ್ತರು ನಂಬುವರು. ಈ ಗ್ರಂಥಕರ್ತರು, ಸನ್ ೧೮೭೪ನೇ ಮತ್ತು ಸನ್ ೧೮೮೩ನೇ ವರ್ಷದ ನಡುವೆ ಚಿನ್ನವು ಮಿತಿ ಮೀರಿ ಹೆಚ್ಚಾಗುವದರಿತ್ತೂ ಇರಲಿ, ಚಿನ್ನದ ಪೂರೈಕೆ ಕಡಿಮೆಯಾದ್ದರಿಂದ ಚಿನ್ನದ ಬೆಲೆ ಏರಿ, ಧಾರಣೆಗಳು ಸಹ ಇಳಿದವೆಂದು ಪ್ರತಿಪಾದಿಸುತ್ತಾರೆ. ಈ ಮಾತು ಹ್ಯಾಗಾದರೂ ಇರಲಿ, ಚಿನ್ನದ ವಾರ್ಷಿಕ ಉತ್ಪನ್ನವು ಅತಿ ಪ್ರಮಾಣ

ದಿಂದ ಬೆಳೆದದ್ದನ್ನು ನೋಡಲಾಗಿ, ಆ ಮಾನದಿಂದ ಚಿನ್ನದ ಬೆಲೆ ಅತ್ಯಲ್ಪ ಪ್ರಮಾಣದಿಂದ ಇಳಿದದ್ದರ ಕಾರಣವನ್ನು ವ್ಯಕ್ತ ಪಡಿಸಲಿಕ್ಕೆ ಮೇಲೆ ಹೇಳಿದ ಸಂಗತಿಗಳು ಸಾಕಾಗಿವೆ. ಚಿನ್ನದ ಹೊಸ ಪೂರೈಕೆಯನ್ನು ಅಡಗಿಸಿದಂಥ ಮೇಲೆ ಉಲ್ಲೇಖಿಸಿದ ನಾಲ್ಕು ಸಂಗತಿಗಳಿಗೂ, ಚಿನ್ನದ ಶೋಧಗಳಿಗೂ ಏನು ಕಾರ್ಯ ಕಾರಣ ಸಂಬಂಧವಿಲ್ಲ. ಇವೆರಡೂ ಸಂಗತಿಗಳು ಸ್ವತಂತ್ರವಾಗಿ ವರ್ತಿಸಿದವುಗಳು. ಈ ಮಾತನ್ನು ಚನ್ನಾಗಿ ಲಕ್ಷ್ಯದಲ್ಲಿರಿಸ ತಕ್ಕದ್ದು. ಚಿನ್ನದ ಹೊಸ ಕಣಿಗಳ ಶೋಧವಾಗಿದ್ದರೇನು, ಆಗದಿದ್ದರೇನು, ಇಂಗ್ಲಂಡದ ವ್ಯಾಪಾರವು ಅಭಿವೃದ್ಧಿಯನ್ನು ಹೊಂದೇ ಹೊಂದುತ್ತಿತ್ತು. ನಿರಾತಂಕ ವ್ಯಾಪಾರದ ಮೂಲಕವಾಗಿ ಸಂಪತ್ತು ಜನಸಂಖ್ಯೆಗಳು ನಿಶ್ಚಯವಾಗಿ ಬೆಳೆಯುತ್ತಿದ್ದವು. ಹಾಗೂ ಪ್ರಾಚ್ಯ ದೇಶಗಳ ಕೂಡ ವ್ಯಾಪಾರವೂ ಹೆಚ್ಚುತ್ತಿತ್ತು. ಇವೆಲ್ಲ ಸಂಗತಿಗಳು ಚಿನ್ನದ ಪೂರೈಕೆಯು ಹೆಚ್ಚಾದದ್ದರಿಂದ ಸಂಭವಿಸಿದವುಗಳಲ್ಲ. ವ್ಯಾಪಾರ ಜನಸಂಖ್ಯೆಗಳು ಸ್ಥಿರವಾಗಿದ್ದ ಕಾಲದಲ್ಲಿ ಚಿನ್ನದ ಈ ಹೊಸ ಶೋಧಗಳಾಗಿದ್ದರೆ, ಅವುಗಳಿಂದ ಚಿನ್ನದ ಕಣಿಗಳು ದೊರೆದಂಥ ದೇಶಗಳು ಹೊರ್ತಾಗಿ, ಬೇರೆ ಯಾವ ದೇಶಗಳಿಗೂ ಏನು ಪ್ರಯೋಜನವಾಗುತ್ತಿದ್ದಿಲ್ಲ. ಮತ್ತು ಇಲ್ಲಿ ಲಕ್ಷ್ಯದಲ್ಲಿಡ ತಕ್ಕ ಮತ್ತೊಂದು ಸಂಗತಿ ಯಾವದಂದರೆ, ಚಿನ್ನದ ಹೊಸ ಕಣಿಗಳು ದೊರೆದಂಥ ದೇಶಗಳಿಗೆ ಆಗುವ ಲಾಭವಾದರೂ ಮುಖ್ಯವಾಗಿ ಆ ದೇಶಗಳ ಸರಕು ಕೊಳ್ಳುವ ಶಕ್ತಿಯು ಬೆಳೆಯುತ್ತಿತ್ತೆಂಬದೇ. ಪ್ರೊಫೆಸರ ಕೇರ್ನ್ಸ ಧೊರೆಯು ತೋರಿಸಿ ಕೊಟ್ಟ ಪ್ರಕಾರ, ಆಸ್ಟ್ರೇಲಿಯ ಕ್ಯಾಲಿಫೋರ್ನಿಯ ದೇಶಗಳಿಗೆ ಚಿನ್ನದಿಂದ ಆದ ಲಾಭವು, ಅವರು ತಮ್ಮ ಚಿನ್ನವನ್ನು ಕೊಟ್ಟು, ಪರದೇಶಗಳ ಸರಕುಗಳನ್ನು ಕೊಂಡಿರುವ ಮಟ್ಟಿಗೆ ಆಗಿರುವದು. ಅವರಿಗೆ ಆದ ಮತ್ತೊಂದು ಲಾಭವೇನಂದರೆ, ಚಿನ್ನದ ಹೊಸ ಕಣಿಗಳು ಶಿಕ್ಕಿದ್ದರಿಂದ ಪರದೇಶಗಳಿಂದ ಎಷ್ಟೋ ಜನರು ತಾತ್ಕಾಲಕ್ಕೆ ಆ ದೇಶಗಳಿಗೆ ಹೋದರು. ಚಿನ್ನದ ಹೊಸ ಕಣಿಗಳ ಶೋಧದ ಸುದ್ದಿಯಿಂದ ಜನರ ಮನಸ್ಸು ಕ್ಷುಭಿತವಾದಷ್ಟು ಮತ್ತ್ಯಾವ ಕಾರಣದಿಂದಲೂ ಆಗುವದಿಲ್ಲ. ಚಿನ್ನದ ಹೊಸ ಕಣಿಗಳು ದೊರಿದ ಸುದ್ದಿಯು ಮುಟ್ಟಿದ ಕೂಡ್ಲೆ, ಸಾವಿರಾರು ಜನರು ಆಸ್ಟ್ರೇಲಿಯ ದೇಶಕ್ಕೆ ಹಿಂಡು ಗಟ್ಟಿಕೊಂಡು ಹೋದರು. ಈ ಪ್ರಕಾರ ವಿಕ್ಟೋರಿಯಾ ಪ್ರಾಂತದ ಜನಸಂಖ್ಯೆಯು ೧೮೫೧ರಿಂದ ೧೮೫೭ರ ವರೆಗೆ ಆರು ವರ್ಷದಲ್ಲಿ ೭೭,೦೦೦ದಿಂದ ४,೧೦,೦೦೦ ವರೆಗೆ ಬೆಳೆಯಿತು. ಅಂಗಲವಾದ ವಸತಿಯುಳ್ಳ ಫಲವತ್ತಾದ ದೇಶದಲ್ಲಿ ಈ ಪ್ರಕಾರ ಜನಸಂಖ್ಯೆಯು ತೀವ್ರವಾಗಿ ಬೆಳೆಯುವದರಿಂದ ಬಹು ಪ್ರಯೋಜನ ಉಂಟಾಗುವದು. ಯಾಕಂದರೆ, ಈ ಪ್ರಕಾರ ಬೆಳೆದ ಜನಸಂಖ್ಯೆಯಿಂದ ಅಲ್ಲಿ ಇದ್ದ

ಸಂಪತ್ತನ್ನು ಹುಟ್ಟಿಸುವ ಸಾಧನಗಳಿಂದ ಹೊಸ ಸಂಪತ್ತನ್ನು ಹುಟ್ಟಿಸುವದಕ್ಕೆ ಬಹಳ ಸಹಾಯವಾಗುವದು.

ವ್ಯಾಪಾರ ಉದ್ಯೋಗಗಳು ಬೆಳೆದದ್ದರಿಂದ ಚಿನ್ನದ ಪೂರೈಕೆ ಹೆಚ್ಚುವದು ಅತ್ಯಾವಶ್ಯಕವಾಗಿದ್ದ ಕಾಲಕ್ಕೇ ಚಿನ್ನದ ಹೊಸ ಕಣಿಗಳ ಶೋಧಗಳಾಗಿ, ಚಿನ್ನದ ಪೂರೈಕೆ ಹೆಚ್ಚಾದ ಕಾರಣ, ಈ ಶೋಧಗಳು ವ್ಯಾಪಾರ ನಡಿಸುವಂಥ ಸಮಸ್ತ ದೇಶಗಳಿಗೆ ಬಹು ಹಿತಕರವಾದವು. ವ್ಯಾಪಾರವು ಇದ್ದಕ್ಕಿದ್ದ ಹಾಗೆ ನಿಂತ ಕಾಲಕ್ಕೆ ಈ ಶೋಧಗಳಾಗಿದ್ದರೆ, ಅವುಗಳಿಂದ ವ್ಯಾಪಾರಕ್ಕೆ ಬಹಳ ಹಾನಿಗಳೂ, ತೊಂದರೆಗಳೂ ಉಂಟಾಗುತ್ತಿದ್ದವು. ಹಣದ ಬೆಲೆ ಹೆಚ್ಚುಕಡಿಮೆಯಾಗಿ, ಹಣದ ಸಂಬಂಧದ ಯಾವತ್ತು ಕರಾರುಗಳಲ್ಲಿ ಅವ್ಯವಸ್ಥೆಯುಂಟಾಗುತ್ತಿತ್ತು. ಪ್ರತಿಯೊಬ್ಬನ ಹತ್ತರ ಬಹುತರ ಹೆಚ್ಚು ಹಣವು ಬರುತ್ತಿತ್ತು. ಆದರೂ, ಹಣದಲ್ಲಿರುವ ಸರಕು ಕೊಳ್ಳುವ ಶಕ್ತಿಯು ಕಡಿಮೆಯಾದ ಕಾರಣ, ಆ ಹೆಚ್ಚಿದ ಹಣದಿಂದ ಏನು ಪ್ರಯೋಜನವಾಗುತ್ತಿದ್ದಿಲ್ಲ. ಪೇಟೆಯಲ್ಲಿ ಯಾವತ್ತು ಧಾರಣೆಗಳು ಇಮ್ಮಡಿಯಾದರೆ, ಮೊದಲು ಒಂದು ವಾರಕ್ಕೆ ೧೦ ರೂಪಾಯಿ ಸಂಬಳ ದೊರಿಯುವವನಿಗೆ ಈಗ್ಯೆ ೨೦ ರೂಪಾಯಿ ದೊರಿದರೂ ಅವನು ಮೊದಲಿನದಕ್ಕಿಂತ ಹೆಚ್ಚು ಸೌಖ್ಯವನ್ನು ಹೊಂದಲಾರನು. ಯಾಕಂದರೆ, ಮೊದಲು ೧೦ ರೂಪಾಯಿಗೆ ಬಂದಷ್ಟು ಸರಕುಗಳಿಗೇ ಈಗ ೨೦ ರೂಪಾಯಿ ಕೊಡ ಬೇಕಾಗುವದು. ಈ ಭಾಗದ ೨ನೆ ಅಧ್ಯಾಯದ ಕೊನೆಗೆ ಕೊಟ್ಟ ಎಮ್ ಬ್ಯಾಸ್ಟಿಯುಟನ ದೃಷ್ಟಾಂತದಿಂದ ಈ ಮಾತಿನ ಸತ್ಯತೆಯು ಚನ್ನಾಗಿ ನಿದರ್ಶನಕ್ಕೆ ಬರುವದು. ಇಸ್ಪೇಟಿನ ಆಟದಲ್ಲಿ ಹಚ್ಚಿದ ರೊಕ್ಕ ಅಷ್ಟೇ ಇರಲಾಗಿ, ಆ ರೊಕ್ಕದ ದರ್ಶಕವಾದ ಎಣಿಕೆಯ ನಾಣ್ಯಗಳು ಎಷ್ಟೇ ಇದ್ದರೂ ಒಂದೇ. ಎಣಿಕೆಯ ನಾಣ್ಯಗಳು ಕಡಿಮೆಯಾಗಿದ್ದ ಹಾಗೆ ಅವುಗಳಲ್ಲಿ ಪ್ರತಿಯೊಂದು ನಾಣ್ಯವು ಹೆಚ್ಚು ಬೆಲೆ ತೋರಿಸುವದು. ಹಾಗೂ ಎಣಿಕೆಯ ನಾಣ್ಯಗಳನ್ನು ಹೆಚ್ಚಿಸಿದ ಹಾಗೆ ಅವುಗಳ ವಿನಿಮಯ ಶಕ್ತಿಯು ಕಡಿಮೆಯಾಗುವದು.

### ೪ನೆ ಅಧ್ಯಾಯದ ಮೇಲಿನ ಪ್ರಶ್ನೆಗಳು.

### ಹಣದ ಬೆಲೆ.

೧. "ಹಣದ ಕ್ರಯ" ಎಂಬುವದರ ಅರ್ಥವೇನು?

೨. ಅರ್ಥಶಾಸ್ತ್ರದೃಷ್ಟ್ಯಾ ಈ ಶಬ್ದಗಳಿಂದ ಯಾಕೆ ಏನು ಅರ್ಥವಾಗುವದಿಲ್ಲ?

೩. "ಹಣದ ಬೆಲೆ" ಅಂದರೇನು? ಕೆಲವು ಸಾರಿ ಹಣದ ಬೆಲೆಯು ಸ್ಥಿರವಾದದ್ದೆಂದು ತಪ್ಪು ಗ್ರಹಿಕೆಯಾಗುವ ಕಾರಣವೇನು?

೪. ಬೆಲೆಯ ಸಂಬಂಧದಿಂದ ಹಣವನ್ನು ಸರಕುಗಳ ಯಾವ ವರ್ಗದಲ್ಲಿ ಸೇರಿಸ ತಕ್ಕದ್ದು?

೫. ಉಚ್ಚ ಧಾತುಗಳ ಬೆಲೆಯು ಹ್ಯಾಗೆ ನಿರ್ಣೈಸಲ್ಪಡುವದು?

೬. ಬೆಳ್ಳಿಯ ಬೆಲೆ, ಅಥವಾ ಬೆಳ್ಳಿಯಲ್ಲಿರುವ ಸರಕು ಕೊಳ್ಳುವ ಶಕ್ತಿಯನ್ನು ಕಡಿಮೆ ಮಾಡಿದಂಥ ಸಂಗತಿಗಳು ಯಾವವು?

೭. ಚಿನ್ನ ಬೆಳ್ಳಿಗಳ ಬೇಡಿಕೆಯನ್ನುಂಟು ಮಾಡುವಂಥ ಮುಖ್ಯ ಸಂಗತಿಗಳನ್ನು ಹೇಳಿರಿ.

೮. ದೇಶದ ಸಂಪತ್ತು, ಜನಸಂಖ್ಯೆ, ಇವುಗಳ ಪ್ರಮಾಣದಿಂದ ಹಣದ ಬೇಡಿಕೆ ಹೆಚ್ಚುಕಡಿಮೆಯಾಗುವ ಬಗ್ಗೆಯನ್ನು ವಿವರಿಸಿರಿ.

೯. ದೊಡ್ಡ ವ್ಯವಹಾರಗಳಲ್ಲಿ ಬಹುತರವಾಗಿ ಹಣವನ್ನು ಉಪಯೋಗಿಸುವದನ್ನು ಯಾವ ಬಗೆಯಿಂದ ವರ್ಜಿಸುವರು? ಈ ವಿಷಯದಲ್ಲಿ ಒಂದು ದೃಷ್ಟಾಂತವನ್ನು ಕೊಡಿರಿ.

೧೦. ಸರಕುಗಳು ಉಪಯೋಗಿಸಲ್ಪಡುವ ಪೂರ್ವದಲ್ಲಿ ಅವುಗಳು ಬಹಳ ಸಾರಿ ಹಣಕ್ಕೆ ಕೊಡಕೊಳ್ಳಲ್ಪಡುವದರಿಂದ ಹಣದ ಬೇಡಿಕೆ ಹೆಚ್ಚಾಗುವ ಬಗೆಯನ್ನು ವಿವರಿಸಿರಿ.

೧೧. ಬೇಡಿಕೆ ಹೆಚ್ಚಾಗುವದರಿಂದ ಹಣದ ಬೆಲೆಯ ಮೇಲೆ ಆಗುವ ಕಾರ್ಯವನ್ನು ದೃಷ್ಟಾಂತ ಮೂಲಕವಾಗಿ ವಿವರಿಸಿರಿ.

೧೨. ಹಣದ ಪೂರೈಕೆಯು ಹೆಚ್ಚಾಗುವದರಿಂದ ಹಣದ ಬೆಲೆಯ ಮೇಲೆ ನಡಿಯುವ ಕಾರ್ಯವನ್ನು ದೃಷ್ಟಾಂತವನ್ನು ಕೊಟ್ಟು ವಿವರಿಸಿರಿ.

೧೩. ಈ ಉದಾಹರಣಗಳಲ್ಲಿ ವಿವರಿಸಿದ ಪರಿಣಾಮಗಳು ವಸ್ತುತಃ ಎಂದಿಗೂ ಯಾಕೆ ಸಂಭವಿಸುವದಿಲ್ಲ?

೧೪. ಚಿನ್ನ ಬೆಳ್ಳಿಗಳ ಬೇಡಿಕೆ ಹೆಚ್ಚಾಗುವದರಿಂದ ಉಂಟಾಗುವ ಪರಿಣಾಮವನ್ನು ಬಹುತರವಾಗಿ ಪ್ರತಿಬಂಧಿಸುವಂಥ ಸಂಗತಿಗಳು ಯಾವವು?

೧೫. ಚಿನ್ನದ ಶೋಧಗಳಿಂದ ಹಣದ ಬೆಲೆಯ ಮೇಲೆ ಏನು ಪರಿಣಾಮ ಉಂಟಾಗಿದೆ?

೧೬. ಚಿನ್ನವು ಹೆಚ್ಚಿದ ಪ್ರಮಾಣವನ್ನು ನೋಡಿದರೆ, ಚಿನ್ನದ ಬೆಲೆಯು ಅತ್ಯಲ್ಪ ಪ್ರಮಾಣದಿಂದ ಇಳಿದದ್ದಕ್ಕೆ ಕಾರಣಗಳ್ಯಾವವು?

೧೭. ಈ ಕಾರಣಗಳಿಂದ ಚಿನ್ನದ ಬೇಡಿಕೆಯ ಮೇಲೆ ಆಗತಕ್ಕ ಕಾರ್ಯವನ್ನು ವರ್ಣಿಸಿರಿ.

೧೮. ಇಂಗ್ಲಂಡದ ವ್ಯಾಪಾರ, ಜನಸಂಖ್ಯೆ, ಇವುಗಳ ವೃದ್ಧಿಗೆ ಚಿನ್ನದ ಕಣಿಗಳ ಶೋಧವು ಕಾರಣವಾದದ್ದೋ?

೧೯. ಚಿನ್ನದ ಶೋಧಗಳಾದ ಕಾಲದಲ್ಲಿಯೇ ವ್ಯಾಪಾರ, ಜನಸಂಖ್ಯೆ ಮೊದಲಾದವುಗಳು ಬೆಳಿಯದೆ ಇದ್ದರೆ, ಏನು ಪರಿಣಾಮವಾಗುತ್ತಿತ್ತು?

---

೧. ಪರದೇಶಗಳ ಕೂಡ ವ್ಯಾಪಾರದ ಸಂಬಂಧವನ್ನಿಡದಂಥ ಒಂದು ನಡುಗಡ್ಡೆಯ ಜನರ ಮೇಲೆ ಒಬ್ಬ ಲಕ್ಷಾಧೀಶನು ಉಪಕಾರ ಮಾಡಬೇಕೆಂದು, ಆ ನಡುಗಡ್ಡೆಯಲ್ಲಿದ್ದ ಪ್ರತಿಯೊಬ್ಬನ ಹಣವನ್ನು ಇಮ್ಮಡಿ ಮಾಡಿದರೆ, ಅವನ ಉದ್ದೇಶವು ಕೈಗೂಡುವದೋ?

೨. ವ್ಯಾಪಾರ ಉದ್ಯೋಗಗಳೂ ಜನಸಂಖ್ಯೆಯೂ ಬೆಳೆದು, ಮೊದಲಿನ ಎರಡಷ್ಟು ಜನರಿಗೆ ಸಂಬಳ ಕೊಡ ಬೇಕಾಗಿದೆಂತಲೂ, ಕ್ರಯವಿಕ್ರಯಗಳೂ ಮೊದಲಿನ ಎರಡಷ್ಟು ನಡಿಯುವವೆಂತಲೂ ಕಲ್ಪಿಸಿರಿ. ಈ ಪ್ರಸಕ್ತಿಯಲ್ಲಿ, ಹಣದ ಪೂರೈಕೆಯು ಮೊದಲಿನಷ್ಟೆ ನಿಂತರೆ, ಅದರಿಂದ ಯಾವತ್ತು ಪೇಟೆಧಾರಣೆಗಳ ಮೇಲೂ, ಸಂಬಳದ ಮೇಲೂ ಏನು ಪರಿಣಾಮವಾಗುವದು?

೩. ಪರದೇಶದಿಂದ ಬರುವ ಎರಡು ಹಡಗಗಳು ಬಿರುಘಾಳಿಯಲ್ಲಿ ತಿಕ್ಕಿವೆ. ಒಂದರಲ್ಲಿ ಚಿನ್ನವು ತುಂಬಿದ್ದುಂಟು. ಎರಡನೇದರಲ್ಲಿ ಅಷ್ಟೇ ಬೆಲೆಯುಳ್ಳ ಉಣ್ಣೆ, ಧಾನ್ಯಗಳು ಮೊದಲಾದವು ತುಂಬಿವೆ. ಅವುಗಳಲ್ಲಿ ಯಾವದಾದರೊಂದನ್ನು ಮುಳುಗಗೊಟ್ಟು ಒಂದನ್ನು ಉಳಿಸಿಕೊಳ್ಳುವದು ನಿಮ್ಮ ಸ್ವಾಧೀನ ಉಂಟೆಂದು ತಿಳಿಯಿರಿ. ಹಾಗಾದರೆ ನೀವು ಯಾವ ಹಡಗವನ್ನು ಮುಳುಗಗೊಡುವಿರಿ?

೪. ಇಂಗ್ಲಂಡದಲ್ಲಿ ಕಬ್ಬಿಣ ಕಲ್ಲಿದ್ದಲಿಗಳ ಕಣಿಗಳ ಬದಲಾಗಿ, ಭಂಗಾರದ ಕಣಿಗಳಿದ್ದರೆ, ಇಂಗ್ಲಂಡದ ಸಂಪತ್ತು ಈಗಿನದಕ್ಕಿಂತಲೂ ವಿಶೇಷ ಬೆಳೆಯುತ್ತಿತ್ತೋ?

# ೩ ನೇ ಭಾಗ.

## ಸಂಪತ್ತಿನ ವಿಭಾಗ.

### ಆರಂಭದ ಸೂಚನೆಗಳು.

**ಸಂಪತ್ತು, ಗೇಣಿ ಸಂಬಳ ಲಾಭ ಎಂಬ ಮೂರು ವಿಭಾಗಗಳಾಗಿ ಹಂಚಲ್ಪಡುವದು.**—ಸಂಪದುತ್ಪಾದನಕ್ಕೆ ಭೂಮಿ, ಶ್ರಮ, ಬಂಡವಲ, ಎಂಬಿವು ಮೂರು ಅವಶ್ಯವಾದ ಸಾಧನಗಳೆಂದು ಹಿಂದೆ ಸಂಪದುತ್ಪಾದನವೆಂಬ ಭಾಗದಲ್ಲಿ ಹೇಳಿಯದೆ. ಆದ್ದರಿಂದ, ಈ ಮೂರು ಸಾಧನಗಳಿಂದ ಉತ್ಪನ್ನವಾದ ಸಂಪತ್ತು ಅನುಕ್ರಮವಾಗಿ ಈ ಮೂರು ಸಾಧನಗಳ ಸ್ವಾಮಿತ್ವವುಳ್ಳ ಭೂಮಿಯ ಒಡೆಯ, ಶ್ರಮಕರ್ತ, ಸಾವುಕಾರ, ಎಂಬವರೊಳಗೆ ವಿಭಾಗಿಸಲ್ಪಡುವದು ಸ್ವಾಭಾವಿಕವಾಗಿದೆ. ಈ ಮೇರೆಗೆ ಭೂಮಿಯ ಒಡೆಯನಿಗೆ ಸಲ್ಲುವ ಭಾಗವು ಗೇಣಿ, ಲಾವಣಿ, ಇಲ್ಲವೆ ಬಿರಾಡವೆನಿಸುವದು; ಶ್ರಮಕರ್ತನಿಗೆ ದೊರಿಯುವ ಭಾಗಕ್ಕೆ ಸಂಬಳ, ಅಥವಾ ಕೂಲಿ ಎಂಬ ಹೆಸರುಂಟು; ಮತ್ತು ಸಾವುಕಾರನ ಭಾಗಕ್ಕೆ ಲಾಭವೆಂದು ಹೇಳುವರು. ಆದಕಾರಣ, ಸಂಪತ್ತು ಭೂಮಿಯ ಗೇಣಿ, ಶ್ರಮದ ಸಂಬಳ, ಬಂಡವಲದ ಲಾಭ, ಎಂಬೀ ಮೂರು ವಿಭಾಗಗಳಾಗಿ ಹಂಚಲ್ಪಡುತ್ತದೆ. ಮುಂದೆ ಬರುವ ಅಧ್ಯಾಯಗಳಲ್ಲಿ ಈ ಮೂರು ಭಾಗಗಳ ಪರಸ್ಪರ ಪ್ರಮಾಣವು ತೋರಿಸಲ್ಪಡುವದು. ಮತ್ತು ಇವುಗಳಲ್ಲಿ ಒಂದು ಭಾಗವು ಹೆಚ್ಚುವದು ಹ್ಯಾಗೆ? ಅಷ್ಟೇ ಪ್ರಮಾಣದಿಂದ ಮತ್ತೊಂದು ಭಾಗವು ಕಡಿಮೆಯಾಗುವ ಬಗೆ ಏನು? ಎಂಬೀ ಸಂಗತಿಗಳು ವಿವರಿಸಲಾಗುವವು. ಉದಾಹರಣಾರ್ಥವಾಗಿ, ದೇಶದೊಳಗಿನ ಲಾಭದ ಸಾಮಾನ್ಯ ದರವು ಇಳಿಯಲಾಗಿ ಭೂಮಿಗೆ ಹೆಚ್ಚು ಗೇಣಿಯನ್ನು ಕೊಡ ಬೇಕಾಗುವ ಕಾರಣವೇನು? ದೇಶದೊಳಗೆ ಸ್ವಲ್ಪ ಪ್ರಾಪ್ತಿಯುಳ್ಳ ಜನರು ಯಾಕೆ ಬಹಳ? ಬಹಳ ಪ್ರಾಪ್ತಿಯುಳ್ಳವರು ಯಾಕೆ ಸ್ವಲ್ಪ? ಹೊಲದಲ್ಲಿ ಹಗಲು ರಾತ್ರಿ ಕಷ್ಟಪಟ್ಟು ಕೂಲಿಕಾರರು ದುಡಿದಿರಲು, ಹೊಲದ ಒಡೆಯನು ಬಂದು ಹೊಲದ ಹುಟ್ಟುವಳಿಯ ದೊಡ್ಡ ಭಾಗವನ್ನು ಭೂಮಿಯ ಗೇಣಿ ಎಂತ ಯಾಕೆ ತಕ್ಕೊಂಡು

ಹೋಗುವನು? ಬೇಸಾಯದ ಉದ್ಯೋಗ ಮಾಡುವವರಿಗೆ ಅಶನವಸನಗಳಿಗೆ ಸಹ ಯಾಕೆ ಬಡತನವಿರ ಬೇಕು? ಶ್ರಮಕರ್ತರಿಗೆ ಬಹಳ ಸಂಬಳ, ಇಲ್ಲವೆ ತುಸು ಸಂಬಳ ದೊರಿಯುವ ಕಾರಣಗಳು ಯಾವವು? ಇವೇ ಮೊದಲಾದ ಅತ್ಯಂತ ಗೌರವವುಳ್ಳ ಪ್ರಶ್ನಗಳ ನಿರ್ಣಯವು ಸಂಪತ್ತಿನ ವಿಭಾಗದ ನಿಯಮಗಳನ್ನು ಚನ್ನಾಗಿ ಅರಿತುಕೊಂಡವರಿಗೆ ಸಹಜವಾಗಿ ತಿಳಿಯುವದು.

**ಗೇಣಿ, ಸಂಬಳ, ಲಾಭ, ಇವುಗಳು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ವರ್ಗದ ಜನರಿಗೆ ಸಲ್ಲುವವು.**— ಸಂಪತ್ತು ಹುಟ್ಟಿಸುವದಕ್ಕೆ ಅವಶ್ಯವಾದ ಭೂಮಿ, ಶ್ರಮ, ಬಂಡವಲ, ಇವುಗಳಿಗೆ ಒಬ್ಬನು, ಇಬ್ಬರು, ಇಲ್ಲವೆ ಹೆಚ್ಚು ಮಂದಿ ಒಡೆಯರಾಗಿದ್ದ ಮೇರೆಗೆ, ಅವುಗಳಿಂದ ಉತ್ಪನ್ನವಾಗುವ ಗೇಣಿ, ಸಂಬಳ, ಲಾಭ, ಎಂಬ ಸಂಪತ್ತಿನ ಭಾಗಗಳು ಒಬ್ಬನಿಗೆ, ಇಬ್ಬರಿಗೆ, ಇಲ್ಲವೆ ಹೆಚ್ಚು ಮಂದಿಗೆ ಸಲ್ಲುವವು. ಇಂಗ್ಲಂಡದಲ್ಲಿ ಗೇಣಿ ಸಂಬಳ ಲಾಭಗಳು ಭೂಮಿಯ ಒಡೆಯರು, ಶ್ರಮಕರ್ತರು, ಸಾವುಕಾರರು, ಎಂಬೀ ಬೇರೆ ಬೇರೆ ಮೂರು ವರ್ಗದ ಜನರಿಗೆ ಮುಟ್ಟುವವು. ಆದರೆ ಯಾವತ್ತು ದೇಶಗಳಲ್ಲಿ ಸಂಪತ್ತು ಈ ವಿಧದಿಂದಲೇ ಹಂಚಲ್ಪಡುವದಿಲ್ಲ; ಆಯಾ ದೇಶದಲ್ಲಿದ್ದ ಬೇರೆ ಬೇರೆ ಸಾಂಪ್ರದಾಯಗಳಿಗೆ ಅನುಸಾರವಾಗಿ ಹಂಚಲ್ಪಡುವದು. ಯುರೋಪ ಖಂಡದ ಕೆಲವು ದೇಶಗಳಲ್ಲಿ ಸಂಪದುತ್ಪಾದನದ ಯಾವತ್ತು ಸಾಧನಗಳು ಒಬ್ಬನ ವಶದಲ್ಲಿಯೇ ಇರುವವು. ಇಂಥ ಪ್ರಸಕ್ತಿಗಳಲ್ಲಿ ಭೂಮಿ, ಶ್ರಮ, ಬಂಡವಲ, ಇವು ಮೂರೂ ಸಾಧನಗಳನ್ನು ಭೂಮಿಯ ಸ್ವಾಮಿತ್ವವುಳ್ಳ ಒಕ್ಕಲಿಗರೇ ಪೂರೈಸುವರಾದ ಕಾರಣ, ಅವುಗಳ ಫಲವಾದ ಗೇಣಿ, ಸಂಬಳ, ಲಾಭ, ಎಂಬಿವುಗಳೆಲ್ಲ ಅವರಿಗೇ ದೊರಿಯುವವು. ಆಯರ್ಲಂಡದಲ್ಲಿ ಬಹುತರವಾಗಿ ಭೂಮಿಯನ್ನು ಜಮೇದಾರರಿಂದ ತಕ್ಕೊಂಡು ಒಕ್ಕಲುಗಳು ತಮ್ಮ ಬಂಡವಲ ಹಾಕಿ ದುಡಿಯುವರು. ಆದ್ದರಿಂದ, ಸಂಬಳ ಲಾಭಗಳೆಂಬ ಎರಡೂ ಭಾಗಗಳು ವಾಸ್ತವಿಕವಾಗಿ ಒಕ್ಕಲುಗಳಿಗೆ ಸಲ್ಲತಕ್ಕವು, ಗೇಣಿಯು ಮಾತ್ರ ಭೂಮಿಯ ಒಡೆಯರಾದ ಜಮೇದಾರರಿಗೆ ಸಲ್ಲತಕ್ಕದ್ದು. ಹಿಂದುಸ್ಥಾನದಲ್ಲಿ ಕೆಲವು ಕಡೆಯಲ್ಲಿ ಭೂಮಿಯ ಒಡೆಯರು ತಾವೇ ಬಂಡವಲ ಹಾಕಿ ಆಳುಗಳಿಂದ ಹೊಲ ಮಾಡಿಸುವರು. ಬೇರೆ ಕೆಲವು ಕಡೆಯಲ್ಲಿ ಒಕ್ಕಲಿಗರು ಭೂಮಿಯ ಒಡೆಯರಿಂದ ಭೂಮಿಯನ್ನು ಗೇಣಿಗೆ ತಕ್ಕೊಂಡು ತಾವು ಬಂಡವಲ ಹಾಕಿ ದುಡಿಯುವರು. ಮತ್ತೆ ಕೆಲವು ಕಡೆಯಲ್ಲಿ ಒಕ್ಕಲಿಗರು ತಮ್ಮ ಸ್ವಂತ ಭೂಮಿಯಲ್ಲಿ ತಾವೇ ಬಂಡವಲ ಹಾಕಿ ದುಡಿಯುವರು. ಆದ್ದರಿಂದ ಮೊದಲನೆ ಪ್ರಸಕ್ತಿಯಲ್ಲಿ ಗೇಣಿ ಮತ್ತು ಲಾಭ ಇವೆರಡೂ ಭೂಮಿಯ ಒಡೆಯರಿಗೆ

ಬರುವವು, ಆಳುಗಳಿಗೆ ಸಂಬಳ ಮುಟ್ಟುವದು. ಎರಡನೆ ಪ್ರಸಕ್ತಿಯಲ್ಲಿ ಭೂಮಿಯ ಒಡೆಯರಿಗೆ ಗೇಣಿ ಮಾತ್ರ ದೊರಿಯುವದು, ಬೇರೆ ಎರಡೂ ಭಾಗಗಳು ಒಕ್ಕಲಿಗರಿಗೆ ದೊರಿಯುವವು. ಮೂರನೆ ಪ್ರಸಕ್ತಿಯಲ್ಲಿ ಮೂರೂ ಭಾಗಗಳು ಒಬ್ಬನಿಗೇ ಸಲ್ಲುವವು. ಈ ಉದಾಹರಣಗಳ ಮೇಲಿಂದ ಬೇರೆ ಬೇರೆ ದೇಶಗಳಲ್ಲಿ ಭೂಮಿ, ಶ್ರಮ, ಬಂಡವಲ, ಇವುಗಳ ಸ್ವಾಮಿತ್ವವು ಬೇರೆ ಬೇರೆ ಜನರ ಕಡೆಗೆ ಇರುವದು, ಅಂದರೆ ಬೇರೆ ಬೇರೆ ವಿಧದ ಸತ್ತಾ ಪ್ರಕಾರಗಳು ಪ್ರಚಾರದಲ್ಲಿರುವವೆಂಬದು ಕಂಡು ಬರುತ್ತದೆ.

ಮೂರನೆ ಭಾಗದ ಆರಂಭದ ಸೂಚನೆಗಳ ಮೇಲಿನ ಪ್ರಶ್ನೆಗಳು.

೧. ಸಂಪತ್ತು ಎಷ್ಟು ಪಾಲಾಗಿ ಹಂಚಲ್ಪಡುವದು, ಮತ್ತು ಈ ಬೇರೆ ಬೇರೆ ಪಾಲುಗಳು ಯಾವ ಸಾಧನಗಳ ಮೂಲಕವಾಗಿರುವವು?

೨. ಈ ಮೂರೂ ಪಾಲುಗಳು ಯಾವಾಗಲೂ ಬೇರೆ ಬೇರೆ ಜನರಿಗೆ ಸಲ್ಲುವವೋ ಹ್ಯಾಗೆ?

೩. ಈ ವಿಭಾಗಗಳ ವಿಷಯದಲ್ಲಿ ಬೇರೆ ಬೇರೆ ದೇಶಗಳಲ್ಲಿ ನಡಿಯುವಂಥ ಕೆಲವು ಪದ್ಧತಿಗಳನ್ನು ಹೇಳಿರಿ.

## ೧ನೇ ಅಧ್ಯಾಯ.

### ಗೇಣಿ.

**ಗೇಣಿಯ ವ್ಯಾಖ್ಯೆ.** — ಭೂಮಿಯ ಒಡೆಯರು ಬೇಡುವ ಸಂಪತ್ತಿನ ಪಾಲು ಗೇಣಿಯಾಗಿದೆ. ಇದು ಭೂಮಿಯ ಒಡೆಯರಿಗೆ, ಅವರ ಭೂಮಿಯನ್ನು ಉಪಯೋಗಿಸಿಕೊಂಡದ್ದಕ್ಕಾಗಿ ಕೊಡತಕ್ಕ ಕ್ರಯವಾಗಿರುವದು. ಕೆಲವು ದೇಶಗಳಲ್ಲಿ ಭೂಮಿಯ ಗೇಣಿಯು, ಪೂರ್ವಾಪರವಾಗಿ ನಡೆದು ಬಂದ ಸಾಂಪ್ರದಾಯುಗಳಂತೆ ನಿರ್ಣೈಸಲ್ಪಡುವದು. ಇಂಗ್ಲಂಡದಂಥ ಬೇರೆ ಕೆಲವುಗಳಲ್ಲಿ ಗೇಣಿಯು ಮೇಲಾಟದಿಂದ ನಿರ್ಣೈಸಲ್ಪಡುವದು. ಗೇಣಿಯು ಮೇಲಾಟದಿಂದ ನಿರ್ಣೈಸಲ್ಪಡುವದೆಂಬದರ ಅರ್ಥವೇನಂದರೆ, ಕೆಲವು ಪ್ರಸಂಗಗಳು ಹೊರ್ತಾಗಿ, ಭೂಮಿಯ ಒಡೆಯನು ತನ್ನ ಭೂಮಿಯನ್ನು ಎಲ್ಲಕ್ಕೂ ಹೆಚ್ಚು ಗೇಣಿಯನ್ನು ತೆರುವ ಒಕ್ಕಲಿಗೆ ಸಾಗುವಳಿಗೆ ಕೊಡುವನು. ಈ ಪ್ರಕಾರ ಗೇಣಿಯು ನಿರ್ಣಯವಾಗುವಾಗ, ಯಾವದಾದರೊಂದು ಸಾಧಾರಣ ಒಡವೆಯನ್ನು ಕೊಡಕೊಳ್ಳುವವರೊಳಗೆ ನಡೆಯುವ ವ್ಯಾಪಾರದಂತೆಯೇ ಭೂಮಿಯ ಒಡೆಯರೊಳಗೂ ಒಕ್ಕಲುಗಳೊಳಗೂ ವ್ಯಾಪಾರ ನಡೆಯುವದು.

ಈ ಅಧ್ಯಾಯದಲ್ಲಿ, ಭೂಮಿಯ ಗೇಣಿಯು ಮೇಲಾಟದಿಂದ ಹೆಚ್ಚುಕಡಿಮೆಯಾಗುವ ಕ್ರಮ ನಡೆಯಲಾಗಿ ಗೇಣಿಯನ್ನು ನಿರ್ಣೈಸುವಂಥ ಕೆಲವು ತತ್ವಗಳನ್ನು ಮೊದಲು ವಿವರಿಸಿ, ಅನಂತರದಲ್ಲಿ ಸಾಂಪ್ರದಾಯಾನುಸಾರವಾಗಿ ವರ್ತಿಸುವ ಕೆಲವು ಭೂಮಿಯ ಸತ್ತಾಪ್ರಕಾರಗಳನ್ನು ಸಂಕ್ಷೇಪವಾಗಿ ವರ್ಣಿಸುವೆವು. ಭೂಮಿಯು ಯಾರಿಂದಲೂ ಹುಟ್ಟಿಸಲ್ಪಡದೆ ಸ್ವತಃಸಿದ್ಧವಾಗಿರಲು, ಭೂಮಿಯ ಮೇಲೆ ಭೂಮಿಯ ಒಡೆಯರಿಗೆ ಸ್ವಾಮಿತ್ವವು ಹ್ಯಾಗೆ ಉಂಟಾಯಿತು? ಮತ್ತು ಭೂಮಿಯು ಹ್ಯಾಗೆ ಅವರ ವಶವಾಯಿತು? ಎಂಬದನ್ನು ಈ ಸ್ಥಳದಲ್ಲಿ ವಿಚಾರಿಸುವದು ಅವಶ್ಯವಿಲ್ಲ. ಭೂಮಿಯು ಎಲ್ಲರ ವಶದಲ್ಲಿಲ್ಲ, ಕೆಲವರ ವಶದಲ್ಲಿ ಮಾತ್ರ ಉಂಟು, ಎಂದು ಇಲ್ಲಿ ಗ್ರಹಿಸಿಕೊಂಡರೆ ಸಾಕು. ಈ ಭಾಗದೊಳಗಿನ ಯಾವತ್ತು ಅನುಮಾನಗಳು ಈ ಗ್ರಹಿಕೆಯನ್ನೇ ಆಶ್ರಯಿಸಿಕೊಂಡಿರುವವು. ಭೂಮಿಯು ಕೆಲವರ ಸ್ವಾಧೀನದಲ್ಲಿ ಮಾತ್ರ ಇರುವದಾದ್ದರಿಂದ, ಅದಕ್ಕೆ ಒಂದು ಸ್ವಭಾವಸಿದ್ಧವಾದ ಗುತ್ತಿಗೆಯ ಸ್ವರೂಪವು ಬಂದಿರುವದು. ಗೇಣಿಯು ಉಂಟಾಗಲಿಕ್ಕೆ ಇದೇ ಮೂಲಕಾರಣವು. ಭೂಮಿಯ ವಿಸ್ತಾರವು ಮರ್ಯಾದಿತವಾಗಿದ್ದು, ಭೂಮಿಯು ಬಹುತರ ಯಾವತ್ತೂ ಜನರಿಗೆ ಬೇಕಾದದ್ದಾದ ಕಾರಣ, ಭೂಮಿಯ ಒಡೆಯರಿಗೆ ಯಾವಾಗಲೂ ಗೇಣಿ ದೊರಿದೇ ದೊರಿಯುವದು. "ಭೂಮಿಯ ಒಡೆಯರು ತಮ್ಮ ಭೂಮಿಗೆ ಗೇಣಿಯನ್ನು ಬೇಡುವ ಕಾರಣವೇನಂದರೆ, ಭೂಮಿಯು ಅನೇಕರಿಗೆ ಬೇಕಾದದ್ದಾಗಿದ್ದು, ಅದು ಭೂಮಿಯ ಒಡೆಯರ ಹೊರ್ತು ಬೇರೆ ಮತ್ತ್ಯಾರಿಂದಲೂ ದೊರಿಯುವ ಹಾಗಿಲ್ಲ". (ಮಿಲ್ ಧೊರೆಯ ಅರ್ಥಶಾಸ್ತ್ರದ ತತ್ವಗಳು, ೧ನೇ ಭಾಗ ಪೃಷ್ಠ ೫೦೫).

**ಗೇಣಿಯ ಸ್ವರೂಪವನ್ನು ಕುರಿತು ವಿಶೇಷ ವಿವೇಚನವು.**— ಬೇಸಾಯದ ಭೂಮಿಯ ಗೇಣಿಯು ಭೂಮಿಯ ಫಲದ್ರೂಪ, ಹಾಗೂ ಸ್ಥಲಾನುಕೂಲತೆ, ಎಂಬ ಎರಡು ಸಂಗತಿಗಳಿಗೆ ಅನುಸಾರವಾಗಿ ನಿರ್ಣೈಸಲ್ಪಡುವದು. ಇವೆರಡರಲ್ಲಿ ಒಂದು ಸಂಗತಿಯ ಅಭಾವವಿದ್ದರೆ, ಭೂಮಿಗೆ ಏನು ಗೇಣಿ ಬರುವದಿಲ್ಲ. ಉದಾಹರಣಾರ್ಥವಾಗಿ, ಬೇಸಾಯದ ಕೆಲಸಕ್ಕೆ ಬೇಕಾಗುವ ಬಂಡವಲ ಶ್ರಮಗಳಿಗೆ ಸರಿಯಾದ ಫಲವು ದೊರಿಯುವಷ್ಟು ಹುಟ್ಟುವಳಿ ಇಲ್ಲದ ಬಂಜಿ ಭೂಮಿಗೆ ಯಾರೂ ಗೇಣಿಯನ್ನು ಕೊಡುವದಿಲ್ಲ. ಎರಡನೇ ಪಕ್ಷದಲ್ಲಿ ಅತ್ಯಂತ ಫಲವತ್ತಾದ ಭೂಮಿಯಾದಾಗ್ಯಾದರೂ, ಅನುಕೂಲವಾದ ಸ್ಥಳದಲ್ಲಿ ಇಲ್ಲದೆ ಹೋದರೆ, ಅದಕ್ಕೆ ಏನು ಗೇಣಿ ಹುಟ್ಟುವದಿಲ್ಲ. ಅಮೇರಿಕೆ ಮತ್ತು ಆಸ್ಟ್ರೇಲಿಯ ದೇಶಗಳಲ್ಲಿದ್ದ ವಿಸ್ತಾರವಾದ ಪ್ರದೇಶಗಳು ಈ ಸ್ಥಿತಿಯಲ್ಲಿರುವವು. ದಟ್ಟಾದ ಜನವಸತಿಯುಳ್ಳ ಮಧ್ಯ

ಸ್ಥಳಗಳಿಂದ ಈ ಪ್ರದೇಶಗಳು ಬಹು ದೂರವಾಗಿರುವ ಕಾರಣ, ಈ ಪ್ರದೇಶಗಳಲ್ಲಿ ಪೈರುಗಳು ವಿಪುಲವಾಗಿ ಬೆಳೆಯುವ ಹಾಗಿದ್ದರೂ, ಆ ಪೈರುಗಳನ್ನು ವೈಯುವದಕ್ಕೆ ಬಂಡಿಯ ಮಾರ್ಗಗಳಾಗಲಿ, ಲೋಹಮಾರ್ಗಗಳಾಗಲಿ, ಹಡಗಗಳಾಗಲಿ ಏನು ಸಾಧನಗಳಿಲ್ಲದ್ದರಿಂದ ಇಂಥ ಪ್ರದೇಶಗಳಿಗೆ ಏನು ಗೇಣಿ ಬರುವದಿಲ್ಲ. ಕೆಲವು ಭೂಮಿಗಳು ಸ್ವಾಭಾವಿಕವಾಗಿ ಬಹಳ ಫಲವತ್ತಾಗಿಯೂ, ಅನುಕೂಲವಾದ ಸ್ಥಳದಲ್ಲಿಯೂ ಇದ್ದಾಗ್ಯೂ, ಅವುಗಳ ಪೈರುಗಳಿಗೆ ಕಾಡುಮೃಗಗಳ ಉಪದ್ರವ ಬಹಳವಾಗಿದ್ದರೆ, ಅವುಗಳಿಗೆ ಏನು ಗೇಣಿ ಬರುವದಿಲ್ಲ. ಇಂಗ್ಲಂಡದೊಳಗಿನ ಎಷ್ಟೋ ಭೂಮಿಗಳ ಪೈರುಗಳನ್ನು ನೆಲದಲ್ಲಿ ಮನೆ ಮಾಡಿಕೊಂಡಿರುವ ಬೇಟೇ ಪ್ರಾಣಿಗಳು ನಾಶ ಮಾಡಿ ಬಿಡುವದರಿಂದ ಆ ಭೂಮಿಗಳಿಗೆ ಬಹಳ ಸ್ವಲ್ಪ ಗೇಣಿ ಬರುತ್ತದೆ. ಈ ಉಪದ್ರವದಿಂದ ಉಂಟಾಗುವ ಹಾನಿಯನ್ನು ಭೂಮಿಯ ಒಡೆಯರೇ ಮಾತ್ರ ಸಹಿಸಬೇಕಾಗುವದಿಲ್ಲ, ಯಾವತ್ತು ಜನಸಮೂಹಕ್ಕೆ ಸಹಿಸಬೇಕಾಗುತ್ತದೆ. ಮೊಲ ಮುಂತಾದ ಪ್ರಾಣಿಗಳಿಂದ ಆದ ನಷ್ಟದಷ್ಟು ದೇಶದೊಳಗಿನ ಯಾವತ್ತೂ ಭೂಮಿಯ ಸ್ವಾಭಾವಿಕ ಸುಭಿಕ್ಷತೆ ಕಡಿಮೆಯಾದರೆ ಇಡೀ ರಾಷ್ಟ್ರಕ್ಕೆ ಆಗುವ ಹಾನಿಯಷ್ಟೇ ಹಾನಿಯು ಈ ಉಪದ್ರವದಿಂದ ಆಗುತ್ತದೆ. ಈ ಪ್ರಕಾರ ಆಗುವ ನಷ್ಟದ ಮೂಲಕವಾಗಿ ಒಕ್ಕಲುಗಳು ಕಡಿಮೆ ಗೇಣಿಯನ್ನು ಕೊಡಬೇಕಾಗುವದು ಸರಿ. ಆದರೆ ಈ ಕಾರಣದಿಂದ ಬೇಸಾಯದ ಹುಟ್ಟುವಳಿಯು ಕಡಿಮೆಯಾಗುವದರಿಂದ, ಈ ಹುಟ್ಟುವಳಿಯನ್ನು ಉಪಜೀವನಕ್ಕಾಗಿ ಕೊಳ್ಳುವಂಥ ಜನರು ಅದಕ್ಕೆ ಹೆಚ್ಚು ಕ್ರಯ ತೆರಬೇಕಾಗುತ್ತದೆ.*

ಯಾವತ್ತು ದೇಶಗಳಲ್ಲಿ ಭೂಮಿಯು ಬಹಳ ಹೆಚ್ಚುಕಡಿಮೆ ಪ್ರಮಾಣದಿಂದ ಫಲವತ್ತಾಗಿಯೂ, ಸ್ಥಳದ ಅನುಕೂಲತೆಯುಳ್ಳದ್ದಾಗಿಯೂ, ಇರುವದು. ಮತ್ತು ಗೇಣಿಯು ಮೇಲಾಟದಿಂದ ಗೊತ್ತಾಗುವ ಸ್ಥಳದಲ್ಲಿ, ಅದು ಭೂಮಿಯ ಉತ್ಪಾದಕ ಶಕ್ತಿಯ† ಪ್ರಮಾಣದಿಂದಲೇ ಹೆಚ್ಚುಕಡಿಮೆಯಾಗುತ್ತದೆ. ಉದಾಹರಣಾರ್ಥವಾಗಿ ಎರಡು ಹೊಲಗಳನ್ನು ತಕ್ಕೊಂಡು, ಒಂದು ಹೊಲವು ಹೆಚ್ಚು ಉತ್ಪಾದಕ ಶಕ್ತಿಯುಳ್ಳದ್ದಾದ್ದರಿಂದ ಅದರಿಂದ ಬಂಡವಲ ಶ್ರಮಗಳಿಗೆ ಎರಡನೆ

---

* ಸನ್ ೧೮೮೧ನೇ ವರ್ಷದಲ್ಲಿ, ಹೊಲ ಮಾಡುವ ಒಕ್ಕಲುಗಳಿಗೆ ಮೊಲ ಮುಂತಾದವುಗಳನ್ನು ಕೊಂದು ಹಾಕುವದಕ್ಕೆ ಅನುಕೂಲವಾಗುವದಕ್ಕೋಸ್ಕರ ಒಂದು ಕಟ್ಟಳೆ ಮಾಡಲ್ಪಟ್ಟಿತು. ಅಂದಿನಿಂದ ಇಂಗ್ಲಂಡದಲ್ಲಿ ಈ ಕೇಡು ಬಹಳ ಮಟ್ಟಿಗೆ ಕಡಿಮೆಯಾಗಿರುವದು.

† "ಉತ್ಪಾದಕ ಶಕ್ತಿ" ಎಂದು ಹೇಳಿದಲ್ಲೆಲ್ಲಾ ಭೂಮಿಯ ಫಲದ್ರೂಪ ಹಾಗೂ ಸ್ಥಳಾನುಕೂಲತೆ ಎಂಬ ಎರಡೂ ಸಂಗತಿಗಳೆಂದು ತಿಳಿಯ ತಕ್ಕದ್ದು.

ಹೊಲಕ್ಕಿಂತಲೂ ಹೆಚ್ಚು ಪ್ರತಿಫಲ ದೊರಿಯುತ್ತದೆಂದು ತಿಳಿದರೆ, ಮೊದಲನೆ ಹೊಲವು ಎರಡನೆ ಹೊಲಕ್ಕಿಂತ ಎಷ್ಟು ಹೆಚ್ಚು ಬೆಲೆಯುಳ್ಳ ಉತ್ಪನ್ನವುಳ್ಳದ್ದಾಗಿರುವದೋ, ಅಷ್ಟೇ ಮೊದಲನೆ ಹೊಲದ ಗೇಣಿಯು ಎರಡನೆ ಹೊಲದ ಗೇಣಿಗಿಂತಲೂ ಹೆಚ್ಚಾಗಿರುವದು. ಆದರೆ, "ಈ ಎರಡೂ ಹೊಲಗಳಿಗೆ ಬರುವ ಗೇಣಿಯನ್ನು ನಿರ್ಣೈಸುವ ಸಂಗತಿಯು ಯಾವದು? ಕಡಿಮೆ ಉತ್ಪಾದಕವಾದ ಹೊಲಕ್ಕಿಂತಲೂ ಹೆಚ್ಚು ಉತ್ಪಾದಕವಾದ ಹೊಲಕ್ಕೆ ಹೆಚ್ಚು ಗೇಣಿ ಬರುವದೆಂಬುವದು ಸ್ಪಷ್ಟವೇ ಸರಿ. ಆದರೆ ಕಡಿಮೆ ಉತ್ಪಾದಕವಾದ ಹೊಲದ ಗೇಣಿಯನ್ನು ನಿರ್ಣೈಸುವಂಥ ಸಂಗತಿಯು ಯಾವದು?" ಎಂಬ ಪ್ರಶ್ನವು ಉತ್ಪನ್ನವಾಗುತ್ತದೆ. ಈ ಪ್ರಶ್ನಕ್ಕೆ ಉತ್ತರ ಹೇಳ ಬೇಕಾದರೆ, ರಿಕ್ಯಾಡೋರ್ ಧೊರೆಯ ಗೇಣಿಯ ವಿಷಯದ ನಿಯಮವನ್ನು ವಿವರಿಸಬೇಕಾಗುವದು.

**ಗೇಣಿಯ ವಿಷಯದಲ್ಲಿ ರಿಕ್ಯಾಡೋರ್ ಧೊರೆಯ ನಿಯಮವು.**— ಮೇಲೆ ಹೇಳಿದ ಎರಡು ಭೂಮಿಗಳಲ್ಲಿ ಕಡಿಮೆ ಉತ್ಪಾದಕವಾದ ಭೂಮಿಯ ಉತ್ಪಾದಕತ್ವದ ಬೆಲೆಯು, ಹೆಸರಿಗೆ ಮಾತ್ರ ಅಲ್ಪಸ್ವಲ್ಪ ಗೇಣಿ ಬರುವಂಥ ತೀರ ಕನಿಷ್ಠ ಪ್ರತಿಯ ಸಾಗುವಳಿಯಾದ ಭೂಮಿಯ ಉತ್ಪಾದಕತ್ವದ ಬೆಲೆಗಿಂತಲೂ ಎಷ್ಟು ಹೆಚ್ಚಾಗಿರುವದೋ, ಅಷ್ಟೇ ಆ ಭೂಮಿಗೆ ಗೇಣಿ ಬರುವದು. ಇದು ರಿಕ್ಯಾಡೋರ್ ಧೊರೆಯ ಗೇಣಿಯ ನಿಯಮದ ಸಂಕ್ಷಿಪ್ತ ನಿರೂಪಣವು. ಈ ನಿಯಮವನ್ನು ಇನ್ನು ಮುಂದೆ ಸಿದ್ಧ ಮಾಡುವಾ. ಪ್ರತಿಯೊಂದು ದೇಶದಲ್ಲಿ ತೀರ ಕಡಿಮೆ ಕಸುವುಳ್ಳದ್ದಾದ್ದರಿಂದ, ಇಲ್ಲವೆ ತೀರ ಅನಾನುಕೂಲವಾದ ಸ್ಥಳದಲ್ಲಿದ್ದ ಕಾರಣ, ಕೂಲಿಕಾರರ ಸಂಬಳ, ಮತ್ತು ಒಕ್ಕಲಿಗನಿಗೆ ಸಾಮಾನ್ಯ ದರದಿಂದ ಲಾಭ, ಇಷ್ಟು ಮಾತ್ರ ಹುಟ್ಟುವಷ್ಟು ಉತ್ಪನ್ನವುಳ್ಳ ಕನಿಷ್ಠ ಪ್ರತಿಯ ಕೆಲ ಭೂಮಿಯು ಇದ್ದೇ ಇರುವದು. ಇಂಥ ಭೂಮಿಗೆ ಏನು ಗೇಣಿ ಬರಲಾರದೆಂಬುವದು ಸ್ಪಷ್ಟವೇ ಸರಿ. ಯಾಕಂದರೆ, ಇಂಥ ಭೂಮಿಗೆ ಗೇಣೀ ಕೊಟ್ಟರೆ, ಹೊಲ ಮಾಡುವವನ ಬಂಡವಲಕ್ಕೆ ವಾಡಿಕೆಯ ದರದಿಂದ ಲಾಭ ಬರಲಿಕ್ಕಿಲ್ಲ. ಆದ್ದರಿಂದ ಈ ಭೂಮಿಗೆ ಗೇಣೀ ತಕ್ಕೊಂಡರೆ, ಈ ಭೂಮಿಯು ಬೀಳು ಬೀಳುವದು. ಯಾಕಂದರೆ, ವಾಡಿಕೆಯಾಗಿ ದೊರಿಯುವ ಲಾಭಕ್ಕಿಂತಲೂ ಕಡಿಮೆ ಲಾಭ ಬರುವಂಥ ಉದ್ಯೋಗದಲ್ಲಿ ಜನರು ಬಂಡವಲವನ್ನು ಎಂದಿಗೂ ಶೇರಿಸುವದಿಲ್ಲ.

**ಸಾಗುವಳಿಯ ಮೇರೆ.**— ಆ ಕಾರಣ ಯಾವದೊಂದು ವಿವಕ್ಷಿತವಾದ ಭೂಮಿಯ ಗೇಣಿಯು, ಆ ಭೂಮಿಯ ಉತ್ಪನ್ನವು ಏನು ಗೇಣಿ ಬರದಂಥ ಸಾಗುವಳಿಯಾದ ಕನಿಷ್ಠ ಪ್ರತಿಯ ಭೂಮಿಯ ಉತ್ಪನ್ನಕ್ಕಿಂತಲೂ ಹೆಚ್ಚಾಗಿದ್ದ

ಪ್ರಮಾಣದಂತೆ ನಿರ್ಣೈಸಲ್ಪಡುವದು. ಈ ಬಗೆಯ ಭೂಮಿಯು ಸಾಗುವಳಿಯ ಮೇರೆಯ ಮೇಲಿದ್ದ ಭೂಮಿಯೆಂದು ರಿಕ್ಯಾರ್ಡೋ ಧೊರೆಯು ವರ್ಣಿಸಿದ್ದಾನೆ. ಯಾಕಂದರೆ, ಈ ಭೂಮಿಗಿಂತಲೂ ಕಡಿಮೆ ಉತ್ಪನ್ನದ ಭೂಮಿಗೆ ಏನು ಗೇಣಿ ಕೊಡ ಬೇಕಾಗದಿದ್ದರೂ, ಬೇಸಾಯದ ಹುಟ್ಟುವಳಿಗಳ ಕ್ರಯಗಳು ಇದ್ದಕ್ಕಿದ್ದ ಹಾಗೇ ನಿಂತರೆ, ಅಂಥ ಭೂಮಿಯಿಂದ ಒಕ್ಕಲತನ ಮಾಡುವವನಿಗೆ ವಾಡಿಕೇ ದರದ ಲಾಭವು-ಸಹ ಬರುವದಿಲ್ಲ. ಈ ವಿಚಾರದ ಮೇಲಿಂದ ರಿಕ್ಯಾರ್ಡೋ ಧೊರೆಯ ನಿಯಮದ ಎರಡನೆ ಭಾಗದ ವಿವರಣೆ ಮಾಡುವದು ಅವಶ್ಯವಾಗುತ್ತದೆ.

**ಸಾಗುವಳಿಯ ಮೇರೆಯ ಮೇಲಿದ್ದ ಭೂಮಿಯ ಉತ್ಪಾದಕತ್ವದ ಮಾನದಿಂದ ಬೇಸಾಯದ ಹುಟ್ಟುವಳಿಗಳ ಕ್ರಯದ ನಿರ್ಣಯವಾಗುವದು.** - ದೇಶಕಾಲಭೇದದಿಂದ ಸಾಗುವಳಿಯ ಮೇರೆಯ ಮೇಲಿದ್ದ ಭೂಮಿಯ ಉತ್ಪಾದಕತ್ವವು ಬಹಳ ಹೆಚ್ಚುಕಡಿಮೆಯಾಗಿರುವದೆಂಬುವದು ಸ್ಪಷ್ಟವೇ ಸರಿ. ಬೇಸಾಯದ ಹುಟ್ಟುವಳಿಯ ಕ್ರಯವು, ಎಲ್ಲಕ್ಕೂ ಹೆಚ್ಚು ಖರ್ಚು ತಗಲಿದ ಹುಟ್ಟುವಳಿಯ ಭಾಗದ ಖರ್ಚಿನಿಂದ ನಿರ್ಣೈಸಲ್ಪಡುವದು; ಅಂದರೆ, ಈ ಹುಟ್ಟುವಳಿಯ ಕ್ರಯವು ಸಾಗುವಳಿಯ ಮೇರೆಯ ಮೇಲಿದ್ದ ಭೂಮಿಯ ಉತ್ಪಾದಕತ್ವದ ಪ್ರಮಾಣವನ್ನು ಅನುಸರಿಸಿ ಇರುವದೆಂಬ ಪರ್ಯಾಯಾರ್ಥವು. ಇದರ ಮೇಲಿಂದ "ಏನು ಗೇಣಿ ಬಾರದ ಸಾಗುವಳಿಯಾದ ಭೂಮಿಯ ಉತ್ಪಾದಕತ್ವದ ಪ್ರಮಾಣವು ಇಷ್ಟೇ, ಎಂದು ನಿರ್ಣೈಸುವಂಥ ಸಂಗತಿಯು ಯಾವದು?" ಮತ್ತು "ಆಸ್ಟ್ರೇಲಿಯದಲ್ಲಿ ಸಾಗುವಳಿಯ ಮೇರೆಯ ಮೇಲಿದ್ದ ಭೂಮಿಯೇ ಇಂಗ್ಲಂಡದಲ್ಲಿ ಇದ್ದದ್ದುಂಟಾದರೆ, ಅದಕ್ಕೆ ಬಹಳ ಗೇಣಿ ಬರುವ ಕಾರಣವೇನು?" ಎಂಬ ಪ್ರಶ್ನೆಗಳು ಹುಟ್ಟುತ್ತವೆ. ಬೇಸಾಯದ ಹುಟ್ಟುವಳಿಯ ಧಾರಣೆಯು ಹೆಚ್ಚುಕಡಿಮೆಯಾಗುವ ಕಾರಣವನ್ನು ಲಕ್ಷ್ಯದಲ್ಲಿ ತಂದರೆ, ಇವೆರಡೂ ಪ್ರಶ್ನಗಳಿಗೆ ಉತ್ತರ ದೊರಿಯುವದು. ಯಾವತ್ತು ದೇಶಗಳಲ್ಲಿ ಸಾಗುವಳಿಯ ಮೇರೆಯ ಸ್ಥಿತಿಯು, ಆ ದೇಶದ ಜನಸಂಖ್ಯೆಯ ಉಪಜೀವನಕ್ಕೆ ಅವಶ್ಯವಾದ ಪದಾರ್ಥಗಳ ಮಾನದಿಂದಲೂ ಆ ಪದಾರ್ಥಗಳನ್ನು ಪೂರೈಸುವದಕ್ಕೆ ಅವರ ಸ್ವಾಧೀನದಲ್ಲಿದ್ದ ಸಾಧನಗಳಿಂದಲೂ ನಿರ್ಣೈಸಲ್ಪಡುವದು. ಉಪಜೀವನದ ಪದಾರ್ಥಗಳು ಹುಟ್ಟುವ ಭೂಮಿಯು ತೀರ ಮರ್ಯಾದಿತವಾಗಿದ್ದು, ಜನಸಂಖ್ಯೆ ಬೆಳೆದರೆ, ಕಡಿಮೆ ಕಸುವುಳ್ಳ ಭೂಮಿಗಳನ್ನು ಸಾಗುವಳಿ ಮಾಡಬೇಕಾಗುತ್ತದೆ. ಇದೇ ಸಾಗುವಳಿಯ ಮೇರೆ ಇಳಿಯೋಣವು. ಇದರಿಂದ ಬೇಸಾಯದ ಹುಟ್ಟುವಳಿಗಳ ಧಾರಣೆಯೂ, ಭೂಮಿಯ ಗೇಣಿಯೂ, ಏರುವವು. ಇದಕ್ಕೆ ವಿಪರೀತವಾಗಿ, ಒಳ್ಳೇ

ಮಾರ್ಗಗಳು ಮುಂತಾದವುಗಳು ಉಂಟಾಗಿ, ಪರದೇಶಗಳ ಕೂಡ ವ್ಯಾಪಾರವನ್ನು ಬೆಳಿಸುವದಕ್ಕೆ ವಿಶೇಷ ಅನುಕೂಲವಾದರೆ, ಉಪಜೀವನದ ಪದಾರ್ಥಗಳು ದೊರಿಯುವ ಭೂಮಿಯ ವಿಸ್ತಾರವು ಬಹಳ ಬೆಳಿಯ ಬಹುದು. ಹೀಗಾದ ಪಕ್ಷದಲ್ಲಿ, ಜನಸಂಖ್ಯೆ ಬೆಳಿದದ್ದರಿಂದ ಬೇಕಾಗುವ ಹೆಚ್ಚಿನ ಅನ್ನಸಂಗ್ರಹವನ್ನು ಕೆಲವು ಕಾಲ ಸಾಗುವಳಿಯ ಮೇರೆಯನ್ನು ಇಳಿಸದೆ ಪೂರೈಸ ಬಹುದು. ಸನ್ ೧೮೭೪ರಿಂದ ೧೮೮೪ರ ವರೆಗೆ, ಇಂಗ್ಲಂಡದಲ್ಲಿ ಈ ಸಂಗತಿಯು ವರ್ತಿಸಿದೆ. ಇತ್ತಲಾಗಿ ಇಂಗ್ಲಂಡಕ್ಕೆ ಪರದೇಶಗಳಿಂದ ಉಪಜೀವನದ ಪದಾರ್ಥಗಳನ್ನು ತರುವದು ಸುಲಭವಾದ್ದರಿಂದ, ಇಂಗ್ಲಂಡದಲ್ಲಿ ಹೆಚ್ಚಿದ ಜನಸಂಖ್ಯೆಗೆ ಬೇಕಾದ ಅನ್ನದ ಪೂರೈಕೆಯು ಪರದೇಶಗಳಿಂದ ಆಗುತ್ತದೆ. ಅದರಿಂದ ಧಾರಣೆಗಳು ಇಳಿದಿರುವವು, ಹಾಗೂ ಸಾಗುವಳಿಯ ಮೇರೆ ಏರಿರುವದು. ಈ ಸಂಗತಿಯು ಇಂಗ್ಲಂಡದಲ್ಲಿ ಕೆಲ ಭೂಮಿಯು ಬೀಳು ಬಿದ್ದಿರುವದರಿಂದಲೂ, ಭೂಮಿಯ ಗೇಣಿಯು ಸರ್ವತ್ರ ಇಳಿದಿರುವದರಿಂದಲೂ ವ್ಯಕ್ತವಾಗುತ್ತದೆ.

ಬೇಸಾಯದ ಹುಟ್ಟುವಳಿಯು ಅಗ್ಗವಾಗಿದ್ದಲ್ಲಿ ಸಾಗುವಳಿಯ ಮೇರೆಯು ಉನ್ನತವಾಗಿರುವದು. ಉದಾಹರಣಾರ್ಥವಾಗಿ, ಆಸ್ಟ್ರೇಲಿಯದಲ್ಲಿ ಅತಿಶಯ ಉತ್ಪಾದಕವಾದ ಭೂಮಿಯು ಹೊರ್ತಾಗಿ, ಬೇರೆ ಯಾವ ಭೂಮಿಯ ಸಾಗುವಳಿಯಿಂದಲೂ ಉಳಿತಾಯವಾಗುವದಿಲ್ಲ. ಬೇಸಾಯದ ಹುಟ್ಟುವಳಿಯು ತುಟ್ಟಿಯಾದ ಹಾಗೆ ಸಾಗುವಳಿಯ ಮೇರೆಯು ಇಳಿಯುವದು. ಯಾಕಂದರೆ, ಧಾರಣೆಗಳು ಏರುವದರಿಂದ, ಕಡಿಮೆ ಉತ್ಪಾದಕವಾದ ಭೂಮಿಗಳನ್ನು ಸಾಗುವಳಿ ಮಾಡುವದರಿಂದಲೂ ಲಾಭವಾಗುತ್ತದೆ. ಈ ಮಾತಿನ ಸತ್ಯತೆಯನ್ನು ಒಂದು ದೃಷ್ಟಾಂತವನ್ನು ಕೊಟ್ಟು ಸ್ಪಷ್ಟೀಕರಿಸ ಬಹುದು. ಬೇಸಾಯದ ಹುಟ್ಟುವಳಿಗಳ ಧಾರಣೆಯು ಒಮ್ಮಿಂದೊಮ್ಮೆ ಹೆ ಏರಿತೆಂದು ತಿಳಿಯುವ. ಇದರಿಂದ ಒಕ್ಕಲಿಗರಿಗೆ ಮೊದಲಿನದಕ್ಕಿಂತಲೂ ಹೆ ಪಾಲು ಹೆಚ್ಚು ಉತ್ಪನ್ನವಾಗುವದು. ಹಾಗೂ ಅವರಿಗೆ ಸರಾಸರಿಮಾನಕ್ಕಿಂತಲೂ ಬಹಳ ಹೆಚ್ಚು ಲಾಭ ಬರುವದು. ಆದರೆ ಇದನ್ನು ಕಂಡು ಬೇರೆ ಜನರು ಹೊಲಗಳನ್ನು ಹಿಡಿಯುವದಕ್ಕೆ ನಾ ಮುಂದೆ ನೀ ಮುಂದೆ ಎಂದು ಹವಣಿಸುವ ಕಾರಣ, ಒಕ್ಕಲಿಗರಿಗೆ ದೊರಿಯುವ ವಿಶೇಷ ಲಾಭವು ಅವರಿಗೆ ಬಹಳ ಕಾಲ ಪರ್ಯಂತರ ದೊರಿಯುವದಕ್ಕೆ ಅಡ್ಡಿಯಾಗುವದು. ಆದ್ದರಿಂದ, ಭೂಮಿಗಳ ಗೇಣಿಯು ಏರುವದು; ಹಾಗೂ ಮೊದಲು ಸಾಗುವಳಿಯ ಮೇರೆಯ ಮೇಲಿದ್ದ ಭೂಮಿಗೆ ಈಗ ಗೇಣಿ ಬರುವದು. ಆದ ಕಾರಣ ಸಾಗುವಳಿಯ ಮೇರೆ ಇಳಿಯುವದು.

ವರ್ಷವರ್ಷಕ್ಕೆ ಬೇಸಾಯದ ಹುಟ್ಟುವಳಿಯ ಧಾರಣೆಯಲ್ಲಿ ಅಲ್ಪಸ್ವಲ್ಪ ಹೆಚ್ಚು ಕಡಿಮೆಯಾದರೂ ಕೂಡ ಸಾಗುವಳಿಯ ಮೇರೆ ಬದಲಿಸುವದೆಂಬ ಮಾತು ಇಂಗ್ಲಂಡದಲ್ಲಿ ಸ್ಯಾಲಿಸಬರಿ ಬೈಲಿನಲ್ಲಿ ಚನ್ನಾಗಿ ನಿದರ್ಶನಕ್ಕೆ ಬರುತ್ತದೆ. ಅಲ್ಲಿ ಇರುವ ಕೆಲ ಭೂಮಿಯು ತೀರ ಕನಿಷ್ಠ ಪ್ರತಿಯದಾದ್ದರಿಂದ, ಬೇಸಾಯದ ಹುಟ್ಟುವಳಿಯ ಧಾರಣೆ ಏರಿದ ಹೊರ್ತು, ಆ ಭೂಮಿಯ ಸಾಗುವಳಿಯಿಂದ ಒಕ್ಕಲಿಗನಿಗೆ ಉಳತಾಯವಾಗುವದಿಲ್ಲ. ಆದಕಾರಣ ಧಾರಣೆಗಳು ಏರಲು, ಅಲ್ಲಿಯ ಕೆಲ ತೀರ ದರಿದ್ರ ಭೂಮಿಯು ಸಹ ಸಾಗುವಳಿಯಾಗುತ್ತದೆ. ಮತ್ತು ಅದರಲ್ಲಿ ಬೆಳೆದ ಬಡ ಪೈರಿನಿಂದ ಒಕ್ಕಲಿಗನ ಶ್ರಮ ಬಂಡವಲಗಳಿಗೆ ತಕ್ಕ ಪ್ರತಿಫಲವಾಗುತ್ತದೆ. ಆದರೆ, ಧಾರಣೆಗಳು ಇಳಿದಾಗ ಈ ಭೂಮಿಯು ಸಾಗುವಳಿಯಾಗದೆ ಬೀಳು ಬೀಳುತ್ತದೆ. ಯಾಕಂದರೆ, ಅದರ ಉತ್ಪನ್ನದ ಮಾರಾಟದಿಂದ ಶ್ರಮ ಬಂಡವಲಗಳಿಗೆ ತಕ್ಕ ಪ್ರತಿಫಲ ಹುಟ್ಟುವದಿಲ್ಲ.

ಹಿಂದೆ ಒಂದು ಅಧ್ಯಾಯದಲ್ಲಿ, ಸನ್ ೧೮೭೩ನೇ ವರ್ಷ ಕಲ್ಲಿದ್ದಲಿಯ ಧಾರಣೆ ಬಹಳ ಏರಿದ ಸಂಗತಿಯು ಉಲ್ಲೇಖಿಸಲ್ಪಟ್ಟಿತು; ಮತ್ತು ಈ ಪ್ರಕಾರ ಧಾರಣೆ ಏರಲು, ತೀರ ಕಡಿಮೆ ಉತ್ಪನ್ನವುಳ್ಳ ಕಣಿಗಳಲ್ಲಿ ಕೆಲಸ ನಡಿಸುವದರಿಂದ ಸಹ ಉಳತಾಯವಾದ ಸಂಗತಿಯನ್ನೂ, ಧಾರಣೆ ಇಳಿದ ಕೂಡ್ಲೆ, ಆ ಕಣಿಗಳನ್ನು ಬಿಟ್ಟು ಬಿಡಬೇಕಾದ ಸಂಗತಿಯನ್ನೂ ಅಲ್ಲಿ ಹೇಳಿದ್ದೇವೆ.

ಈ ಕಲ್ಲಿದ್ದಲಿಯ ಉದಾಹರಣದಲ್ಲಾದರೂ ಧಾರಣೆಗಳು ಏರಿದಾಗ ಸಾಗುವಳಿಯ ಮೇರೆ (ಕಣಿಗಳ ವಿಷಯವನ್ನು ಕುರಿತು ಈ ಹೆಸರು ಸಾರ್ಥವಾದದ್ದೇ ಆದರೆ,) ಇಳಿಯಿತು, ಮತ್ತು ಧಾರಣೆಗಳು ವಿಲಕ್ಷಣವಾಗಿ ಏರಿದ ಕಾಲವು ಮುಗಿದ ಕೂಡ್ಲೆ, ತಿರುಗಿ ತನ್ನ ಸ್ವಾಭಾವಿಕ ಸ್ಥಿತಿಯನ್ನು ಹೊಂದಿತು.

**ಜನಸಂಖ್ಯೆಯ ವೃದ್ಧಿಯು ಬೇಸಾಯದ ಹುಟ್ಟುವಳಿಯ ಧಾರಣೆಯನ್ನು ಹೆಚ್ಚಿಸುವದು.** – ಸಾಗುವಳಿಯ ಮೇರೆಯ ಕೆಳಗಿನ ಭೂಮಿಯ ಸಾಗುವಳಿಯಿಂದ ಉಳತಾಯವಾಗ ಬೇಕಾದರೆ, ಧಾರಣೆಗಳು ಅವಶ್ಯವಾಗಿ ಏರ ಬೇಕಾಗುವವು. ಆದ್ದರಿಂದ, ಬೇಸಾಯದ ಹುಟ್ಟುವಳಿಯ ಧಾರಣೆ ಏರಿದ ವಿನಾ ಸಾಗುವಳಿಯ ಮೇರೆ ಇಳಿಯಲ್ಲಾರದೆಂಬದನ್ನು ಚನ್ನಾಗಿ ಲಕ್ಷ್ಯದಲ್ಲಿರಿಸ ತಕ್ಕದ್ದು. ಜನಸಂಖ್ಯೆ ವೃದ್ಧಿಯಾಗಲಾಗಿ ಬೇಸಾಯದ ಹುಟ್ಟುವಳಿಗಳ ಅವಶ್ಯಕತೆಯು ಹೆಚ್ಚಾಗುವದು. ಈ ಹುಟ್ಟುವಳಿಗಳ ಧಾರಣೆಯು ಈ ಸಂಗತಿಯಿಂದ ಏರಿದಷ್ಟು ಮತ್ತ್ಯಾವ ಸಂಗತಿಯಿಂದಲೂ ಏರುವದಿಲ್ಲವೆಂದು ಹಿಂದೆ ಹೇಳಿಯದೆ. ಜನಸಂಖ್ಯೆ ಬೆಳೆಯುವದರಿಂದ ಬೇಸಾಯದ ಹುಟ್ಟುವಳಿಯ ಬೇಡಿಕೆಯು ಅವಶ್ಯವಾಗಿ

ಹೆಚ್ಚಾಗುವದು. ಈ ಹೆಚ್ಚಾದ ಬೇಡಿಕೆಯಿಂದ ಧಾರಣಿ ಏರುವ ಕಾರಣ, ಮೊದಲು ಸಾಗುವಳಿಯ ಮೇರೆಯಾಗಿದ್ದ ಭೂಮಿಗಿಂತಲೂ ಕನಿಷ್ಠಪ್ರತಿಯ ಭೂಮಿಯನ್ನು ಸಾಗುವಳಿ ಮಾಡುವದರಿಂದ ಉಳಿತಾಯವಾಗ ಹತ್ತುವದು. ಆದಕಾರಣ ಬೇಸಾಯದ ಹುಟ್ಟುವಳಿಯ ಬೇಡಿಕೆಯನ್ನು ಹೆಚ್ಚಿಸುವಂಥ ಜನಸಂಖ್ಯೆಯ ವೃದ್ಧಿಯು ಆ ಹುಟ್ಟುವಳಿಯ ಧಾರಣಿಯನ್ನು ಏರಿಸಿ, ಸಾಗುವಳಿಯ ಮೇರೆಯನ್ನು ಇಳಿಸುವದು.

ಜನಸಂಖ್ಯೆ ವೃದ್ಧಿಯಾಗುವದರಿಂದ ಭೂಮಿಯ ಗೇಣಿಯು ಎರಡು ವಿಧವಾಗಿ ಏರುವದು. ಒಂದು ಕಡೆಗೆ ಬೇಸಾಯದ ಹುಟ್ಟುವಳಿಗೆ ಬೇಡಿಕೆ ಹೆಚ್ಚಾಗಿ ಅದರ ಬೆಲೆ ಏರುವದು. ಮತ್ತೊಂದು ಕಡೆಯಲ್ಲಿ, ಸಾಗುವಳಿಯ ಮೇರೆ ಇಳಿಯುವದರಿಂದ ಭೂಮಿಯ ಒಡೆಯನಿಗೆ ಗೇಣಿಯ ದ್ವಾರಾ ಸಲ್ಲುವ ಉತ್ಪನ್ನದ ಭಾಗವು ಹೆಚ್ಚುವದು. ಯಾಕಂದರೆ, ಯಾವದೊಂದು ಭೂಮಿಯ ಗೇಣಿಯಂದರೆ ಆ ಭೂಮಿಯ ಉತ್ಪಾದಕತ್ವದ ಬೆಲೆಗೂ, ಗೇಣಿ ಬಾರದಂಥ ತೀರ ಕನಿಷ್ಠ ಪ್ರತಿಯ ಭೂಮಿಯ ಉತ್ಪಾದಕತ್ವದ ಬೆಲೆಗೂ ಇರುವ ವ್ಯತ್ಯಾಸವೆಂದು ಮೇಲೆ ಹೇಳಿಯದೆ. ಆದ್ದರಿಂದ, ಸಾಗುವಳಿಯ ಮೇರೆ ಇಳಿಯಲಾಗಿ ಈ ವ್ಯತ್ಯಾಸವು ಹೆಚ್ಚಾಗಿ, ಭೂಮಿಯ ಗೇಣಿಯು ಏರುವದು. ಒಂದು ಹೊಲದ ಉತ್ಪಾದಕತ್ವದ ಬೆಲೆ ೧೦೦ ಅಂಶಗಳಾಗಿದೆ ಎಂದು ಕಲ್ಪಿಸುವಾ. ಮತ್ತು ಸಾಗುವಳಿಯ ಮೇರೆಯ ಮೇಲಿದ್ದ ಭೂಮಿಯ ಉತ್ಪಾದಕತ್ವದ ಬೆಲೆ ೩೦ ಅಂಶವುಳ್ಳದ್ದೆಂದು ಕಲ್ಪಿಸುವಾ. ಹೀಗಾದಲ್ಲಿ ಮೊದಲನೆ ಭೂಮಿಯ ಗೇಣಿಯು ೭೦ ಅಂಶಗಳ ಬೆಲೆಯುಳ್ಳದ್ದಾಗುವದು. ಆದರೆ ಸಾಗುವಳಿಯ ಮೇರೆ ಇಳಿದು, ಏನು ಗೇಣಿ ಬಾರದಂಥ ಸಾಗುವಳಿಯಾದ ಕನಿಷ್ಠ ಪ್ರತಿಯ ಭೂಮಿಯ ಉತ್ಪಾದಕತ್ವದ ಬೆಲೆಯು ೨೦ ಅಂಶಗಳುಳ್ಳದ್ದಾಯಿತೆಂದು ಕಲ್ಪಿಸಿದರೆ, ಮೊದಲನೆ ಭೂಮಿಯ ಗೇಣಿಯು ೮೦ ಅಂಶಗಳಷ್ಟು ಆಗುವದು.

**ರಿಕ್ಯಾರ್ಡೋನ ನಿಯಮದ ತಾತ್ಪರ್ಯವು.**—ಯಾವದೊಂದು ವಿವಕ್ಷಿತವಾದ ಭೂಮಿಯ ಗೇಣಿಯು, ಆ ಭೂಮಿಯ ಉತ್ಪಾದಕತ್ವ, ಹಾಗೂ ಏನು ಗೇಣಿ ಬಾರದಂಥ ಸಾಗುವಳಿಯಾದ ಕನಿಷ್ಠ ಭೂಮಿಯ (ಅಂದರೆ, ಸಾಗುವಳಿಯ ಮೇರೆಯಾಗಿದ್ದ ಭೂಮಿಯ) ಉತ್ಪಾದಕತ್ವ, ಇವೆರಡರ ವಜಾಬಾಕಿಯಾಗಿದೆ. ಆದ್ದರಿಂದ, ಸಾಗುವಳಿಯ "ಮೇರೆಯನ್ನು ಇಳಿಸುವಂಥ ಪ್ರತಿಯೊಂದು ಸಂಗತಿಯು ಗೇಣಿಯನ್ನು ಏರಿಸುವದು.' ಯಾಕಂದರೆ, ಇಂಥ ಸಂಗತಿಯಿಂದ ಯಾವದೊಂದು ವಿವಕ್ಷಿತವಾದ ಭೂಮಿಯ ಉತ್ಪಾದಕತ್ವದ ಹಾಗೂ ಗೇಣಿ

ಬಾರದಂಥ ಸಾಗುವಳಿಯಾದ ಕನಿಷ್ಠ ಪ್ರತಿಯ ಭೂಮಿಯ ಉತ್ಪಾದಕತ್ವದ ವಜಾಬಾಕಿಯು ಹೆಚ್ಚಾಗುತ್ತದೆ.

ಭೂಮಿಯ ಒಡೆಯರ ಹಿತಕ್ಕೂ, ಬೇಸಾಯದ ಹುಟ್ಟುವಳಿಗಳನ್ನು ಉಪಯೋಗಿಸುವವರ ಹಿತಕ್ಕೂ, ಕೆಲವು ಮಟ್ಟಿಗೆ ಪರಸ್ಪರ ವಿರೋಧ ಉಂಟು. – ರಿಕ್ಯಾಡೋರ್ನ ಗೇಣಿಯ ನಿಯಮದ ಮೇಲಿಂದ ಫಲಿತವಾಗುವ ಅನುಮಾನವೇನಂದರೆ, ಭೂಮಿಯ ಒಡೆಯರೊಳಗೂ ಸಮಾಜದ ಬೇರೆ ವರ್ಗದವರೊಳಗೂ ಪರಸ್ಪರ ಹಿತದ ಸಂಬಂಧವಾಗಿ ಕೆಲ ವಿರೋಧ ಉಂಟು. ಜನಸಂಖ್ಯೆ ಬೆಳೆಯುವದು ಗೇಣಿಗಳು ಹೆಚ್ಚಾಗುವದಕ್ಕೆ ಬಲವಾದ ಕಾರಣವಾಗಿದೆ. ಆದರೆ ಜನಸಂಖ್ಯೆಯ ಬೆಳವಿಕೆಯು ಕೆಲವೊಂದು ಪ್ರಮಾಣವನ್ನು ಮಿಕ್ಕಿದರೆ, ಅದರಿಂದ ಯಾವತ್ತೂ ಸಮಾಜದ ಹಿತಕ್ಕೆ ಬಹಳ ಹಾನಿಯುಂಟಾಗುವದು. ಇಂಗ್ಲಂಡದಲ್ಲಿ ಬಡವರ ಸಂರಕ್ಷಣಕ್ಕಾಗಿ ಕೂಡ್ರಿಸಲ್ಪಟ್ಟ ಕಪ್ಪಗಳು ಬಹುತರ ಭೂಮಿಯ ಮೇಲೇ ಕೂಡ್ರಿಸಿರುವ ಕಾರಣ ಈ ವಿರೋಧವು ಬಹಳ ಬೆಳೆದಿಲ್ಲ. ಇಲ್ಲದಿದ್ದರೆ, ಈಗಿನದಕ್ಕಿಂತಲೂ ಈ ವಿರೋಧವು ಬಹಳವಾಗಿ ಬೆಳೆಯುತ್ತಿತ್ತು. ದರಿದ್ರ ಸಂರಕ್ಷಣದ ಖರ್ಚಿನಿಂದ ಭೂಮಿಯ ಒಡೆಯರನ್ನು ಬಿಡುಗಡೆ ಮಾಡಿದರೆ, ಜನರು ಮುಂದಿನ ವಿಚಾರವಿಲ್ಲದೆ ಮದುವೆ ಮಾಡಿಕೊಂಡು ತಮ್ಮ ಕುಟುಂಬಗಳನ್ನು ಬಹಳವಾಗಿ ಬೆಳಿಸುವದೂ, ಮತ್ತು ಈ ಪ್ರಕಾರ ಜನಸಂಖ್ಯೆ ಬೆಳೆದು ಗೇಣಿಗಳು ಏರುವದೂ, ಭೂಮಿಯ ಒಡೆಯರಿಗೆ ಲಾಭಕರವಾಗುವದು. ಈ ದೃಷ್ಟಿಯಿಂದ ನೋಡಲಾಗಿ, ಇಂಗ್ಲಂಡದಲ್ಲಿ ಜನಸಂಖ್ಯೆ ಮಿತಿ ಮೀರಿ ವೃದ್ಧಿಯಾದ್ದರಿಂದ ಭೂಮಿಯ ಒಡೆಯರಿಗೆ ಉಂಟಾಗುವ ಒಳಿತಿನ ಕೂಡ, ಮಿತಿ ಮೀರಿದ ಪ್ರಜಾವೃದ್ಧಿಯುಂಟಾಗುವ ಹಾನಿಗಳನ್ನೂ ಅವರ ತಲೆಯ ಮೇಲೆ ಹೊರಿಸಿದ್ದು ಬಹು ಜಾಣತನದ ಯುಕ್ತಿ ಎಂದು ಹೇಳ ಬಹುದು. ಯಾಕಂದರೆ, ಭೂಮಿಯ ಒಡೆಯರ ಮೇಲೆ ಬೀಳುವ ದರಿದ್ರ ಸಂರಕ್ಷಣದ ಖರ್ಚಿನಿಂದ ಅವರನ್ನು ಉಳಿಸಿದರೆ, ಬಡವರ ವಿಪತ್ತೇ ಅವರ ಸಂಪತ್ತಾಗ ಬಹುದು; ಒಂದು ವರ್ಗದವರ ಸಂಪತ್ತನ್ನು ಅಭಿವೃದ್ಧಿ ಪಡಿಸುವ ಸಂಗತಿಯೇ ಮತ್ತೊಂದು ವರ್ಗದವರ ದುಃಖವನ್ನೂ, ದುರ್ದಶೆಯನ್ನೂ ವೃದ್ಧಿ ಪಡಿಸುವದು. ಭೂಮಿಯ ಒಡೆಯರು ಸಂಪತ್ತುಳ್ಳವರಾದ ಹಾಗೆ, ಕೇವಲ ಬಡವರಾದವರು ಅಶನಕ್ಕೆ ಗತಿಯಿಲ್ಲದೆ ತೊಳಲುವರು. ದರಿದ್ರ ಸಂರಕ್ಷಣದ ವೆಚ್ಚವು ಭೂಮಿಯ ಒಡೆಯರ ಮೇಲೆ ಬೀಳುವದರಿಂದ, ಇವೆರಡು ವರ್ಗದವರ ಪರಸ್ಪರ ಹಿತಗಳೊಳಗಿನ ವಿರೋಧಭಾವವು ಬಹಳ ಮಟ್ಟಿಗೆ ಕಡಿಮೆಯಾಗುತ್ತದೆ. ಇದಲ್ಲದೆ, ಭೂಮಿಯ ಒಡೆಯರ ಹಾಗೂ ಬೇರೆ

ಜನಸಮೂಹದ ಹಿತಗಳು ಈ ಸಂಬಂಧದಲ್ಲಿ ಪರಸ್ಪರ ವಿರುದ್ಧವಾಗಿದ್ದರೂ, ದೈವಯೋಗದಿಂದ ಬೇರೆ ಅನೇಕ ಸಂಬಂಧಗಳಲ್ಲಿ ಒಂದು ವರ್ಗದ ಹಿತಾಹಿತಗಳೇ ಮತ್ತೊಂದು ವರ್ಗದ ಹಿತಾಹಿತಗಳಾಗಿರುವವು.

**ಕೆಲವು ಅಂಶಗಳಲ್ಲಿ ಭೂಮಿಯ ಒಡೆಯರು, ಸಾವುಕಾರರು, ಶ್ರಮಕರ್ತರು, ಇವರೆಲ್ಲರ ಹಿತಗಳು ಒಂದೇ ಆಗಿರುವವು.**— ದಾರಿದ್ರ್ಯವು ಹೆಚ್ಚುವದಕ್ಕೂ ಗೇಣಿಗಳು ಏರುವದಕ್ಕೂ ಒಂದೇ ಮೂಲ ಕಾರಣವಾದಾಗ್ಯೂ, ಭೂಮಿಯ ಒಡೆಯರ ಹಿತಗಳೂ, ಬೇರೆ ಜನಸಮೂಹದ ಹಿತಗಳೂ ಯಾವಾಗಲೂ ಒಂದಕ್ಕೊಂದು ವಿರುದ್ಧವಾಗಿರುತ್ತವೆಂದು ತಿಳಿಯಲಾಗದು. ಯಾಕಂದರೆ, ಕೆಲವು ವಿಷಯಗಳಲ್ಲಿ ಭೂಮಿಯ ಒಡೆಯರು, ಸಾವುಕಾರರು, ಶ್ರಮಕರ್ತರು, ಇವರೆಲ್ಲರ ಹಿತಗಳು ಒಂದೇ ಆಗಿರುವವು. ಭೂಮಿ, ಬಂಡವಲ, ಶ್ರಮ, ಇವುಗಳಿಂದ ಹೆಚ್ಚು ಸಂಪತ್ತು ಉತ್ಪನ್ನವಾದ ಹಾಗೆ ಎಲ್ಲರಿಗೂ ಹೆಚ್ಚು ಹಿತವಾಗುವದು. ಆ ಕಾರಣ ಈ ಮೂರೂ ಸಾಧನಗಳ ಉತ್ಪಾದಕ ಶಕ್ತಿಯು ಹೆಚ್ಚುವದು ಎಲ್ಲರಿಗೂ ಬೇಕಾದದ್ದೇ. ಕೆಲವು ಕಾರಣಗಳಿಂದ ಭೂಮಿ, ಶ್ರಮ, ಬಂಡವಲ, ಇವೆಲ್ಲವುಗಳ ಉತ್ಪಾದಕ ಶಕ್ತಿಯು ವೃದ್ಧಿಯಾಗ ಬಹುದು. ಹೀಗಾದಲ್ಲಿ, ಭೂಮಿಯ ಒಡೆಯನಿಗೆ ಗೇಣಿಯಾಗಿಯೂ, ಶ್ರಮಕರ್ತನಿಗೆ ಸಂಬಳವಾಗಿಯೂ, ಸಾವುಕಾರನಿಗೆ ಲಾಭವಾಗಿಯೂ ಹಂಚಲ್ಪಡುವ ಇಡೀ ಉತ್ಪನ್ನವೇ ಹೆಚ್ಚಾಗುವದರಿಂದ, ಇವರೆಲ್ಲರಲ್ಲಿ ಪ್ರತಿಯೊಬ್ಬನ ಪಾಲಿಗೆ ಬರುವ ಸಂಪತ್ತಿನ ಭಾಗವು ಹೆಚ್ಚುವದು. ಸ್ವಲ್ಪ ವರ್ಷಗಳೀಚೆಯಲ್ಲಿ ಇಂಗ್ಲಂಡದ ದಕ್ಷಿಣ ಭಾಗದಲ್ಲಿ ಹೊಲಗಳಲ್ಲಿ ದುಡಿಯುವ ಕೂಲಿಕಾರರ ಸಂಬಳವು ಬಹಳ ಇಳಿದಿತ್ತು, ಹಾಗೂ ಉಪಜೀವನದ ಪದಾರ್ಥಗಳ ಧಾರಣೆಗಳು ಬಹಳ ಏರಿದ್ದವು. ಆದ್ದರಿಂದ, ಕೂಲಿಕಾರರ ಜೀವನವು ಚನ್ನಾಗಿ ಸಾಗದೆ, ಅವರ ಶ್ರಮದ ಉತ್ಪಾದಕ ಶಕ್ತಿಯು ಬಹಳ ಕಡಿಮೆಯಾದದ್ದಾಗಿ ಕಂಡು ಬಂತು. ಅವರು ನಿತ್ಯಶಃ ಅರಹೊಟ್ಟೆ ಉಣ್ಣುತ್ತಿದ್ದದರಿಂದಲೂ, ಹೊದಿಯಲಿಕ್ಕೆ ಸಾಕಷ್ಟು ಬಟ್ಟೆಗಳಿಲ್ಲದ್ದರಿಂದಲೂ, ಅಕಾಲದಲ್ಲಿ ಮುದುಕರೂ ಶಕ್ತಿಹೀನರೂ ಆಗುತ್ತಿದ್ದರು. ಆಗ ಕೂಲಿಕಾರರು ಕಾಲಕ್ಷೇಪ ಮಾಡುವ ರೀತಿಯನ್ನು ಪ್ರತ್ಯಕ್ಷ ನೋಡಿದ ಕೆಲವರು ನಿಶ್ಚಯಪೂರ್ವಕವಾಗಿ ಹೇಳಿದ್ದೇನಂದರೆ, ಕೂಲಿಕಾರರು ಕ್ರಯಕ್ಕೆ ಕೊಂಡ ಗುಲಾಮರು ಎಂದು, ಅಥವಾ ಬಂಡಿಗೆ ಹೂಡುವ ಕುದುರೆಗಳು ಎಂದು ತಿಳುಕೊಂಡಾದರೂ ಅವರ ಧನಿಯರು, ಅವರಿಗೆ ಆ ಕಾಲದಲ್ಲಿ ಅವರ ಕೂಲಿಯಿಂದ ಬರುತ್ತಿದ್ದ ಅನ್ನ, ಅರಿವೆ ಮೊದಲಾದವುಗಳಿಗಿಂತಲೂ ಹೆಚ್ಚು ಹಿತಕರವಾದ ಅನ್ನ, ಅರಿವೆ ಮುಂತಾದವುಗಳನ್ನು ಕೊಟ್ಟರೆ, ಅದರಿಂದ ಆ ಧನಿಯ

ರಿಗೆ ಹೆಚ್ಚು ಉತ್ಪನ್ನವಾಗುವದು. ಕೂಲಿಕಾರರಿಗೆ ಹೆಚ್ಚು ಸಂಬಳ ದೊರಿದರೆ ಅವರ ಶ್ರಮವು ಹೆಚ್ಚು ಉತ್ಪಾದಕವಾಗಿ, ಅವರಿಂದ ಧನಿಯರಿಗೆ ಹೆಚ್ಚು ಲಾಭ ವಾಗುವದೇ ಹೊರ್ತು ಲುಕಸಾನು ಆಗಲಿಕ್ಕಿಲ್ಲ. ಇತ್ತಲಾಗಿ ಇಂಗ್ಲಂಡದಲ್ಲಿ ಕೂಲಿಕಾರರ ಸ್ಥಿತಿಯು ಸುಧಾರಿಸಿರುವದು. ಆದರೆ ಈ ಸುಧಾರಣೆಯು, ಧನಿಯರು ವಿವೇಕ ಪೂರ್ವಕವಾಗಿ ಸ್ವಾರ್ಥವನ್ನು ಸಾಧಿಸಿದ್ದರ ಫಲವೆಂದು ತಿಳಿಯ ಬಾರದು. ಈ ಸುಧಾರಣೆಯು ಅನೇಕ ಕಾರಣಗಳ ಸಂಯೋಗದಿಂದ ಉಂಟಾಯಿತು. ಅವುಗಳಲ್ಲಿ ಕೆಲವುಗಳನ್ನು ಇಲ್ಲಿ ಹೇಳ ಬಹುದು. ಅವು ಯಾವವಂದರೆ, (೧) ಕೂಲಿಕಾರರು ಉಣ್ಣು ತಿನ್ನುವ ಬೆಣ್ಣೆ, ಹಂದಿಯ ಮಾಂಸ ಮೊದಲಾದ ಪದಾರ್ಥಗಳು ಅಮೇರಿಕೆಯಿಂದ ಬಂದದ್ದರಿಂದ ಅವುಗಳ ಧಾರಣೆಯು ಬಹಳವಾಗಿ ಇಳಿದದ್ದು ಒಂದು ಕಾರಣ. ಈ ಸಂಗತಿಯಿಂದ ಯಾವತ್ತು ಕೂಲಿಕಾರರ ವರ್ಗದಲ್ಲಿ ಮೊದಲಿನದಕ್ಕಿಂತ ಮೇಲ್ತರದ ಕಾಲಕ್ಷೇಪದ ಅಭಿರುಚಿಯು ಉಂಟಾಗಿ, ಅವರ ಕಾಲಕ್ಷೇಪ ಮಾಡುವ ರೀತಿಯು ಸುಧಾರಿಸಿತು. (೨) ಹೊಲದಲ್ಲಿ ದುಡಿಯ್ವುವ ಕೂಲಿಕಾರರೊಳಗೆ ವಿದ್ಯೆಯ ಪ್ರಸಾರವಾದ್ದರಿಂದ ಅವರ ಹೀನಸ್ಥಿತಿಯು ಅವರ ಲಕ್ಷ್ಯದಲ್ಲಿ ಬರ ಹತ್ತಿತು. ಅವರಿಗೆ ಆ ವರೆಗೆ ವಾರಕ್ಕೆ ಒಂಬತ್ತು ಶಿಲಿಂಗು ಸಂಬಳ ದೊರಿಯುತ್ತಿತ್ತು. ಮುಂದೆ ಇಷ್ಟು ಸಂಬಳದಿಂದ ಅವರು ತೃಪ್ತಿ ಹೊಂದದ ಹಾಗಾದರು. ಹೊಗೆಬಂಡಿಗಳಿಂದಲೂ, ಹೊಗೆಹಡಗಗಳಿಂದಲೂ, ಅವರಿಗೆ ಹೆಚ್ಚು ಸಂಬಳ ದೊರಿಯುವ ಸ್ಥಳಗಳಿಗೆ ಹೋಗುವದಕ್ಕೆ ಸಾಮರ್ಥ್ಯವು ಬಂತು. ಅವರು ಅಶಿಕ್ಷಿತರಾಗಿದ್ದಾಗ್ಗೆ, ತಾವಿದ್ದ ಊರು ಬಿಟ್ಟು ಮತ್ತೊಂದು ಊರಿಗೆ ಹೋಗುವದು ಅವರ ಜೀವದ ಸುತ್ತು ಬರುವದು. ಆದರೆ, ಅವರೊಳಗೆ ವಿದ್ಯೆಯು ಹಬ್ಬಿಗೊಂಡದ್ದರಿಂದ ವಿದ್ಯೆಯ ಸ್ವಾಭಾವಿಕ ಫಲವಾದ ಧೈರ್ಯವೂ, ಸಾಹಸವೂ, ಪ್ರಾದುರ್ಭವಿಸಿ, ಅವರಿಗೆ ತಾವಿದ್ದ ಊರು ಬಿಟ್ಟು ಎರಡನೆ ಕಡೆಗೆ ಹೋಗುವಷ್ಟು ಘಟ್ಟಿಗತನ ಉಂಟಾಯಿತು. ಹಲಕೆಲವು ವರ್ಷಗಳಾಚೆ ಒಕ್ಕಲತನ ಮಾಡುವ ಕೂಲಿಕಾರರೊಳಗೆ ಮೇಲಾಟದಿಂದುಂಟಾಗುವ ಪರಿಣಾಮಗಳು ಎಷ್ಟು ಮಾತ್ರವು ಗೋಚರವಾಗುತ್ತಿದ್ದಿಲ್ಲ; ಈ ಪರಿಣಾಮಗಳಿಗೆ ಅವರು ಕೇವಲ ಬಾಹ್ಯರಾಗಿದ್ದರು. ಅವರ ಅಜ್ಞಾನ ಪುಕ್ಕುತನಗಳಿಂದ ತಮ್ಮ ಮನೆಮಾರು ಬಿಟ್ಟು, ಹೆಚ್ಚು ಕೂಲಿ ದೊರಿಯುವ ಸ್ಥಳಗಳಿಗೆ ಹೋಗುವದಕ್ಕೆ ಅವರಿಗೆ ಧೈರ್ಯ ಸಾಲುತ್ತಿದ್ದಿಲ್ಲ. ಅವರು ಸಾಕಿದ ದನಕರ, ಕುರಿಮರಿಗಳಂತೆಯೇ ಅವರಾದರೂ, ಸ್ವಂತ ಬುದ್ಧಿಯಿಂದ ಸ್ವತಂತ್ರವಾಗಿ ಏನಾದರೂ ಮಾಡುವದಕ್ಕೆ ಕೇವಲ ಅಸಮರ್ಥರಾಗಿದ್ದರು. ಆದರೆ ಈಗ್ಗೆ ಈ ಎಲ್ಲ ಸ್ಥಿತಿಯೂ ಬದಲಾಗಿದೆ; ಈಗ್ಗೆ ಒಕ್ಕಲತನ ಮಾಡುವ ಕೌಂಟಿಗಳೊಳ

ಗಿಂದ, ಜನರು ಕೈಗಾರಿಕೆಯ ಉದ್ಯೋಗಗಳು ನಡಿಯುವಂಥ ಕೌಂಟಿಗಳಿಗೆ ಹೋಗುವದಕ್ಕೆ ಕಟ್ಟೇ ಇಲ್ಲ. ಈ ಹೆಚ್ಚುಕಡಿಮೆಗಳಿಂದ ಗೇಣಿಯ ಮೇಲೂ, ಒಕ್ಕಲಿಗರ ಲಾಭದ ಮೇಲೂ ಉಂಟಾಗುವ ಪರಿಣಾಮಗಳು ಸ್ಪಷ್ಟವಾಗಿ ಗೋಚರವಾಗುವಷ್ಟು ಕಾಲವು ಇನ್ನೂ ಆಗಿಲ್ಲ. ಆದರೂ, ಈಗಿನ ಸ್ಥಿತ್ಯಂತರದ ಕಾಲವು ಕಳೆದು ಹೋದನಂತರ, ಕೂಲಿಕಾರರ ಜ್ಞಾನವೂ ಪ್ರಾಪಂಚಿಕ ಸೌಖ್ಯಗಳೂ ವೃದ್ಧಿಯಾದ್ದರಿಂದ ಒಕ್ಕಲತನದ ಉದ್ಯೋಗದಲ್ಲಿ ಶೇರಿದ ಮೂರೂ ವರ್ಗದವರಿಗೆ ಲಾಭವಾಗುವದೆಂದು ಈ ಹೊತ್ತು ನಂಬುವದಕ್ಕೆ ಅಡ್ಡಿ ತೋರುವದಿಲ್ಲ. ಈ ಪ್ರಕಾರ ಆಶೆ ತಾಳುವದಕ್ಕೆ ಯೋಗ್ಯವಾದ ಆಧಾರವೂ ಉಂಟು. ಅದೇನಂದರೆ, ಸ್ಕಾಟಲಂಡದಲ್ಲಿಯೂ, ನಾರ್ದಂಬರ್ಲಂಡದಲ್ಲಿಯೂ ಇದ್ದ ಕೂಲಿಕಾರರ ಸ್ಥಿತಿಯು ಬಹು ಕಾಲದಿಂದ ಇಂಗ್ಲಡದ ದಕ್ಷಿಣ ಭಾಗದಲ್ಲಿದ್ದ ಕೂಲಿಕಾರರಿಗಿಂತಲೂ ಬಹಳ ನೆಟ್ಟಗಿರುವದು. ಅವರು ಹೆಚ್ಚು ವಿದ್ಯಾವಂತರಾಗಿರುವರು, ಅವರಿಗೆ ಹೆಚ್ಚು ಸೌಖ್ಯವುಳ್ಳ ಮನೆಗಳಿರುವವು, ಹೆಚ್ಚು ಸಂಬಳವು ದೊರಿಯುವದು; ಹಾಗೂ ಗೇಣಿಯೂ ಹೆಚ್ಚಾಗಿರುವದು, ಬೇಸಾಯದ ಸರ್ವಸಾಧಾರಣ ಸ್ಥಿತಿಯೂ ಬಹಳ ಚನ್ನಾಗಿರುವದು. ಇಷ್ಟೇ ಅಲ್ಲ, ಸಂಬಳದ ದರವು ಕಡಿಮೆ ಇದ್ದ ಪ್ರದೇಶಗಳಿಗಿಂತಲೂ ಸಂಬಳದ ದರವು ಹೆಚ್ಚಾಗಿದ್ದ ಪ್ರದೇಶಗಳಲ್ಲಿ, ಅಷ್ಟೇ ಕ್ಷೇತ್ರಫಲದ ಮತ್ತು ಒಂದೇ ತರದ ಭೂಮಿಯ ಒಕ್ಕಲತನಕ್ಕೆ ಕೂಲಿಕಾರರ ಸಂಬಳದ ಒಟ್ಟು ಖರ್ಚು ಕಡಿಮೆ ತಗಲುತ್ತದೆ. ಒಳಗಡೆಯಲ್ಲಿ ಅಬರ್ಡೀನ (ಸ್ಕಾಟಲಂಡದಲ್ಲಿ) ಶಾಯರದಲ್ಲಿದ್ದ ಒಂದು ೩೮೦ ಎಕರೆಯ ಹೊಲದ ಆಳುಹೋಳುಗಳ ಸಂಬಳದ ಖರ್ಚನ್ನೂ, ಅಷ್ಟೇ ಕ್ಷೇತ್ರಫಲದ ಮತ್ತು ಅದೇ ತರದ ಕೆಲಸ ಮಾಡ ಬೇಕಾಗುವ ನಾರಫಾಕ (ಇಂಗ್ಲಂಡದಲ್ಲಿ) ಶಾಯರದಲ್ಲಿದ್ದ ಮತ್ತೊಂದು ಹೊಲದ ಆಳುಹೋಳುಗಳ ಸಂಬಳಕ್ಕೆ ಬೀಳುವ ಖರ್ಚನ್ನೂ ಹೊಂದಿಸಿ ನೋಡಲಾಯಿತು. ಸ್ಕಾಟಲಂಡದ ಕೂಲಿಕಾರರಿಗೆ ವಾರಕ್ಕೆ ೨೦ ಶಿಲಿಂಗು ಸಂಬಳ ದೊರಿಯುತ್ತಿತ್ತು; ಮತ್ತು ನಾರಫಾಕದೊಳಗಿನ ಕೂಲಿಕಾರರಿಗೆ ೧೪ ಶಿಲಿಂಗು ಸಂಬಳ ದೊರಿಯುತ್ತಿತ್ತು. ಆದರೂ, ಅಬರ್ಡೀನ ಶಾಯರದೊಳಗಿನ ಹೊಲದ ಸಂಬಳದ ಒಟ್ಟು ವಾರ್ಷಿಕ ಖರ್ಚು ೫೧೦ ಪೌಂಡುಗಳಾಗಿದ್ದು, ನಾರಫಾಕ ಶಾಯರದೊಳಗಿನ ಹೊಲದ ಖರ್ಚು ೮೦೦ ಪೌಂಡುಗಳಾಗಿದ್ದದ್ದು ಕಂಡು ಬಂತು. ಈ ಪ್ರಕಾರ ಸ್ಕಾಟಲಂಡದೊಳಗಿನ ಒಕ್ಕಲಿಗರು ಕೂಲಿಕಾರರಿಗೆ ಹೆಚ್ಚು ದರದಿಂದ ಸಂಬಳ ಕೊಡ ಬೇಕಾದರೂ, ಸ್ಕಾಟಲಂಡದ ಕೂಲಿಕಾರರು ಹೆಚ್ಚು ಕುಶಲರೂ ತ್ರಾಣವುಳ್ಳವರೂ ಆದ್ದರಿಂದ, ಅಲ್ಲಿಯ ಒಕ್ಕಲಿಗರಿಗೆ ಒಟ್ಟಿನ ಮೇಲೆ ಕಡಿಮೆ ಖರ್ಚು ತಗಲಿ, ಉಳತಾಯವು ಸಹ ಆಯಿತು.

**ಜನಸಂಖ್ಯೆಯ ಬೆಳೆಯುವಿಕೆಯು ದೇಶದ ಊರ್ಜಿತಸ್ಥಿತಿಯನ್ನು ತೋರಿಸುವ ಪ್ರಮಾಣವಲ್ಲ.**— ರಿಕ್ಯಾರ್ಡೋ ಧೊರೆಯ ಗೇಣಿಯ ನಿಯಮವನ್ನು ಪೂರಾ ಅರಿತುಕೊಂಡವರು ಅರ್ಥಶಾಸ್ತ್ರದೊಳಗಿನ ಎಷ್ಟೋ ಗಹನವಾದ ಪ್ರಶ್ನೆಗಳನ್ನು ಸುಲಭವಾಗಿ ಬಿಡಿಸ ಬಹುದು. ಈ ನಿಯಮವನ್ನೂ, ಒಂದನೇ ಭಾಗದಲ್ಲಿ ಉದಹರಿಸಿದ "ಸರಕುಗಳ ಬೇಡಿಕೆ ಶ್ರಮದ ಬೇಡಿಕೆಗೆ ಕಾರಣವಲ್ಲ" ವೆಂಬ ಸಿದ್ಧಾಂತವನ್ನೂ ಸರಿಯಾಗಿ ತಿಳುಕೊಂಡ ವಿದ್ಯಾರ್ಥಿಗಳು, ಸ್ವತಃಸಿದ್ಧವಾದ ಸಿದ್ಧಾಂತಗಳೆಂದು ಪದೆ ಪದೆ ಪ್ರತಿಪಾದಿಸಲ್ಪಡುವ ಅನೇಕ ಭ್ರಾಂತಿಮೂಲಕವಾದ ಗ್ರಹಿಕೆಗಳಿಗೆ ಒಳಗಾಗದೆ, ಅವುಗಳೊಳಗಿನ ತಪ್ಪುಗಳನ್ನು ಬೈಲಿಗೆ ತರುವ ಸಾಮರ್ಥ್ಯವುಳ್ಳವರಾಗುವರು. ಉದಾಹರಣಾರ್ಥವಾಗಿ ವರ್ತಮಾನ ಪತ್ರಗಳಲ್ಲಿಯೂ, ಬೇರೆ ಕಡೆಯಲ್ಲಿಯೂ, ಯಾವತ್ತು ದೇಶಗಳ ಊರ್ಜಿತಸ್ಥಿತಿಯು ಆ ದೇಶಗಳ ಜನಸಂಖ್ಯೆಯ ವೃದ್ಧಿಯ ಮೇಲಿಂದ ಸರಿಯಾಗಿ ತಿಳಿಯುವದು, ಅಂದರೆ ದೇಶದ ಜನಸಂಖ್ಯೆ ಬೆಳೆದ ಪ್ರಮಾಣದಿಂದ ದೇಶವು ಹೆಚ್ಚುಹೆಚ್ಚಾಗಿ ಊರ್ಜಿತಸ್ಥಿತಿಯನ್ನು ಹೊಂದುವದು, ಎಂಬ ಅಭಿಪ್ರಾಯದ ಲೇಖಗಳು ಆಗಾಗ್ಗೆ ಕಾಣಿಸುವವು. ಫಲವತ್ತಾದ ಭೂಮಿಯು ವಿಪುಲವಾಗಿದ್ದದರಿಂದ ಉಪಜೀವನಕ್ಕೆ ಅವಶ್ಯವಾದ ಪದಾರ್ಥಗಳು ಬಹಳ ಅಗ್ಗವಾಗಿರುವ ಆಸ್ಟ್ರೇಲಿಯದಂಥ ದೇಶಗಳಲ್ಲಿ ಈ ಮಾತು ಕೆಲವು ಮಟ್ಟಿಗೆ ನಿಜವಾಗಿರುವದು. ಇಂಥ ದೇಶದಲ್ಲಿ ಜನಸಂಖ್ಯೆ ಬೆಳೆಯುವದರಿಂದ ದೇಶದ ಸಂಪತ್ತು ಅಭಿವೃದ್ಧಿಯಾಗುವದು. ಯಾಕಂದರೆ, ಇಂಥ ದೇಶಗಳಲ್ಲಿದ್ದ ಸಂಪದುತ್ಪಾದನದ ಸ್ವಾಭಾವಿಕ ಸಾಧನಗಳಿಂದ ವಿಪುಲವಾದ ಸಂಪತ್ತನ್ನು ಹುಟ್ಟಿಸುವದಕ್ಕೆ ಶ್ರಮದ ಹೆಚ್ಚು ಪೂರೈಕೆಯು ಅವಶ್ಯವಾಗಿರುವದು. ಆದರೆ ಹಿಂದುಸ್ಥಾನದಂಥ ಕೆಲವು ದೇಶಗಳಲ್ಲಿ ಸಂಪತ್ತು ಬೆಳೆದ ಪ್ರಮಾಣಕ್ಕಿಂತಲೂ, ಜನಸಂಖ್ಯೆಯು ಎಷ್ಟೋ ಪಾಲು ಹೆಚ್ಚು ಬೆಳೆದಿರುವದು. ಆದ್ದರಿಂದ, ಜನರ ಜೀವನೋಪಾಯಗಳು ದಿನೇ ದಿನೇ ಕಡಿಮೆಯಾಗುತ್ತಾ ನಡೆದು, ಜನರೊಳಗಿನ ಸೌಖ್ಯವುಳ್ಳ ಬಾಳಿವೆಯ ವಿಷಯದ ಗ್ರಹಿಕೆಯು ಹೀನಸ್ಥಿತಿಯನ್ನು ಹೊಂದಿರುವದು. ಅಸಂಖ್ಯ ಜನರ ಕಣ್ಣೆದುರಿಗೆ ಭಿಕ್ಷೆಉಪವಾಸಗಳು ಹಗಲಿರುಳು ನಿಂತುಕೊಂಡಿರುವವು. ಜನರ ಹತ್ತರ ಸಂಗ್ರಹವೇನು ಇರುವದಿಲ್ಲವಾದ್ದರಿಂದ, ಒಂದು ವರ್ಷ ಪೈರು ಬಾರದಿದ್ದರೆ ಅವರಿಗೆ ಉಪವಾಸ ಸಾಯುವ ಹೊತ್ತು ಒದಗುತ್ತದೆ. ಬರಗಾಲ ಬಂದರೆ ಬಡವರು ತಮಗೆ ಅನಾವಶ್ಯಕವಾದ ಚಂದದ ಒಡವೆಗಳನ್ನು ಕೊಳ್ಳುವದನ್ನು ಬಿಟ್ಟು, ಉಪಜೀವನಕ್ಕೆ ಅವಶ್ಯವಾದ ಪದಾರ್ಥಗಳನ್ನೇ ಮಾತ್ರ ಕೊಂಡು ಕಾಲಹರಣ ಮಾಡುವರೆಂಬುವ

ಹಾಗಿರುವದಿಲ್ಲ. ಹೆಚ್ಚು ಬೆಲೆಯುಳ್ಳ ಆಹಾರವನ್ನು ಅವರು ಎಂದೂ ತಿನ್ನುವದಿಲ್ಲ. ಅವರ ನಿತ್ಯದ ಆಹಾರವೇ ಬಹಳ ಅಗ್ಗವಾದದ್ದು. ಚಂದದ ಒಡವೆಗಳನ್ನು ಅವರು ಒಳ್ಳೇ ಸುಭಿಕ್ಷತೆಯ ಕಾಲದಲ್ಲಿ ಸಹ ಕಂಡಿರುವದಿಲ್ಲ. ಅವರು ಈಗಲೇ ಮನುಷ್ಯರ ಜೀವತ್ವದ ಅತ್ಯಂತ ನೀಚಾವಸ್ಥೆಯಲ್ಲಿರುವ ಕಾರಣ, ಇದಕ್ಕೂ ಕೆಳಗಿನ ಸ್ಥಿತಿಯೆಂದರೆ ಪ್ರತ್ಯಕ್ಷ ಉಪವಾಸವೇ ಸರಿ. ಇಂಥ ಸ್ಥಿತಿಗತಿಯುಳ್ಳ ದೇಶದಲ್ಲಿ ಬರೇ ಜನಸಂಖ್ಯೆಯು ಬೆಳೆದದ್ದು ಅಭ್ಯುದಯದ ಲಕ್ಷಣವಾಗಲಾರದೆಂಬುವದು ಸ್ಪಷ್ಟವಾಗಿದೆ.

**ಗೇಣಿಯಿಂದ ಬೇಸಾಯದ ಹುಟ್ಟುವಳಿಗಳ ಧಾರಣೆ ಏರುವದಿಲ್ಲ.**— ರಿಕ್ಯಾಡೋರ್ನನ ನಿಯಮದ ಮೇಲಿಂದ ಫಲಿತವಾಗುವ ಮಹತ್ವವುಳ್ಳ ಅನುಮಾನಗಳಲ್ಲಿ, ಗೇಣಿಯು ಬೇಸಾಯದ ಹುಟ್ಟುವಳಿಗಳ ಕ್ರಯಕ್ಕೆ ಸೇರಿದ ಭಾಗವಲ್ಲೆಂಬುವದು ಒಂದಾಗಿದೆ. ಅಂದರೆ, ಯಾವತ್ತು ಗೇಣಿಗಳನ್ನು ಈ ಹೊತ್ತು ಬಿಟ್ಟು ಬಿಟ್ಟರೂ, ಬೇಸಾಯದ ಹುಟ್ಟುವಳಿಗಳು ಈಗಿನದಕ್ಕಿಂತಲೂ ಅಗ್ಗವಾಗಲಿಕ್ಕಿಲ್ಲವೆಂಬ ಅರ್ಥವು. ಬೇಸಾಯದ ಹುಟ್ಟುವಳಿಯ ಕ್ರಯವು ಸಾಗುವಳಿಯ ಮೇರೆಯ ಸ್ಥಿತಿಯ ಪ್ರಕಾರ ನಿರ್ಣೈಸಲ್ಪಡುವದೆಂದು ಹಿಂದೆ ಸಿದ್ಧ ಮಾಡಿಯದೆ. ಈ ಹುಟ್ಟುವಳಿಯ ಕ್ರಯವು, ಗೇಣಿ ಬಾರದಂಥ ಸಾಗುವಳಿಯಾದ ಕನಿಷ್ಠ ಪ್ರತಿಯ ಭೂಮಿಯ ಸಾಗುವಳಿಗೆ ಬೇಕಾಗುವ ಬಂಡವಲ ಶ್ರಮಗಳಿಗೆ ಯೋಗ್ಯವಾದ ಪ್ರತಿಫಲ ಬರುವಷ್ಟು ಇರಲಿಕ್ಕೇ ಬೇಕು. ಇದಕ್ಕೂ ಕಡಿಮೆಯಾದದ್ದುಂಟಾದರೆ, ಈ ಭೂಮಿಯು ಸಾಗುವಳಿಯಾಗದೆ ಬೀಳು ಬಿದ್ದು, ಸಾಗುವಳಿಯ ಮೇರೆ ಏರುವದು. ಆದರೆ ಹೀಗೆ ಸಂಭವಿಸುವದು ಶಕ್ಯವಲ್ಲ. ಯಾಕಂದರೆ, ಗೇಣಿಗಳನ್ನು ಒಂದು ವೇಳೆ ಬಿಟ್ಟು ಬಿಟ್ಟರೂ, ಅದರಿಂದ ಬೇಸಾಯದ ಹುಟ್ಟುವಳಿಯ ಬೇಡಿಕೆ ಎಷ್ಟು ಮಾತ್ರವೂ ಕಡಿಮೆಯಾಗದೆ ಮೊದಲಿನಷ್ಟೇ ಇರುವದು. ಈ ಹುಟ್ಟುವಳಿಯ ಬೇಡಿಕೆಯು ಅದರಿಂದ ಉಪಜೀವಿಸುವ ಜನಸಂಖ್ಯೆಯನ್ನು ಅನುಸರಿಸಿರುವದು. ಮತ್ತು ಹಿಂದೆ ಹೇಳಿದಂತೆ, ಬೇಸಾಯದ ಹುಟ್ಟುವಳಿಯ ಬೇಡಿಕೆಯು ಸಾಗುವಳಿಯ ಮೇರೆಯ ಉಚ್ಚನೀಚತ್ವಗಳನ್ನು ನಿರ್ಣೈಸುವದು. ಮತ್ತು ಸಾಗುವಳಿಯ ಮೇರೆಯು ಬೇಸಾಯದ ಹುಟ್ಟುವಳಿಗಳ ಕ್ರಯವನ್ನು ನಿರ್ಣೈಸುವದು. ಗೇಣಿಗಳನ್ನು ಬಿಟ್ಟು ಬಿಟ್ಟದ್ದರಿಂದ ಅಷ್ಟರ ಮಟ್ಟಿಗೆ ಭೂಮಿಯ ಒಡೆಯರು ಬಡವರಾಗುವರು; ಮತ್ತು ಹೊಲ ಮಾಡುವ ಒಕ್ಕಲುಗಳು ಅಷ್ಟರ ಮಟ್ಟಿಗೆ ಧನಿಕರಾಗುವರು; ಇಷ್ಟೇ ಹೊರ್ತು, ಅದರಿಂದ ಸಮಸ್ತರು ಕೊಳ್ಳುವಂಥ ಬೇಸಾಯದ ಹುಟ್ಟುವಳಿಗಳ ಧಾರಣೆ ಏನು ಹೆಚ್ಚು ಕಡಿಮೆಯಾಗಲಿಕ್ಕಿಲ್ಲ.

ಗೇಣಿಯು ಮೇಲಾಟದಿಂದ ನಿರ್ಣೈಸಲ್ಪಟ್ಟು, ಯಾವದೊಂದು ಭೂಮಿಯ ಉತ್ಪನ್ನವು ಸಾಗುವಳಿಯಾದ ಕನಿಷ್ಠ ಪ್ರತಿಯ ಭೂಮಿಯ ಉತ್ಪನ್ನಕ್ಕಿಂತಲೂ ಹೆಚ್ಚಾಗಿದ್ದಷ್ಟೇ ಆ ಭೂಮಿಗೆ ಗೇಣಿ ಬಂದರೆ, ಅದಕ್ಕೆ ಅರ್ಥಶಾಸ್ತ್ರದ ದೃಷ್ಟಿಯಿಂದ ಬರತಕ್ಕ ಸಂಪೂರ್ಣ ಗೇಣಿ ಅನ್ನ ತಕ್ಕದ್ದು. ರಿಕ್ಯಾಡೋರ್ನ ಧೊರೆಯ ನಿಯಮದ ಮೇಲೆ ಕೆಲವರು ಮಾಡಿದ ಆಕ್ಷೇಪಗಳಲ್ಲಿ ಒಂದು ಆಕ್ಷೇಪವು ಏನಂದರೆ, ಯಾವತ್ತು ಒಕ್ಕಲಿಗರು ಗೇಣಿಯನ್ನು ಕೊಡಬೇಕಾಗುವದರಿಂದ, ರಿಕ್ಯಾಡೋರ್ನ ನಿಯಮದಲ್ಲಿ ಗ್ರಹಿಸಲ್ಪಡುವ ಏನು ಗೇಣಿ ಇಲ್ಲದೆ ಸಾಗುವಳಿಯಾಗಿದ್ದ ಭೂಮಿಯು ಮೂಲತಃ ಇರುವದೇ ಇಲ್ಲ. ಆದರೆ, ಇದಕ್ಕೆ ಸಮಾಧಾನವೇನಂದರೆ, ಏನು ಗೇಣಿ ಬಾರದಂಥ ಕನಿಷ್ಠ ಪ್ರತಿಯ ನೆಲವುಳ್ಳ ಇಡೀ ಹೊಲಗಳು ಇರುವದು ಕ್ವಚಿತ ಎಂಬುವದು ಸುಳ್ಳಲ್ಲ. ಆದಾಗ್ಯೂ, ಎಷ್ಟೋ ಹೊಲಗಳಲ್ಲಿ ಕೆಲ ನೆಲವು ಈ ತರದ್ದಾಗಿರುವದು; ಮತ್ತು ಇಂಥ ಹೊಲದ ಗೇಣಿಯು ಆ ಹೊಲದ ಎಲ್ಲ ಎಕರೆಗಳ ಮೇಲೆ ಆಕರಿಸಲ್ಪಟ್ಟಾಗ್ಯೂ, ಸಾಗುವಳಿ ಮಾಡುವದಕ್ಕೆ ಬೇಕಾಗುವ ಬಂಡವಲದ ಮೇಲಿನ ಲಾಭ, ಮತ್ತು ಶ್ರಮದ ಸಂಬಳ, ಇವು ಮಾತ್ರ ದೊರಿಯುವಷ್ಟು ಉತ್ಪನ್ನವುಳ್ಳ ಆ ಹೊಲದೊಳಗಿನ ಯಾವತ್ತು ಭಾಗಗಳನ್ನು ಇಡೀ ಭೂಮಿಯೊಳಗಿಂದ ಕಡಿಮೆ ಮಾಡಿದರೂ, ಗೇಣಿಯು ಮೊದಲಿನದಕ್ಕಿಂತ ಎಷ್ಟು ಮಾತ್ರವೂ ಕಡಿಮೆಯಾಗದು. ರಿಕ್ಯಾಡೋರ್ನ ನಿಯಮದ ವಿರುದ್ಧವಾಗಿ ತೆಗೆದ ಮತ್ತೊಂದು ಆಕ್ಷೇಪವೇನಂದರೆ, ಗೇಣಿಯನ್ನು ಕೊಡುವ ಒಕ್ಕಲಿಗರಿಗೂ, ಅದನ್ನು ತೆಗೆದು ಕೊಳ್ಳುವ ಭೂಮಿಯ ಒಡೆಯರಿಗೂ ಈ ನಿಯಮದ ಸುದ್ದಿಯು ಸಹ ಇರುವದಿಲ್ಲ. ಹಾಗು ಅವರು ಗೇಣಿಯನ್ನು ಗೊತ್ತು ಮಾಡ ಬೇಕಾದರೆ ಈ ನಿಯಮವನ್ನನುಸರಿಸಿ ಎಂದೂ ಮಾಡುವದಿಲ್ಲ. ಈ ಆಕ್ಷೇಪವು, ಎಷ್ಟೋ ಜನರು ಇಡೀ ಆಯುಷ್ಯವನ್ನು ಕಳೆದರೂ ಅವರಿಗೆ ಅವರ ಶರೀರದ ಬೇರೆ ಬೇರೆ ಭಾಗಗಳು ಹ್ಯಾಗೆ ಹೊಂದಿಸಲ್ಪಟ್ಟಿರುವವೆಂಬದು ಗೊತ್ತಿರುವದಿಲ್ಲವಾದ್ದರಿಂದ, ಶಾರೀರಿಕಶಾಸ್ತ್ರಜ್ಞರು ಮಾಡಿದ ಯಾವತ್ತು ಶೋಧಗಳು ಸುಳ್ಳೆಂದು ಹೇಳುವಷ್ಟೇ ಸಮಂಜಸವಾಗಿರುವದು. ಅನ್ನಪಚನದ ಕ್ರಿಯೆಯನ್ನು ಯತ್ಕಿಂಚಿತವಾಗಿ ಅರಿಯದಿದ್ದರೂ ಜನರು ತಮಗೆ ಆರೋಗ್ಯವಾದ ಪದಾರ್ಥಗಳನ್ನೇ ತಿನ್ನುವ ಪ್ರಕಾರ, ರಿಕ್ಯಾಡೋರ್ನ ನಿಯಮದ ಸುದ್ದಿಯನ್ನೇ ಅರಿಯದಿದ್ದರೂ, ಗೇಣಿಯನ್ನು ತೆಗೆದು ಕೊಳ್ಳುವವರೂ ತೆರುವವರೂ ಕೂಡೇ ಆ ನಿಯಮವನ್ನು ಅನುಸರಿಸುವರು.

**ಸಾಂಪ್ರದಾಯದಿಂದ ಗೇಣಿಗಳ ಮೇಲೆ ನಡಿಯುವ ಕಾರ್ಯವು.**— ಇದು ವರೆಗೆ ಈ ಅಧ್ಯಾಯದಲ್ಲಿ ಗೇಣಿಯು ಕೇವಲ ಮೇಲಾಟದಿಂದಲೇ ನಿರ್ಣೈಸಲ್ಪಡುವದೆಂದು ಗ್ರಹಿಸಲ್ಪಟ್ಟಿತು. ಇಂಗ್ಲಂಡ ಸ್ಕಾಟಲಂಡ ದೇಶಗಳಲ್ಲಿ ಬಹುತರ ಈ ಸ್ಥಿತಿಯು ಇರುವದು. ಆದರೆ ಬೇರೆ ಯಾವತ್ತು ದೇಶಗಳಲ್ಲಿ ಬಹುತರ ಗೇಣಿಯನ್ನು ನಿರ್ಣೈಸುವಲ್ಲಿ ಪರಂಪರಾಗತವಾದ ಸಾಂಪ್ರದಾಯವೇ ಪ್ರಧಾನ ಕಾರಣವಾಗಿರುವದು. ಉದಾಹರಣಾರ್ಥವಾಗಿ, ಫ್ರಾನ್ಸ ಮತ್ತು ಇತಾಲಿ ದೇಶಗಳ ಕೆಲವು ಭಾಗಗಳಲ್ಲಿ "ಮೆಟೇರ್ ಟಿನ್ಯೂಅರ್" ಎಂಬದೊಂದು ಕೋರುಪಾಲಿನಿಂದ ಹೊಲ ಹಿಡಿಯುವ ಪದ್ಧತಿಯುಂಟು. ಈ ಪದ್ಧತಿಯ ಪ್ರಕಾರ, ಭೂಮಿಯ ಉತ್ಪನ್ನವನ್ನು ಭೂಮಿಯ ಒಡೆಯರೂ ಒಕ್ಕಲುಗಳೂ ಕೆಲವೊಂದು ನಿಯಮಿತ ಪ್ರಮಾಣದಿಂದ ತಮ್ಮೊಳಗೆ ಹಂಚಿಕೊಳ್ಳುತ್ತಾರೆ. ಈ ಪ್ರಮಾಣವು ವಾಡಿಕೆಯಾಗಿ ಉತ್ಪನ್ನದ ಸರಿ ಅರ್ಧ ಪಾಲಾಗಿರುವದು; ಆದರೆ ಕೆಲವು ಪ್ರಾಂತಗಳಲ್ಲಿ ಭೂಮಿಯ ಒಡೆಯರು ಉತ್ಪನ್ನದ ⅔ ಪಾಲು ಸುದಾ ತಕ್ಕೊಳ್ಳುತ್ತಾರೆ. ಈ ಮೇರೆಗೆ, ಭೂಮಿಯ ಒಡೆಯನಿಗೆ ಕೊಡ ತಕ್ಕ ಉತ್ಪನ್ನದ ಭಾಗವು ಸಾಂಪ್ರದಾಯಾನುಸಾರವಾಗಿ ನಿರ್ಣೈಸಲ್ಪಡುವದು; ಅದರೊಳಗೆ ಮೇಲ್ಲಾಟದ್ದೇನು ನಡಿಯುವದಿಲ್ಲ. ಕೆಲವು ಪ್ರಸಕ್ತಿಗಳಲ್ಲಿ ಹೊಲ ಮಾಡುವದಕ್ಕೆ ಅವಶ್ಯವಾದ ಬಂಡವಲದೊಳಗಿನ ಎಷ್ಟು ಭಾಗವನ್ನು ಭೂಮಿಯ ಒಡೆಯನು ಕೊಡಬೇಕೆಂಬುವದರ ನಿರ್ಣಯವಾದರೂ ಸಾಂಪ್ರದಾಯಾನುಸಾರವಾಗಿಯೇ ಆಗುತ್ತದೆ. ಕೆಲವು ಕಡೆಯಲ್ಲಿ ಹೊಲ ಮಾಡುವದಕ್ಕೆ ಬೇಕಾಗುವ ಯಾವತ್ತು ದನಕರಗಳನ್ನೂ, ಗಳೇವು ಮುಂತಾದ ಸಾಮಾನುಗಳನ್ನೂ, ಬೀಜವನ್ನೂ ಭೂಮಿಯ ಒಡೆಯನೇ ಪೂರೈಸಬೇಕಾಗುವದು; ಬೇರೆ ಕೆಲವು ಪ್ರಾಂತಗಳಲ್ಲಿ ಭೂಮಿಯ ಒಡೆಯನು ದನಗಳನ್ನೂ, ಬೀಜವನ್ನೂ ಪೂರೈಸುವನು; ಶ್ರಮಕರ್ತನು ಒಕ್ಕಲತನದ ಮುಟ್ಟುಗಳನ್ನು ಪೂರೈಸುವನು. ಹಿಂದುಸ್ಥಾನದಲ್ಲಿ ಯಾವತ್ತು ಭೂಮಿಯು ಸರಕಾರದ್ದೆಂದು ಎಣಿಸಲ್ಪಡುತ್ತದೆ. ಸರಕಾರದವರು ಭೂಮಿಗಳನ್ನು ಅಳಿದು, ನೆಲದ ಯೋಗ್ಯತೆಯ ಪ್ರಕಾರ ಅವುಗಳಲ್ಲಿ ಪ್ರತಿಗಳನ್ನು ಹಚ್ಚಿ, ಸರಕಾರಕ್ಕೆ ಕೊಡ ತಕ್ಕ ತೆರಿಗೆಯನ್ನು ಗೊತ್ತು ಮಾಡುವರು; ಮತ್ತು ಭೂಮಿಗಳನ್ನು ಬೇರೆ ಬೇರೆ ರೈತರಿಗೆ ಮೂವತ್ತು ವರ್ಷದ ಕೌಲಿನಿಂದ ಕೊಡುವರು. ಈ ಪದ್ಧತಿಗೆ ರೈತವಾರಿ ಪದ್ಧತಿ ಎಂದು ಹೇಳುವರು. ಈ ಪ್ರಕಾರ ಸರಕಾರದಿಂದ ಭೂಮಿಗಳನ್ನು ಹಿಡಿದ ರೈತರಲ್ಲಿ ಅನೇಕರು ತಾವೇ ಬಂಡವಲ ಹಾಕಿ ಹೊಲದಲ್ಲಿ ದುಡಿಯುವರು. ಬೇರೆ ಕೆಲವರು ತಾವು ಹಿಡಿದ ಭೂಮಿಗಳನ್ನು ಮೇಲೆ ಹೇಳಿದ ಅನೇಕ ವಿಧಗಳಿಂದ

ಬೇರೆ ಜನರಿಗೆ ಗೇಣಿಗೆ ಕೊಡುವರು. ಈ ಗೇಣಿಯ ನಿರ್ಣಯವು ಕೆಲವು ಕಡೆಯಲ್ಲಿ ಮೇಲಾಟದಿಂದ ಆಗುತ್ತದೆ, ಬೇರೆ ಕೆಲವು ಕಡೆಯಲ್ಲಿ ಬೇರೆ ಬೇರೆ ಸಾಂಪ್ರದಾಯ ಗಳಂತೆ ಆಗುತ್ತದೆ. ಗೇಣಿಯು ಮೇಲಾಟದಿಂದ ನಿರ್ಣೈಸಲ್ಪಡುವ ಬಗೆಯನ್ನು ಹಿಂದೆ ವಿವರಿಸಿದ್ದೇವೆ. ಗೇಣಿಯ ನಿರ್ಣಯವು ಸಾಂಪ್ರದಾಯಾನುಸಾರವಾಗಿ ಆಗುವಲ್ಲಿ, ಮೇಲೆ ಹೇಳಿದ ಯುರೋಪ ಖಂಡದ ಕೆಲವು ದೇಶಗಳಲ್ಲಿ ನಡಿಯು ವಂಥ ಸಾಂಪ್ರದಾಯಗಳೇ ಇಲ್ಲಿಯೂ ನಡೆದು ಬಂದಿರುವವು. ಇವುಗಳಲ್ಲಿ ಕೋರು ಪಾಲು, ಎತ್ತಾಳುಪಾಲು, ಮೂಲಗೇಣಿ, ಚಾಲಗೇಣಿ, ಎಂಬಿವುಗಳು ಮುಖ್ಯವಾ ದವುಗಳು. ಈ ಪ್ರಕಾರ ಬೇರೆ ಬೇರೆ ಕಡೆಯಲ್ಲಿ ಬೇರೆ ಬೇರೆ ತರದ ಸಾಂಪ್ರದಾ ಯಗಳಿದ್ದು, ಅವುಗಳು ಯಾವ ನಿಯಮಗಳನ್ನೂ ಅನುಸರಿಸಿ ಇದ್ದಂತೆ ಕಾಣುವ ದಿಲ್ಲ. ಆದ್ದರಿಂದ, ಯಾವದೊಂದು ಭೂಮಿಯ ಹುಟ್ಟುವಳಿಯಲ್ಲಿ ಎಷ್ಟು ಪಾಲು ಭೂಮಿಯ ಒಡೆಯನಿಗೆ ಸಲ್ಲುವದು, ಅವನ ಒಕ್ಕಲಿಗೆ ಯಾವ ಭಾಗವು ಸಲ್ಲುವ ದು, ಎಂಬದರ ನಿರ್ಣಯವನ್ನು ಅರ್ಥಶಾಸ್ತ್ರವು ಹೇಳಲಾರದು. ಆದರೂ "ಮೆಟೇ ರ್‌ಸಿಸ್ಟಿಮ್" ಎಂಬ ಕೋರುಪಾಲಿನ ಪದ್ಧತಿಯಿಂದ ಗೇಣಿಯ ಮೇಲೆ ಆಗುವ ಪರಿಣಾಮವನ್ನು ಕುರಿತು ಇಲ್ಲಿ ವಿಚಾರಿಸುವದು ಉಪಯುಕ್ತವಾಗಿರುವದು.

**ಮೆಟೇರ್ ಪದ್ಧತಿಯಿಂದ ಗೇಣಿಯ ಮೇಲೆ ಆಗುವ ಪರಿಣಾಮವು.**—ಗೇಣಿಯ ನಿರ್ಣಯವು ಮೇಲಾಟದಿಂದ ಆಗದೆ ಸಾಂಪ್ರದಾಯಾನುಸಾರ ವಾಗಿ ಆಗುವಲ್ಲಿ, ಭೂಮಿಯ ಒಡೆಯರು ರಿಕ್ಯಾರ್ಡೋನ ನಿಯಮದಂತೆ ಬರುವ ಗೇಣಿಯ ಕೆಲ ಭಾಗವನ್ನು ಬಿಟ್ಟು ಬಿಡುವದು ಅಗತ್ಯವಾಗುತ್ತದೆ. ಉದಾಹರ ಣಾರ್ಥವಾಗಿ, ಟಸ್ಕನಿ ಪ್ರಾಂತದಲ್ಲಿ ಮೆಟೇರ್ ಪದ್ಧತಿಯಂತೆ ಬರುವ ಗೇಣಿಯು ಭೂಮಿಯ ಉತ್ಪಾದಕತ್ವವು ಹ್ಯಾಗಿದ್ದರೂ ಉತ್ಪನ್ನದ ½ ಪಾಲು ಬರುವದು. ಇನ್ನು, ಟಸ್ಕನಿ ಪ್ರಾಂತದಲ್ಲಿ ತೀರ ಕನಿಷ್ಠ ಪ್ರತಿಯ ಭೂಮಿಯ ಉತ್ಪನ್ನದ ½ನೇ ಪಾಲಿನಿಂದ ಒಕ್ಕಲಿನ ಶ್ರಮ ಬಂಡವಲಗಳಿಗೆ ಸರಿಯಾದ ಪ್ರತಿಫಲ ದೊರಿದರೆ, ಟಸ್ಕನಿಯೊಳಗಿನ ಅತ್ಯಂತ ಉತ್ಪಾದಕವಾದ ಭೂಮಿಯ ಉತ್ಪನ್ನದ ಮೂರನೇ ಪಾಲಿನಿಂದ ಒಕ್ಕಲುಗಳಿಗೆ ಅದೇ ದರದಿಂದ ಸಂಬಳವೂ ಲಾಭವೂ ಹುಟ್ಟುವದ ಲ್ಲದೆ, ಉಳತಾಯವಾಗುವದು. ಈ ಪದ್ಧತಿಯಿಂದ ಭೂಮಿಯ ವಿಶೇಷ ಉತ್ಪಾ ದಕತ್ವದ ಮೂಲಕವಾಗಿ ಉಂಟಾಗುವ ಲಾಭದಲ್ಲಿ, ಭೂಮಿಯ ಒಡೆಯನ ಸಂ ಗಡ ಅವನ ಒಕ್ಕಲಿಗೂ ಕೆಲ ಭಾಗ ದೊರಿಯುತ್ತದೆ. ಮೇಲಾಟದಿಂದ ಗೇಣಿಯ ನಿರ್ಣಯವಾಗುತ್ತಿದ್ದಲ್ಲಿ, ಒಕ್ಕಲಿಗೆ ಶ್ರಮದ ಸಂಬಳವೂ ವಾಡಿಕೆಯ ದರ ದಿಂದ ಲಾಭವೂ ಬಂದನಂತರ, ಮಿಕ್ಕಾವ ಉತ್ಪನ್ನವೆಲ್ಲ ಗೇಣಿಯ ರೂಪದಿಂದ

ಭೂಮಿಯ ಒಡೆಯನಿಗೆ ಹೋಗುತ್ತದೆ. ಆದ್ದರಿಂದ, ಈ ಮೇಲಾಟದ ಪದ್ಧತಿ ಇದ್ದಲ್ಲಿ ಒಕ್ಕಲುಗಳಿಗೆ ಅವರ ಹೊಲಗಳು ವಿಶೇಷ ಉತ್ಪಾದಕವಾಗುವದರಿಂದ ಶಾಶ್ವತವಾಗಿ ಏನು ಪ್ರಯೋಜನವಾಗುವದಿಲ್ಲ. ಮೆಟೇರ್ ಪದ್ಧತಿಯ ಪ್ರಕಾರ ಒಕ್ಕಲಿಗೆ ಈ ಹೆಚ್ಚಿನ ಉತ್ಪನ್ನದಲ್ಲಿ ಕೆಲ ಒಂದು ಭಾಗವು ದೊರಿಯುವದು. ಆ ಕಾರಣ, ಭೂಮಿಯು ಹೆಚ್ಚು ಉತ್ಪಾದಕವಾದ ಹಾಗೆ ತನಗೆ ಕಲ್ಯಾಣ ಉಂಟೆಂದು ಒಕ್ಕಲಿಗೆ ತಿಳಿದಿರುವದು. ಈ ಸಂಗತಿಯು ಮೂಲಕವಾಗಿ, ಒಕ್ಕಲಿಗೆ ತನ್ನ ಹೊಲವನ್ನು ಆದಷ್ಟು ಹೆಚ್ಚು ಬೆಳೆಯುಳ್ಳದ್ದಾಗಿ ಮಾಡುವದಕ್ಕೆ ಉತ್ಸಾಹ ಹುಟ್ಟುವದು. ಆ ಕಾರಣ ಮೆಟೇರ್ ಪದ್ಧತಿಯು ಒಂದು ವೇಳೆ ಭೂಮಿಯ ಒಡೆಯರಿಗೆ ಲುಕಸಾನವುಳ್ಳದ್ದಾದರೂ ಯಾವತ್ತು ಜನಸಮೂಹಕ್ಕೆ ಪ್ರಯೋಜನಕರವಾಗ ಬಹುದು. ಈ ಕೋರುಪಾಲಿನ ಪದ್ಧತಿಯಲ್ಲಿ ಅರ್ಥಶಾಸ್ತ್ರ ದೃಷ್ಟ್ಯಾ ಕಂಡು ಬರುವ ದೋಷವು ಯಾವದಂದರೆ, ಅದರಿಂದ ಹೊಲದಲ್ಲಿ ಶಾಶ್ವತವಾದ ಸುಧಾರಣೆಗಳನ್ನು ಮಾಡುವದಕ್ಕೆ ಬಂಡವಲ ಹಾಕುವದಕ್ಕೆ ಅಡ್ಡಿಯಾಗ ಬಹುದು. ಉದಾಹರಣಾರ್ಥವಾಗಿ ಕೋರಿಗೆ ಕೊಟ್ಟ ಹೊಲದೊಳಗಿಂದ ನೀರು ತೆಗಿಸ ಬೇಕಾಗುವದು, ಇಲ್ಲವೆ ಕಾಲಿವೆಯನ್ನು ಕಟ್ಟಿ ಹೊಲಕ್ಕೆ ನೀರು ಹಾಯಿಸ ಬೇಕಾಗುವದು. ಈ ಕೆಲಸಕ್ಕೆ ಅವಶ್ಯವಾದ ಬಂಡವಲವನ್ನು ತಾನು ಪೂರೈಸಿದರೆ ಹೊಲವು ಹೆಚ್ಚು ಉತ್ಪಾದಕವಾದೀತೆಂದು ಭೂಮಿಯ ಒಡೆಯನಿಗೆ ಗೊತ್ತಿದ್ದರೂ, ತಾನು ಬಂಡವಲ ಹಾಕಿದ್ದರಿಂದ ಆಗುವ ಹೆಚ್ಚಿನ ಉತ್ಪನ್ನದೊಳಗಿಂದ ತನಗೆ ಅರ್ಧ ಪಾಲು, ಇಲ್ಲವೆ ಬಹಳಾದರೆ ಎರಡು ಮೂರಾಂಶ ಪಾಲು ಮಾತ್ರ ಬರುವದೆಂತಲೂ ತಿಳಿದಿರುವದು. ಆ ಕಾರಣ, ಭೂಮಿಯ ಒಡೆಯರಿಗೆ ಭೂಮಿಯಲ್ಲಿ ಬಹಳ ಬಂಡವಲ ವೆಚ್ಚ ಮಾಡಲಿಕ್ಕೆ ಮನಸಾಗುವದಿಲ್ಲ, ಒಕ್ಕಲುಗಳಿಗೂ ಬಂಡವಲ ಹಾಕುವ ಮನಸಾಗುವದಿಲ್ಲ. ಆದರೆ, ಇಲ್ಲಿ ಲಕ್ಷ್ಯದಲ್ಲಿಡ ತಕ್ಕ ಮತ್ತೊಂದು ಸಂಗತಿ ಏನಂದರೆ, ಮೇಲಾಟದ ಪದ್ಧತಿಯಿಂದ ಗೇಣಿಯು ನಿರ್ಣಯವಾಗುವಲ್ಲಿ ಸಹ ಒಕ್ಕಲುಗಳಿಗೆ ಬಹಳ ವರ್ಷದ ಕೌಲು ಇದ್ದು, ಅವರು ವೆಚ್ಚ ಮಾಡಿದ ಬಂಡವಲ ಶ್ರಮಗಳಿಗೆ ಆ ಅವಧಿಯಲ್ಲಿ ಸಾಕಷ್ಟು ಪ್ರತಿಫಲ ದೊರಿಯುವದೆಂಬ ಭರವಸವಿದ್ದರೆ ಮಾತ್ರ ಅವರು ಹೊಲದ ಸುಧಾರಣೆಗಾಗಿ ಬಂಡವಲ ಹಾಕುವರು, ಇಲ್ಲದಿದ್ದರೆ ಹಾಕುವದಿಲ್ಲ.

**ಅಲ್‌ಸ್ಟರದಲ್ಲಿದ್ದ ಒಕ್ಕಲುಗಳ ಹಕ್ಕಿನ ಪದ್ಧತಿಯು.**— ಆಯರ್ಲಂಡದ ಕೆಲವು ಭಾಗಗಳಲ್ಲಿ, ವಿಶೇಷತಃ ಅಲ್‌ಸ್ಟರ ಎಂಬ ಪರಗಣೆಯಲ್ಲಿ, ಒಕ್ಕಲುಗಳು ಒಡೆ

ಯನಿಗೆ ಕೊಡುವ ಗೇಣಿಯಲ್ಲಿ "ಅಲ್‌ಸ್ಟರದ ಒಕ್ಕಲುಗಳ ಹಕ್ಕು" ಎಂಬ ಹೆಸರಿನ ಕೆಲವೊಂದು ರಕಮನ್ನು ಮುರಕೊಂಡು ಕೊಡುತ್ತಾರೆ. ಈ ಪದ್ಧತಿಯ ಪ್ರಕಾರ ಹೊಲದಿಂದ ಬಿಡಿಸಲ್ಪಟ್ಟ ಒಕ್ಕಲಿಗೆ, ಅವನಿಂದ ಹೊಲದಲ್ಲುಂಟಾಗಿದ್ದ ಅನುಕೂಲ್ಯಗಳಿಗಾಗಿಯೂ, ಅವನು ಮಾಡಿದ ಸುಧಾರಣೆಗಳಲ್ಲಿ ಆಗ್ಯೆ ಉಳಿದಿದ್ದ ಸುಧಾರಣೆಗಳಿಗಾಗಿಯೂ, ಹೊಸದಾಗಿ ಹೊಲ ಹಿಡಿಯುವ ಒಕ್ಕಲು ಕೆಲವೊಂದು ರಕಮನ್ನು ಕೊಡುತ್ತಾನೆ. ವಾಸ್ತವಿಕವಾಗಿ, ಹೊಲದಲ್ಲುಂಟಾಗಿದ್ದ ಅನುಕೂಲ್ಯಗಳ ಬಗ್ಗೆ ಕೊಟ್ಟ ರಕಮು ಅರ್ಥಶಾಸ್ತ್ರದೃಷ್ಟ್ಯಾ ಬರುವ ಗೇಣಿಯ ಭಾಗವಾಗಿರುವದು. ಈ ರಕಮನ್ನು ಹೊಸದಾಗಿ ಹೊಲ ಹಿಡಿಯುವ ಒಕ್ಕಲು ಕೊಡ ಬೇಕಾಗದಿದ್ದರೆ ಅವನು ಹೆಚ್ಚು ಗೇಣಿಯನ್ನು ಕೊಡ ಬೇಕಾಗುವದು. ಆದಕಾರಣ, ಈ ಪದ್ಧತಿಯಿಂದ ಅರ್ಥಶಾಸ್ತ್ರದೃಷ್ಟ್ಯಾ ಬರುವ ಗೇಣಿಯಲ್ಲಿ ಎರಡು ಭಾಗಗಳಾಗುತ್ತವೆ. ಅವುಗಳಲ್ಲಿ ಒಂದು ಭಾಗಕ್ಕೆ ಸರಿಯಾದ ಬಂಡವಲದ ರಕಮಿನ ಅಂದಾಜು ಮಾಡಿ, ಆ ರಕಮನ್ನು ಹೊಸದಾಗಿ ಹೊಲ ಹಿಡಿಯುವ ಒಕ್ಕಲು ಹೊಲವನ್ನು ಬಿಟ್ಟು ಹೋಗುವ ಒಕ್ಕಲಿಗೆ ಕೊಡುತ್ತಾನೆ; ಎರಡನೆ ಭಾಗವು ವಾಡಿಕೆಯ ಪ್ರಕಾರ ವರ್ಷವರ್ಷಕ್ಕೆ ಭೂಮಿಯ ಒಡೆಯನಿಗೆ ಕೊಡಲ್ಪಡುತ್ತದೆ. ಅರ್ಥಶಾಸ್ತ್ರದೃಷ್ಟ್ಯಾ ಈ ಪದ್ಧತಿಯಿಂದ ಉಂಟಾಗುವ ಪ್ರಯೋಜನವೇನಂದರೆ, ಈ ಪದ್ಧತಿಯಿಂದ ಒಕ್ಕಲಿಗೆ ಯಾವಾಗಲೂ ತಾನೇ ಹೊಲ ಮಾಡುವ ಹಕ್ಕು ಉಂಟೆಂದು ಸಿದ್ಧವಾಗುವ ಕಾರಣ, ಅವನಿಗೆ ವ್ಯಾವಹಾರಿಕ ರೀತಿಯಿಂದ ಹೊಲವು ಯಾವಾಗಲೂ ತನ್ನ ಕಡಿಗೇ ನಡಿಯುವದೆಂಬ ಭದ್ರತೆಯುಂಟಾಗುತ್ತದೆ. ಆದರೆ ಮತ್ತೊಂದು ಪಕ್ಷದಲ್ಲಿ, ಅರ್ಥಶಾಸ್ತ್ರದೃಷ್ಟ್ಯಾ ಈ ಪದ್ಧತಿಯು ಹಾನಿಕರವಾದದ್ದೆಂತಲೂ ಹೇಳುವದುಂಟು. ಯಾಕಂದರೆ, ಈ ಪದ್ಧತಿಯಿಂದ ಹೊಸದಾಗಿ ಹೊಲ ಹಿಡಿದ ಒಕ್ಕಲಿಗೆ ತನ್ನ ಹೊಲದಲ್ಲಿ ಹಾಕಲಿಕ್ಕೆ ಬಂಡವಲವು ಅವಶ್ಯವಾಗಿದ್ದ ಕಾಲಕ್ಕೇ ಅವನ ಬಂಡವಲವು ಕಡಿಮೆಯಾಗುತ್ತದೆ. ಆದರೆ ಈ ಆಕ್ಷೇಪಕ್ಕೆ ಹೇಳ ತಕ್ಕ ಉತ್ತರವೇನಂದರೆ, ಈ ಪದ್ಧತಿಯಿಂದ ಒಕ್ಕಲಿಗೆ ಉಂಟಾಗುವ ಭದ್ರತೆಯೇ ಇಲ್ಲದಿದ್ದರೆ, ಒಕ್ಕಲು ಮೂಲತಃ ತನ್ನ ಬಂಡವಲವನ್ನು ಹೊಲದಲ್ಲಿ ಹಾಕಲಿಕ್ಕೇ ಇಲ್ಲ. ಈ ಕಾರಣ ವ್ಯಾವಹಾರಿಕ ದೃಷ್ಟಿಯಿಂದ ತಿಳಿದು ನೋಡಲಾಗಿ, ಅಲ್‌ಸ್ಟರದೊಳಗಿನ ಒಕ್ಕಲತನದ ಹಕ್ಕಿನಿಂದ ಅತ್ಯಂತ ಹಿತಕರವಾದ ಪರಿಣಾಮವಾಗುವಂತೆ ತೋರುತ್ತದೆ. ಆಯರ್ಲಂಡದಲ್ಲಿ ಈ ಪದ್ಧತಿ ನಡಿಯುವ ಪ್ರದೇಶಗಳಿಗೂ, ಈ ಪದ್ಧತಿಯು ನಡಿಯದ ಪ್ರದೇಶಗಳಿಗೂ ತುಲನೆ ಮಾಡಿ ನೋಡಿದರೆ, ಈ ಪದ್ಧತಿಯು ನಡಿಯುವಂಥ ಪ್ರದೇಶಗಳು ಒಳ್ಳೇ ಊರ್ಜಿತ ಸ್ಥಿತಿಯಲ್ಲಿದ್ದಂತೆ ಕಂಡು ಬರುತ್ತದೆ. ಹಿಂದಕ್ಕೆ ಈ ಪದ್ಧ

ತಿಯು ಬಹಳ ಪ್ರಚಾರಗೊಂಡಿದ್ದರೂ ಅದಕ್ಕೆ ಕಾಯಿದೆಯ ಸಮ್ಮತಿಯು ದೊರಿದಿದ್ದಿಲ್ಲ. ಸನ್ ೧೮೭೦ನೇ ಇಸವಿಯ ಪೂರ್ವದಲ್ಲಿ ಆಯರ್ಲಂಡದಲ್ಲಿ ವಾಸ್ತವಿಕವಾಗಿ ಎರಡು ಕಾಯಿದೆಗಳು ನಡಿಯುತ್ತಿದ್ದವು: ಒಂದು ಸರಕಾರದ ಕಾಯಿದೆ, ಮತ್ತೊಂದು ಜನರ ರೂಢಿಗಳಿಗೂ ಸಾಂಪ್ರದಾಯಗಳಿಗೂ ಅನುಸರಿಸಿ ನಡಿಯುವ ಕಾಯಿದೆ. ಸನ್ ೧೮೭೦ನೇ ವರ್ಷದಲ್ಲಿ ಉಂಟಾದ ಆಯರಿಶ್ ಲ್ಯಾಂಡ ಆಕ್ಟಿನಿಂದ ಅಲ್‌ಸ್ಟರದಲ್ಲಿ ನಡಿಯುವ ಒಕ್ಕಲುಗಳ ಹಕ್ಕಿನ ಪದ್ಧತಿಗೆ ಸರಕಾರದ ಸಮ್ಮತಿ ದೊರಿದದ್ದರಿಂದ, ಮೇಲೆ ಹೇಳಿದ ಎರಡು ಪದ್ಧತಿಗಳೊಳಗಿದ್ದ ವೈಷಮ್ಯವು ಇಲ್ಲದ ಹಾಗಾಯಿತು. ಸನ್ ೧೮೮೧ನೇ ಇಸವಿಯಲ್ಲುಂಟಾದ "ಆಯರ್ಲಂಡದ ಭೂಮಿಯ ಆಕ್ಟು", ಮೊದಲಿನ ಕಾಯಿದೆಯ ಪುರವಣಿಯಾಗಿದೆ. ಸಾಧಾರಣವಾಗಿ ಇವೆರಡೂ ಕಾಯಿದೆಗಳಿಂದುಂಟಾದ ಪರಿಣಾಮವೇನಂದರೆ, ಈ ಕಾಯಿದೆಗಳಿಂದ ಒಕ್ಕಲುಗಳಿಗೂ ಒಡೆಯರಿಗೂ ಭೂಮಿಯಲ್ಲಿ ಒಡೆತನದ ಸ್ವಾಮಾನ್ಯ ಹಕ್ಕು ಉಂಟಾಯಿತು. ಅಥವಾ, ಒಂದು ವೇಳೆ ಒಡೆತನದ ಹೊಸ ಹಕ್ಕು ಉಂಟಾಗದೆ ಇದ್ದರೂ, ಮೊದಲಿನ ಹಕ್ಕೇ ಕಾಯಿದೆಯಿಂದ ಸ್ಥಾಪಿಸಲ್ಪಟ್ಟಿತೆಂದು ಹೇಳ ಬಹುದು. ಇಂಗ್ಲಂಡದಲ್ಲಿ ಹಿಂದಕ್ಕೆ ನಡಿಯುತ್ತಿದ್ದ "ಕಾಪಿಹೋಲ್ಡ್ ಟೆನ್ಯೂರ್" ಎಂಬ ಹೊಲಹಿಡಿಯುವ ಪದ್ಧತಿಯು ಈ ಬಗೆಯ ಒಡೆತನದ ಸಾಮಾನ್ಯ ಹಕ್ಕಿನ ಉದಾಹರಣವಾಗಿದೆ.

**ಆಯರ್ಲಂಡದಲ್ಲಿ ನಡಿಯುವ "ಕಾಟಿಯರ್" ಮತ್ತು "ಕೊನೇಕರ" ಎಂಬ ಹೊಲ ಹಿಡಿಯುವ ಪದ್ಧತಿಗಳು.**—ಹೊಲ ಹಿಡಿಯುವ "ಕಾಟಿಯರ್" ಎಂಬ ಪದ್ಧತಿಯನ್ನು ಈ ಪ್ರಕಾರ ವರ್ಣಿಸ ಬಹುದು:—ಆಯರ್ಲಂಡದಲ್ಲಿ ಜನಸಂಖ್ಯೆಯು ಮಿತಿಮೀರಿ ಬೆಳೆದದ್ದರಿಂದ ಒಕ್ಕಲುಗಳೊಳಗೆ ಮೇಲಾಟವು ಅತಿಶಯ ನಡೆದು, ಹೊಲಗಳ ಗೇಣಿಗಳು ಅರ್ಥಶಾಸ್ತ್ರದೃಷ್ಟ್ಯಾ ಬರ ತಕ್ಕ ಸಂಪೂರ್ಣ ಗೇಣಿಗಿಂತಲೂ ಏರುವವು. ಈ ಪ್ರಕಾರ ಮಿತಿಮೀರಿದ ಗೇಣಿಗೆ ಹೊಲಹಿಡಿಯುವ ಪದ್ಧತಿಗೆ ಕಾಟಿಯರ್ ಪದ್ಧತಿ ಎಂಬ ಹೆಸರು. ಈ ಪದ್ಧತಿಯ ಪ್ರಕಾರ ನಿರ್ಣೈಸಲ್ಪಟ್ಟ ಗೇಣಿಯು ಒಮ್ಮೊಮ್ಮೆ ಹೊಲದ ಎಲ್ಲಾ ಉತ್ಪನ್ನಕ್ಕಿಂತಲೂ ಹೆಚ್ಚಾಗಿರುವದು! ಆ ಕಾರಣ, ಈ ಗೇಣಿಯು ಪ್ರಾಯಶಃ ಎಂದಿಗೂ ಮುಟ್ಟದೆ, ಕೇವಲ ಹೆಸರಿಗೆ ಮಾತ್ರ ಗೇಣಿಯಾಗಿರುವದು. ಈ ಅತ್ಯಂತ ಲಜ್ಜಾಸ್ಪದವಾದ ಪದ್ಧತಿಯು ಪ್ರಚಾರದಲ್ಲಿರುವಾಗ, ಭೂಮಿಯ ಒಡೆಯನು ಹೊಲದ ಎಷ್ಟೇ ಉತ್ಪನ್ನವನ್ನು ಗೇಣಿಯಾಗಿ ತಕ್ಕೊಂಡು ಹೋದರೂ, ತಮ್ಮ ಹೊಟ್ಟೆಗೂ ತಮ್ಮ ಕುಟುಂಬದ ಹೊಟ್ಟೆಗೂ ಸಾಕಾಗುವಷ್ಟು ಬಟಾಟೆಗಳನ್ನು ಹ್ಯಾಗಾದರೂ ಬಿಟ್ಟು ಬಿಡಲಿ

ಕ್ಕೇ ಬೇಕು ಎಂದು ಒಕ್ಕಲುಗಳು ತಿಳಿದಿರುವರು. ಹೆಸರಿಗೆ ಮಾತ್ರ ಇದ್ದ ಎಲ್ಲ ಗೇಣಿಯನ್ನು ಕೊಡುವದಂತೂ ಅವರಿಂದ ಎಂದೂ ಆಗುವದಿಲ್ಲವಾದಕಾರಣ, ಅವರು ಯಾವಾಗಲೂ ಒಡೆಯನ ಸಾಲದೊಳಗೇ ಇರುವರು. ಒಕ್ಕಲುಗಳು ಶ್ರಮ ಪಟ್ಟು ಹೊಲದಲ್ಲಿ ಬೆಳಿಸಿದ ಉತ್ಪನ್ನವನ್ನೆಲ್ಲಾ ಭೂಮಿಯ ಒಡೆಯರು ಗೇಣಿಯ ಹಿಂದಿನ ಬಾಕಿಗಾಗಿ ತಕ್ಕೊಂಡು ಹೋಗುವರು. ಆ ಕಾರಣ, ಒಕ್ಕಲುಗಳಿಗೆ ಉತ್ಸಾಹಪೂರ್ವಕವಾಗಿ ಕೆಲಸ ಮಾಡುವದಕ್ಕೆ ಕಾರಣವೇ ಉಳಿಯುವದಿಲ್ಲ. ಇದಲ್ಲದೆ, ಭೂಮಿಯ ಒಡೆಯರು ತಮ್ಮನ್ನು ಉಪವಾಸ ಕೊಲ್ಲಲಾರರು, ತಮಗೂ ತಮ್ಮ ಮಕ್ಕಳುಮರಿಗಳಿಗೂ ಹೊಟ್ಟೆಗಂತೂ ಅವರು ಕೊಡಲಿಕ್ಕೇ ಬೇಕೆಂಬುವದು ಒಕ್ಕಲುಗಳಿಗೆ ಪೂರಾ ಗೊತ್ತಿದ್ದ ಕಾರಣ, ಇವರು ತಮ್ಮ ಕುಟುಂಬಗಳು ಬೆಳೆದರೆ ತಮ್ಮ ಉಪಜೀವನಕ್ಕೆ ಕಷ್ಟವಾಗುವದೆಂಬ ಅಂಜಿಕೆ ಹಿಡಿದು, ಲಗ್ನಗಳನ್ನು ಮಾಡುವದನ್ನು ಬಿಡುವದಕ್ಕೂ ಕಾರಣ ಉಳಿಯುವದಿಲ್ಲ. ಆದ್ದರಿಂದ ಅವರು ಬೇಕಾದ ಹಾಗೆ ಲಗ್ನಗಳನ್ನು ಮಾಡಿಕೊಂಡು ಕುಟುಂಬಗಳನ್ನು ಬೆಳಿಸುವರು. ಅರ್ಥಶಾಸ್ತ್ರದೃಷ್ಟಿಯಿಂದಲೂ, ಸಾಮಾಜಿಕದೃಷ್ಟಿಯಿಂದಲೂ, ನೀತಿಯ ಮಾರ್ಗದಿಂದಲೂ ವಿಚಾರಿಸಿದರೆ, ಆಯರ್ಲಂಡದಲ್ಲಿದ್ದ ಈ ಕಾಟಿಯರ್ ಪದ್ಧತಿಗಿಂತಲೂ ಕೆಟ್ಟ ಪರಿಣಾಮವುಳ್ಳ ಪದ್ಧತಿಯು ಶಿಕ್ಕಲಿಕ್ಕೇ ಇಲ್ಲ.

ಆಯರ್ಲಂಡದಲ್ಲಿ "ಕೊನೇಕರ್ ಟೆನ್ಯುಅರ್" ಎಂಬ ಹೊಲ ಹಿಡಿಯುವ ಮತ್ತೊಂದು ಪದ್ಧತಿಯುಂಟು. ಈ ಪದ್ಧತಿಯ ಪ್ರಕಾರ ಭೂಮಿಯ ಒಡೆಯನು ತನ್ನ ಭೂಮಿಯಲ್ಲಿ ದುಡಿಯುವ ಕೂಲಿಕಾರರಿಗೆ ಸಂಬಳಕ್ಕೆ ಬದಲಾಗಿ ಗೊಬ್ಬರ ಹಾಕಿದ ಒಂದು ಸಣ್ಣ ಭೂಮಿಯನ್ನು ಏನು ಗೇಣಿಯನ್ನು ತಕ್ಕೊಳ್ಳದೆ ಕೊಡುವನು. ಇಲ್ಲಿಗೆ, ಸ್ಪರ್ಧೆಯಿಂದ ನಿರ್ಣೈಸಲ್ಪಡುವ ಗೇಣಿಯ ಸ್ವರೂಪವನ್ನೂ, ಸಾಂಪ್ರದಾಯಾನುಸಾರವಾಗಿ ನಡಿಯುವಂಥ ಹೊಲ ಹಿಡಿಯುವ ಕೆಲ ಪದ್ಧತಿಗಳನ್ನೂ ವರ್ಣಿಸುವದು ಮುಗಿಯಿತು. ಮುಂದಿನ ಅಧ್ಯಾಯದಲ್ಲಿ, ಶ್ರಮದ ಸಂಬಳದ ವಿಷಯವು ವಿವೇಚಿಸಲ್ಪಡುವದು.

## ಮೊದಲನೆ ಅಧ್ಯಾಯದ ಮೇಲಿನ ಪ್ರಶ್ನೆಗಳು.

## ಭೂಮಿಯ ಗೇಣಿ.

೧. ಗೇಣಿ ಅಂದರೇನು? ಗೇಣಿಯು ಸ್ಪರ್ಧೆಯಿಂದ ನಿರ್ಣೈಸಲ್ಪಡುವದಂದರೇನು?

೨. ಭೂಮಿಯ ಒಡೆಯರು ತಮ್ಮ ಭೂಮಿಗೆ ಗೇಣಿಯನ್ನು ಬೇಡುವ ಕಾರಣವೇನು?

೩. ಗೇಣಿ ಬರುವ ಭೂಮಿಯಲ್ಲಿ ಯಾವಾಗಲೂ ಅವಶ್ಯವಾಗಿ ಇರತಕ್ಕ ಎರಡು ಗುಣಗಳು ಯಾವವು?

೪. ಯಾವದೊಂದು ಭೂಮಿಯ ಗೇಣಿಯು ಯಾತರಿಂದ ನಿರ್ಣೈಸಲ್ಪಡುವದು?

೫. "ಸಾಗುವಳಿಯ ಮೇರೆ" ಅಂದರೇನು?

೬. ಸಾಗುವಳಿಯ ಮೇರೆಯ ಉಚ್ಚನೀಚತ್ವಗಳನ್ನು ನಿರ್ಣೈಸುವಂಥ ಸಂಗತಿ ಯಾವದು?

೭. ಸಾಗುವಳಿಯ ಮೇರೆಯು, ಬೇಸಾಯದ ಹುಟ್ಟುವಳಿಗಳ ಕ್ರಯಗಳ ಮಾನದಿಂದ ಹೆಚ್ಚು ಕಡಿಮೆಯಾಗುವ ರೀತಿಯನ್ನು ಕುರಿತು ಒಂದು ದೃಷ್ಟಾಂತವನ್ನು ಕೊಡಿರಿ.

೮. ಬೇಸಾಯದ ಹುಟ್ಟುವಳಿಗಳ ಧಾರಣೆಯನ್ನು ನಿರ್ಣೈಸುವಂಥ ಸಂಗತಿಯು ಯಾವದು?

೯. ಸಾಗುವಳಿಯ ಮೇರೆಯು ಇಳಿಯುವದರಿಂದ ಗೇಣಿಯು ಏರುವ ಎರಡು ಮಾರ್ಗಗಳು ಯಾವವು?

೧೦. ರಿಕ್ಯಾರ್ಡೋ ಥೊರೆಯ ಗೇಣಿಯ ನಿಯಮದ ಸಾರವನ್ನು ಸ್ವಲ್ಪದರಲ್ಲಿ ಹೇಳಿರಿ.

೧೧. ಭೂಮಿಯ ಒಡೆಯರ ಹಿತಗಳೂ ಬೇರೆ ಯಾವತ್ತು ಜನಸಮೂಹದ ಹಿತಗಳೂ ಯಾವ ಅರ್ಥದಿಂದ ಒಂದಕ್ಕೊಂದು ವಿರುದ್ಧವಾಗಿರುವವು?

೧೨. ಭೂಮಿಯ ಒಡೆಯರು, ಒಕ್ಕಲಿಗರು, ಶ್ರಮಕರ್ತರು, ಈ ಮೂರು ವರ್ಗದವರ ಹಿತಗಳೂ ಯಾವ ವಿಧಗಳಿಂದ ಒಂದೇ ಆಗಿರುವವು.

೧೩. ಸಂಬಳವು ಇಳಿಯುವದರಿಂದ ಒಕ್ಕಲಿಗರಿಗೂ, ಭೂಮಿಯ ಒಡೆಯರಿಗೂ ಯಾವಾಗಲೂ ಪ್ರಯೋಜನವಾಗಲಾರದೆಂಬುವದನ್ನು ತೋರಿಸಿರಿ.

೧೪. ಜನಸಂಖ್ಯೆಯು ಬೆಳೆಯುವದರಿಂದ ಆಸ್ಟ್ರೇಲಿಯದಂಥ ದೇಶದ ಬೆಳವಣಿಗೆಯ ಮೇಲೆ ಉಂಟಾಗುವ ಪರಿಣಾಮವೇನು?

೧೫. ಜನಸಂಖ್ಯೆಯು ಬೆಳೆಯುವದರ ಪರಿಣಾಮವು ಹಿಂದುಸ್ತಾನದಂಥ ದೇಶದ ಉತ್ಕರ್ಷದ ಮೇಲೆ ಹ್ಯಾಗಾಗುವದು?

೧೬. ಗೇಣಿಯು ಬೇಸಾಯದ ಹುಟ್ಟುವಳಿಯ ಕ್ರಯದ ಭಾಗವಲ್ಲವೆಂಬುವದನ್ನು ಸಿದ್ಧ ಮಾಡಿರಿ.

೧೭. ಗೇಣಿಯು ಯಾವಾಗಲೂ ಮೇಲಾಟದಿಂದಲೇ ಗೊತ್ತಾಗುವದೋ?

೧೮. ಹೊಲ ಹಿಡಿಯುವ "ಮೆಟೇರ್ ಪದ್ಧತಿಯನ್ನು" ವರ್ಣಿಸಿರಿ.

೧೯. ಗೇಣಿಯು ಸ್ಪರ್ಧೆಯಿಂದ ನಿರ್ಣೈಸಲ್ಪಟ್ಟರೆ ಭೂಮಿಯ ಒಡೆಯನಿಗೆ ದೊರಿಯುವಷ್ಟೇ ಉತ್ಪನ್ನದ ಭಾಗವು, ಕೋರುಪಾಲಿನ ಪದ್ಧತಿಯಿಂದ ದೊರಿಯುವದೋ?

೨೦. ಕೋರುಪಾಲಿನ ಪದ್ಧತಿಯಿಂದುಂಟಾಗುವ ಕೆಲ ಪ್ರಯೋಜನಗಳನ್ನೂ ಹಾನಿಗಳನ್ನೂ ವರ್ಣಿಸಿರಿ.

೨೧. ಅಲ್‌ಸ್ಟರದಲ್ಲಿ ನಡಿಯುವ ಒಕ್ಕಲತನದ ಪದ್ಧತಿಯನ್ನು ವರ್ಣಿಸಿರಿ. ಅದರಿಂದ ಉಂಟಾಗುವ ಒಳಿತು ಹೀನಗಳು ಯಾವವು?

೨೨. ಆಯರ್ಲಂಡದಲ್ಲಿ ನಡಿಯುವ "ಕಾಟಿಯರ್ ಟೆನ್ಯೂರ್" ಅಂದರೇನು?

೨೩. ಅದರಿಂದ ಆಗುವ ಹಾನಿಗಳನ್ನು ವರ್ಣಿಸಿರಿ.

೨೪. "ಕೊನೇಕರ್ ಪದ್ಧತಿ" ಅಂದರೇನು?

೧. ಒಬ್ಬ ಒಕ್ಕಲು ತನ್ನ ಹೊಲಕ್ಕೆ ಅರ್ಥಶಾಸ್ತ್ರದೃಷ್ಟ್ಯಾ ಬರತಕ್ಕ ಯಾವತ್ತು ಗೇಣಿಯನ್ನು ತೆರುತ್ತಾನೆ. ಇದರಿಂದ ಭೂಮಿಯು ಫಲವತ್ತಾಗಿದ್ದರೆ, ಇಲ್ಲವೆ ನಿಃಸಾರವಾಗಿದ್ದರೆ ಅವನಿಗೇನಾದರು ಒಳಿತು ಹೀನ ಉಂಟೋ?

೨. ಇಂಗ್ಲಂಡದ ಭೂಮಿಗೆ ಚಚ್ಚೌಕು ೧೦೦ ಮೈಲು ಫಲವತ್ತಾದ ಭೂಮಿಯನ್ನು ಕೂಡಿಸುವದಕ್ಕೆ ಬಂದರೆ, ಅದರಿಂದ ಬೇಸಾಯದ ಹುಟ್ಟುವಳಿಯ ಧಾರಣೆಯಲ್ಲಿ ಏನು ಹೆಚ್ಚುಕಡಿಮೆಯಾಗುವದು?

೩. ಈ ಹೆಚ್ಚುಕಡಿಮೆಯು ಸ್ಥಿರವಾಗಿ ನಿಲ್ಲುವದೋ?

೪. ನಿಮ್ಮ ಮನಸ್ಸಿನಲ್ಲಿ ಒಕ್ಕಲತನ ಮಾಡುವದಿದ್ದರೆ, ಮೇಲಾಟದಿಂದ ಗೊತ್ತಾಗುವ ಗೇಣಿಯನ್ನು ಕೊಟ್ಟು ಭೂಮಿಯನ್ನು ಹಿಡಿಯುವಿರೋ? ಅಥವಾ ಕೋರಿನಿಂದ ಭೂಮಿಯನ್ನು ಹಿಡಿಯುವಿರೋ?

೫. ಹಿಂದುಸ್ತಾನದೊಳಗಿನ ಯಾವತ್ತು ಭೂಮಿಯ ಒಡೆಯರು ತಮ್ಮ ಒಕ್ಕಲುಗಳು ಕೊಡುವ ಗೇಣಿಯನ್ನು ಬಿಟ್ಟು ಬಿಟ್ಟರೆ, ಕಾಳು ಅಗ್ಗವಾಗುವವೋ?

೬. ಯಾವತ್ತು ಒಕ್ಕಲಿಗರು ತಮ್ಮ ಗೇಣಿಯನ್ನು ಭೂಮಿಯ ಒಡೆಯನಿಗೆ ಕೊಡದೆ, ದೇಶದ ಸಾರ್ವಜನಿಕ ಖಜಾನೆಯಲ್ಲಿ ಇಟ್ಟರೆ, ಅದರಿಂದ ದೇಶದ ಸಾಮಾನ್ಯ ಸಂಪತ್ತಿನ ಮೇಲೆ ಏನು ಪರಿಣಾಮ ಉಂಟಾಗುವದು?

# ೨ನೇ ಅಧ್ಯಾಯ.

## ಶ್ರಮದ ಸಂಬಳ.

ಶ್ರಮಕ್ಕೆ ಪ್ರತಿಯಾಗಿ ಕೊಡಲ್ಪಡುವ ಸಂಪತ್ತಿನ ಭಾಗಕ್ಕೆ ಸಂಬಳ, ಅಥವಾ ಕೂಲಿ ಎಂಬ ಹೆಸರು. ಸಂಬಳವು ಬಂಡವಲದೊಳಗಿಂದ ಕೊಡಲ್ಪಡುವದೆಂಬ ಅಭಿಪ್ರಾಯಕ್ಕೆ ವಿರುದ್ಧವಾಗಿ ಹೆನ್ರಿ ಜಾರ್ಜ ಧೊರೆಯು ತೆಗೆದ ಆಕ್ಷೇಪಗಳು ಹಿಂದೆ ಉಲ್ಲೇಖಿಸಲ್ಪಟ್ಟವೆ. ಸಂಬಳ ಮತ್ತು ಲಾಭ, ಇವೆರಡೂ ಕಟ್ಟಕಡೆಗೆ ಹುಟ್ಟುವದು ಶ್ರಮ ಬಂಡವಲಗಳ ಸಂಯೋಗದಿಂದುಂಟಾದ ಉತ್ಪನ್ನದ ಬೆಲೆಯೊಳಗಿಂದಲೇ, ಎಂಬೀ ಮಾತು ಎಂದೂ ಮರೆಯ ತಕ್ಕದ್ದಲ್ಲ. ಹೀಗಿದ್ದಾಗ್ಯೂ ಸಾಂಪ್ರತದ ಲೋಕ ಸ್ಥಿತಿಯನ್ನು ಲಕ್ಷಿಸಿ ನೋಡಲಾಗಿ ತಿಳಿಯುವದೇನಂದರೆ, ಸರಕು ಮಾರಾಟಕ್ಕೆ ಸಿದ್ಧವಾಗುವ ವರೆಗೆ ಬಂಡವಲ ಹಾಕಿದ ಸಾವುಕಾರರಿಗೆ ಏನು ಉತ್ಪನ್ನವಾಗದಿದ್ದರೂ ಅವರು ತಡೆಯುವ ಹಾಗಿರುವರು, ಕೂಲಿಕಾರರು ತಡೆಯುವ ಹಾಗಿರುವದಿಲ್ಲ. ಆ ಕಾರಣ ಕಟ್ಟಕಡೆಯ ಉತ್ಪನ್ನದೊಳಗಿಂದ ಕೂಲಿಕಾರರ ಪಾಲಿಗೆ ಬರುವಂಥ ಅಂಶವನ್ನು ಸಾವುಕಾರರು ಅವರಿಗೆ ವಾರಕ್ಕೊಮ್ಮೆ ಸಂಬಳದ ರೂಪದಿಂದ ಮುಂಚಿತವಾಗಿಯೇ ಕೊಟ್ಟು ಬಿಡುವರು. ಈ ಅರ್ಥ

ದಂತೆ, ಸಂಬಳವು ಬಂಡವಲದೊಳಗಿಂದಲೇ ಕೊಡಲ್ಪಡುವದು, ಹಾಗೂ ಅದು ಸರಕು ಉತ್ಪನ್ನ ಮಾಡುವದಕ್ಕೆ ತಾಗುವ ಖರ್ಚಿನ ಭಾಗವಾಗಿರುವದು.

**ಸಂಬಳವು ಮೇಲಾಟದಿಂದ ನಿರ್ಣೈಸಲ್ಪಡುವ ಕ್ರಮವು.**— ಗೇಣಿಯಂತೆ ಸಂಬಳವಾದರೂ ಮೇಲಾಟದಿಂದ ನಿರ್ಣೈಸಲ್ಪಡುವದು, ಇಲ್ಲವೆ ಸಾಂಪ್ರದಾಯಾನುಸಾರವಾಗಿ ನಿರ್ಣೈಸಲ್ಪಡುವದು. ಆದರೆ ಸಂಬಳದ ನಿರ್ಣಯವು ಮೇಲಾಟದಿಂದ ಆಗುವದೇ ಬಹಳ. ಹ್ಯಾಗಂದರೆ, ಕೂಲಿಕಾರರು ತಮ್ಮ ಶ್ರಮಕ್ಕೆ ಆದಷ್ಟು ಹೆಚ್ಚು ಪ್ರತಿಫಲವನ್ನು ಸಂಪಾದಿಸುವದಕ್ಕೆ ಯತ್ನೈಸುವರು; ಮತ್ತು ಅವರನ್ನು ದುಡಿಸಿಕೊಳ್ಳುವ ಧನಿಯರು ಅವರ ಶ್ರಮವನ್ನು ಆದಷ್ಟು ಕಡಿಮೆ ಕ್ರಯಕ್ಕೆ ಕೊಳ್ಳಲೆತ್ನೈಸುವರು. ಈ ಸಾಮಾನ್ಯ ನಿಯಮಕ್ಕೆ ಕೆಲವು ಸಾರಿ ಅಪವಾದಗಳಾದರೂ ಕಂಡು ಬರುವದುಂಟು. ಎಷ್ಟೋ ಕೆಲಸಗಾರರು ತಮ್ಮನ್ನು ಬಹು ದಿವಸ ಇಟ್ಟುಕೊಂಡ ಯಜಮಾನರನ್ನು ಹೆಚ್ಚು ಸಂಬಳದ ಆಶೆಯಿಂದ ಬಿಟ್ಟು ಬಿಡುವದಿಲ್ಲ. ಮತ್ತು ಎಷ್ಟೋ ಸಾರಿ ಧನಿಯರಾದರೂ ಕೆಲಸಗಾರರಿಗೆ ಕೊಡುವ ಸಂಬಳವನ್ನು ಅಂಶತಃ ಧರ್ಮವೆಂದೆಣಿಸಿ ಕೊಡುವರು. ಹಾಗೂ ತಮ್ಮ ಕೆಲಸಕ್ಕೆ ಬೇರೆ ಆಳು ಹಚ್ಚಿದರೆ ಕಡಿಮೆ ಖರ್ಚು ಬೀಳುವ ಹಾಗಿದ್ದರೂ ಇದ್ದ ಆಳುಗಳನ್ನು ಬಿಡಿಸುವದಿಲ್ಲ. ಆದರೆ ಇಂಥ ಸಂಗತಿಗಳು ಕೇವಲ ಅಪವಾದಗಳಾಗಿರುವವೇ ಹೊರ್ತು ಸಾರ್ವತ್ರಿಕವಾಗಿರುವದಿಲ್ಲ. ಆ ಕಾರಣ ಇವು ಸಾಮಾನ್ಯ ನಿಯಮಗಳಿಗೆ ಒಳಪಡುವದಿಲ್ಲ. ದುಡಿಸಿಕೊಳ್ಳುವವರೂ, ದುಡಿಯುವವರೂ, ಶ್ರಮವೆಂಬ ಸರಕಿನ ಕ್ರಯವಿಕ್ರಯ ಮಾಡುವವರಾಗಿರುವರೆಂದು ಹೇಳ ಬಹುದು. ದುಡಿಸಿಕೊಳ್ಳುವವರು ಶ್ರಮವನ್ನು ಕೊಳ್ಳುವವರು; ದುಡಿಯುವವರು ಶ್ರಮವನ್ನು ಮಾರುವವರು. ದುಡಿಸಿಕೊಳ್ಳುವವರು ಶ್ರಮವನ್ನು ಆದಷ್ಟು ಅಗ್ಗವಾಗಿ ಕೊಳ್ಳುವ ಯತ್ನ ಮಾಡುವರು. ಆದರೆ ಅವರೊಳಗೆ ಮೇಲಾಟ ನಡಿಯುವದರಿಂದ ಸಂಬಳವು ಏರುವ ಕ್ರಮಕ್ಕೆ ಹತ್ತುವದು. ವ್ಯಾಪಾರಕ್ಕೆ ತೇಜ ಬಂದದ್ದರಿಂದ ಶ್ರಮದ ಬೇಡಿಕೆ ಹೆಚ್ಚಿತೆಂದು ಕಲ್ಪಿಸುವ. ಆಗ ದುಡಿಸಿಕೊಳ್ಳುವವರು ತಮ್ಮ ಕೂಲಿಕಾರರು ಬಿಟ್ಟು ಹೋಗುವದರಿಂದ ಆಗುವ ಲುಕಸಾನವನ್ನು ತಪ್ಪಿಸುವದಕ್ಕಾಗಿ, ತಮ್ಮ ಕೂಲಿಕಾರರ ಸಂಬಳವನ್ನು ಹೆಚ್ಚಿಸುವರು. ದುಡಿಯುವರಾದರೂ ತಮ್ಮ ಶ್ರಮಕ್ಕೆ ಆದಷ್ಟು ಹೆಚ್ಚು ಕ್ರಯ ಬರಬೇಕೆಂದು ಹವಣಿಸುವರು. ಆದರೆ ಅವರೊಳಗೂ ಮೇಲಾಟ ನಡಿಯುವ ಕಾರಣ, ಸಂಬಳವು ಇಳಿಯುವ ಕ್ರಮ ಹಿಡಿಯುವದು. ಒಬ್ಬನಿಗೆ ಒಂದು ಆಳು ಬೇಕಾಗಿದ್ದು ಮೂರು ಮಂದಿ ಆಳುಗಳು ದುಡಿಯುವದಕ್ಕೆ ಸಿದ್ಧರಾಗಿ ಬಂದಿದ್ದಾರೆಂದು ಕಲ್ಪಿಸಿರಿ. ಮೂವ್ವರ

ದುಡತವೂ ಒಂದೇ ಸಮನಾಗಿದ್ದು, ಅವರೊಳಗೆ ಮೇಲಾಟವು ಅಪ್ರತಿಬಂಧವಾಗಿ ನಡಿದಳೆ; ಅವರೊಳಗೆ ಎಲ್ಲಕ್ಕೂ ಕಡಿಮೆ ಸಂಬಳಕ್ಕೆ ಒಪ್ಪಿಕೊಳ್ಳುವವನಿಗೆ ಕೆಲಸ ದೊರಿಯುವದು. ಇದಕ್ಕೆ ವಿಪರೀತವಾಗಿ ದುಡಿಯುವವನು ಒಬ್ಬನೇ ಇದ್ದು ಮೂವ್ವರು ಧನಿಯರು ಅವನನ್ನು ಕರೆಯ ಹತ್ತಿದರೆ, ಅವನು ಎಲ್ಲಕ್ಕೂ ಹೆಚ್ಚು ಸಂಬಳ ಕೊಡುವವನ ಕಡೆಗೆ ದುಡಿಯುವನು. ಆದರೆ ಇಲ್ಲಿ ನೆನಪಿನಲ್ಲಿಡ ತಕ್ಕ ಸಂಗತಿ ಏನಂದರೆ, ಯಾವದೊಂದು ದೇಶದೊಳಗಿನ ದುಡಿಯುವ ಜನರೆಲ್ಲರು ಭೇದಾಭೇದವಿಲ್ಲದೆ ಯಾವತ್ತೂ ಉದ್ಯೋಗಗಳಿಗಾಗಿ ಒಬ್ಬರ ಮೇಲೊಬ್ಬರು ಮೇಲಾಟ ನಡಿಸುವದಿಲ್ಲ. ಈ ಯಾವತ್ತೂ ಜನರೊಳಗೆ ಬೇರೆ ಬೇರೆ ಉದ್ಯೋಗಗಳ ಪ್ರಕಾರ ಅನೇಕ ಉಚ್ಚ ನೀಚ ವರ್ಗಗಳಿರುವವು. ಈ ವರ್ಗಗಳಲ್ಲಿ ಒಂದೊಂದು ವರ್ಗವನ್ನು ಪ್ರತ್ಯೇಕವಾಗಿ ವಿಚಾರಿಸಿ ನೋಡಲಾಗಿ, ಅದರಲ್ಲಿ ಮೇಲಾಟವು ಅವ್ಯಾಹತವಾಗಿ ನಡಿಯುವದು. ಆದರೆ ಬೇರೆ ಬೇರೆ ವರ್ಗಗಳ, ಅಥವಾ ಸಮುದಾಯಗಳ ನಡುವೆ, ಮೇಲಾಟವು ಎಷ್ಟು ಮಾತ್ರವೂ ನಡಿಯುವದಿಲ್ಲ. ಉದಾಹರಣಾರ್ಥವಾಗಿ, ದಿನಗೂಲಿ ಮಾಡುವ ತೀರ ಕಡಿಮೆ ತರದ ಶ್ರಮಕರ್ತರೊಳಗೂ ಶಿಲ್ಪಿಗರೊಳಗೂ ಮೇಲಾಟ ನಡಿಯುವದಿಲ್ಲ; ಹಾಗೂ ಶಿಲ್ಪಿಗರೊಳಗೂ, ಪ್ರತಿಷ್ಠಿತ ವೃತ್ತಿಗಳನ್ನು ಆಚರಿಸುವವರೊಳಗೂ ಸ್ಪರ್ಧೆ ನಡಿಯುವದಿಲ್ಲ. ಉದಾಹರಣಾರ್ಥವಾಗಿ, ಬಡಿಗನಿಗೆ ಅಗಸಾಲಿಗನ ಕಸಬು ಬರುವದಿಲ್ಲಾದ ಕಾರಣ, ಬಡಿಗರೊಳಗೂ ಅಗಸಾಲಿಗರೊಳಗೂ ಮೇಲಾಟ ನಡಿಯುವದಿಲ್ಲ. ಮತ್ತು ಅಗಸಾಲಿಗನಿಗೆ ವಕೀಲನ ಕೆಲಸವು ಬರುವದಿಲ್ಲಾದ್ದರಿಂದ, ಅಗಸಾಲಿಗರೊಳಗೂ ವಕೀಲರೊಳಗೂ ಮೇಲಾಟ ನಡಿಯುವದಿಲ್ಲ. ಆದರೆ ಬಡಿಗತನದಲ್ಲಿ ಬಡಿಗರೊಳಗೂ, ವಕೀಲಿಯಲ್ಲಿ ವಕೀಲರೊಳಗೂ, ಮೇಲಾಟವು ನಿರಂತರವಾಗಿ ನಡಿಯುವದು. ಈ ಪ್ರಕಾರ ಕೆಲಸಗಾರರ ಮೇಲಾಟವು ಮರ್ಯಾದಿತವಾಗುವದೊಂದು, ಬೇರೆ ಬೇರೆ ತರದ ಉದ್ಯೋಗಗಳಲ್ಲಿ ಸಂಬಳದ ದರಗಳು ಬೇರೆ ಬೇರೆಯಾಗುವದಕ್ಕೆ ಬಲವತ್ತರವಾದ ಕಾರಣವಾಗಿದೆ.

**ಸಂಬಳದ ರಕಮನ್ನು ನಿರ್ಣೈಸುವಂಥ ಸಂಗತಿಗಳು.**— ಮೇಲಿನ ಬರಹದ ಮೇಲಿಂದ ಕೆಲಸಗಾರರಿಗೆ ಹೆಚ್ಚು ಸಂಬಳ ದೊರಿಯುವ ಮಾರ್ಗವು ಯಾವದೆಂಬದು ಲಕ್ಷ್ಯದಲ್ಲಿ ಬಂದಿರ ಬಹುದು. ಸಂಬಳದ ದರವು, ದುಡಿಸಿಕೊಳ್ಳುವ ಧನಿಯರಿಗೆ ಬೇಕಾಗಿದ್ದ ಕೂಲಿಕಾರರ ಸಂಖ್ಯೆಗೂ, ದುಡಿಯಲಪೇಕ್ಷಿಸುವ ಕೂಲಿಕಾರರ ಸಂಖ್ಯೆಗೂ ಇರುವ ಪ್ರಮಾಣವನ್ನು ಅವಲಂಬಿಸಿರುವದು. ದುಡಿಸಿಕೊಳ್ಳುವವರಿಗೆ ಕೂಲಿಕಾರರು ಹೆಚ್ಚು, ಅಥವಾ ಕಡಿಮೆ ಬೇಕಾಗುವದು ಅವರ

ಹತ್ತರ ಕೂಲಿಯಾಗಿ ಕೊಡುವದಕ್ಕೆ ಇದ್ದ ಬಂಡವಲದ ಮೇಲೆ ಅವಲಂಬಿಸಿರುವದು. ಯಾಕಂದರೆ, ಶ್ರಮಕರ್ತರಿಗೆ ದೊರಿಯುವ ಸಂಬಳವು ಬಂಡವಲದೊಳಗಿಂದಲೇ ಮುಟ್ಟುವದೆಂದು ಹಿಂದಿನ ಅಧ್ಯಾಯಗಳಲ್ಲಿ ಸಿದ್ಧ ಮಾಡಿದೆ. ಆದ್ದರಿಂದ ಸಂಬಳದ ದರವು, ಸಂಬಳವಾಗಿ ಕೊಡಲ್ಪಡುವ ಬಂಡವಲದ ಭಾಗಕ್ಕೂ ದುಡಿಯುವ ಅಪೇಕ್ಷೆಯುಳ್ಳ ಜನರ ಸಂಖ್ಯೆಗೂ ಇರುವ ಪ್ರಮಾಣದ ಮೇರೆಗೆ ನಿರ್ಣೈಸಲ್ಪಡುವದೆಂಬದು ಸ್ಪಷ್ಟವಾದದ್ದು. ಸಂಬಳವಾಗಿ ಕೊಡಲ್ಪಡುವ ಬಂಡವಲದ ಭಾಗಕ್ಕೆ ಅರ್ಥಶಾಸ್ತ್ರಜ್ಞರು "ಸಂಬಳದ ಮೊಬಲಗು", ಅಥವಾ "ಸಂಬಳದ ಬಂಡವಲ" ಎಂಬ ಹೆಸರು ಕೊಟ್ಟಿರುವರು. ದುಡಿಯುವ ಜನರ ಸಂಖ್ಯೆ ಇದ್ದಷ್ಟೇ ಇದ್ದರೆ, ಸಂಬಳದ ಮೊಬಲಗು ವೃದ್ಧಿಯಾದ ಹೊರ್ತು ಸಂಬಳದ ದರವು ಏರಲಾರದು. ಮತ್ತು ಸಂಬಳದ ಮೊಬಲಗು ಹೆಚ್ಚದೆ, ದುಡಿಯುವ ಜನರ ಸಂಖ್ಯೆ ಮಾತ್ರ ಹೆಚ್ಚಿದರೆ, ಸಂಬಳದ ದರವು ಇಳಿಯುವದು. ಹಾಗೂ ದುಡಿಯುವ ಜನರ ಸಂಖ್ಯೆ ಬೆಳೆದ ಪ್ರಮಾಣದಿಂದಲೇ ಸಂಬಳದ ಮೊಬಲಗೂ ಬೆಳೆದದ್ದಾದರೆ, ಸಂಬಳಗಳು ಏರಲಿಕ್ಕೂ ಇಲ್ಲ, ಇಳಿಯಲಿಕ್ಕೂ ಇಲ್ಲ. ದೇಶದೊಳಗಿನ ಸಂಬಳದ ಮೊಬಲಗು, ದೇಶದೊಳಗಿನ ಉದ್ಯೋಗಗಳ ಸ್ವರೂಪವನ್ನನುಸರಿಸಿ ಹೆಚ್ಚು ಕಡಿಮೆಯಾಗುವದು. ಕೆಲವು ಉದ್ಯೋಗಗಳಲ್ಲಿ ಬೇರೆ ಉದ್ಯೋಗಗಳಿಗಿಂತಲೂ ಒಟ್ಟು ಬಂಡವಲದೊಳಗಿನ ಹೆಚ್ಚು ಭಾಗವನ್ನು ಸಂಬಳವಾಗಿ ಕೊಡ ಬೇಕಾಗುವದು. ಅಂದರೆ, ಕೆಲವು ಉದ್ಯೋಗಗಳಲ್ಲಿ ಬೇರೆ ಉದ್ಯೋಗಗಳಿಗಿಂತಲೂ ಕೂಲಿಕಾರರು ಮಾಡುವ ಕೆಲಸವು ಹೆಚ್ಚಾಗಿರುವದು. ಉದಾಹರಣಾರ್ಥವಾಗಿ, ಕಾಳು ಬೆಳೆಯುವ ಹೊಲ ಮಾಡುವ ಒಕ್ಕಲಿಗನ ಯಾವತ್ತು ಬಂಡವಲದಲ್ಲಿ "ಸಂಬಳದ ಮೊಬಲಗಿ"ನ ಭಾಗವು, ಹೈನ ಮುಂತಾದ್ದನ್ನು ಮಾಡಿ ಮಾರುವ ಒಕ್ಕಲಿಗನ "ಸಂಬಳದ ಮೊಬಲಗಿ"ಗಿಂತಲೂ ಹೆಚ್ಚು ಪ್ರಮಾಣದಿಂದ ಇರುವದು. ಯಾಕಂದರೆ, ಕಾಳು ಬೆಳೆಯುವ ಭೂಮಿಯಲ್ಲಿ ಬೇರೆ ಭೂಮಿಗಿಂತಲೂ ಕೂಲಿಕಾರರ ದುಡತವು ಹೆಚ್ಚು ಬೇಕಾಗುವದು. ಈ ಪ್ರಕಾರ, ಯಾವದೊಂದು ದೇಶದೊಳಗಿನ "ಸಂಬಳದ ಮೊಬಲಗು" ಆ ದೇಶದೊಳಗಿನ ಉದ್ಯೋಗಗಳ ಸ್ವರೂಪವನ್ನವಲಂಬಿಸಿರುವ ಕಾರಣ, ಹಾಗೂ ಸಂಬಳದ ದರವು ದೇಶದೊಳಗಿನ ಸಂಬಳದ ಮೊಬಲಗಿಗೂ ದುಡಿಯುವ ಜನರ ಸಂಖ್ಯೆಗೂ ಇರುವ ಪ್ರಮಾಣವನ್ನವಲಂಬಿಸಿರುವ ಕಾರಣ, ದೇಶದೊಳಗಿನ ಉದ್ಯೋಗಗಳ ಸ್ವರೂಪವು ನಾಲ್ಕೂ ಕಡೆಯಲ್ಲಿ ಬದಲಿಸುವದರಿಂದ ಕೂಲಿಕಾರರಿಗೆ ಕೆಲವು ಕಾಲ ಹಾನಿಯಾಗುವದು. ಉದಾಹರಣಾರ್ಥವಾಗಿ, ಈಗ ನಡಿಯುವ ಶತಮಾನದಲ್ಲಿ ಇಂಗ್ಲಂಡದ ಶಿಲ್ಪಗಳಲ್ಲಿ

ಉಗಿಯಂತ್ರಗಳನ್ನು ಉಪಯೋಗಿಸಿದ್ದರಿಂದ, ಕೂಲಿಯಿಂದ ಉಪಜೀವಿಸುವ ಜನರಿಗೆ ಈ ಬಗೆಯ ಹಾನಿಯಾಯಿತು. ಯಾಕಂದರೆ, ಉಗಿಯಂತ್ರಗಳನ್ನು ಉಪಯೋಗಿಸಿದ್ದರಿಂದ "ಸಂಬಳದ ಬಂಡವಲ"ದ ಎಷ್ಟೋ ಭಾಗವು ಯಂತ್ರಗಳ ರೂಪದಿಂದ ಸ್ಥಿರಬಂಡವಲದ ಕಡೆಗೆ ಶೇರಿತು. ಆದರೆ ಈ ಹಾನಿಯನ್ನು ಕೂಲಿಕಾರರು ಬಹಳ ದಿವಸ ಸಹಿಸ ಬೇಕಾಗಲಿಲ್ಲ. ಯಾಕಂದರೆ, ಯಂತ್ರಗಳನ್ನು ಉಪಯೋಗಿಸಿದ್ದರಿಂದ ಹೊಸ ಸಂಪತ್ತು ಅದ್ಭುತವಾಗಿ ಬೆಳೆಯಲಿಕ್ಕೆ ಉತ್ತೇಜನ ದೊರಿದ ಕಾರಣ, ಸ್ವಲ್ಪಕಾಲದಲ್ಲಿ ಹೊಸ ಸಂಪತ್ತು ಬಹಳ ಉತ್ಪನ್ನವಾಯಿತು. ಹಾಗೂ ಸಾವುಕಾರರಿಗೆ ಈ ಹೊಸ ಸಂಪತ್ತನ್ನು ಉತ್ಪಾದಕ ಕೆಲಸಗಳಲ್ಲಿ ಬಂಡವಲವಾಗಿ ಹಾಕುವ ಅಪೇಕ್ಷೆಯುಂಟಾಯಿತು. ಈ ಪ್ರಕಾರ ಹೊಸ ಕೆಲಸಗಳು ನಡಿಯ ಹತ್ತಿದ್ದರಿಂದ ಶ್ರಮಕ್ಕೆ ಹೊಸ ಬೇಡಿಕೆಯುಂಟಾಗಿ, ಕಟ್ಟಕಡೆಗೆ ಸಂಬಳವಾಗಿ ಕೊಡುವದಕ್ಕೆ ಉಪಯೋಗಿಸಲ್ಪಡುವ ಬಂಡವಲದ ಪರಿಮಿತಿಯು ಕಡಿಮೆಯಾಗುವದಕ್ಕೆ ಬದಲಾಗಿ ಬಹಳ ಬೆಳೆಯಿತು. ಇದಲ್ಲದೆ, ಯಂತ್ರಗಳ ಉಪಯೋಗದಿಂದ ಸರಕುಗಳನ್ನು ಕೊಳ್ಳುವ ಯಾವತ್ತು ಜನಸಮೂಹಕ್ಕೆ ಆದ ಹಿತವು, ಅವರ ಕೂಡ ಕೂಲಿಕಾರರಿಗೂ ಉಂಟಾಯಿತು. ಯಾಕಂದರೆ, ಕೂಲಿಕಾರರು ಕೊಳ್ಳುವ ಪದಾರ್ಥಗಳಲ್ಲಿ ಮಾಂಸ ಮತ್ತು ಹೈನವು ಹೊರ್ತಾಗಿ, ಬಹುತರ ಬೇರೆ ಯಾವತ್ತು ಪದಾರ್ಥಗಳು ಅಗ್ಗವಾದವು. ಆದರೆ, ಕೆಲವು ಸಾರಿ ಇದಕ್ಕೆ ವಿರುದ್ಧವಾಗಿ ಪ್ರತಿಪಕ್ಷಿಗಳು ವಾದಿಸುವದೇನಂದರೆ, ಸಂಬಳದ ದರವು "ಸಂಬಳದ ಬಂಡವಲಕ್ಕೂ" ದುಡಿಯುವ ಜನರ ಸಂಖ್ಯೆಗೂ ಇರುವ ಪ್ರಮಾಣದಿಂದ ನಿರ್ಣೈಸುವದಾದರೆ, "ಉದ್ಯೋಗಸಮಾಜಗಳ" ಬಗೆಯ ಸಮಾಜಗಳಿಂದ ಸಂಬಳದ ಮೇಲೆ ಏನು ಕಾರ್ಯ ನಡಿಯದೆ, ಅವು ಕೇವಲ ನಿಷ್ಪ್ರಯೋಜನವುಳ್ಳವಾಗುವವು. ಆದರೆ ವಾಸ್ತವ ಸ್ಥಿತಿಯು ಇದಕ್ಕೆ ವಿಪರೀತವಾಗಿರುವದು. ಯಾಕಂದರೆ, ಉದ್ಯೋಗಸಮಾಜಗಳ ವ್ಯವಸ್ಥಾಪಕರು ತಮ್ಮ ಸಭಿಕರು ದುಡಿಯುವ ಉದ್ಯೋಗದ ಸರ್ವಸಾಧಾರಣ ಸ್ಥಿತಿಯನ್ನು ಯಾವಾಗಲೂ ಲಕ್ಷ್ಯಪೂರ್ವಕವಾಗಿ ನೋಡುತ್ತಿರುವರು. ಆದ್ದರಿಂದ, ಆ ಉದ್ಯೋಗದ ಸ್ಥಿತಿಯನ್ನು ನೋಡಲಾಗಿ ಅದರೊಳಗಿನ ಕೂಲಿಕಾರರ ಸಂಬಳದ ದರವು ಏರ ಬೇಕೋ, ಅಥವಾ ಕಡಿಮೆಯಾಗಬೇಕೋ, ಎಂಬುವದು ಅವರ ಲಕ್ಷ್ಯದಲ್ಲಿ ಚನ್ನಾಗಿ ಬರುವದು. ಉದಾಹರಣಾರ್ಥವಾಗಿ, ಸನ್ ೧೮೭೨ನೇ ವರ್ಷ ಕಲ್ಲಿದ್ದಲಿಯ ವ್ಯಾಪಾರದಲ್ಲಿ ವರ್ತಿಸಿದ ಪ್ರಕಾರ, ಯಾವದಾದರೊಂದು ಉದ್ಯೋಗದಲ್ಲಿ ಹುಟ್ಟುವಂಥ ಸರಕಿನ ಧಾರಣೆಯು ಮಾತ್ರ ಏರಿ, ಆ ಮಾನದಿಂದ ಉತ್ಪನ್ನ ಮಾಡುವ ಖರ್ಚು ಹೆಚ್ಚಾಗದೆ ಇದ್ದರೆ, ತಮ್ಮ ಸಮಾ

ಒಕ್ಕೆ ಸೇರಿದ ಕೆಲಸಗಾರರಿಗೆ ಹೆಚ್ಚು ಸಂಬಳ ದೊರಿಯ ತಕ್ಕದ್ದೆಂದು ಸಮಾಜದವರಿಗೆ ತಿಳಿಯುವದು. ಹಾಗೂ ಅವರು ತಮ್ಮ ಒಕ್ಕಟ್ಟಿನ ಬಲದಿಂದ ತಮ್ಮ ಕೆಲಸಗಾರರ ಸಂಬಳವನ್ನು ನಿಶ್ಚಯವಾಗಿ ಬೇಗನೆ ಹೆಚ್ಚಿಸಿಕೊಳ್ಳುವರು. ಅದೇ, ಇಂಥ ಸಮಾಜದ ಸಹಾಯವಿಲ್ಲದಿದ್ದರೆ, ವ್ಯಾಪಾರಸ್ಥರಿಗೆ ಉಂಟಾದ ಹೆಚ್ಚಿನ ಲಾಭದಿಂದ ಶ್ರಮದ ಬೇಡಿಕೆಯು ತನ್ನ ಸ್ವಾಭಾವಿಕ ರೀತಿಯಿಂದ ಬೆಳೆದು, ಅನಂತರದಲ್ಲಿ ಸಂಬಳ ಬೆಳೆಯುವ ಕಾಲದ ವರೆಗೆ ಕೆಲಸಗಾರರು ಹಾದೀ ನೋಡ ಬೇಕಾಗುವದು. ಉದ್ಯೋಗಸಮಾಜಗಳಿಂದ ಸಂಬಳದ ಮೇಲೆ ನಡಿಯುವ ಕಾರ್ಯವು ಮುಂದೆ ಒಂದು ಅಧ್ಯಾಯದಲ್ಲಿ ಇದಕ್ಕೂ ವಿಶೇಷವಾಗಿ ವಿವರಿಸಲ್ಪಡುವದು.

**ಜನಸಂಖ್ಯೆಯಿಂದ ಸಂಬಳದ ಮೇಲೆ ಆಗುವ ಪರಿಣಾಮವು.** ಯಾವ ದೇಶದಲ್ಲೇ ಆಗಲಿ, ಸಂಬಳದ ಮೊಬಲಗು ಎಷ್ಟು ಬೆಳೆದಾಗ್ಯಾದರೂ ದುಡಿಯುವವರ ಸಂಖ್ಯೆ ಅದಕ್ಕೂ ಹೆಚ್ಚು ಪ್ರಮಾಣದಿಂದ ಬೆಳೆಯುತ್ತಾ ನಡೆದರೆ, ಈ ಬೆಳೆದ ಬಂಡವಲದಿಂದ ಬಡವರಿಗೆ ಏನೇನು ಪ್ರಯೋಜನವಾಗುವದಿಲ್ಲ. ಇಂಗ್ಲಂಡದಲ್ಲಿ ಕಳೆದ ೪೦, ೫೦ ವರ್ಷಗಳಲ್ಲಿ ಕೂಲಿಯಿಂದ ಉಪಜೀವಿಸುವ ಬಡ ಜನರ ಸ್ಥಿತಿಯನ್ನು ಸುಧಾರಿಸ ಬೇಕೆಂದು ಮಾಡಿದ ಯತ್ನಗಳಿಗೆ, ಇದೇ ದೊಡ್ಡ ಪ್ರತಿಬಂಧ ಉಂಟಾಗಿದೆ. ಇಂಗ್ಲಂಡದಲ್ಲಿ ಇತ್ತಲಾಗಿ ವ್ಯಾಪಾರ ಉದ್ಯೋಗಗಳು ಅದ್ಭುತವಾಗಿ ಬೆಳೆದದ್ದರಿಂದ ಸಂಬಳದ ಮೊಬಲಗು ಬಹಳ ಬೆಳೆದರೂ, ಅಷ್ಟೇ ಪ್ರಮಾಣದಿಂದ ಕೂಲಿ ಮಾಡುವ ಜನರ ಸಂಖ್ಯೆಯೂ ಬಹುತರವಾಗಿ ತಪ್ಪದೆ ಬೆಳೆದಿರುವದು. ಇಂಗ್ಲಂಡಕ್ಕೆ ಹೊರಗಿಂದ ಬರುವ ಧಾನ್ಯಗಳ ಮೇಲೆ ಕಪ್ಪಗಳನ್ನು ಕೂಡ್ರಿಸಿದ ಕಾಯಿದೆಗಳನ್ನು ನಿಲ್ಲಿಸ ಬೇಕೆಂದು ಹಿಂದಕ್ಕೆ ಬಹಳ ಯತ್ನಗಳನ್ನು ನಡಿಸಿದಂಥವರು ಆ ಕಾಯಿದೆಗಳು ನಿಲ್ಲಿಸಲ್ಪಟ್ಟಾಗ್ಗೆ ಭಾವಿಸಿದ್ದೇನಂದರೆ, "ಹೊರಗಿಂದ ಬರುವ ಧಾನ್ಯಗಳ ಮೇಲಿನ ಕಪ್ಪಗಳನ್ನು ತೆಗೆದನಂತರ ಬಡವರಿಗೆ ಕಾಳು ಅಗ್ಗವಾಗಿ ದೊರಿದು, ಅವರ ಉಪಜೀವನವು ಸ್ವಲ್ಪದರಲ್ಲಿ ಸಾಗುವದರಿಂದ, ಅವರ ಸ್ಥಿತಿಗತಿಯು ಒಳಿತಾಗಿ ಸುಧಾರಿಸುವದು. ಕಷ್ಟ ದಾರಿದ್ರ್ಯಗಳಿಗೆ ಇಂಗ್ಲಂಡದಲ್ಲಿ ಸ್ಥಳ ಸಿಕ್ಕದೆ ಗಡಿ ಬಿಟ್ಟು ಹೋಗುವವು. ಬಡವರಿಗೆ ಕೆಲಸ ಪೂರೈಸುವ ಸಲುವಾಗಿ ಕಟ್ಟಿದ ಗೃಹಗಳಿಗೆ ಯಾರೂ ದಿಕ್ಕಿಲ್ಲದೆ, ನಿಶ್ಚಯವಾಗಿ ಹಾಳು ಬೀಳುವವು." ಆದರೆ ಸಾಂಪ್ರತದ ಸ್ಥಿತಿಯನ್ನು ನೋಡಿದರೆ, ಈ ಭಾವನೆಗೆ ಕೇವಲ ವಿರುದ್ಧವಾದ ಪರಿಣಾಮಗಳೇ ದೃಷ್ಟಿಗೆ ಬೀಳುತ್ತವೆ. ಧಾನ್ಯದ ಕಟ್ಟಳೆಗಳನ್ನು ನಿಲ್ಲಿಸಿದ್ದರಿಂದ ಇಂಗ್ಲಂಡಕ್ಕೆ ಬಂದ ಅಗ್ಗವಾದ ಕೂಳಿನಿಂದ ಜನಸಂಖ್ಯೆಯು ಮಿತಿಮೀರಿ ಬೆಳೆಯುವದಕ್ಕೆ ಕಾರಣವಾಯಿತು. ಹೊಟ್ಟೆಯು ಸ್ವಲ್ಪ

ಖರ್ಚಿನಿಂದ ನಿರ್ವಿವಾದವಾಗಿ ಸಾಗ ಹತ್ತಿದ್ದರಿಂದ ಉಂಟಾಗ ತಕ್ಕ ಪ್ರಯೋಜನಗಳೆಲ್ಲ, ಹಸಿದು ಕಂಗಾಲಾದ ಸಾವಿರಾರು ಜನರ ಉದರನಿರ್ವಾಹವನ್ನು ಸಾಗಿಸುವದರಲ್ಲಿ ಅಡಗಿ ಹೋದವು. ಎಷ್ಟೋ ಕಾಲದ ವರೆಗೆ, ಧಾನ್ಯದ ಕಟ್ಟಳೆಗಳನ್ನು ನಿಲ್ಲಿಸಿ ಬಿಟ್ಟಿದ್ದರಿಂದ ಶ್ರಮಕರ್ತರ ಮೇಲೆ ಒಂದೇ ಪರಿಣಾಮವಾದದ್ದು ತೋರಿ ಬಂತು. ಅದೇನಂದರೆ, ಉಪಜೀವನದ ಪದಾರ್ಥಗಳು ಅಗ್ಗವಾದ್ದರಿಂದ ಕೂಲಿಕಾರರು ಹೆಚ್ಚು ಸೌಖ್ಯದಿಂದ ಇರುವದಕ್ಕೆ ಬದಲಾಗಿ ಹೆಚ್ಚು ಮಕ್ಕಳನ್ನು ಪೋಷಿಸುವ ಉದ್ಯೋಗಕ್ಕೆ ಹತ್ತಿದರು. ಈ ಸಂಗತಿಗಳಿಂದ ಸಿದ್ಧವಾಗುವದೇನಂದರೆ, ಕೂಲಿಯಿಂದ ಜೀವಿಸುವ ಜನರ ಸ್ಥಿತಿಗತಿಯು ಸುಧಾರಿಸಿದ ಮಾನದಿಂದ, ಈ ಸುಧಾರಣೆಯನ್ನು ನಾಶ ಪಡಿಸುವಂಥ ಪ್ರಜಾವೃದ್ಧಿಯನ್ನು ಪ್ರತಿಬಂಧಿಸುವ ಸಂಗತಿಗಳೂ ಉಂಟಾಗದಿದ್ದರೆ, ಅವರ ಸ್ಥಿತಿಗತಿಯಲ್ಲುಂಟಾದ ಸುಧಾರಣೆಯು ಸ್ಥಿರವಾಗಿ ನಿಲ್ಲದು.

**ಸೌಖ್ಯವುಳ್ಳ ಬಾಳಿವೆಯ ವಿಷಯದ ಜನರ ತಿಳುವಳಿಕೆಯನ್ನು ಉನ್ನತಿ ಪಡಿಸುವದರ ಮಹತ್ವವು.**—ಬಡ ಜನರೊಳಗೆ ಈಗ್ಗೆ ವಾಡಿಕೆಯಾಗಿರುವ ಬಾಳಿವೆಗಿಂತಲೂ ವಿಶೇಷ ಸೌಖ್ಯಕರವಾದ ಬಾಳಿವೆಯ ಅಭಿರುಚಿಯು ಹುಟ್ಟಿದರೆ, ಅದರಿಂದ ಮಿತಿಮೀರಿದ ಪ್ರಜಾವೃದ್ಧಿಗೆ ಉಂಟಾಗುವ ಅಡ್ಡಿಯಷ್ಟು, ಮತ್ತಾವ್ಯವದರಿಂದಲೂ ಆಗದು. ಬಡ ಜನರಿಗೆ ಈಗಿನದಕ್ಕಿಂತಲೂ ವಿಶೇಷ ಸೌಖ್ಯಕರವಾದ ನಿರ್ವಾಹದ ಅಭ್ಯಾಸವು ಬಿದ್ದರೆ, ಅದಕ್ಕೂ ಕಡಿಮೆ ಸೌಖ್ಯಕರವಾದ ರೀತಿಯಿಂದ ನಿರ್ವಾಹ ನಡಿಸುವ ಹೊತ್ತು ತಮಗೆ ಎಂದೂ ಬರ ಬಾರದೆಂದು ಅವರು ವಿಶ್ವಪ್ರಯತ್ನ ಮಾಡುವರು. ಈ ವಿಷಯವನ್ನು ಕುರಿತು ರಿಕ್ಯಾಡೋರ್ ಧೊರೆಯು ಹೇಳುವದೇನಂದರೆ:—"ಯಾವತ್ತು ದೇಶಗಳಲ್ಲಿ ಕೂಲಿಯಿಂದ ಉಪಜೀವಿಸುವ ವರ್ಗದ್ವವರಿಗೆ ಸುಖೋಪಭೋಗಗಳ ಅಭಿರುಚಿಯು ಹುಟ್ಟ ಬೇಕೆಂತಲೂ, ಮತ್ತು ಈ ಸುಖೋಪಭೋಗಗಳನ್ನು ಸಂಪಾದಿಸುವದಕ್ಕೆ ಅವರಿಗೆ ಯಾವತ್ತು ಯೋಗ್ಯ ಉಪಾಯಗಳಿಂದ ಉತ್ತೇಜನ ಕೊಡ ಬೇಕೆಂತಲೂ, ಮನುಷ್ಯಜಾತಿಯ ಸಾರ್ವತ್ರಿಕ ಉನ್ನತಿಯನ್ನು ಅಪೇಕ್ಷಿಸುವವರು ಎಂದಿಗೂ ಬಯಸದೆ ಇರರು. ಜನಸಂಖ್ಯೆಯು ಮಿತಿಮೀರಿ ಬೆಳೆಯುವದನ್ನು ಪ್ರತಿಬಂಧಿಸುವದಕ್ಕೆ ಇದರಂಥ ಮತ್ತೊಂದು ಸಾಧನವೇ ಇಲ್ಲ." ಇಂಗ್ಲಂಡದಲ್ಲಿ ಇತ್ತಲಾಗಿ ಒಕ್ಕಲತನ ಮಾಡುವ ಕೂಲಿಕಾರರೊಳಗೆ ಸೌಖ್ಯಕರವಾದ ನಿರ್ವಾಹದ ಪ್ರಮಾಣವು ಏರಿದ್ದು ಸ್ಪಷ್ಟವಾಗಿ ಕಾಣಿಸುವದರಿಂದಲೇ ಅವರ ಸ್ಥಿತಿಗತಿಯಲ್ಲಾದ ಸುಧಾರಣೆಯು ಕಡೆ ತನಕ ಬಾಳುವದೆಂಬ ನಂಬಿಕೆಯುಂಟಾಗ ಹತ್ತಿದೆ. ಈ ಜನರೊಳ

ಗಿನ ಹೊಸ ಸಂತತಿಯು ಹೊಸ ಉದ್ಯೋಗಗಳಲ್ಲಿ ಶೇರುವದಕ್ಕೂ, ಬೇರೆ ಪ್ರಾಂತಗಳಿಗೆ ಹೋಗುವದಕ್ಕೂ, ದೇಶಾಂತರಗಳಿಗೆ ಪ್ರಯಾಣ ಮಾಡುವದಕ್ಕೂ ಹಿಂದೆ ಮುಂದೆ ನೋಡುವದಿಲ್ಲ. ಇವರಿಗೆ ತಮ್ಮ ಪೂರ್ವಜರಂತೆ ಕಾಲಕ್ಷೇಪ ಮಾಡುವದು ಎಷ್ಟು ಮಾತ್ರವೂ ಸರಿ ಬೀಳುವದಿಲ್ಲ. ಇತ್ತಲಾಗಿ ಹತ್ತು ಹದಿನೈದು ವರ್ಷಗಳಲ್ಲಿ ಇಂಗ್ಲಂಡದ ಕೂಲಿಕಾರರೊಳಗೆ ಸೌಖ್ಯಕರವಾದ ಬಾಳಿವೆಯ ಪ್ರಮಾಣವು ಬೆಳೆಯುವದಕ್ಕೆ ಅನೇಕ ಸಂಗತಿಗಳು ಕಾರಣವಾಗಿವೆ. ಈ ಕಾರಣಗಳಲ್ಲಿ ಸನ್ ೧೮೭೦ನೇ ವರ್ಷದಲ್ಲುಂಟಾದ "ವಿದ್ಯಾಸಂಬಂಧದ ಕಾಯಿದೆಯು" ಮುಖ್ಯವಾದದ್ದಾಗಿ ತೋರುತ್ತದೆ. ಜನರು ವಿದ್ಯಾವಂತರಾದ ಹಾಗೆ ಅವರು ಜನಸಂಖ್ಯೆಯ ದಟ್ಟಣೆಯಿಂದ ಉಂಟಾಗುವ ಹೊಲಸಿಗೆ ಹೇಸಿಕೊಂಡು, ಅದರೊಳಗಿಂದ ಪಾರಾಗುವದಕ್ಕೆ ಆದಷ್ಟು ಯತ್ನಗಳನ್ನು ಮಾಡ ಹತ್ತುತ್ತಾರೆ. ಜನರೊಳಗೆ ವಿದ್ಯೆಯು ಹಬ್ಬುಗೊಳ್ಳುವದರಿಂದ ಅವರು ಅನ್ನಪಾನಾದಿಗಳಲ್ಲಿ ಮಿತದಿಂದ ಇರುವವರಾಗುತ್ತಾರೆ. ಇತ್ತಲಾಗಿ ಇಂಗ್ಲಂಡದಲ್ಲಿ ಮಿತಪಾನವು ವಿಶೇಷವಾದ ಹಾಗೆ ತೋರುತ್ತದೆ. ಯಾಕಂದರೆ, ಮದ್ಯಗಳ ಮೇಲಿನ ಕಪ್ಪಗಳ ವಾರ್ಷಿಕ ಉತ್ಪನ್ನವು ಬರಬರುತ್ತಾ ಕಡಿಮೆಯಾಗುತ್ತ ನಡಿದದೆ. ಜನರ ಕುಡಿಕತನವು ಕಡಿಮೆಯಾದ ಹಾಗೆ ಅವರ ಸೌಖ್ಯಕರವಾದ ನಿರ್ವಾಹದ ಪ್ರಮಾಣವು ನಿಶ್ಚಯವಾಗಿ ಏರುವದು. ಇದಲ್ಲದೆ, ವಿದ್ಯೆಯಿಂದ ಕೂಲಿಕಾರರಿಗೆ ಮತ್ತೊಂದು ಬಗೆಯಿಂದಲೂ ಕಲ್ಯಾಣವಾಗ ಬಹುದು. ವಿದ್ಯೆಯಿಂದ ಅವರ ಬುದ್ಧಿಯು ವಿಕಾಸ ಹೊಂದಿ, ಅವರ ಶ್ರಮವು ವಿಶೇಷ ಉತ್ಪಾದಕವಾಗ ಬಹುದು. ಅದರಿಂದ ಸಾವುಕಾರರ ಲಾಭವು ಕಡಿಮೆಯಾಗದೆ, ಕೂಲಿಕಾರರಿಗೆ ಹೆಚ್ಚು ಸಂಬಳ ದೊರಕ ಬಹುದು. ಮೇಲಾಗಿ, ದೇಶ ದೇಶಗಳಿಗೆ ಪ್ರಯಾಣ ಮಾಡುವದಕ್ಕೆ ವಿಶೇಷ ಸೌಲಭ್ಯಗಳುಂಟಾದ್ದರಿಂದಲೂ, ಆಸ್ಟ್ರೇಲಿಯಾ ನ್ಯೂಝಿಲಂಡ, ಅಮೇರಿಕಾ, ಕ್ಯಾನಡಾ ದೇಶಗಳಲ್ಲಿದ್ದ ತಮ್ಮಂಥ ಜನರ ಸ್ಥಿತಿಗತಿಯವಿಷಯವಾಗಿ ಜನರಿಗೆ ವಿಶೇಷ ತಿಳಿಯ ಹತ್ತಿದರಿಂದಲೂ, ಇಂಗ್ಲಂಡದ ಜನರೊಳಗೆ ವಾಡಿಕೆಯಾದ ಸುಖೋಪಬೋಗದ ಮಾನವು ಏರುವದಕ್ಕೆ ಮತ್ತೊಂದು ಕಾರಣವಾಯಿತು. ಉದಾಹರಣಾರ್ಥವಾಗಿ, ಇಂಗ್ಲಂಡದಲ್ಲಿದ್ದ ಒಬ್ಬ ಬಡಿಗನಿಗೆ ಆಸ್ಟ್ರೇಲಿಯಾ ದೇಶಕ್ಕೆ ಹೋದ ಅವನ ಸ್ನೇಹಿತನ ಕಡೆಯಿಂದ, ಆಸ್ಟ್ರೇಲಿಯದಲ್ಲಿ ದಿನ ೧೦ ಶಿಲಿಂಗು ಕೂಲಿ ದೊರಿಯುತ್ತದೆಂದು ಸುದ್ದಿಯು ತಿಳಿದರೆ, ಅವನು ಇಂಗ್ಲಂಡದಲ್ಲಿ ಇದಕ್ಕೂ ಬಹಳ ಕಡಿಮೆ ಕೂಲಿ ದೊರಿಯ ಹತ್ತಿದರೆ ಆ ಕೂಲಿಯಿಂದ ತೃಪ್ತಿ ಹೊಂದನು.

**ಜನಸಂಖ್ಯೆಯನ್ನು ಕುರಿತು ಮಾಲ್‌ಥಸನ ಅಭಿಪ್ರಾಯವು.**—ಜನಸಂಖ್ಯೆಯ ವಿಷಯದಲ್ಲಿ ಮಾಲ್‌ಥಸನೆಂಬ ಗ್ರಂಥಕರ್ತನು ಒಂದು ಪ್ರಸಿದ್ಧವಾದ ನಿಬಂಧವನ್ನು ಬರೆದಿದ್ದಾನೆ. ಈ ನಿಬಂಧದಲ್ಲಿ ಅವನು ಸಿದ್ಧ ಮಾಡಿದ್ದೇನಂದರೆ, ಈ ಜಗತ್ತಿನಲ್ಲಿ ತನಗಿದ್ದ ಪೋಷಣಸಾಧನಗಳಿಗಿಂತಲೂ ಮಿತಿಮೀರಿ ಬೆಳೆಯುವ ಪ್ರವೃತ್ತಿಯು ಪ್ರಾಣಿಕೋಟಿಯಲ್ಲಿ ಸರ್ವದಾ ಇದ್ದೇ ಇರುವದು. ಆ ಕಾರಣ, ಜನಸಂಖ್ಯೆಯ ಬೆಳೆಯುವಿಕೆಗೆ ಕೆಲ ಪ್ರತಿಬಂಧಕಗಳು ಇಲ್ಲದೆ ಹೋದರೆ, ಕಾಲಾಂತರದಿಂದ ಪೃಥ್ವಿಯಲ್ಲಿ ಉತ್ಪನ್ನವಾಗುವ ಎಲ್ಲ ಅನ್ನದ ಪೂರೈಕೆಯು, ಬೆಳೆದ ಜನಸಂಖ್ಯೆಯ ನಿರ್ವಾಹಕ್ಕೆ ಸಾಲದೆ ಹೋಗುವದು. ಮಾಲ್‌ಥಸ್ ಧೊರೆಯ ಕೆಲ ಪ್ರತಿಪಕ್ಷದವರು, ಪೃಥ್ವಿಯಲ್ಲಿದ್ದ ಉಪಜೀವನ ಸಾಧನಗಳು ಪೃಥ್ವಿಯ ಮೇಲಿನ ಪ್ರಜೆಗೆ ಸಾಲದೆ ಹೋಗುವ ಸಂಭವ ತೋರುವದಿಲ್ಲಾದ ಕಾರಣ, ಮಾಲ್‌ಥಸನು ಹೇಳಿದ ಸಿದ್ಧಾಂತವು ಕೇವಲ ತಪ್ಪಾದದ್ದೆಂದು ಪ್ರತಿಪಾದಿಸುವರು. ಆದರೆ ಇಲ್ಲಿ ನೆನಪಿನಲ್ಲಿಡ ತಕ್ಕಂಥ ಅಂಶವೇನಂದರೆ, ಪೃಥ್ವಿಯ ಮೇಲಿನ ಪ್ರಜೆಗೆ ಉಪಜೀವನ ಸಾಧನಗಳ ಕೊರತೆಯು ಯಾವತ್ತು ಸಂದರ್ಭಗಳಲ್ಲಿ ಉಂಟಾಗುವದೆಂದು ಮಾಲ್‌ಥಸನು ಹೇಳಿಲ್ಲ; ಪ್ರಜಾವೃದ್ಧಿಗೆ ಕೆಲ ಪ್ರತಿಬಂಧಕಗಳು ಇಲ್ಲದೆ ಹೋದ ಪಕ್ಷದಲ್ಲಿ, ಈ ಬಗೆಯ ಕೊರತೆಯುಂಟಾಗುವದೆಂದು ಹೇಳಿದ್ದಾನೆ. ಸಕಲ ದೇಶಗಳಲ್ಲಿ ಈ ಬಗೆಯ ಪ್ರತಿಬಂಧಕಗಳ ಕಾರ್ಯವು ಯಾವಾಗಲೂ ನಡಿದೇ ಇರುವದು. ಹ್ಯಾಗಂದರೆ, ಪ್ರತಿಯೊಂದು ದೇಶದಲ್ಲಿ ಯಾವತ್ತು ಜನಸಂಖ್ಯೆಯ ಮಾನದಿಂದ ಆಗ ತಕ್ಕಷ್ಟು ಜನನಗಳು ಆಗುವದೇ ಇಲ್ಲ, ಅಥವಾ ಒಂದು ವೇಳೆ ಆದರೂ, ಹುಟ್ಟಿದ ಎಷ್ಟೋ ಪ್ರಜೆಯು ಮೃತ್ಯುವಿನ ವಶವಾಗುವದು. ಜನಸಂಖ್ಯೆಯು ಮಿತಿಮೀರಿ ಬೆಳೆಯುವದಕ್ಕೆ ಅಡ್ಡಿ ಮಾಡುವ ಕಾರಣಗಳು ಎರಡು: ಜನರ ದೀರ್ಘದೃಷ್ಟಿ, ಅಥವಾ ಯುದ್ಧ, ಬರ, ಪಿಡಗು ಇವು ಮೊದಲಾದ ಕಾರಣಗಳು. ಪ್ರಾಣಿಕೋಟಿಯಲ್ಲಿಯೂ ಉದ್ಭಿಜ್ಜಕೋಟಿಯಲ್ಲಿಯೂ ಇರುವ ಸ್ವಜಾತಿವೃದ್ಧಿಯ ಸಮಸ್ತ ಬೀಜಗಳು ಏನು ಆತಂಕವಿಲ್ಲದೆ ಪೂರ್ಣ ದೆಶೆಯನ್ನು ಹೊಂದಿದರೆ, ಮಾಲ್‌ಥಸನು ಹೇಳಿದ ಪ್ರಕಾರ ಅವುಗಳಿಂದ ಕೆಲ ಸಾವಿರ ವರ್ಷಗಳಲ್ಲಿ ಈ ಪೃಥ್ವಿಯಂಥ ಲಕ್ಷಾವಧಿ ಪೃಥ್ವಿಗಳು ತುಂಬಿ ಹೋಗುವವು. "ಈ ಸ್ವಜಾತಿವೃದ್ಧಿಯ ಪ್ರವೃತ್ತಿಯು, ಉಲ್ಲಂಘಿಸಲಸಾಧ್ಯವಾದ ಮತ್ತು ಸರ್ವವ್ಯಾಪಿಯಾದ ಅನನ್ಯಗತಿತ್ವವೆಂಬ ಸೃಷ್ಟಿನಿಯಮದ ಮೂಲಕವಾಗಿ, ಕೆಲವೊಂದು ಮರ್ಯಾದೆಯನ್ನು ಮೀರದೆ ಇರುವದು. ವನಸ್ಪತಿ ವರ್ಗದಲ್ಲಿಯೂ, ಜ್ಞಾನರಹಿತವಾದ ಪಶುವರ್ಗದಲ್ಲಿಯೂ, ಈ ನಿಯಮದ ಕಾರ್ಯವು ಸಹಜವಾಗಿ ಕಾಣಿಸುವದು. ಹ್ಯಾಗಂದರೆ,

ಸ್ವಜಾತಿವರ್ಧನ ಶಕ್ತಿಯು ನಿರಂಕುಶವಾದಲ್ಲಿ, ಅದು ತನ್ನ ಕಾರ್ಯವನ್ನು ಎಡೆಬಿಡ ನಡಿಸುವದು. ಹಾಗೂ ಇದರಿಂದ ಉಂಟಾದ ಮಿತಿಮೀರಿದ ಪ್ರಜಾವೃದ್ಧಿ ಸಾಕಷ್ಟು ಸ್ಥಳವೂ ಜೀವನೋಪಾಯಗಳೂ ಇಲ್ಲದೆ ಹೋಗುವದರಿಂದ, ಹೆಚ್ಚಿ ವೃದ್ಧಿಯೆಲ್ಲ ನಾಶ ಹೊಂದುವದು". ಮಾಲ್ಥಸನು ವನಸ್ಪತಿಗಳ ಹಾಗೂ ಪಶ ಗಳ ವಿಷಯದಲ್ಲಿ ಈ ನಿಯಮವನ್ನು ಸಿದ್ಧ ಮಾಡಿ ತೋರಿಸಿ, ಅನಂತರ ಇದೇ ನಿಯಮವನ್ನು ಮನುಷ್ಯಜಾತಿಯ ವಿಷಯದಲ್ಲೂ ಸಿದ್ಧ ಮಾಡಿ ತೋರಿಸಿದನು ತಮಗಿದ್ದ ಜೀವನಸಾಧನಗಳ ಮಿತಿಯನ್ನು ಮೀರಿ ಸ್ವಜಾತಿಯನ್ನು ವೃದ್ಧಿಪಡಿ ಸುವ ಪ್ರವೃತ್ತಿಯು ಮನುಷ್ಯಜಾತಿಯಲ್ಲಿಯೂ ಇರುವದು. ಹಾಗೂ ಪ್ರಜಾ ವೃದ್ಧಿಗೆ ಬೇರೆ ಯಾವದಾದರು ಪ್ರತಿಬಂಧಕವು ತಟ್ಟದಿದ್ದರೆ, ಅದು ಆಹಾರ ದೊ ಕಿಸುವ ಕಷ್ಟ, ರೋಗಗಳು ಮುಂತಾದ ದುಃಖಕಾರಕವಾದ ಹಾಗೂ ಲಜ್ಜಾಸ್ಪ ದವಾದ ಕಾರಣಗಳಿಂದ ಕಡಿಮೆ ಮಾಡಲ್ಪಡುವದು. ಪ್ರಜಾವೃದ್ಧಿಯನ್ನು ಕಡಿಮೆ ಮಾಡುವಂಥ ಈ ವಿನಾಶಕ ಕಾರಣಗಳಲ್ಲದೆ, ದೀರ್ಘದೃಷ್ಟಿಯ ಮೂಲ ಕವಾದ ಕೆಲ ವಿರೋಧಕ ಕಾರಣಗಳೂ ಇರುವವು. ಮಾಲ್ಥಸನು ಜನಸಂ ಖ್ಯೆಯ ವಿಷಯದ ತನ್ನ ನಿಬಂಧದಲ್ಲಿ ಅನೇಕ ದೇಶಗಳ ಸ್ಥಿತಿಯನ್ನು ಪರೀಕ್ಷಿಸಿ, ಬೇರೆ ಬೇರೆ ದೇಶಗಳಲ್ಲಿ ವಿನಾಶಕ ಕಾರಣಗಳಿಂದಲೂ ವಿರೋಧಕ ಕಾರಣ ಗಳಿಂದಲೂ ಉಂಟಾಗುವ ಪರಿಣಾಮಗಳನ್ನು ವಿವರಿಸಿದ್ದಾನೆ. ಬಹುತರ ಯಾವತ್ತು ದೇಶಗಳಲ್ಲಿ ಇವೆರಡೂ ತರದ ಪ್ರತಿಬಂಧಕ ಕಾರಣಗಳು ಪ್ರಜಾವೃದ್ಧಿಯನ್ನು ತಡೆ ಯುತ್ತಿರುವವು. ಉದಾಹರಣಾರ್ಥವಾಗಿ, ಲಂಡನದಲ್ಲಿ ಅನ್ನ, ಅರಿವೆ, ಯೋಗ್ಯ ವಾದ ಪೋಷಣೆಗಳಿಲ್ಲದ್ದರಿಂದ, ಹಾಗು ಜನರ ದಟ್ಟಣೆಯಿಂದ ಉಂಟಾಗುವ ರೋಗಗಳಿಂದ, ಸಾಯುವ ಹುಡುಗರ ಸಂಖ್ಯೆಯು ಅತ್ಯಂತ ಭೀತಿಕರವಾಗಿರು ವದು. ಈ ಸಂಗತಿಯು ಇಂಗ್ಲಂಡದ ಸುಧಾರಣೆಗೆ ಅತ್ಯಂತ ಲಜ್ಜಾಸ್ಪದವಾದ ದ್ದೆಂದು ಅನ್ನ ಬಹುದು. ಯಾಕಂದರೆ, ಜನರೊಳಗೆ ಸುಧಾರಣೆಯು ಹೆಚ್ಚಿದ ಮಾನದಿಂದ ಪ್ರಜಾವೃದ್ಧಿಯನ್ನು ಪ್ರತಿಬಂಧಿಸುವ ವಿನಾಶಕ ಕಾರಣಗಳ ಬಲವು ಕಡಿಮೆಯಾಗಿ, ದೀರ್ಘದೃಷ್ಟಿಯ ಮೂಲಕವಾದ ವಿರೋಧಕ ಕಾರಣಗಳು ಹೆಚ್ಚು ಬಲವುಳ್ಳವಾಗ ತಕ್ಕದ್ದು ಸಹಜವಾಗಿರುವದು. ಯಾವದೊಂದು ದೇಶದ ಸುಧಾರಣೆಯ ಪರಿಮಾಣವನ್ನು ಆ ದೇಶದಲ್ಲಿ ವಿನಾಶಕ, ಇಲ್ಲವೆ ವಿರೋಧಕ ಕಾರಣಗಳು ಹೆಚ್ಚು ಪ್ರಬಲವಾಗಿರುವದರ ಮೇಲಿಂದ ತಿಳಿಯ ಬಹುದು.

ಶ್ರಮದ ಸಂಬಳವನ್ನು ಕ್ರಮಗೊಳಿಸುವ ಕಾರಣಗಳು ಚನ್ನಾಗಿ ತಿಳಿಯು ಬೇಕಾದರೆ, ಪ್ರಜಾವೃದ್ಧಿಯ ವಿಷಯದ ಗೌರವವು ಮನಸ್ಸಿನಲ್ಲಿ ಪೂರಾ ಬಿಂಬಿಸು

ವದು ಅತ್ಯಾವಶ್ಯಕವಾದದ್ದು. ಜನಸಂಖ್ಯೆಯ ಬೆಳೆಯುವಿಕೆಯಿಂದ ಉಂಟಾಗುವ ದುಷ್ಟ ಪರಿಣಾಮಗಳನ್ನು ಪ್ರತಿಬಂಧಿಸುವಂಥ ಸಂಗತಿಗಳಿಲ್ಲದೆ, ಬರೇ ಜನಸಂಖ್ಯೆಯು ಮಾತ್ರ ಬೆಳೆಯುವದರಿಂದ ಕೂಲಿಕಾರರಿಗೆ ಎರಡು ರೀತಿಯಿಂದ ಹಾನಿಯಾಗುವದು. (೧) ಜನಸಂಖ್ಯೆಯು ಬೆಳೆದದ್ದರಿಂದ ಕಡಿಮೆ ಉತ್ಪಾದಕವಾದ ಭೂಮಿಗಳನ್ನು ಸಾಗಮಾಡುವದು ಅವಶ್ಯವಾಗಿ, ಆಹಾರದ ಕ್ರಯವು ಏರುವದು. (೨) ಮತ್ತು ಪ್ರಜಾವೃದ್ಧಿಯಿಂದ ಕೂಲಿ ಮಾಡುವ ಜನರ ಸಂಖ್ಯೆಯು ಹೆಚ್ಚಾಗುವದರಿಂದ ಅವರೊಳಗೆ ಕೂಲಿಗಾಗಿ ಹೆಚ್ಚು ಮೇಲಾಟ ನಡಿದು, ಕೂಲಿಯ ದರವು ಇಳಿಯ ಹತ್ತುವದು. ಈ ಪ್ರಕಾರ ಉಪಜೀವನದ ಪದಾರ್ಥಗಳು ತುಟ್ಟಿಯಾಗುವದಲ್ಲದೆ, ಅದೇ ಕಾಲಕ್ಕೆ ಕೂಲಿಯೂ ಕಡಿಮೆಯಾಗುವದರಿಂದ ಕೂಲಿಕಾರರ ಕಷ್ಟಗಳು ದ್ವಿಗುಣಿತವಾಗುವವು.

**ಜನಸಂಖ್ಯೆಯು ಮಿತಿಮೀರಿ ಬೆಳೆಯುವದರಿಂದ ಉಂಟಾಗುವ ದುಷ್ಟ ಪರಿಣಾಮಗಳನ್ನು ತಪ್ಪಿಸುವದಕ್ಕೆ ಪರದೇಶಗಮನವು ಪೂರ್ಣವಾದ್ದ ಉಪಾಯವಲ್ಲ.** – ಜನಸಂಖ್ಯೆಯು ಮಿತಿಮೀರಿ ಬೆಳೆಯುವದರಿಂದ ಉಂಟಾಗುವ ಹಾನಿಗಳನ್ನು ತಪ್ಪಿಸುವದಕ್ಕೆ, ಪರದೇಶಗಮನವೆಂಬ ಉಪಾಯವು ಸಾಕಾದದ್ದೆಂದು ಕೆಲವರು ತಿಳಿಯುವರು. ಆದರೆ ಜನಸಂಖ್ಯೆಯ ಸ್ವಾಭಾವಿಕ ವೃದ್ಧಿಯನ್ನು ಪ್ರತಿಬಂಧಿಸುವದಕ್ಕೆ ಪರದೇಶಗಮನವೆಂಬ ಒಂದೇ ಉಪಾಯವೆಂದು ತಿಳುಕೊಂಡು, ಅದನ್ನೇ ಆಶ್ರಯಿಸಿಕೊಂಡು ಕೂಡ್ರುವದು ಬಹಳ ದೋಷಾಸ್ಪದವಾಗಿರುವದು. ಯಾಕಂದರೆ, ಮೊದಲು, ಗತಿಹೀನರಾದ ಅತ್ಯಂತ ದರಿದ್ರಿಗಳ ಹತ್ತರ ಪರದೇಶಗಳಿಗೆ ಹೋಗುವದಕ್ಕೆ ಹಣವಿರುವದಿಲ್ಲ. ಒಂದು ವೇಳೆ, ಈ ಹಣವನ್ನು ಸರಕಾರದವರಾಗಲಿ ರಾಷ್ಟ್ರೀಯ ವರ್ಗಣಿಯಿಂದಾಗಲಿ ಪೂರೈಸಿದರೂ, ಹೊಸದಾಗಿ ಒಕ್ಕಲಾದ ಪ್ರದೇಶಗಳ ಜನರು ಹಳೇ ಮಹಾದ್ವೀಪದ ತಿರುಕರ ಸಮೂಹಗಳಿಗೆ ತಮ್ಮ ಪ್ರದೇಶಗಳಲ್ಲಿ ಎಡೆ ಕೊಡುವದಕ್ಕೆ ಬಹುಶಾ ಒಪ್ಪಿಕೊಳ್ಳಲಿಕ್ಕಿಲ್ಲ. ಯುನೈಟೆಡ್ ಸ್ಟೇಟ್ಸದ ಸರಕಾರದವರು ಇತ್ತಲಾಗಿ (೧೮೮೩) ಆಯರ್ಲಂಡದ ಅನಾಥ ಕುಟುಂಬಗಳು ತುಂಬಿ ಬಂದ ಹಡಗಗಳನ್ನು, ಆ ಕುಟುಂಬಗಳಿಗೆ ಹಾದೀ ಖರ್ಚಿಗೆ ಕೊಟ್ಟವರು ಕೆಲವು ಕಾಲದ ವರೆಗೆ ಅವರ ಹೊಟ್ಟೀ ಖರ್ಚನ್ನು ಸಹ ನಡಿಸುವದಕ್ಕೆ ಹಣ ಪೂರೈಸಿದ ಹೊರ್ತು, ತಮ್ಮ ದೇಶದಲ್ಲಿ ಇಳಿಯಗೊಡಲಿಕ್ಕಿಲ್ಲವೆಂದು ಕಟ್ಟಳೆ ಮಾಡಿದ್ದಾರೆ. ಇದು ಅಯೋಗ್ಯವೆಂತಲೂ ಹೇಳಲಾಗದು. ಇದರಿಂದ ಸಿದ್ಧವಾಗುವದೇನಂದರೆ, ಇಂಗ್ಲಂಡದಿಂದ ಹೊರಗೆ ಕಳುಹಿಸಲ್ಪಟ್ಟ ಜನರನ್ನು ತಕ್ಕೊಳ್ಳುವದಕ್ಕೆ ಪರದೇಶದವರು ಒಪ್ಪಿಕೊಳ್ಳುವದಿಲ್ಲ. ಮತ್ತು ಇಂಗ್ಲಂಡದಲ್ಲಿ ವ್ಯಾಪಾರ ಉದ್ಯೋಗ

ಗಳನ್ನು ಮಾಡಿಕೊಂಡು ನೆಟ್ಟಗೆ ಇದ್ದವರಂತೂ ತಮ್ಮ ಕೆಲಸವನ್ನು ಬಿಟ್ಟು ದೇಶಾಂತರಕ್ಕೆ ಹೋಗುವ ಕಾರಣವೇ ಇಲ್ಲ. ಪರದೇಶಗಮನವೆಂಬ ಉಪಾಯಕ್ಕೆ ಬರುವ ಎರಡನೆ ಅಡ್ಡಿ ಏನಂದರೆ, ದೀರ್ಘದೃಷ್ಟಿಯಿಂದುಂಟಾಗುವ ವಿರೋಧಕ ಕಾರಣಗಳು ಉಂಟಾಗದಿದ್ದರೆ, ದೇಶಾಂತರಕ್ಕೆ ಹೋದ ಜನರಷ್ಟು ಹೊಸ ಸಂತತಿಯು ಸ್ವಲ್ಪ ಕಾಲದಲ್ಲಿಯೇ ಉತ್ಪನ್ನವಾಗುವದು. ಮೂರನೆ ಅಡ್ಡಿ ಏನಂದರೆ, ಜನಸಂಖ್ಯೆಯು ಮಿತಿಮೀರಿದ ಬೆಳೆಯುವಿಕೆಗೆ ಪರದೇಶಗಮನವೆಂಬ ಉಪಾಯವು ಶಾಶ್ವತವಾಗಿ ನಡಿಯುವದೆಂದು ಎಷ್ಟು ಮಾತ್ರವೂ ತಿಳಿಯಲಾಗದು. ಯಾಕಂದರೆ, ಕಾಲಾಂತರದಲ್ಲಿ, ಯುರೋಪದ ಹಳೇ ದೇಶಗಳಷ್ಟೇ ಹೊಸದಾಗಿ ಒಕ್ಕಲಾದ ಪ್ರದೇಶಗಳಲ್ಲಿಯೂ ಜನರ ದಟ್ಟಣೆಯಾಗುವದು. ಆಗ ಪರದೇಶಗಮನದಿಂದ ಏನು ಪ್ರಯೋಜನ ಉಂಟಾಗಲಿಕ್ಕಿಲ್ಲ. ಆದರೆ, ಮಿತಿಮೀರಿ ಬೆಳೆದ ಜನಸಂಖ್ಯೆಗೆ ಪರದೇಶಗಮನವೆಂಬ ಉಪಾಯವು ಪೂರ್ಣವಾದದ್ದಲ್ಲವಾದರೂ, ಸಾಂಪ್ರತಕ್ಕೆ ಪರದೇಶಗಮನದ ಕೂಡ ದೀರ್ಘದೃಷ್ಟಿ ಮೂಲಕವಾದ ವಿರೋಧಕ ಕಾರಣದಿಂದಲೂ ಪ್ರಜಾವೃದ್ಧಿಗೆ ವಿಶೇಷ ಅಡ್ಡಿಯಾಗುತ್ತ ನಡಿದರೆ, ಪರದೇಶಗಮನದಿಂದ ಬಹಳ ಕಲ್ಯಾಣವಾಗ ಬಹುದು. ಇನ್ನೂ ಕೆಲವು ಕಾಲದವರೆಗೆ, ಆಸ್ಟ್ರೇಲಿಯ, ಇಲ್ಲವೆ ಅಮೇರಿಕಾ ದೇಶಕ್ಕೆ ಹೋಗುವ ಪ್ರತಿಯೊಬ್ಬ ಕೌಶಲ್ಯವುಳ್ಳ ಕಸಬುದಾರನು, ಆ ದೇಶಗಳ ಸಂಪತ್ತನ್ನು ಬೆಳಿಸುವವನಾಗುವನು. ಮತ್ತು ಅವನು ಬಿಟ್ಟು ಹೋದಂಥ ಯುರೋಪ ಖಂಡದಲ್ಲಿ, ಮಿತಿಮೀರಿ ಬೆಳೆದ ಕೂಲಿಕಾರರ ಸಂಖ್ಯೆಯು ಕಡಿಮೆಯಾಗುವದು. ಆಯರ್ಲಂಡದಿಂದ ಎಷ್ಟೋ ಕೂಲಿಕಾರರು ಅಮೇರಿಕೆಗೆ ತಮ್ಮ ಸ್ವಸಂತೋಷದಿಂದ ಹೋದದ್ದರಿಂದ, ಅವೆರಡೂ ದೇಶಗಳಿಗೆ ಕಲ್ಯಾಣವಾಗಿರುವದೆಂಬಲ್ಲಿ ಏನೇನು ಸಂದೇಹವಿಲ್ಲ. ಇದರಂತೆಯೇ ಇಂಗ್ಲಂಡದಲ್ಲಿ ಬೇಸಾಯದಲ್ಲಿ ತೊಡಗಿದ ಕೂಲಿಕಾರರೊಳಗೂ ಅಲ್ಪಸ್ವಲ್ಪ ಜನರು ಹೋದದ್ದರಿಂದ, ಹಿಂದೆ ಉಳಿದವರ ಸ್ಥಿತಿಗತಿಯು ವಿಶೇಷ ಸುಧಾರಿಸಿದಂತೆ ಕಾಣಿಸುತ್ತದೆ. ಮತ್ತು ಕ್ಯಾನಡಾ, ಆಸ್ಟ್ರೇಲಿಯ, ಯುನೈಟೆಡ್ ಸ್ಟೇಟ್ಸ, ನ್ಯೂಝಿಲಂಡ ಮೊದಲಾದ ದೇಶಗಳಲ್ಲಿ ಫಲವತ್ತಾದ ಭೂಮಿಯು ವಿಪುಲವಾಗಿದ್ದು, ಕೆಲಸ ಮಾಡುವ ಕೂಲಿಕಾರರು ಶಿಕ್ಕುವದೇ ಕಷ್ಟವಾದ್ದರಿಂದ, ಅಲ್ಲಿಗೆ ಹೊಸ ಹೊಸದಾಗಿ ಹೋಗುವ ಪ್ರತಿಯೊಬ್ಬ ಕೆಲಸದಲ್ಲಿ ನುರಿತ ಒಕ್ಕಲಿಗನು ಬಹಳ ಉಪಯೋಗವುಳ್ಳವನಾಗುತ್ತಾನೆ.

**ದೇಶದೊಳಗಿನ ಲಾಭದ ದರವು ಇಳಿಯುವದರಿಂದ ಸಂಬಳದ ದರದ ಮೇಲೆ ಆಗುವ ಪರಿಣಾಮವು.**— ಯಾವತ್ತು ದೇಶಗಳ ಇತಿಹಾಸವನ್ನು ನೋ

ಡಲಾಗಿ, ಪ್ರತಿಯೊಂದು ದೇಶದಲ್ಲಿ ಸಂಪತ್ತು ಜನಸಂಖ್ಯೆಗಳು ಬೆಳೆದ ಹಾಗೆ, ಲಾಭದ ದರವು ಇಳಿದದ್ದಾಗಿ ಕಂಡು ಬರುತ್ತದೆ. ಈ ಪ್ರಕಾರ ಯಾವತ್ತು ದೇಶಗಳಲ್ಲಿ ಲಾಭದ ದರವು ಇಳಿದದ್ದರ ಕಾರಣಗಳನ್ನು ಮುಂದಿನ ಅಧ್ಯಾಯದಲ್ಲಿ ವಿಚಾರಿಸುವೆವು. ಈ ಸ್ಥಳದಲ್ಲಿ ಲಾಭದ ದರದ ಸ್ಥಾನಿಕ ಇಳಿಯುವಿಕೆಯಿಂದ ಸಂಬಳದ ಮೇಲೆ ಉಂಟಾಗುವ ಪರಿಣಾಮವನ್ನು ಮಾತ್ರ ತೋರಿಸ ತಕ್ಕದ್ದಾಗಿದೆ. ಯಾವದೊಂದು ಉದ್ಯೋಗದಲ್ಲಿ ತೊಡಗಿದ ಸಾವುಕಾರರ ಬಂಡವಲಕ್ಕೆ ವಾಡಿಕೆಯಾದ ಸರಾಸರಿ ದರದಿಂದ ಮಾತ್ರ ಲಾಭ ಉಳಿಯುವಷ್ಟು ಸಂಬಳವು ಕೂಲಿಕಾರರಿಗೆ ದೊರಿಯುತ್ತ ಇದೆ, ಎಂದು ಕಲ್ಪಿಸಿರಿ. ಈ ಪ್ರಸಕ್ತಿಯಲ್ಲಿ ಕೂಲಿಕಾರರು ಒಕ್ಕಟ್ಟಾಗಿ ತಮಗೆ ಹೆಚ್ಚು ಸಂಬಳ ದೊರಿಯ ಬೇಕೆಂದು ಹಟ ಹಿಡಿದು, ತಮ್ಮ ಸಂಬಳವನ್ನು ಹೆಚ್ಚಿಸಿಕೊಂಡರೆ, ಸಾವುಕಾರನು ತನ್ನ ಉದ್ಯೋಗವನ್ನು ಲುಕಸಾನು ಮಾಡಿಕೊಂಡು ನಡಿಸುವನು; ಅಂದರೆ, ಬೇರೆ ಉದ್ಯೋಗಗಳಲ್ಲಿ ಬರುವದಕ್ಕಿಂತಲೂ ಅವನಿಗೆ ಕಡಿಮೆ ಲಾಭ ದೊರಿಯ್ಲುವದು. ಹೀಗಾದಲ್ಲಿ, ಅವನು ತನ್ನ ಉದ್ಯೋಗವನ್ನು ಎಷ್ಟು ಮಾತ್ರವೂ ಬೆಳಿಸದೆ ಇರುವಲ್ಲಿ ಜಾಗ್ರತೆ ಪಡುವನು. ಮತ್ತು ಈ ಪ್ರಕಾರ ಅವನಿಗೆ ಕಡೆತನಕ ಲುಕಸಾನವೇ ಆಗುತ್ತ ನಡಿದರೆ, ಅವನು ಕ್ರಮೇಣ ತನ್ನ ಬಂಡವಲವನ್ನು ತೆಗೆದು ಬೇರೆ ಉದ್ಯೋಗಗಳಲ್ಲಿ ಶೇರಿಸುವನು. ಆದಕಾರಣ, ಲಾಭದ ದರವು ಸರಾಸರಿ ದರಕ್ಕಿಂತಲೂ ಕಡಿಮೆಯಾಗುವ ಹಾಗೆ ಕೂಲಿಕಾರರು ತಮಗೆ ಹೆಚ್ಚು ಸಂಬಳವನ್ನು ಪಡಕೊಂಡದ್ದೇ ಆದರೆ, ಅದರಿಂದ ಕೆಲವು ಕಾಲದ ವರೆಗೆ ಮಾತ್ರ ಕೂಲಿಕಾರರಿಗೆ ಪ್ರಯೋಜನವಾಗುವದು. ಇಂಗ್ಲಂಡದಲ್ಲಿ ಒಳಗಡೆಯಲ್ಲಿ ಬೇಸಾಯದ ಉದ್ಯೋಗದಲ್ಲಿ ದುಡಿಯುವ ಕೂಲಿಕಾರರು ತಮಗೆ ಹೆಚ್ಚು ಸಂಬಳ ದೊರಿಯ ಬೇಕೆಂಬು ಮೇಲೆ ಹೇಳಿದ ಬಗೆಯ ಕಟ್ಟು ಮಾಡಿದ್ದಾರೆ. ಅವರು ಕಟ್ಟು ಮಾಡುವ ಪೂರ್ವದಲ್ಲಿಯೇ ಹೊಲ ಮಾಡಿಸುವ ಒಕ್ಕಲಿಗರ ಬಂಡವಲಕ್ಕೆ ಸರಾಸರಿ ದರಕ್ಕಿಂತಲೂ ಕಡಿಮೆ ಲಾಭವು ಬರುತ್ತಾ ಇದ್ದದ್ದು ನಿಜವಾದರೆ, ಕೂಲಿಕಾರರು ಕಟ್ಟು ಮಾಡಿ ಹೆಚ್ಚು ಸಂಬಳವನ್ನು ಪಡಕೊಂಡದ್ದರಿಂದ ಬೇಸಾಯದ ಉದ್ಯೋಗದಲ್ಲಿ ಬಹಳ ಹೆಚ್ಚು ಕಡಿಮೆಯಾಗಲಿಕ್ಕೇ ಬೇಕು. ಬೇಸಾಯದ ಉದ್ಯೋಗ ನಡಿಸುವ ಸಾವುಕಾರರಿಗೆ ಬೇರೆ ಉದ್ಯೋಗಗಳಲ್ಲಿ ದೊರಿಯುವ ಲಾಭಕ್ಕಿಂತಲೂ ಕಡಿಮೆ ಲಾಭ ಬರಹತ್ತಿದರೆ, ಅವರು ತಮ್ಮ ಬಂಡವಲವನ್ನು ಬೇಸಾಯದಲ್ಲಿ ಎಷ್ಟು ಮಾತ್ರವೂ ಕಡೆತನಕ ಶೇರಿಸಲಿಕ್ಕಿಲ್ಲ. ಆದರೆ ಇಲ್ಲಿ ಮತ್ತೊಂದು ಪರಿಣಾಮವೂ ಸಂಭವಿಸ ಬಹುದು, ಅದೇನಂದರೆ, ಕೂಲಿಕಾರರ

ಸಂಬಳ ಏರಿದ್ದರಿಂದ ಅವರ ಶ್ರಮವು ಹೆಚ್ಚು ಉತ್ಪಾದಕವಾಗ ಬಹುದು; ಹೀಗಾಗದ್ದೇ ಆದರೆ, ಹೆಚ್ಚು ಸಂಬಳ ಕೊಡುವದರಿಂದ ಒಕ್ಕಲಿಗರಿಗೆ ತಾಗುವ ಹೆಚ್ಚು ಖರ್ಚಿಗಾಗಿ, ಅವರಿಗೆ ಹೆಚ್ಚು ಪೈರುಗಳಿಂದಲೂ ಕಡಿಮೆ ಕೂಲಿಕಾರರನ್ನು ಹಚ್ಚ ಬೇಕಾಗುವದರಿಂದಲೂ ಪ್ರತಿಫಲ ಬರಬಹುದು. ಇದಲ್ಲದೆ, ಕೂಲಿಕಾರರಿಗೆ ಹೆಚ್ಚು ಸಂಬಳ ಕೊಡ ಬೇಕಾಗುವದನ್ನು ನೋಡಿ, ಒಕ್ಕಲಿಗರು ಮುಂಚಿನದಕ್ಕಿಂತಲೂ ಹೆಚ್ಚು ಯಂತ್ರಗಳನ್ನು ಉಪಯೋಗಿಸ ಬಹುದು. ಹೊಲಗಳ ವಿಸ್ತಾರವು ಬೆಳೆದು ಉಗಿಯಿಂದ ನಡಿಯುವ ನೇಗಿಲ, ಕೊಯ್ಯುವ ಯಂತ್ರಗಳು, ಹುಲ್ಲು ಕೂಡಿಸುವ ಯಂತ್ರಗಳು ಮೊದಲಾದವುಗಳ ಉಪಯೋಗವು ಸಾರ್ವತ್ರಿಕವಾಗುವದು. ಹೀಗಾದ ಪಕ್ಷದಲ್ಲಿ, ಒಕ್ಕಲಿಗರು ಮುಂಚಿನದಕ್ಕಿಂತಲೂ ಕಡಿಮೆ ಕೂಲಿಕಾರರನ್ನು ದುಡಿಸಿ ಕೊಳ್ಳುವರು. ಹಾಗೂ ಈ ಸ್ವಲ್ಪ ಕೂಲಿಕಾರರು ಬೇಸಾಯ ಯಂತ್ರಗಳನ್ನು ನಡಿಸುವಲ್ಲಿ ಒಳ್ಳೇ ಕುಶಲರಾದವರೇ ಆಗಿರುವರು. ಆದ್ದರಿಂದ ಅವರಿಗೆ ಅವರ ಯೋಗ್ಯತೆಯ ಪ್ರಕಾರ ಹೆಚ್ಚು ಸಂಬಳ ದೊರಿಯುವದು. ಆದರೆ, ಈ ಸ್ಥಿತ್ಯಂತರವು ನಡೆದ ಕಾಲದಲ್ಲಿ ಏನೂ ಕೌಶಲ್ಯವಿಲ್ಲದ, ಹಾಗೂ ಹ್ಯಾಗಾದರೂ ಕೆಲಸವನ್ನು ಮಾಡಿ ಚರಿತಾರ್ಥ ಸಾಗಿಸುವ ಹಳೇ ತರದ ಅನಾಡಿ ಕೂಲಿಕಾರರು ದಿನೇ ದಿನೇ ನಷ್ಟ ಹೊಂದುತ್ತಾ, ಅವರಿಗೆ ಕಡು ವಿಪತ್ತನ್ನು ಅನುಭವಿಸ ಬೇಕಾಗುವದು. ಈ ಕೀಳುತರದ ಕೂಲಿಕಾರರು ಬೇಗನೆ ದೇಶಾಂತರಕ್ಕೂ ಹೋಗುವದಿಲ್ಲ; ಅವರಿಗೆ ಬೇಸಾಯದ ಯಂತ್ರಗಳನ್ನು ನಡಿಸುವ ಕೆಲಸವಾಗಲಿ, ಬೇರೆ ಯಾವ ಕಸಬಾಗಲಿ, ಬರುವ ಹಾಗೂ ಇರುವದಿಲ್ಲ. ಆ ಕಾರಣ, ಮೇಲೆ ಹೇಳಿದ ಮೇರಿಗೆ ಬೇಸಾಯದ ಕೂಲಿಕಾರರೊಳಗೆ ಕೌಶಲ್ಯವುಳ್ಳ ಕೆಲ ಕೂಲಿಕಾರರಿಗೆ ಬಹಳ ಕಲ್ಯಾಣವಾಗುತ್ತಿರಲಾಗಿ, ಅದೇ ಸಮಯಕ್ಕೆ ಕೌಶಲ್ಯವಿಲ್ಲದ ಬೇರೆ ಕೂಲಿಕಾರರು ಬಹು ತಾಪತ್ರಯವನ್ನು ಅನುಭೋಗಿಸುವರು. ಕೂಲಿಕಾರರಿಗೆ ಹೆಚ್ಚು ಸಂಬಳ ಕೊಡಬೇಕಾಗುವದರಿಂದ ಒಕ್ಕಲಿಗನಿಗೆ ವಾಡಿಕೆಯಾದ ದರಕ್ಕಿಂತಲೂ ಕಡಿಮೆ ಲಾಭ ಬರ ಹತ್ತಿದರೆ, ಅವನಿಗಾಗುವ ಲುಕಸಾನು ತುಂಬಿ ಬರುವ ಮತ್ತೊಂದು ಮಾರ್ಗ ಉಂಟು. ಅದೇನಂದರೆ, ಅವನು ಭೂಮಿಗೆ ಕೊಡತಕ್ಕ ಗೇಣಿಯು ಇಳಿಯ ಬಹುದು. ಈ ಸಂಗತಿಯು ವರ್ತಿಸಿದ್ದೇ ಆದರೆ, ಇದರಿಂದ ಮೇಲೆ ಹೇಳಿದ ಪ್ರಕಾರ ಕೀಳುತರದ ಕೂಲಿಕಾರರು ನಷ್ಟವಾಗುವದರಿಂದ ಉಂಟಾಗುವ ಕಷ್ಟಗಳಿಗಿಂತಲೂ ಕಡಿಮೆ ಕಷ್ಟಗಳುಂಟಾಗುವವು. ಇಂಗ್ಲಂಡದಲ್ಲಿ ಇತ್ತಲಾಗಿ ಈ ಸಂಗತಿಯು ವರ್ತಿಸಿದಂತೆ ತೋರುತ್ತದೆ. ಇಂಗ್ಲಂಡದಲ್ಲಿ ಯಾವತ್ತು ಕಡೆಯಲ್ಲಿ ಇತ್ತಲಾಗಿ ಗೇಣಿಗಳು ಇಳಿದು, ಬೇಸಾಯದ ಕೂಲಿಕಾ

ರರ ಸ್ಥಿತಿಗತಿಯಲ್ಲಿ ಒಳ್ಳೇ ಸುಧಾರಣೆ ಉಂಟಾಗಿದೆ. ಯಾಕಂದರೆ, ಗೇಣಿಗಳು ಇಳಿದದ್ದರಿಂದ ಸಂಬಳದ ದರವೂ, ಶ್ರಮದ ಉತ್ಪಾದಕತ್ವವೂ, ಕೂಡೇ ವೃದ್ಧಿಯಾಗಿವೆ.

**ಶ್ರಮದ ಉತ್ಪಾದಕತ್ವವು ವೃದ್ಧಿಯಾಗುವದರಿಂದ ಸಂಬಳದ ದರದ ಮೇಲೆ ಉಂಟಾಗುವ ಪರಿಣಾಮವು.**—ಶ್ರಮದ ಉತ್ಪಾದಕತ್ವವನ್ನು ಹೆಚ್ಚಿಸುವಂಥ ಪ್ರತಿಯೊಂದು ಸಂಗತಿಯು, ಸಂಬಳವನ್ನು ಹೆಚ್ಚಿಸುವಂಥ ಮತ್ತೊಂದು ಉಪಾಯವಾಗಿದೆ. ಭೂಮಿ, ಶ್ರಮ, ಬಂಡವಲ, ಇವುಗಳ ಸಂಯೋಗದಿಂದ ಹೆಚ್ಚು ಸಂಪತ್ತು ಹುಟ್ಟಿದ್ದೇ ಆದರೆ, ಭೂಮಿಯ ಒಡೆಯರಿಗೆ ಗೇಣಿಯಾಗಿಯೂ, ಕೆಲಸಗಾರರಿಗೆ ಸಂಬಳವಾಗಿಯೂ, ಸಾವುಕಾರರಿಗೆ ಲಾಭವಾಗಿಯೂ ಹಂಚುವದಕ್ಕೆ ಹೆಚ್ಚು ಸಂಪತ್ತು ಉಂಟಾಗುವದು. ವಿದ್ಯಾಭಿವೃದ್ಧಿಯಿಂದಾಗಲಿ, ಇಲ್ಲವೆ ಬೇರೆ ಯಾವ ಕಾರಣದಿಂದಾದರೂ ಆಗಲಿ, ಕೂಲಿಕಾರರು ಹೆಚ್ಚು ಕುಶಲತೆಯಿಂದಲೂ ಪ್ರಾಮಾಣಿಕತನದಿಂದಲೂ ದುಡಿಯುವವರಾದರೆ, ಅವರ ಶ್ರಮದ ಉತ್ಪಾದಕತ್ವವು ಹೆಚ್ಚುವದು; ಕೂಲಿಕಾರರು ತಮ್ಮ ಕೆಲಸದ ಮುಟ್ಟುಗಳನ್ನೂ, ಮೂಲದ್ರವ್ಯಗಳನ್ನೂ, ವಿಶೇಷ ಚನ್ನಾಗಿ ಉಪಯೋಗಿಸುವರು; ಮತ್ತು ಕಾರ್ಯದರ್ಶಿಗಳ ಖರ್ಚೂ, ಅವರನ್ನು ಕಾಯುವ ಉದ್ಯೋಗಸ್ಥರ ಖರ್ಚೂ ಉಳಿಯುವದು. ಇದರಿಂದ ಹೆಚ್ಚು ಸಂಪತ್ತು ಉತ್ಪನ್ನವಾಗುವ ಕಾರಣ, ಕೂಲಿಕಾರರ ಸಂಬಳವು ಹೆಚ್ಚ ಬಹುದು; ಮತ್ತು ಅದೇ ಕಾಲಕ್ಕೆ ಸಂಪದುತ್ಪಾದನದ ಖರ್ಚು ಕಡಿಮೆಯಾಗಿ, ಮೇಲ್ವಿಚಾರಣೆ ಮಾಡುವವನ ಸಂಬಳವು ಉಳಿಯುವದು.

ಕೂಲಿಕಾರರ ಶ್ರಮವು ಹೆಚ್ಚು ಉತ್ಪಾದಕವಾಗುವದರಿಂದ ಕೂಲಿಕಾರರಿಗೂ ಪ್ರಯೋಜನ ಉಂಟಾಗ ಬೇಕೆಂಬ ಉದ್ದೇಶದಿಂದ ಅನೇಕ ಯುಕ್ತಿಗಳು ಯೋಚಿಸಲ್ಪಟ್ಟಿರುವವು. ಇವುಗಳಿಗೆಲ್ಲ ಮೂಲಾಧಾರವಾದ ತತ್ವವು ಯಾವದಂದರೆ, ಕೂಲಿಕಾರರ ಶ್ರಮವು ಹೆಚ್ಚು ಉತ್ಪಾದಕವಾದ ಮಾನದಿಂದ ಅವರಿಗೆ ಹೆಚ್ಚು ಹಣ ದೊರಿಯುವದೆಂಬ ಆಶೆಯುಂಟಾಗುವ ಹಾಗೆ ಮಾಡಿದರೆ, ಕೂಲಿಕಾರರು ಹೆಚ್ಚು ಜಾಣತನದಿಂದಲೂ ಉತ್ಸಾಹದಿಂದಲೂ ಕೆಲಸ ಮಾಡಿ, ಹೆಚ್ಚು ಬೆಲೆಯುಳ್ಳ ಕೆಲಸವನ್ನು ಮಾಡುತ್ತಾರೆ. ಮತ್ತು ಈ ಮೇರೆಗೆ ಹೆಚ್ಚಾದ ಬೆಲೆಯನ್ನು ಅನಂತರದಲ್ಲಿ ಕೂಲಿಕಾರರೂ ಸಾವುಕಾರರೂ ಮುಂಚಿತವಾಗಿ ಒಪ್ಪಿಕೊಂಡ ಮೇರೆಗೆ ತಮ್ಮೊಳಗೆ ಹಂಚಿಕೊಳ್ಳುವರು. ಲಾಭವನ್ನು ಹಂಚಿಕೊಳ್ಳುವ ಪದ್ಧತಿಯನ್ನನುಸರಿಸುವಂಥ ಕೆಲ ಪ್ರಸಿದ್ಧವಾದ ಮತ್ತು ಚನ್ನಾಗಿ ನಡಿದಿರುವ ವ್ಯವಹಾರಗಳನ್ನು ಮುಂದೆ ನಾಲ್ಕನೆ ಅಧ್ಯಾಯದಲ್ಲಿ ವರ್ಣಿಸುವೆವು.

**ಕೆಲವು ಕಾಲದ ವರೆಗೆ ಮಾತ್ರ ಬಾಳುವಂಥ ಸ್ಥಾನಿಕ ಕಾರಣಗಳಿಂದ ಸಂಬಳದ ದರವು ಯಾವಾಗಲೂ ಹೆಚ್ಚುಕಡಿಮೆಯಾಗುವದು.**—ಶ್ರಮದ ಸಂಬಳವನ್ನು ಕ್ರಮಗೊಳಿಸುವಂಥ ಸಾಮಾನ್ಯ ಕಾರಣಗಳು ಮಾತ್ರ ಮೇಲೆ ಹೇಳಲ್ಪಟ್ಟವು. ಆದರೆ, ಸಂಬಳದ ದರದಲ್ಲಿ, ಕೆಲವು ಕಾಲ ಮಾತ್ರ ನಡಿಯುವಂಥ ಸ್ಥಾನಿಕ ಕಾರಣಗಳಿಂದಲೂ ಬಹಳ ಹೆಚ್ಚುಕಡಿಮೆಯಾಗ ಬಹುದೆಂಬುವದನ್ನು ಚನ್ನಾಗಿ ಲಕ್ಷ್ಯದಲ್ಲಿಡ ತಕ್ಕದ್ದು. ಸರಕುಗಳನ್ನು ಉತ್ಪನ್ನ ಮಾಡುವವರಿಗೆ ಕೇವಲ ವಾಡಿಕೆಯಾದ ಸಂಬಳವೂ, ಲಾಭವೂ, ಮಾತ್ರ ಬರುವಷ್ಟು ರಕಮಿಗಿಂತಲೂ ಸರಕುಗಳ ಕ್ರಯವು ಕೆಲವು ಸಾರಿ ಏರುವದು, ಕೆಲವು ಸಾರಿ ಇಳಿಯುವದು; ಇದೇ ಮೇರೆಗೆ, ಬೇರೆ ಬೇರೆ ತರದ ಶ್ರಮದ ಕ್ರಯವಾದರೂ, ಶ್ರಮದ ಬೇಡಿಕೆ, ಮತ್ತು ಶ್ರಮ ಮಾಡಲಪೇಕ್ಷಿಸುವ ಜನರ ಸಂಖ್ಯೆ, ಇವುಗಳ ಪ್ರಮಾಣದಂತೆ ನಿರ್ಣೈಸಲ್ಪಡುವ ಸರಾಸರಿಗಿಂತಲೂ ಕೆಲವು ಸಾರಿ ಏರುವದು, ಕೆಲವು ಸಾರಿ ಇಳಿಯುವದು.

**ಧಾರಣೆಗಳು ಏರುವದರಿಂದ ಸಂಬಳವು ಏರುವದೋ?**—ಧಾರಣೆಗಳು ಏರುವದರಿಂದ ಸಂಬಳವು ಏರುತ್ತದೆಂದು ಕೆಲವು ಸಾರಿ ಹೇಳುವದುಂಟು. ಸಂಬಳದ ಮೊಬಲಗಿಗೂ, ಸಂಬಳವನ್ನು ದೊರಕಿಸುವ ಜನರ ಸಂಖ್ಯೆಗೂ, ಇರುವ ಪ್ರಮಾಣವು ಇದ್ದ ಹಾಗೆಯೇ ಇದ್ದರೆ, ಯಾವ ಸಂಗತಿಯಿಂದಲೂ ಕೂಲಿಕಾರರ ಸ್ಥಿತಿಗತಿಯು ಸ್ಥಿರವಾಗಿ ನೆಟ್ಟಗಾಗಲರಿಯದೆಂಬುವದನ್ನು ತಿಳುಕೊಂಡವರಿಗೆ ಮಾತ್ರ ಈ ಮಾತಿನ ಅಭಿಪ್ರಾಯವು ಸರಿಯಾಗಿ ತಿಳಿಯುವದು; ಬೇರೆಯವರಿಗೆ ತಿಳಿಯಲಿಕ್ಕಿಲ್ಲ. ಈ ಸಂಗತಿಯನ್ನು ಲಕ್ಷ್ಯದಲ್ಲಿಟ್ಟು, ಧಾರಣೆಗಳು ಏರುವದರಿಂದ ಸಂಬಳವು ಏರುತ್ತದೆಂಬ ಮಾತಿನ ಕೆಲ ಉದಾಹರಣಗಳನ್ನೂ, ಧಾರಣೆಗಳು ಇಳಿಯುವದರಿಂದ ಸಂಬಳವು ಇಳಿಯುತ್ತದೆಂಬ ಮಾತಿನ ಕೆಲ ಉದಾಹರಣಗಳನ್ನೂ ಪರೀಕ್ಷಿಸಿ ನೋಡುವ. ಎಷ್ಟೋ ಪ್ರಸಕ್ತಿಗಳಲ್ಲಿ, ಧಾರಣೆಗಳು ಏರುವದರಿಂದ ಸಂಬಳದಲ್ಲಿ ಏನೇನು ಹೆಚ್ಚುಕಡಿಮೆಯಾಗುವದಿಲ್ಲ. ಪೂರೈಕೆಯನ್ನು ಹೆಚ್ಚಿಸುವದಕ್ಕೆ ಬರುವಂಥ ಸರಕುಗಳ ಕ್ರಯಗಳು, ಅವುಗಳನ್ನು ಉತ್ಪನ್ನ ಮಾಡುವ ಖರ್ಚನ್ನು ಅವಲಂಬಿಸಿರುವವು. ಉತ್ಪನ್ನ ಮಾಡುವ ಖರ್ಚಿನಲ್ಲಿ ಇರ ತಕ್ಕ ಬಾಬುಗಳು ಮೂರು: ಶ್ರಮ, ಮಿತಭೋಗ, ಲುಕಸಾನಿನ ಭಯ, ಎಂಬಿವು. ಖರ್ಚಿನ ಈ ಮೂರು ಬಾಬುಗಳನ್ನು ಕೈಕೊಳ್ಳುವವರು ತಮಗೆ ಆದಷ್ಟು ಹೆಚ್ಚು ಪ್ರತಿಫಲ ದೊರಿಯ. ಬೇಕೆಂದು ಅಪೇಕ್ಷಿಸುವದು ಸಹಜವಾದದ್ದು. ಆ ಕಾರಣ, ಯಾವದೊಂದು ಸರಕಿನ ಕ್ರಯದಿಂದ ವಾಡಿಕೆಯಾದ

ದರದ ಸಂಬಳವೂ, ಲಾಭವೂ ಹುಟ್ಟಲಿಕ್ಕೇ ಬೇಕು. ಆ ಸರಕನ್ನು ಹುಟ್ಟಿಸುವದರಲ್ಲಿ ಶ್ರಮವೂ, ಮಿತಭೋಗವೂ, ಲುಕಸಾನಿನ ಭಯವೂ ಹೆಚ್ಚು ಇದ್ದದ್ದಾದರೆ, ಅದರ ಕ್ರಯವು ಏರಲಿಕ್ಕೇ ಬೇಕು; ಅಥವಾ, ಯಾವ ಕಾರಣದಿಂದಾದರೂ ಆ ಸರಕನ್ನು ಉತ್ಪನ್ನ ಮಾಡುವವರು ತಮ್ಮ ದುಡತಕ್ಕೆ ಹೆಚ್ಚು ಪ್ರತಿಫಲ ದೊರಕಿಸ ಹತ್ತಿದರೂ, ಅದರ ಕ್ರಯ ಏರ ಬೇಕಾಗುವದು. ಸರಕು ಹುಟ್ಟಿಸುವದಕ್ಕೆ ಹೆಚ್ಚು ಶ್ರಮವೂ, ಮಿತಭೋಗವೂ, ಲುಕಸಾನಿನ ಭಯವೂ ಬೇಕಾಗುವ ಮೊದಲನೆ ಪ್ರಸಕ್ತಿಯಲ್ಲಿ ಬಂಡವಲಕ್ಕೆ ಬರುವ ಲಾಭವಾಗಲಿ, ಶ್ರಮದ ಸಂಬಳವಾಗಲಿ, ಏನೂ ಹೆಚ್ಚು ದೊರಿಯದೆ, ಸರಕಿನ ಕ್ರಯವನ್ನು ಮಾತ್ರ ಅವಶ್ಯವಾಗಿ ಏರಿಸ ಬೇಕಾಗುವದು. ಹಾಗೂ, ಯಾವದೊಂದು ಸರಕಿನ ಮೇಲೆ ಕಪ್ಪವನ್ನು ಕೂಡ್ರಿಸುವದರಿಂದಲೂ ಕೂಡ, ಸಂಬಳವು ಹೆಚ್ಚಾಗದೆ ಸರಕಿನ ಕ್ರಯ ಏರ ಬಹುದು ಆದರೆ ಕೆಲವು ಪ್ರಸಕ್ತಿಗಳಲ್ಲಿ ಮಾತ್ರ, ಕ್ರಯಗಳು ಏರುವದರಿಂದ ಕೆಲವು ಕಾಲ ಪರ್ಯಂತರ ಸಂಬಳ ಏರುವದು. ನೂಲಿನ ಬಟ್ಟೆಗಳಿಗೆ ಬಹಳ ಬೇಡಿಕೆಯುಂಟಾಗಿದೆಂದು ಕಲ್ಪಿಸಿರಿ. ಹೀಗಾದಾಗ ಕೆಲವು ಕಾಲ ಪರ್ಯಂತರ ಬೇಡಿಕೆ ಪೂರೈಕೆಗಳ ಸಮೀಕರಣವು, ಆ ಬಟ್ಟೆಗಳ ಕ್ರಯ ಏರುವದರಿಂದ ಆಗುವದು. ಈ ಪ್ರಕಾರ ಏರಿದ ಧಾರಣೆಯಿಂದ ಕಾರಖಾನೆಯವರಿಗೆ ಒಂದು ವೇಳೆ ವಿಲಕ್ಷಣವಾಗಿ ಬಹಳ ಲಾಭ ದೊರಿಯ ಬಹುದು; ಮತ್ತು ಈ ಸಂಗತಿಯಿಂದ ನೂಲಿನ ಬಟ್ಟೆಗಳ ಪೂರೈಕೆಯು ಬಹಳವಾಗಿ ಹೆಚ್ಚುವದು; ಈ ಹೆಚ್ಚು ಪೂರೈಕೆಗೋಸ್ಕರ ಹೊಸ ಬಂಡವಲನ್ನು ಉಪಯೋಗಿಸ ಬೇಕಾಗುವದು; ಆಗ ಕಾರಖಾನೆಯವರು ವಸ್ತ್ರಗಳನ್ನು ನೇಯುವ ಹೊಸ ಕಾರಖಾನೆಗಳನ್ನು ಕಟ್ಟಿಸ ಬಹುದು; ಹೊಸ ಬಂಡವಲ ಹಾಕಿ ಯಂತ್ರಗಳನ್ನು ಕೊಳ್ಳ ಬಹುದು; ಆ ಯಂತ್ರಗಳನ್ನು ನಡಿಸುವದಕ್ಕೆ ಹೆಚ್ಚು ಕೂಲಿಕಾರರು ಬೇಕಾಗುವರು; ಈ ಪ್ರಕಾರ ಬೆಳೆದ ಶ್ರಮದ ಬೇಡಿಕೆಯಿಂದ ಸಂಬಳವು ಏರುವದು. ಈ ಪ್ರಸಕ್ತಿಯಲ್ಲಿ ಮಾತ್ರ, ಧಾರಣೆಗಳ ಏರುವಿಕೆಯಿಂದ ಸಂಬಳವು ಏರುವದು ಸರಿ. ಆದರೆ ಈ ಪ್ರಕಾರ ಧಾರಣೆಗಳೂ ಸಂಬಳವೂ ಏರಲು, ಬೇರೆ ಕಾರಖಾನೆಯವರೂ ಕೂಲಿಯವರೂ ಸ್ಪರ್ಧೆ ಮಾಡಲಾರಂಭಿಸುವರು. ಯಾಕಂದರೆ, ನೂಲಿನ ವಸ್ತ್ರಗಳ ಕಾರಖಾನೆಗಳಲ್ಲಿ ದೊರಿಯುವ ಹೆಚ್ಚು ಲಾಭವನ್ನೂ, ಸಂಬಳವನ್ನೂ, ಅವರು ತಾವೂ ಸಂಪಾದಿಸ ಬೇಕೆಂದು ಹವಣಿಸುವದು ಸಹಜವಾಗಿರುವದು. ಈ ಪ್ರಕಾರ ಬೇರೆ ಸಾವುಕಾರರ ಮೇಲಾಟದಿಂದ ಸರಕುಗಳ ಉತ್ಪನ್ನವು ಮತ್ತಿಷ್ಟು ಬೆಳಿಯುವದು. ಬೇರೆ ಉದ್ಯೋಗಗಳೊಳಗಿನ ಕೂಲಿಕಾರರೂ ಈ ಉದ್ಯೋಗದಲ್ಲಿ ಶೇರ

ಬೇಕೆಂದು ಹವಣಿಸುವದರಿಂದ ಶ್ರಮದ ಪೂರೈಕೆಯು ಬಹಳವಾಗಿ ಹೆಚ್ಚುವದು. ಆಗ, ನೂಲಿನ ವಸ್ತ್ರಗಳ ಪೂರೈಕೆ ಹೆಚ್ಚಾದದರಿಂದ ಅವುಗಳ ಧಾರಣೆಯು ತನ್ನ ಪೂರ್ವಸ್ಥಿತಿಗೆ ಬರುವ ಕ್ರಮವನ್ನು ಹಿಡಿಯುವದು; ಒಂದು ವೇಳೆ ಈ ಧಾರಣೆಯು ಇಳಿಯುತ್ತಾ, ಇಳಿಯುತ್ತಾ, ಕಡೆಗೆ ಆ ಉದ್ಯೋಗದಲ್ಲಿ ಮೊದಲು ವಾಡಿಕೆಯಾಗಿ ದೊರಿಯುತ್ತಿದ್ದಷ್ಟು ಸಂಬಳ, ಹಾಗೂ ಲಾಭ ಬರುವದಕ್ಕೆ ಅವಶ್ಯವಾದ ಧಾರಣೆಗಿಂತಲೂ ಇಳಿಯ ಬಹುದು. ಇವೆರಡೂ ಪ್ರಸಕ್ತಿಗಳಲ್ಲಿ, ಧಾರಣೆ ಇಳಿದ ಮಾನದಿಂದ ಸಂಬಳ ಲಾಭಗಳೆರಡೂ ಇಳಿಯಲೇ ಬೇಕು. ಸಂಬಳ ಇಳಿಯುವ ಬಗೆಯನ್ನು ಈ ಪ್ರಕಾರ ವರ್ಣಿಸ ಬಹುದು:—ಸರಕಿನ ಉತ್ಪಾದನಕ್ಕೆ ಪ್ರತಿಬಂಧವಾಗುತ್ತದೆ; ಕಾರಖಾನೆಯವರಿಗೆ ವಿಲಕ್ಷಣವಾಗಿ ಹೆಚ್ಚು ಲಾಭ ದೊರಿಯುವದು ಕಟ್ಟಾಗುತ್ತದೆ; ಒಂದು ವೇಳೆ ಅವರಿಗೆ ವಾಡಿಕೆಯಾದ ದರಕ್ಕಿಂತಲೂ ಕಡಿಮೆ ಲಾಭ ಬಂದರೂ ಬರಬಹುದು. ಆದಕಾರಣ ಅವರು ಕೈಲಾದ ಮಟ್ಟಿಗೆ ಸರಕಿನ ಪೂರೈಕೆಯನ್ನು ಕಡಿಮೆ ಮಾಡುವದಕ್ಕೆ ಪ್ರಯತ್ನ ಮಾಡುವರು; ಕಾರಖಾನೆಗಳನ್ನು ಬೆಳಿಸರು; ಕೂಲಿಕಾರರನ್ನೆಲ್ಲ ಬಹುತರ ಒಪ್ಪತ್ತು ಮಾತ್ರ ದುಡಿಸಿಕೊಳುವರು. ಹೀಗಾಗಲಾಗಿ ಶ್ರಮದ ಸಂಬಳದ ಮೇಲೆ ಉಂಟಾಗುವ ಪರಿಣಾಮವನ್ನು ಹೇಳತಕ್ಕ ಅವಶ್ಯವಿಲ್ಲ, ಮೇಲೆಯೇ ಕಾಣಿಸುತ್ತದೆ. ಮೊದಲು ಪೂರೈಕೆ ಬೆಳೆದಾಗ ಏರಿದ ಸಂಬಳ ನೋಡಿ, ಅದರಲ್ಲಿ ತಮಗೂ ಪಾಲು ಶಿಕ್ಕಬೇಕೆಂದು ಬಹಳ ಜನ ಕೆಲಸಗಾರರು ಹವಣಿಸಿ ಬಂದರೆಂದು ಕಲ್ಪಿಸಿದ್ದೇವೆ. ಆ ಕಾರಣ, ವ್ಯಾಪಾರವು ಮಂದವಾದ್ದರಿಂದ ಕಾರಖಾನೆಯವರು ಸರಕುಗಳನ್ನು ಕಡಿಮೆ ಹುಟ್ಟಿಸ ಬೇಕೆಂದು ಯತ್ನಿಸುವ ಕಾಲಕ್ಕೆ ಕೆಲಸ ಶಿಕ್ಕ ಬೇಕೆಂದು ಹವಣಿಸುವ ಕೂಲಿಕಾರರ ಸಂಖ್ಯೆಯು ಬಹಳವಾಗಿ ವೃದ್ಧಿಯಾಗಿರುವದು. ಈ ಕಾರಣಗಳಿಂದ ಸಂಬಳವು ಇಳಿಯುವದೆಂಬುವಲ್ಲಿ ಸಂದೇಹವೇ ಇಲ್ಲ. ಆದರೆ, ಇದೇ ಸಂಧಿಯಲ್ಲಿ, ತಮ್ಮ ಸಂಬಳ ಕಡಿಮೆಯಾಗ ಬಾರದೆಂದು ಕೂಲಿಕಾರರು ಕಟ್ಟು ಮಾಡಿ, ಕಡಿಮೆ ಸಂಬಳಕ್ಕೆ ಒಪ್ಪಿಕೊಳ್ಳದೆ ಹೋದರೆ, ಸಾವುಕಾರರಿಗೆ ವಾಡಿಕೆಯಾದ ದರಕ್ಕಿಂತಲೂ ಕಡಿಮೆ ಲಾಭ ಬರುತ್ತಿದ್ದಲ್ಲಿ, ತಮ್ಮ ಕಾರಖಾನೆಗಳನ್ನು ಮುಚ್ಚುವದೇ ಕಾರಖಾನೆಯವರಿಗೆ ಹಿತಕರವಾಗುವದು ಹೀಗಾಗಲು ಸಾವಿರಾರು ಕೂಲಿಕಾರರು ಕೆಲಸವಿಲ್ಲದೆ ಕೂಡ್ರ ಬೇಕಾಗುವದು. ಈ ಮೇರೆಗೆ, ಏರಿದ ಧಾರಣೆಗಳಿಂದ ಸಂಬಳದ ಮೇಲೆ ಆಗುವ ಕ್ಷಣಿಕ ಪರಿಣಾಮವನ್ನು ಸ್ಪಷ್ಟೀಕರಿಸುವದಕ್ಕಾಗಿ ಹೇಳಿದ ಈ ಉದಾಹರಣವು, ಒಂದು ವೇಳೆ ತೀರ ಅಂತ್ಯದ ಪರಿಣಾಮವನ್ನು ತೋರಿಸುವದಾಗಿರ ಬಹುದು. ಆದರೂ ಕೂಲಿಕಾರರೊಳಗೆ ಸ್ಪರ್ಧೆಯು ನಿರಂ

ಕುಶವಾಗಿ ನಡೆಯುವಂಥ ಯಾವತ್ತು ಪ್ರಸಕ್ತಿಗಳಲ್ಲಿ, ಅತಿಶಯ ಹೆಚ್ಚು ಸಂಬಳ ದೊರೆಯ ಹತ್ತಿದ ಕೂಡ್ಲೆ, ಕೂಲಿಕಾರರ ಪೂರೈಕೆ ನಿಶ್ಚಯವಾಗಿ ಹೆಚ್ಚುವದು. ಅದರಿಂದ ತಾತ್ಕಾಲಕ್ಕೇ ಆಗಲಿ, ಅಥವಾ ಸ್ವಲ್ಪ ಅವಕಾಶದಿಂದಲೇ ಆಗಲಿ, ಸಂಬಳವು ಪೂರ್ವಸ್ಥಿತಿಗೆ ಇಳಿಯುವದು. ಈ ದೃಷ್ಟಾಂತವು ಹಿಂದಿನ ಭಾಗದಲ್ಲಿ ವಿವರಿಸಿದ ಬೇಡಿಕೆ ಪೂರೈಕೆಗಳ ಸಮೀಕರಣದ ತತ್ವವನ್ನೇ ವ್ಯಕ್ತಪಡಿಸುತ್ತದೆ. ಶ್ರಮದ ಬೇಡಿಕೆ ಶ್ರಮದ ಪೂರೈಕೆಗಿಂತಲೂ ಹೆಚ್ಚಾಗಲಾಗಿ, ಬೇಡಿಕೆ ಪೂರೈಕೆಗಳ ಸಮೀಕರಣ ಉಂಟಾಗ ಬೇಕಾದರೆ, ಶ್ರಮದ ಕ್ರಯವು (ಅಂದರೆ, ಸಂಬಳವು) ಏರುವದು. ಸಂಬಳ ಏರಲಾಗಿ, ಶ್ರಮದ ಪೂರೈಕೆಯು ವೃದ್ಧಿಯಾಗುವದು. ಅಂತ್ಯದಲ್ಲಿ, ಸಂಬಳವು ಕೆಲಮಟ್ಟಿಗೆ ಇಳಿಯುವದರಿಂದ ಶ್ರಮದ ಬೇಡಿಕೆ ಪೂರೈಕೆಗಳು ಒಂದಕ್ಕೊಂದು ಸಮಾನವಾಗುವವು. ಧಾರಣೆಗಳು ಬಹಳ ಏರುವದರಿಂದ ಸಂಬಳದ ಮೇಲೆ ಉಂಟಾಗುವ ಕಾರ್ಯವನ್ನು ಸ್ಪಷ್ಟೀಕರಿಸುವದಕ್ಕೆ, ಸನ್ ೧೮೭೨ರಿಂದ ಸನ್ ೧೮೭೪ರ ವರೆಗೆ ಕಲ್ಲಿದ್ದಲಿಯ ಧಾರಣೆ ಏರಿದ್ದರಿಂದ, ಕಲ್ಲಿದ್ದಲಿಯ ಕಣಿಗಳಲ್ಲಿ ಕೆಲಸ ಮಾಡುವವರ ಸಂಬಳವು ಏರಿದ ಉದಾಹರಣವನ್ನು ತಕ್ಕೊಳ್ಳ ಬಹುದು. ಈ ಉದಾಹರಣದಲ್ಲಿ ಕೂಲಿಕಾರರಿಗೆ ಶಿಕ್ಕ ತಕ್ಕ ಯಾವತ್ತು ಫಲವು ಶಿಕ್ಕಿತು. ಯಾಕಂದರೆ, ಕಲ್ಲಿದ್ದಲಿಯ ಕಣಿಗಳಲ್ಲಿ ಕೆಲಸ ಮಾಡುವ ಅಭ್ಯಾಸವಿಲ್ಲದ ಹೊಸ ಕೂಲಿಕಾರರು, ಆ ಕೆಲಸದಲ್ಲಿದ್ದ ಕೂಲಿಕಾರರ ಕೂಡ ಮೇಲಾಟ ಮಾಡಿ, ಅವರ ಸಂಬಳವನ್ನು ಇಳಿಸುವ ಹಾಗಿದ್ದಿಲ್ಲ. ಆದ್ದರಿಂದ, ಕಣಿಗಳಲ್ಲಿ ಕೆಲಸ ಮಾಡುವ ಕೂಲಿಕಾರರಿಗೆ ಆ ಕೆಲಸದ ಗುತ್ತೇ ದೊರೆದಂತೆ ಆಗಿ, ಅವರು ಬೇಕಾದಷ್ಟು ಹೆಚ್ಚು ಸಂಬಳವನ್ನು ಸಂಪಾದಿಸುವದಕ್ಕೆ ಸಮರ್ಥರಾದರು. ಹೊಸ ಕೂಲಿಕಾರರ ಮೇಲಾಟದ ಅಂಜಿಕೆ ಇಲ್ಲದ್ದರಿಂದ ಅವರಿಗೆ ಉಂಟಾದ ಮತ್ತೊಂದು ಪ್ರಯೋಜನವೇನಂದರೆ, ಅವರೆಲ್ಲರೂ ಕೂಡಿ ಒಕ್ಕಟ್ಟು ಮಾಡಿ, ಪ್ರತಿಯೊಬ್ಬನು ಒಂದು ವಾರಕ್ಕೆ ಇಷ್ಟೇ ಕಲ್ಲಿದ್ದಲಿಯನ್ನು ತೆಗಿಯ ಬೇಕು, ಹೆಚ್ಚು ತೆಗಿಯ ಬಾರದು, ಎಂದು ನಿರ್ಣೈಸಿ, ಕೆಲಕಾಲದ ಪರ್ಯಂತರ ಕಲ್ಲಿದ್ದಲಿಯ ಧಾರಣೆ ಇಳಿಯದ ಹಾಗೆ ಮಾಡಿದರು. ಆ ಕಾರಣ, ಈ ಪ್ರಸಕ್ತಿಯಲ್ಲಿ ಕೂಲಿಕಾರರು ತಮಗೆ ದೊರೆದ ಸಂಧಿಯನ್ನು ಸಾಧಿಸಿ, ತಮಗಾಗ ತಕ್ಕ ಯಾವತ್ತು ಲಾಭವನ್ನು ಮಾಡಿಕೊಂಡರೆಂದು ಹೇಳ ಬಹುದು.

**ಮೇಲಾಟವು ಚನ್ನಾಗಿ ನಡೆಯುವ ಸ್ಥಳದಲ್ಲಿ, ಯಾವದೊಂದು ಉದ್ಯೋಗವು ಮುಂದವಾಗುವದರಿಂದ ಸಂಬಳದ ಮೇಲೆ ಆಗುವ ಪರಿಣಾಮವು ಸ್ವಲ್ಪಕಾಲ ಮಾತ್ರ ನಿಲ್ಲುವದು.**—ಸಂಬಳವು ವಾಡಿಕೆಯಾದ ದರಕ್ಕಿಂತಲೂ

ಕಡಿಮೆಯಾಗಿಯೂ, ವ್ಯಾಪಾರವು ಮಂದವಾಗಿಯೂ ಇರಲು, ಈ ಸಂಗತಿಗಳೇ ಸಂಬಳವನ್ನೂ, ಲಾಭವನ್ನೂ, ಮೊದಲಿನ ಸ್ವಾಭಾವಿಕ ಸ್ಥಿತಿಗೆ ತರುವದಕ್ಕೆ ಕಾರಣವಾಗುವವು. ಯಾಕಂದರೆ, ಕಾರಖಾನೆಯವರು ಬೇರೆ ಉದ್ಯೋಗಗಳಿಗಿಂತಲೂ ಈ ಉದ್ಯೋಗದಲ್ಲಿ ಲುಕಸಾನು ಮಾಡಿಕೊಂಡು, ತಮ್ಮ ಉದ್ಯೋಗವನ್ನು ಹಾಗೆಯೇ ಎಂದಿಗೂ ನಡಿಸರು. ಮತ್ತು ಕೌಶಲ್ಯವುಳ್ಳ ಕೂಲಿಕಾರರಿಗೆ ಬೇರೆ ಉದ್ಯೋಗಗಳಲ್ಲಿ ಹೆಚ್ಚು ಸಂಬಳವು ದೊರಿಯುವ ಹಾಗೆ ಇರಲಾಗಿ, ಅವರು ಕಡಿಮೆ ಸಂಬಳ ಬರುವ ಉದ್ಯೋಗದಲ್ಲಿ ಎಂದಿಗೂ ನಿಲ್ಲರು. ಆದ್ದರಿಂದ, ಮಂದವಾದ ಉದ್ಯೋಗದೊಳಗಿನ ಬಂಡವಲದ ಪೂರೈಕೆಯೂ, ಶ್ರಮದ ಪೂರೈಕೆಯೂ ಕಡಿಮೆಯಾಗುವವು; ಸರಕಿನ ಉತ್ಪನ್ನವು ಕಡಿಮೆಯಾಗುವದು; ಸರಕಿನ ಪೂರೈಕೆ ಕಡಿಮೆಯಾದ್ದರಿಂದ ಧಾರಣೆಗಳು ಏರುವವು; ಹಾಗೂ ಸಂಬಳವು ಪೂರ್ವಸ್ಥಿತಿಗೆ ಬರುವದು.

**ಧರ್ಮಾರ್ಥವಾಗಿ ಮಾಡತಕ್ಕ ಸಹಾಯವನ್ನು ಅರ್ಥಶಾಸ್ತ್ರದ ನಿಯಮಗಳು ಸುಗಮವಾಗಿ ನಡಿಯುವ ಹಾಗೆ ಮಾಡಬೇಕಲ್ಲದೆ, ಅವುಗಳಿಗೆ ಪ್ರತಿಬಂಧವಾಗುವಂತೆ ಮಾಡಬಾರದು.**—ಯಾವದೊಂದು ಉದ್ಯೋಗವು ಬಹಳ ಮಂದವಾಗಿ, ಅದರೊಳಗಿನ ಸಂಬಳವೂ ಲಾಭವೂ ಬಹಳ ಇಳಿಯುವದರಿಂದ, ಎಷ್ಟೋ ಕೂಲಿಕಾರರ ಕೆಲಸ ತಪ್ಪಿ, ಅವರಿಗೆ ಬಹಳ ಕಷ್ಟವು ಬರುವದು. ಇಂಥ ಪ್ರಸಂಗದಲ್ಲಿ ಕೂಲಿಕಾರರೊಳಗಿನ ಸ್ಪರ್ಧೆಗೆ ಏನೂ ಅಡ್ಡಿ ಮಾಡದೆ ಅದನ್ನು ನಿರಾತಂಕವಾಗಿ ನಡಿಯಗೊಟ್ಟರೆ, ಎಷ್ಟೋ ಕೂಲಿಕಾರರು ಬೇರೆ ಉದ್ಯೋಗಗಳಲ್ಲಿಯೂ, ಬೇರೆ ಪ್ರದೇಶಗಳಲ್ಲಿಯೂ ಕೆಲಸ ದೊರಕಿಸುವರು. ಹಾಗೂ ಅದರಿಂದ ಜನರ ಧರ್ಮಾರ್ಥಸಹಾಯವಿಲ್ಲದೆ, ಹಾಗೂ ದರಿದ್ರಸಂರಕ್ಷಕ ಕರದ ಸಹಾಯವೂ ಇಲ್ಲದೆ, ಬಡ ಕೂಲಿಕಾರರ ಕಷ್ಟಗಳು ನೀಗುವವು. ಆದರೆ, ಇಂಥ ಅನೇಕ ಪ್ರಸಂಗಗಳಲ್ಲಿ, ಕೂಲಿಕಾರರಿಗೆ ಜನರ ಖಾಸಗಿ ಧರ್ಮಾದಾಯದಿಂದಾಗಲಿ, ದರಿದ್ರಸಂರಕ್ಷಕ ಕರದೊಳಗಿಂದಾಗಲಿ, ಸಹಾಯ ಶಿಕ್ಕುವದು. ಈ ಅವಿಚಾರಮೂಲಕವಾದ ಸಹಾಯದಿಂದ ಉಂಟಾಗುವ ದುಷ್ಟ ಪರಿಣಾಮವೇನಂದರೆ, ಅದರಿಂದ ಕೂಲಿಕಾರರಿಗೆ ಬೇರೆ ಉದ್ಯೋಗಗಳಲ್ಲಿ ಶೇರಿ, ಅಥವಾ ಬೇರೆ ಸ್ಥಳಗಳಿಗೆ ಹೋಗಿ ಕೆಲಸ ದೊರಕಿಸುವದಕ್ಕೆ ಉತ್ತೇಜನ ದೊರಿಯುವದಕ್ಕೆ ಬದಲಾಗಿ, ವ್ಯಾಪಾರವು ಮಂದವಾಗಿದ್ದ ಸ್ಥಳದಲ್ಲಿಯೇ ನೆಲ ಹಿಡಿದು ಕುಳಿತು, ಕಾಲಹರಣಮಾಡುವದಕ್ಕೆ ಉತ್ತೇಜನ ದೊರಿಯುತ್ತದೆ. ಉದಾಹರಣಾರ್ಥವಾಗಿ, ಇಂಗ್ಲಂಡದಲ್ಲಿ ಬೆಥನಲ್‌ಗ್ರೀನ ಎಂಬ ಪ್ರಾಂತದಲ್ಲಿ ಕೈಮಗ್ಗಗಳ ಮೇಲೆ ವಸ್ತ್ರಗ

ಳನ್ನು ನೇಯುವ ನೇಕಾರರು, ಎಷ್ಟೋ ವರ್ಷಗಳ ವರೆಗೆ ಉಗಿಯಂತ್ರಗಳಿಂದ ನಡಿಯುವ ಮಗ್ಗಗಳ ಕೂಡ ನಿರರ್ಥಕವಾಗಿ ಮೇಲಾಟ ನಡಿಸಿದ್ದರು. ಈ ಅಸಮಾನವಾದ ಮೇಲಾಟದಿಂದ ಸಹಜವಾಗಿಯೇ ಅವರ ಸಂಬಳವು ಬಹಳ ಕಡಿಮೆಯಾಗಿ, ಅವರೊಳಗೆ ಎಷ್ಟೋ ಜನರು ಕಡು ವಿಪತ್ತುಗಳನ್ನು ಅನುಭೋಗಿಸಿದರು. ಆಗ ಈ ಬಡ ಪ್ರಾಣಿಗಳಿಗೆ ಸಹಾಯ ಮಾಡತಕ್ಕ ಉತ್ಕೃಷ್ಟ ಉಪಾಯವು ಯಾವದಾಗಿತ್ತಂದರೆ, ಅವರ ಉದ್ಯೋಗದಲ್ಲಿ ಆದ ಬದಲು ಕ್ಷಣಿಕವಾದದ್ದಲ್ಲ, ಚಿರಕಾಲ ಹಾಗೇ ನಡಿಯುವಂಥಾದ್ದು; ಆದ್ದರಿಂದ ಅವರ ಮೇಲಾಟವು ನಿಃಷ್ಪ್ರಯೋಜನವಾದದ್ದು, ಎಂದು ಅವರಿಗೆ ಚನ್ನಾಗಿ ತಿಳಿಸಿ ಹೇಳಬೇಕಾಗಿತ್ತು. ಹಾಗೂ ಅವರಿಗೆ ಧರ್ಮಾರ್ಥವಾಗಿ ಮಾಡತಕ್ಕ ಸಹಾಯವನ್ನು, ಅವರು ಯಾವದಾದರೊಂದು ಹೊಸ ಉದ್ಯೋಗವನ್ನು ಕಲಿಯುವದಕ್ಕಾಗಲಿ, ಇಲ್ಲವೆ ಬೇರೆ ಯಾವದಾದರೊಂದು ಪ್ರದೇಶಕ್ಕೆ ಹೋಗುವದಕ್ಕಾಗಲಿ, ಮಾಡಬೇಕಾಗಿತ್ತು. ಈ ಉಪಾಯದಿಂದ ಅವರಿಗೆ ಬಹಳ ಹಿತ್ಲವಾಗುತ್ತಿತ್ತು.

ಇದೇ ಪ್ರಕಾರ ಆಯರ್ಲಂಡದ ಪಶ್ಚಿಮ ಭಾಗದ ಒಕ್ಕಲಿಗರು ತಮ್ಮ ಕೆಟ್ಟ ಕೊಳಚೆ ಭೂಮಿಗಳಲ್ಲಿ ಹ್ಯಾಗಾದರೂ ಜೀವಿಸಿಕೊಂಡು ಇರಲೆಂದು, ಅವರಿಗೆ ಬಟಾಟೆಗಳನ್ನೂ, ಹಿಟ್ಟನ್ನೂ ಪೂರೈಸಿ ಕೊಡುವವರೂ ಇದೇ ದೋಷಕ್ಕೆ ಪಾತ್ರರಾಗಿರುವರು. ಅವರಿಗೆ ನಿಜವಾದ ಹಿತವಾಗ ಬೇಕಾದರೆ, ಅವರು ಹೆಚ್ಚು ಉತ್ಪಾದಕ ಭೂಮಿಗಳಿದ್ದಲ್ಲಿಗೆ ಹೋಗಿ, ಅಲ್ಲಿ ತಮ್ಮ ಶ್ರಮದ ಉಪಯೋಗವನ್ನು ಮಾಡಿಕೊಳ್ಳುವದಕ್ಕೆ ಸಹಾಯ ಮಾಡುವದೇ ಯೋಗ್ಯವಾದ ಉಪಾಯವು.

ಕೂಲಿಕಾರರೊಳಗೆ ಮೇಲಾಟವು ನಿರಾತಂಕವಾಗಿ ನಡಿದದ್ದೇ ಆದರೆ, ಮಿತಿ ಮೀರಿ ಏರಿದ ಸಂಬಳವು ಇಳಿಯು ಹತ್ತುವದು; ಮತ್ತು ಸಂಬಳವು ಮಿತಿಮೀರಿ ಇಳಿದದ್ದಾದರೆ ಏರಹತ್ತುವದು. ಮೇಲಾಟದ ಕಾರ್ಯವು, ಸರಕುಗಳ ಧಾರಣೆಯನ್ನು ಕ್ರಮಗೊಳಿಸುವಲ್ಲಿ ನಡಿಯುವದಕ್ಕಿಂತಲೂ, ಬೇರೆಬೇರೆ ಸ್ಥಳಗಳಲ್ಲಿ ಶ್ರಮದ ಕ್ರಯವನ್ನು, ಅಂದರೆ ಸಂಬಳವನ್ನು ಸರಿಯಾಗಿ ಮಾಡುವಲ್ಲಿ ಹೆಚ್ಚು ಸಾವಕಾಶವಾಗಿ ನಡಿಯುವದು. ಉದಾಹರಣಾರ್ಥವಾಗಿ, ಧಾರವಾಡದಿಂದ ಮುಂಬಾಯಿಗೆ ಹೋಗುವ ಕಾಳಿಗೆ ಧಾರವಾಡದಲ್ಲಿ ಬಿದ್ದ ಧಾರಣೆಗೂ ಮುಂಬಾಯಿಯಲ್ಲಿ ಬರುವ ಧಾರಣೆಗೂ ನೋಡಿದರೆ, ಮುಂಬಾಯಿಯ ಧಾರಣೆಯು, ಧಾರವಾಡದಿಂದ ಮುಂಬಾಯಿಗೆ ಕಾಳು ವೈಯುವದಕ್ಕೆ ತಗಲುವ ಖರ್ಚಿಗಿಂತಲೂ ಎಂದಿಗೂ ಹೆಚ್ಚಾಗಿರುವದಿಲ್ಲ. ಆದರೆ ಮೇಲಾಟದಿಂದ, ಕಾಳು ಮುಂ

ತಾದವುಗಳ ಮೇಲೆ ಶೀಘ್ರ ಪರಿಣಾಮವಾದ ಹಾಗೆ, ಶ್ರಮದ ಕ್ರಯದ ಮೇಲೆ ಶೀಘ್ರ ಪರಿಣಾಮವಾಗುವದಿಲ್ಲ. ಕೂಲಿಕಾರನಿಗೆ, ತನ್ನ ಪ್ರಾಂತವನ್ನು ಬಿಟ್ಟು ನೆರೆಯ ಪ್ರಾಂತಕ್ಕೆ ಹೋದರೆ ತನಗೆ ವಾರಕ್ಕೆ ಒಂದು ರೂಪಾಯಿಯಂತೆ ಹೆಚ್ಚು ಸಂಬಳ ದೊರಿಯುವದೆಂದು ಗೊತ್ತಿದ್ದರೂ, ಅವನಿಗೆ ತನ್ನ ಕುಟುಂಬ, ತನ್ನ ದನ ಕರ ಮುಂತಾದವುಗಳನ್ನು ತಕ್ಕೊಂಡು ಅಲ್ಲಿಗೆ ಹೋಗುವಷ್ಟು ಖರ್ಚು ಮಾಡುವ ಸಾಮರ್ಥ್ಯವಿರುವದಿಲ್ಲ. ಇದಲ್ಲದೆ, ತಾನು ಹುಟ್ಟಿದಾರಭ್ಯ ಇದ್ದ ಊರನ್ನೂ, ಬಹು ದಿವಸದ ಇಷ್ಟಮಿತ್ರರನ್ನೂ ಅಗಲುವದಕ್ಕೆ ಅವನ ಮನಸು ಎಳಿಸಲಿಕ್ಕಿಲ್ಲ.

ಇಂಗ್ಲಂಡದಲ್ಲಿ ಒಕ್ಕಲತನ ಮಾಡುವ ಕೂಲಿಕಾರರೊಳಗೆ ತೀರ ಇತ್ತ ಲಾಗಿನ ಪರ್ಯಂತರದಲ್ಲೂ ಮೇಲಾಟವು ಬಹುತರ ನಡಿಯುತ್ತಿದ್ದಿಲ್ಲ.— ಕೂಲಿಕಾರರು ಹೆಚ್ಚು ಸಂಬಳಕ್ಕಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವದಕ್ಕೆ ಅಡ್ಡಿ ಮಾಡುವಂಥ ಈ ಬಗೆಯ ವಿಚಾರಗಳು ಇಂಗ್ಲಂಡದಲ್ಲಿ ಬೇಸಾಯದ ಕೂಲಿಕಾರರೊಳಗೆ ತೀರ ಇತ್ತಲಾಗಿನ ವರೆಗೆ ನೆಲೆಗೊಂಡಿದ್ದವು. ಅವರೊಳಗೆ ಮೂಢರಾದ ತೀರ ಸಾದಾ ಜನರೇ ವಿಶೇಷವಾಗಿದ್ದ ಕಾರಣ, ಎಷ್ಟೋ ಜನರು ತಾವು ಹುಟ್ಟಿದ ಹಳ್ಳಿಯಿಂದ ನಾಲ್ಕಾರು ಮೈಲು ಆಚೆಕಡೆಯ ಊರನ್ನು ಸಹ ಹುಟ್ಟಿದಾರಭ್ಯ ನೋಡಿದ್ದಿಲ್ಲ. ಸರ್ವಸಾಧಾರಣ ಓದ ಬರಹ ಕಲಿತವನಿಗೆ ಮಧ್ಯ ಆಫ್ರಿಕಾ ಖಂಡವು ಎಷ್ಟು ಅಪರಿಚಿತವಾಗಿಯೂ, ದುರ್ಗಮ ವಾಗಿಯೂ ತೋರುವದೋ, ಅದಕ್ಕೂ ಹೆಚ್ಚಾಗಿ ಈ ಜನರಿಗೆ ಮೂವತ್ತು ನಾಲ್ವತ್ತು ಹರದಾರಿಗಳ ಮೇಲಿನ ಊರುಗಳು ತೋರುವವು. ಆ ಕಾರಣ, ಸರಕುಗಳ ಕ್ರಯಕ್ಕಿಂತಲೂ, ಶ್ರಮದ ಕ್ರಯದ ಮೇಲೆ ಯಾವಾಗಲೂ ಸಾವಕಾ ಶವಾಗಿಯೇ ಕಾರ್ಯವನ್ನು ನಡಿಸುವಂಥ ಮೇಲಾಟದ ಕಾರ್ಯವು, ಒಕ್ಕಲತನ ಮಾಡುವ ಎಷ್ಟೋ ಪ್ರದೇಶಗಳಲ್ಲಿ ಬಹುತರ ಏನು ನಡಿಯುತ್ತಿದ್ದಿಲ್ಲ. ಹಿಂದೆ ಹೇಳಿದ ಮೇರೆಗೆ, ಈ ಸ್ಥಿತಿಯು ಈಗ ಕ್ರಮೇಣ ಬದಲಾಗುತ್ತಾ ನಡಿದದೆ. ಇಂ ಗ್ಲಂಡದಲ್ಲಿ ಸ್ವಲ್ಪ ಖರ್ಚಿನಿಂದ ಪ್ರಯಾಣ ಮಾಡಲಿಕ್ಕೆ ಬರುವಂಥ ಹೊಗೆಬಂ ಡಿಯ ಸಾಧನಗಳೂ, ಒಂದು ಪೇನ್ನಿನಲ್ಲಿ ಪತ್ರ ಕಳುಹಿಸಲಿಕ್ಕೆ ಬರುವ ಅಂಚೆಯ ಏರ್ಪಾಡುಗಳೂ ಉಂಟಾದದ್ದರಿಂದ, ಯಾವತ್ತು ಪ್ರದೇಶಗಳು ಒಂದಕ್ಕೊಂದು ಅತ್ಯಂತ ಸಮೀಪ ಬಂದ ಹಾಗೆ ಆಗಿವೆ. ಹ್ಯಾಗೂ ಒಕ್ಕಲತನ ಮಾಡುವ ಕೂಲಿ ಕಾರರು ಬೇರೆ ಕಸಬುದಾರರಂತೆಯೇ ಕಡಿಮೆ ಸಂಬಳ ದೊರಿಯುವ ಸ್ಥಳಗ ಳನ್ನು ಬಿಟ್ಟು, ಹೆಚ್ಚು ಸಂಬಳ ದೊರಿಯುವ ಸ್ಥಳಗಳಿಗೆ ಏನು ಸಂಕೋಚವಿಲ್ಲದೆ ಹೋಗ ಹತ್ತಿದ್ದಾರೆ.

ಇಂಗ್ಲಂಡದ ಬೇರೆ ಬೇರೆ ಪ್ರದೇಶಗಳಲ್ಲಿ ಒಳಗಡೆಯಲ್ಲಿ ಒಕ್ಕಲತನ ಮಾಡುವ ಕೂಲಿಕಾರರೊಳಗೆ ನಡಿದ ಕಟ್ಟುಗಳಿಂದುಂಟಾದ ಪರಿಣಾಮಗಳಲ್ಲಿ ಒಂದು ಪರಿಣಾಮವು ಯಾವದಂದರೆ, ಅವುಗಳಿಂದ ಎಷ್ಟೋ ಜನರು ಪರ ಊರುಗಳಿಗೂ, ಎಷ್ಟೋ ಜನರು ದೇಶಾಂತರಗಳಿಗೂ ಹೋದರು. ಹೆಚ್ಚು ಸಂಬಳ ದೊರಿಯುವಲ್ಲಿಗೆ ಹೋಗುವ ರೂಢಿಯು ಕ್ರಮೇಣ ಇಂಗ್ಲಂಡದಲ್ಲಿ ಯಾವತ್ತು ಕಡೆಯಲ್ಲಿ ಹಬ್ಬುಗೊಂಡು, ಒಕ್ಕಲತನ ಮಾಡುವ ಕೂಲಿಕಾರರಿಗೆ ತಮ್ಮ ಸ್ಥಿತಿಗತಿಯನ್ನು ಸುಧಾರಿಸುವದು ಅಸಂಭಾವ್ಯವಲ್ಲವೆಂಬ ಎಚ್ಚರಿಕೆ ಹುಟ್ಟಿ, ಪರ ಊರುಗಳಿಗೂ, ಪರದೇಶಗಳಿಗೂ ಹೋಗುವ ರೂಢಿಯು ಇನ್ನೂ ಬಹಳವಾಗುವದೆಂಬದಕ್ಕೆ ಏನು ಸಂದೇಹ ತೋರುವದಿಲ್ಲ.

**ಅಡಾಮ್‌ಸ್ಮಿಥನು ಹೇಳಿದ, ಬೇರೆ ಬೇರೆ ಉದ್ಯೋಗಗಳಲ್ಲಿ ದೊರಿಯುವ ಸಂಬಳಗಳಲ್ಲಿ ವ್ಯತ್ಯಾಸವನ್ನುಂಟು ಮಾಡುವಂಥ ಐದು ಕಾರಣಗಳು.**—ಯಾವತ್ತು ವರ್ಗದ ಕೂಲಿಕಾರರಲ್ಲಿ ಸ್ಪರ್ಧೆಯು ನಿರಂಕುಶವಾಗಿ ನಡಿಯಲು, ಒಂದೇ ತರದ ಕೆಲಸದ ಸಂಬಳವು ಬೇರೆ ಬೇರೆ ಪ್ರದೇಶಗಳಲ್ಲಿ ಎಷ್ಟು ಮಾತ್ರವೂ ಹೆಚ್ಚುಕಡಿಮೆಯಾಗದೆ ಒಂದೇ ಸಮನಾಗಿರುವದು. ಆದರೆ ಬೇರೆ ಬೇರೆ ಕಸಬುಗಳಲ್ಲಿ ದೊರಿಯುವ ಸಂಬಳಗಳೊಳಗಿನ ಕೆಲವು ವ್ಯತ್ಯಾಸಗಳು ಮಾತ್ರ, ಯಾವಾಗಲೂ ಸ್ಥಿರವಾಗಿ ನಿಲ್ಲುವಂಥವುಗಳಾಗಿವೆ. ನಾನಾ ತರದ ಉದ್ಯೋಗಗಳಲ್ಲಿ ಸಂಬಳದ ದರಗಳು ಭಿನ್ನವಾಗಿರುವದಕ್ಕೆ ಐದು ಕಾರಣಗಳುಂಟೆಂದು ಅಡಾಮ್‌ಸ್ಮಿಥ್ ಧೊರೆಯು ಹೇಳಿದ್ದಾನೆ. ಅವು ಯಾವವಂದರೆ:—

೧. ಉದ್ಯೋಗಗಳು ಹಿತಕರವಾಗಿರೋಣ, ಇಲ್ಲವೆ ಅಹಿತಕರವಾಗಿರೋಣ; ಸೊಗಸುಳ್ಳವಾಗಿರೋಣ, ಇಲ್ಲವೆ ಅಸಹ್ಯವಾಗಿರೋಣ.

೨. ಅವುಗಳನ್ನು ಕಲಿಯುವ ಸೌಲಭ್ಯ ಹಾಗೂ ಅಲ್ಪ ಖರ್ಚು, ಅಥವಾ ಶ್ರಮ ಹಾಗೂ ಭಾರಿ ಖರ್ಚು.

೩. ಅವುಗಳಲ್ಲಿ ಯಾವಾಗಲೂ ಕೆಲಸ ದೊರಿಯುವ ನಿಶ್ಚಿತತ್ವ, ಇಲ್ಲವೆ ಅನಿಶ್ಚಿತತ್ವ.

೪. ಆ ಉದ್ಯೋಗಗಳನ್ನು ಮಾಡುವವರಲ್ಲಿ ಇಡ ಬೇಕಾಗುವ ಸ್ವಲ್ಪ ವಿಶ್ವಾಸ, ಇಲ್ಲವೆ ಬಹಳ ವಿಶ್ವಾಸ.

೫. ಅವುಗಳಲ್ಲಿ ಮಾಡಿದ ಪರಿಶ್ರಮಗಳು ಸಫಲವಾಗುವ ಸಂಭವಾಸಂಭವಗಳು.

ಈ ಐದು ಕಾರಣಗಳಲ್ಲದೆ, ಒಂದು ಆರನೆ ಕಾರಣವಾದ್ದರೂ ಉಂಟು. ಅದು ಯಾವದಂದರೆ, ಬೇರೆ ಬೇರೆ ಕಸಬುಗಳ ಪ್ರಕಾರ, ಕ್ರಮವಾಗಿ ಕೂಲಿಕಾರರೊಳಗೆ ಮೇಲ್ತರದ ಕೂಲಿಕಾರರ, ಹಾಗೂ ಕೀಳ್ತರದ ಕೂಲಿಕಾರರ ಬೇರೆ ಬೇರೆ ವರ್ಗಗಳಾಗಿರುವವು. ಆದ್ದರಿಂದ, ಒಂದು ವರ್ಗದಲ್ಲಿ ಹುಟ್ಟಿ ಬೆಳೆದ ಕೂಲಿಕಾರನಿಗೆ, ಬೇರೆ ಯಾವದೊಂದು ವಿಶೇಷ ಹೆಚ್ಚಿನ ವರ್ಗದ ಕಸಬಿನಲ್ಲಿ ಶೇರುವದು ಸಾಧ್ಯವಾಗುವದಿಲ್ಲ. ಉದಾಹರಣಾರ್ಥವಾಗಿ, ಒಕ್ಕಲಿಗನ ಮಗನಿಗೆ ಸಾವುಕಾರನ ಕಾರಕೂನನ ಕೆಲಸವನ್ನು ದೊರಕಿಸುವದು ಸಾಧ್ಯವಾಗಿದ್ದಷ್ಟೇ, ಕಾರಕೂನನಿಗೆ ರಾಜ್ಯದ ಮುಖ್ಯ ಮಂತ್ರಿಯ ಕೆಲಸ ದೊರಕಿಸುವದು ಸಾಧ್ಯವಾಗಿರುವದು. ಈ ಮೇರೆಗೆ ಬೇರೆ ಬೇರೆ ವರ್ಗಗಳಲ್ಲಿ ಮೇಲಾಟವು ಮರ್ಯಾದಿತವಾಗಿರುವದು ಬೇರೆ ಬೇರೆ ಕಸಬುಗಳಲ್ಲಿ ಸಂಬಳದ ದರಗಳು ಹೆಚ್ಚುಕಡಿಮೆಯಾಗುವದಕ್ಕೆ ಆರನೆ ಕಾರಣವು.

ಕಣಿಗಳಲ್ಲಿ ಕೆಲಸ ಮಾಡುವ ಉದ್ಯೋಗವು, ಯಾವದೊಂದು ಉದ್ಯೋಗವು ಹಿತಕರವಾಗಿ, ಇಲ್ಲವೆ ಅಹಿತಕರವಾಗಿರುವದರಿಂದ ಆ ಉದ್ಯೋಗದೊಳಗಿನ ಸಂಬಳವು ಹೆಚ್ಚುಕಡಿಮೆಯಾಗುವ ರೀತಿಯನ್ನು ಚನ್ನಾಗಿ ತೋರಿಸುತ್ತದೆ. ಕಣಿಗಳ ಬುಡಕ್ಕೆ ಹೋಗಿ, ಅಲ್ಲಿ ಕತ್ತಲೆಯಲ್ಲಿಯೂ ಕೆಟ್ಟ ಹವೆಯಲ್ಲಿಯೂ ಕೆಲಸ ಮಾಡುವ ಕೂಲಿಕಾರರಿಗೆ, ಕಣಿಗಳ ಮೇಲ್ಗಡೆಯಲ್ಲಿ ಅಶುದ್ಧ ಧಾತುವನ್ನು ಸೋಸೋಣ, ತೊಳಿಯೋಣ ಮೊದಲಾದ ಕಡಿಮೆ ಗಂಡಾಂತರದ, ಮತ್ತು ಹೆಚ್ಚು ಹಿತಕರವಾದ ಕೆಲಸಗಳನ್ನು ಮಾಡುವವರಿಗಿಂತಲೂ ಬಹಳ ಹೆಚ್ಚು ಸಂಬಳ ದೊರಿಯುತ್ತದೆ. ಕಣಿಗಳೊಳಗಿನ ಕೆಟ್ಟ ಹವೆಯಿಂದಲೂ, ಮೇಲಿಂದ ಮೇಲೆ ಆಗುವ ಅಪಘಾತಗಳಿಂದಲೂ ಜೀವಕ್ಕೆ ಅಪಾಯವಾಗುವ ಸಂಭವವು ಬಹಳವಾಗಿರುವದರಿಂದ, ಹೆಚ್ಚು ಸಂಬಳ ದೊರಿದ ಹೊರ್ತು ಆ ಕೆಲಸಕ್ಕೆ ಯಾರೂ ಕೈ ಹಾಕಲಿಕ್ಕಿಲ್ಲ. ಉದಾಹರಣಾರ್ಥವಾಗಿ, ಕಲ್ಲಿದ್ದಲಿಯ ಕಣಿಗಳಲ್ಲಿ ದುಡಿಯುವ ಕೂಲಿಕಾರರಿಗೆ, ಅವರ ಪ್ರಾಂತದಲ್ಲಿ ವಾಡಿಕೆಯಾಗಿದ್ದ ಸಂಬಳವನ್ನು ಕೊಡುವದಲ್ಲದೆ, ಕಲ್ಲಿದ್ದಲಿಯ ಕಣಿಗಳ ಕೆಲಸದಂಥ ವಿಶೇಷ ಘಾತಕವಾದ ಕೆಲಸದಲ್ಲಿ ಶೇರುವದಕ್ಕೆ ಅವರಿಗೆ ಮನಸಾಗುವದಕ್ಕೆ ಸಾಕಾಗುವಷ್ಟು ಹೆಚ್ಚು ರಕಮು ಕೊಡ ಬೇಕಾಗುತ್ತದೆ. ಬೇರೆ ಯಾವತ್ತು ಸಂಗತಿಗಳು ಒಂದೇ ಸಮವಾಗಿದ್ದರೆ, ಯಾವದೊಂದು ಕಣಿಯು ಹೆಚ್ಚು ಘಾತಕವಾಗಿದ್ದ ಪ್ರಮಾಣದಿಂದ ಅದರಲ್ಲಿ ದುಡಿಯುವವರಿಗೆ ಹೆಚ್ಚು ಸಂಬಳ ಕೊಡಬೇಕಾಗುತ್ತದೆ.

"ಉದ್ಯೋಗಗಳು ಹಿತಕರವಾಗಿರೋಣ, ಇಲ್ಲವೆ ಅಹಿತಕರವಾಗಿರೋಣ"

ಎಂಬ ಸದರಿನ್ನ ಕೆಳಗೆ ಮರ್ಯಾದೆಯುಳ್ಳ, ಇಲ್ಲವೆ ಜನರ ತಿರಸ್ಕಾರಕ್ಕೂ, ಅಪ್ರೀತಿಗೂ ಒಳಗಾದ ಉದ್ಯೋಗಗಳ ಸಮಾವೇಶವೂ ಆಗ ಬಹುದು. ಇಂಗ್ಲಂಡದಲ್ಲಿ ದಂಡಿನ ಅಧಿಕಾರಿಗಳಿಗೂ ಧರ್ಮಾಧಿಕಾರಿಗಳಿಗೂ ವಾಡಿಕೆಯಾಗಿ ಬಹಳ ಕಡಿಮೆ ಸಂಬಳ ದೊರಿಯುವದು. ಆದರೂ, ಈ ಕೆಲಸಗಳಿಂದ ಜನರೊಳಗೆ ಮರ್ಯಾದೆಯೂ, ಪದವಿಯೂ ಉಂಟಾಗುವ ಕಾರಣ, ಎಷ್ಟೋ ಜನರು ಈ ಕೆಲಸಗಳಲ್ಲಿ ಉತ್ಸಾಹಪೂರ್ವಕವಾಗಿ ಶೇರುತ್ತಾರೆ. ಈ ಕೆಲಸಗಳಲ್ಲಿ ಸಣ್ಣ ಸಂಬಳಗಳು ದೊರಿಯುವದರಿಂದ ಆಗುವ ಲುಕಸಾನವು, ಅವುಗಳಿಂದ ದೊರಿಯುವ ಬಹುಮಾನದಿಂದ ತುಂಬಿ ಬರುವದು. ಇದಕ್ಕೆ ವಿಪರೀತವಾಗಿ, ಜನರ ತಿರಸ್ಕಾರಕ್ಕೂ, ಅವಹೇಳನೆಗೂ ಗುರಿಯಾದ ಕೆಲಸಗಳನ್ನು ಮಾಡುವವರಿಗೆ ಆಗುವ ಅಪಮಾನಕ್ಕೆ ಮೊಬದಲೆಯಾಗಿ, ಅವರಿಗೆ ಬಹಳ ಸಂಬಳ ದೊರಿಯುತ್ತದೆ. ಉದಾಹರಣಾರ್ಥವಾಗಿ, ಅಪರಾಧಿಗಳನ್ನು ಗಲ್ಲಿಗೆ ಹಾಕುವ ನೀಚವೆಂದೆಣಿಸಲ್ಪಟ್ಟ ಕೆಲಸಕ್ಕೆ ಬಹಳ ಸಂಬಳ ಕೊಟ್ಟ ಹೊರ್ತು ಯಾರೂ ಒಪ್ಪಿಕೊಳ್ಳುವದಿಲ್ಲ. ಇದರಂತೆಯೇ, ನಮ್ಮಲ್ಲಿ ಅಡಿಗೆ ಮಾಡುವದೂ, ನೀರು ಹೊರುವದೂ ಕೀಳು ಕೆಲಸಗಳೆಂದು ಎಣಿಸಲ್ಪಡುವವು. ಆದಕಾರಣ, ತಿಂಗಳಿಗೆ ೪ರೂಪಾಯಿಯ ಸಂಬಳಕ್ಕೆ ಚಲೋ ಕಾರಕೂನನು ಬರ ಬಹುದಾದರೂ, ಅಡಿಗೆ ನೀರಿನವರಿಗೆ ತಿಂಗಳಿಗೆ ೮ ರೂಪಾಯಿ ಕೊಟ್ಟು, ಅವರ ಮರ್ಜೀ ಕಾಯು ಬೇಕಾಗುತ್ತದೆ. ನೀರು ಹೊರುವ ಕೆಲಸಕ್ಕಿಂತಲೂ, ಭಿಕ್ಷಾವೃತ್ತಿಯು ಸ್ವಲ್ಪ ಹೆಚ್ಚು ಮರ್ಯಾದೆಯ ಉದ್ಯೋಗವೆಂದು ತಿಳಿಯಲ್ಪಡುವದರಿಂದ, ಎಷ್ಟೋ ಗಂಡಸರೂ ಹೆಂಗಸರೂ ಭಿಕ್ಷೆ ಬೇಡುವದಕ್ಕೆ ಎಷ್ಟು ಮಾತ್ರವೂ ಸಂಕೋಚ ಪಡುವದಿಲ್ಲ; ಆದರೆ ನೀರು ಹೊರುವ ಕೆಲಸವನ್ನು ಮಾತ್ರ ಸರ್ವಥಾ ಮಾಡರು.

ಕಾರಕೂನನಿಗಿಂತ ಅಡಿಗೆಯವನಿಗೆ ಹೆಚ್ಚು ಸಂಬಳ ದೊರಿಯುವದಕ್ಕೆ ಅಡಾಮ್‌ಸ್ಮಿಥನು ಹೇಳಿದ ಕಾರಣಗಳಲ್ಲಿ ಎರಡನೆ ಕಾರಣವೂ ಬಲವುಳ್ಳ ಕಾರಣವಾಗಿರುವದು. ಯಾವದೊಂದು ಉದ್ಯೋಗದಲ್ಲಿ ದೊರಿಯುವ ಸಂಬಳವು, ಆ ಉದ್ಯೋಗವನ್ನು ಕಲಿಯುವದು ಸುಲಭವಾದದ್ದೂ ಸ್ವಲ್ಪ ಖರ್ಚಿನದೂ, ಇಲ್ಲವೆ ಶ್ರಮ ಸಾಧ್ಯವಾದದ್ದೂ ಬಹಳ ಖರ್ಚಿನದೂ, ಆಗಿದ್ದ ಮೇರೆಗೆ ಹೆಚ್ಚುಕಡಿಮೆಯಾಗಿ ದೊರಿಯುವ ಕಾರಣ, ಕಾರಕೂನನಿಗಿಂತಲೂ ಅಡಿಗೆಯವನಿಗೆ ಹೆಚ್ಚು ಸಂಬಳ ದೊರಿಯುವದು ಸಹಜವಾದದ್ದು. ಸರ್ವಸಾಧಾರಣ ಓದಬರಹ ಬಲ್ಲವನಿಗೆ ಒಂದು ದಿವಸ ಮೊದಲು ಸೂಚನೆ ಕೊಟ್ಟರೆ, ಕಾರಕೂನಿಯ ಕೆಲಸ ಮಾಡುವದಕ್ಕೆ ಯೋಗ್ಯನಾಗ ಬಹುದು. ಆದರೆ, ಉತ್ಕೃಷ್ಟ ಅಡಿಗೆ ಮಾಡಲಿಕ್ಕೆ

ಐದು ವರ್ಷ ಕಲಿತರೂ ಚನ್ನಾಗಿ ಬರದು, ಒಂದು ವೇಳೆ ಕಡ್ಡೆತನಕಾದರೂ ಬರಲಿಕ್ಕಿಲ್ಲ. ಕಾರಕೂನನ ಕೆಲಸಕ್ಕೆ ಇಷ್ಟು ಶ್ರಮವೂ ಬೇಕಾಗುವದಿಲ್ಲ, ಇಷ್ಟು ಖರ್ಚೂ ಬೇಕಾಗುವದಿಲ್ಲ.

ಎಷ್ಟೋ ಉದ್ಯೋಗಗಳಲ್ಲಿ ಬೇಕಾಗುವ ಕುಶಲತೆ ಬರಬೇಕಾದರೆ, ಬಹಳ ದಿವಸ ಆ ಉದ್ಯೋಗಗಳನ್ನು ಕಲಿಯ ಬೇಕಾಗುತ್ತದೆ. ಬೇರೆ ಎಷ್ಟೋ ಉದ್ಯೋಗ ಗಳು ಬಹಳ ದಿವಸ ಮಾಡಿದವರಿಗೆ ಬಂದಷ್ಟೇ ಚನ್ನಾಗಿ, ಹೊಸಬರಿಗೂ ಬರುತ್ತವೆ. ಈ ಭೇದಕ್ಕೆ ಸರಿಯಾಗಿ ಆಯಾ ಉದ್ಯೋಗಗಳಲ್ಲಿ ಹೆಚ್ಚು ಕಡಿಮೆ ದರದಿಂದ ಸಂ ಬಳ ದೊರಿಯುವದು. ಹಡಗಗಳನ್ನು ಕಟ್ಟುವ ಕೆಲಸ, ಕಾಜಿನ ಪಾತ್ರೆಗಳನ್ನು ಮಾ ಡುವ ಕೆಲಸ, ಗಡಿಯಾಲಗಳನ್ನು ಮಾಡುವ ಕೆಲಸ ಮುಂತಾದವುಗಳಲ್ಲಿ ಕೌಶ ಲ್ಯವು ಬರ ಬೇಕಾದರೆ, ಅವುಗಳನ್ನು ಎಷ್ಟೋ ವರ್ಷಗಳ ವರೆಗೆ ಕಲಿಯ ಬೇಕಾಗು ತ್ತದೆ. ಇಂಥ ಕೆಲಸಗಳನ್ನು ಕಲಿಯುವದಕ್ಕೆ ಪ್ರಾರಂಭ ಮಾಡಿದನಂತರ ಕೆಲವು ವರ್ಷಗಳ ವರೆಗೆ ಏನು ಸಂಬಳ ದೊರಿಯುವದಿಲ್ಲ. ಆದ್ದರಿಂದ ಇಂಥ ಉದ್ಯೋ ಗಗಳನ್ನು ಕಲಿಯುವಾಗ ಮುಂದಿನ ಲಾಭಕ್ಕೆ ದೃಷ್ಟಿಯನ್ನು ಕೊಟ್ಟು, ಬಹಳ ಹಣ ವೆಚ್ಚ ಮಾಡ ಬೇಕಾಗುವದು. ಈ ವೆಚ್ಚದ ಮೂಲಕವಾಗಿಯೂ, ಅವಶ್ಯವಾದ ಕೌಶಲ್ಯವನ್ನು ಸಂಪಾದಿಸುವ ಶ್ರಮಕ್ಕಾಗಿಯೂ, ಮುಂದೆ ಈ ಉದ್ಯೋಗವನ್ನು ಮಾಡುವವರಿಗೆ, ನಿರಾಯಾಸದಿಂದಲೂ ಅಲ್ಪ ಖರ್ಚಿನಿಂದಲೂ ಬರುವಂಥ ಕೆಲಸಗ ಳ ಸಂಬಳಕ್ಕಿಂತ ಹೆಚ್ಚು ಸಂಬಳ ದೊರಿಯುವದು. ಉದಾಹರಣಾರ್ಥವಾಗಿ, ಝಾ ಡಮಾಲಿಯ ಕೆಲಸಕ್ಕೂ, ಕಾರಕೂನಿಯ ಕೆಲಸಕ್ಕೂ ಬಹಳ ಶ್ರಮವೂ ಖರ್ಚೂ ಬೇಕಾಗುವದಿಲ್ಲ. ಝಾಡಮಾಲಿಯ ಕೆಲಸ ಮಾಡುವವನಿಗೆ ಒಂದು ಕಸಬರಿಗೆ ಇದ್ದರೆ ತೀರಿತು. ಕಾರಕೂನಿಯ ಕೆಲಸ ಮಾಡುವವನಿಗೆ ಓದಬರಹ ಬಂದರಾ ಯಿತು. ಆದಕಾರಣ, ಕುಶಲನಾದ ಶಿಲ್ಪಿಗನಿಗೆ ದೊರಿಯುವ ಸಂಬಳಕ್ಕಿಂತಲೂ ಇಂಥ ಕೆಲಸಗಳಲ್ಲಿ ಬಹಳ ಕಡಿಮೆ ಸಂಬಳ ದೊರಿಯುವದು ಸಹಜವಾದದ್ದು.

ಯಾವ ಉದ್ಯೋಗಗಳಲ್ಲಿ ಅವಶ್ಯವಾದ ಕುಶಲತೆಯು ಬರಬೇಕಾದರೆ, ಅಂಶತಃ ನೈಸರ್ಗಿಕ ಗುಣಗಳೂ, ಹಾಗೂ ಅಂಶತಃ ಬಹು ದಿವಸದ ಅಭ್ಯಾ ಸವೂ ಬೇಕಾಗುವವೋ, ಆ ಉದ್ಯೋಗಗಳಲ್ಲಿ ದೊರಿಯುವ ಸಂಬಳವು ಮುಖ್ಯ ವಾಗಿ ಸಂಪಾದನ ಶ್ರಮದಿಂದಲೇ ನಿರ್ಣೈಸಲ್ಪಡುವದು. ಉದಾಹರಣಾರ್ಥ ವಾಗಿ, ಒಳ್ಳೇ ಖ್ಯಾತಿಯನ್ನು ಪಡೆದ ಗಾಯಕರಿಗೆ ಆಗುವ ಸಂಪಾದನೆಗೆ, ಅವರು ಗಾಯನಕಲೆಯನ್ನು ಕಲಿಯುವದಕ್ಕೆ ಮಾಡಿದ ಶ್ರಮವು ಒಂದೇ ಕಾರಣವಲ್ಲ. ಒಬ್ಬ ಸರ್ವಸಾಧಾರಣ ಗಾಯಕನು ಕೂಡ ಗಾಯನವಿದ್ಯೆಯನ್ನು ಕಲಿಯು

ವಲ್ಲಿ ಅವರಷ್ಟೇ ಸಾಹಸವನ್ನೂ, ಖರ್ಚನ್ನೂ ಮಾಡಿರ ಬಹುದು. ಸರ್ವೋ ತ್ಕೃಷ್ಟ ಗಾಯನ ಮಾಡುವವರಿಗೆ ಹೆಚ್ಚು ಸಂಬಳ ದೊರಿಯುವದಕ್ಕೆ ಅವರ ಲ್ಲಿದ್ದ ಅಸಾಧಾರಣವಾದ ನೈಸರ್ಗಿಕ ಗುಣಗಳೇ ಕಾರಣವು. ಈ ನೈಸರ್ಗಿಕ ಗುಣಗಳ ಮೂಲಕವಾಗಿ ಅವರಿಗೆ ಉತ್ಕೃಷ್ಟ ಗಾಯನದ ಗುತ್ತೇ ದೊರಿದಿರು ವದೆಂದು ಹೇಳ ಬಹುದು. ಉತ್ಕೃಷ್ಟ ಕಂಠವುಳ್ಳವರ ಗಾಯನವನ್ನು ಕೇಳ ಲಪೇಕ್ಷಿಸುವವರು ಬಹಳವಾದ ಕಾರಣ, ಅವರ ಗಾಯನಕ್ಕೆ ಬಹಳ ಬೇಡಿಕೆ ಯುಂಟಾಗುವದು. ಈ ಬೇಡಿಕೆಯನ್ನು ಪೂರೈಸುವವರು ಅವರ ಹೊರ್ತು ಬೇರೆ ಜನರಿಲ್ಲ. ಆ ಕಾರಣ ಅವರ ಗಾಯನದ ಕ್ರಯ ಏರುವದು. ಇದೇ ಮಾತು ಗಡಿಯಾಲದೊಳಗಿನ ಕೆಲ ಸೂಕ್ಷ್ಮ ಕೆಲಸಗಳಿಗೆ ಬೇಕಾಗುವ ಹಸ್ತ ಕೌಶಲ್ಯದ ಬಗೆಯ ಕೆಲಸಗಳಿಗೂ ಸರಿ ಬೀಳುತ್ತದೆ.

ಯಾವದೊಂದು ಉದ್ಯೋಗದ ನಿಶ್ಚಿತತ್ವದಿಂದ, ಅಥವಾ ಅನಿಶ್ಚಿತತ್ವದಿಂದ, ಆ ಉದ್ಯೋಗದೊಳಗಿನ ಸಂಬಳದ ದರವು ಹೆಚ್ಚುಕಡಿಮೆಯಾಗುವದು. ಯಾವ ದೊಂದು ಉದ್ಯೋಗದಲ್ಲಿ ತನಗೆ ಹನ್ನೆರಡೂ ತಿಂಗಳು ಕೆಲಸ ದೊರಿಯುವದೆಂಬ ಭರವಸವಿದ್ದವನು ಕಡಿಮೆ ಸಂಬಳಕ್ಕೆ ಒಪ್ಪಿಕೊಳ್ಳುವನು. ವರ್ಷದ ಕರಾರಿ ನಿಂದ ಇಟ್ಟುಕೊಂಡ ಚಾಕರನಿಗಿಂತಲೂ, ತಿಂಗಳ ಪೂರ್ತೆ ಇಟ್ಟುಕೊಂಡ ಚಾಕ ರನಿಗೆ ಹೆಚ್ಚು ದರದಿಂದ ಸಂಬಳ ಕೊಡ ಬೇಕಾಗುತ್ತದೆ. ಯಾವದೊಂದು ಕೆಲ ಸವು ಮಳೆಗಾಲದ ನಾಲ್ಕು ತಿಂಗಳು ಬಿಟ್ಟು, ಉಳಿದ ಎಂಟು ತಿಂಗಳು ಮಾತ್ರ ನಡಿಯುವದಾದರೆ, ಆ ಕೆಲಸದಲ್ಲಿ ಎಂಟು ತಿಂಗಳು ದೊರಿಯುವ ಕೂಲಿಯು, ನಾಲ್ಕು ತಿಂಗಳು ಏನು ಕೂಲಿ ದೊರಿಯದ್ದರಿಂದ ಆಗುವ ಲುಕಸಾನು ತುಂಬಿ ಬರುವಷ್ಟು ಹೆಚ್ಚಾಗಿರ ಬೇಕು. ಇಲ್ಲದೆ ಇದ್ದರೆ, ಆ ಉದ್ಯೋಗದಲ್ಲಿ ಯಾರೂ ಸೇರಲಿಕ್ಕಿಲ್ಲ. ಮದ್ಯವನ್ನು ತೆಗೆಯುವ ಕೆಲಸ, ಉಪ್ಪಾರರ ಕೆಲಸ, ಹಡಗಗ ಳನ್ನು ಕಟ್ಟುವವರ ಹಾಗೂ ನಡಿಸುವವರ ಕೆಲಸ ಮುಂತಾದವುಗಳು ವರ್ಷದಲ್ಲಿ ಕೆಲವು ಕಾಲ ಮಾತ್ರ ನಡಿಯುವವಾದ್ದರಿಂದ, ಈ ಕೆಲಸಗಳು ಹನ್ನೆರಡು ತಿಂ ಗಳು ನಡಿದಿದ್ದರೆ ದೊರಿಯುವ ಸಂಬಳದ ದರಕ್ಕಿಂತಲೂ ಹೆಚ್ಚಿನ ದರದಿಂದ ಸಂ ಬಳ ದೊರಿಯುತ್ತದೆ.

ಯಾವದೊಂದು ಕೆಲಸವನ್ನು ಮಾಡುವವರ ಮೇಲೆ ಇಡಬೇಕಾದ ವಿಶ್ವಾ ಸದ ಮಾನದಿಂದಲೂ ಅವರಿಗೆ ಸಂಬಳವನ್ನು ಹೆಚ್ಚುಕಡಿಮೆಯಾಗಿ ಕೊಡ ಬೇಕಾಗುವದು. ಹೆಚ್ಚು ವಿಶ್ವಾಸವುಳ್ಳ ಚಾಕರರು ಬೇಕಾದರೆ, ಆ ಪ್ರಕಾರ ಹೆಚ್ಚು ಸಂಬಳ ಕೊಡ ಬೇಕಾಗುವದು. ಸಾವುಕಾರಿಕೆಯ ಉದ್ಯೋಗವನ್ನು

ಮಾಡುವವರೂ, ಹಣದ ಬಟವಡೆಯನ್ನು ಮಾಡುವವರೂ, ಮ್ಮುತ್ತು ರತ್ನಗಳ ವ್ಯವಹಾರ ಮಾಡುವವರ ಚಾಕರರೂ, ಉಗಿಯಂತ್ರಗಳನ್ನು ನಡಿಸುವವರೂ, ಹೊಗೆ ಬಂಡಿಯ ಮೇಲೆ ಪಹರೆ ಮಾಡುವ ಗಾರ್ಡರೂ, ಪೋಲೀಸರೂ, ಅಂಚೇ ಉದ್ಯೋಗಸ್ಥರೂ ಬಹಳ ವಿಶ್ವಾಸಕ್ಕೆ ಪಾತ್ರರಾದವರಿರ ಬೇಕಾಗುವದು. ಇಂಥ ಕೆಲಸಗಳನ್ನು ಕೊಡಬೇಕಾದರೆ, ತಮ್ಮ ಪ್ರಾಮಾಣಿಕತನವನ್ನೂ, ಸ್ಥಿರ ಬುದ್ಧಿಯನ್ನೂ ತೋರಿಸಿದವರಿಗೆ ಮಾತ್ರ ಕೊಡುವದುಂಟು. ಇಂಥವರ ಪ್ರಾಮಾಣಿಕತನವು ಚನ್ನಾಗಿ ತಿಳಿದನಂತರ, ಅವರು ಮಾಡುವ ಜವಾಬುದಾರಿಯ ಕೆಲಸಕ್ಕಾಗಿ ಅವರಿಗೆ ಹೆಚ್ಚು ಸಂಬಳ ದೊರಿಯುವದು ನ್ಯಾಯವಾದದ್ದು.

ಎಷ್ಟೋ ಉದ್ಯೋಗಗಳು ಸಫಲವಾಗುವಲ್ಲಿ ಏನು ಸಂದೇಹವಿರುವದಿಲ್ಲ. ಕೆಲವು ಕೆಲಸಗಳಿಗಂತು ಏನು ಕೌಶಲ್ಯವು ಬೇಕಾಗದ್ದರಿಂದ, ಅವುಗಳನ್ನು ಮಾಡ ಹತ್ತಿದನಂತರ ಅವು ಬಾರದೆ ಇರುವದೇ ಕಠಿಣ. ಒಕ್ಕಲತನ ಮಾಡುವ ಕೂಲಿಕಾರನಿಗಾಗಲಿ, ಸರ್ವಸಾಧಾರಣ ಚಿಂಪಿಗನಿಗಾಗಲಿ, ತನ್ನ ಉದ್ಯೋಗವು ಕಡೆಗೆ ತನಗೆ ಸಾಧ್ಯವಾಗದೆ ಹೋಗುವದೆಂಬ ಭಯವು ಬಹಳ ಇರುವದಿಲ್ಲ. ದಂಡಿನ ಶಿಪಾಯಿಯಾಗ ಬೇಕೆಂಬುವವನು, ತನ್ನ ಹೆಸರನ್ನು ದಂಡಿನ ಶಿಪಾಯಿಗಳ ಹೆಸರಿನ ಪಟ್ಟಿಯಲ್ಲಿ ಬರಿಸಿದರೆ ಆಯಿತು; ಅವನ ಮನಸ್ಸಿನಲ್ಲಿಲ್ಲದಿದ್ದರೂ ಅವನು ಶಿಪಾಯಿಯಾಗ ಬಹುದು. ಆದರೆ ಈ ಕಾರಣದಿಂದ ಸಂಬಳ ಹೆಚ್ಚು ಕಡಿಮೆಯಾಗುವದು, ಬೇರೆ ಉದ್ಯೋಗಗಳಿಗಿಂತಲೂ ವಕೀಲಿ, ವೈದ್ಯಕ, ಚಿತ್ರಕಲೆ, ಇವು ಮೊದಲಾದ ಪ್ರತಿಷ್ಠಿತ ವೃತ್ತಿಗಳಲ್ಲಿ ಬಹಳ. ಕಾಯಿದೆಯ ಅಭ್ಯಾಸ ಮಾಡುವಲ್ಲಿ ಎಷ್ಟೋ ಜನರು ಹಣ ವೆಚ್ಚ ಮಾಡಿದರೂ, ಒಳ್ಳೇ ನಿಷ್ಣಾತರಾದ ಬ್ಯಾರಿಸ್ಟರರಾಗುವವರು ಸ್ವಲ್ಪವೇ ಸರಿ. ಎಷ್ಟೋ ಜನರು ವೈದ್ಯಕವನ್ನು ಕಲಿತರೂ, ಕೆಲವರು ಮಾತ್ರ ನಿಪುಣರಾದ ವೈದ್ಯರಾಗುವರು. ಚಿತ್ರಕಲೆಯನ್ನು ಬಹು ಮಂದಿ ಕಲಿತಾಗ್ಯೂ, ಸರ್ವೋತ್ಕೃಷ್ಟ ಚಿತ್ರಗಳನ್ನು ಬರಿಯುವವರು ಬಹಳ ಸ್ವಲ್ಪ. ಈ ಪ್ರಕಾರ ಈ ವೃತ್ತಿಗಳಲ್ಲಿ ಮೇಲಾಗುವವರ ಸಂಖ್ಯೆ ಸ್ವಲ್ಪವಾದ್ದರಿಂದ, ಈ ಸ್ವಲ್ಪ ಜನರಿಗೆ ಬಹಳ ಫಲ ದೊರಿಯುತ್ತದೆ.

ಬೇರೆ ಬೇರೆ ಉದ್ಯೋಗಗಳಲ್ಲಿ ಸಂಬಳದ ದರಗಳು ಹೆಚ್ಚುಕಡಿಮೆಯಾಗಿರುವದಕ್ಕೆ ಅಡಾಮ್‌ಸ್ಮಿಥನು ಹೇಳಿದ ಬಹುತರ ಐದೂ ಕಾರಣಗಳ ಕಾರ್ಯವು, ಅವುಗಳಿಂದ ಬೇರೆ ಬೇರೆ ಉದ್ಯೋಗಗಳೊಳಗಿನ ಮೇಲಾಟವು ಮರ್ಯಾದಿತವಾಗುವ ಮಟ್ಟಿಗೆ ನಡಿಯುವದೆಂಬದು ಮೇಲಿನ ಬರಹದ ಮೇಲಿಂದ ಲಕ್ಷ್ಯದಲ್ಲಿ ಬಂದಿರ ಬಹುದು. ಉದಾಹರಣಾರ್ಥವಾಗಿ, ಯಾವದೊಂದು ಉದ್ಯೋಗವು

ಅಹಿತಕರವಾಗಿದ್ದ ಪ್ರಮಾಣದಿಂದ ಅದರಲ್ಲಿ ಕಡಿಮೆ ಜನರು ಶೇರುವರು. ಅದು ಬಹಳೇ ಅಹಿತಕರವಾದದ್ದಾಗಿದ್ದರೆ, ಅದರಲ್ಲಿ ಎಷ್ಟು ಹೆಚ್ಚು ಸಂಬಳ ದೊರಿದರೂ ತೀರ ಸ್ವಲ್ಪ ಮಂದಿ ಮಾತ್ರ ಶೇರುವರು. ಮತ್ತು ಈ ಸ್ವಲ್ಪ ಮಂದಿಯ ಹೊರ್ತು, ಮತ್ತ್ಯಾರೂ ಆ ಕೆಲಸದಲ್ಲಿ ಶೇರುವದಕ್ಕೆ ಒಪ್ಪಿಕೊಳ್ಳುವದಿಲ್ಲವಾದ್ದರಿಂದ, ಈ ಸ್ವಲ್ಪ ಮಂದಿಗೆ ಆ ಕೆಲಸದ ಸ್ವಾಭಾವಿಕವಾದ ಗುತ್ತಿಯು ದೊರಿದಂತಾಗುತ್ತದೆ. ಈ ಮಾತಿನ ವಿಷಯವಾಗಿ ಗಲ್ಲಿಗೆ ಹಾಕುವವನ ಉದಾಹರಣವು ಚನ್ನಾಗಿ ಸಲ್ಲುತ್ತದೆ. ಇದರಂತೆಯೇ, ಯಾವದೊಂದು ಉದ್ಯೋಗವನ್ನು ಕಲಿಯುವ ಪ್ರಯಾಸ, ಹಾಗೂ ಖರ್ಚು, ಇವುಗಳ ಮೂಲಕವಾಗಿ ಆ ಉದ್ಯೋಗದಲ್ಲಿ ಕಡಿಮೆ ಜನರು ಶೇರಿದ ಮಟ್ಟಿಗೆ ಮಾತ್ರ, ಅದರೊಳಗಿನ ಸಂಬಳ ಏರುವದು. ಈ ಮೇರಿಗೆ, ವಿದ್ಯಾಪ್ರಸಾರವು ಈಗಿನದಕ್ಕಿಂತಲೂ ವಿಶೇಷವಾದ ಹಾಗೆ, ಕಾರಕೂನರ ಸಂಬಳವು ಈಗಿನದಕ್ಕಿಂತಲೂ ಇಳಿಯುವದು; ಯಾಕಂದರೆ, ಓದಬರಹ ಬಲ್ಲವರು ತುಸು ಜನರಿದ್ದಾಗ, ಕೇವಲ ಓದಬರಹ ಬಲ್ಲವರಿಗೆ ಸಹ ಬಹಳ ಸಂಬಳ ದೊರಿಯುತ್ತಿತ್ತು. ಆದರೆ, ಓದಬರಹವು ಯಾವತ್ತು ಕಡೆಯಲ್ಲಿ ಸರ್ವಸಾಧಾರಣವಾಗಲು, ಓದಬರಹಕ್ಕೆ ಏನು ಬೆಲೆ ಉಳಿಯಲಾರದು. ಇದೇ ಮೇರೆಗೆ, ಪ್ರಾಮಾಣಿಕತನ ಮುಂತಾದ ಗುಣಗಳ ವಿಷಯವಾಗಿಯೂ ತಿಳಿದುಕೊಳ್ಳತಕ್ಕದ್ದು. ಈ ಗುಣಗಳು ಸ್ವಲ್ಪ ಜನರೊಳಗೆ ಮಾತ್ರ ವಾಸಿಸಿರುವ ಮಟ್ಟಿಗೆ, ಈ ಗುಣಗಳುಳ್ಳವರಿಗೆ ವಿಶೇಷ ಸಂಬಳ ದೊರಿಯುವದು. ಆದರೆ ಈ ಗುಣಗಳು ಸರ್ವರಲ್ಲಿಯೂ ಉಂಟಾದರೆ, ಅವುಗಳಿಗೆ ಈಗಿನಂತೆ ಹೆಚ್ಚು ಸಂಬಳ ದೊರಿಯಲಾರದು. ಬೇರೆ ಬೇರೆ ಉದ್ಯೋಗಗಳ ಸಂಬಳಗಳೊಳಗಿನ ವ್ಯತ್ಯಾಸವನ್ನು ಕುರಿತು ಅಡಾಮ್‌ಸ್ಮಿಥನು ಹೇಳಿದ ಐದು ಕಾರಣಗಳು ಪೂರ್ಣವಾಗಿ ತಿಳಿಯಬೇಕಾದರೆ, ಈ ವಿಚಾರಗಳನ್ನು ಲಕ್ಷ್ಯದಲ್ಲಿರಿಸ ತಕ್ಕದ್ದು. ಯಾಕಂದರೆ, ಯಾವದೊಂದು ಉದ್ಯೋಗದ ಅಹಿತಕಾರಿತ್ವಕ್ಕಾಗಿ, ಇಲ್ಲವೆ ಜವಾಬುದಾರಿಗಾಗಿ ಯಾವಾಗಲೂ ಹೆಚ್ಚು ಸಂಬಳವು ದೊರಿಯುವದೆಂಬ ನಿಯಮವು ಸಾರ್ವತ್ರಿಕವಾದದ್ದೇ ಆಗಿದ್ದರೆ, ಅರಸನ ಮುಖ್ಯ ಮಂತ್ರಿಗೆ, ಇಲ್ಲವೆ ಹೆಸರಾದ ಗಾಯಕಳಿಗೆ ದೊರಿಯುವ ಸಂಬಳಕ್ಕಿಂತಲೂ, ಹಲಾಲಖೋರನಿಗೆ, ಇಲ್ಲವೆ ಕಲ್ಲಿದ್ದಲಿಯ ಕಣಿಗಳಲ್ಲಿ ಕೆಲಸ ಮಾಡುವ ಕೂಲಿಕಾರನಿಗೆ, ಇಲ್ಲವೆ ಉಗಿಯಂತ್ರವನ್ನು ನಡಿಸುವವನಿಗೆ ಹೆಚ್ಚು ಸಂಬಳ ದೊರಿಯುತ್ತಿತ್ತು. ಬೇರೆ ಬೇರೆ ಉದ್ಯೋಗಗಳಲ್ಲಿದ್ದ ಸಂಬಳದ ದರಗಳನ್ನು ಹೆಚ್ಚುಕಡಿಮೆ ಮಾಡುವಂಥ ಅಡಾಮ್‌ಸ್ಮಿಥನು ಹೇಳಿದ ಐದು ಕಾರಣಗಳ ಕಾರ್ಯವನ್ನು ವಿಚಾರಿಸುವಾಗ, ಆ ಕಾರಣಗಳಿಂದ ಆಯಾ ಉದ್ಯೋ

ಗಗಳಲ್ಲಿ ಮೇಲಾಟವು ಎಷ್ಟರ ಮಟ್ಟಿಗೆ ಮರ್ಯಾದಿತವಾಗಿದೆಂಬದನ್ನು ಯಾವಾಗಲೂ ಲಕ್ಷಿಸ ತಕ್ಕದ್ದು.

## ಎರಡನೆ ಅಧ್ಯಾಯದ ಮೇಲಿನ ಪ್ರಶ್ನಗಳು.

### ಶ್ರಮದ ಸಂಬಳ.

೧. ಸಂಬಳವೆಂದರೇನು? ಸಂಬಳವು ವಿಶೇಷವಾಗಿ ಸಾಂಪ್ರದಾಯಾನುಸಾರವಾಗಿ ನಿರ್ಣೈಸಲ್ಪಡುವದೋ? ಮೇಲಾಟದಿಂದ ನಿರ್ಣೈಸಲ್ಪಡುವದೋ?

೨. ಸಂಬಳದ ಸರಾಸರಿ ದರವು ಹ್ಯಾಗೆ ನಿರ್ಣೈಸಲ್ಪಡುವದು?

೩. ಕೂಲಿಕಾರರ ವರ್ಗದ ಜನರ ಸ್ಥಿತಿಗತಿಯನ್ನು ಸುಧಾರಿಸುವದಕ್ಕೆ ಉತ್ಕೃಷ್ಟವಾದಂಥ ಒಂದೇ ಮಾರ್ಗವು ಯಾವದು?

೪. ಇಂಗ್ಲಂಡದಂಥ ದೇಶದಲ್ಲಿ ಸಂಬಳದ ಮೊಬಲಗು ಯಾವ ಸಾಧನಗಳಿಂದ ಬಹಳವಾಗಿ ವರ್ಧಿಸಲ್ಪಟ್ಟದೆ?

೫. ಇಂಗ್ಲಂಡದಲ್ಲಿ ಸಂಬಳದ ಮೊಬಲಗು ಹೆಚ್ಚಾದಾಗ್ಯೂ, ಆ ಪ್ರಮಾಣದಿಂದ ಕೂಲಿಕಾರರ ಸ್ಥಿತಿಯು ಯಾಕೆ ಸುಧಾರಿಸಲಿಲ್ಲ?

೬. ಧಾನ್ಯಗಳಿಗೆ ಸಂಬಂಧಿಸಿದ ಕಟ್ಟಳೆಗಳನ್ನು ನಿಲ್ಲಿಸಿದ್ದರಿಂದ ಕೂಲಿಕಾರರ ಸ್ಥಿತಿಯಲ್ಲುಂಟಾದ ಮುಖ್ಯ ಪರಿಣಾಮವು ಯಾವದು?

೭. ಮಾಲ್ಥಸನು ಜನಸಂಖ್ಯೆಯ ವಿಷಯದಲ್ಲಿ ಬರೆದ ನಿಬಂಧದಲ್ಲಿ ಹೇಳಿದ [redacted] ತತ್ವಗಳು ಯಾವವು?

೮. ಮಾಲ್ಥಸನು ಜನಸಂಖ್ಯೆಯ ಪ್ರತಿಬಂಧಕಗಳಲ್ಲಿ ಎಷ್ಟು ವರ್ಗಗಳನ್ನು ಮಾಡಿದ್ದಾನೆ?

೯. ಸುಧಾರಣೆಯು ಹೆಚ್ಚುಹೆಚ್ಚಾಗಿ ಹಬ್ಬುಗೊಂಡ ಹಾಗೆ, ಈ ಪ್ರತಿಬಂಧಕಗಳಲ್ಲಿ ಯಾವ ಪ್ರತಿಬಂಧಕವು ವಿಶೇಷ ಬಲವುಳ್ಳದ್ದಾಗುತ್ತದೆ?

೧೦. ಜನಸಂಖ್ಯೆಯು ಬೆಳೆಯುವದರಿಂದ ಕೂಲಿಕಾರರು ಎರಡು ಬಗೆಯಿಂದ ಹೀನಸ್ಥಿತಿಯನ್ನು ಹೊಂದುವದು ಹ್ಯಾಗೆ?

೧೧. ಮಿತಿಮೀರಿ ಬೆಳೆದ ಜನಸಂಖ್ಯೆಗೆ ಪರದೇಶ ಗಮನವು ಯಾಕೆ ಪೂರ್ಣವಾದ ಉಪಾಯವಲ್ಲ?

೧೨. ಲಾಭದ ಸರಾಸರಿ ದರದಿಂದ ಸಂಬಳದ ಮೊಬಲಗಿನ ಮೇಲೆ ಉಂಟಾಗುವ ಪರಿಣಾಮವನ್ನು ವರ್ಣಿಸಿರಿ.

೧೩. ಸಾವುಕಾರರ ಲಾಭವು ಸರಾಸರಿ ದರಕ್ಕಿಂತಲೂ ಕಡಿಮೆಯಾಗುವಷ್ಟು ಹೆಚ್ಚು ಸಂಬಳವು ಕೂಲಿಕಾರರಿಗೆ ದೊರಿದರೆ ಅದರಿಂದ ಅಂತ್ಯದಲ್ಲಿ ಕೂಲಿಕಾರರಿಗೆ ಗುಣವಾಗುವದೋ?

೧೪. ಶ್ರಮವು ಹೆಚ್ಚು ಉತ್ಪಾದಕವಾಗುವದರಿಂದ ಸಂಬಳದ ಮೊಬಲಗಿನಲ್ಲಿ ಏನು ಹೆಚ್ಚುಕಡಿಮೆಯಾಗುವದು?

೧೫. ಶ್ರಮದ ಕ್ರಯವು ಏರುವದಕ್ಕೂ ಇಳಿಯುವದಕ್ಕೂ ಪಾತ್ರವಾದದ್ದೋ ಹ್ಯಾಗೆ?

೧೬. ಧಾರಣೆಗಳು ಬಹಳ ಏರುವದರಿಂದ ಸಂಬಳಗಳು ಏರುವವೋ? ಈ ಬಗ್ಗೆ ಉದಾಹರಣಗಳನ್ನು ಕೊಡಿರಿ.

೧೭. ಮೇಲಾಟದಿಂದ, ಅತಿಶಯ ಇಳಿದ ಸಂಬಳವು ಏರುವ ಬಗೆಯನ್ನೂ, ಅತಿಶಯ ಏರಿದ ಸಂಬಳವು ಇಳಿಯುವ ಬಗೆಯನ್ನೂ ವರ್ಣಿಸಿರಿ.

೧೮. ಮೇಲಾಟ್ಟಿನ ಕಾರ್ಯವು, ಸರಕುಗಳ ಧಾರಣೆಗಳಿಗಿಂತಲೂ, ಶ್ರಮದ ಸಂಬಳದ ಮೇಲೆ ವಿಶೇಷ ಸಾವಕಾಶವಾಗಿ ನಡಿಯುವದು ಯಾಕೆ?

೧೯. ಬೇರೆ ಬೇರೆ ವರ್ಗದ ಕೂಲಿಕಾರರಲ್ಲಿ ಸ್ಪರ್ಧೆಯು ಮರ್ಯಾದಿತವಾಗುವ ಕೆಲವು ಉದಾಹರಣಗಳನ್ನು ಹೇಳಿರಿ.

೨೦. ಸ್ಪರ್ಧೆಯಿಂದ ಇಂಗ್ಲಂಡದಲ್ಲಿ ಬೇಸಾಯದ ಕೂಲಿಕಾರರ ಸ್ಥಿತಿಯು ಒಳ್ಳೇದಾಗಿದೆಯೋ?

೨೧. ಅಡಾಮ್‌ಸ್ಮಿಥನು ಹೇಳಿದ, ಬೇರೆ ಬೇರೆ ಉದ್ಯೋಗಗಳಲ್ಲಿ ಬೇರೆ ಬೇರೆ ಸಂಬಳದ ದರಗಳನ್ನು ಉಂಟು ಮಾಡುವಂಥ ಐದು ಕಾರಣಗಳನ್ನು ಹೇಳಿರಿ.

೨೨. ಈ ಕಾರಣಗಳಿಂದ ಸಂಬಳದ ಮೇಲೆ ಆಗುವ ಪರಿಣಾಮವನ್ನು ವ್ಯಕ್ತಪಡಿಸುವಂಥ ಕೆಲವು ಉದಾಹರಣಗಳನ್ನು ಕೊಡಿರಿ.

೨೩. ಬೇರೆ ಬೇರೆ ಉದ್ಯೋಗಗಳಲ್ಲಿ ಬೇರೆ ಬೇರೆ ದರದ ಸಂಬಳಗಳು ಇರುವದಕ್ಕೆ ಅಡಾಮ್‌ಸ್ಮಿಥನು ಹೇಳಿದ ಐದು ಕಾರಣಗಳಿಗೆ ಮೂಲಾಧಾರವಾದ ನಿಯಾಮಕ ತತ್ವವು ಯಾವದು?

---

೧. ಸನ್ ೧೮೭೧ನೇ ಇಸವಿಯ ಜುಲಾಯಿ ತಿಂಗಳಿನಲ್ಲಿ, "ಡೇಲಿನ್ಯೂಜ" ಎಂಬದೊಂದು ಇಂಗ್ಲಿಷ ವರ್ತಮಾನದಲ್ಲಿ ಜನಸಂಖ್ಯೆಯ ಗಣನೆಯ ವಿಷಯದಲ್ಲಿ ಈ ಪ್ರಕಾರ ಬರೆದಿತ್ತು. "ಇಂಗ್ಲಂಡ ಮತ್ತು ವೇಲ್ಸ ದೇಶಗಳಲ್ಲಿ ಈ ವರ್ಷದ ಖಾನೇಸುಮಾರೀ ಲೆಖ್ಖದಿಂದ ತಿಳಿದು ಬಂದ್ದ ಜನಸಂಖ್ಯೆಯನ್ನು ಕುರಿತು ರಿಜಿಸ್ಟ್ರಾರ ಜನರಲ್‌ರವರು ಪ್ರಕಟಿಸಿದ ರಿಪೋರ್ಟು, ಈ ದೇಶದ ಅಭ್ಯುದಯವನ್ನು ಕುರಿತು ಉತ್ಕೃಷ್ಟವಾದ ಸಾಕ್ಷಿಯನ್ನು ಕೊಡುತ್ತದೆ. ಈ ದೇಶದ ಜನಸಂಖ್ಯೆಯು ನಮ್ಮ ಅಂದಾಜಿಗಿಂತಲೂ ಬಹಳ ಹೆಚ್ಚು ಬೆಳೆದದೆ. ಇಂಗ್ಲಂಡ ಹಾಗೂ ವೇಲ್ಸ ದೇಶಗಳಲ್ಲಿ ಕಳೆದ ಎಪ್ರಿಲ್ ತಿಂಗಳಿನಲ್ಲಿ, ಹತ್ತು ವರ್ಷ ಹಿಂದಿನದಕ್ಕಿಂತಲೂ ೨೬,೩೬,೮೮೮ ಜನರು ಹೆಚ್ಚು ವಾಸಿಸಿದ್ದದ್ದಾಗಿ ಕಂಡು ಬಂತು. ಇಂಗ್ಲಂಡದ ಇತಿಹಾಸದಲ್ಲಿ ಯಾವ ಹತ್ತು ವರ್ಷಗಳ ಅವಧಿಯಲ್ಲಿಯೂ ಜನಸಂಖ್ಯೆಯು ಇಷ್ಟು ಬೆಳೆಯಲಿಲ್ಲ". ಈ ಅಭಿಪ್ರಾಯದ ಯುಕ್ತಾಯುಕ್ತಗಳನ್ನು ವಿಚಾರಿಸಿರಿ. ಈ ವಿಚಾರ ಮಾಡುವಾಗ ಲಕ್ಷ್ಯದಲ್ಲಿಡ ತಕ್ಕದ್ದೇನಂದರೆ, ಮೇಲೆ ಉಲ್ಲೇಖಿಸಿದ ಹತ್ತು ವರ್ಷಗಳ ಅವಧಿಯಲ್ಲಿ ಲಂಡನದೊಳಗಿನ ದರಿದ್ರ ಸಂರಕ್ಷಣದ ಖರ್ಚು ನೂರಕ್ಕೆ ೧೩೦ರಂತೆ ಏರಿತು; ಹಾಗೂ ಸನ್ ೧೮೭೭ರಿಂದ ಸನ್ ೧೮೭೯ರ ವರೆಗೆ, ಇಂಗ್ಲಂಡ ಮತ್ತು ವೇಲ್ಸ ದೇಶಗಳಲ್ಲಿ ಕೂಡಿ, ದರಿದ್ರ ಸಂರಕ್ಷಕ ಗೃಹಗಳ ಹೊರಗಿದ್ದ ದರಿದ್ರರ ಸಂಖ್ಯೆಯು ನೂರಕ್ಕೆ ೧೦½ರಂತೆಯೂ, ಈ ಗೃಹಗಳಲ್ಲಿದ್ದ ದರಿದ್ರರ ಸಂಖ್ಯೆಯು ನೂರಕ್ಕೆ ೧೩ರಂತೆಯೂ ಹೆಚ್ಚಾಯಿತು.

೨. ಯಾವದೊಂದು ಉದ್ಯೋಗವು ಸಿಲ್ಲಲಾಗಿ, ಅದರೊಳಗಿನ ಕೂಲಿಕಾರರಿಗೆ ಧರ್ಮದಾಯವನ್ನು ಮಾಡಿದರೆ ಹಿತವಾಗುವದೋ, ಅಥವಾ, ಅವರ ಶ್ರಮವು ಅವಶ್ಯವಾಗಿರುವಂಥ ಬೇರೆ ಸ್ಥಳಗಳಿಗೆ ಹೋಗುವದಕ್ಕೆ ಅವರಿಗೆ ಸಹಾಯ ಮಾಡಿದರೆ ಹಿತವಾಗುವದೋ?

೩. ಸನ್ ೧೮೭೩ನೇ ವರ್ಷ ನವಂಬರ ತಿಂಗಳಿನಲ್ಲಿ ಇಂಗ್ಲಂಡದಲ್ಲಿ ಒಂದು ಪ್ರತ್ಯಾಹಿಕಪತ್ರದಲ್ಲಿ ಹೀಗೆ ಬರೆದಿತ್ತು. "ಕಲ್ಲಿದ್ದಲಿ ಮತ್ತು ಕಬ್ಬಿಣದ ಉದ್ಯೋಗಗಳಲ್ಲಿ ತೊಡಗಿದ ಜನರು, ಈ ಉದ್ಯೋಗಗಳು ಮಂದವಾದ್ದರಿಂದ ಬಹಳ ತಾಪತ್ರಯದೊಳಗಿದ್ದಂಥವರು ಈಗ ಆ ತಾಪತ್ರಯದೊಳಗಿಂದ ಪಾರಾಗುತ್ತಾ ಇದ್ದಾರೆ. ಮತ್ತು ಅವರೊಳಗೆ ಲಗ್ನಕಾರ್ಯಗಳು

ಮೊದಲಿನಂತೆ ಯಥಾಪ್ರಕಾರವಾಗಿ ನಡಿಯ ಹತ್ತಿವೆ." ಕಬ್ಬಿಣ, ಹ‍ುತ್ತು ಕಲ್ಲಿದ್ದಲಿಯ ಕಾರಖಾನೆಗಳಲ್ಲಿ ಸೇರಿದ ಕೂಲಿಕಾರರ ಸ್ಥಿತಿಗತಿಯಲ್ಲಿ, ಈ ಸಂಗತಿಯಿಂದ ಏನು ಪರಿಣಾಮವಾಗುವದು?

೪. ಒಂದು ಪಂಜರದಲ್ಲಿ ಹಾಕಿಟ್ಟ ಒಂದು ಗಿಳಿಯು ಅಲ್ಲಿ ನೆಟ್ಟಗಿದ್ದರೆ, ಅದರ ಮೇಲಿಂದ ಅದೇ ಪಂಜರದಲ್ಲಿ ಇಪ್ಪತ್ತು ಗಿಳಿಗಳಾದರೂ ನೆಟ್ಟಗಿರ ಬಹುದೆಂದು ಅನುಮಾನವನ್ನು ಮಾಡ ಬಹುದೋ?

೫. ಹಿಂದಿನ ಅಧ್ಯಾಯವನ್ನು ಓದಿದ್ದರ ಮೇಲಿಂದ ಇಂಗ್ಲಂಡದಲ್ಲಿ ಉಪಾಧ್ಯಾಯರಿಗಿಂತಲೂ, ಉಪಾಧ್ಯಾಯಿನಿಗಳಿಗೆ ಕಡಿಮೆ ಸಂಬಳ ದೊರಿಯುವ ಕಾರಣಗಳೇನಾದರೂ ತಿಳಿದರೆ ಹೇಳಿರಿ.

## ೩ನೇ ಅಧ್ಯಾಯ.

## ಬಂಡವಲದ ಲಾಭ.

**ಸಂಪದುತ್ಪಾದನಕ್ಕೆ ಬಂಡವಲದಿಂದ ಆಗುವ ಸಹಾಯಕ್ಕಾಗಿ ದೊರಿಯುವ ಪ್ರತಿಫಲವು ಲಾಭವೆನಿಸುತ್ತದೆ.**—ಬಂಡವಲವೆಂದರೆ, ಮುಂದೆ ಸಂಪತ್ತನ್ನು ಹುಟ್ಟಿಸುವದಕ್ಕೆ ಸಹಾಯವಾಗುವದಕ್ಕಾಗಿ ಒತ್ತಟ್ಟಿಗೆ ತೆಗೆದಿಟ್ಟ ಸಂಪತ್ತಿನ ಭಾಗವೆಂದು ಹಿಂದೆ ಒಂದು ಭಾಗದಲ್ಲಿ ಹೇಳಿಯದೆ. ಆದಕಾರಣ ಬಂಡವಲವು ಸಂಗ್ರಹದ ಫಲವಾಗಿದೆ. ಆದರೆ ಬಂಡವಲದಿಂದ ಆಗ ತಕ್ಕ ಕಾರ್ಯವು ಆಗ ಬೇಕಾದರೆ, ಬಂಡವಲವು ಪೂರ್ಣವಾಗಿ ಆಗಲಿ, ಅಂಶತಃ ಆಗಲಿ, ನಷ್ಟವಾಗಲೇ ಬೇಕು. ಸಂಪತ್ತಿನ ಒಡೆಯರು ತಮ್ಮ ಸಂಪತ್ತನ್ನು ಹೊಸ ಸಂಪತ್ತು ಹುಟ್ಟಿಸುವ ಕೆಲಸದಲ್ಲಿ ಎರಡನೆಯವರಿಗೆ ಉಪಯೋಗಿಸಗೊಡುವದಕ್ಕೆ ಒಪ್ಪಿಕೊಳ್ಳ ಬೇಕಾದರೆ, ಆ ಹೊಸ ಉತ್ಪನ್ನದಲ್ಲಿ ತಮಗೊಂದು ಪಾಲು ದೊರಿದ ಹೊರ್ತು ಒಪ್ಪಿಕೊಳ್ಳಲಾರರು. ಈ ಪಾಲಿಗೆ ಲಾಭವೆಂಬ ಹೆಸರು. ಸಂಪದುತ್ಪಾದನದಲ್ಲಿ ಬಂಡವಲದಿಂದಾಗುವ ಉಪಯೋಗಕ್ಕಾಗಿ ಪ್ರತಿಫಲ ದೊರಿಯುವದು ಅನ್ಯಾಯವೆಂದು ಹಲವರು ತಿಳಿಯುವದುಂಟು. 'ಆದ್ದರಿಂದ ಎರಡನೆಯವರಿಗೆ ಬಂಡವಲವನ್ನು ಸಾಲಾ ಕೊಡುವ ಸಾವುಕಾರರು, ಕರುಣೆ ಇಲ್ಲದೆ ಕೇವಲ ಸ್ವಾರ್ಥ ಬುದ್ಧಿಯಿಂದ ಬೇಕಾದಷ್ಟು ಬಡ್ಡಿಯನ್ನು ಎಳಿಯುವ ನೀಚಾತ್ಮರೆಂತಲೂ, ಅವರ ಸಂಪತ್ತಿಗೆ ಬರುವ ಬಡ್ಡಿಯು ಅವರು ಸಾರ್ವಜನಿಕ ಪ್ರಾಪ್ತಿಯೊಳಗಿಂದ ಕದ್ದುಕೊಂಡ ಭಾಗವೆಂತಲೂ, ಸಾವಕಾರರನ್ನು ಇಂಥವರು ದೂಷಿಸುವರು. ಇಂಥ ವಿಚಾರಗಳು ಹಿಂದಕ್ಕೊಮ್ಮೆ ಫ್ರಾನ್ಸದಲ್ಲಿ ಬಹಳವಾಗಿ ಹಬ್ಬಿಕೊಂಡಿದ್ದವು. ಆಗ ಎಮ್ ಬ್ಯಾಸ್ಟಿಯಟ್‌ನೆಂಬ ಗ್ರಂಥಕರ್ತನು ಸಣ್ಣ ಸಣ್ಣ

ಪುಸ್ತಕಗಳನ್ನು ಬರೆದು, ಅವುಗಳಲ್ಲಿ ಎಷ್ಟೋ ಉದಾಹರಣಗಳನ್ನು ಕೊಟ್ಟು, ಬಂಡವಲಕ್ಕೆ ಬರುವ ಲಾಭದ ನಿಜ ಸ್ವರೂಪವನ್ನು ಜನರಿಗೆ ತಿಳಿಸಿಕೊಟ್ಟನು. ಹಾಗೂ "ಲಾಭ ದೊರಿಯುವದು ಅನ್ಯಾಯವಲ್ಲವೆಂತಲೂ, ಬಂಡವಲಕ್ಕೆ ಲಾಭವು ಯಾವಾಗಲೂ ಬರ ತಕ್ಕದ್ದೇ ವಿಹಿತವೆಂತಲೂ" ಸಿದ್ಧ ಮಾಡಿ ತೋರಿಸಿದನು. ಅವನು ಕೊಟ್ಟ ಉದಾಹರಣಗಳಲ್ಲಿ ಒಂದರ ಸಾರಾಂಶವನ್ನು ಕೆಳಗೆ ಬರೆಯುತ್ತೇವೆ. "ಒಂದು ಹಳ್ಳಿಯಲ್ಲಿ ಜೇಮ್ಸನೆಂಬಾತನೊಬ್ಬ ಬಡ ಬಡಿಗನಿದ್ದನು. ಅವನು ದಿನಾಲು ಮುಂಜಾನೆಯಿಂದ ಸಾಯಂಕಾಲ ಪರ್ಯಂತರ ಶ್ರಮ ಪಟ್ಟು ತನ್ನ ಕೆಲಸವನ್ನು ಮಾಡುವನು. ಒಂದು ದಿನ ಅವನು ಮನಸಿನಲ್ಲಿ ಆಲೋಚಿಸಿದ್ದೇನಂದರೆ,—'ನನ್ನ ಸಣ್ಣ ಕೊಡ್ಲಿ, ಗರಗಸ, ಕೊಡತಿ, ಇವುಗಳಿಂದ ನನಗೆ ಏನು ಮಾಟವಿಲ್ಲದ ಸಾಮಾನವನ್ನು ಮಾತ್ರ ಮಾಡಲಿಕ್ಕೆ ಬರುವದರಿಂದ, ನನಗೆ ಅದರಂತೆಯೇ ಸಂಬಳ ದೊರಿಯುತ್ತದೆ. ಹೀಗೆ ಮಾಡ ಬಾರದು. ನನಗೆ ಒಂದು ಉಜ್ಜುಕೊರಡು ಇದ್ದದ್ದಾದರೆ, ನಾನು ಮಾಡುವ ಸಾಮಾನು ನನ್ನ ಗಿರಾಕಿಗಳ ಮನಸಿಗೆ ಬರುವದು. ಅದರಿಂದ ಅವರು ನನಗೆ ಹೆಚ್ಚು ಹಣ ಕೊಡುವರು. ಒಳ್ಳೇದು. ಒಂದು ಉಜ್ಜುಕೊರಡು ಮಾಡಲಿಕ್ಕೇ ಬೇಕು. ಅದರ ಹೊರ್ತು ನಿರ್ವಾಹವಿಲ್ಲ'. ಅಂದಿನಿಂದ ಹತ್ತು ದಿವಸದೊಳಗೆ ಜೇಮ್ಸನು ತನಗೊಂದು ಉತ್ಕೃಷ್ಟವಾದ ಉಜ್ಜುಕೊರಡು ಮಾಡಿಕೊಂಡನು. ಅದನ್ನು ಅವನು ತಾನೇ ಮಾಡಿಕೊಂಡದ್ದರಿಂದ, ಅವನಿಗೆ ಅದು ಮತ್ತಿಷ್ಟು ಬೆಲೆಯುಳ್ಳದ್ದಾಗಿ ಕಾಣಿಸುತ್ತಿತ್ತು. ಜೇಮ್ಸನು ಈ ಉಜ್ಜುಕೊರಡಿನಿಂದ ತನಗೆ ಮುಂದೆ ಎಷ್ಟು ಲಾಭ ಬರುವದೆಂಬದರ ವಿಷಯವಾಗಿ ಲೆಕ್ಕ ಮಾಡುತ್ತ ಕುಳಿತಿದ್ದನು". ಅಷ್ಟರೊಳಗೆ ಅಲ್ಲಿಗೆ, ನೆರೆ ಹಳ್ಳಿಯ ಉಯಿಲಿಯಮ್ಸನೆಂಬ ಮತ್ತೊಬ್ಬ ಬಡಿಗನು ಬಂದನು. ಉಯಿಲಿಯಮ್ಸನು ಆ ಉಜ್ಜುಕೊರಡು ನೋಡಿ, ಅದರ ಪ್ರಶಂಸೆ ಮಾಡಿ, ತನಗೆ ಆ ಉಜ್ಜುಕೊರಡು ಶಿಕ್ಕರೆ ಮಿತಿಯಿಲ್ಲದಷ್ಟು ಲಾಭವನ್ನು ಸಂಪಾದಿಸ ಬಹುದೆಂದು ಮನಸಿನಲ್ಲಿ ತಿಳುಕೊಂಡು, ಜೇಮ್ಸನಿಗೆ ಅನ್ನುತ್ತಾನೆ:—

"ನೀನು ನನಗೊಂದು ಉಪಕಾರ ಮಾಡ ಬೇಕು. ಈ ಉಜ್ಜುಕೊರಡು ನನಗೆ ಒಂದು ವರ್ಷ ಪರ್ಯಂತರ ಎರವು ಕೊಡು." ಇದನ್ನು ಕೇಳಿ ಜೇಮ್ಸನು ಆಶ್ಚರ್ಯ ಪಟ್ಟು, ಉಯಿಲಿಯಮ್ಸನನ್ನು ತಿರುಗಿ ಕೇಳುತ್ತಾನೆ:—

"ಉಯಿಲಿಯಮನೇ, ಈ ಉಜ್ಜುಕೊರಡು ನಾನು ನಿನಗೆ ಕೊಟ್ಟೇನೆಂದು ನೀನು ಭಾವಿಸಿದ್ದಾದರೂ ಹ್ಯಾಗೆ? ಒಳ್ಳೇದು, ಒಂದು ವೇಳೆ ನಿನಗೆ ನಾನು ಈ ಉಪಕಾರ ಮಾಡಿದರೆ, ನೀನು ನನಗೆ ತಿರುಗಿ ಏನು ಉಪಕಾರ ಮಾಡುವಿ?"

ಉ.—"ಎಲಾ, ನಾನೇನು ಮಾಡ ತಕ್ಕದ್ದು? ಏನು ಇಲ್ಲ. ಎರವು ಕೊಟ್ಟದ್ದಕ್ಕೆ ಏನಾದರು ಹೆಚ್ಚು ಬೇಡುತ್ತಾರೋ? ನೀನೇ ನೋಡು".

ಜೇ.—"ಅಂಥಾದ್ದೇನು ನಾನರಿಯೆ. ನನ್ನ ಉಜ್ಜುಕೊರಡು ನಿನಗೆ ಒಂದು ವರ್ಷ ಪರ್ಯಂತರ ಎರವು ಕೊಟ್ಟರೆ, ಅದನ್ನು ನಾನು ನಿನಗೇ ಕೊಟ್ಟಂತಾಯಿ ತೆಂಬದನ್ನು ಮಾತ್ರ ನಾನು ಬಲ್ಲೆ. ನಾನು ಅದನ್ನು ಮಾಡಿದ್ದು ನಿನಗೆ ಕೊಡ ಬೇಕೆಂತೇನು ಅಲ್ಲ".

ಉ.—"ಒಳ್ಳೇದು, ನಿನ್ನಂತೇ ಆಗಲಿ. ನಾನು ಹೇಳಿದಂತೆ ನೀನು ಮಾಡಿದರೆ, ಅದಕ್ಕಾಗಿ ನಾನು ತಿರುಗಿ ಯಾವ ಕೆಲಸ ಮಾಡಬೇಕೆನ್ನುತ್ತಿ?"

ಜೇ.—"ನನ್ನ ಉಜ್ಜುಕೊರಡು ಒಂದು ವರ್ಷ ಪರ್ಯಂತರ ಉಪಯೋಗಿಸಿ ದರೆ, ಅಷ್ಟರೊಳಗೆ ಅದು ಯಾತಕ್ಕೂ ಬಾರದ ಹಾಗೆ ಕೆಟ್ಟು ಹೋಗುವದು. ಆದ ಕಾರಣ, ನೀನು ನನಗೆ ಇಂಥಾದೇ ಮತ್ತೊಂದು ತಿರುಗಿ ಕೊಡ ಬೇಕು".

ಉ.—"ನೀನು ಹೇಳಿದ್ದೇನು ಗೈರುವಾಜಿವಿಯಲ್ಲ. ಈ ಮಾತಿಗೆ ನಾನು ಒಪ್ಪಿಕೊಳ್ಳುತ್ತೇನೆ. ಇಷ್ಟಾದರೆ ತೀರಿತಲ್ಲವೋ? ಇದಕ್ಕೂ ನಾನಿನ್ನೇನು ಹೆಚ್ಚು ಮಾಡ ತಕ್ಕದ್ದು? ನನಗಂತೂ ಏನು ತೋರುವದಿಲ್ಲ".

ಜೇ.—"ಹಾಗೆ ಯಾಕಾದೀತು? ಹಾಗಲ್ಲ. ಈ ಉಜ್ಜುಕೊರಡು ನಾನು ನನ್ನ ಸಲುವಾಗಿ ಮಾಡಿದೆನು, ನಿನ್ನ ಸಲುವಾಗಿ ಮಾಡಲಿಲ್ಲ. ಇದರಿಂದ ಏನಾ ದರು ಲಾಭ ಪಡಕೊಳ್ಳ ಬೇಕೆಂದು ಇದನ್ನು ನಾನು ಮಾಡಿದ್ದು. ನನ್ನ ಕೆಲಸ ಸರಸು ಆಗ ಬೇಕೆಂತಲೂ, ನನ್ನ ಸ್ಥಿತಿಗತಿಯು ಸುಧಾರಿಸ ಬೇಕೆಂತಲೂ, ನಾನು ಅದನ್ನು ಮಾಡಿದ್ದೇನೆ. ನೀನು ಅದನ್ನು ವರ್ಷದ ವರೆಗೆ ವೈದು, ಅನಂತರ ತಿರುಗಿ ಕೊಟ್ಟರೆ, ಆ ವರೆಗೆ ನನಗೇನು ಲಾಭವಾದಂತಾಯಿತು? ಎಲ್ಲಾ ಲಾಭವು ನಿನಗೇ ಆಗುವದು. ನಿನಗೆ ಲಾಭವಾಗುವ ಕೆಲಸ ನಾನು ಮಾಡಿದರೆ, ಅದಕ್ಕೆ ತಿರುಗಿ ನನ್ನ ಕೆಲಸವನ್ನೇನಾದರು ನೀನು ಮಾಡದ ಹಾಗಿದ್ದರೆ, ನಾನು ನಿನ್ನ ಕೆಲಸ ಯಾಕೆ ಮಾಡ ಬೇಕು ಹೇಳು? ಆದಕಾರಣ, ನಿನಗೆ ನನ್ನ ಉಜ್ಜುಕೊರಡು ಬೇಕಾದದ್ದೇ ಆದರೆ, ನೀನು ಈಗ ಒಪ್ಪಿಕೊಂಡ ಪ್ರಕಾರ ಒಂದು ಉಜ್ಜುಕೊರಡು ತಿರುಗಿ ಕೊಡುವದಲ್ಲದೆ, ಒಂದು ವರ್ಷದ ವರೆಗೆ ಆಗುವ ಲಾಭವನ್ನು ನಾನು ಕಳಕೊಂ ಡದ್ದಕ್ಕಾಗಿ ನೀನು ಒಂದು ಹೊಸ ಹಲಿಗೆಯನ್ನು ಹೆಚ್ಚು ಕೊಡ ಬೇಕು".

ಈ ಮಾತಿಗೆ ಇಬ್ಬರೂ ಒಪ್ಪಿಕೊಂಡರು. ಆದರೆ ಮುಂದೆ ನಡೆದ ಚಮ ತ್ಕಾರವೇನಂದರೆ, ಒಂದು ವರ್ಷದ ಕೊನೆಗೆ ಜೇಮ್ಸನ ಕೈಗೆ ಉಜ್ಜುಕೊರಡು ಬಂದ ಕೂಡ್ಲೆ, ಅವನು ಅದನ್ನು ಮತ್ತೂ ಎರವಾಗಿ ಕೊಟ್ಟನು. ಹಾಗೂ ಅದನ್ನು

ಪುನಃ ತಿರುಗಿ ತಕ್ಕೊಂಡು, ಮತ್ತೆ ಅದನ್ನು ಮೂರನೇ ಸಾರಿ, ಅದರಂತೆಯೇ ನಾಲ್ಕನೇ ಸಾರಿ, ಎರವಾಗಿ ಕೊಟ್ಟನು. ಜೇಮ್ಸನು ಮೃತಪಟ್ಟನಂತರ, ಆ ಉಜ್ಜುಕೊರಡು ಅವನ ಮಗನ ವಶಕ್ಕೆ ಬಂದದೆ. ಅವನೂ ಅದನ್ನು ಯಥಾ ಪ್ರಕಾರ ಎರವಾಗಿ ಕೊಡುತ್ತಾ ಇದ್ದಾನೆ. ಈ ಸಣ್ಣ ಕಥೆಯೊಳಗಿನ ಮಾತುಗಳನ್ನು ಚನ್ನಾಗಿ ವಿಚಾರಿಸುವ. ಉಜ್ಜುಕೊರಡೆಂಬುವದು, ಬಂಡವಲದ ಅರ್ಥವನ್ನು ಸೂಚಿಸುವಂಥಾದ್ದು. ಹಲಿಗೆಯು, ಯಾವತ್ತು ಬಡ್ಡಿಯನ್ನು ತೋರಿಸುವದು. ಎರವಾಗಿ ಕೊಟ್ಟವನಿಗೆ ಎರವಾಗಿ ತಂದವನು ಹಲಿಗೆಯನ್ನು ತಂದು ಕೊಟ್ಟದ್ದು ಸ್ವಾಭಾವಿಕವಾದದ್ದೂ, ನ್ಯಾಯವಾದ ಪ್ರತ್ಯುಪಕಾರವೂ ಆದರೆ, ಬಂಡವಲಕ್ಕೆ ಬಡ್ಡಿ ಬರುವದಾದರೂ ಸ್ವಾಭಾವಿಕವಾದದ್ದು, ಮತ್ತು ನ್ಯಾಯವಾದದ್ದು, ಎಂತ ಹೇಳ ತಕ್ಕದ್ದು. ಉಜ್ಜುಕೊರಡಿನ ವ್ಯವಹಾರವನ್ನು ಮಾಡುವಲ್ಲಿ ಜೇಮ್ಸನೂ ಉಯಿಲಿಯಮನೂ ಪೂರ್ಣವಾಗಿ ಸ್ವತಂತ್ರರಾಗಿದ್ದರು; ಅವರ ಮೇಲೆ ಯಾರದೇನು ಜುಲುಮೆ ಇದ್ದಿಲ್ಲ. ಹೀಗಿದ್ದು, ಉಯಿಲಿಯಮನು ಜೇಮ್ಸನು ಹೇಳಿದ ಕರಾರಿನಂತೆ ಎರವು ತಕ್ಕೊಂಡದ್ದರ ಮೇಲಿಂದ, ಉಯಿಲಿಯಮನು ತನಗೆ ಅದರಿಂದ ಲಾಭವಾದೀತೆಂದು ತಿಳುಕೊಂಡನೆಂದು ಸಿದ್ಧವಾಗುತ್ತದೆ".

**ಬಂಡವಲಕ್ಕೆ ಬರುವ ಲಾಭದಲ್ಲಿ ಮೂರು ಅಂಶಗಳಿರುವವು.**— ಬಂಡವಲಕ್ಕೆ ಬರುವ ಲಾಭದಲ್ಲಿ ಬಂಡವಲದ ಬಡ್ಡಿ, ಅಂದರೆ ಸಾಲಾ ತಂದವನು ಸಾಲಾ ಕೊಟ್ಟವನಿಗೆ ಸಾಲಕ್ಕೋಸ್ಕರ ಕೊಡುವ ರಕಮು ಒಂದೇ ಇರುವದಿಲ್ಲ. ಬಂಡವಲದ ಲಾಭವು ಮೂರು ಬೇರೆ ಬೇರೆ ಅಂಶಗಳು ಕೂಡಿ ಆಗಿರುವದು. ಅವು ಯಾವವಂದರೆ: ಬಂಡವಲದ ಬಡ್ಡಿ, ಲುಕಸಾನಿನ ಭಯಕ್ಕೋಸ್ಕರ ದೊರಿಯುವ ಪ್ರತಿಫಲ, ಹಾಗೂ ಮೇಲ್ವಿಚಾರಣೆಯ ಸಂಬಳ, ಎಂಬಿವು ಮೂರು. ಯಾವದೊಂದು ವಿವಕ್ಷಿತ ಕಾಲದಲ್ಲಿ ಬಂಡವಲಕ್ಕೆ ಬರುವ ಬಡ್ಡಿಯ ದರವನ್ನು, ದೇಶದಲ್ಲಿ ಲುಕಸಾನಿನ ಭಯವೂ, ಮೇಲ್ವಿಚಾರಣೆಯ ಶ್ರಮವೂ ಇರದಂಥ ಠೇವುಗಳಿಗೆ ಬರುವ ಬಡ್ಡಿಯ ಮೇಲಿಂದ ತಿಳುಕೊಳ್ಳ ಬಹುದು. ಈ ದೇಶದಲ್ಲಿ, ಸರಕಾರದ ಕಡೆಗೆ ಇಟ್ಟ ಠೇವುಗಳು ಈ ತರದ ಸುರಕ್ಷಿತವಾದ ಠೇವುಗಳಾಗಿವೆ. ಸರಕಾರದ ಕಡೆಗೆ ಠೇವು ಇಟ್ಟವರಿಗೆ, ತಮ್ಮ ಹಣವು ಹೋಗುವದೆಂಬ ಭಯ ಇರುವದಿಲ್ಲ. ಹಾಗೂ ಠೇವುಗಳನ್ನು ಕೊಂಡದ್ದಕ್ಕಾಗಿ ಏನು ಶ್ರಮವನ್ನೂ ಮಾಡ ಬೇಕಾಗುವದಿಲ್ಲ. ಸರಕಾರದಲ್ಲಿ ಈ ಪ್ರಕಾರ ಗಂಟು ಇಟ್ಟವರಿಗೆ ಈಗ್ಗೆ ನೂರಕ್ಕೆ ೩ ರೂಪಾಯಿ ೧೨ ಆಣೆ ಬಡ್ಡಿ ದೊರಿಯುವದು. ಆದಕಾರಣ, ಈ ದೇಶದಲ್ಲಿ

ಈಗ್ಗೆ ವಾಡಿಕೆಯಾದ ಬಡ್ಡಿಯ ದರವು ನೂರಕ್ಕೆ ೩ ರೂ. ೧೨ ಆಣೆ, ಎಂದು ತಿಳಿಯ ತಕ್ಕದ್ದು. ಜನರ ವ್ಯವಹಾರಗಳಲ್ಲಿ ಇದಕ್ಕೂ ಹೆಚ್ಚು ಬಡ್ಡಿಯು ಬರುವ ಕಾರಣವೇನಂದರೆ, ಸಾಲಗಾರರಿಂದ ತಮ್ಮ ಹಣವು ತಿರುಗಿ ತಮಗೆ ನಿರ್ವಿವಾದ ವಾಗಿ ಬಂದೀತೆಂಬ ಭರವಸವು ಸಾವುಕಾರರಿಗೆ ಇರುವದಿಲ್ಲ. ಈ ಪ್ರಕಾರದ ಭರವಸವು ಕಡಿಮೆಯಾಗಿದ್ದ ಪ್ರಮಾಣದಿಂದ ಹೆಚ್ಚು ಬಡ್ಡಿಯನ್ನು ಕೊಡಬೇಕಾ ಗುವದು. ಮಿತಿಮೀರಿ ಹೆಚ್ಚು ಬಡ್ಡಿಯನ್ನು ತಕ್ಕೊಳ್ಳುವ ಮಾರವಾಡಿಗಳ ಸಾಲಕ್ಕೆ ಬಡ್ಡಿಯು ಹೆಚ್ಚಾಗಿರುವ ಮಾನದಿಂದ, ಅವರ ಗಂಟು ಮುಳುಗುವ ಭಯವೂ ಹೆಚ್ಚಾಗಿರುವದು. ಬಂಡವಲಕ್ಕೆ ಬರುವ ಲಾಭವು ಬಡ್ಡಿಗಿಂತಲೂ ಹೆಚ್ಚು ಇಲ್ಲದೆ ಇದ್ದ ಪಕ್ಷದಲ್ಲಿ, ಬಂಡವಲ ಹಾಕಿ ವ್ಯಾಪಾರ ಉದ್ಯೋಗಗಳನ್ನು ಮಾಡುವ ಶ್ರಮವನ್ನೂ ಸಾಹಸವನ್ನೂ ಯಾರು ಮಾಡಲಿಕ್ಕಿಲ್ಲ. ವ್ಯಾಪಾರ ಉದ್ಯೋಗಗಳಲ್ಲಿಹಾಕಿದ ಬಂಡವಲಕ್ಕೆ ನೂರಕ್ಕೆ ೩ ರೂ. ೧೨ ಆಣೆಗಿಂತಲೂ ಹೆಚ್ಚು ಲಾಭವು ಬಾರದೆ ಹೋದ ಪಕ್ಷಕ್ಕೆ, ಯಾವತ್ತು ಸಾವುಕಾರರು ತಮ್ಮ ಬಂಡವಲಗಳನ್ನು ವ್ಯಾಪಾರದೊಳಗಿಂದ ತೆಗೆದು, ಸರಕಾರದ ಠೇವುಗಳನ್ನೇ ಕೊಳ್ಳುವರು. ಬಂಡವಲ ಮುಳುಗುವ ಭಯವೂ, ಮೇಲ್ವಿಚಾರಣೆಯ ಶ್ರಮವೂ ಬಹಳವಾಗಿದ್ದ ಉದ್ಯೋಗಗಳಲ್ಲಿ ಬಂಡವಲಕ್ಕೆ ಬರುವ ಲಾಭವು ಬಹಳವಾಗಿರು ವದು. ಲಾಭದಲ್ಲಿ ಹೆಚ್ಚುಕಡಿಮೆಯಾಗುವಂಥ ಈ ಎರಡು ಅಂಶಗಳಿರುವದ ರಿಂದ, ಬೇರೆ ಬೇರೆ ಉದ್ಯೋಗಗಳಲ್ಲಿ ಬರುವ ಲಾಭದ ದರವು ಬಹಳ ಹೆಚ್ಚುಕಡಿ ಮೆಯಾಗಿರುವದು. ಉದಾಹರಣಾರ್ಥವಾಗಿ, ಅರಿವೇ ಅಂಗಡಿ ಹಚ್ಚಿದವನಿಗಿಂ ತಲೂ, ಮಾಂಸದ ಅಂಗಡೀ ಹಚ್ಚಿದವನಿಗೆ ಹೆಚ್ಚು ಲಾಭವು ಬರುವದು. ಯಾಕಂ ದರೆ, ಮಾಂಸ ಮಾರುವವನ ಕೆಲಸವು ಹೆಚ್ಚು ಅಸಹ್ಯವಾಗಿರುವದಲ್ಲದೆ, ಹವೆಯು ಒಮ್ಮಿಂದೊಮ್ಮೆ ಬದಲಾದರೆ ಮಾಂಸವೆಲ್ಲಾ ಕೆಟ್ಟು, ಅವನಿಗೆ ಲುಕಸಾನವಾಗುವ ಸಂಭವವೂ ವಿಶೇಷ ಇರುವದು.

ಚನ್ನಾಗಿ ಸುಧಾರಿಸದೆ ಇದ್ದ ದೇಶಗಳಲ್ಲಿ ಜನರ ಆಸ್ತಿಯು ಸುರಕ್ಷಿತವಾಗಿ ರುವದಿಲ್ಲವಾದ ಕಾರಣ, ಇಂಥ ದೇಶಗಳಲ್ಲಿ ಬಂಡವಲಕ್ಕೆ ಬರುವ ಲಾಭದಲ್ಲಿ ಲುಕಸಾನಿನ ಭಯಕ್ಕಾಗಿ ದೊರಿಯುವ ಅಂಶವು ಬಹಳವಾಗಿರುವದು. ಏಸಿಯ ಖಂಡದೊಳಗಿನ ಕೆಲವು ದೇಶಗಳಲ್ಲಿದ್ದ ಸಮಾಜ ಸ್ಥಿತಿಯನ್ನು ಕುರಿತು ಮಿಲ್ ಧೊರೆಯು ಈ ಪ್ರಕಾರ ಬರೆದಿದ್ದಾನೆ:—"ಈ ಗತಿಗೆಟ್ಟ ರಾಜ್ಯವ್ಯವಸ್ಥೆಯು ನಡಿಯುವ ದೇಶಗಳಲ್ಲಿ ಜನರು ಸಾಲಾ ಕೊಡಬೇಕಾದರೆ, ಕೊಟ್ಟ ಸಾಲವು ಬಹುತರ ತಿರುಗಿ ಬರಲಿಕ್ಕಿಲ್ಲವೆಂದು ತಿಳಿದುಕೊಂಡೇ ಕೊಡಬೇಕಾಗುವದು.

ಹಿಂದುಸ್ತಾನದೊಳಗಿನ ಕೆಲವು ಏತದ್ದೇಶೀಯ ಸಂಸ್ಥಾನಗಳಲ್ಲಿ ಜನರು ಸರಕಾರಕ್ಕೆ ಸಾಲಾ ಕೊಡಬೇಕಾದರೆ ಸಹ, ತಮಗೆ ಬರುವ ಬಡ್ಡಿಯನ್ನು ಸರಕಾರದವರು ನಾಲ್ಕಾರು ವರ್ಷ ಮಾತ್ರ ಕೊಟ್ಟು, ಅಸಲು ಪೂರಾ ಮುಳುಗಿಸಿದರೂ ತಮಗೆ ತಕ್ಕ ಮಟ್ಟಿಗೆ ಲಾಭವಾಗುವಷ್ಟು ಬಡ್ಡಿಯನ್ನು ಕನಿಷ್ಠ ಪಕ್ಷಕ್ಕೆ ಬೇಡುವರು." ತನ್ನ ಆಸ್ತಿಯನ್ನೆಲ್ಲ ಗೊತ್ತಿಗೆ ಹಚ್ಚಿದ ದುಂದುಗಾರನಿಗೆ ಸಾಲ ಹುಟ್ಟ ಬೇಕಾದರೆ, ಭಾರಿಯಾದ ಬಡ್ಡಿಯನ್ನು ಕೊಡುವ ಆಶೆ ತೋರಿಸಿದ ಹೊರ್ತು ಹುಟ್ಟದೆಂಬದು, ಎಲ್ಲರಿಗೂ ತಿಳಿದದ್ದೇ ಸರಿ. ಇಂಥವನಿಗೆ ಸಾಲಾ ಕೊಡುವ ಸಾವುಕಾರರು ನೂರಕ್ಕೆ ೬೦, ಇಲ್ಲವೆ ೭೦ರಂತೆ ಬಡ್ಡಿಯನ್ನು ತಕ್ಕೊಳ್ಳುವರು. ಯಾಕಂದರೆ, ತಮ್ಮ ಅಸಲು ಬಹುತರ ಬಾರದೆ ಹೋಗುವ ಸಂಭವವು ಬಹಳ ಉಂಟೆಂದು ಅವರಿಗೆ ಚನ್ನಾಗಿ ತಿಳಿದಿರುವದು. ಒಂದು ವೇಳೆ ಅವರ ಅಸಲು ತಿರುಗಿ ಬಂದದ್ದೇ ಆದರೆ, ಅವರಿಗೆ ಮೇಲಿಂದ ಮೇಲೆ ಬಡಿಯುವ ಲುಕಸಾನುಗಳ ಮಾನಕ್ಕೆ ಸರಿಯಾಗಿ ಲಾಭವು ಬಂದಂತಾಗುವದು. ಇಂಥ ಬಡ್ಡಿಯ ವ್ಯವಹಾರ ಮಾಡುವ ಸಾವುಕಾರರ ಲಾಭವು ಕೇವಲ ಲುಕಸಾನಿನ ಭಯದ ಮೂಲಕವಾಗಿ ಮಾತ್ರವೇ ಹೆಚ್ಚಾಗಿರುವದಿಲ್ಲ; ಅದಕ್ಕೆ ಮತ್ತೊಂದು ಕಾರಣವೂ ಇರುವದು. ಅದೇನಂದರೆ, ಇಂಥವರ ವ್ಯವಹಾರವು ಕೀಳು ತರದ್ದೆಂದು ಎಣಿಸಲ್ಪಡುವದರಿಂದ, ಅವರಿಗೆ ಪ್ರಾಮಾಣಿಕ ಜನರ ಸ್ಪರ್ಧೆಯಿಂದಾಗಲಿ, ನಾಲ್ಕು ಜನರಲ್ಲಿ ಮಾನಮರ್ಯಾದೆಗಳಿರ ಬೇಕೆಂದು ಬಯಸುವಂಥವರ ಸ್ಪರ್ಧೆಯಿಂದಾಗಲಿ, ಏನು ಭಯವಿರುವದಿಲ್ಲ.

**ಯಾವದೊಂದು ದೇಶದಲ್ಲಿ ಒಂದೇ ಕಾಲಕ್ಕೆ, ಯಾವತ್ತು ಉದ್ಯೋಗಗಳೊಳಗಿನ ಬಡ್ಡಿಯ ದರವು ಸಮಾನವಾಗಿರುವದು.**— ಲುಕಸಾನಿನ ಭಯ, ಅವಮಾನ, ಇವುಗಳಿಗಾಗಿ ದೊರಿಯು ತಕ್ಕ ಪ್ರತಿಫಲವನ್ನೂ, ಮೇಲ್ವಿಚಾರಣೆಯ ಸಂಬಳವನ್ನೂ ಲಾಭದೊಳಗಿಂದ ಕಳಿಯಲಾಗಿ ಉಳಿಯುವ ಅಂಶವು ಬಂಡವಲದ ನಿಜವಾದ ಬಡ್ಡಿಯು. ಈ ಅಂಶವು ದೇಶದೊಳಗಿನ ಯಾವತ್ತು ಉದ್ಯೋಗಗಳಲ್ಲಿ ಒಂದೇ ಕಾಲಕ್ಕೆ ಅಷ್ಟೇ ಇರುವದು. ಯಾವದೊಂದು ವಿವಕ್ಷಿತ ಸ್ಥಳದಲ್ಲಿ ಯಾವದೊಂದು ಕಾಲಕ್ಕೆ ನೋಡಿದರೆ, ಒಕ್ಕಲಿಗನ ಬಂಡವಲಕ್ಕೆ ಬರುವ ಬಡ್ಡಿಯೂ, ಅಂಗಡಿಕಾರನ ಬಂಡವಲಕ್ಕೆ ಬರುವ ಬಡ್ಡಿಯೂ, ಕಾರಖಾನೆಯವನ ಬಂಡವಲಕ್ಕೆ ಬರುವ ಬಡ್ಡಿಯೂ ಒಂದಕ್ಕೊಂದು ಸಮಾನವಾಗುವ ಕ್ರಮದಲ್ಲಿರುವವು. ಈ ಬೇರೆ ಬೇರೆ ಉದ್ಯೋಗಸ್ಥರಿಗೆ ದೊರಿಯುವ ಲಾಭಗಳೊಳಗಿನ ಹೆಚ್ಚು ಕಡಿಮೆಗಳಿಗೆ, ಅವರವರ ಲುಕಸಾನಿನ ಭಯವೂ, ಮರ್ಯಾದೆ ಅವ

ಮರ್ಯಾದೆಗಳೂ, ಅವರವರಿಗೆ ಮೇಲ್ವಿಚಾರಣೆಗಾಗಿ ದೊರಿಯುವ ಸಂಬಳವೂ ಕಾರಣವಾಗಿವೆ. ಆದಕಾರಣ ಯಾವತ್ತು ಉದ್ಯೋಗಗಳೊಳಗಿನ "ಲಾಭಗಳು" ಸಮಾನವಾಗುವ ಕ್ರಮದೊಳಗಿರುವವೆಂದು ಹೇಳುವದು ಯಥಾರ್ಥವಾಗಲಾರದು. ಯಾಕಂದರೆ, ಕೆಲವು ಉದ್ಯೋಗಗಳಲ್ಲಿ ಬೇರೆ ಉದ್ಯೋಗಗಳಿಗಿಂತಲೂ ಲುಕಸಾನಿನ ಭಯವು ಯಾವಾಗಲೂ ವಿಶೇಷವಾಗಿರುವದರಿಂದ, ಈ ಭಯಕ್ಕಾಗಿ ಯಾವಾಗಲೂ ಹೆಚ್ಚು ಲಾಭ ದೊರಿಯು ಬೇಕಾಗುವದು; ಕೆಲವು ಉದ್ಯೋಗಗಳಲ್ಲಿ ಮೇಲ್ವಿಚಾರಣೆಯು ಬೇರೆ ಉದ್ಯೋಗಗಳಿಗಿಂತಲೂ ವಿಶೇಷ ಬೇಕಾಗುವದು; ಇದಲ್ಲದೆ, ಹಿಂದಿನ ಅಧ್ಯಾಯದಲ್ಲಿ ಹೇಳಿದ ಮೇರೆಗೆ ಬೇರೆ ಬೇರೆ ತರದ ಕಸಬುಗಳನ್ನು ಮಾಡುವವರಿಗೆ ಸಂಬಳವನ್ನು ಹೆಚ್ಚು ಕಡಿಮೆಯಾಗಿ ಕೊಡಬೇಕಾಗುವದು. ಆದಕಾರಣ ಬೇರೆ ಬೇರೆ ಉದ್ಯೋಗಗಳಲ್ಲಿ "ಲಾಭದ" ದರವು ಯಾವಾಗಲೂ ಭಿನ್ನವಾಗಿರುವದು ಸ್ವಾಭಾವಿಕವಾಗಿದೆ. ಬಂಡವಲಕ್ಕೆ ಬರುವ "ಬಡ್ಡಿಯು" ಮಾತ್ರ, ವಿವಕ್ಷಿತಕಾಲಕ್ಕೆ ಯಾವದೊಂದು ದೇಶದಲ್ಲಿ ಯಾವತ್ತು ಉದ್ಯೋಗಗಳಲ್ಲಿ ಸಮಾನವಾಗಿರುವದು.

**ದೇಶದೊಳಗಿನ ಸಂಪತ್ತು ಜನಸಂಖ್ಯೆಗಳು ಬೆಳೆದ ಹಾಗೆ, ಬಡ್ಡಿಯ ದರವನ್ನು ಇಳಿಸುವಂಥ ಕಾರಣಗಳ ವಿವರಣೆಯು.**— ಸಂಪತ್ತೂ ಜನಸಂಖ್ಯೆಯೂ ಬೆಳೆದ ಹಾಗೆ, ಬಡ್ಡಿಯ ದರವು ಇಳಿಯುವ ಕಾರಣಗಳನ್ನು ಕುರಿತು ಈ ಸ್ಥಳದಲ್ಲಿ ವಿಚಾರಿಸುವದು ತಕ್ಕದ್ದಾಗಿದೆ. ಈ ವಿಚಾರದಿಂದ ರಿಕ್ಯಾರ್ಡೊ ಧೊರೆಯ ಗೇಣಿಯ ನಿಯಮದ ಒಂದು ಉತ್ಕೃಷ್ಟವಾದ ದೃಷ್ಟಾಂತವು ಗೋಚರವಾಗುತ್ತದೆ. ಹ್ಯಾಗಂದರೆ, ಶ್ರಮಕ್ಕೂ ಬಂಡವಲಕ್ಕೂ ಬರುವ ಪ್ರತಿಫಲವು ಅವುಗಳ ಉತ್ಪಾದಕತ್ವವನ್ನು ಅವಲಂಬಿಸಿರುವದು; ಅಂದರೆ, ಯಾವ ಕಾರಣದಿಂದಾದರೂ ಅಷ್ಟೇ ಶ್ರಮ ಮತ್ತು ಬಂಡವಲ ಇವುಗಳು ಹೆಚ್ಚು ಸಂಪತ್ತು ಹುಟ್ಟಿಸುವಂಥವಾದರೆ, ಬೇರೆ ಯಾವತ್ತು ಸಂಗತಿಗಳು ಯಥಾಸ್ಥಿತವಾಗಿ ಇರಲು, ಆ ಮಾನದಿಂದ ಸಂಬಳವೂ ಬಡ್ಡಿಯೂ ಅವಶ್ಯವಾಗಿ ಏರುವವು. ಹಾಗೂ ಇದಕ್ಕೆ ವಿಪರೀತವಾಗಿ, ಯಾವ ಕಾರಣದಿಂದಾದರೂ ಅಷ್ಟೇ ಶ್ರಮ, ಹಾಗು ಬಂಡವಲ, ಇವುಗಳಿಂದ ಕಡಿಮೆ ಸಂಪತ್ತು ಹುಟ್ಟಿದರೆ, ಅದರಿಂದ ಸಂಬಳ ಮತ್ತು ಬಡ್ಡಿಯಾಗಿ ದೊರಿಯುವ ರಕಮುಗಳು ಕಡಿಮೆಯಾಗುವವು. ಒಬ್ಬನು ಒಂದು ಚೀಲ ಜೋಳವನ್ನು ಹೊಟ್ಟೆಗೆ ತಿಂದು, ಅಷ್ಟೇ ಅವಧಿಯೊಳಗೆ ಒಂದುವರೆ ಚೀಲ ಜೋಳವನ್ನು ಬೆಳಿಸಿದರೆ, ಅವನ ಶ್ರಮ ಬಂಡವಲಗಳಿಗೆ ನೂರಕ್ಕೆ ೫೦ರಂತೆ ಪ್ರತಿಫಲ ದೊರಿದಂತಾಗುವದು. ಆದರೆ, ಅದೇ ಮನುಷ್ಯನು ಕಡಿಮೆ ಬೆಳೆಯುಳ್ಳ ಪ್ರದೇಶಕ್ಕೆ ಹೋಗ ಬೇಕಾದ್ದ

ರಿಂದ ಆವನು ಒಂದು ಚೀಲ ಜೋಳವನ್ನು ತಿನ್ನುವ ಅವಧಿಯಲ್ಲಿ ಒಂದೂ ಕಾಲು ಚೀಲ ಜೋಳವನ್ನು ಮಾತ್ರ ಬೆಳಿಸಿದರೆ, ಅವನಿಗೆ ಸಂಬಳವೂ ಲಾಭವೂ ನೂರಕ್ಕೆ ೨೫ರಂತೆ ಮಾತ್ರ ದೊರಿಯುವವು. ಸಾಗುವಳಿಯ ಮೇರೆ ಇಳಿದ ಹಾಗೆ, ಅಂದರೆ ಬೆಳೆದ ಜನಸಂಖ್ಯೆಗೆ ಆಹಾರವನ್ನು ಪೂರೈಸುವದಕ್ಕಾಗಿ ಕಡಿಮೆ ಬೆಳೆಯುಳ್ಳ ಭೂಮಿಯನ್ನು ಸಾಗುವಳಿ ಮಾಡ ಬೇಕಾದ ಮಾನದಿಂದ, ಸಂಬಳವೂ ಲಾಭವೂ ಇಳಿಯ ಹತ್ತುವವು, ಹಾಗೂ ಗೇಣಿಗಳು ಏರ ಹತ್ತುವವು. ಯಾಕಂದರೆ, ಯಾವದೊಂದು ಭೂಮಿಯ ಗೇಣಿಯು, ಆ ಭೂಮಿಯ ಉತ್ಪಾದಕತ್ವವು ಏನು ಗೇಣಿ ಬಾರದ ಸಾಗುವಳಿಯಾದ ಕನಿಷ್ಠ ಭೂಮಿಯ ಉತ್ಪಾದಕತ್ವಕ್ಕಿಂತಲೂ ಹೆಚ್ಚಾಗಿದ್ದಷ್ಟು ಇರುವದು. ರಿಕ್ಯಾರ್ಡೋನ ನಿಯಮದಿಂದ ಸಿದ್ಧವಾಗುವದೇನಂದರೆ, ಜನಸಂಖ್ಯೆ ಬೆಳೆದ ಹಾಗೆ ಉಪಜೀವನದ ಪದಾರ್ಥಗಳ ಬೇಡಿಕೆ ಹೆಚ್ಚುವ ಕಾರಣ, ಕಡಿಮೆ ಬೆಳೆಯುಳ್ಳ, ಇಲ್ಲವೆ ಕಡಿಮೆ ಅನುಕೂಲವಾದ ಭೂಮಿಗಳನ್ನು ಆಶ್ರಯಿಸ ಬೇಕಾಗುತ್ತದೆ. ಆದಕಾರಣ ಹೆಚ್ಚಿನ ಆಹಾರವನ್ನು ಹುಟ್ಟಿಸುವದಕ್ಕೆ ಶ್ರಮವೂ ಬಂಡವಲವೂ ಹೆಚ್ಚು ಪ್ರಮಾಣದಿಂದ ಬೇಕಾಗುತ್ತವೆ; ಅಂದರೆ, ಶ್ರಮ ಬಂಡವಲಗಳಿಂದ ಕಡಿಮೆ ಉತ್ಪನ್ನವಾಗಿ, ಅದರಿಂದ ಸಂಬಳವೂ ಬಡ್ಡಿಯೂ ಇಳಿಯುತ್ತವೆಂಬ ಅರ್ಥವು.

**ಉತ್ಪಾದಕತ್ವವು ಉತ್ತರೋತ್ತರ ಕಡಿಮೆಯಾಗುವ ನಿಯಮವು.**— ಜನಸಂಖ್ಯೆಯು ಬೆಳೆಯುವದರಿಂದ ಬೇಕಾಗುವ ಹೆಚ್ಚಿನ ಉಪಜೀವನದ ಪದಾರ್ಥಗಳನ್ನು ಈಗ್ಯೆ ಸಾಗುವಳಿಯಾಗಿದ್ದ ಭೂಮಿಯಲ್ಲಿಯೇ ಬೆಳಿಸಿದಾಗ್ಯಾದರೂ, ಮೇಲಿನ ಪರಿಣಾಮವೇ ಆಗುವದು. ಬೇಸಾಯವು ತಕ್ಕ ಮಟ್ಟಿಗೆ ಸುಧಾರಿಸಿದ ನಂತರ, ವಿಶೇಷ ಪ್ರಕಾರದ ಶೋಧಗಳೇನಾದರು ಆದ ಹೊರ್ತು, ಭೂಮಿಯಲ್ಲಿ ಇಮ್ಮಡಿ ಬಂಡವಲ ಶ್ರಮಗಳನ್ನು ಹಾಕಿದರೆ ಇಮ್ಮಡಿ ಉತ್ಪನ್ನವಾಗುವದಿಲ್ಲ. "ಅಥವಾ, ಇದೇ ಅರ್ಥವನ್ನು ಬೇರೆ ರೀತಿಯಿಂದ ಹೇಳ ಬಹುದು. ಹ್ಯಾಗಂದರೆ, ಹೆಚ್ಚು ಉತ್ಪನ್ನವನ್ನು ಮಾಡ ಬೇಕಾದ ಹಾಗೆ, ಪ್ರತಿಯೊಂದು ಹೆಚ್ಚಿನ ಅಂಶಕ್ಕಾಗಿ ಅಧಿಕ ಪ್ರಮಾಣದಿಂದ ಭೂಮಿಯಲ್ಲಿ ಶ್ರಮ ಮಾಡ ಬೇಕಾಗುವದು." (ಜೆ. ಎಸ್. ಮಿಲ್ ಧೊರೆಯ ಅರ್ಥಶಾಸ್ತ್ರದ ತತ್ವಗಳು. ಭಾಗ ೧, ಪುಟ ೨೧೭.) ಭೂಮಿಯಲ್ಲಿ ಹೆಚ್ಚು ಬಂಡವಲ ಹಾಕಿದಂತೆ, ಕಡಿಮೆ ಪ್ರಮಾಣದಿಂದ ಹುಟ್ಟುವಳಿಯಾಗುತ್ತದೆ. ಹೀಗಾಗದೆ, ಒಂದೇ ಭೂಮಿಯಲ್ಲಿ ಹೆಚ್ಚು ಬಂಡವಲ ಹಾಕಿದ ಪ್ರಮಾಣದಿಂದ ಹೆಚ್ಚು ಉತ್ಪನ್ನವಾಗುತ್ತಿದ್ದರೆ, ಈಗ ಜಗತ್ತಿನಲ್ಲಿ ನಡಿಯುವ ಅರ್ಥಶಾಸ್ತ್ರದ ನಿಯಮಗಳೆಲ್ಲಾ ತಿರುಗುತ್ತಿದ್ದವು. ಇಡೀ ದೇಶಕ್ಕೆ ಸಾಕಾಗು

ವಷ್ಟು ಹುಟ್ಟುವಳಿಯನ್ನು ಒಂದೇ ಹೊಲದಲ್ಲಿ ಮಾಡುವದಕ್ಕೆ ಬರುತ್ತಿತ್ತು. ಹಾಗೂ ಪೃಥ್ವಿಯ ಮೇಲೆ ನಿಲ್ಲುವದಕ್ಕೆ ಸ್ಥಳವಿರುವ ವರೆಗೂ ಜನಸಂಖ್ಯೆಯ ಬೆಳೆಯುವಿಕೆಗೆ ಯಾವ ಅಡ್ಡಿಯೂ ಉಳಿಯದೆ, ಪೃಥ್ವಿಯ ಮೇಲೆ ನಿಲ್ಲುವದಕ್ಕೆ ಸ್ಥಳವಿಲ್ಲದಂತೆ ಆಗುವದೊಂದೇ, ಜನಸಂಖ್ಯೆಯ ಬೆಳೆಯುವಿಕೆಯ ಮೇರೆಯಾಗುತ್ತಿತ್ತು.

ಉತ್ಪಾದಕತ್ವವು ಉತ್ತರೋತ್ತರ ಕಡಿಮೆಯಾಗುವ ನಿಯಮದಿಂದ, ಲಾಭ ಹಾಗು ಸಂಬಳವು ಇಳಿಯುವ ಕಾರಣವೂ, ಹಳೇ ದೇಶಗಳಿಗಿಂತಲೂ ಹೊಸದಾಗಿ ಒಕ್ಕಲಾದ ದೇಶಗಳಲ್ಲಿ ಸಂಬಳ ಲಾಭಗಳು ಹೆಚ್ಚಾಗಿರುವ ಕಾರಣವೂ ವ್ಯಕ್ತವಾಗುತ್ತವೆ.

ಕೆಳಗೆ ಬರೆದ ದೃಷ್ಟಾಂತದಿಂದ ಈ ಸಂಗತಿಯು ಚನ್ನಾಗಿ ಸ್ಪಷ್ಟವಾಗುವದು. ಆಸ್ಟ್ರೇಲಿಯ ದೇಶಕ್ಕಿಂತಲೂ ಇಂಗ್ಲಂಡದಲ್ಲಿ ಸಂಬಳ ಹಾಗೂ ಬಡ್ಡಿಯು ಬಹಳ ಕಡಿಮೆ ಉಂಟು. ಇಂಗ್ಲಂಡದಲ್ಲಿ ಸಾಗುವಳಿಯ ಮೇರೆಯು ಬಹಳ ಇಳಿದಿರುವದು. ಆಸ್ಟ್ರೇಲಿಯದಲ್ಲಿದ್ದರೆ ಯಾರೂ ಕೇಳದೆ ಬೀಳು ಬೀಳುವಂಥ ಭೂಮಿಯನ್ನು ಇಂಗ್ಲಂಡದಲ್ಲಿ ಬಹು ಜಾಗ್ರತೆಯಿಂದ ಸಾಗುವಳಿ ಮಾಡುತ್ತಾರೆ. ಅಷ್ಟೇ ಶ್ರಮ ಬಂಡವಲಗಳಿಂದ ಇಂಗ್ಲಂಡಕ್ಕಿಂತಲೂ ಆಸ್ಟ್ರೇಲಿಯದಲ್ಲಿ ಹೆಚ್ಚು ಸಂಪತ್ತು ಹುಟ್ಟುತ್ತದೆ. ಆದಕಾರಣ ಆಸ್ಟ್ರೇಲಿಯದಲ್ಲಿ ಶ್ರಮ ಬಂಡವಲಗಳ ಪ್ರತಿಫಲವು ಇಂಗ್ಲಂಡದಲ್ಲಿದ್ದದ್ದಕ್ಕಿಂತಲೂ ಹೆಚ್ಚಾಗಿರುವದು. ಈ ಸಂಗತಿಗಳಿಂದ ಸಿದ್ಧವಾಗುವದೇನಂದರೆ, ಲಾಭವು ಶ್ರಮದ ಸಂಬಳವನ್ನು ಅನುಸರಿಸಿ ಇರುವದಿಲ್ಲ, ಶ್ರಮದ ಉತ್ಪಾದಕತ್ವವನ್ನು ಅನುಸರಿಸಿ ಇರುವದು: ಅಂದರೆ, ಲಾಭವು ಸಂಬಳವಾಗಿ ಕೊಟ್ಟ ಹಣದ ರಕಮಿಗೂ, ಶ್ರಮದ ಉತ್ಪಾದಕತ್ವಕ್ಕೂ ಇರುವ ಪ್ರಮಾಣವನ್ನು ಅವಲಂಬಿಸಿರುವದೆಂಬ ಅರ್ಥವು. ಇಂಗ್ಲಂಡಕ್ಕಿಂತಲೂ ಆಸ್ಟ್ರೇಲಿಯದಲ್ಲಿ ಸಂಬಳದ ದರವು ಹೆಚ್ಚಾಗಿರುವದು. ಆದರೂ, ಇಂಗ್ಲಂಡಕ್ಕಿಂತ ಆಸ್ಟ್ರೇಲಿಯದಲ್ಲಿ ಶ್ರಮವು ಹೆಚ್ಚು ಉತ್ಪಾದಕವಾದ್ದರಿಂದ, ಶ್ರಮಕ್ಕೋಸ್ಕರ ಬೀಳುವ ಖರ್ಚು ಕಡಿಮೆಯಾಗಿರುವದು. ಈ ಸಂಗತಿಯ ನಿಜತ್ವವು ಇಂಗ್ಲಂಡಕ್ಕಿಂತಲೂ ಆಸ್ಟ್ರೇಲಿಯದಲ್ಲಿ ಲಾಭ ಹಾಗೂ ಬಡ್ಡಿಯ ದರವು ಬಹಳ ಹೆಚ್ಚಾಗಿರುವದರ ಮೇಲಿಂದ ಸ್ಪಷ್ಟವಾಗಿ ಸಿದ್ಧವಾಗುತ್ತದೆ.

**ಧಾರಣೆಗಳು ಬಹಳ ಏರುವದರ ಮೇಲಿಂದ ಬಹಳ ಲಾಭವು ಉಂಟಾಗುತ್ತದೆಂದು ತಿಳಿಯಲಾಗದು.**—ಧಾರಣೆಗಳು ಏರಲಾಗಿ ಯಾವಾಗಲೂ ಬಹಳ ಲಾಭ ಬರುತ್ತದೆಂದು ತಿಳಿಯುವದು ಬಹು ದೊಡ್ಡ ತಪ್ಪು. ಯಾವ

ದೊಂದು ಸರಕಿನ ಬೇಡಿಕೆ ಒಮ್ಮಿಂದೊಮ್ಮೆ ಬಹಳ ಹೆಚ್ಚಲು, ಆ ಸರಕು ಉತ್ಪನ್ನ ಮಾಡುವವರಿಗೆ ಕೆಲವು ಕಾಲ ವಾಡಿಕೆಯ ದರಕ್ಕಿಂತಲೂ ಹೆಚ್ಚು ಲಾಭವೂ ಸಂಬಳವೂ ಹುಟ್ಟುವಷ್ಟು ಅದರ ಧಾರಣೆ ಏರುವದು ನಿಜ. ಆದರೂ ಈ ಧಾರಣೆಯು ಬಹಳ ಕಾಲ ನಿಲ್ಲುವದಿಲ್ಲ. ಹಿಂದೆ ಹೇಳಿದ ಮೇರೆಗೆ ಬಂಡವಲ ಶ್ರಮಗಳ ಮೇಲಾಟದಿಂದ ಸಂಬಳ ಲಾಭಗಳೆರಡೂ ಸ್ವಲ್ಪ ಕಾಲದಲ್ಲಿ ಇಳಿಯುತ್ತವೆ. ಯಾಕಂದರೆ, ಮೇಲಾಟವು ನಿರಾತಂಕವಾಗಿ ನಡಿಯುವಲ್ಲಿ ಸರಕುಗಳ ಕ್ರಯಗಳು ಯಾವಾಗಲೂ ಉತ್ಪನ್ನ ಮಾಡುವ ಖರ್ಚಿನಿಂದಲೇ ನಿರ್ಣೈಸಲ್ಪಡುವವು. ಹಿಂದಿನ ಅಧ್ಯಾಯದಲ್ಲಿ ಧಾರಣೆಗಳು ಏರುವದರಿಂದ ಸಂಬಳಗಳು ಏರುವದಿಲ್ಲವೆಂದು ಸಿದ್ಧ ಮಾಡಿದೆವು. ಪ್ರಕೃತ ವಿಷಯದಲ್ಲಾದರೂ ಹಾಗೇ ತಿಳುಕೊಳ್ಳತಕ್ಕದ್ದು. ಉದಾಹರಣಾರ್ಥವಾಗಿ, ನೂಲಿನ ವಸ್ತ್ರಗಳ ಧಾರಣೆಯನ್ನು ವಿಚಾರಿಸುವ. ಉತ್ಪನ್ನ ಮಾಡುವ ಖರ್ಚಿನಲ್ಲಿ ಮೂರು ಅಂಶಗಳಿರುವವು:—ಶ್ರಮ, ಮಿತಭೋಗ, ಹಾಗೂ ಲುಕಸಾನಿನ ಭಯ, ಎಂಬಿವು; ಇದಲ್ಲದೆ, ಯಾವದೊಂದು ಸರಕು ಉತ್ಪನ್ನ ಮಾಡುವ ಖರ್ಚು ಸರಕಾರಕ್ಕೆ ಕೊಡಬೇಕಾಗುವ ಕರದಿಂದಲೂ ಬೆಳೆಯ ಬಹುದು. ಈ ಅಂಶಗಳಲ್ಲಿ ಯಾವ ಅಂಶವು ವೃದ್ಧಿಯಾದರೂ, ಉತ್ಪನ್ನ ಮಾಡುವ ಖರ್ಚು ಬೆಳೆದು, ಸರಕುಗಳ ಧಾರಣೆ ಏರ ಹತ್ತುವದು. ಉದಾಹರಣಾರ್ಥವಾಗಿ, ಅರಳೆಯು ವಾಡಿಕೆಯಾಗಿ ಬರತಕ್ಕ ಮಾರ್ಗಗಳಿಂದ ಬರುವದು ಒಮ್ಮಿಂದೊಮ್ಮೆ ಕಟ್ಟಾದ್ದರಿಂದ ಅರಳೆಯನ್ನು ಉತ್ಪನ್ನ ಮಾಡುವದಕ್ಕೆ ಅವಶ್ಯವಾದ ಶ್ರಮವು ಬಹಳ ವೃದ್ಧಿಯಾಗ ಬಹುದು; ಇಲ್ಲವೆ ಅರಳೆಯ ಮೇಲಾಗಲಿ, ಅರಳೆಯಿಂದುಂಟಾದ ವಸ್ತ್ರಗಳ ಮೇಲಾಗಲಿ, ಹೆಚ್ಚು ಕರ ಕೂಡ್ರಿಸಲ್ಪಡ ಬಹುದು. ಇವೆರಡೂ ಸಂದರ್ಭಗಳಲ್ಲಿ, ಬಂಡವಲಕ್ಕೆ ಬರುವ ಲಾಭವು ಎಷ್ಟು ಮಾತ್ರವೂ ಹೆಚ್ಚದೆ, ಧಾರಣೆಗಳು ಏರುವವು. ಇಷ್ಟೇ ಅಲ್ಲ. ಉತ್ಪನ್ನ ಮಾಡುವ ಖರ್ಚಿನೊಳಗಿನ ಬೇರೆ ಎಲ್ಲ ಅಂಶಗಳ ಖರ್ಚು ಹೆಚ್ಚು ಬಿದ್ದದ್ದಾದರೆ, ಬಂಡವಲದ ಲಾಭವು ಕಡಿಮೆ ಸಹ ಆಗ ಬಹುದು. ಆದಕಾರಣ, ಧಾರಣೆಗಳು ಏರುವದರಿಂದ, ಲಾಭದ ದರವು ಏರುವದಕ್ಕೆ ಬದಲಾಗಿ ಇಳಿಯುವದು. ಇತ್ತಲಾಗಿ ಅಮೇರಿಕಾ ದೇಶದವರ ಸಂಗಡ ಯುದ್ಧ ನಡಿದಾಗ ಇಂಗ್ಲಂಡಕ್ಕೆ ಅರಳೆ ಹೋಗುವದಕ್ಕೆ ಬಹಳ ಆತಂಕಗಳೂ ವೆಚ್ಚವೂ ತಾಗ ಹತ್ತಿದ್ದರಿಂದ, ನೂಲಿನ ವಸ್ತ್ರಗಳ ಧಾರಣೆ ಬಹಳ ಏರಿತ್ತು. ಆದರೂ, ಅದೇ ಕಾಲಕ್ಕೆ ಕಾರಖಾನೆಯವರಿಗೆ ಮಿತಿಮೀರಿ ಲುಕಸಾನು ಆಗುತ್ತಿತ್ತು; ಮತ್ತು ಸಂಬಳವು ಅತಿಶಯವಾಗಿ ಇಳಿದು ಹೋದ್ದರಿಂದ, ಇಂಗ್ಲಂಡದಲ್ಲಿ ಅರಳೆಯ ಬರವೆಂಬ ಪ್ರಸಿದ್ಧವಾದ ಬರ ಬಿದ್ದಿತ್ತು. ಧಾರಣೆಗಳು

ಏರುವದರಿಂದ ಲಾಭವು ಹೆಚ್ಚುವದಿಲ್ಲವೆಂಬುವದನ್ನು ಒಂದು ಸಣ್ಣ ಮಾತಿನಿಂದ ತೋರಿಸ ಬಹುದು. ಹ್ಯಾಗಂದರೆ, ಲಾಭದ ದರವು ಒಂದು ಪ್ರಮಾಣವನ್ನು ತೋರಿಸುತ್ತದೆ. ಪ್ರಮಾಣವು ಅನ್ಯಸಾಪೇಕ್ಷವಾಗಿರುವದು. ಅಂದರೆ, ಪ್ರಮಾಣವು ಒಂದೇ ಪದದ ಮೇಲಿಂದ ತಿಳಿಯುವದಿಲ್ಲ, ಒಂದು ಪದಕ್ಕೂ ಮತ್ತೊಂದು ಪದಕ್ಕೂ ಇರುವ ಸಂಬಂಧದ ಮೇಲಿಂದ ತಿಳಿಯುತ್ತದೆ. ಆ ಕಾರಣ, ಲಾಭದ ದರವು ಅದರ ಸಂಗಡ ಸಂಪದುತ್ಪಾದನದ ಖರ್ಚಿನಲ್ಲಿ ಕೂಡಿಕೊಂಡಿರುವ ಬೇರೆ ಅಂಶಗಳ ಖರ್ಚಿನ ಪರಿಮಿತಿಯ ಮೇಲಿಂದ ಮಾತ್ರವೇ ತಿಳಿಯುವದು, ಅನ್ಯ ರೀತಿಯಿಂದ ತಿಳಿಯಲಿಕ್ಕಿಲ್ಲ. ಈ ಬೇರೆ ಅಂಶಗಳಲ್ಲಿ ಶ್ರಮವೇ ಮುಖ್ಯವಾದ ಅಂಶವು. ಆ ಕಾರಣ ಮೇಲೆ ಹೇಳಿದ ಮೇರೆಗೆ ಲಾಭದ ದರವು ಶ್ರಮದ ಖರ್ಚನ್ನೇ ಅವಲಂಬಿಸಿರುವದೆಂದು ಅನ್ನ ಬಹುದು. ಬಂಡವಲ, ಶ್ರಮ, ಇವುಗಳ ಸಂಯೋಗದಿಂದ ಹುಟ್ಟುವ ಸರಕಿಗೆ ಬರುವ ಕ್ರಯದಲ್ಲಿ, ಲಾಭ, ಸಂಬಳ, ಇವೆರಡರ ಸಮಾವೇಶವು ಆಗಲಿಕ್ಕೇ ಬೇಕೆಂದು ಎಷ್ಟೋ ಸಾರಿ ಹೇಳಿಯದೆ. ಇದರ ಮೇಲಿಂದ ತಿಳಿಯುವದೇನಂದರೆ, ಈ ಕ್ರಯದೊಳಗಿಂದ ಸಂಬಳದ ರೂಪದಿಂದ ಶ್ರಮಕ್ಕೆ ಮುಟ್ಟುವ ಭಾಗವು ಹೆಚ್ಚು ಪ್ರಮಾಣದಿಂದ ಇದ್ದ ಹಾಗೆ, ಬಂಡವಲಗಾರನಿಗೆ ದೊರಿಯುವ ಲಾಭದ ಭಾಗವು ಕಡಿಮೆ ಉಳಿಯುವದು. ಆದಕಾರಣ, ಸಾವುಕಾರನಿಗೆ ಶ್ರಮಕ್ಕೋಸ್ಕರ ಬೀಳುವ ಖರ್ಚು, ಶ್ರಮ ಹಾಗೂ ಬಂಡವಲ ಇವುಗಳ ಸಂಯುಕ್ತ ಕಾರ್ಯದಿಂದ ಉಂಟಾದ ಉತ್ಪನ್ನದೊಳಗಿಂದ, ಶ್ರಮದ ಪ್ರತಿಫಲವಾಗಿ ಕೊಡಲ್ಪಡುವ ಭಾಗದ ಬೆಲೆಯನ್ನು, ಅಂದರೆ ಸಂಬಳವನ್ನು ಅವಲಂಬಿಸಿರುವದು.

**ಶ್ರಮದ ಖರ್ಚು ಯಾವ ಸಂಗತಿಗಳನ್ನು ಅವಲಂಬಿಸಿರುವದು?**—ಸಾವುಕಾರನಿಗೆ ಶ್ರಮಕ್ಕೋಸ್ಕರ ತಾಗುವ ಖರ್ಚು ವಾಸ್ತವಿಕವಾಗಿ ಯಾವ ಸಂಗತಿಗಳಿಗೆ ಅನುಸಾರವಾಗಿ ಹೆಚ್ಚುಕಡಿಮೆ ಬೀಳುವದೆಂಬುವದನ್ನು ಈ ಸ್ಥಳದಲ್ಲಿ ವಿಚಾರಿಸುವದು ಯೋಗ್ಯವಾಗಿದೆ. ಶ್ರಮದ ಖರ್ಚು, "ಅಸ್ಥಿರ ಪ್ರಮಾಣವುಳ್ಳ ಮೂರು ಪದಗಳ ಅನುಸಾರಿಯಾಗಿದೆ," ಎಂದು ಮಿಲ್‌ಥೋರೆಯು ಹೇಳಿದ್ದಾನೆ. ಅಂದರೆ ಸಾವುಕಾರನಿಗೆ ಶ್ರಮಕ್ಕೋಸ್ಕರ ಬೀಳುವ ಖರ್ಚು ಮೂರು ಸಂಗತಿಗಳಿಂದ ಹೆಚ್ಚುಕಡಿಮೆಯಾಗುವದಕ್ಕೆ ಪಾತ್ರವಾಗಿರುವದು; ಮತ್ತು ಈ ಮೂರು ಸಂಗತಿಗಳಲ್ಲಿ ಪ್ರತಿಯೊಂದು ಸಂಗತಿಯು ತನ್ನಷ್ಟಕ್ಕೆ ಬದಲಿಸುವದಕ್ಕೆ ಪಾತ್ರವಾಗಿರುವದು.

ಈ ಮೂರು ಸಂಗತಿಗಳು ಯಾವವಂದರೆ:—

೧. "ಶ್ರಮದ ಉತ್ಪಾದಕ ಶಕ್ತಿ.

೨. ಶ್ರಮದ ಸಂಬಳ (ಅಂದರೆ ಶ್ರಮಕರ್ತರಿಗೆ ದೊರಿಯುವ ನಿಜವಾದ ಪ್ರತಿಫಲ).

೩. ಈ ನಿಜವಾದ ಪ್ರತಿಫಲದಲ್ಲಿ ಶೇರುವ ಪದಾರ್ಥಗಳನ್ನು ಉತ್ಪನ್ನ ಮಾಡುವದಕ್ಕೆ ಅಥವಾ ಕೊಳ್ಳುವದಕ್ಕೆ ಹೆಚ್ಚು ಖರ್ಚು ಬೀಳೋಣ, ಇಲ್ಲವೆ ಕಡಿಮೆ ಖರ್ಚು ಬೀಳೋಣ".

ಶ್ರಮದ ಸಂಬಳವೂ ಉಪಜೀವನಕ್ಕೆ ಅವಶ್ಯವಾದ ಪದಾರ್ಥಗಳ ಕ್ರಯವೂ ಯಥಾಪ್ರಕಾರ ಇದ್ದು, ಶ್ರಮದ ಉತ್ಪಾದಕ ಶಕ್ತಿಯು ವೃದ್ಧಿಯಾದರೆ, ಸಾವುಕಾರನಿಗೆ ಶ್ರಮಕ್ಕೋಸ್ಕರ ಬೀಳುವ ಖರ್ಚು ಕಡಿಮೆಯಾಗುತ್ತದೆ. ಶ್ರಮದ ಸಂಬಳ ಏರಿ, ಆ ಪ್ರಮಾಣದಿಂದ ಶ್ರಮದ ಉತ್ಪಾದಕ ಶಕ್ತಿಯು ಬೆಳೆಯದೆ ಹೋದರೆ, ಸಾವುಕಾರನಿಗೆ ಶ್ರಮಕ್ಕೋಸ್ಕರ ಬೀಳುವ ಖರ್ಚು ಹೆಚ್ಚಾಗುವದು.

ಶ್ರಮಕರ್ತರ ನಿಜ ಪ್ರತಿಫಲವಾದ ಉಪಜೀವನದ ಪದಾರ್ಥಗಳ ಕ್ರಯವು ಕಡಿಮೆಯಾಗಿದ್ದು, ಆ ಪ್ರಮಾಣದಿಂದ ಅವರಿಗೆ ಹೆಚ್ಚು ಪದಾರ್ಥಗಳು ದೊರಿಯದೆ ಹೋದರೆ, ಸಂಬಳವು ಇಳಿಯುವದು; ಹಾಗೂ ಸಾವುಕಾರನಿಗೆ ಶ್ರಮಕ್ಕೋಸ್ಕರ ಬೀಳುವ ಖರ್ಚು ಕಡಿಮೆಯಾಗುವದು.

ಲಾಭದ ದರವು, ಶ್ರಮ ಮಿತಭೋಗ ಇವುಗಳ ಸಂಯುಕ್ತ ಕಾರ್ಯದಿಂದ ಉಂಟಾಗುವ ಉತ್ಪನ್ನದಲ್ಲಿ ಶ್ರಮಕರ್ತನಿಗೆ ದೊರಿಯುವ ಪಾಲಿನ ಮೇಲೆ ಅವಲಂಬಿಸಿರುವದು. ಹಾಗು ತಿಳಿದು ನೋಡಿದರೆ, ಲಾಭದ ಸಾಮಾನ್ಯ ದರದಲ್ಲಿ ಹೆಚ್ಚುಕಡಿಮೆಗಳಾಗ ಬೇಕಾದರೆ, ಮೇಲೆ ಉಲ್ಲೇಖಿಸಿದ ಮೂರು ಸಂಗತಿಗಳಲ್ಲಿ ಒಂದಾಗಲಿ, ಹೆಚ್ಚಾಗಲಿ, ಬದಲಿಸಲಿಕ್ಕೇ ಬೇಕು.

ಇದಕ್ಕೆ ದೃಷ್ಟಾಂತವು.—ಆಸ್ಟ್ರೇಲಿಯದಂಥ ದೇಶದಲ್ಲಿ ಬೆಳೆಯುಳ್ಳ ಭೂಮಿಯು ವಿಪುಲವಾಗಿರುವದರಿಂದ ಶ್ರಮದ ಉತ್ಪಾದಕ ಶಕ್ತಿಯು ಬಹಳವಾಗಿರುವದು; ಮತ್ತು ಇದೇ ಕಾರಣದಿಂದ ಉಪಜೀವನಕ್ಕೆ ಅಗತ್ಯವಾದ ಪದಾರ್ಥಗಳನ್ನು ದೊರಕಿಸುವ ಖರ್ಚು ತೀರ ಸ್ವಲ್ಪವಾಗಿರುವದು. ಈ ಸಂಗತಿಗಳ ಮೂಲಕವಾಗಿ, ಲಾಭವೂ ಬಹಳ ಹೆಚ್ಚು ದರದಿಂದ ಹುಟ್ಟುವದು, ಸಂಬಳವೂ ಬಹಳ ಹೆಚ್ಚು ದರದಿಂದ ದೊರಿಯುವದು.

**ಸಾವುಕಾರರ ಲಾಭವು ವಾಡಿಕೆಯಾದ ದರಕ್ಕಿಂತಲೂ ಇಳಿಯುವ ಹಾಗೆ ಸಂಬಳವು ಏರುವದರಿಂದ ಕೆಲಸಗಾರರಿಗೆ ಅಂತ್ಯದಲ್ಲಿ ಹಿತವಾಗುವದಿಲ್ಲ.**—ಹಿಂದಿನ ಅಧ್ಯಾಯದಲ್ಲಿ ಸಂಬಳಕ್ಕೂ ಲಾಭಕ್ಕೂ ಇರುವ ಸಂಬಂಧವನ್ನು ವಿವರಿಸುವಾಗ, ಯಾವದೊಂದು ವಿವಕ್ಷಿತವಾದ ಉದ್ಯೋಗದೊಳಗಿನ ಕೆಲಸ

ಗಾರರಿಗೆ ದೊರಿಯುವ ಸಂಬಳವು, ಬಂಡವಲ ಹಾಕಿದ ಸಾವುಕಾರರ ಲಾಭವು ವಾಡಿಕೆಯಾದ ದರಕ್ಕಿಂತಲೂ ಇಳಿಯುವ ಹಾಗೆ ಏರಿದರೆ, ಅದರಿಂದ ಕೆಲಸಗಾರರಿಗೆ ಬಹುಕಾಲದ ವರೆಗೆ ಹಿತವಾಗದೆಂದು ಹೇಳಲ್ಪಟ್ಟಿತು. ಆದರೆ, ಗ್ರೇಟಬ್ರಿಟನದಂಥ ದೇಶದೊಳಗಿನ ಯಾವತ್ತು ಕೆಲಸಗಾರರು ಕಟ್ಟು ಮಾಡಿ ಹೆಚ್ಚು ಸಂಬಳ ಬೇಡಿದರೆ, ಅವರಿಗೆ ಬಂಡವಲ ಶ್ರಮಗಳಿಂದುಂಟಾದ ಸಂಪತ್ತಿನೊಳಗಿಂದ ಹೆಚ್ಚು ಪಾಲು ದೊರಿಯುವದು; ಹಾಗೂ ಅದರಿಂದ ಗ್ರೇಟಬ್ರಿಟನದೊಳಗೆ ವಾಡಿಕೆಯಾದ ಲಾಭದ ದರವೇ ಕಡಿಮೆಯಾಗ ಬಹುದೆಂದು ಯಾರಾದರೂ ಪ್ರತಿಪಾದಿಸ ಬಹುದು. ಈ ಪ್ರಕಾರ ದೇಶದೊಳಗೆ ಒಂದು ತುದಿಯಿಂದ ಮತ್ತೊಂದು ತುದಿಯ ವರೆಗೆ ಯಾವತ್ತು ಕೂಲಿಕಾರರು ಹೆಚ್ಚು ಸಂಬಳ ಬೇಡ ಹತ್ತುವಷ್ಟು ಅವರೊಳಗೆ ಒಳ್ಳೇ ವ್ಯವಸ್ಥೆಯೂ ಐಕಮತ್ಯವೂ ಉಂಟಾಗಲಿಕ್ಕೆ ಅಸಂಖ್ಯ ಅಡ್ಡಿಗಳಿರುವವು. ಈ ಅಡ್ಡಿಗಳನ್ನೆಲ್ಲ ಒತ್ತಟ್ಟಿಗಿಟ್ಟು, ಗ್ರೇಟಬ್ರಿಟನದಲ್ಲೆಲ್ಲಾ ಕೂಲಿಕಾರರು ಹೆಚ್ಚು ಸಂಬಳ ಬೇಡ ಹತ್ತಿದರೆಂತಲೂ, ಮತ್ತು ಅದರಂತೆ ಅವರಿಗೆ ಹೆಚ್ಚು ಸಂಬಳ ಕೊಟ್ಟದ್ದರಿಂದ ಲಾಭವು ಕಡಿಮೆಯಾಗಿ, ಬಡ್ಡಿಯ ದರವು ನೂರಕ್ಕೆ ೩ರಿಂದ ೨ಕ್ಕೆ ಇಳಿಯಿತೆಂತಲೂ ಕಲ್ಪಿಸುವ. ಈ ಪ್ರಕಾರ ಲಾಭವು ಇಳಿಯಲು, ಬಂಡವಲವೂ ಹಾಗು ತನ್ಮೂಲಕವಾಗಿ ಸಂಬಳವೂ ಎರಡು ವಿಧವಾಗಿ ಕಡಿಮೆಯಾಗ ಹತ್ತುವವು. ಯಾಕಂದರೆ, ಬಂಡವಲವು ಸಂಗ್ರಹೇಚ್ಛೆಯ ಫಲವು. ಈ ಸಂಗ್ರಹೇಚ್ಛೆಯು ಬಡ್ಡಿಯ ದರವು ಏರಿದಂತೆ ಹೆಚ್ಚಾಗುವದು. ಬಡ್ಡಿಯ ದರವು ನೂರಕ್ಕೆ ೩ರಿಂದ ೨ಕ್ಕೆ ಇಳಿಯಲು, ಜನರಿಗೆ ಸಂಗ್ರಹ ಮಾಡುವ ಬಯಕೆಯು ಕಡಿಮೆಯಾಗಿ, ಅವರು ತಮ್ಮ ಹಣವನ್ನು ಉತ್ಪಾದಕ ಕೆಲಸದಲ್ಲಿ ಹಾಕುವದಕ್ಕಿಂತಲೂ ತಮ್ಮ ಸುಖೋಪಭೋಗಕ್ಕಾಗಿ ವೆಚ್ಚ ಮಾಡುವದೇ ಲೇಸೆಂದು ತಿಳಿಯುವರು. ನೂರಕ್ಕೆ ವರ್ಷಕ್ಕೆ ೨ರಂತೆ ಬಡ್ಡಿ ಬರುವದೆಂಬ ಆಶೆಗಾಗಿ ಪ್ರಕೃತೋಪಭೋಗವನ್ನು ಬಿಟ್ಟು, ದ್ರವ್ಯಸಂಗ್ರಹ ಮಾಡುವವರು ಕಡಿಮೆ. ಆದಕಾರಣ, ಬಂಡವಲದ ಪೂರೈಕೆಗೆ ಪ್ರತಿಬಂಧವಾಗುವದು. ಇದಲ್ಲದೆ ಎಷ್ಟೋ ಜನರು—"ನಮ್ಮ ಬಂಡವಲಕ್ಕೆ ನೂರಕ್ಕೆ ೨ರಂತೆ ಆಗುವ ಪ್ರಾಪ್ತಿಯಿಂದ ನಮ್ಮ ಚರಿತಾರ್ಥ ಸಾಗದು. ಈ ದೇಶದಲ್ಲಿ ನಮ್ಮ ಬಂಡವಲಕ್ಕೆ ಇದಕ್ಕೂ ಹೆಚ್ಚು ಪ್ರಾಪ್ತಿಯು ಆಗದಿದ್ದರೆ, ಹಿಂದುಸ್ಥಾನದ ಚಹದ ತೋಟಗಳಲ್ಲಿ, ಇಲ್ಲವೆ ಅಮೇರಿಕೆಯ ರೇಲ್ವೆಯಲ್ಲಿ, ಇಲ್ಲವೆ ಪೇರೂ ದೇಶದ ಕಣಿಗಳಲ್ಲಿ, ಇಲ್ಲವೆ ಬೇರೆ ಯಾವದಾದರೂ ದೇಶಾಂತರದ ಉದ್ಯೋಗದಲ್ಲಿ ನಮ್ಮ ಬಂಡವಲವನ್ನು ಹಾಕುವ," ಎಂದು ಹೇಳಿ, ತಮ್ಮ ಬಂಡವಲವನ್ನು ಪರದೇಶಗಳಿಗೆ ಕಳುಹಿಸುವರು.

ಈ ಪ್ರಕಾರ ಎಷ್ಟೋ ಬಂಡವಲವು ಪರದೇಶಗಳ ಮಾರ್ಗವನ್ನು ಹಿಡಿಯುವದು. ಮತ್ತು ಅದೇ ಸಮಯಕ್ಕೆ ಸಂಗ್ರಹೇಚ್ಛೆಯೂ ಕಡಿಮೆಯಾಗಿರುವದರಿಂದ ಹೊಸ ಬಂಡವಲದ ಸಂಚಯವಾಗುವದಕ್ಕೂ ಅಡ್ಡಿಯಾಗುವದು. ಆ ಕಾರಣ, ದೇಶದೊಳಗಿನ ಬಂಡವಲವು ಕ್ರಮೇಣ ಬಹಳ ಕಡಿಮೆಯಾಗುವದು. ಹಿಂದೆ ೧ನೇ ಭಾಗದಲ್ಲಿ ಹೇಳಿದ ಮೇರೆಗೆ, ಬಂಡವಲದಲ್ಲಿ ಸ್ಥಿರ ಬಂಡವಲವೆಂತಲೂ, ಚರ ಬಂಡವಲವೆಂತಲೂ, ಎರಡು ವಿಧಗಳಿರುವವು. ಯಾವತ್ತು ಬಂಡವಲದ ಕೆಲವೊಂದು ಪ್ರಮಾಣದಿಂದ ಚರ ಬಂಡವಲವಿರುವದು. ಆದಕಾರಣ, ದೇಶದೊಳಗಿನ ಬಂಡವಲ ಕಡಿಮೆಯಾದರೆ, ಬಹುತರವಾಗಿ ಇವೆರಡೂ ಬಗೆಯ ಬಂಡವಲ ಕಡಿಮೆಯಾಗುವದು. ಚರ ಬಂಡವಲದ ಮುಖ್ಯ ಕಾರ್ಯವು ಶ್ರಮಕರ್ತರ ಚರಿತಾರ್ಥ ಸಾಗಿಸುವದು, ಅಂದರೆ ಕೂಲಿಕಾರರಿಗೆ ಸಂಬಳವ ಕೊಡುವದು. ಆದಕಾರಣ, ಚರ ಬಂಡವಲ ಕಡಿಮೆಯಾಗಲಾಗಿ, ಶ್ರಮಕರ್ತರ ಸಂಬಳ ಕಡಿಮೆಯಾಗುವದು ಅಪರಿಹಾರ್ಯವಾಗಿರುವದು. ಇದರ ಮೇಲಿಂದ ತಿಳಿಯುವದೇನಂದರೆ, ಯಾವದೊಂದು ದೇಶದೊಳಗಿನ ಬಡ್ಡಿಯ ದರವನ್ನು ವಿಶೇಷ ಇಳಿಸುವಂಥ ಸಂಗತಿಯಿಂದ ಬಂಡವಲದ ಸಂಗ್ರಹಕ್ಕೆ ಪ್ರತಿಬಂಧವಾಗುವದಲ್ಲದೆ, ಬಂಡವಲವು ದೇಶಾಂತರಕ್ಕೆ ಹೋಗ ಹತ್ತುವದು. ಅದರಿಂದ ದೇಶದೊಳಗಿನ ಒಟ್ಟು ಬಂಡವಲವು ಕಡಿಮೆಯಾಗಿ ಚರ ಬಂಡವಲವು ಕಡಿಮೆಯಾಗುವದು, ಹಾಗು ಸಂಬಳವು ಇಳಿಯುವದು.

ಕೂಲಿಕಾರರು ಹೆಚ್ಚು ಸಂಬಳ ಬೇಡುವದರಿಂದ ಬಡ್ಡಿಯ ದರವು ಮಿತಿಮಾರಿ ಇಳಿದದ್ದಾದರೆ, ಅದರಿಂದ ಚರ ಬಂಡವಲವು ಕಡಿಮೆಯಾಗಿ, ಕೂಲಿಕಾರರಿಗೆ ಬಹಳ ಕಠಿಣವಾದ ಪ್ರಸಂಗ ಬರುವದು. ಯಾಕಂದರೆ ಅವರು ಕೆಲವು ಕಾಲ ಸಂಪಾದಿಸಿದಂಥ ಹೆಚ್ಚಿನ ಕೂಲಿಯ ಮೂಲಕವಾಗಿ ಅವರ ಕುಟುಂಬಗಳು ಬೆಳೆದಿರ ಬಹುದು. ಆ ಕಾರಣ ಅವರ ಸಂಬಳ ಕಡಿಮೆಯಾದ ಕಾಲಕ್ಕೆ ಅವರೊಳಗೆ ಉಣ್ಣುವ ಜನರ ಸಂಖ್ಯೆಯು ವೃದ್ಧಿಯಾಗಿರುವದು, ಜೀವನೋಪಾಯಗಳು ಕಡಿಮೆಯಾಗಿರುವವು. ಇಂಥ ಸಮಯದಲ್ಲಿ ವಿಪತ್ತೆಂಬುವದು ಅವರಿಗೆ ಇಬ್ಬಾಯಿಯ ಕತ್ತಿಯಾಗಿರುವದು. ಕೆಲವರ್ಷಗಳಾಚೆಯಲ್ಲಿ, ಲಂಡನದ ಪೂರ್ವಭಾಗದಲ್ಲಿದ್ದ ಕೂಲಿಕಾರರು ಈ ಬಗೆಯ ಎರಡೂ ಬದಿಯಿಂದ ನಾಶ ಪಡಿಸುವಂಥ ಕಷ್ಟಗಳಿಗೆ ಒಳಗಾಗಿದ್ದರು. ಬೇರೆ ಯಾವತ್ತು ಸ್ಥಳಗಳಿಗಿಂತಲೂ ಲಂಡನ ಪಟ್ಟದಲ್ಲಿ ಕೂಲಿಕಾರರ ಚರಿತಾರ್ಥಕ್ಕೆ ಹೆಚ್ಚು ಖರ್ಚು ಬೀಳುವದು. ಲಂಡನದಲ್ಲಿ ಮನೆಬಾಡಿಗೆ ಬಹಳ, ಉರುವಲ ತುಟ್ಟಿ, ಕರಗಳಂತೂ ಅತಿಶಯವಾಗಿರುವವು. ಆದಕಾರಣ

ಗ್ಲಾಸಗೋ ಮೊದಲಾದ ಬೇರೆ ಪಟ್ಣಗಳಿಗಿಂತಲೂ ಲಂಡನದಲ್ಲಿ ಕೂಲಿಕಾರರಿಗೆ ಹೆಚ್ಚು ಸಂಬಳ ದೊರಿಯುವದು ಸ್ವಾಭಾವಿಕವಾದದ್ದು. ಆದ್ದರಿಂದ ಲಂಡನದ ಪೂರ್ವಭಾಗದಲ್ಲಿ ನಡಿಯುವ ಮುಖ್ಯ ಕಾರಖಾನೆಗಳೊಳಗಿನ ಒಂದು ಹಡಗ ಕಟ್ಟುವ ಕಾರಖಾನೆಯ ಸಾವುಕಾರರು ಕೆಲಕಾಲ ಪರ್ಯಂತರ ತಮ್ಮ ಉದ್ಯೋಗ ವನ್ನು ಲುಕಸಾನು ಸಹಿಸಿ ನಡಿಸಿದರು; ಹಾಗು ಕ್ರಮೇಣ ತಮ್ಮ ಕಾರಖಾನೆಯನ್ನು ಶ್ರಮವೂ, ಬೇರೆ ಸಾಮಗ್ರಿಯೂ ಅಗ್ಗವಾಗಿ ದೊರಿಯುವಂಥ ಗ್ಲಾಸಗೋ ಮೊದ ಲಾದ ಬೇರೆ ಬಂದರಗಳಿಗೆ ವೈದರು. ಈ ಕಾರಖಾನೆಯು ಲಂಡನದಲ್ಲಿ ನಡಿಯು ತ್ತಿದ್ದಾಗ್ಯೆ ಅಲ್ಲಿಯ ಕೂಲಿಕಾರರಿಗೆ ಬಹಳ ಸಂಬಳ ದೊರಿದದ್ದರಿಂದ ಜನಸಂಖ್ಯೆ ಯು ಬಹಳವಾಗಿ ಬೆಳೆಯುವದಕ್ಕೆ ಪ್ರೋತ್ಸಾಹನ ಉಂಟಾಗಿತ್ತು. ಆದ್ದರಿಂದ, ಮುಂದೆ ಅವರ ಉದ್ಯೋಗವು ಮಂದವಾದಾಗ, ಅವರ ವಿಪತ್ತುಗಳು ಮತ್ತಿಷ್ಟು ಹೆಚ್ಚಾದವು.

**ಬಂಡವಲವು ಹೊರಗೆ ಹೋಗುವದರಿಂದ ಮೇಲಾಟದ ವಿಸ್ತಾರವು ಬೆಳೆಯುತ್ತದೆ.**— ಬಂಡವಲವು ದೇಶಾಂತರಕ್ಕೆ ತೆರಳುವದರಿಂದ ಲಾಭದ ಮೇಲೆ ಆಗುವ ಮುಖ್ಯ ಪರಿಣಾಮವು ಯಾವದಂದರೆ, ಅದರಿಂದ ಮೇಲಾಟ ನಡಿಯುವ ಕ್ಷೇತ್ರಫಲವು ಹೆಚ್ಚಾಗುತ್ತದೆ. ಯಾವದೊಂದು ಉದ್ಯೋಗದಲ್ಲಿ ಲಾಭವು ಮಿತಿ ಮೀರಿ ಬರ ಹತ್ತಲಾಗಿ ಬೇರೆ ಬಂಡವಲಗಾರರ ಮೇಲಾಟದಿಂದ ಈ ಲಾಭವು ವಾಡಿಕೆಯಾದ ದರಕ್ಕೆ ಇಳಿಯುತ್ತದೆಂದು ಹಿಂದೆ ಹೇಳಿದ್ದೇವಷ್ಟೇ. ಈ ಮಾತು ಒಂದೇ ದೇಶದೊಳಗಿನ ಬೇರೆ ಬೇರೆ ಉದ್ಯೋಗಗಳಿಗೆ ಸರಿ ಬೀಳುವಂತೆಯೇ, ಸ್ವಲ್ಪ ಕಡಿಮೆಯಾಗಿ, ಬೇರೆ ಬೇರೆ ದೇಶಗಳ ಸಂಬಂಧದಿಂದಲೂ ಸರಿ ಬೀಳುವದು. ಬೇರೆ ಬೇರೆ ದೇಶಗಳ ನಡುವೆ ನಡಿಯುವ ಮೇಲಾಟವು, ಒಂದೇ ದೇಶದೊಳಗೆ ಬೇರೆ ಬೇರೆ ಉದ್ಯೋಗಗಳೊಳಗೆ ನಡಿಯುವ ಮೇಲಾದಷ್ಟು ಒತ್ತರವಾಗಿ ನಡಿ ಯುವದಿಲ್ಲ. ಯಾಕಂದರೆ, ಅನೇಕ ಸಾರಿ, ಬಂಡವಲವನ್ನು ಪರದೇಶಗಳ ಉ ದ್ಯೋಗಗಳಲ್ಲಿ ಹಾಕ ಬೇಕಾದರೆ ಬಹಳ ಲುಕಸಾನವೂ ತೊಂದರೆಯೂ ಸಂಭ ವಿಸುತ್ತವೆ. ಉದಾಹರಣಾರ್ಥವಾಗಿ, ಲಂಡನದಲ್ಲಿರುವ ಒಬ್ಬ ಅಂಗಡಿಗಾರನಿಗೆ, ಅವನ ಶ್ರಮದ ಸಂಬಳವನ್ನೂ ಲುಕಸಾನಿನ ಭಯದ ಪ್ರತಿಫಲವನ್ನೂ ಅವನ ಲಾ ಭದೊಳಗಿಂದ ಕಳೆಯಲು, ಅವನ ಬಂಡವಲದ ಮೇಲೆ ನೂರಕ್ಕೆ ೨ರಂತೆ ಮಾತ್ರ ಬಡ್ಡಿ ಹುಟ್ಟುವಷ್ಟು ಖರ್ಚು ಬೀಳುತ್ತಿರ ಬಹುದು. ಹಾಗು ಆಸ್ಟ್ರೇಲಿಯದಲ್ಲಿ ನೂರಕ್ಕೆ ೧೦ರಂತೆ ಬಡ್ಡಿ ಬರುತ್ತದೆಂತಲೂ ಅವನಿಗೆ ಗೊತ್ತಿರ ಬಹುದು. ಆದರೂ ಆಸ್ಟ್ರೇಲಿಯದಲ್ಲಿ ಯಾವದೊಂದು ಉದ್ಯೋಗವನ್ನು ನಡಿಸ ಬೇಕಾದರೆ ಅವನಿಗೆ

ಎಷ್ಟೋ ಅಡಚಣಿಗಳು ಬರಬಹುದು. ಒಂದು ವೇಳೆ ಆಸ್ಟ್ರೇಲಿಯದಲ್ಲಿ ಬಂಡವಲ ಹಾಕಲಿಕ್ಕೆ ಉತ್ಕೃಷ್ಟವಾದ ಉದ್ಯೋಗವು ಯಾವದೆಂಬುವದರ ಬಗ್ಗೆ ಅವನಿಗೆ ವಿಶ್ವಾಸಪೂರ್ವಕವಾಗಿ ಹೇಳುವವರು ದೊರಿಯಲಿಕ್ಕಿಲ್ಲ. ಇಂಗ್ಲಂಡದಿಂದ ಆಸ್ಟ್ರೇಲಿಯಕ್ಕೆ ಹೋಗ ಬೇಕಾದರೆ ಬಹಳ ದೂರಿನ ಪ್ರಯಾಣ ಮಾಡ ಬೇಕಾಗುವದಲ್ಲದೆ, ಬಹಳ ಹಣವನ್ನು ಖರ್ಚು ಮಾಡ ಬೇಕಾಗುವದು. ಇದಲ್ಲದೆ ಇನ್ನೂ ಕೆಲವು ವಿಚಾರಗಳಿಂದ ಅವನಿಗೆ ಸ್ವದೇಶವನ್ನು ಬಿಟ್ಟು ಪರದೇಶಕ್ಕೆ ಹೋಗುವದಕ್ಕೆ ಮನಸಾಗದೆ ಹೋಗುವದು. ಈ ಬಗೆಯ ಅಡಚಣಿಗಳಿಂದ ಇದು ವರೆಗೆ ಪರದೇಶಗಳಿಗೆ ಬಂಡವಲ ಹೋಗುವದಕ್ಕೆ ಬಹಳ ಅಡ್ಡಿಯುಂಟಾಗಿದೆ. ಆದರೂ ಕ್ರಮೇಣ ಈ ಅಡಚಣಿಗಳು ಕಡಿಮೆಯಾಗುತ್ತ ನಡಿದವೆ. ಜನರೊಳಗೆ ಜ್ಞಾನದ ಪ್ರಸಾರ ಹೆಚ್ಚಾದ ಹಾಗೆ, ಹಾಗು ಬೇರೆ ಬೇರೆ ದೇಶಗಳ ನಡುವೆ ಪತ್ರವ್ಯವಹಾರವೂ ಹೋಗಿ ಬರೋಣವೂ ಬಹಳ ನಡಿದ ಹಾಗೆ, ಪರದೇಶಗಳಿಗೆ ಹೆಚ್ಚು ಬಂಡವಲ ಹೋಗುವದೆಂದು ತೋರುತ್ತದೆ. ಇಂಗ್ಲಿಷ ವರ್ತಕರ ಬಂಡವಲದಿಂಧ ನಡಿಯುವ ಕಾರಖಾನೆಗಳು ಯುರೋಪದ ಬೇರೆ ರಾಷ್ಟ್ರಗಳಲ್ಲಿ ಅನೇಕ ಉಂಟು. ನಾಟಿಂಗ್ಹಾಮ್ ಪಟ್ಟದಲ್ಲಿ ಕಾಲುಚೀಲ ಮಾಡುವ ಒಂದು ದೊಡ್ಡ ಕಾರಖಾನೆಯ ಶಾಖೆಯು ಜರ್ಮನಿ ದೇಶದೊಳಗಿನ ಸ್ಯಾಕ್ಸನಿ ಪ್ರಾಂತದಲ್ಲುಂಟು. ಇಂಗ್ಲಂಡದಲ್ಲಿ ಕೂಲಿಕಾರರು ಕಟ್ಟು ಮಾಡಿ ಹೆಚ್ಚು ಸಂಬಳ ತಕ್ಕೊಳ್ಳುವದರಿಂದ ಸ್ಯಾಕ್ಸನಿಗಿಂತಲೂ ನಾಟಿಂಗ್ಹ್ಯಾಮದಲ್ಲಿ ಕಡಿಮೆ ಲಾಭವಾಗ ಹತ್ತಿದರೆ, ಈ ಕಾರಖಾನೆಯ ಮುಖ್ಯಸ್ಥರು ಕೈಲಾದ ಮಟ್ಟಿಗೆ ನಾಟಿಂಗ್ಹ್ಯಾಮದ ಕಾರಖಾನೆಯನ್ನು ಕಡಿಮೆ ಮಾಡಿ, ಸ್ಯಾಕ್ಸನಿಯೊಳಗಿನ ಕಾರಖಾನೆಯನ್ನು ಬೆಳಿಸುವರು; ಅಂದರೆ ಇಂಗ್ಲಂಡದಿಂದ ಸ್ಥಿರ ಬಂಡವಲ ಚರ ಬಂಡವಲಗಳೆರಡೂ ಸ್ಯಾಕ್ಸನಿಗೆ ಹೋಗುವವು. ಒಂದು ದೇಶದ ಕಾರಖಾನೆಯವರು ಪರದೇಶದಲ್ಲಿ ಕಾರಖಾನೆಗಳನ್ನು ನಡಿಸುವಂಥ ಉದಾಹರಣಗಳು ನೂರು ವರ್ಷಗಳಾಚೆಯಲ್ಲಿ ಬಹುಶಃ ಇದ್ದೇ ಇಲ್ಲ. ಆದರೆ ಬರಬರುತ್ತಾ ಈ ತರದ ಉದಾಹರಣಗಳು ಬಹಳವಾಗಿ, ಬೇರೆ ಬೇರೆ ದೇಶಗಳೊಳಗಿನ ಲಾಭದ ದರವು ಈಗಿನದಕ್ಕಿಂತಲೂ ವಿಶೇಷವಾಗಿ ಸಮಾನವಾಗುವದೆಂದು ತೋರುತ್ತದೆ.

ಇಲ್ಲಿಗೆ ಸಂಪತ್ತಿನಲ್ಲಾಗುವ ಮೂರು ದೊಡ್ಡ ವಿಭಾಗಗಳ ವಿವೇಚನವು ಮುಗಿಯಿತು. ಆದರೂ, ಇಂಗ್ಲಂಡ ಮೊದಲಾದ ದೇಶಗಳಲ್ಲಿ ವಿಶೇಷವಾಗಿ ಪ್ರಚಾರಗೊಂಡ ಉದ್ಯೋಗ ಸಮಾಜಗಳಿಂದಲೂ, ಕೂಲಿಕಾರರ ಕಟ್ಟುಗಳಿಂದಲೂ, ಅನ್ಯೋನ್ಯ ಸಹಾಯಕ ಸಂಘಗಳಿಂದಲೂ, ಸಂಬಳ ಹಾಗೂ ಲಾಭದ

ಮೇಲೆ ಆಗುವ ಪರಿಣಾಮವನ್ನು ವಿವರಿಸಿದ ಹೊರ್ತು, ಈ ಭಾಗದ ವಿವೇಚನವು ಪೂರ್ಣವಾದ ಹಾಗೆ ಆಗಲಿಕ್ಕಿಲ್ಲ. ಆ ಕಾರಣ ಈ ವಿಷಯವು ಮುಂದಿನ ಅಧ್ಯಾಯದಲ್ಲಿ ವಿವರಿಸಲ್ಪಡುವದು.

## ಮೂರನೆ ಅಧ್ಯಾಯದ ಮೇಲಿನ ಪ್ರಶ್ನಗಳು.

## ಬಂಡವಲದ ಲಾಭ.

೧. ಬಂಡವಲಕ್ಕೆ ಬರುವ ಲಾಭದ ಯಥಾರ್ಥವಾದ ಸ್ವರೂಪವನ್ನು ವರ್ಣಿಸಿರಿ.

೨. ಬಂಡವಲಕ್ಕೆ ಲಾಭ ಬರುವದು ನ್ಯಾಯವಾದದ್ದೆಂಬುವದನ್ನೂ ಲಾಭವು ಯಾವಾಗಲು ಬರುವದು ಒಳ್ಳೇದೆಂಬುವದನ್ನೂ ತೋರಿಸಿರಿ.

೩. ಬಂಡವಲದ ಲಾಭದಲ್ಲಿ ಸೇರುವ ಮೂರು ಅಂಶಗಳು ಯಾವವು?

೪. ಬಂಡವಲದ ಬಡ್ಡಿಯಂದರೇನು? ಯಾವದೊಂದು ದೇಶದೊಳಗಿನ ಬಡ್ಡಿಯ ದರವನ್ನು ಹ್ಯಾಗೆ ತಿಳಕೊಳ್ಳ ಬೇಕು?

೫. ಬೇರೆ ಬೇರೆ ಉದ್ಯೋಗಗಳಲ್ಲಿ ಲಾಭದ ದರವು ಹೆಚ್ಚುಕಡಿಮೆಯಾಗಿರುವ ಕಾರಣವೇನು?

೬. ಆಸ್ತಿಯ ಸಂರಕ್ಷಣವು ಚನ್ನಾಗಿ ಆಗದಿದ್ದರೆ ಅದರಿಂದ ಲಾಭದ ಮೇಲೆ ಆಗುವ ಪರಿಣಾಮವು ಯಾವದು?

೭. ಒಂದೇ ದೇಶದಲ್ಲಿ ಒಂದೇ ಸಮಯಕ್ಕೆ ಬಡ್ಡಿಯ ದರವು ಹೆಚ್ಚುಕಡಿಮೆಯಾಗ ಬಹುದೋ?

೮. ಜನಸಂಖ್ಯೆ ಬೆಳೆದ ಹಾಗೆ ಬಡ್ಡಿಯ ದರ ಇಳಿಯುವ ಕಾರಣವೇನು?

೯. ಸಾಗುವಳಿಯ ಮೇರೆ ಇಳಿದ ಹಾಗೆ ಬಡ್ಡಿಯ ದರವು ಇಳಿಯುವದೆಂಬುವದನ್ನು ತೋರಿಸುವಂಥ ಒಂದು ದೃಷ್ಟಾಂತವನ್ನು ಹೇಳಿರಿ.

೧೦. ಲಾಭವು ಸಂಬಳದ ದರವನ್ನು ಅವಲಂಬಿಸಿರುವದೆಂದು ಒಮ್ಮೊಮ್ಮೆ ಅನ್ನುವದುಂಟು. ಇದು ಯಾಕೆ ತಪ್ಪು? ಲಾಭವು ನಿಜವಾಗಿ ಯಾತರ ಮೇಲೆ ಅವಲಂಬಿಸಿರುವದು?

೧೧. ಧಾರಣೆಗಳು ಏರುವದರಿಂದ ಲಾಭವು ಅವಶ್ಯವಾಗಿ ಹೆಚ್ಚಾಗುವದೋ?

೧೨. ಧಾರಣೆಗಳು ಏರಿದಾಗ್ಯೆ ಒಮ್ಮೊಮ್ಮೆ ಲಾಭದ ದರವು ಇಳಿದಿರುತ್ತದೆಂಬದನ್ನು ತೋರಿಸುವಂಥ ಒಂದು ಉದಾಹರಣವನ್ನು ಕೊಡಿರಿ.

೧೩. ಬಂಡವಲಗಾರನಿಗೆ ಶ್ರಮಕ್ಕೋಸ್ಕರ ತಗಲುವ ಖರ್ಚು ಯಾವ ಮೂರು ಬದಲಿಸುವಂಥ ಸಂಗತಿಗಳಿಗೆ ಆಧೀನವಾಗಿರುವದು?

೧೪. ಯಾವದೊಂದು ದೇಶದೊಳಗೆ ಬಡ್ಡಿಯ ದರ ಇಳಿಯಲಾಗಿ ಅದರಿಂದ ರಾಷ್ಟ್ರೀಯ ಬಂಡವಲವು ಎರಡು ಬಗೆಯಾಗಿ ಕಡಿಮೆಯಾಗ ಹತ್ತುವದು ಹ್ಯಾಗೆ?.

೧೫. ಈ ಪ್ರಕಾರ ಬಂಡವಲ ಕಡಿಮೆಯಾಗಲು, ಕೂಲಿಕುಂಬಳಿಯಿಂದ ಜೀವಿಸುವವರ ಸ್ಥಿತಿಯಲ್ಲುಂಟಾಗುವ ಪರಿಣಾಮವು ಯಾವದು?

೧೬. ಬಂಡವಲವನ್ನು ಪರದೇಶಗಳಿಗೆ ಕಳುಹಿಸುವದರಿಂದ ಲಾಭದ ಮೇಲೆ ಉಂಟಾಗುವ ಪರಿಣಾಮವು ಯಾವದು?

೧೭. ಒಂದೇ ದೇಶದೊಳಗಿನ ಬೇರೆ ಬೇರೆ ಕಸಬಿಗಳಿಗಿಂತಲೂ ಬೇರೆ ಬೇರೆ ದೇಶಗಳೊಳಗೆ ಸ್ಪರ್ಧೆಯು ಹೆಚ್ಚು ಸಾವಕಾಶವಾಗಿ ನಡಿಯುವದಕ್ಕೆ ಕಾರಣವೇನು?

೧೮. ಬರಬರುತ್ತಾ ಬಂಡವಲವು ಪರದೇಶಗಳಿಗೆ ಹೆಚ್ಚು ಹೆಚ್ಚಾಗಿ ಹೋಗುವ ಸಂಭವವು ಹ್ಯಾಗೆ ಇರುವದು?

೧. ಒಕ್ಕಲತನದ ಉದ್ಯೋಗಕ್ಕಿಂತಲೂ ಹುಂಡೀ ವ್ಯಾಪಾರ ಮಾಡುವವರಿಗೆ ಹೆಚ್ಚು ಲಾಭ ಬರುವದು. ಇದಕ್ಕೆ ಏನು ಕಾರಣವಿರ ಬಹುದು?

೨. ಬಡ್ಡಿಯ ವ್ಯವಹಾರ ಮಾಡುವದು ನೀಚತನವೋ? ಸಾವುಕಾರರು ಇಷ್ಟೇ ಬಡ್ಡಿಯನ್ನು ತಕ್ಕೊಳ್ಳ ಬೇಕೆಂಬ ಕಾಯಿದೆಯಿಂದ ಏನಾದರೂ ಹಿತವಾಗ ಬಹುದೋ?

೩. ಇಂಗ್ಲಂಡದಿಂದ ಬಂಡವಲವು ಹೊರಗೆ ಹೋದದ್ದರಿಂದ ಇಂಗ್ಲಂಡದೊಳಗಿನ ಲಾಭದ ದರದ ಲ್ಲುಂಟಾಗಿರುವ ಪರಿಣಾಮವೇನು?

೪. ಜಗತ್ತಿನೊಳಗಿನ ಕೂಲಿಕುಂಬಳಿಯಿಂದ ಜೀವಿಸುವ ಜನರೆಲ್ಲರು ಕಟ್ಟು ಮಾಡಿ ಹೆಚ್ಚು ಸಂಬಳ ತಕ್ಕೊಳ್ಳ ಹತ್ತಿದ್ದರಿಂದ, ಬಂಡವಲದ ಸಹಾಯದಿಂದ ಹುಟ್ಟಿದ ಸಂಪತ್ತಿನೊಳಗಿಂದ ಬಂಡವಲಕ್ಕೆ ಏನು ಪ್ರತಿಫಲ ಬಾರದೆ ಹೋಯಿತೆಂದು ಕಲ್ಪಿಸಿರಿ. ಇದರಿಂದ ಸಂಪದುತ್ಪಾದನದ ಮೇಲೂ, ಯಾವತ್ತು ಜನಸಮೂಹದ ಹಿತದ ಮೇಲೂ, ಏನು ಪರಿಣಾಮ ಸಂಭವಿಸುವದು?

೫. ಲಾಭದ ದರವು ಬಹಳ ಏರುವದು ಕೆಲವು ಸಾರಿ ದೇಶದ ಒಳ್ಳೇ ಸ್ಥಿತಿಯನ್ನೂ, ಕೆಲವು ಸಾರಿ ಕೇವಲ ತದ್ವಿರುದ್ಧವಾದ ಸ್ಥಿತಿಯನ್ನೂ, ಸೂಚಿಸುವದೆಂಬದನ್ನು ತೋರಿಸಿರಿ. ಯುನಾಯಿಟೆಡಸ್ಟೇಟ್ಸ ಹಾಗೂ ಮೇಕ್ಸಿಕೋ ದೇಶಗಳ ಉದಾಹರಣಗಳನ್ನು ತಕ್ಕೊಂಡು ಈ ಸಂಗತಿಯನ್ನು ಸ್ಪಷ್ಟೀಕರಿಸಿರಿ.

## ೪ನೇ ಅಧ್ಯಾಯ.

## ಉದ್ಯೋಗಸಮಾಜಗಳು, ಕೂಲಿಕಾರರ ಕಟ್ಟುಗಳು, ಅನ್ಯೋನ್ಯಸಹಾಯಕ ಸಂಘಗಳು.

**ಉದ್ಯೋಗಸಮಾಜಗಳು ಮಾಡ ತಕ್ಕ ಕೆಲಸಗಳ ವಿವರವು:—** ಯಾವದೊಂದು ಕಸಬಿನಲ್ಲಿ ದುಡಿಯುವ ಕೆಲಸಗಾರರು ತಮ್ಮೊಳಗೆ ಮಾಡಿಕೊಂಡ ಕೂಟಕ್ಕೆ ಉದ್ಯೋಗಸಮಾಜವೆಂಬ ಹೆಸರು. ಇಂಥ ಸಮಾಜವು ಸಾಧಾರಣವಾಗಿ ಎರಡು ವಿಧದ ಕೆಲಸಗಳನ್ನು ಮಾಡುವದು:—(೧) ಕೂಲಿಕಾರರಿಗೆ ಆಪತ್ತಿನ ಕಾಲದಲ್ಲಿ ಸಹಾಯ ಮಾಡುವದು; (೨) ಕೂಲಿಕಾರರಿಗೆ ಹೆಚ್ಚು ಸಂಬಳ, ಕೆಲಸ ಮಾಡುವ ಕಡಿಮೆ ತಾಸುಗಳು, ಮುಂತಾದವುಗಳು ಉಂಟಾಗುವ ಹಾಗೆ ಮಾಡಿ, ಅವರ ಹಿತಗಳನ್ನು ರಕ್ಷಿಸುವದು. ಉದ್ಯೋಗ ಸಮಾಜಗಳಿಂದ ಕೂಲಿಕಾರರಿಗೆ ಆಪತ್ತಿನ ಕಾಲದಲ್ಲಿ ಸಹಾಯವಾಗುವ ಕಾರಣ, ಈ ಸಂಬಂಧದಿಂದ ಈ ಸಮಾಜಗಳು ಮಹದುಪಯೋಗವುಳ್ಳವೆಂಬುವದಕ್ಕೆ ಎಲ್ಲರೂ ಒಪ್ಪಿಕೊಳ್ಳುವರು. ಉದ್ಯೋಗಸಮಾಜಕ್ಕೆ ಶೇರಿದ ಪ್ರತಿಯೊಬ್ಬ ಕೂಲಿಕಾರನು ಸಮಾಜದ ನಿಯಮಗಳ ಪ್ರಕಾರ, ವಾರದಲ್ಲಿ ತನಗೆ ಬಂದ ಸಂಬ

ಳದ ಕೆಲವಂಶವನ್ನು ಸಮಾಜದ ಗಂಟಿಗೆ ಕೊಡಲಿಕ್ಕೇ ಬೇಕು. ಅವನು ಬೇನೆ ಬಿದ್ದರೆ, ಇಲ್ಲವೆ ಅವನ ಕೆಲಸ ತಪ್ಪಿದರೆ, ಈ ಗಂಟಿನೊಳಗಿಂದ ಅವನಿಗೆ ಸಹಾಯ ದೊರಿಯುವದು. ಹಾಗೂ ಅವನು ಮೃತಪಟ್ಟರೆ, ಈ ಗಂಟಿನೊಳಗಿಂದ ಕೆಲವೊಂದು ರಕಮು ಅವನ ಕುಟುಂಬಕ್ಕೆ ದೊರಿಯುವದು. ಈ ಪ್ರಕಾರ, ವಸ್ತುತಃ ಉದ್ಯೋಗಸಮಾಜವೆಂಬುವದು ಜೀವದ ವಿಮೆ ತಕ್ಕೊಳ್ಳುವ ಕಂಪನಿಯಾಗಿರುವದು. ಇಂಗ್ಲಂಡದಲ್ಲಿ ಇಂಥ ಸಮಾಜಗಳಿಂದ ಕೂಲಿಕಾರರಿಗೆ ಬಹಳ ಸಹಾಯವಾಗುವದು. ಉದಾಹರಣಾರ್ಥವಾಗಿ, ಬಡಿಗತನದ ಉದ್ಯೋಗಸಮಾಜಕ್ಕೆ ಶೇರಿದ ಕೂಲಿಕಾರರಾಗಲಿ, ಮನೆಕಟ್ಟುವ ಉದ್ಯೋಗಸಮಾಜಕ್ಕೆ ಶೇರಿದ ಕೂಲಿಕಾರರಾಗಲಿ, ಇದು ವರೆಗೆ ಅನಾಥಸಂರಕ್ಷಕ ಫಂಡಿನೊಳಗಿಂದ ಸಹಾಯ ಬೇಡಲಿಕ್ಕೆ ಬಂದದ್ದನ್ನು ಯಾರೂ ಕಂಡಿಲ್ಲ.

ಈ ತರದ ಸಮಾಜಗಳು ಇಂಗ್ಲಂಡದಲ್ಲಿ ಬಹಳ. ಇವು ಎಷ್ಟು ಗೌರವವನ್ನೂ, ಎಷ್ಟು ಉನ್ನತಿಯನ್ನೂ ಪಡೆದಿರುವದೆಂಬದು ಕೆಳಗೆ ಬರೆದ ಕೆಲವು ಸಮಾಜಗಳ ಉದಾಹರಣಗಳ ಮೇಲಿಂದ ವ್ಯಕ್ತವಾಗುವದು. ಮನೆಕಟ್ಟುವ ಉದ್ಯೋಗ ಮಾಡುವವರ ಸಮಾಜಕ್ಕೆ ಶೇರಿದವರು ಸನ್ ೧೮೬೭ನೇ ವರ್ಷದಲ್ಲಿ ೩೩, ೩೨೫ ಮಂದಿಯಾಗಿದ್ದರು. ಸನ್ ೧೮೮೨ನೇ ವರ್ಷದಲ್ಲಿ ಇವರ ಸಂಖ್ಯೆಯು ೪೫,೦೨,೦೦೦ ಆಯಿತು; ಮತ್ತು ಆ ವರ್ಷದ ಆದಾಯವು ೧,೨೪,೦೦೦ ಪೌಂಡುಗಳಾಯಿತು. ಉಗಿಯಂತ್ರದೊಳಗಿನ ಬಾಯಿಲರಗಳನ್ನು ಮಾಡುವವರ ಸಮಾಜದಲ್ಲಿ ೧೮೬೭ನೇ ವರ್ಷ ೬,೪೦೫ ಜನರಿದ್ದರು. ಸನ್ ೧೮೮೨ನೇ ವರ್ಷ ಅವರ ಸಂಖ್ಯೆಯು ೨೭,೪೦೮ ಆಯಿತು; ಮತ್ತು ಅವರ ಉತ್ಪನ್ನವು ವರ್ಷಕ್ಕೆ ೬೭,೦೦೦ ಪೌಂಡುಗಳಾಯಿತು. ಕಬ್ಬಿಣ ತೆಗಿಯುವ ಕೆಲಸಗಾರರ ಸಮಾಜದಲ್ಲಿ ಸನ್ ೧೮೮೨ನೇ ವರ್ಷ ೧೧,೪೦೦ ಜನರಿದ್ದರು. ಅವರ ವಾರ್ಷಿಕ ಉತ್ಪನ್ನವು ೪೨,೦೦೦ ಪೌಂಡುಗಳಾಗಿತ್ತು. ಸನ್ ೧೮೬೬ರಿಂದ ಆರು ವರ್ಷ ವ್ಯಾಪಾರವು ಅತಿಶಯ ಮಂದವಾಗಿದ್ದ ಕಾರಣ, ಮುಖ್ಯ ಉದ್ಯೋಗಸಮಾಜಗಳಲ್ಲಿ ಏಳು ಸಮಾಜದವರು ಕೆಲಸ ತಪ್ಪಿದ ಕೂಲಿಕಾರರ ಸಂರಕ್ಷಣಕ್ಕೋಸ್ಕರ ೨೦,೦೦,೦೦೦ ಪೌಂಡುಗಳನ್ನು ವೆಚ್ಚ ಮಾಡಿದರು. ಇದರಲ್ಲಿ ೧,೬೨,೦೦೦ ಪೌಂಡುಗಳು, ಅಂದರೆ ನೂರಕ್ಕೆ ೯ರಂತೆ ಮಾತ್ರ ಉದ್ಯೋಗ ಸಂಬಂಧದ ವ್ಯಾಜ್ಯಗಳಲ್ಲಿ ವೆಚ್ಚವಾದವು. ಕೂಲಿಕಾರರ ಕಟ್ಟುಗಳಲ್ಲಿ, ಈ ಸಮಾಜಗಳ ಇಡೀ ಗಂಟಿನೊಳಗಿಂದ ನೂರಕ್ಕೆ ೧, ಇಲ್ಲವೆ ೨ಕ್ಕಿಂತಲೂ ಹೆಚ್ಚು ವೆಚ್ಚವಾಗುವದಿಲ್ಲ. ಗ್ರೇಟಬ್ರಿಟನದಲ್ಲಿ ಉದ್ಯೋಗಸಮಾಜಗಳಿಗೆ ಶೇರಿದವರೆಲ್ಲರೂ ಕೂಡಿ ಸುಮಾರು ೧೨,೫೦,೦೦೦ ಜನ ಇರುವರು.

ಉದ್ಯೋಗಸಮಾಜಗಳು ಮಾಡುವ ಎರಡನೆ ಕೆಲಸದಿಂದ, ಅಂದರೆ ಕೂಲಿಕಾರರಿಗೆ ಆದಷ್ಟು ಹೆಚ್ಚು ಸಂಬಳ ದೊರಿಯುವ ಹಾಗೆ ಮಾಡಿ, ಅವರ ಹಿತಗಳನ್ನು ಕಾಪಾಡುವ ಕೆಲಸದಿಂದಲೇ, ಈ ಸಮಾಜಗಳು ವಿಶೇಷ ಪ್ರಸಿದ್ಧಿಯನ್ನು ಹೊಂದಿರುವವು. ಮತ್ತು ಈ ಸಮಾಜಗಳು ಈ ಕೆಲಸವನ್ನು ಮಾಡುವದರಿಂದಲೇ ಸಾವುಕಾರರೆಲ್ಲರು ಅವುಗಳ ಸಂಗಡ ಬಹಳ ಹಗೆತನ ಮಾಡುವರು. ಯಾಕಂದರೆ, ಕೂಲಿಕಾರರು ಹೆಚ್ಚು ಸಂಬಳದ ಸಲುವಾಗಿ ಮಾಡುವ ಕಟ್ಟುಗಳಿಗೂ, ಉದ್ಯೋಗಸಮಾಜಗಳಿಗೂ, ಅವಶ್ಯವಾದ ಸಂಬಂಧವೇನು ಇಲ್ಲದಿದ್ದಾಗ್ಯೂ, ಉದ್ಯೋಗಸಮಾಜದಂಥ ಯಾವದಾದರೊಂದು ಸಮಾಜದ ಸಹಾಯದ ವ್ಯತಿರಿಕ್ತವಾಗಿ ಕೂಲಿಕಾರರ ಕಟ್ಟು ಬಹು ದಿವಸ ನಡಿಯಲಾರದು.

**ಕೂಲಿಕಾರರ ಕಟ್ಟುಗಳು.** — ಎಷ್ಟೋ ಸಾರಿ ಕೂಲಿಕಾರರು ತಮಗೆ ಹೆಚ್ಚು ಸಂಬಳ ಶಿಕ್ಕ ಬೇಕೆಂದು, ಇಲ್ಲವೆ ಇದ್ದ ಸಂಬಳ ಕಡಿಮೆ ಮಾಡ ಬಾರದೆಂದು ಛಲ ಹಿಡಿದು, ತಮ್ಮ ಮಾತು ನಡಿಸುವ ವರೆಗೆ ಕೆಲಸ ಬಿಟ್ಟು ಕೂಡ್ರುವರು. ಈ ಬಗೆಯ ಕೂಲಿಕಾರರ ಚಂಡಿತನಕ್ಕೆ ಕೂಲಿಕಾರರ ಕಟ್ಟು ಎಂಬ ಹೆಸರು. ಇಂಥ ಕಟ್ಟುಗಳಿಂದ ಬಂಡವಲಗಾರರಿಗೂ ಕೂಲಿಕಾರರಿಗೂ ಬಹಳ ಹಾನಿಯಾಗುವದುಂಟು. ಆದಾಗ್ಯೂ ಈ ಕಾರಣದಿಂದ ಕೂಲಿಕಾರರಿಗೆ ತಮ್ಮ ಹಿತಕ್ಕೋಸ್ಕರ ಸಭೆಗೂಡುವ ಹಕ್ಕು ಇಲ್ಲವೆಂದು ಯಾರೂ ಹೇಳಲಾರರು. ಇಲ್ಲಿ ಕೂಲಿಕಾರರ ಕಟ್ಟಿನ ಯಥಾರ್ಥವಾದ ಸ್ವರೂಪವನ್ನು ವಿವರಿಸುವ. ಶ್ರಮವನ್ನು ಕೊಳ್ಳಲಪೇಕ್ಷಿಸುವವರು ಬೇಡಿದ ಧಾರಣೆಗೆ ಕೆಲಸಗಾರರು ತಮ್ಮ ಶ್ರಮವನ್ನು ಮಾರುವದಕ್ಕೆ ಒಪ್ಪಿಕೊಳ್ಳದಿರುವದೇ ಕೆಲಸಗಾರರ ಕಟ್ಟು. ಹೀಗಾದರೆ ಕೂಲಿಕಾರರ ಕಟ್ಟು ಯಾಕೆ ಅನ್ಯಾಯವುಳ್ಳದ್ದೆನಿಸ ಬೇಕು? ಗಿರಾಕಿಗಳು ಬೇಡಿದ ಧಾರಣೆಗೆ ಕಾಳು ಮಾರುವವರಾಗಲಿ, ಬೇರೆ ವರ್ತಕರಾಗಲಿ, ತಮ್ಮ ಸರಕು ಮಾರುವದಕ್ಕೆ ಒಪ್ಪಿಕೊಳ್ಳದಿದ್ದರೆ ಅನ್ಯಾಯವೆಂದು ಯಾರೂ ಎಣಿಸುವದಿಲ್ಲ. ಗಿರಾಕಿಗಳು ಬೇಡಿದ ಧಾರಣೆಗೆ ವರ್ತಕರು ಒಪ್ಪಿಕೊಳ್ಳದೆ ಇರುವಲ್ಲಿ ಏನು ದೋಷವಿಲ್ಲದಿದ್ದರೆ, ಕೆಲಸಗಾರರೂ ಅದರಂತೆ ಮಾಡುವದು ಎಷ್ಟು ಮಾತ್ರವೂ ದೋಷಾರ್ಹವಾಗದು. ಹಾಗೂ ಧನಿಯು ಕೊಟ್ಟ ಸಂಬಳಕ್ಕೆ ದುಡಿಯುವದಕ್ಕೆ ಒಬ್ಬ ಕೂಲಿಕಾರನು ಒಪ್ಪಿಕೊಳ್ಳದಿರುವದು ಅನ್ಯಾಯವಲ್ಲದಿದ್ದರೆ, ಅದರಂತೆಯೇ ಹತ್ತು, ನೂರು, ಸಾವಿರಾರು ಜನರು ಮಾಡಿದಾಗ್ಯೂ ಅನ್ಯಾಯವಾಗಲಾರದು. ಹೆಚ್ಚು ಸಂಬಳ ದೊರಿಯುವದಕ್ಕಾಗಿ, ಇಲ್ಲವೆ ಇದ್ದ ಸಂಬಳವನ್ನು ಕಡಿಮೆ ಮಾಡ ಬಾರದೆಂದು ಕೂಲಿಕಾರರು ಮಾಡುವ ಉದ್ಯೋಗವು ಒಮ್ಮೊಮ್ಮೆ ಹಿತಕರವಾಗ ಬಹುದು, ಇಲ್ಲವೆ

ಒಮ್ಮೊಮ್ಮೆ ಅಹಿತಕರವಾದರೂ ಆಗ ಬಹುದು. ಆದರೂ ಅವರ ಉದ್ಯೋಗವು ನೀತಿಗೆ ವಿರುದ್ಧವಾದದ್ದೆಂದು ಹೇಳುವದು ಸರಿಯಲ್ಲ. "ತನ್ನಷ್ಟೇ ಬೇರೆ ಪ್ರತಿಯೊಬ್ಬನಿಗೂ ಇದ್ದ ಸ್ವತಂತ್ರತೆಗೆ ಹಾನಿ ತರದೆ, ತನ್ನ ಇಚ್ಛಿತವನ್ನೆಲ್ಲಾ ಮಾಡುವದಕ್ಕೆ ಪ್ರತಿಯೊಬ್ಬನಿಗೆ ಅಧಿಕಾರ ಉಂಟೆಂಬ" ನೀತಿಯ ತತ್ವ ಉಂಟು. ಉದ್ಯೋಗ ಸಮಾಜದವರು ಯಾವಾಗಲೂ ಈ ನೀತಿಯ ತತ್ವವನ್ನು ಮಿೂರದೆ ಆಚರಿಸಿದ್ದರೆ, ಅವರ ದ್ವೇಷಿಗಳಿಗೆ ಉದ್ಯೋಗಸಮಾಜಗಳ ವಿರುದ್ಧ ಮಾತಾಡುವದಕ್ಕೆ ಎಷ್ಟು ಮಾತ್ರವೂ ಇಂಬು ಶಿಕ್ಕುತ್ತಿದ್ದಿಲ್ಲ. ಆದರೆ ಈ ತತ್ವವನ್ನು ಯಾವತ್ತು ವರ್ಗದ ಜನರು ಯಾವಾಗಲೂ ಮುರಿಯುತ್ತಾರೆ; ಅವರಂತೆಯೇ ಕೆಲಸಗಾರರೂ ಈ ನಿಯಮಕ್ಕೆ ವಿರುದ್ಧವಾಗಿ ಆಚರಿಸುವರು. ಇಂಗ್ಲಂಡದಲ್ಲಿ ಹಿಂದಕ್ಕೆ, ಮುಖ್ಯವಾಗಿ ಉದ್ಯೋಗಸಮಾಜಗಳನ್ನು ಕಾಯಿದೆ ಮಾಡಿ ಮುರಿದು ಹಾಕ ಬೇಕೆಂದು ಸರಕಾರದವರು ಮೂರ್ಖತನದಿಂದಲೂ ಅನ್ಯಾಯದಿಂದಲೂ ಯತ್ನಗಳನ್ನು ನಡಿಸಿದಾಗ, ಉದ್ಯೋಗಸಮಾಜಗಳಿಗೆ ಶೇರಿದ ಕೆಲಸಗಾರರು, ತಮ್ಮ ಸಮಾಜಗಳಿಗೆ ಶೇರಲಿಕ್ಕೆ ಮನಸ್ಸಿಲ್ಲದ ಕೆಲಸಗಾರರು ತಮ್ಮ ಸಮಾಜಗಳಿಗೆ ಶೇರ ಬೇಕೆಂದು ಅವರ ಮೇಲೆ ಎಷ್ಟೋ ಸಾರಿ ಬಲಾತ್ಕಾರಗಳನ್ನು ನಡಿಸಿ, ಅವರನ್ನು ಪೀಡಿಸಿದರು. ಉದ್ಯೋಗಸಮಾಜಗಳಿಗೆ ಶೇರದಂಥ ಗಂಡಾಳುಗಳೂ ಹೆಣ್ಣಾಳುಗಳೂ ತಮ್ಮ ಸಂಗಡ ಸ್ಪರ್ಧೆ ಮಾಡಿ, ತಾವು ಬಿಟ್ಟ ಕೆಲಸಗಳನ್ನು ಹಿಡಿಯ ಬಾರದೆಂದು, ಉದ್ಯೋಗಸಮಾಜದವರು ಅವರನ್ನು ಎಷ್ಟೋ ಸಾರಿ ಪೀಡಿಸುವರು, ಬಡಿಯುವರು, ಕೊಲ್ಲುವರು. ಇಂಥ ನಡತೆಯು ಬಹಳ ದೋಷಾಸ್ಪದವಾದದ್ದು. ಹಾಗೂ ಆ ಕಾಲದಲ್ಲಾದರೂ ಈ ನಡತೆಯು ಬಹಳ ದೂಷಿಸಲ್ಪಟ್ಟಿತು. ಆದರೆ ಉದ್ಯೋಗಸಮಾಜಕ್ಕೆ ಶೇರಿದವರು ಕೆಲವು ಸಾರಿ ಅನ್ಯಾಯದ ಕೆಲಸಗಳನ್ನು ಮಾಡಿದರೆಂಬ ಕಾರಣದಿಂದ, ಅವರಿಗಿದ್ದ ಸಭೆಗೂಡುವ ಸ್ವಾತಂತ್ರ್ಯವು ಇಲ್ಲದ ಹಾಗಾಗುವದಿಲ್ಲ. ಉದ್ಯೋಗಸಮಾಜಗಳ ಪಕ್ಷದಿಂದ ಸಾರಾಸಾರ ವಿಚಾರ ಮಾಡುವವರಾದರೂ ಬೇಡುವದು ಇಷ್ಟೇ ಉಂಟು. ಈ ಸ್ವಾತಂತ್ರ್ಯದ ಹಕ್ಕಿನಿಂದುಂಟಾದ ಅಧಿಕಾರವನ್ನು ಕೆಲವರು ದುರುಪಯೋಗ ಮಾಡಿದರೆ, ಅದಕ್ಕಾಗಿ ಎಲ್ಲರ ಹಕ್ಕು ಕಸುಕೊಳ್ಳುವದು ನ್ಯಾಯಕ್ಕೆ ಸರಿಯಾದದ್ದಲ್ಲ. ಉದ್ಯೋಗ ಸಮಾಜಗಳನ್ನು ಸ್ಥಾಪಿಸುವದು ಕಾಯಿದೆಗೆ ವಿರುದ್ಧವಲ್ಲವೆಂದು ನಿರ್ಣಯವಾದಂದಿನಿಂದ, ಉದ್ಯೋಗಸಮಾಜದವರು ತಮ್ಮ ಸಮಾಜದ ಹಿತವನ್ನು ಸಾಧಿಸುವದಕ್ಕಾಗಿ ಬಲಾತ್ಕಾರ ನಡಿಸುವದು ಬಹಳ ಕ್ವಚಿತವಾಗಿದೆ. ಈ ಸಂಗತಿಯು, ಯಾವದೊಂದು ವಿಶೇಷ ವರ್ಗದ ಜನರ ವಿರುದ ಅನ್ಯಾಯದ ಕಾಯಿದೆಯುಂ

ಟಾಗ ಬಾರದೆಂದು ಯತ್ನಿಸುವವರೆಲ್ಲರಿಗೂ ಪ್ರೋತ್ಸಾಹಕರವಾಗಿರುವದು. ಉದ್ಯೋಗಸಮಾಜಗಳಿಗೆ ಸೇರದಂಥ ಕೆಲಸಗಾರರ ಕೆಲಸದ ಮುಟ್ಟುಗಳನ್ನು ಬಚ್ಚಿಡುವ, ಇಲ್ಲವೆ ನಾಶ ಮಾಡುವ ರೂಢಿಯು ಹಿಂದಕ್ಕೆ ಇಂಗ್ಲಂಡದಲ್ಲಿ ಬಹಳ ವಾಗಿತ್ತು. ಆದರೆ, ಈಗ ಈ ರೂಢಿಯು ಬಹುತರ ದೃಷ್ಟಿಗೆ ಬೀಳುವದಿಲ್ಲ.

ಉದ್ಯೋಗಸಮಾಜಗಳಿಂದ ಆಗುವಂಥ ಒಂದು ಮಹತ್ವವುಳ್ಳ ಉಪಯೋಗವೇನಂದರೆ, ಸಾವುಕಾರರ ಬಳಿಯಲ್ಲಿ ತಮ್ಮ ಸಂಬಳ ಗೊತ್ತು ಮಾಡಿಕೊಳ್ಳುವ ಕೂಲಿಕಾರರಿಗೆ, ಈ ಸಮಾಜಗಳಿಂದ ಆಗುವ ಸಹಾಯದಿಂದ ಸಾವುಕಾರರಷ್ಟೇ ಬಿಗಿದು ಹಿಡಿಯುವದಕ್ಕೆ ಸಾಮರ್ಥ್ಯ ಉಂಟಾಗುವದು. ಕೂಲಿಕಾರರು ಕೆಲಸ ಬಿಟ್ಟು ಕೂತರೆ, ನಾಲ್ಕಾರು ದಿವಸಗಳಿಗಿಂತಲೂ ಹೆಚ್ಚು ದಿವಸ ಉಪಜೀವನ ಸಾಗುವಷ್ಟು ಸಂಗ್ರಹವು ಅವರ ಹತ್ತರ ಬಹುತರ ಇರುವದಿಲ್ಲ. ಆದ್ದರಿಂದ, ಉದ್ಯೋಗಸಮಾಜದ ಸಹಾಯವಿಲ್ಲದ ಕೂಲಿಕಾರನಿಗೂ ಸಾವುಕಾರನಿಗೂ ಸಂಬಳದ ವಿಷಯದಲ್ಲಿ ಅರದಾಟ ನಡೆದಾಗ, ಕೂಲಿಕಾರನಿಗೆ ಸಾವುಕಾರನಷ್ಟು ಬಿಗಿದು ಹಿಡಿಯುವದಕ್ಕೆ ಅನುಕೂಲವಾಗುವದಿಲ್ಲ. ಕೆಲಸವು ಶಿಕ್ಕದೆ ಹೋದರೆ, ಇಂಥ ಕೂಲಿಕಾರನಿಗೆ ಉಪವಾಸ ಸಾಯಬೇಕಾಗುವದು, ಇಲ್ಲವೆ ಅನಾಥಗೃಹಕ್ಕೆ ಹೋಗ ಬೇಕಾಗುವದು. ಕೂಲಿಕಾರನು ಕೆಲಸಕ್ಕೆ ಬಾರದಿದ್ದರೆ, ಸಾವುಕಾರನಿಗೆ ಹಣದ ಲುಕಸಾನು ಮಾತ್ರ ಆಗುವದು. ಈ ಪ್ರಕಾರ ಕೂಲಿಕಾರನ ಜೀವನೋಪಾಯವು, ಇಲ್ಲವೆ ಸ್ವಾತಂತ್ರ್ಯವು ನಷ್ಟವಾಗುವ ಸಂಭವವಿರಲು, ಸಾವುಕಾರನ ಹಣವು ಮಾತ್ರ ಹೋಗುವ ಸಂಭವವಿರುವದು. ಈ ಅಸಮತೆಯು ಉದ್ಯೋಗಸಮಾಜಗಳಿಂದ ಬಹಳ ಮಟ್ಟಿಗೆ ಪರಿಹಾರವಾಗುವದು. ಹ್ಯಾಗಂದರೆ, ಕೆಲಸ ಬಿಡುವ ಕಟ್ಟು ಮಾಡ ಬೇಕೆಂದು ನಿಶ್ಚಯವಾದನಂತರ ಈ ಕಟ್ಟು ನಡಿದಿರುವ ವರೆಗೆ ಉದ್ಯೋಗ ಸಮಾಜದವರು ತಮ್ಮ ಸಮಾಜದವರ ಹೊಟ್ಟೆಗೆ ಕೊಡುವರು. ಫ್ರಾನ್ಸ ದೇಶದಲ್ಲಿ ವ್ಯಾಪಾರವು ಮುಂದವಾಗಿ, ಅದರಿಂದ ಉದ್ಯೋಗಗಳು ನಿಂತು, ಕೂಲಿಕಾರರಿಗೆ ಕೆಲಸ ದೊರಿಯದ ಹಾಗೆ ಆದರೆ, ರಾಜ್ಯದೊಳಗೆ ಗಲಿಬಿಲಿಯುಂಟಾಗಿ ನಾಲ್ಕೂ ಕಡೆಯಲ್ಲಿ ದಂಗೆಗಳು ಏಳುವವು. ಇಂಗ್ಲಂಡದಲ್ಲಿ ಇಂಥ ದಂಗೆಗಳು ಏಳದೆ ಇರುವದಕ್ಕೆ ಆ ದೇಶದಲ್ಲಿದ್ದ ಉದ್ಯೋಗಸಮಾಜಗಳು, ಹಿತವರ್ಧಿನಿ ಸಭೆಗಳು, ದರಿದ್ರಸಂರಕ್ಷಕ ಕಾಯಿದೆಯಿಂದ ಬಡ ಜನರಿಗುಂಟಾಗುವ ಸಹಾಯವು, ಇವು ಮೊದಲಾದವುಗಳೇ ಮುಖ್ಯವಾದ ಕಾರಣಗಳೆಂದು ತೋರುತ್ತದೆ. ಇಂಗ್ಲಂಡದಲ್ಲಿ ಮೇಲೆ ಹೇಳಿದ ಕಾರಣಗಳಿಂದ ಕೂಲಿಕುಂಬಳಿಯಿಂದ ಉಪಜೀ

ವಿಸುವ ಜನರಿಗೆ ಹೊಟ್ಟೆಗಿಲ್ಲದೆ ಸಾಯುವ ಹೊತ್ತು ಒದಗುವದಿಲ್ಲ. ಈ ಜನರಿಗೆ ಹೊಟ್ಟೆಗಿಲ್ಲದೆ ಸಾಯುವ ಹೊತ್ತು ಬರುವದೇ, ಬಹುತರ ಭಯಂಕರವಾದ ದಂಗೆಗಳು ಏಳುವದಕ್ಕೆ ಕಾರಣವಾಗಿರುವದು.

ಇಂಗ್ಲಂಡದಲ್ಲಿ ಕೂಲಿಕುಂಬಳಿಯಿಂದ ಜೀವಿಸುವ ಜನರೊಳಗೆ ಪರಸ್ಪರ ಸಹಾಯಾರ್ಥವಾಗಿ ಸ್ಥಾಪಿಸಲ್ಪಟ್ಟಂಥ ಅನೇಕ ಸಮಾಜಗಳುಂಟು. ಆದರೂ ಅವುಗಳೆಲ್ಲವುಗಳಲ್ಲಿ ಉದ್ಯೋಗಸಮಾಜಗಳೇ ಕೂಲಿಕಾರರ ಕಟ್ಟುಗಳಿಗೆ ಸಂಬಂಧಿಸಿರುವದರಿಂದ ಈ ಸಮಾಜಗಳು ವಿಶೇಷ ಪ್ರಸಿದ್ಧವಾಗಿವೆ. ಸನ್ ೧೮೮೪ನೇ ವರ್ಷದ ಆರಂಭದಲ್ಲಿ ಸರಕಾರದವರು ಪ್ರಸಿದ್ಧ ಮಾಡಿದ ಲೋಕಸ್ಥಿತಿದರ್ಶಕ ಲೆಖ್ಖಗಳ ಮೇಲಿಂದ ತಿಳಿಯುವದೇನಂದರೆ, ಆ ವರ್ಷ ಇಂಗ್ಲಂಡ ಮತ್ತು ವೇಲ್ಸ ದೇಶಗಳಲ್ಲಿ ಇಮಾರತುಗಳನ್ನು ಕಟ್ಟುವ ಸಮಾಜಗಳು, ಉದ್ಯೋಗಸಮಾಜಗಳು, ಪರಸ್ಪರಸಹಾಯಕ ಸಂಘಗಳು, ಮುಂತಾದ ಸಮಾಜಗಳಲ್ಲೆಲ್ಲ ಕೂಡಿ ೬೦,೦೦,೦೦೦ಕ್ಕಿಂತಲೂ ಹೆಚ್ಚು ಸಭಿಕರಿದ್ದರು. ಹಾಗೂ ಈ ಸಮಾಜಗಳ ಉತ್ಪನ್ನವು ಸುಮಾರು ೬,೮೦,೦೦,೦೦೦ ಪೌಂಡುಗಳಾಗಿತ್ತು. ಸನ್ ೧೮೮೦ನೇ ವರ್ಷದಿಂದ ೨,೮೨,೩೧೩ ಹೆಚ್ಚು ಸಭಿಕರಾಗಿದ್ದರು; ಮತ್ತು ಉತ್ಪನ್ನವು ಸುಮಾರು ೧,೧೦,೦೦,೦೦೦ ಪೌಂಡು ಹೆಚ್ಚಾಗಿತ್ತು.

**ಹೆಚ್ಚು ಸಂಬಳ ದೊರಕಿಸುವದಕ್ಕಾಗಿ ಉದ್ಯೋಗಸಮಾಜಗಳು ಮಾಡುವ ಕೆಲವು ಉಪಾಯಗಳ ವಿವರವು.**—ತಮ್ಮ ಸಭಿಕರಿಗೆ ಆದಷ್ಟು ಹೆಚ್ಚು ಸಂಬಳ ದೊರಕಿಸಿ ಕೊಡುವದೇ ಉದ್ಯೋಗಸಮಾಜಗಳ ಹೇತುವೆಂದು ಮೇಲೆ ಹೇಳಿಯದೆ. ಈ ವಿಷಯದಲ್ಲಿ ಉದ್ಯೋಗಸಮಾಜದವರು ಅರ್ಥಶಾಸ್ತ್ರದ ಯಾವತ್ತು ನಿಯಮಗಳಿಗೆ ವಿರುದ್ಧವಾಗಿ ಆಚರಿಸುವರೆಂದು ಅವರ ಮೇಲೆ ಆಗಿಂದಾಗ್ಗೆ ದೋಷಾರೋಪಣೆ ಮಾಡುವದುಂಟು. ಆದರೆ, ಈ ಆರೋಪಣೆಯು ಕೇವಲ ಯೋಗ್ಯವಾದದ್ದೆಂದು ಹೇಳಲಾಗದು. ಯಾಕಂದರೆ, ಸಂಬಳದ ದರವು ಸಂಬಳವಾಗಿ ಕೊಡಲ್ಪಡುವ ಒಟ್ಟು ಮೊಬಲಗಿಗೂ, ಸಂಬಳ ದೊರಕಿಸುವವರ ಸಂಖ್ಯೆಗೂ, ಇರುವ ಪ್ರಮಾಣವನ್ನು ಅವಲಂಬಿಸಿರುವದೆಂಬುವದು ತಿಳಿಯುವಷ್ಟು ಅರ್ಥಶಾಸ್ತ್ರವು ಅವರಿಗೂ ಬರುವದು. ಅವರು ಈ ಮಹತ್ವವುಳ್ಳ ತತ್ವವನ್ನನುಸರಿಸಿ ನಡಿಯುವಾಗ, ದೇಶದೊಳಗೆ ಕೂಲಿಯಿಂದ ಉಪಜೀವಿಸುವ ಯಾವತ್ತು ವರ್ಗಗಳನ್ನು ಲಕ್ಷ್ಯದಲ್ಲಿ ತರುವದಿಲ್ಲವೆಂಬದು ನಿಜ. ಆದರೂ, ಅವರ ಉದ್ದೇಶವು ಒಂದು ವಿಶೇಷ ಉದ್ಯೋಗದೊಳಗಿನ ಕೂಲಿಕಾರರ ಹಿತವನ್ನೇ ಸಾಧಿಸ ತಕ್ಕದ್ದಿರುವ ಕಾರಣ, ಅವರು ಈ ತತ್ವವನ್ನು ತಮ್ಮ ಉದ್ಯೋಗದಲ್ಲಿಯೇ ಮಾತ್ರ ಉಪಯೋ

ಗಿಸುವದು ಸ್ವಾಭಾವಿಕವಾಗಿದೆ. ಆದ್ದರಿಂದ, ಉದ್ಯೋಗಸಮಾಜಗಳಲ್ಲಿ ಅನೇಕ ನಿಯಮಗಳ ಉದ್ದೇಶವು ತಮ್ಮ ಉದ್ಯೋಗದಲ್ಲಿ ದುಡಿಯುವ ಕೆಲಸಗಾರರ ಸಂಖ್ಯೆಯನ್ನು ಕಡಿಮೆ ಮಾಡುವದಾಗಲಿ, ಬೆಳೆಯಗೊಡ ಬಾರದೆಂಬುವದಾಗಲಿ, ತಮ್ಮ ಉದ್ಯೋಗದಲ್ಲಿ ಹೆಂಗಸರನ್ನು ಹಚ್ಚಗೊಡ ಬಾರದೆಂಬದಾಗಲಿ, ಇರುವದು. ಉದಾಹರಣಾರ್ಥವಾಗಿ, ಹಡಗ ಕಟ್ಟುವ ಉದ್ಯೋಗ ಮಾಡುವವನು ಕೆಲಸ ಕಲಿಯುವದಕ್ಕೆ ಏಳು ವರ್ಷ ಉಮೇದವಾರೀ ಮಾಡಿದ ಹೊರ್ತು, ಅವನನ್ನು ಉದ್ಯೋಗಸಮಾಜದಲ್ಲಿ ಶೇರಿಸಿಕೊಳ್ಳುವದಿಲ್ಲ. ಹಾಗೂ ಯಾವ ಸಾವುಕಾರನಾದರೂ ಹಡಗ ಕಟ್ಟುವವನನ್ನು ದುಡಿಸಿಕೊಳ್ಳ ಬೇಕಾದರೆ ಅವನು ಏಳು ವರ್ಷ ಉಮೇದವಾರಿಯನ್ನು ಮಾಡಿದ ಬಗ್ಗೆ ದಾಖಲೆ ತೋರಿಸಿದ ಹೊರ್ತು, ಅವನನ್ನು ಕೆಲಸಕ್ಕೆ ಇಟ್ಟುಕೊಳ್ಳುವದಿಲ್ಲ. ಯಾಕಂದರೆ, ಅವನು ಈ ಬಗೆಯ ಕರಾರು ತೋರಿಸದೆ ಇದ್ದವನನ್ನು ಇಟ್ಟುಕೊಂಡರೆ, ಅವನ ಉದ್ಯೋಗದಲ್ಲಿ ದುಡಿಯುವಂಥ ಉದ್ಯೋಗಸಮಾಜಕ್ಕೆ ಶೇರಿದ ಕೆಲಸಗಾರರೆಲ್ಲರು ಅವನ ಕೆಲಸವನ್ನು ಬಿಟ್ಟು ಬಿಡುವ ಕಟ್ಟು ಮಾಡುತ್ತಾರೆ. ಟೊಪ್ಪಿಗೆಗಳನ್ನು ಮಾಡುವ ಉದ್ಯೋಗದಲ್ಲಾದರೂ ಈ ಮಾದರಿಯ ನಿಯಮಗಳಿರುವವು. ಈ ಕೆಲಸವನ್ನು ಉತ್ಕೃಷ್ಟ ಮಾಡ ಬಲ್ಲ ಹಿರೇ ಕೆಲಸಗಾರನು ತನ್ನ ಕೆಲಸವನ್ನು ಇಬ್ಬರಿಗಿಂತಲೂ ಹೆಚ್ಚು ಉಮೇದವಾರರಿಗೆ ಕಲಿಸ ಕೂಡದು. ಇದರಂತೆಯೇ ಇಟ್ಟಂಗಿಗಳನ್ನು ಮಾಡುವವರ ಸಂಖ್ಯೆಯನ್ನಾದರೂ ಬೆಳೆಯಗೊಡದ ಹಾಗೆ ಮಾಡುವರು. ಹಿರೇ ಉಪ್ಪಾರನು (ಉತ್ಕೃಷ್ಟ ಕೆಲಸ ಮಾಡುವವನಿಗೆ ಹಿರೇ ಉಪ್ಪಾರನೆನ್ನುವರು) ತನ್ನ ಕೈ ಕೆಳಗೆ ಮತ್ತೊಬ್ಬ ಕೂಲಿಯವನನ್ನು ಹಚ್ಚಿದ ಹೊರ್ತು, ಏನೂ ಕೆಲಸ ಮಾಡುವದಿಲ್ಲ.

**ಉದ್ಯೋಗಸಮಾಜಗಳ ಪ್ರತಿಬಂಧಕ ನಿಯಮಗಳಿಗೂ, ಪ್ರತಿಷ್ಠಿತವೃತ್ತಿಗಳಲ್ಲಿರುವ ಮರ್ಯಾದೆಗಳಿಗೂ, ಇರುವ ಸಾಮ್ಯ.**— ಮೇಲೆ ಹೇಳಿದ ಉದ್ಯೋಗಸಮಾಜಗಳ ನಿಯಮಗಳಂಥ ನಿಯಮಗಳೇ ವೈದ್ಯಕ, ಹಾಗೂ ವಕೀಲಿ, ಎಂಬೀ ಪ್ರತಿಷ್ಠಿತ ವೃತ್ತಿಗಳಲ್ಲಿ ಸಹ ಇರುವದು ಬಹಳ ಸೋಜಿಗವಾದದ್ದು. ಹಡಗ ಕಟ್ಟುವವನು ಉಮೇದವಾರೀ ಮಾಡಿದ ಬಗ್ಗೆ ಕರಾರು ತೋರಿಸದೆ, ಅವನ ಸಂಗಡ ಬೇರೆ ಯಾವ ಹಡಗ ಕಟ್ಟುವವನೂ ದುಡಿಯುವದಿಲ್ಲ. ಇದರಂತೆಯೇ ಯಾವದಾದರೊಂದು ಸರ್ವಮಾನ್ಯವಾದ ಪರವಾನೆ ಕೊಡುವ ಸಭೆಯಿಂದ ವೈದ್ಯಕದ ಪದವಿಯನ್ನು ಪಡಕೊಳ್ಳದೆ ಇದ್ದವನ ಕೂಡ ಚಿಕಿತ್ಸಾವಿಷಯದಲ್ಲಿ ಆಲೋಚನೆ ಮಾಡುವದಕ್ಕೆ ಯಾವ ಡಾಕ್ಟರನೂ ಒಪ್ಪಿಕೊಳ್ಳುವದಿಲ್ಲ. ಸನ್ ೧೮೫೮ನೇ

ವರ್ಷದ ವರೆಗೆ ಇಂಗ್ಲಂಡದೊಳಗೆ ವೈದ್ಯಕದ ಪರವಾನೆಗಳನ್ನು ಕೊಡುವ ಯಾವ ಸಭೆಗಳವರೂ ಸ್ತ್ರೀಯರಿಗೆ ಯೋಗ್ಯತೆಯ ಪದವಿಗಳನ್ನು ಕೊಡುವದಕ್ಕೆ ಒಪ್ಪಿಕೊಳ್ಳಲಿಲ್ಲ. ಈ ಕಾರಣದಿಂದ ವೈದ್ಯಕದಲ್ಲಿ ಸ್ಪರ್ಧೆಯು ಪ್ರತಿಬಂಧಿಸಲ್ಪಟ್ಟಿತು. ಲಂಡನ್ ಯುನಿವ್ಹರ್ಸಿಟಿಯೆಂಬ ಯೋಗ್ಯತಾಪದವಿಗಳನ್ನು ಕೊಡುವ ಸಭೆಯೊಳಗೆ, ವೈದ್ಯಕದ ಪದವಿಗಳನ್ನು ಪಡೆದವರಲ್ಲಿ ಬಹುತರ ಯಾವತ್ತು ಪದವಿಧಾರಿಗಳು ಸ್ತ್ರೀಯರಿಗೆ ವೈದ್ಯಕದ ಪದವಿಗಳನ್ನೇ ಆಗಲಿ, ಬೇರೆ ಯಾವ ಪದವಿಗಳನ್ನೇ ಆಗಲಿ, ಕೊಡತಕ್ಕದ್ದಲ್ಲವೆಂದು ಬಹಳ ಅಡ್ಡೀ ಮಾಡಿದರು. ಆದಾಗ್ಯೂ, ಕಟ್ಟಕಡೆಗೆ ಸ್ತ್ರೀಯರಿಗೆ ಈ ಪದವಿಗಳನ್ನು ಕೊಡುವದಕ್ಕೆ ಅಡ್ಡಿ ಇಲ್ಲವೆಂದು ನಿರ್ಣಯವಾಯಿತು. ಇದರಂತೆಯೇ ಚಾಯನಾ ಪಾತ್ರೆಗಳ ಮೇಲೆ ಚಿತ್ರಗಳನ್ನು ಬರಿಯುವ ಕಸಬು, ಜಮಖಾನೆಗಳನ್ನು ನೇಯುವ ಕಸಬು, ಮುಂತಾದ ಕಸಬುಗಳಲ್ಲಿ ಸ್ತ್ರೀಯರನ್ನು ಶೇರಿಸಿಕೊಳ್ಳ ಬಾರದೆಂದು ಕೂಲಿಕಾರರೊಳಗೆ ಕಟ್ಟುಗಳು ಆಗಿರುವವು. ಆಯಾ ಉದ್ಯೋಗದೊಳಗಿನ ಕೆಲಸ ಮಾಡುವವರ ಸಂಖ್ಯೆಯನ್ನು ಕಡಿಮೆ ಮಾಡಿ, ಸ್ಪರ್ಧೆಯನ್ನು ಮರ್ಯಾದಿತವಾಗಿ ಮಾಡುವದೇ ಈ ಯಾವತ್ತು ಕಟ್ಟುಗಳ ಉದ್ದೇಶವು. ಟೊಪ್ಪಿಗೆ ಮಾಡುವವನು ಒಂದೇ ಕಾಲಕ್ಕೆ ಇಬ್ಬರಿಗಿಂತಲೂ ಹೆಚ್ಚು ಉಮೇದವಾರರನ್ನು ಇಟ್ಟುಕೊಳ್ಳಲಾಗದೆಂಬ ನಿಯಮ ಉಂಟು. ಇದರಂತೆಯೇ, ಯಾವ ಸಾಲಿಸಿಟರನೂ ತನ್ನ ಆಫೀಸಿನಲ್ಲಿ ಇಬ್ಬರಿಗಿಂತಲೂ ಹೆಚ್ಚು ವಿದ್ಯಾರ್ಥಿಗಳನ್ನು ಇಟ್ಟುಕೊಳ್ಳಲಾಗದೆಂಬ ನಿಯಮ ಉಂಟು. ಹಿರೇ ಉಪ್ಪಾರನು ತನ್ನ ಕೈಕೆಳಗೆ ಮತ್ತೊಬ್ಬನನ್ನು ಇಟ್ಟುಕೊಳ್ಳದೆ ಕೆಲಸ ಮಾಡುವದಿಲ್ಲ. ಇದೇ ಪ್ರಕಾರ, ರಾಣಿಯ ಪಕ್ಷದ ಯಾವ ಬ್ಯಾರಿಸ್ಟರನೂ ತನ್ನ ಸಂಗಡ ಮತ್ತೊಬ್ಬ ಹೊಸ ಬ್ಯಾರಿಸ್ಟರನನ್ನು ತಕ್ಕೊಳ್ಳದೆ ಕೋರ್ಟಿನಲ್ಲಿ ಹೋಗುವದಿಲ್ಲ. ಈ ಸಾಮ್ಯವನ್ನು ತೋರಿಸಿದ್ದು, ಉದ್ಯೋಗಸಮಾಜಗಳು ಮಾಡುವ ಪ್ರತಿಬಂಧಕ ನಿಯಮಗಳು ಯೋಗ್ಯವಾದವುಗಳೆಂದು ಸಿದ್ಧ ಮಾಡುವ ಉದ್ದೇಶದಿಂದಲ್ಲ. ಈ ವಿಲಕ್ಷಣ ಸಾಮ್ಯದಿಂದ ತೋರಿಸ ತಕ್ಕಂಥ ಅಂಶವು ಒಂದೇ ಉಂಟು. ಅದೇನಂದರೆ, ವಿದ್ಯಾವಂತರೇ ಆಗಲಿ, ವಿದ್ಯಾವಿಹೀನರೇ ಆಗಲಿ, ತಮ್ಮ ತಮ್ಮ ವೃತ್ತಿಗಳ ಅಥವಾ ಕಸಬುಗಳ ಹಿತಕ್ಕಾಗಿ ಒಂದೇ ತರದ ಮಾರ್ಗವನ್ನು ಸ್ವೀಕರಿಸಿರುವರು. ಈ ಎರಡೂ ವರ್ಗದ ಜನರು ತಾವು ಮಾಡಿದ ಪ್ರತಿಬಂಧಗಳು ತಮಗೂ, ಯಾವತ್ತು ಜನಸಮುದಾಯಕ್ಕೂ, ಕಲ್ಯಾಣಕರವಾದವುಗಳೆಂದು ನಂಬುವರು. ಆದರೆ ಪ್ರತಿಬಂಧಕ ನಿಯಮಗಳು ಮೊದಲನೆ ಪಕ್ಷದಲ್ಲಿ ಅನ್ಯಾಯವುಳ್ಳವೆಂದು ಎಣಿಸಿದರೆ, ಎರಡನೆ ಪಕ್ಷದಲ್ಲಾದರೂ ಅವು ಅನ್ಯಾಯವುಳ್ಳವೆಂತಲೇ ಎಣಿಸಬೇಕು.

**ಕೂಲಿಕಾರರೊಳಗೆ ಕಟ್ಟುಗಳಿದ್ದಂತೆಯೇ ಧನಿಯರೊಳಗೂ ಕಟ್ಟುಗಳಿರುವವು:**— ಎಷ್ಟೋ ವ್ಯಾಪಾರ ಉದ್ದಿಮೆಗಳಲ್ಲಿಯೂ, ಕಸಬುಗಳಲ್ಲಿಯೂ ಉದ್ಯೋಗಸಮಾಜಗಳಿರುವವು. ಆದರೆ, ಇವುಗಳ ಹೆಸರು ಮಾತ್ರ ಉದ್ಯೋಗಸಮಾಜವೆಂದು ಇರುವದಿಲ್ಲ. ಉದ್ಯೋಗಸಮಾಜಗಳ ಅನೇಕ ದ್ವೇಷಿಗಳು ಈ ಸಮಾಜಗಳನ್ನು ಹಳಿಯುವಾಗ, ಕೆಲಸಗಾರರು ತಮ್ಮೊಳಗೆ ಒಕ್ಕಟ್ಟುಗಳನ್ನು ಮಾಡಿದಂತೆಯೇ, ಧನಿಯರೂ ತಮ್ಮೊಳಗೆ ಒಕ್ಕಟ್ಟುಗಳನ್ನು ಮಾಡಿಕೊಂಡಿರುವರೆಂಬದನ್ನು ಲಕ್ಷ್ಯಕ್ಕೆ ತಂದು ಮಾತಾಡುವದಿಲ್ಲ. ಉದಾಹರಣಾರ್ಥವಾಗಿ, ಕಬ್ಬಿಣದ ಕಾರಖಾನೆಗಳ ಯಜಮಾನರು ಮೂರು ತಿಂಗಳಿಗೊಮ್ಮೆ ಸಭೆಗೂಡಿ, ಬರುವ ಮೂರು ತಿಂಗಳು ಇಂಥ ತರದ ಕೆಲಸಗಳಿಗೆ ಇಷ್ಟೇ ಸಂಬಳ ಕೊಡಬೇಕು, ಹೆಚ್ಚು ಕೊಡಬಾರದು, ಎಂದು ಎಲ್ಲರೂ ನಿರ್ಣಯ ಮಾಡುವರು. ಹಾಗೂ ಹೆಚ್ಚು ಸಂಬಳಕ್ಕೋಸ್ಕರ ಖ್ಯಾಜ್ಯ ನಡಿದಾಗ, ಇಂಥಾದ್ದೊಂದು ದಿವಸ ಎಲ್ಲ ಕೂಲಿಕಾರರೂ ಕೆಲಸ ಬಿಟ್ಟು ಕೂಡ್ರುವ ಕಟ್ಟು ಮಾಡುವಂತೆಯೇ, ಈ ಯಜಮಾನರೂ ಸಂಬಳ ಕಡಿಮೆ ಮಾಡುವದಿದ್ದಾಗ ಎಲ್ಲ ಕಡೆಯಲ್ಲಿಯೂ ಏಕಕಾಲಕ್ಕೆ ಸಂಬಳ ಕಡಿಮೆ ಮಾಡ ಬೇಕೆಂದು ಒಪ್ಪಿಕೊಳ್ಳುವರು.

**ಕಸಬುಗಾರರ ಒಕ್ಕಟ್ಟುಗಳು ದ್ವೇಷಭಾವವನ್ನು ಸೂಚಿಸುತ್ತವೆ. ಈ ದ್ವೇಷಭಾವವು ಇರುವ ವರೆಗೆ ಕೂಲಿಕಾರರ ಕಟ್ಟುಗಳೂ, ಧನಿಯರು ಕೂಲಿಕಾರರ ಕೆಲಸ ತಪ್ಪಿಸುವದೂ ನಡಿಯ ತಕ್ಕವೇ.**— ಕೂಲಿಕಾರರು ತಮ್ಮೊಳಗೆ ಕಟ್ಟುಗಳನ್ನು ಮಾಡುವದಕ್ಕೆ ಯೋಗ್ಯವಾದ ಕಾರಣಗಳು ಇದ್ದಷ್ಟೇ, ಧನಿಯರೂ ತಮ್ಮೊಳಗೆ ಕಟ್ಟುಗಳನ್ನು ಮಾಡುವದಕ್ಕೆ ಯೋಗ್ಯವಾದ ಕಾರಣಗಳುಂಟು. ಈ ಕಟ್ಟುಗಳಿಗೆ ಮೂಲವಾದ ದ್ವೇಷಭಾವವು ಬಹಳ ಹಾನಿಕರವಾದದ್ದು. ಈ ದ್ವೇಷದ ಮೂಲಕವಾಗಿ ಬಹಳ ಕಷ್ಟಗಳೂ, ಲುಕಸಾನುಗಳೂ ಆಗುತ್ತವೆ. ಆದರೆ, ಈ ದ್ವೇಷಭಾವವು ನೆಲೆಗೊಂಡಿರುವ ವರೆಗೆ ಬರೇ ಒಕ್ಕಟ್ಟು ಮಾಡುವ ಹಕ್ಕನ್ನೇ ದೂಷಿಸುವದರಿಂದ ಏನು ಪ್ರಯೋಜನವಾಗದು. ಕೂಲಿಕಾರರ ಹಿತಗಳೂ ಧನಿಯರ ಹಿತಗಳೂ ಒಂದಕ್ಕೊಂದು ವಿರುದ್ಧವಾಗಿರದಿದ್ದರೆ, ಈಗಿನ ತರದ ಉದ್ಯೋಗಸಮಾಜಗಳೂ ಧನಿಯರ ಕಟ್ಟುಗಳೂ ಹುಟ್ಟುತ್ತಿದ್ದೇ ಇಲ್ಲ. ಕೂಲಿಕಾರರ ಕಟ್ಟುಗಳೂ, ಧನಿಯರ ಕಟ್ಟುಗಳೂ, ಕೂಲಿಕಾರರ ಹಾಗೂ ಧನಿಯರ ಪರಸ್ಪರ ಹಿತಗಳಲ್ಲಿದ್ದ ವಿರುದ್ಧ ಭಾವವನ್ನು ತೋರಿಸುವಂಥ ದೃಷ್ಟಿಗೋಚರವಾದ ಬಾಹ್ಯಚಿನ್ಹಗಳಾಗಿರುವವು. ಆದಕಾರಣ, ಮೇಲಿಂದ ಮೇಲೆ ಆಗುವ ಕೂಲಿಕಾರರ ಹಾಗೂ ಧನಿಯರ ಕಟ್ಟುಗಳನ್ನೂ, ತದುತ್ಪನ್ನವಾದ ದುಃಖ

ಮಾತ್ಸರ್ಯಗಳನ್ನೂ ಕಂಡು ಕಳವಳಗೊಳ್ಳುವವರು ಈ ಕಟ್ಟುಗಳ ಮೂಲಕಾರಣ ವಾದ ಈ ವಿರುದ್ಧಭಾವವನ್ನು ತೆಗೆದು ಹಾಕುವ ಯತ್ನಗಳನ್ನು ಮಾಡತಕ್ಕದ್ದು. ಧನಿಯರು ತಮ್ಮ ಕಾರಖಾನೆಗಳ ಬಾಗಿಲ ಇಕ್ಕಿ, ಕೂಲಿಕಾರರ ಕೆಲಸ ತಪ್ಪಿಸುವದಕ್ಕೆ ಇಂಗ್ಲಿಷದಲ್ಲಿ "ಲಾಕಆವುಟ್" (ಬಾಗಲಿಗೆ ಬೀಗ ಹಾಕಿ ಹೊರಗೆ ಹಾಕೋಣ) ಎಂಬ ಹೆಸರು. ಇದು ಕೂಲಿಕಾರರಂತೆಯೇ ಧನಿಯರು ಮಾಡಿದ ಕಟ್ಟು. ಕೆಲಸಗಾರರು ತಾವು ಕೆಲಸ ಮಾಡುವ ತಾಸುಗಳು ಕಡಿಮೆಯಾಗ ಬೇಕೆಂದು, ಇಲ್ಲವೆ ತಮ್ಮ ಸಂಬಳ ಹೆಚ್ಚಿಸ ಬೇಕೆಂದು ಧನಿಯರನ್ನು ಕೇಳುವರು. ಧನಿಯರು ಅದಕ್ಕೆ ಒಪ್ಪಿಕೊಳ್ಳುವದಿಲ್ಲ. ಕೆಲಸಗಾರರು ತಮ್ಮ ಹಟವನ್ನೇ ಹಿಡಿದರೆ, ಆ ಪ್ರಾಂತದೊಳಗಿನ ಯಾವತ್ತು ಸಾವುಕಾರರು ತಮ್ಮ ಕೂಲಿಕಾರರನ್ನು ಬಿಟ್ಟುಬಿಡುವರು; ಕಾರಖಾನೆಗಳ ಬಾಗಿಲಗಳು ಇಕ್ಕಲ್ಪಡುವವು. ಹಾಗು ಎರಡರಲ್ಲಿ ಒಂದು ಪಕ್ಷದವರು ತಮ್ಮ ಮಾತು ಬಿಟ್ಟು ಬಿಡುವ ವರೆಗೆ, ಇಲ್ಲವೆ ಎರಡೂ ಪಕ್ಷದವರು ತಮ್ಮೊಳಗೆ ಏನಾದರೂ ತೋಡಜೋಡು ಮಾಡಿಕೊಳ್ಳುವ ವರೆಗೆ, ಸಂಪದುತ್ಪಾದನದ ಕೆಲಸವು ನಿಂತು ಹೋಗುವದು.

**ಅನ್ಯೋನ್ಯಸಹಾಯ, ಪಾಲಿನ ವ್ಯಾಪಾರ, ಹಾಗೂ ಲಾಭ ಹಂಚಿಕೊಳ್ಳುವ ಪದ್ಧತಿ.**— ಧನಿಯರೂ ದುಡಿಯುವವರೂ ತಮ್ಮ ಪರಸ್ಪರ ಹಿತಗಳು ಒಂದಕ್ಕೊಂದು ವಿರುದ್ಧವಾಗಿಲ್ಲ, ಇಬ್ಬರ ಹಿತಗಳೂ ಒಂದೇ ಇವೆ, ಎಂದು ತಿಳಿಯುವ ಹಾಗೆ ಮಾಡಿ, ಬಂಡವಲ, ಹಾಗು ಶ್ರಮ, ಇವುಗಳೊಳಗಿನ ವಿರುದ್ಧಭಾವವನ್ನು ಇಲ್ಲದ ಹಾಗೆ ಮಾಡುವ ಉದ್ದೇಶದಿಂದ ಇತ್ತಲಾಗಿ ಅನೇಕ ಯುಕ್ತಿಗಳು ಸೂಚಿಸಲ್ಪಟ್ಟವೆ. ಈ ಯಾವತ್ತು ಯುಕ್ತಿಗಳಿಗೆ ಆಧಾರಭೂತವಾದ ತತ್ವವು ಯಾವದಂದರೆ, ಕೂಲಿಕಾರರ ಮನಸಿನಲ್ಲಿ ತಾವು ದುಡಿಯುವ ಉದ್ಯೋಗದ ಏಳಿಗೆಯಿಂದ ತಮಗೆ ದ್ರವ್ಯ ಪ್ರಾಪ್ತಿಯುಂಟಾಗುವದೆಂಬ ಆಶೆಯು ಹುಟ್ಟುವಂತೆ ಮಾಡ ಬೇಕು. ಈ ಬಗೆಯ ಲಾಭದ ಆಶೆಯು ಕೂಲಿಕಾರರ ಮನಸಿನಲ್ಲಿ ಹುಟ್ಟಬೇಕಾದರೆ, ಅವರು ದುಡಿಯುವ ಉದ್ಯೋಗಕ್ಕೆ ಬೇಕಾಗುವ ಎಲ್ಲ ಬಂಡವಲವಾಗಲಿ, ಅದರಲ್ಲಿ ಕೆಲವೊಂದು ಭಾಗವಾಗಲಿ ಅವರೇ ಕೊಟ್ಟದ್ದಾಗಿರ ಬೇಕು. ಯಾವದೊಂದು ಉದ್ಯೋಗದೊಳಗಿನ ಎಲ್ಲ ಬಂಡವಲವನ್ನು ಕೂಲಿಕಾರರೇ ಪೂರೈಸಿದ್ದರೆ, ಇದು ಶುದ್ಧ ಅನ್ಯೋನ್ಯಸಹಾಯದ ಉದಾಹರಣವಾಯಿತು. ಈ ಪ್ರಸಕ್ತಿಯಲ್ಲಿ ಬಂಡವಲ ಶ್ರಮಗಳೊಳಗಿದ್ದ ವಿರೋಧವು ಪೂರ್ಣವಾಗಿ ನಷ್ಟವಾಗುವದು. ಕೂಲಿಕಾರರು ಬಂಡವಲದ ಒಂದು ಭಾಗದ ಪೂರ್ತೆ ಮಾತ್ರ ಧನಿಯರಾಗಿ, ತಮ್ಮ ಯಜಮಾನರ ಕೂಡ ಪಾಲಿನಿಂದ ವ್ಯವಹಾರ ಮಾಡುವ

ಪದ್ಧತಿಗೆ ಪಾಲಿನ ವ್ಯಾಪಾರವೆಂಬ ಹೆಸರು. ಬಂಡವಲಗಾರರೊಳಗೂ ಕೂಲಿಕಾರರೊಳಗೂ ಹಿತ್ಯೈಕ್ಯವನ್ನುಂಟು ಮಾಡುವಂಥ ಮತ್ತೊಂದು ಪದ್ಧತಿಯುಂಟು. ಇದು ಲಾಭ ಹಂಚಿಕೊಳ್ಳುವ ಪದ್ಧತಿ ಎಂದು ಪ್ರಸಿದ್ಧವಾಗಿದೆ. ಈ ಪದ್ಧತಿಯ ಪ್ರಕಾರ ಕೂಲಿಕಾರರು ಬಂಡವಲವನ್ನೇನು ಪೂರೈಸ ಬೇಕಾಗುವದಿಲ್ಲ. ಯಾವದೊಂದು ಉದ್ಯೋಗದಲ್ಲಿ ಲಾಭವು ಇಂತಿಷ್ಟು ರಕಮಿಗಿಂತಲೂ ಹೆಚ್ಚಾಗಲು, (ಉದಾಹರಣಾರ್ಥವಾಗಿ ನೂರಕ್ಕೆ ೧೦ಕ್ಕಿಂತ) ಈ ಹೆಚ್ಚಿನ ಲಾಭವನ್ನು ಕೂಲಿಕಾರರೂ ಬಂಡವಲಗಾರರೂ ತಮ್ಮೊಳಗೆ ಕೆಲವೊಂದು ಪ್ರಮಾಣದಿಂದ ಹಂಚಿಕೊಳ್ಳಬೇಕೆಂದು ಇಬ್ಬರೂ ಒಪ್ಪಿಕೊಳ್ಳುವರು. ಈ ಲಾಭ ಹಂಚಿಕೊಳ್ಳುವ ಪದ್ಧತಿಯಲ್ಲಿ ಇರುವ ಒಂದು ಅತ್ಯಂತ ಮಹತ್ವದ ಸಂಗತಿಯು ಯಾವದಂದರೆ, ಈ ಪದ್ಧತಿಯ ಪ್ರಕಾರ ಹಂಚಲ್ಪಡುವ ಲಾಭವು, ಮನಮುಟ್ಟಿ ದುಡಿಯುವದರಿಂದಲೂ, ತಮ್ಮ ಕೆಲಸದ ದ್ರವ್ಯಗಳನ್ನೂ ಹತ್ಯಾರಗಳನ್ನೂ ಬಹಳ ಜಪ್ಪಿಸಿ ಉಪಯೋಗಿಸುವದರಿಂದಲೂ, ಹುಟ್ಟಿದಂಥ ಹೆಚ್ಚಿನ ಲಾಭವಾಗಿರುವದು. ಈ ಹೆಚ್ಚಿನ ಲಾಭವೇ ಕೂಲಿಕಾರರೊಳಗೂ ಧನಿಯರೊಳಗೂ ಹಂಚಲ್ಪಡುವದು. ಈ ಪದ್ಧತಿಯ ವಿಷಯವಾಗಿ ಮಿಸ್ತರ ಸೆಡ್ಲೀ ಟೇಲರ್‌ನೆಂಬ ಗ್ರಂಥಕಾರನು ಈ ಪ್ರಕಾರ ಬರೆದಿದ್ದಾನೆ: "ಲಾಭವನ್ನು ಹಂಚಿಕೊಳ್ಳುವ ಪದ್ಧತಿಯನ್ನು ಕುರಿತು ಮಾತಾಡುವಾಗ ಚನ್ನಾಗಿ ಲಕ್ಷ್ಯದಲ್ಲಿಡ ತಕ್ಕ ಮಾತೇನಂದರೆ, ಈ ಪದ್ಧತಿಯು ಸಾವುಕಾರರ ಲುಕಸಾನು ಮಾಡಿ ಕೂಲಿಕಾರರಿಗೆ ಲಾಭ ಮಾಡಿಕೊಡುವ ಪದ್ಧತಿಯಲ್ಲ. ಈ ಪದ್ಧತಿಯಿಂದ ಕೇವಲ ಹೊಸ ಲಾಭವನ್ನು ಹುಟ್ಟಿಸುವಂಥ ಕೆಲ ಗುಪ್ತ ಶಕ್ತಿಗಳು ಪ್ರೋತ್ಸಾಹಗೊಂಡು, ಹೊಸ ಸಂಪತ್ತೇ ನಿರ್ಮಾಣವಾಗುವದು. ಮತ್ತು ಕೂಲಿಕಾರರಿಗೆ ದೊರಿಯುವ ಪಾಲು ಈ ಹೊಸ ಸಂಪತ್ತಿನೊಳಗಿಂದ ದೊರಿಯುವದು". ಅನ್ಯೋನ್ಯಸಹಾಯ, ಪಾಲಿನ ವ್ಯಾಪಾರ, ಲಾಭ ಹಂಚಿಕೊಳ್ಳುವ ಪದ್ಧತಿ, ಇವುಗಳು ಉತ್ಕೃಷ್ಟವಾಗಿ ನಡಿದ ಉದಾಹರಣಗಳು ಫ್ರಾನ್ಸದಲ್ಲಿ ಅನೇಕ ಉಂಟು. ಇಂಗ್ಲಂಡಕ್ಕಿಂತಲೂ ಫ್ರಾನ್ಸದಲ್ಲಿ ಹೊಸ ಪದ್ಧತಿಗಳ ಪ್ರಕಾರ ನಡಿಸಿದ ಉದ್ಯೋಗಗಳ ಪ್ರಯೋಗಗಳು ವಿಶೇಷ ಚನ್ನಾಗಿ ನಡಿಯುವಂತೆ ತೋರುತ್ತದೆ. ಸನ್ ೧೮೪೪ನೇ ವರ್ಷದಿಂದ ಪ್ಯಾರಿಸ್ ಹಾಗೂ ಆರ್ಲಿಯನ್ಸ್ ರೇಲ್ವೆ ಕಂಪನಿಯವರು ತಮ್ಮ ಪಾಲುಗಾರರಿಗೆ ನೂರಕ್ಕೆ ೮ರಂತೆ ಲಾಭವನ್ನು ಕೊಟ್ಟು, ಹೆಚ್ಚುಳಿದ ಲಾಭದೊಳಗಿಂದ ನೂರಕ್ಕೆ ಇಂತಿಷ್ಟರಂತೆ ಕೂಲಿಕಾರರಿಗೆ ಹಂಚಿಕೊಡುತ್ತಾ ಬಂದಿದ್ದಾರೆ. ಸನ್ ೧೮೪೪ರಿಂದ ೧೮೮೨ರ ವರೆಗೆ ೩೯ ವರ್ಷಗಳಲ್ಲಿ ಈ ಕಂಪನಿಯವರು ೨೫,೮೩,೩೨೮ ಪೌಂಡುಗಳನ್ನು ತಮ್ಮ

ಕೂಲಿಕಾರರಿಗೆ ಹಂಚಿಕೊಟ್ಟರು. ಫ್ರಾನ್ಸದಲ್ಲಿ ಬಾಮಾರ್ಷೆ ಎಂಬ ಪ್ರಸಿದ್ಧವಾದ ೩೦೦೦ ಸಾವಿರ ಜನರು ದುಡಿಯುವಂಥ ಅಂಗಡಿಯ ಯಜಮಾನನು, ಸನ್ ೧೮೭೬ನೇ ವರ್ಷದಲ್ಲಿ ತನ್ನ ಉದ್ಯೋಗದಲ್ಲಿ ಲಾಭವನ್ನು ಹಂಚಿಕೊಳ್ಳುವ ಹಾಗು ಪಾಲಿನ ಒಂದು ಮಿಶ್ರ ಪದ್ಧತಿಯನ್ನು ನಡಿಸ ಹತ್ತಿದನು. ಈ ಪದ್ಧತಿಯು ಉತ್ಕೃಷ್ಟವಾಗಿ ನಡಿದು ಈಗ ಆ ಉದ್ಯೋಗವು ೮,೦೦,೦೦೦ ಪೌಂಡು ಬಂಡವಲವುಳ್ಳ ಒಂದು ಕಂಪನಿಯ ಸ್ವರೂಪವನ್ನು ಹೊಂದಿದೆ. ಈ ರಕಮಿನಲ್ಲಿ ३,೦೦,೦೦೦ ಪೌಂಡುಗಳು ಕೂಲಿಕಾರರವೂ, ೫,೦೦,೦೦೦ ಪೌಂಡುಗಳು ಅಂಗಡಿಯ ಮೊದಲಿನ ಯಜಮಾನನ ಹೆಂಡತಿಯವೂ, ಆಗಿವೆ. ಗಾಯಿಝ್ ಎಂಬಲ್ಲಿ, ಎಮ್ ಗಾಡಿನ್ ಎಂಬ ಕಬ್ಬಿಣದ ಕಾರಖಾನೆಯವನು ಸನ್ ೧೮೮೦ರಿಂದ ನಡಿಸಿದ ಲಾಭ ಹಂಚಿಕೊಳ್ಳುವ ಪದ್ಧತಿಯು ಬಹಳ ಚನ್ನಾಗಿ ನಡಿದದೆ. ಇದಕ್ಕೂ ಮುಂಚೆ, ಈ ಗೃಹಸ್ಥನು ತನ್ನ ಕೂಲಿಕಾರರೊಳಗೆ ಅವರ ಗೃಹಕೃತ್ಯಗಳಿಗೆ ಸಂಬಂಧಿಸಿದಂಥ ಒಂದು ಪರಸ್ಪರ ಸಹಾಯ ಮಾಡುವ ಪದ್ಧತಿಯನ್ನು ಸ್ಥಾಪಿಸಿದ್ದನು. ಫ್ರಾನ್ಸ ದೇಶದಲ್ಲಿ ಮೇಸಾ ಲಿಕ್ಲೇರ್ ಎಂಬದೊಂದು ಮನೆಗಳಿಗೆ ಬಣ್ಣ ಹಚ್ಚುವ ಸಂಘ ಉಂಟು. ಲಾಭ ಹಂಚಿಕೊಳ್ಳುವ ಪದ್ಧತಿಯಿಂದುಂಟಾಗುವ ಒಳ್ಳೇ ಪರಿಣಾಮಗಳನ್ನು ತೋರಿಸುವದಕ್ಕೆ ಈ ಪ್ರಸಿದ್ಧವಾದ ಸಂಘವು ಉತ್ಕೃಷ್ಟ ಉದಾಹರಣವಾಗಿದೆ. ಈ ಸಂಘವನ್ನು ಒಬ್ಬ ಬಡ ಮೊಚ್ಚೆಗಾರನ ಮಗನಾದ ಎಮ್ ಲಿಕ್ಲೇರ್‌ನೆಂಬವನು ಸ್ಥಾಪಿಸಿದನು. ಈ ಗೃಹಸ್ಥನು ಇಪ್ಪತ್ತು ವರ್ಷದವನಿದ್ದಾಗ ದಿನ ೩ ಶಿಲಿಂಗು ದುಡಿಯುವ ಬಡ ಕೂಲಿಕಾರನಾಗಿದ್ದನು. ಆದರೆ ಬರಬರುತ್ತಾ ಅವನು ತನ್ನ ಉದ್ಯೋಗವನ್ನು ಬೆಳಸಿ, ಕಡೆಗೆ ಒಂದು ದೊಡ್ಡ ಕಂಪನಿಯ ಯಜಮಾನನಾದನು. ಇನಿಷ್ಟೇಯಾದರೂ ತುಸು ಮಹತ್ವದ ಸಂಗತಿಯಲ್ಲ. ಆದರೆ, ಲಿಕ್ಲೇರನು ಶ್ಲಾಘ್ಯವಾದ ಸ್ವಕಷ್ಟದಿಂದ ತನಗೆ ಸಂಪತ್ತನ್ನೂ, ಸೌಖ್ಯವನ್ನೂ ಸಂಪಾದಿಸಿ, ಅಷ್ಟರಿಂದಲೇ ತೃಪ್ತಿ ಪಡುವಂಥ ಸಾಮಾನ್ಯ ಮನುಷ್ಯನಾಗಿದ್ದಿಲ್ಲ. ಅವನು ತನ್ನ ಕೂಲಿಕಾರರನ್ನೆಲ್ಲ ತನ್ನ ಉದ್ಯೋಗದಲ್ಲಿ ಹ್ಯಾಗೆ ಪಾಲುಗಾರರಾಗಿ ಮಾಡ ಬೇಕೆಂಬ ಆಲೋಚನೆಯನ್ನು ಮಾಡ ಹತ್ತಿದನು. ಅವನು ತನ್ನ ಚರಿತ್ರದಲ್ಲಿ ಬರೆದದ್ದೇನಂದರೆ:—"ನನ್ನ ಉದ್ಯೋಗದಲ್ಲಿ ದುಡಿಯುವ ಪ್ರತಿಯೊಬ್ಬ ಕೂಲಿಕಾರನು ಈಗಿನದಕ್ಕಿಂತಲೂ ಹೆಚ್ಚು ಮನಮುಟ್ಟಿ ಕೆಲಸ ಮಾಡಿದರೆ, ಒಂದು ದಿವಸದಲ್ಲಿ ಒಂದು ತಾಸಿನ ಕೂಲಿಯಷ್ಟು, ಅಂದರೆ ೬ ಪೇನ್ಸುಗಳ ಬೆಲೆಯಷ್ಟು, ಹೆಚ್ಚು ಕೆಲಸ ಮಾಡಲಾರನೋ? ಇದು ಹೊರ್ತಾಗಿ, ಅವನು ತನ್ನ ಕೆಲಸದ ಮೂಲದ್ರವ್ಯಗಳನ್ನು ಒಂದಿಷ್ಟಾದರೂ ಪುಗಸಾಟಿ

ಹೋಗಗೊಡದೆ, ಹಾಗೂ ತನ್ನ ಹತ್ಯಾರಗಳನ್ನು ಹೆಚ್ಚು ಜಾಗ್ರತೆಯಿಂದ ಉಪಯೋಗಿಸಿ, ಅವನು ದಿನ ಒಂದಕ್ಕೆ ೨೨ ಪೇನ್ಸುಗಳ ಬೆಲೆಯ ಉತ್ಪನ್ನವನ್ನು ಉಳಿಸಲಾರನೋ? ಎಂಬ ಪ್ರಶ್ನಗಳನ್ನು ನಾನು ನನ್ನ ಮನಸಿಗೆ ಕೇಳುತ್ತಿದ್ದೆನು." ಹೀಗೆ ಸಂಭವಿಸಿದ್ದಾದರೆ, ವರ್ಷಕ್ಕೆ ೩,೦೦೦ ಪೌಂಡುಗಳಿಗಿಂತಲೂ ಹೆಚ್ಚು ಲಾಭವಾಗುವದೆಂಬುವದು ಲಿಕ್ಲೇರನ ಲಕ್ಷ್ಯಕ್ಕೆ ಬಂತು. ಯಾಕಂದರೆ, ಅವನ ಉದ್ಯೋಗದಲ್ಲಿ ೩೦೦ ಮಂದಿ ಕೂಲಿಕಾರರು ವರ್ಷದೊಳಗೆ ೩೦೦ ದಿವಸ ದುಡಿಯುತ್ತಿದ್ದರು. ಆಗ ತಾನು ಮಾಡಿದ ಅನುಮಾನದಂತೆ ಆಗಲಿಕ್ಕೇ ಬೇಕು, ಎಂದು ಗ್ರಹಿಸಿಕೊಂಡು, ಅವನು ಆ ಉದ್ಯೋಗಕ್ಕೆ ಹತ್ತಿದನು. ಹಾಗೂ, ಮುಂದೆ ನಡಿದ ಸಂಗತಿಗಳ ಮೇಲಿಂದ, ಅವನು ಮಾಡಿದ ಅನುಮಾನದಲ್ಲಿ ಏನು ತಪ್ಪಿದ್ದಿಲ್ಲವೆಂದು ಸಿದ್ಧವಾಯಿತು. ಅವನು ಮೊದಲು ಸನ್ ೧೮೪೧ನೇ ವರ್ಷದಲ್ಲಿ ತನ್ನ ಲಾಭವನ್ನು ಕೂಲಿಕಾರರ ಸಂಗಡ ಹಂಚಿಕೊಂಡನು. ಮತ್ತು ಮುಂದೆ ಈ ಪದ್ಧತಿಯಿಂದ ಕೂಲಿಕಾರರಿಗೆ ಉತ್ತೇಜನ ದೊರಿದು, ಅವರು ಉತ್ಸಾಹದಿಂದಲೂ ಪ್ರಾಮಾಣಿಕತನದಿಂದಲೂ ಕೆಲಸ ಮಾಡ ಹತ್ತಿದರಿಂದ, ವರ್ಷವರ್ಷಕ್ಕೆ ಅವರಿಗೆ ಸಲ್ಲತಕ್ಕಂಥ ಲಾಭದ ಪಾಲು ಬಹಳ ತೀವ್ರವಾಗಿ ಹೆಚ್ಚಿತು ಈ ವಿಷಯದಲ್ಲಿ ಲಿಕ್ಲೇರನು ಮಾಡಿದ ಯುಕ್ತಿ ಏನಂದರೆ: ಅವನು ಕೂಲಿಕಾರರೊಳಗೆ ಮೊದಲು ಒಂದು ಪರಸ್ಪರ ಸಹಾಯಕ ಸಮಾಜವನ್ನು ಸ್ಥಾಪಿಸಿದನು. ಪ್ರಾರಂಭದಲ್ಲಿ ಈ ಸಮಾಜವು ಪರಸ್ಪರರಿಗೆ ಆಪತ್ತಿನ ಕಾಲದಲ್ಲಿ ಸಹಾಯ ಮಾಡುವಂಥ ಸಂಘವಾಗಿತ್ತು. ಬರಬರುತ್ತಾ ಈ ಸಮಾಜದ ಬಂಡವಲವು ಬೆಳೆದ ಮೇಲೆ, ಆ ಬಂಡವಲವು ಲಿಕ್ಲೇರನ ಉದ್ಯೋಗದಲ್ಲಿ ಹಾಕಲ್ಪಟ್ಟಿತು. ಈ ಪ್ರಕಾರ ಆ ಪರಸ್ಪರ ಸಹಾಯಕ ಸಮಾಜವು ಲಿಕ್ಲೇರನ ಉದ್ಯೋಗದಲ್ಲಿ ಪಾಲುಳ್ಳದ್ದಾದ್ದರಿಂದ ಆ ಸಮಾಜದ ಸಭಿಕರೆಲ್ಲರಿಗೂ ಲಾಭ ಬರ ಹತ್ತಿತು. ಈ ಉದ್ಯೋಗವು ಮೊದಲಿನಿಂದ ಈಗಿನ ವರೆಗೆ ಒಂದೇ ಸಮವಾಗಿ ಅಭಿವೃದ್ಧಿಯನ್ನೇ ಹೊಂದುತ್ತಲಿದೆ. ಈ ಸಮಾಜದಲ್ಲಿ ಲಿಕ್ಲೇರನು ಬಹಳ ಉತ್ಕೃಷ್ಟವಾದ ಆಡಳಿತವನ್ನು ನೆಲೆಗೊಳ್ಳಿಸಿದ್ದನಾದ್ದರಿಂದ, ಲಿಕ್ಲೇರನು ಸನ್ ೧೮೭೨ನೇ ವರ್ಷ ತೀರಿಕೊಂಡಾಗಲೂ ಈ ಸಮಾಜದ ಅಭ್ಯುದಯಕ್ಕೆ ಏನು ಹಾನಿ ಉಂಟಾಗಲಿಲ್ಲ. ಲಿಕ್ಲೇರನು ತೀರಿಕೊಂಡ ಕಾಲಕ್ಕೆ, ಈ ಸಮಾಜದವರು ಉದ್ಯೋಗದಲ್ಲಿ ಹಾಕಿದ ಬಂಡವಲವು ೮೦,೦೦೦ ಪೌಂಡು ಆಗಿತ್ತು. ಹತ್ತು ವರ್ಷಗಳ ತರುವಾಯ ಸನ್ ೧೮೮೨ನೇ ವರ್ಷದಲ್ಲಿ, ಈ ಬಂಡವಲವು ೧,೨೫,೫೮೦ ಪೌಂಡುಗಳ ವರೆಗೆ ಬೆಳೆಯಿತು. ಸನ್ ೧೮೪೨ರಿಂದ ೧೮೮೨ರ ವರೆಗೆ ಕೂಲಿಕಾರರಿಗೆ

೧,೧೭,೦೦೦ ಪೌಂಡುಗಳು ಲಾಭವಾಗಿ ಹಂಚಲ್ಪಟ್ಟವು. ಸನ್ ೧೮೮೫ನೇ ವರ್ಷದಲ್ಲಿ, ಲಾಭವು ೯೫೮ ಕೂಲಿಕಾರರೊಳಗೆ ಹಂಚಲ್ಪಟ್ಟಿತು. ಈ ಪರಸ್ಪರ ಸಹಾಯದ ತತ್ವವನ್ನು ಇಂಗ್ಲಂಡದಲ್ಲಿ ಸಫಕ್ ಕೌಂಟಿಯೊಳಗಿನ ಅಸಿಂಗ್‌ಟನ್ ಎಂಬಲ್ಲಿಯ ಮಿಸ್ತರ ಗರ್ಡನ್ ಎಂಬ ಗೃಹಸ್ಥನು ಒಕ್ಕಲತನದಲ್ಲಿ ಉಪಯೋಗಿಸಿದನು. ಅವನ ಉದ್ಯೋಗವೂ ಸಫಲವಾಯಿತು. ೪೦ ವರ್ಷಗಳ ಪೂರ್ವದಲ್ಲಿ ಮಿಸ್ತರ ಗರ್ಡನ್‌ನು ಎರಡು ಹೊಲಗಳನ್ನು ಕೂಲಿಕಾರರ ಒಂದು ಸಮಾಜಕ್ಕೆ ಗೇಣಿಗೆ ಕೊಟ್ಟನು. ಹಾಗೂ, ಅವರಿಗೆ ಆವಶ್ಯವಾದ ಬಂಡವಲವನ್ನೂ ಕೊಟ್ಟನು. ಈ ಬಂಡವಲವನ್ನು ಆ ಸಮಾಜದವರು ಕೆಲವು ವರ್ಷಗಳಲ್ಲಿ ತಿರುಗಿ ಕೊಡುವದಕ್ಕೆ ಒಪ್ಪಿಕೊಂಡರು. ಈ ಪ್ರಯೋಗವು ಇಂಗ್ಲಂಡದಲ್ಲಿ ಒಳಗಡೆಯಲ್ಲಿ ಒಕ್ಕಲತನದ ಉದ್ಯೋಗವು ಮಂದವಾಗುವ ವರೆಗೆ ಬಹಳ ಚನ್ನಾಗಿ ನಡಿದಿತ್ತು. ಮತ್ತು ಇನ್ನು ಮುಂದಾದರೂ ಗೇಣಿಗಳು ಇಳಿದ ಹಾಗೆ, ಮತ್ತು ಈಗಿನದಕ್ಕಿಂತಲೂ ಸ್ವಲ್ಪ ವಿಶೇಷ ಅನುಕೂಲವಾದ ದಿವಸಗಳು ಬಂದ ಹಾಗೆ, ಈ ಎರಡೂ ಹೊಲಗಳು ಚನ್ನಾಗಿ ನಡಿಯ ಬಹುದೆಂದು ತೋರುತ್ತದೆ. ಮಿಸ್ತರ ಗರ್ಡನ್‌ನು ಕೊಟ್ಟ ಸಾಲವನ್ನು ಈ ಸಮಾಜದವರು ಎಷ್ಟೋ ವರ್ಷಗಳ ಪೂರ್ವದಲ್ಲಿಯೇ ತೀರಿಸಿ ಬಿಟ್ಟರು. ಮತ್ತು ಆ ಉದ್ಯೋಗದಲ್ಲಿ ದುಡಿಯುವ ಕೂಲಿಕಾರರ ಸ್ಥಿತಿಯೂ ಚನ್ನಾಗಿ ಸುಧಾರಿಸಿದೆ. ಕೂಲಿಕಾರರು ತಮ್ಮೊಳಗಿಂದಲೇ ಕೆಲವರನ್ನು ವ್ಯವಸ್ಥಾಪಕರಾಗಿ ನೇಮಿಸುತ್ತಾರೆ. ಮತ್ತು ಕೂಲಿಗೆ ಹಚ್ಚಿದವರಿಗೆ ವಾಡಿಕೆಯಾದ ದರದಂತೆ ಸಂಬಳ ಕೊಟ್ಟು, ವರ್ಷದ ಕೊನೆಗೆ ಬಂದ ಲಾಭವನ್ನು ಎಲ್ಲ ಪಾಲುಗಾರರು ತಮ್ಮೊಳಗೆ ಹಂಚಿಕೊಳ್ಳುತ್ತಾರೆ.

**ಇಂಗ್ಲಂಡದಲ್ಲಿ ನಡಿಯುವ ಪಾಲಿನ ವ್ಯಾಪಾರವು.**—ಸ್ವಲ್ಪ ಹೆಚ್ಚು ಕಡಿಮೆಯಾಗಿ ಅನ್ಯೋನ್ಯಸಹಾಯದ ತತ್ವಗಳನ್ನೇ ಅನುಸರಿಸಿ ನಡಿಯುವಂಥ ಉದ್ಯೋಗಗಳು ಇಂಗ್ಲಂಡದಲ್ಲಿ ಅನೇಕ ಉಂಟು. ಯಾರ್ಕ್‌ಶಾಯರದೊಳಗಿನ ಹ್ವಿಟ್‌ವುಡ್ ಎಂಬಲ್ಲಿಯ ಕಲ್ಲಿದ್ದಲಿಯ ಕಣಿಗಳಲ್ಲಿ ದುಡಿಯುವ ಕೂಲಿಕಾರರ ಕೂಡ, ಬ್ರಿಗ್ಸ ಎಂಬ ಕಂಪನಿಯವರು ಮಾಡಿದ ಪಾಲಿನ ವ್ಯಾಪಾರವು ಪ್ರಸಿದ್ಧವಾಗಿದೆ. ಈ ಕಂಪನಿಯವರು ಮೊದಲು ಕಲ್ಲಿದ್ದಲ್ಲಿಯ ದೊಡ್ಡ ಕಣಿಗಳ ಉದ್ಯೋಗಗಳನ್ನು ತಾವೇ ನಡಿಸುತ್ತಿದ್ದರು. ಆದರೆ, ಅವರಿಗೂ ಅವರ ಕಣಿಗಳಲ್ಲಿ ದುಡಿಯುವ ಕೂಲಿಕಾರರಿಗೂ ಯಾವಾಗಲೂ ವ್ಯಾಜ್ಯಗಳು ನಡಿದು, ಅವರಿಗೆ ಬಹಳ ತೊಂದರೆಯಾದ್ದರಿಂದಲೂ, ಕೂಲಿಕಾರರು ಮೇಲೆ ಮೇಲೆ ಕಟ್ಟು ಮಾಡಿದ್ದರಿಂದ ಅವರಿಗೆ ಬಹಳ ಲುಕಸಾನು ತಗಲಿದ್ದರಿಂದಲೂ, ಅವರು ತಮ್ಮ ಉದ್ಯೋಗವನ್ನೇ

ಬಿಟ್ಟು ಬಿಡ ಬೇಕೆಂಬ ಆಲೋಚನೆ ಮಾಡಿದ್ದರು. ಅಷ್ಟರೊಳಗೆ, ಅವರು ಮತ್ತೊಂದು ಕಡೇ ಉಪಾಯವನ್ನು ಮಾಡಿ ನೋಡ ಬೇಕೆಂದು ನಿಶ್ಚೈಸಿ, ಬಂಡವಲ ಶ್ರಮಗಳ ಪಾಲಿನ ವ್ಯಾಪಾರದಿಂದ ಏನಾದರು ಒಳಿತು ಆಗ ಬಹುದೋ ಹ್ಯಾಗೆ ಎಂಬದನ್ನು ನೋಡ ಬೇಕೆಂದು ನಿರ್ಣೈಸಿದರು. ಆ ಪ್ರಕಾರ, ಅವರು ತಮ್ಮ ಉದ್ಯೋಗದ ಸ್ವರೂಪವನ್ನು ಬದಲಿಸಿ, ಅದಕ್ಕೆ ೧,೩೫,೦೦೦ ಪೌಂಡು ಬಂಡವಲವುಳ್ಳ ಸಮೂಹಿಕ ಬಂಡವಲದ ಸಂಘದ ಸ್ವರೂಪವನ್ನು ಕೊಟ್ಟರು. ಹಾಗೂ ಈ ೧,೩೫,೦೦೦ ಪೌಂಡು ಬಂಡವಲದಲ್ಲಿ ೧೫ ಪೌಂಡಿನ ಒಂದು ಪಾಲಿನಂತೆ ೯೦೦೦ ಪಾಲು ಮಾಡಿ, ಅವುಗಳಲ್ಲಿ ೬೦೦೦ ಪಾಲುಗಳನ್ನು ಬ್ರಿಗ್ಸ ಕಂಪನಿಯವರು ತಾವು ಇಟ್ಟುಕೊಂಡರು; ಹಾಗೂ, ಉಳಿದ ೩೦೦೦ ಪಾಲುಗಳನ್ನು ಆ ಉದ್ಯೋಗದೊಳಗಿನ ಕೂಲಿಕಾರರು ಮೊದಲ್ಗೊಂಡು ಬೇಕಾದವರು ಕೊಳ್ಳ ಬಹುದೆಂದು ಬಿಟ್ಟರು. ಈ ಪಾಲುಗಳನ್ನೆಲ್ಲ ಕೂಲಿಕಾರರು ತಾತ್ಕಾಲಕ್ಕೆ ಕೊಂಡರು. ಈ ಪ್ರಕಾರ ಒಂದು ಪಾಲು ಕೊಂಡ ಕೂಲಿಕಾರನು ಸಹ ಆ ಎಲ್ಲ ಉದ್ಯೋಗದಲ್ಲಿ ಪಾಲ್ಗಾರನಾದನು. ಈ ಕಂಪನಿಯ ಕೆಲಸ ನಡಿಸುವ ಡಾಯರೆಕ್ಟರರು ಪಾಲುಗಳನ್ನು ಕೊಂಡವರೆಲ್ಲರ ಪ್ರತಿನಿಧಿಗಳಾಗಿರುವರು. ಹಾಗೂ ಈ ಡಾಯರೆಕ್ಟರರಲ್ಲಿ ಒಬ್ಬನನ್ನು ಕೂಲಿಕಾರರು ತಮ್ಮೊಳಗಿಂದ ನೇಮಿಸುವರು. ಕಂಪನಿಯ ಬಂಡವಲದ ಮೇಲೆ ನೂರಕ್ಕೆ ೧೦ಕ್ಕಿಂತಲೂ ಹೆಚ್ಚು ಲಾಭ ಬಂದಾಗ, ಈ ಹೆಚ್ಚಿನ ಲಾಭದ ಅರ್ಧವನ್ನು ಕೂಲಿಕಾರರಿಗೆ ಅವರವರು ಹಿಂದಿನ ವರ್ಷದಲ್ಲಿ ದೊರಕಿಸಿದ ಸಂಬಳದ ಪ್ರಮಾಣದಿಂದ ಬಕ್ಷೀಸಾಗಿ ಹಂಚುತ್ತಿದ್ದರು. ಈ ಪದ್ಧತಿಯು ಹತ್ತು ವರ್ಷ ಬಹಳ ಚನ್ನಾಗಿ ನಡಿಯಿತು. ಸುತ್ತುಮುತ್ತಲಿನ ಪ್ರಾಂತದಲ್ಲೆಲ್ಲ ಸಾವುಕಾರರೊಳಗೂ ಕೂಲಿಕಾರರೊಳಗೂ ಬಹಳ ವ್ಯಾಜ್ಯಗಳು ನಡಿದು, ಕೂಲಿಕಾರರ ಕಟ್ಟುಗಳು ಮೇಲಿಂದ ಮೇಲೆ ಆಗಿ, ಬಹಳ ಲುಕಸಾನು ಆಗುವಾಗ, ಬ್ರಿಗ್ಸ ಕಂಪನಿಯವರ ಉದ್ಯೋಗವು ಬಹಳ ಉತ್ಕೃಷ್ಟವಾಗಿ ನಡಿದಿತ್ತು. ಅವರೂ ಅವರ ಕೂಲಿಕಾರರೂ ಒಬ್ಬರ ಸಂಗಡಲೊಬ್ಬರು ಬಹಳ ಅನ್ಯೋನ್ಯದಿಂದ ನಡಿಯುತ್ತಿದ್ದರು. ಆದರೆ, ವ್ಯಾಪಾರವು ಮಂದವಾಗಿ ಬಹು ವಿಷಮ ಕಾಲ ಒದಗಿದ್ದಾಗಲೂ ಕೂಡ ಈ ಲಾಭ ಹಂಚಿಕೊಳ್ಳುವ ಪದ್ಧತಿಯಿಂದ ಬಹಳ ಕಲ್ಯಾಣವಾಗಿದ್ದರೂ, ಕಲ್ಲಿದ್ದಲಿಯ ವ್ಯಾಪಾರದಲ್ಲಿ ಲಾಭ ಸಂಬಳಗಳು ಒಮ್ಮಿಂದೊಮ್ಮೆ ಬಹಳ ಹೆಚ್ಚಿದ ಕಾಲದಲ್ಲಿ ಈ ಪದ್ಧತಿಯು ಸ್ಥಿರಗೊಂಡು ನಿಲ್ಲಲು ಶಕ್ಯವಾಗಲಿಲ್ಲ. ಸನ್ ೧೮೭೨ನೇ ಹಾಗೂ ೧೮೭೩ನೇ ವರ್ಷ ಕಲ್ಲಿದ್ದಲಿಯ ವ್ಯಾಪಾರಕ್ಕೆ ಅಪೂರ್ವವಾದ ತೇಜ ಬಂತು. ಮತ್ತು ಈ ಉದ್ಯೋಗದೊಳಗಿನ ಸಂಬಳ ಲಾಭಗಳು

ಸ್ವಲ್ಪ ಹೆಚ್ಚುಕಡಿಮೆ ಇಮ್ಮಡಿಯಾದವು. ಆಗ್ಯೆ ಸ್ವಿಟ್‌ವುಡದ ಕಲ್ಲಿದ್ದಲಿಯ ಕಣಿಗಳಲ್ಲಿ ಈ ಪ್ರಕಾರ ಮಿತಿಮೀರಿ ಬೆಳೆದ ಲಾಭವನ್ನು, ಬಂಡವಲ ಶ್ರಮಗಳ ನಡುವೆ ಯಾವ ಪ್ರಮಾಣದಿಂದ ಹಂಚಿಕೊಳ್ಳ ಬೇಕೆಂಬ ಬಗ್ಗೆ ವ್ಯಾಜ್ಯ ಹುಟ್ಟಿತು. ಸನ್ ೧೮೬೫ನೇ ವರ್ಷ ಡಿರೆಕ್ಟರರು ನೂರಕ್ಕೆ ೧೦ಕ್ಕೆ ಬದಲಾಗಿ ೧೫ರಂತೆ ಬಂಡವಲಗಾರರಿಗೆ ಲಾಭವನ್ನು ಕೊಡ ಬೇಕೆಂದು ಬೇಡ ಹತ್ತಿದರು. ಇದರಿಂದ ಮೊದಲು ತಾತ್ಕಾಲಕ್ಕೇನು ವ್ಯಾಜ್ಯ ಬರಲಿಲ್ಲ. ಹಾಗೂ ಸನ್ ೧೮೬೩ನೇ ಮತ್ತು ೬೪ನೇ ಇಸವಿಗಳ ಜೂನ ತಿಂಗಳ ೩೦ನೇ ತಾರೀಖುಗಳಿಗೆ ಮುಗಿದ ಎರಡು ವರ್ಷಗಳಲ್ಲಿ ಬಂಡವಲ ಹಾಕಿದ ಪಾಲುಗಾರರಿಗೆ ನೂರಕ್ಕೆ ೧೫ರಂತೆ ಲಾಭವನ್ನೂ, ಹಾಗೂ ಹೆಚ್ಚುಳಿದ ಲಾಭದೊಳಗಿನ ಅರ್ಧಭಾಗವನ್ನೂ ಕೊಟ್ಟರು. ಅನಂತರ ಸ್ವಲ್ಪ ದಿವಸಗಳಲ್ಲಿ, ಅಂದರೆ ಸನ್ ೧೮೬೪ನೇ ವರ್ಷದ ಕಡೆಯ ಆರು ತಿಂಗಳಲ್ಲಿ ಕಲ್ಲಿದ್ದಲಿಯ ಧಾರಣೆ ಇಳಿಯ ಹತ್ತಿದ್ದರಿಂದ, ಬ್ರಿಗ್ಸರವರೂ ಆ ಪ್ರಾಂತದೊಳಗಿನ ಕಲ್ಲಿದ್ದಲಿಯ ಬೇರೆ ಕಾರಖಾನೆಯವರೂ ಕೂಲಿಯವರ ಸಂಬಳ ಇಳಿಸಿದರು. ಈ ಪ್ರಕಾರ ಸಂಬಳದ ದರವನ್ನು ಕಡಿಮೆ ಮಾಡಲಾಗಿ, ಬ್ರಿಗ್ಸರವರ ಕೂಲಿಕಾರರೂ ಬೇರೆಯವರ ಕೂಲಿಕಾರರೂ ಕಟ್ಟು ಮಾಡಿ, ಕೆಲಸ ಬಿಟ್ಟರು. ಇದರಿಂದುಂಟಾದ ಪರಿಣಾಮವೇನಂದರೆ, ಕಂಪನಿಯ ಮಾರ್ಫತ್ ಸಭೆಯಲ್ಲಿ ಬಹುತರ ಯಾವತ್ತು ಪಾಲುಗಾರರು ಲಾಭವನ್ನು ಹಂಚಿಕೊಳ್ಳುವ ಪದ್ಧತಿಯಿಂದಲೂ ಕೂಡ ಕಟ್ಟುಗಳು ತಪ್ಪುವದಿಲ್ಲವೆಂಬುವದನ್ನು ಕಂಡು, ತಮಗಾದ ಅಸಮಾಧಾನವನ್ನು ಪ್ರಕಟಿಸಿ, ಅಂದಿನಿಂದ ತಾವು ಲಾಭ ಹಂಚಿಕೊಳ್ಳುವ ಪದ್ಧತಿಯನ್ನು ನಡಿಸಲಿಕ್ಕಿಲ್ಲೆಂದು ಪ್ರಸಿದ್ಧ ಮಾಡಿದರು. ಲಾಭ ಹಂಚಿಕೊಳ್ಳುವ ಈ ಪದ್ಧತಿಯು ನಡಿಯುತ್ತಿದ್ದಾಗ ಎಲ್ಲ ಕೂಡಿ ೩೪,೦೦೦ ಪೌಂಡುಗಳು ಕೂಲಿಕಾರರಿಗೆ ಬಕ್ಷೀಸಾಗಿ ಹಂಚಲ್ಪಟ್ಟವು. ಒಂದರ ಮೇಲೊಂದು ಅನೇಕ ಅಡಚಣೆಗಳು ಬಂದು ಈ ಪದ್ಧತಿಯು ನಿಂತು ಹೋದದ್ದು ಬಹಳ ವ್ಯಸನಕರವಾಗಿದೆ. ಈಗ್ಯೆ ಮೆಥಲೆ ಎಂಬಲ್ಲಿ ಲಾಭವನ್ನು ಹಂಚಿಕೊಳ್ಳುವ ಪದ್ಧತಿಯ ಪ್ರಯೋಗ ಮಾಡಿ ನೋಡುವದನ್ನು ಬಿಟ್ಟು ಬಿಟ್ಟಾಗ್ಯೂ, ಅಲ್ಲಿಯ ಎಷ್ಟೋ ಕೂಲಿಕಾರರು ಇನ್ನೂ ಆ ಕಂಪನಿಯ ಪಾಲುಗಳನ್ನು ಕೊಂಡಿದ್ದಾರೆ. ಈ ತರದ ಪಾಲಿನ ವ್ಯಾಪಾರವು ಬೇರೆ ಅನೇಕ ಉದ್ಯೋಗಗಳಲ್ಲಿಯೂ ಚನ್ನಾಗಿ ನಡಿಯುತ್ತಿರುವದು. ಉದಾಹರಣಾರ್ಥವಾಗಿ, ಹ್ಯಾಲಿಫ್ಯಾಕ್ಸ ಪಟ್ಟಣದಲ್ಲಿ ಕ್ರಾಸಲೆ ಕಂಪನಿಯವರು ತಮ್ಮ ಜಮುಖಾನೆಗಳ ಕಾರಖಾನೆಯಲ್ಲಿಯೂ, ಲಾರ್ಡ ಜಾರ್ಜ ಮ್ಯಾನರ್ಸ್ ಎಂಬವನು ನ್ಯೂಮಾರ್ಕೆಟದ ಹತ್ತರ ಒಂದು ಹೊಲದಲ್ಲಿಯೂ, ಗ್ರಂಥಗಳನ್ನು ಮುದ್ರಿಸುವ ಕ್ಯಾಸೆಲ್ ಕಂಪನಿಯವರೂ,

ಪೋಷಾಕುಗಳನ್ನು ಮಾಡುವ ಹ್ಯಾಮಿಲ್‌ಟನ್ ಕಂಪನಿಯುವರೂ ಈ ತರದ ಪಾಲಿನ ಪದ್ಧತಿಯನ್ನು ಉಪಯೋಗಿಸುತ್ತಾ ಇದ್ದಾರೆ.

ಪಂಚರ ಸಭೆ. — ಕೆಲವು ಉದ್ಯೋಗಗಳಲ್ಲಿ, ಮುಖ್ಯವಾಗಿ ನಾಟಿಂಗ್ಹ್ಯಾಮದ ಹೆಣೆಯುವ ಹಾಗು ಕಾಲುಚೀಲಗಳನ್ನು ಮಾಡುವ ಉದ್ಯೋಗಗಳಲ್ಲಿ, ಪಂಚಾಯತಿಯ ಸಭೆಗಳನ್ನು ಸ್ಥಾಪಿಸಿದ್ದರಿಂದ ಕೂಲಿಕಾರರ ಕಟ್ಟುಗಳು ನಿಂತು ಹೋಗಿವೆ. ಈ ಸಭೆಗಳಲ್ಲಿ ಅರ್ಧ ಸಭಿಕರು ಕೂಲಿಕಾರರೊಳಗಿನವರಿರುವರು; ಉಳಿದ ಅರ್ಧ ಸಭಿಕರು ಸಾವುಕಾರರೊಳಗಿನವರು. ಈ ಸಭೆಯು ತಿಂಗಳಿಗೊಮ್ಮೆ ಕೂಡುವದು. ಆಗ ಸಭೆಯ ಮುಂದೆ ಕೂಲಿಕಾರರ ಹಾಗೂ ಸಾವುಕಾರರೊಳಗಿನ ವ್ಯಾಜ್ಯಗಳನ್ನು ತೀರ್ಪಿಗಾಗಿ ಇಡುವರು. ಈ ಬಗೆಯ ವ್ಯಾಜ್ಯಗಳು ಹುಟ್ಟಿದಾಗ್ಯೆ ಈ ಪಂಚರ ಸಭೆಗಳಿಂದ ಉಂಟಾದಷ್ಟು ಕಲ್ಯಾಣವು ಬೇರೆ ಇನ್ನಾವದರಿಂದಲೂ ಆಗುವದಿಲ್ಲ. ಈ ಸಭೆಗಳ ಮೂಲಕವಾಗಿ ಸಾವುಕಾರರೊಳಗೂ ಕೂಲಿಕಾರರೊಳಗೂ ಪರಸ್ಪರ ಸಂಬಂಧವು ವಿಶೇಷವಾಗುವದರಿಂದ, ಈ ಸಭೆಗಳಿಗೆ ಅವರ ವ್ಯಾಜ್ಯಗಳನ್ನು ತೀರಿಸುವದಕ್ಕೆ ಬಹಳ ಅನುಕೂಲವಾಗುತ್ತದೆ. ಆದರೆ ಈ ಸ್ಥಳದಲ್ಲಿ ನೆನಪಿನಲ್ಲಿಡತಕ್ಕದ್ದೇನಂದರೆ, ಈ ಸಭೆಗಳಾದರೂ ಕೇವಲ ಬಾಹ್ಯಚಿನ್ಹಗಳಾದ ಕೂಲಿಕಾರರ ಕಟ್ಟುಗಳನ್ನು ಮಾತ್ರವೇ ನಿವಾರಣೆ ಮಾಡಬೇಕೆಂದು ಯತ್ನಿಸುವವು, ಈ ಕಟ್ಟುಗಳ ಮೂಲಬೀಜವಾದ ಪರಸ್ಪರ ಹಿತಗಳ ವಿರೋಧ ಭಾವವನ್ನು ನಿವಾರಣೆ ಮಾಡುವದಕ್ಕೆ ಯತ್ನಿಸುವದಿಲ್ಲ. ಆ ಕಾರಣ, ಈ ಸಭೆಗಳು ಕೂಲಿಕಾರರ ಕಟ್ಟುಗಳನ್ನು ತಪ್ಪಿಸುವದಕ್ಕೆ ಸರ್ವೋತ್ಕೃಷ್ಟವಾದ ಉಪಾಯಗಳೆಂದು ಎಣಿಸಲಾಗದು.

ಸಮೂಹಿಕ ಸಂಗ್ರಹಗಳು. — ಲಂಡನ ಮುಂತಾದ ಕೆಲವು ಪಟ್ಟಣಗಳಲ್ಲಿ ಇತ್ತಲಾಗಿ ಸಮೂಹಿಕ ಸಂಗ್ರಹಗಳೆಂಬ ಸಮೂಹಿಕ ಅಂಗಡಿಗಳನ್ನು ಸ್ಥಾಪಿಸುವ ರೂಢಿಯು ಬಹಳವಾಗಿ ಪ್ರಚಾರಗೊಂಡಿದೆ. ಈ ಸಂಗ್ರಹಗಳೂ, ಹಿಂದೆ ವಿವರಿಸಿದ ಅನ್ಯೋನ್ಯಸಹಾಯುವೂ ಒಂದೇ ಅಲ್ಲ. ಇವುಗಳೊಳಗಿನ ಭೇದವೇನಂದರೆ, ಅನ್ಯೋನ್ಯಸಹಾಯುವೆಂಬುವದರಲ್ಲಿ ಬಂಡವಲ ಶ್ರಮಗಳ ಸಂಯೋಗವಾಗುವದು. ಆದರೆ, ಸಮೂಹಿಕ ಸಂಗ್ರಹಗಳಲ್ಲಿ ಬಂಡವಲ ಶ್ರಮಗಳ ಸಂಯೋಗವಾಗುವದಿಲ್ಲ. ಉದಾಹರಣಾರ್ಥವಾಗಿ, ಇಂಗ್ಲಂಡದಲ್ಲಿ ಸಿವ್ಹಿಲ್‌ಸರ್ವ್ಹಿಸ್ ಸಂಗ್ರಹಗಳು, ದಂಡಿನ ಹಾಗೂ ಹಡಗಪಡೆಯ ಸಂಗ್ರಹಗಳು, ಮುಂತಾದ ಸಮೂಹಿಕ ಸಂಗ್ರಹಗಳು ಅನೇಕ ಉಂಟು. ಇವುಗಳಲ್ಲಿ, ಬಂಡವಲ ಶ್ರಮಗಳ ಪರಸ್ಪರ ಸಂಬಂಧವೇನು ಇರುವದಿಲ್ಲ. ಇಂಥ ಸಂಗ್ರಹಗಳು ಕೇವಲ ಸಮೂ

ಹಿಕ ಬಂಡವಲದ ಸಂಘಗಳ ಹಾಗಿರುವವು. ಈ ಸಂಗ್ರಹಗಳ ಪಾಲುಗಳನ್ನು ಕೊಂಡ ಪಾಲುಗಾರರು ಆ ಸಂಗ್ರಹಗಳ ಅಭ್ಯುದಯಕ್ಕೋಸ್ಕರ ಅವುಗಳಲ್ಲಿ ಸ್ವತಃ ಬಹುತರ ಎಂದೂ ದುಡಿಯುವವರಿರುವದಿಲ್ಲ. ಇಂಥ ಸಂಗ್ರಹಗಳ ಅಂಗಡಿಗಳಲ್ಲಿ ದುಡಿಯುವಂಥ ಕಾರ್ಯದರ್ಶಿಗಳೂ ಅಂಗಡಿಕಾರರೂ ಈ ಸಂಗ್ರಹಗಳಲ್ಲಿ ತಮ್ಮ ಪಾಲುಗಳನ್ನು ತಮ್ಮ ಮನಸಿಗೆ ಬಂದರೆ ಇಡುವರು, ಇಲ್ಲದಿದ್ದರೆ ಇಲ್ಲ. ಅವರು ಪಾಲುಗಾರರಾಗಲಿಕ್ಕೆ ಬೇಕೆಂಬ ಅವಶ್ಯವಿರುವದಿಲ್ಲ. ಸಮೂಹಿಕ ಸಂಗ್ರಹಗಳಿಂದ ಉಂಟಾಗುವ ಕಾರ್ಯಭಾಗವು ಬಂಡವಲ ಶ್ರಮಗಳ ಸಂಯೋಗದಿಂದುಂಟಾಗುವದಿಲ್ಲ. ಸಮೂಹಿಕ ಸಂಗ್ರಹಗಳಿಂದ ಲಾಭವಾಗುವ ಕಾರಣವೇನಂದರೆ, ಈ ಸಂಗ್ರಹಗಳಲ್ಲಿ ನಗದು ಹಣ ಕೊಡುವ ಪದ್ಧತಿಯನ್ನು ಅವಲಂಬಿಸಿರುವರು. ಹಾಗೂ ಈ ಸಂಗ್ರಹಗಳ ದ್ವಾರದಿಂದ ಪದಾರ್ಥಗಳನ್ನು ಹುಟ್ಟಿಸುವವರೊಳಗೂ ಅವುಗಳನ್ನು ಉಪಯೋಗಿಸುವವರೊಳಗೂ ವಿಶೇಷ ಸಾಕ್ಷಾತ್ ಸಂಬಂಧ ಉಂಟಾಗುತ್ತದೆ; ಅಂದರೆ ಈ ಸಂಗ್ರಹಗಳ ಮೂಲಕವಾಗಿ, ಪದಾರ್ಥಗಳು ಅವುಗಳನ್ನು ಹುಟ್ಟಿಸಿದವರಿಂದ ಉಪಯೋಗಿಸುವವರ ಕೈಗೆ ಬರುವ ವರೆಗೆ ಮಧ್ಯಂತರದಲ್ಲಿ ನಾಲ್ಕಾರು ವ್ಯಾಪಾರಿಗಳ ಕೈಯ್ಯೊಳಗಿಂದ ಬರುವದು ತಪ್ಪುತ್ತದೆ. ಆದ್ದರಿಂದ ಪದಾರ್ಥಗಳನ್ನು ನಡುಬಟ್ಟಿ ಕೊಂಡು ಮಾರಾಟ ಮಾಡುವ ಈ ನಾಲ್ಕಾರು ಜನರ ಲಾಭವು ಕಡಿಮೆಯಾಗುವದು. ಈ ಕಾರಣಗಳಿಂದಲೇ ಸಮೂಹಿಕ ಸಂಗ್ರಹದಲ್ಲಿ ಪದಾರ್ಥಗಳು ಕಡಿಮೆ ಧಾರಣೆಗೆ ದೊರಿಯುತ್ತವೆ. ಸಮೂಹಿಕ ಸಂಗ್ರಹದಲ್ಲಿ ಬಂಡವಲ ಶ್ರಮಗಳ ಸಂಯೋಗವಾಗುವದಿಲ್ಲ, ಸರಕುಗಳನ್ನು ಮಾರಾಟ ಮಾಡುವವರೊಳಗೂ ಅವುಗಳನ್ನು ಉಪಯೋಗಿಸುವವರೊಳಗೂ ಸಂಯೋಗ ಉಂಟಾಗುತ್ತದೆ. ಸಮೂಹಿಕ ಸಂಗ್ರಹಗಳಲ್ಲಿ, ಪದಾರ್ಥಗಳು ಬೇರೆ ಅಂಗಡಿಗಳಿಗಿಂತಲೂ ಅಗ್ಗವಾಗಿ ದೊರಿಯುವದಕ್ಕೆ ಕೆಲವು ಕಾರಣಗಳುಂಟು. ಅವೇನಂದರೆ, ಬೇರೆ ಅಂಗಡಿಗಳಂತೆ ಸಮೂಹಿಕ ಸಂಗ್ರಹಗಳಲ್ಲಿ ಉದ್ದರಿ ವ್ಯಾಪಾರ ಇರುವದಿಲ್ಲ. ಆದ್ದರಿಂದ, ಬೇರೆ ಅಂಗಡಿಗಳಂತೆ ಈ ಅಂಗಡಿಗಳಲ್ಲಿ ಮುಳುಗುವ ಬಾಕಿಗಳು ಇರುವದಿಲ್ಲ. ಇದಲ್ಲದೆ, ಸಮೂಹಿಕ ಸಂಗ್ರಹದ ಅಂಗಡಿಯವರು ವರ್ತಮಾನಪತ್ರಗಳಲ್ಲಿ ಬಹಳ ಖರ್ಚು ಮಾಡಿ ಪ್ರಕಟನೆಗಳನ್ನು ಪ್ರಸಿದ್ಧ ಪಡಿಸ ಬೇಕಾಗುವದಿಲ್ಲ. ಅಂಗಡಿಯು ಕಣ್ಣಿಗೆ ಬಹು ಮನೋಹರವಾಗಿ ಕಾಣಿಸುವದಕ್ಕೋಸ್ಕರ ವಿಶೇಷ ಖರ್ಚು ಮಾಡುವ ಅವಶ್ಯವಿರುವದಿಲ್ಲ. ಇದರ ಹೊರ್ತು, ಈ ಅಂಗಡಿಕಾರರಿಗೆ ಪದಾರ್ಥಗಳನ್ನು ಹೊರಿಸಿ ಗಿರಾಕಿಗಳ ಮನೆಗೆ ಕಳಿಸುವ ಖರ್ಚು ಬೀಳುವದಿಲ್ಲ. ಬೇರೆ ಬೇರೆ

ಉದ್ಯೋಗಗಳಲ್ಲಿ ತೊಡಗಿದಂಥ ಸಮಸ್ತ ಜನರೂ ತಮ್ಮ ತಮ್ಮ ಉದ್ಯೋಗಗಳನ್ನು ಸಮೂಹಿಕ ಸಂಗ್ರಹದ ತತ್ವಗಳನ್ನೇ ಅನುಸರಿಸಿ ನಡಿಸಿದರೆ ಬಹಳ ಹಿತವಾಗುವದು. ಹೀಗಿದ್ದೂ, ಬಹು ಜನ ಉದ್ಯೋಗಗಾರರು ಈ ತತ್ವಗಳನ್ನು ಅಂಗೀಕರಿಸದೆ ಇರುವದಕ್ಕೆ ಅವರ ಅಜ್ಞಾನವೇ ಹೊರ್ತು ಬೇರೆ ಕಾರಣ ತೋರುವದಿಲ್ಲ. ಸಮೂಹಿಕ ಸಂಗ್ರಹಗಳಲ್ಲಿ ರೋಚಡೇಲ್ ಎಂಬಲ್ಲಿಯ ದಂಡಿನ ಕೂಲಿಯುವರ ಸಮೂಹಿಕ ಸಂಗ್ರಹವು ಎಲ್ಲಕ್ಕೂ ಹಳೆಯದಾಗಿದ್ದು, ಬಹಳ ಪ್ರಸಿದ್ಧವಾಗಿದೆ. ಈ ಸಮಾಜದ ಅಂಗಡಿಯಲ್ಲಿ ಪದಾರ್ಥಗಳನ್ನು ವಾಡಿಕೆಯಾದ ಕಿರುಕುಳ ದರದಂತೆ ಮಾರುವರು. ಉದ್ದರೀ ಮಾರಾಟವನ್ನಂತೂ ಅವರು ಇಟ್ಟೇ ಇಲ್ಲ. ಮತ್ತು ಮೂರು ತಿಂಗಳಿಗೊಮ್ಮೆ ಈ ಸಂಗ್ರಹದ ಲೆಖ್ಖವನ್ನು ಮಾಡಿ, ಕೆಳಗೆ ಬರೆದ ಪ್ರಕಾರ ಲಾಭವು ಹಂಚಲ್ಪಡುವದು: ಪಾಲುಗಳನ್ನು ಕೊಂಡ ಪಾಲುಗಾರರ ಬಂಡವಲದ ಮೇಲೆ ನೂರಕ್ಕೆ ವರ್ಷ ಒಂದಕ್ಕೆ ೫ರಂತೆ ಬಡ್ಡಿಯನ್ನು ಕೊಡುತ್ತಾರೆ; ಹಾಗೂ ಉಳಿದ ಲಾಭವನ್ನು ಆ ಸಂಗ್ರಹದಿಂದ ಪದಾರ್ಥಗಳನ್ನು ಕೊಂಡ ಗಿರಾಕಿಗಳಿಗೆ ಅವರವರು ಕೊಂಡ ಪದಾರ್ಥಗಳ ಬೆಲೆಯ ಪ್ರಮಾಣದಿಂದ ಹಂಚಿಕೊಡುತ್ತಾರೆ. ಈ ಸಮಾಜವನ್ನು ಸನ್ ೧೮೪೪ನೇ ವರ್ಷ ಕೂಲಿಕಾರರೇ ಸ್ಥಾಪಿಸಿದರು. ಆಗ ಈ ಸಮಾಜದಲ್ಲಿ ಚಹದ ಒಂದು ಪೆಟ್ಟಿಗೆಯನ್ನೂ, ಒಂದು ಚೀಲ ಸಕ್ಕರೆಯನ್ನೂ ಮಾತ್ರ ಕೊಳ್ಳುವಷ್ಟು ಬಂಡವಲವಿತ್ತು. ಆದರೆ, ಇದೇ ಸಮಾಜದವರು ಸನ್ ೧೮೮೨ನೇ ವರ್ಷದಲ್ಲಿ ೨,೭೪,೦೦೦ ಪೌಂಡುಗಳ ವ್ಯಾಪಾರ ಮಾಡಿದರು. ಆದಕಾರಣ, ಸಮೂಹಿಕ ಸಂಗ್ರಹಗಳನ್ನು ಒಳ್ಳೇ ಜಾಗ್ರತೆಯಿಂದ ನಡಿಸಿದ್ದುಂಟಾದರೆ, ಅವುಗಳು ಬಹಳ ಲಾಭಕರವಾಗುವವೆಂಬುವದಕ್ಕೆ ಏನು ಸಂದೇಹವಿಲ್ಲ.

ಸಮೂಹಿಕ ಸಂಗ್ರಹಗಳಿಂದ ಅವುಗಳ ಗಿರಾಕಿಗಳಿಗೆ ಬಹು ಪ್ರಯೋಜನ ಉಂಟಾಗುವದೆಂಬುವದು ನಿಃಸಂದೇಹವಾದದ್ದು. ಸಮೂಹಿಕ ಸಂಗ್ರಹಗಳು ಬಹಳ ಲಾಭಕರವಾಗುವದಕ್ಕೆ ರೋಖ ಹಣ ಕೊಡುವ ತತ್ವವೇ ಮುಖ್ಯ ಕಾರಣವು. ಆದಕಾರಣ, ಈ ತತ್ವವು ಬರಬರುತ್ತಾ ಅನೇಕ ವ್ಯಾಪಾರ ಉದ್ಯೋಗಗಳಲ್ಲಿ ಉಪಯೋಗಿಸಲ್ಪಡುವದೆಂಬದಾಗಿ ತೋರುತ್ತದೆ.

## ನಾಲ್ಕನೆ ಅಧ್ಯಾಯದ ಮೇಲಿನ ಪ್ರಶ್ನೆಗಳು.
## ಉದ್ಯೋಗಸಮಾಜಗಳು, ಕೂಲಿಕಾರರ ಕಟ್ಟುಗಳು, ಅನ್ಯೋನ್ಯಸಹಾಯಕ ಸಂಘಗಳು.

೧. ಉದ್ಯೋಗಸಮಾಜವೆಂದರೇನು?

೨. ಉದ್ಯೋಗಸಮಾಜದಿಂದ ವಾಡಿಕೆಯಾಗಿ ಆಗುವಂಥ ಎರಡು ಕಾರ್ಯಭಾಗಗಳು ಯಾವವು?

೩. ಉದ್ಯೋಗಸಮಾಜಗಳು ಸಾವುಕಾರರಿಗೆ ಕೇರದೆ ಇರುವ ಕಾರಣವೇನು?

೪. ಉದ್ಯೋಗಸಮಾಜಗಳಿಗೂ, ಕೂಲಿಕಾರರ ಕಟ್ಟುಗಳಿಗೂ ಏನು ಸಂಬಂಧವಿರುವದು?

೫. ಕೂಲಿಕಾರರ ಕಟ್ಟು ಅಂದರೇನು?

೬. ಜನರಿಗೆ ಕೆಲಸ ಬಿಡುವ ಕಟ್ಟು ಮಾಡುವ ಹಕ್ಕು ಇಲ್ಲವೆಂದು ಸಿದ್ಧ ಮಾಡ ಬಹುದೋ?

೭. ಉದ್ಯೋಗಸಮಾಜಗಳನ್ನು ಕೇರಿದವರಿಗೆ ಅವುಗಳಿಂದುಂಟಾಗುವ ಮುಖ್ಯ ಪ್ರಯೋಜನಗಳು ಯಾವವು?

೮. ಉದ್ಯೋಗಸಮಾಜದವರು, ತಮ್ಮ ಉದ್ಯೋಗಗಳೊಳಗಿನ ಸಂಬಳವನ್ನು ಹೆಚ್ಚಿಸುವದಕ್ಕೆ ಮಾಡಿದ ಕೆಲ ನಿಯಮಗಳನ್ನು ವಿವರಿಸಿರಿ.

೯. ಉದ್ಯೋಗಸಮಾಜಗಳ ನಿಯಮಗಳಿಗೂ, ವೈದ್ಯಕ ಹಾಗೂ ವಕೀಲಿಯ ವೃತ್ತಿಗಳ ಮರ್ಯಾದೆಗಳಿಗೂ, ಇರುವ ಸಾಮ್ಯವನ್ನು ವಿವರಿಸಿರಿ.

೧೦. ಕೂಲಿಕಾರರನ್ನು ದುಡಿಸಿಕೊಳ್ಳುವ ಧನಿಯರು ಮಾಡಿದ ಕಟ್ಟಿನ ಒಂದು ಉದಾಹರಣವನ್ನು ಕೊಟ್ಟು, ಕೂಲಿಕಾರರಿಗೆ ತಮ್ಮ ಹಿತದ ರಕ್ಷಣೆಗಾಗಿ ಒಟ್ಟುಗೂಡುವದಕ್ಕೆ ಇದ್ದಷ್ಟು ಅಧಿಕಾರವೇ ಕೂಲಿಕಾರರನ್ನು ದುಡಿಸಿಕೊಳ್ಳುವವರಿಗೂ ಉಂಟೆಂಬದನ್ನು ತೋರಿಸಿರಿ.

೧೧. ಕೂಲಿಕಾರರ ಕಟ್ಟುಗಳ ಹಾಗೂ ಸಾವುಕಾರರು ಮಾಡುವ ಕಾರಖಾನೆಗಳನ್ನು ಇಕ್ಕುವ ಕಟ್ಟುಗಳ ನಿಜವಾದ ಕಾರಣವೇನು?

೧೨. ಈ ಕಾರಣವನ್ನು ಹ್ಯಾಗೆ ನಿರಾಕರಿಸ ಬಹುದು?

೧೩. ಅನ್ಯೋನ್ಯ ಸಹಾಯ, ಪಾಲಿನ ವ್ಯಾಪಾರ, ಲಾಭವನ್ನು ಹಂಚಿಕೊಳ್ಳುವ ಪದ್ಧತಿ, ಇವುಗಳನ್ನು ವರ್ಣಿಸಿರಿ. ಮತ್ತು ಪ್ರತಿಯೊಂದರ ಉದಾಹರಣಗಳನ್ನು ಕೊಡಿರಿ.

೧೪. ಲಾಭ ಹಂಚಿಕೊಳ್ಳುವ ಪದ್ಧತಿಯಿಂದ ಸಾವುಕಾರರಿಗೇನಾದರೂ ಲುಕಸಾನು ತಾಗುವದೋ?

೧೫. ಈ ಪದ್ಧತಿಯಲ್ಲಿದ್ದ ವಿಶೇಷ ಗುಣಗಳು ಯಾವವು.

೧೬. ಸಮೂಹಿಕ ಸಂಗ್ರಹವೆಂದರೇನು? ಅದಕ್ಕೆ ಆಧಾರವಾದ ತತ್ವವು ಯಾವದು?

೧೭. ಬೇರೆ ಅಂಗಡಿಗಳಿಗಿಂತಲೂ ಸಮೂಹಿಕ ಸಂಗ್ರಹದ ಅಂಗಡಿಯಲ್ಲಿ ಪದಾರ್ಥಗಳು ಅಗ್ಗವಾಗಿ ತಿಗುವ ಕಾರಣವೇನು?

೧೮. ರೋಚಡೇಲದ ದಂಡಿನ ಕೂಲಿಕಾರರು ಮಾಡಿದ ಸಂಗ್ರಹದ ಸಂಕ್ಷಿಪ್ತ ವರ್ಣನೆಯನ್ನು ಬರೆಯಿರಿ.

೧. ಸಭೆಗೂಡುವದರಿಂದ ಕೂಲಿಕಾರರಿಗೆ ಉಂಟಾಗುವ ಪ್ರಯೋಜನಗಳನ್ನು ವರ್ಣಿಸಿರಿ. ಹಾಗೂ ಕೂಲಿಕಾರರು ಸಾವುಕಾರರ ಸಂಗಡ ಸಂಬಳದ ದರವನ್ನು ಗೊತ್ತು ಮಾಡಿಕೊಳ್ಳುವಾಗ, ಕೂಲಿಕಾರರು ಒಕ್ಕಟ್ಟಾಗಿದ್ದರೆ ಮಾತ್ರ ಅವರಿಗೆ ತಮ್ಮ ಹಿತಗಳನ್ನು ರಕ್ಷಿಸುವದಕ್ಕೆ ಬರುತ್ತದೆ, ಎಂಬ ಮಾತನ್ನು ವಿಶದವಾಗಿ ವರ್ಣಿಸಿರಿ

೨. ನೀವು ಒಂದು ಉದ್ಯೋಗಸಮಾಜದ ಸಭಿಕರಾಗಿದ್ದೀರೆಂತಲೂ, ಹೆಚ್ಚು ಸಂಬಳಕ್ಕಾಗಿ ಕಟ್ಟು ಮಾಡುವ ನಿಶ್ಚಯವಾಗಿದೆಂತಲೂ ಕಲ್ಪಿಸಿರಿ. ಈ ಕಟ್ಟನ್ನು ನೀವು ವ್ಯಾಪಾರ ಚನ್ನಾಗಿ ನಡಿಯುವಾಗ ಪ್ರಾರಂಭ ಮಾಡಬೇಕೆಂದು ಹೇಳುವಿರೋ? ವ್ಯಾಪಾರವು ಮಂದವಾಗಿದ್ದಾಗ ಆರಂಭಿಸ ಬೇಕೆಂದು ಹೇಳುವಿರೋ?

೩. ಸಮೂಹಿಕಸಂಗ್ರಹಗಳಿಂದ ಚಿಲ್ಲರೆ ಅಂಗಡಿಕಾರರಿಗೂ ಬೇರೆ ಉದ್ದಮಿದಾರರಿಗೂ ಲುಕಸಾನು ಆಗುವ ಕಾರಣ, ಈ ಸಂಗ್ರಹಗಳು ಸಮಾಜಕ್ಕೆ ಅಹಿತಕರವಾದವುಗಳೆಂದು ಎಣಿಸುವಿರೋ? ಅಹಿತಕರವಲ್ಲವೆಂದು ಎಣಿಸಿದ್ದುಂಟಾದರೆ, ಯಾಕೆ ಅಹಿತಕರವಲ್ಲ?

# ೪ನೇ ಭಾಗ.

## ಪರದೇಶವ್ಯಾಪಾರ, ಪತ್ತು, ಕರ, ಇವುಗಳ ವಿಷಯದಲ್ಲಿ.

ಈ ಭಾಗದಲ್ಲಿ ಪರದೇಶವ್ಯಾಪಾರ, ಪತ್ತು ಹಾಗೂ ಪತ್ತಿನಿಂದ ಧಾರಣೆಗಳ ಮೇಲೆ ಉಂಟಾಗುವ ಪರಿಣಾಮ, ಮತ್ತು ಸರಕಾರಕ್ಕೆ ಕೊಡುವ ಕರ, ಎಂಬ ವಿಷಯಗಳು ವಿವೇಚಿಸಲ್ಪಡುವವು. ಪರದೇಶವ್ಯಾಪಾರ, ಮತ್ತು ಪತ್ತು, ಎಂಬೀ ವಿಷಯಗಳು ಸರಕುಗಳ ಕ್ರಯವಿಕ್ರಯಗಳಿಗೆ ಸಂಬಂಧಿಸಿದ ವಿಷಯಗಳಾದ್ದರಿಂದ, ಈ ವಿಷಯಗಳನ್ನು "ಸಂಪತ್ತಿನ ವಿನಿಮಯ" ಎಂಬ ಭಾಗದಲ್ಲಿ ವಿವರಿಸ ತಕ್ಕದ್ದಾಗಿತ್ತೆಂದು ಒಂದು ವೇಳೆ ತೋರ ಬಹುದು. ಆದರೆ ವಾಡಿಕೆಯಾಗಿ "ಸಂಪತ್ತಿನ ವಿನಿಮಯ"ವೆಂಬ ಭಾಗದಲ್ಲಿ ಶೇರಿಸಲ್ಪಡುವ ಈ ವಿಷಯಗಳನ್ನು, ಕೇವಲ ಮೂಲತತ್ವಗಳನ್ನು ತಿಳಿಸಿ ಕೊಡುವಂಥ ಈ ಚಿಕ್ಕ ಪುಸ್ತಕದಲ್ಲಿ ಬೇರೆಯಾಗಿ ಹೇಳುವದೇ ವಿಹಿತವು. ಸಂಪತ್ತಿನಲ್ಲಾಗುವ ಗೇಣಿ, ಸಂಬಳ, ಲಾಭ, ಎಂಬ ವಿಭಾಗಗಳನ್ನು ನಿರ್ಣೈಸುವಂಥ ಕಾರಣಗಳು ಸರಿಯಾಗಿ ತಿಳಿಯಬೇಕಾದರೆ, ಮೊದಲು ಬೆಲೆ ಕ್ರಯಗಳೆಂದರೇನು, ಸರಕುಗಳ ಕ್ರಯಗಳನ್ನು ಕ್ರಮಗೊಳಿಸುವಂಥ ಕಾರಣಗಳು ಯಾವವು, ಹಣದ ನಿಜವಾದ ಸ್ವರೂಪವೇನು, ಎಂಬೀ ಸಂಗತಿಗಳು ಚನ್ನಾಗಿ ತಿಳಿಯುವದು ಅತ್ಯವಶ್ಯವಾದದ್ದು. ಆ ಕಾರಣ ಈ ವಿಷಯಗಳನ್ನು ಸಂಪತ್ತಿನ ವಿಭಾಗವನ್ನು ವಿಚಾರಿಸುವ ಪೂರ್ವದಲ್ಲಿ ಹೇಳಿದೆವು. ಅದೇ ಸ್ಥಳದಲ್ಲಿ ಪರದೇಶವ್ಯಾಪಾರ, ಮತ್ತು ಪತ್ತು, ಎಂಬೀ ವಿಷಯಗಳನ್ನು ಹೇಳ ತೊಡಗಿದ್ದರೆ, ನೂತನಾಭ್ಯಾಸಿಗಳಿಗೆ ಈ ವಿಷಯಗಳು ತಿಳಿಯುವದು ಕಷ್ಟವಾಗಿ, ಅವರು ಬೇಸರಗೊಳ್ಳುತ್ತಿದ್ದರು. ಆ ಕಾರಣ ಈ ವಿಷಯಗಳು ಕಟ್ಟಕಡೆಯ ಈ ನಾಲ್ಕನೆ ಭಾಗದಲ್ಲಿ ವಿವರಿಸಲ್ಪಡುವವು.

# ೧ನೇ ಅಧ್ಯಾಯ.

## ಪರದೇಶವ್ಯಾಪಾರ.

ಪರದೇಶವ್ಯಾಪಾರವು ಹಬ್ಬುಗೊಳ್ಳುವದರಿಂದ ಶ್ರಮವಿಭಾಗವು ಚನ್ನಾಗಿ ನಡಿಯುವದು:—ಪರದೇಶವ್ಯಾಪಾರದಿಂದುಂಟಾಗುವ ಅಮಿತ ಲಾಭಕ್ಕೆ ಶ್ರಮವಿಭಾಗವೇ ಕಾರಣವು. ಬೇರೆ ಬೇರೆ ದೇಶದ ನಿವಾಸಿಗಳು ಪರಸ್ಪರರೊಳಗೆ ವ್ಯಾಪಾರವನ್ನು ಅಪ್ರತಿಬಂಧವಾಗಿ ನಡಿಸಿದ್ದುಂಟಾದರೆ, ಪ್ರತಿಯೊಂದು ದೇಶದವರು ಕ್ರಮೇಣ ತಮ್ಮ ದೇಶದಲ್ಲಿ ವಿಶೇಷ ಚನ್ನಾಗಿಯೂ ಸುಲಭವಾಗಿಯೂ ಹುಟ್ಟುವಂಥ ಸರಕುಗಳನ್ನೇ ಹೆಚ್ಚು ಹುಟ್ಟಿಸಿ, ತಮ್ಮ ದೇಶದಲ್ಲಿ ಹುಟ್ಟಿಸುವದಕ್ಕೆ ಅನುಕೂಲತೆಗಳಿಲ್ಲದ ಸರಕುಗಳನ್ನು ಹುಟ್ಟಿಸುವದನ್ನು ಕಡಿಮೆ ಮಾಡುವರು. ಹಾಗೂ ತಮ್ಮಲ್ಲಿ ಸುಲಭವಾಗಿ ಹುಟ್ಟುವಂಥ ಸರಕುಗಳನ್ನು ಪರದೇಶದವರಿಗೆ ಕೊಟ್ಟು, ಅವುಗಳಿಗೆ ಬದಲಾಗಿ ತಮಗೆ ಬೇಕಾದ್ದ ಸರಕುಗಳನ್ನು ಪರದೇಶಗಳಿಂದ ಕೊಳ್ಳುವರು. ಈ ವಿಧದಿಂದ ಸರಕುಗಳನ್ನು ಉತ್ಪನ್ನ ಮಾಡುವ ಖರ್ಚು ಕಡಿಮೆ ಬೀಳುವ ಕಾರಣ, ಶ್ರಮ ಬಂಡವಲಗಳಿಂದ ಉತ್ಪನ್ನವಾಗುವದಕ್ಕೆ ಸಾಧ್ಯವಾಗಿದ್ದಷ್ಟೆಲ್ಲ ಸಂಪತ್ತು ಹುಟ್ಟುವದು. ಈ ವಿಷಯದಲ್ಲಿ ಒಂದು ಉದಾಹರಣವನ್ನು ತಕ್ಕೊಳ್ಳುವ. ಹಿಂದುಸ್ತಾನದಲ್ಲಿ ಗೋಧಿಯು ವಿಪುಲವಾಗಿ ಬೆಳೆಯುವದಕ್ಕೆ ಉತ್ಕೃಷ್ಟವಾದ ಭೂಮಿಯೂ ಹವೆಯೂ ಉಂಟು. ಆದರೆ, ಈ ದೇಶದಲ್ಲಿ ಕಬ್ಬಿಣದ ಕಣಿಗಳು ಬಹಳವಿಲ್ಲ. ಇಂಗ್ಲಂಡದ ಭೂಮಿಯು ಗೋಧಿಯನ್ನು ಬೆಳಿಸಲಿಕ್ಕೆ ಬರುವ ಹಾಗಿಲ್ಲ; ಅಲ್ಲಿಯ ಹವೆಯೂ ಈ ಪೈರಿಗೆ ಅನುಕೂಲವಾದದ್ದಲ್ಲ. ಆದರೆ ಅಲ್ಲಿ ಕಬ್ಬಿಣದ ಕಣಿಗಳು ಸಮೃದ್ಧಿಯಾಗಿವೆ. ಆ ಕಾರಣ ಹಿಂದುಸ್ತಾನದಲ್ಲಿ ಗೋಧಿಯನ್ನೂ, ಇಂಗ್ಲಂಡದಲ್ಲಿ ಕಬ್ಬಿಣದ ಸಾಮಾನುಗಳನ್ನೂ, ಸ್ವಲ್ಪ ಖರ್ಚಿನಿಂದಲೂ ಅಲ್ಪಾಯಾಸದಿಂದಲೂ ಉತ್ಪನ್ನ ಮಾಡ ಬಹುದು. ಆದ್ದರಿಂದ ಹಿಂದುಸ್ತಾನದವರು ತಮ್ಮಲ್ಲಿ ಸುಲಭವಾಗಿ ಹುಟ್ಟುವಂಥ ಗೋಧಿಯನ್ನು ತಮಗೆ ಅವಶ್ಯವಿದ್ದದ್ದಕ್ಕಿಂತಲೂ ಹೆಚ್ಚು ಹುಟ್ಟಿಸುವರು; ಇಂಗ್ಲಂಡದವರು ತಮಗೆ ಅವಶ್ಯವಿದ್ದ ಕಬ್ಬಿಣದ ಸಾಮಾನುಗಳಿಗಿಂತಲೂ ಹೆಚ್ಚು ಸಾಮಾನುಗಳನ್ನು ಮಾಡುವರು. ಅನಂತರದಲ್ಲಿ ಇವೆರಡೂ ದೇಶದವರು ತಮಗೆ ಹೆಚ್ಚಾದ ಸರಕುಗಳನ್ನು ಒಬ್ಬರಿಗೊಬ್ಬರು ಕೊಡುವರು. ಈ ಬಗೆಯ ಪರದೇಶವ್ಯಾಪಾರದಿಂದ ಉಂಟಾಗುವ ಪ್ರಯೋಜನವೇನಂದರೆ, ಅದರಿಂದ ನಮ್ಮಲ್ಲಿ ಎಂದಿಗೂ ಹುಟ್ಟದಂಥ ಪದಾರ್ಥಗಳು ನಮಗೆ ಪರದೇಶ

ಗಳಿಂದ ದೊರಿಯುವವು; ಅಥವಾ ನಮ್ಮಲ್ಲಿ ಹುಟ್ಟಿಸ ಬೇಕಾದರೆ ಬಹಳ ಬಂಡವಲವೂ ಶ್ರಮವೂ ಬೇಕಾಗುವಂಥ ಸರಕುಗಳು, ನಾವು ಕಡಿಮೆ ಶ್ರಮ ಬಂಡವಲಗ್ಳನ್ನು ವೆಚ್ಚ ಮಾಡಿ ಹುಟ್ಟಿಸಿದ ಸರಕುಗಳಿಗೆ ಬದಲಾಗಿ ನಮಗೆ ದೊರಿಯುವವು.

**ಉದ್ಯೋಗಸಂರಕ್ಷಣವು ಸಾರ್ವಜನಿಕ ಹಿತಕ್ಕೆ ಹಾನಿಕರವಾದದ್ದು:—** ಎಷ್ಟೋ ದೇಶಗಳಲ್ಲಿ, ಜನರು ತಮ್ಮ ದೇಶದಲ್ಲಿ ಹುಟ್ಟುವ ಸರಕುಗಳಿಗಿಂತ ಅಗ್ಗವಾದ ಸರಕುಗಳು ಪರದೇಶದಿಂದ ಬಂದರೆ ತಮ್ಮ ದೇಶದ ಉದ್ಯೋಗಗಳಿಗೆ ಹಾನಿಯುಂಟಾಗುವದೆಂದು ತಿಳಿದು, ಪರದೇಶಗಳಿಂದ ಬರುವ ಸರಕುಗಳ ಮೇಲೆ ಕರ ಕೂಡ್ರಿಸುವರು. ಸ್ವದೇಶದ ಉದ್ಯೋಗವನ್ನು ಈ ಬಗೆಯಿಂದ ರಕ್ಷಿಸುವ ಪದ್ಧತಿಗೆ ಉದ್ಯೋಗಸಂರಕ್ಷಣವೆಂಬ ಹೆಸರು. ಉದಾಹರಣಾರ್ಥವಾಗಿ ಇಂಗ್ಲಂಡದಲ್ಲಿ ಚೆಶಾಯರ್ ಎಂಬ ಪರಗಣೆಯಲ್ಲಿಯೂ, ಜರ್ಮನಿ ದೇಶದಲ್ಲಿ ಸಾಲ್ಝಬರ್ಗ್ ಮೊದಲಾದ ಪ್ರಾಂತಗಳಲ್ಲಿಯೂ, ಇದ್ದ ಉಪ್ಪಿನ ಆಗರಗಳಲ್ಲಿ ಉಪ್ಪು ಹುಟ್ಟುವದಕ್ಕೆ ಬಹಳ ಅನುಕೂಲತೆಗಳುಂಟು. ಫ್ರಾನ್ಸ ದೇಶದಲ್ಲಿ ಇಂಥ ಅನುಕೂಲತೆಗಳಿಲ್ಲ. ಆದರೂ ಫ್ರಾನ್ಸದವರು ಹೊರಗಿಂದ ಬರುವ ಉಪ್ಪಿನ ಮೇಲೆ ಭಾರಿಯಾದ ಕಪ್ಪಗಳನ್ನು ಕೂಡ್ರಿಸಿ, ಅದನ್ನು ದೇಶದೊಳಗೆ ಬರಗೊಡುವದಿಲ್ಲ. ಫ್ರಾನ್ಸದವರು ಈ ಕಪ್ಪಗಳನ್ನು ಕೂಡ್ರಿಸದೆ ಇದ್ದರೆ, ಇಂಗ್ಲಂಡ ಹಾಗೂ ಜರ್ಮನಿ ದೇಶಗಳು ಫ್ರಾನ್ಸ ದೇಶದವರಿಗೆ ಬೇಕಾಗುವ ಎಲ್ಲ ಉಪ್ಪು ಪೂರೈಸಬಹುದು. ಇಂಗ್ಲಂಡದಲ್ಲಿ ನಾರ್ಥವಿಚ್ ಎಂಬಲ್ಲಿಯೂ, ಜರ್ಮನಿಯಲ್ಲಿ ಡ್ರಾಯಿವಿಚ್ ಎಂಬಲ್ಲಿಯೂ, ಉಪ್ಪು ಅತ್ಯಲ್ಪ ಶ್ರಮದಿಂದ ಹುಟ್ಟುವ ಕಾರಣ, ಆ ಸ್ಥಳಗ್ಳಲ್ಲಿ ಅದು ಸ್ವಾಭಾವಿಕವಾಗಿ ಪುಗಸಾಟಿ ದೊರಿದಂತೆ ದೊರಿಯುವದು. ಫ್ರಾನ್ಸದಲ್ಲಿ ಬಹು ಶ್ರಮದಿಂದ ಉತ್ಪನ್ನ ಮಾಡಿದ ಉಪ್ಪಿಗಿಂತಲೂ ಈ ಉಪ್ಪು ಉತ್ಕೃಷ್ಟವಾಗಿರುವದಲ್ಲದೆ, ಇದನ್ನು ಅದಕ್ಕೂ ಕಡಿಮೆ ಧಾರಣೆಗೆ ಮಾರ ಬಹುದು. ಸಾರಾಂಶವೇನಂದರೆ, ಫ್ರಾನ್ಸದಲ್ಲಿ ನಿರಾತಂಕ ವ್ಯಾಪಾರದ ಪದ್ಧತಿಯು ಅನುಸರಿಸಲ್ಪಟ್ಟಿದ್ದರೆ, ಫ್ರಾನ್ಸದ ಉಪ್ಪಿಗಿಂತಲೂ ಇಂಗ್ಲಂಡದ ಉಪ್ಪು ಫ್ರಾನ್ಸದಲ್ಲಿ ಅಗ್ಗವಾಗಿ ಶಿಕ್ಕುತ್ತಿತ್ತು. ಆದರೆ ಫ್ರಾನ್ಸ ದೇಶಕ್ಕೆ ಹೊರಗಿಂದ ಬರುವ ಉಪ್ಪಿನ ಮೇಲೆ ಕಪ್ಪ ಕೂಡ್ರಿಸ ಬೇಕೆನ್ನುವವರು ಅನ್ನುವದೇನಂದರೆ, "ಉಪ್ಪು ಉತ್ಪನ್ನ ಮಾಡುವ ಉದ್ಯೋಗದಲ್ಲಿ ನಮ್ಮ ದೇಶದೊಳಗೆ ಎಷ್ಟೋ ಜನರು ದುಡಿದು ಜೀವಿಸುವರು. ಆ ಕಾರಣ ಹೊರಗಿಂದ ಬರುವ ಉಪ್ಪಿನ ಮೇಲೆ ಕೂಡ್ರಿಸಿದ ಕಪ್ಪವನ್ನು ಎಷ್ಟುಮಾತ್ರವೂ ತೆಗೆಯ ಕೂಡದು. ಇಂಗ್ಲಂಡದಿಂದ ಉಪ್ಪನ್ನು ಕಪ್ಪವಿಲ್ಲದೆ ಬರಗೊ

ಟ್ಟಿದ್ದಾದರೆ, ನಮ್ಮ ದೇಶದೊಳಗಿನ ಒಂದು ಉದ್ಯೋಗವು ನಿಂತು ಹೋಗುವದು. ಆ ಕಾರಣ, ಇಂಗ್ಲಂಡದಿಂದ ಬರುವ ಉಪ್ಪು ಈ ದೇಶದ ಉಪ್ಪಿಗಿಂತಲೂ ತುಟ್ಟಿ ಬೀಳುವ ಹಾಗೆ ಇಂಗ್ಲಂಡದ ಉಪ್ಪಿನ ಮೇಲೆ ಭಾರಿಯಾದ ಕಪ್ಪವನ್ನು ಕೂಡ್ರಿಸುವದೇ ಯೋಗ್ಯವು. ಇದರಿಂದ ಇಂಗ್ಲಂಡದಿಂದ ಉಪ್ಪು ಬರುವದು ನಿಂತು, ಸ್ವದೇಶದೊಳಗಿನ ಒಂದು ಉದ್ಯೋಗಕ್ಕೆ ಉತ್ತೇಜನವಾಗುವದು." ಈ ಮೇರಿಗೆ ಫ್ರಾನ್ಸದಲ್ಲಿ ಆಮದವಾಗುವ ಉಪ್ಪಿನ ಮೇಲೆ ಭಾರಿಯಾದ ಕಪ್ಪವನ್ನು ಕೂಡ್ರಿಸಿರುವದರಿಂದ, ಹೊರಗಿಂದ ಉಪ್ಪು ಬರುವದೇ ಕಟ್ಟಾಗಿದೆ. ಈ ಬಗೆಯ ಕಪ್ಪದಿಂದ ಫ್ರಾನ್ಸ ದೇಶದ ಉಪ್ಪಿನ ಉದ್ಯೋಗವು "ಸಂರಕ್ಷಿಸಲ್ಪಡುತ್ತದೆಂ" ಬುವದು ಸುಳ್ಳಲ್ಲ. ಆದರೂ ಇದರ ಮೇಲಿಂದ ಸಿದ್ಧವಾಗುವದೇನಂದರೆ, ಫ್ರಾನ್ಸ ದೊಳಗಿನ ಕೆಲ ಬಂಡವಲ ಶ್ರಮಗಳನ್ನು ಬೇಕಾದ ಉದ್ಯೋಗದಲ್ಲಿ ನಿಯೋಜಿ ಸಲಿಕ್ಕೆ ಬರುವ ಹಾಗಿದ್ದು, ಅವುಗಳನ್ನು ಕಡಿಮೆ ಉತ್ಪಾದಕವಾದ ಉದ್ಯೋಗ ದಲ್ಲಿ ಹಾಕುವದಕ್ಕೆ ಈ ಸಂರಕ್ಷಣ ಪದ್ಧತಿಯಿಂದ ಉತ್ತೇಜನ ಉಂಟಾಗುತ್ತದೆ. ಈ ಪ್ರಸಕ್ತಿಯಲ್ಲಿ ಸಂರಕ್ಷಣ ಪ್ರತಿವಾದಕರು ಮರೆಯುವ ಸಂಗತಿಯು ಯಾವದಂ ದರೆ, ಸಂರಕ್ಷಕ ಕರವನ್ನು ತೆಗೆದದ್ದರಿಂದ ಒಂದು ಅನುತ್ಪಾದಕ ಉದ್ಯೋಗವು ನಿಂತಾಗ್ಯೂ, ಅದರೊಳಗಿನ ಶ್ರಮ ಬಂಡವಲಗಳು ಕೆಲಸವಿಲ್ಲದೆ ಹಾಗೇ ಬೀಳ ಲಿಕ್ಕಿಲ್ಲ. ಅವು ಸಂರಕ್ಷಕ ಕರಗಳ ಸಹಾಯವಿಲ್ಲದೆ ಚನ್ನಾಗಿ ನಡಿಯುವಂಥ ಕೆಲ ಉತ್ಪಾದಕ ಉದ್ಯೋಗಗಳಲ್ಲಿ ಶೇರುವವು. ಫ್ರಾನ್ಸದ ಉಪ್ಪಿನ ಕಾರಖಾನೆ ಯವರಿಗಿಂತಲೂ ಇಂಗ್ಲಂಡದ ಕಾರಖಾನೆಯವರು ತಮ್ಮ ಉಪ್ಪು ಅಗ್ಗ ಮಾರು ವದರಿಂದ ಫ್ರಾನ್ಸದ ಕಾರಖಾನೆಯವರಿಗೆ ಕೆಲವು ಕಾಲ ಲುಕಸಾನು ತಗಲುವ ದೆಂಬುವದು ನಿಜ. ಆದರೆ ಅನಂತರ ಫ್ರಾನ್ಸದ ಉಪ್ಪಿನ ಕಾರಖಾನೆಯವರು ತಮ್ಮ ಶ್ರಮ ಬಂಡವಲಗಳನ್ನು ಕ್ರಮೇಣ ಅನುತ್ಪಾದಕವಾದ ಉಪ್ಪಿನ ಉದ್ಯೋ ಗದೊಳಗಿಂದ ತೆಗೆದು, ತಮ್ಮ ದೇಶದಲ್ಲಿ ಬಹಳ ಅನುಕೂಲತೆಗಳುಳ್ಳಂಥ ಬೇರೆ ಉದ್ಯೋಗದಲ್ಲಿ ಹಾಕುವರು. ಈ ಮೇರೆಗೆ ಕೊನೆಗೆ ಯತ್ಕಿಂಚಿತವೂ ಹಾನಿ ಯಾಗದೆ, ಬಂಡವಲ ಶ್ರಮಗಳು ಅನುತ್ಪಾದಕ ಉದ್ಯೋಗದೊಳಗಿಂದ ಹೊರಟು ವಿಶೇಷ ಉತ್ಪಾದಕವಾದ ಉದ್ಯೋಗದಲ್ಲಿ ಶೇರುವವು. ಹೀಗಾಗುವದರಿಂದ ದೇಶದೊಳಗೆ ಒಟ್ಟಿಗೆ ಹೆಚ್ಚು ಸಂಪತ್ತು ಹುಟ್ಟುವ ಕಾರಣ, ಅದರಿಂದ ರಾಷ್ಟ್ರೀಯ ಬಂಡವಲವು ಅಭಿವೃದ್ಧಿಯಾಗುವದು.

ಬಂಡವಲ ಶ್ರಮಗಳು ಒಂದು ಬಗೆಯ ಉದ್ಯೋಗದೊಳಗಿಂದ ಹೊರಟು, ಮತ್ತೊಂದು ಉದ್ಯೋಗಕ್ಕೆ ಶೇರುವದರ ದೃಷ್ಟಾಂತವನ್ನು ಸಾಂಪ್ರತಕ್ಕೆ ಇಂಗ್ಲಂ

ಡದಲ್ಲಿ ಬೇಸಾಯುದ ಉದ್ಯೋಗದಲ್ಲಿ ಕಾಣ ಬಹುದು. ಇತ್ತಲಾಗಿ ಅಮೇರಿಕಾ ದೇಶದಿಂದ ಇಂಗ್ಲಂಡಕ್ಕೆ ಗೋಧಿ ಮೊದಲಾದ ಉಪಜೀವನದ ಪದಾರ್ಥಗಳು ವಿಪುಲವಾಗಿ ಬರುತ್ತಿದ್ದು, ಅವು ಇಂಗ್ಲಂಡದಲ್ಲಿ ಉತ್ಪನ್ನವಾಗುವ ಪದಾರ್ಥಗಳಿಗಿಂತಲೂ ಅಗ್ಗವಾಗಿ ದೊರಿಯುವವು. ಆದರೆ ಇವುಗಳ ಮೇಲೆ ಸಂರಕ್ಷಕ ಕರಗಳನ್ನು ಕೂಡ್ರಿಸ ಬೇಕೆಂದು ಒದರುವ ಒಕ್ಕಲಿಗರು ಇಂಗ್ಲಂಡದಲ್ಲಿ ಬಹುತರ ಇಲ್ಲವೆಂದರೂ ಅನ್ನ ಬಹುದು. ಇಂಗ್ಲಿಷ ಒಕ್ಕಲಿಗರು ತಾವು ಯಾವ ಪೈರುಗಳನ್ನು ಬೆಳಿಸಿದರೆ ಅಮೇರಿಕೆಯ ಒಕ್ಕಲಿಗರ ಕಾಟ ಸಾಗಲಿಕ್ಕಿಲ್ಲೆಂಬ ಯೋಚನೆಯಲ್ಲಿ ತೊಡಗಿರುವರೇ ಹೊರ್ತು, ಸಂರಕ್ಷಕ ಕರಗಳಿಗಾಗಿ ಗದ್ದಲ ಎಬ್ಬಿಸುವದಿಲ್ಲ. ಹಾಗೂ ಸ್ವಲ್ಪ ವರ್ಷಗಳಲ್ಲಿ ಇಂಗ್ಲಂಡದೊಳಗಿನ ಈಗಿನ ಎಷ್ಟೋ ಹೊಲಗಳು ಕಾಯಿಪಲ್ಯ, ಹಣ್ಣುಹಂಪಲ, ಹೂವುಗಳು ಮೊದಲಾದವುಗಳನ್ನು ಬೆಳಿಸುವ ತೋಟಗಳಾಗುವವೆಂದು ತೋರುತ್ತದೆ. ಯಾಕಂದರೆ, ಈ ಪದಾರ್ಥಗಳು ಗೋಧಿ ಮೊದಲಾದವುಗಳಿಗಿಂತಲೂ ಬೇಗನೆ ಕೆಡುವ ಕಾರಣ ಇವುಗಳನ್ನು ಅಮೇರಿಕೆಯಿಂದ ಬಹಳವಾಗಿ ತರುವದಕ್ಕೆ ಬರುವದಿಲ್ಲ. ಈ ಬಗೆಯ ರೂಪಾಂತರ ಆಗ ಹತ್ತಿರುವದನ್ನು ಈಗಲೇ ಕಾಣ ಬಹುದು. ಇದಲ್ಲದೆ ಈ ಸ್ಥಳದಲ್ಲಿ ಲಕ್ಷ್ಯದಲ್ಲಿಡ ತಕ್ಕ ಮತ್ತೊಂದು ಸಂಗತಿ ಏನಂದರೆ, ದೇಶದೊಳಗಿನ ಜನರಿಗೆ ಉಪಜೀವನದ ಪದಾರ್ಥಗಳಿಗಾಗಿ ಕಡಿಮೆ ವೆಚ್ಚ ಮಾಡ ಬೇಕಾದ ಹಾಗೆ, ಅವರಿಗೆ ಹಣ್ಣುಹಂಪಲ, ಹೂವುಗಳು ಮೊದಲಾದ ಸುಖೋಪಭೋಗದ ಪದಾರ್ಥಗಳನ್ನು ಕೊಳ್ಳುವದಕ್ಕೆ ಹೆಚ್ಚು ಹಣ ಉಳಿಯುವದು.

**ಸಂರಕ್ಷಕ ಕರಗಳ ಖರ್ಚು ಸರಕುಗಳನ್ನು ಉಪಯೋಗಿಸುವವರ ತಲೆಯ ಮೇಲೆ ಬೀಳುವದು:—** ಈ ವಿಚಾರಗಳ ಮೇಲಿಂದ, ಸಂರಕ್ಷಿಸಲ್ಪಟ್ಟ ಉದ್ಯೋಗಗಳಲ್ಲಿ ಹುಟ್ಟುವ ಸರಕುಗಳನ್ನು ಕೊಳ್ಳುವವರ ಮೇಲೆ ಉಂಟಾಗುವ ಪರಿಣಾಮದ ವಿಚಾರವು ಮನಸಿನಲ್ಲಿ ಬರುತ್ತದೆ. ಉದ್ಯೋಗಸಂರಕ್ಷಣ ಪ್ರತಿಪಾದಕರ ಮನಸಿನಲ್ಲಿ ಸರಕುಗಳನ್ನು ಉಪಯೋಗಿಸುವವರ ವಿಚಾರವು ಬರುವದಿಲ್ಲ. ಅವರು ಯಾವಾಗಲೂ ಸರಕುಗಳನ್ನು ಉತ್ಪನ್ನ ಮಾಡುವವರನ್ನೇ ಹ್ಯಾಗಾದರೂ ಸಂರಕ್ಷಿಸ ಬೇಕೆಂಬ ಯೋಚನೆಯಲ್ಲಿರುವರೇ ಹೊರ್ತು, ಸರಕುಗಳನ್ನು ಉಪಯೋಗಿಸುವವರ ಹಿತವನ್ನು ಎಷ್ಟು ಮಾತ್ರವೂ ಲಕ್ಷಿಸುವದಿಲ್ಲ. ಈ ಸ್ಥಳದಲ್ಲಿ ಹೇಳ ತಕ್ಕ ಮತ್ತೊಂದು ಸಂಗತಿ ಏನಂದರೆ, ಸಂರಕ್ಷಿಸಲ್ಪಟ್ಟ ಸರಕು ಜನರ ಉಪಜೀವನದ ಪದಾರ್ಥವಾಗಿದ್ದರಂತೂ, ಸಂರಕ್ಷಕ ಕರದಿಂದ ಸ್ವಲ್ಪ ಜನರ ಹಿತಕ್ಕಾಗಿ ಬಹು ಜನರಿಗೆ ಹಾನಿಯನ್ನುಂಟು ಮಾಡಿದ ಹಾಗಾಗು

ವದು. ಈ ವಿಷಯವನ್ನು ಸ್ಪಷ್ಟೀಕರಿಸುವದಕ್ಕಾಗಿ ಉಪ್ಪಿನ ಮೇಲಿನ ಕರದಿಂದ ಯಾವತ್ತು ಫ್ರೆಂಚ ಜನ ಸಮೂಹದ ಮೇಲೆ ಆಗುವ ಪರಿಣಾಮವನ್ನು ವಿಚಾರಿಸುವ. ಫ್ರೆಂಚ ಜನರಿಗೆ ಉತ್ಕೃಷ್ಟ ಉಪ್ಪಿಗೆ ಬದಲಾಗಿ ಕೆಟ್ಟ ಉಪ್ಪಿನಿಂದ ತಮ್ಮ ನಿರ್ವಾಹ ಸಾಗಿಸ ಬೇಕಾಗುವದು ಮೊದಲನೆ ಹಾನಿಯು. ಇದು ಇಷ್ಟು ರೂಪಾಯಿಗಳ ಹಾನಿ, ಎಂದು ಲೆಕ್ಕ ಮಾಡಿ ಹೇಳುವದಕ್ಕೆ ಬರುವದಿಲ್ಲ. ಆದರೂ ಕಡಿಮೆ ತರದ ಉಪ್ಪು ಕಣ್ಣಿಗೆ ಅಸಹ್ಯವಾಗಿ ಕಾಣಿಸುವದಲ್ಲದೆ, ಬೇಸಾಯದಲ್ಲಿಯೂ, ಬೇರೆ ಕಸಬುಗಳಲ್ಲಿಯೂ ಕಡಿಮೆ ತರದ ಉಪ್ಪು ಉಪಯೋಗಿಸುವದರಿಂದ ಬಹಳ ಲುಕಸಾನವಾಗುವದೆಂಬುವಲ್ಲಿ ಏನು ಸಂದೇಹವಿಲ್ಲ. ಆದರೆ ಈ ಬಗೆಯಾಗಿ ಕಡಿಮೆ ತರದ ಉಪ್ಪು ಉಪಯೋಗಿಸುವದರಿಂದ ಉಂಟಾಗುವ ಲುಕಸಾನು ಲೆಕ್ಕದಿಂದ ತಿಳಿಯಲಿಕ್ಕೆ ಬರದಿದ್ದರೂ, ಉಪ್ಪಿನ ಧಾರಣೆ ಏರಿದ್ದರಿಂದ ಉಂಟಾಗುವ ಲುಕಸಾನವನ್ನು ಲೆಕ್ಕದಿಂದ ಸರಿಯಾಗಿ ತಿಳುಕೊಳ್ಳ ಬಹುದು. ಈ ವ್ಯಾಪಾರದ ವಿಷಯದಲ್ಲಿ ಚನ್ನಾಗಿ ತಿಳಿದವರು ಸಂರಕ್ಷಕ ಕರದ ಮೂಲಕವಾಗಿ ಫ್ರಾನ್ಸ ದೇಶದಲ್ಲಿ ಉಪ್ಪಿನ ಧಾರಣೆಯು ಪೌಂಡಿಗೆ ಅರ್ಧಪೆನ್ಸು ಏರಿದೆಂದು ಹೇಳುತ್ತಾರೆ. ಫ್ರಾನ್ಸದಲ್ಲಿ ವರ್ಷಕ್ಕೆ ೩೫,೦೦,೦೦,೦೦೦ ಪೌಂಡು ಉಪ್ಪು ಸಂಸಾರದ ನಿತ್ಯದ ಕೆಲಸಗಳಲ್ಲಿ ಉಪಯೋಗಿಸಲ್ಪಡುವದು. ಆದ್ದರಿಂದ, ಉಪ್ಪಿನ ಧಾರಣೆ ಏರಿದ್ದರಿಂದ, ಫ್ರೆಂಚ ಜನರಿಗೆ ವರ್ಷಕ್ಕೆ ೭,೫೦,೦೦೦ ಪೌಂಡು ದಂಡ ಬೀಳುತ್ತದೆ. ಹಾಗೂ ಈ ದಂಡದಿಂದ ಯಾರಿಗೂ ಅರ್ಧ ಪೆನ್ನಿನಷ್ಟು ಸಹ ಲಾಭವಾಗುವದಿಲ್ಲ. ಈ ೭,೫೦,೦೦೦ ಪೌಂಡುಗಳು ಉಪ್ಪನ್ನು ಹುಟ್ಟಿಸುವದಕ್ಕೆ ಇಂಗ್ಲಂಡದಲ್ಲಿದ್ದ ಅನುಕೂಲತೆಗಳ ಮಾನದಿಂದ ಫ್ರಾನ್ಸದಲ್ಲಿದ್ದ ಸ್ವಾಭಾವಿಕ ಅನಾನುಕೂಲತೆಗಳ ಪರಿಮಾಣವನ್ನು ತೋರಿಸುತ್ತವೆ. ಈ ವಿಷಯದಲ್ಲಿ ಒಂದು ಒಳ್ಳೇ ದೃಷ್ಟಾಂತವನ್ನು ಕೊಡ ಬಹುದು. ಒಬ್ಬ ಗೃಹಸ್ಥನ ಮನೇ ಬಾಗಿಲ ಹತ್ತರ ಒಂದು ಉತ್ಕೃಷ್ಟ ನೀರಿನ ಝರಿ ಇತ್ತು. ಆದರೆ ಇದು ಅವನ ಸ್ವಂತ ಝರಿಯಲ್ಲ, ನೆರೆಹೊರೆಯವನ ತೋಟದಲ್ಲಿತ್ತು. ಆ ಝರಿಯ ಯಜಮಾನನು, ವರ್ಷಕ್ಕೆ ನಾಲ್ಕು ರೂಪಾಯಿ ತಕ್ಕೊಂಡು ಆ ಝರಿಯನ್ನು ಬೇಕಾದ ಹಾಗೆ ಉಪಯೋಗಿಸಗೊಡುವದಕ್ಕೆ ಸಿದ್ಧನಾಗಿದ್ದನು. ಆದರೆ ಮೇಲಿನ ಗೃಹಸ್ಥನದೊಂದು ಸ್ವಂತ ಝರಿಯು ಅಲ್ಲಿಂದ ಒಂದು ಮೈಲು ದೂರ ಇತ್ತು. ಅದರ ನೀರಾದರೂ ಈ ಸಮೀಪದ ಝರಿಯ ನೀರಷ್ಟು ಚಲೋದಿದ್ದಿಲ್ಲ. ಆದರೂ ತನ್ನ ಝರಿಯ ನೀರು ಬಿಟ್ಟು ಎರಡನೆಯವರ ಝರಿಯ ನೀರು ಯಾಕೆ ಕೊಳ್ಳಬೇಕೆಂಬದೊಂದು ಅವನಿಗೆ ಅಭಿಮಾನವಿತ್ತು. ಆ ಕಾರಣ ಅವನು ತಿಂಗಳಿಗೊಂದು

ರೂಪಾಯಿ ಸಂಬಳ ಗೊತ್ತು ಮಾಡಿ, ತನಗೆ ದಿನ ಒಂದು ತಂಬಿಗೆ ನೀರು ತನ್ನ ಝರಿಯಿಂದ ತಂದು ಕೊಡುವದಕ್ಕಾಗಿ ಒಬ್ಬ ಹುಡುಗನನ್ನಿಟ್ಟನು. ಇದರಿಂದ ಆ ಗೃಹಸ್ಥನು ತನಗೆ ಮೂರು ಬಗೆಯಾಗಿ ದಂಡಾ ಕಟ್ಟಿಸಿಕೊಂಡಂತಾಯಿತು. ಅವನಿಗೆ ಬೇಕಾದಷ್ಟು ನೀರು ಶಿಕ್ಕದೆ ಹೋಯಿತೆಂಬುವದು ಒಂದು; ಅವನಿಗೆ ವರ್ಷಕ್ಕೆ ಎಂಟು ರೂಪಾಯಿ ಹೆಚ್ಚು ಖರ್ಚು ಮಾಡ ಬೇಕಾದದ್ದು ಎರಡನೇದು; ಎಂಟು ರೂಪಾಯಿ ಹೆಚ್ಚು ಕೊಟ್ಟು, ಮೇಲೆ ಕೆಟ್ಟ ನೀರು ಕುಡಿದದ್ದು ಮೂರ ನೇದು. ಮತ್ತು ಇವನಿಗಾದ ದಂಡದಿಂದ ಬೇರೆ ಯಾರಿಗಾದರೂ ಒಂದು ದಮ್ಮಡಿಯ ಲಾಭವೂ ಆಗಲಿಲ್ಲ; ತಿಂಗಳಿಗೊಂದು ರೂಪಾಯಿ ತಕ್ಕೊಂಡ ಹುಡು ಗನಿಗೆ ಸಹ ಇದರಿಂದ ಲಾಭವಾಗಲಿಲ್ಲ. ಯಾಕಂದರೆ, ಅವನಿಗೆ ತಿಂಗಳಿಗೊಂದು ರೂಪಾಯಿ ಈ ಬಗೆಯಿಂದ ದೊರಿಯದಿದ್ದರೆ ಬೇರೆ ಸಾವಿರಾರು ಬಗೆಗಳಿಂದ ದೊರಿಯುವ ಹಾಗಿತ್ತು. ಅವನಿಗೆ ಕೊಟ್ಟ ರೂಪಾಯಿಗಳನ್ನು ಅವನಿಗೆ ದಾನ ವಾಗಿ ಕೊಡಲಿಲ್ಲ, ಅವನ ದುಡತಕ್ಕಾಗಿ ಕೊಟ್ಟದ್ದಾಯಿತು. ಅದರಿಂದ ಅವನಿ ಗೇನೂ ಉಪಕಾರ ಮಾಡಿದ ಹಾಗಾಗಲಿಲ್ಲ.

ಉದ್ಯೋಗಸಂರಕ್ಷಕ ಕರಗಳಿಂದ ಸಂಬಳದ ಮೇಲೆ ಉಂಟಾಗುವ ಪರಿಣಾಮವು.— ಸಂರಕ್ಷಕ ಕರಗಳಿಂದ ಸಂರಕ್ಷಿಸಲ್ಪಟ್ಟ ಸರಕುಗಳ ಧಾರಣೆಗಳ ಮೇಲೆ ಉಂಟಾಗುವ ಪರಿಣಾಮವನ್ನು ಕುರಿತು ಮೇಲೆ ಹೇಳಿದೆವು. ಸಂರಕ್ಷಕ ಕರಗಳನ್ನು ಕೂಡ್ರಿಸಿದ ದೇಶಗಳಲ್ಲಿ ಬಹುತರವಾಗಿ ಸಂರಕ್ಷಿಸಲ್ಪಟ್ಟ ಸರಕುಗಳಲ್ಲಿ ಎಷ್ಟೋ ಸರಕುಗಳು ಜನರ ಉದರನಿರ್ವಾಹಕ್ಕೆ ಅವಶ್ಯವಾದವುಗಳಾಗಿರುವವು. ಈ ಪಕ್ಷದಲ್ಲಿ ಉದ್ಯೋಗ ಸಂರಕ್ಷಣದಿಂದ ಕೂಲಿಕಾರರ ಸಂಬಳ ಕಡಿಮೆಯಾಗು ವದು. ಯಾಕಂದರೆ, ಅವರಿಗೆ ದೊರಿಯುತ್ತಿದ್ದ ಸಂಬಳದ ಹಣವು ಮೊದಲಿನಷ್ಟೇ ದೊರಿಯುತ್ತದೆಂದು ಕಲ್ಪಿಸಿದರೂ, ಅವರು ತಮ್ಮ ಹಣ ಕೊಟ್ಟು ಕೊಳ್ಳುವ ಉಪ ಜೀವನದ ಪದಾರ್ಥಗಳು ಕಡಿಮೆ ಬರುವದರಿಂದ ಅವರ ಶ್ರಮದ ನಿಜವಾದ ಪ್ರತಿ ಫಲವು ಕಡಿಮೆಯಾಗುವದು. ಇದಕ್ಕೆ ವಿಪರೀತವಾಗಿ, ಸಂರಕ್ಷಕ ಕರಗಳಿಲ್ಲದೆ ಬೇರೆ ಬೇರೆ ದೇಶಗಳ ನಡುವೆ ವ್ಯಾಪಾರವು ನಿರಾತಂಕವಾಗಿ ನಡಿದದ್ದಾದರೆ ಧಾರ ಣೆಗಳು ಇಳಿಯುವವು. ಹಾಗೂ ಇದರಿಂದ ಶ್ರಮಕರ್ತರ ನಿಜವಾದ ಪ್ರತಿಫಲವು ಹೆಚ್ಚುವ ಕಾರಣ, ಸಾವಿರಾರು ಜನರಿಗೆ ಪ್ರತ್ಯಕ್ಷ ಕಲ್ಯಾಣವಾಗುವದು. ಯಾವ ದಾದರೊಂದು ಉಪಜೀವನದ ಪದಾರ್ಥವು ಅಗ್ಗವಾದರೆ, ಎರಡರಲ್ಲಿ ಒಂದು ಪರಿ ಣಾಮವು ಆಗಲಿಕ್ಕೇ ಬೇಕು: ಉತ್ಪನ್ನ ಮಾಡುವ ಖರ್ಚು ಕಡಿಮೆ ಬೀಳುವದು, ಇಲ್ಲವೆ ಶ್ರಮಕರ್ತರ ಶ್ರಮದ ನಿಜವಾದ ಪ್ರತಿಫಲ ಹೆಚ್ಚುವದು. ಯಾವದೊಂದು

ಉಪಜೀವನದ ಪದಾರ್ಥದ ಧಾರಣೆ ಇಳಿದನಂತರ ಕೂಲಿಕಾರನ ಸಂಬಳ ಮೊದಲಿನಷ್ಟೇ ಉಳಿದರೆ, ಅವನ ನಿಜವಾದ ಪ್ರಾಪ್ತಿಯು ಹೆಚ್ಚುವದು. ಯಾಕಂದರೆ, ಅವನಿಗೆ ಮೊದಲಿನಷ್ಟೇ ಸಂಬಳಕ್ಕೆ ಮೊದಲಿನದಕ್ಕಿಂತಲೂ ಉಪಜೀವನದ ಪದಾರ್ಥಗಳು ಹೆಚ್ಚು ಬರುವವು. ಎರಡನೆ ಪಕ್ಷದಲ್ಲಿ ಉಪಜೀವನದ ಪದಾರ್ಥವು ಅಗ್ಗವಾದ ಪ್ರಮಾಣದಿಂದ ಸಂಬಳ ಇಳಿದಾಗ್ಯಾದರೂ, ಶ್ರಮಕರ್ತನ ನಿಜವಾದ ಪ್ರಾಪ್ತಿಯು ಮೊದಲಿನಷ್ಟೇ ಉಳಿಯುವದು. ಆದರೆ ಉತ್ಪನ್ನ ಮಾಡುವ ಖರ್ಚು ಕಡಿಮೆಯಾಗುವದು. ಇದರ ಮೇಲಿಂದ ಸಿದ್ಧವಾಗುವದೇನಂದರೆ, ಸರಕುಗಳನ್ನು ಉತ್ಪನ್ನ ಮಾಡುವವರನ್ನು ಪರದೇಶಗಳ ಮೇಲಾಟದಿಂದ ರಕ್ಷಿಸುವ ಯತ್ನದಿಂದ ಅವರಿಗಾಗುವ ಟೊಳ್ಳು ಹಿತಕ್ಕಿಂತಲೂ, ಯಾವದೊಂದು ಉಪಜೀವನದ ಪದಾರ್ಥದ ಧಾರಣೆ ಇಳಿಯುವದರಿಂದ ಉಂಟಾಗುವ ಹಿತವು ಬಹಳ ವ್ಯಾಪಕವಾಗಿರುವದು. ಇದಲ್ಲದೆ ಯಾವದೊಂದು ಸರಕಿನ ಧಾರಣೆ ಕಡಿಮೆಯಾಗಲಾಗಿ, ಅದರಿಂದ ಬಂಡವಲದ ಸಂಚಯವೂ ಅಭಿವೃದ್ಧಿ ಹೊಂದುವದು. ಯಾಕಂದರೆ ಪದಾರ್ಥಗಳನ್ನು ಉಪಯೋಗಿಸುವವರ ಖರ್ಚು ಕಡಿಮೆಯಾಗುವದರಿಂದ ಅವರಿಗೆ ಹೆಚ್ಚು ಸಂಗ್ರಹ ಮಾಡುವದಕ್ಕೆ ಅನುಕೂಲವಾಗುವದು; ಅದರಿಂದ ಹೆಚ್ಚು ಸಂಪತ್ತು ಬಂಡವಲವಾಗಿ ಉಪಯೋಗಿಸಲ್ಪಡುವದು. ಈ ಮೇರೆಗೆ, ಯಾವದೊಂದು ಸರಕು ಹುಟ್ಟಿಸುವವರನ್ನು ರಕ್ಷಿಸ ಬೇಕೆಂದು ಯತ್ನ ಮಾಡುವವರು ತಮ್ಮ ಯತ್ನದಿಂದ ಇಡೀ ಜನಸಮೂಹಕ್ಕೆ ಬಹಳ ಹಾನಿಯನ್ನುಂಟು ಮಾಡುತ್ತಾರೆಂಬುವದು ಮೊದಲಿಗೆ ಲಕ್ಷ್ಯದಲ್ಲಿ ಬರದಿದ್ದರೂ ವಿಚಾರದ ಕೊನೆಯಲ್ಲಿ ಚನ್ನಾಗಿ ಸ್ಪಷ್ಟವಾಗುವದು.

ಸಂರಕ್ಷಣದಿಂದ ಉಂಟಾಗುವ ದುಷ್ಪರಿಣಾಮಗಳು ಒಮ್ಮೊಮ್ಮೆ ಸಂರಕ್ಷಣ ಪ್ರತಿಪಾದಕರ ಕನಸಿನಲ್ಲಿ ಸಹ ಬಂದಿರುವದಿಲ್ಲ. ಉದಾಹರಣಾರ್ಥವಾಗಿ, ಇಂಥ ಸಂರಕ್ಷಣದಿಂದೆ ಅನೇಕ ಸಾರಿ ಹೊಸ ಉದ್ಯೋಗಗಳನ್ನು ಸ್ಥಾಪಿಸುವದಕ್ಕೆ ಅಡ್ಡಿಯಾಗುತ್ತದೆ. ಸನ್ ೧೮೮೩ನೇ ವರ್ಷದ ಕ್ರಿಸಮಸ್ ಹಬ್ಬದಲ್ಲಿ ಲಂಡನದ ವರ್ತಮಾನಪತ್ರಗಳಲ್ಲಿ ಬರೆದದ್ದೇನಂದರೆ:—"ಇಂಗ್ಲಂಡದಲ್ಲಿದ್ದ 'ಇಲ್‌ಸ್ಟ್ರೇಟೆಡ್ ಲಂಡನ್ ನ್ಯೂಜ್' ಹಾಗೂ 'ಗ್ರ್ಯಾಫಿಕ್' ಎಂಬ ಸಚಿತ್ರ ವರ್ತಮಾನಪತ್ರಗಳ ಮಾದರಿಯ ವರ್ತಮಾನಪತ್ರದ ಒಂದು ಸಂಚಿಕೆಯು ಈ ಹಬ್ಬದಲ್ಲಿ ಪ್ಯಾರಿಸ್ ಪಟ್ಟಣದ ಫಿಗ್ಯಾರೋ ಎಂಬ ವರ್ತಮಾನಪತ್ರದಲ್ಲಿ ಮೊದಲಿಗೇ ಹೊರಡಿಸಲ್ಪಟ್ಟಿದೆ. ಈ ಸಂಚಿಕೆಯನ್ನು ಮುದ್ರಿಸುವ ಯಂತ್ರಗಳನ್ನು ಇಂಗ್ಲಂಡದಲ್ಲಿ ಸ್ಥಾಪಿಸಿರುವ ಕಾರಣ, ಪ್ಯಾರಿಸ್ ಪಟ್ಟಣದ ಬೇರೆ ವರ್ತಮಾನಪತ್ರಗಳಲ್ಲಿ ಈ ಬಗ್ಗೆ ಬಹಳ ಪ್ರತಿಕೂಲವಾದ

ಲೇಖಗಳು ಬರ ಹತ್ತಿವೆ. ಈ ವಿಷಯದಲ್ಲಿ ಫಿಗ್ಯಾರೊ ವರ್ತಮಾನಪತ್ರದ ವ್ಯವಸ್ಥಾಪಕನು ಹೇಳುವದೇನಂದರೆ—ಈ ಪತ್ರವನ್ನು ಲಂಡನದಲ್ಲಿ ಮುದ್ರಿಸಿದಷ್ಟೇ ಸರಸಾಗಿ ಪ್ಯಾರಿಸ್ ಪಟ್ಣದಲ್ಲಿಯೂ ಮುದ್ರಿಸ ಬಹುದು. ಆದರೆ ಪ್ಯಾರಿಸ್ ಪಟ್ಣದಲ್ಲಿ ಈ ಪತ್ರವನ್ನು ಮುದ್ರಿಸುವದಕ್ಕೆ ಇರುವ ಅಡ್ಡಿ ಏನಂದರೆ, ಲಂಡನದಲ್ಲಿ ೨೦೦ ಪೌಂಡು ಬೀಳುವ ಮುದ್ರಣಯಂತ್ರಕ್ಕೆ ಪ್ಯಾರಿಸ್ ಪಟ್ಣದಲ್ಲಿ ೬೦೦ರಿಂದ ೭೦೦ ಪೌಂಡು ಕ್ರಯ ಬೀಳುವದು. ಫ್ರಾನ್ಸದವರು ಪರದೇಶಗಳಿಂದ ಬರುವ ಯಂತ್ರಗಳ ಮೇಲೆ ಭಾರಿಯಾದ ಕರಗಳನ್ನು ಕೂಡ್ರಿಸಿರುವದೇ ಈ ಹೆಚ್ಚು ಕ್ರಯಕ್ಕೆ ಕಾರಣವು."

ಉದ್ಯೋಗಸಂರಕ್ಷಣದಿಂದ ಮೇಲೆ ಹೇಳಿದ ಹಾನಿಗಳುಂಟಾಗುವದಲ್ಲದೆ, ಮತ್ತೊಂದು ಸ್ಪಷ್ಟವಾಗಿ ಗೋಚರವಾಗುವ ಹಾನಿಯುಂಟು. ಅದೇನಂದರೆ, ಈ ಬಗೆಯ ಸಂರಕ್ಷಣವು ನಿಷ್ಪ್ರಯೋಜಕವಾದ ಖರ್ಚಿಗೆ ಕಾರಣವಾಗುತ್ತದೆ. ಸ್ಮರ್ನಾಪಟ್ಣದ ಬದಿಯಲ್ಲಿ ಒಂದು ತರದ ಗಿಡಮೂಲಿಕೆಗಳನ್ನು ಕುದಿಸಿ ಮದ್ಯವನ್ನು ತೆಗಿದು ಇಂಗ್ಲಂಡಕ್ಕೆ ಕಳುಹಿಸುವ ಕಾರಖಾನೆ ನಡಿಯುತ್ತದೆ. ಆದರೆ ಈ ಮದ್ಯವನ್ನು ಅಮೇರಿಕೆಗೆ ಕಳುಹಿಸ ಬೇಕಾದರೆ, ಮೂಲಿಕೆಗಳನ್ನೇ ಕಳುಹಿಸ ಬೇಕಾಗುತ್ತದೆ. ಯಾಕಂದರೆ, ಮದ್ಯವನ್ನು ಹೊರಗಿಂದ ಅಮೇರಿಕೆಗೆ ವೈಯುವದಕ್ಕೆ ಅಮೇರಿಕನ್ ಸರಕಾರದವರ ಪ್ರತಿಬಂಧ ಉಂಟು. ಈ ಕಾರಣದಿಂದ ನೂರಕ್ಕೆ ೯೦ ಪಾಲು ನೀರಿನ ಅಂಶ, ಹಾಗೂ ೧೦ ಪಾಲು ಮಾತ್ರ ಮದ್ಯದ ಅಂಶವುಳ್ಳ ಮೂಲಿಕೆಗಳನ್ನೇ ಅಮೇರಿಕೆಗೆ ವೈಯ ಬೇಕಾಗುವದು; ಅಂದರೆ ಅಮೇರಿಕೆಗೆ ಒಂದು ಔಂಸು ಮದ್ಯವನ್ನು ವೈಯ ಬೇಕಾದರೆ, ಅದರ ಕೂಡ ೯ ಔಂಸು ನೀರು ನಿಷ್ಪ್ರಯೋಜನವಾಗಿ ಸಾವಿರಾರು ಹರದಾರಿಗಳ ಮೇಲೆ ಹೊತ್ತು ವೈಯ ಬೇಕಾಗುತ್ತದೆ. ಈ ಮೇರೆಗೆ ನೂರಕ್ಕೆ ೯೦ರಂತೆ ನೀರಿನ ಅಂಶವನ್ನು ವೈಯ ಬೇಕಾದ್ದರಿಂದ ತಗಲುವ ಹೆಚ್ಚಿನ ಖರ್ಚು ಆ ಮದ್ಯವನ್ನು ಕುಡಿಯುವವರ ತಲೆಯ ಮೇಲೆ ಬೀಳುವದೆಂಬದು ಸ್ಪಷ್ಟವದೆ.

ಸ್ವದೇಶದ ಉದ್ಯೋಗಗಳ ಪ್ರೋತ್ಸಾಹನಕ್ಕಾಗಿ ಸರಕಾರದವರು ಕೊಡುವ ಉತ್ತೇಜಕ ಧನದಿಂದ ಉಂಟಾಗುವ ಪರಿಣಾಮವನ್ನು ವ್ಯಕ್ತ ಪಡಿಸುವ ಉದಾಹರಣವು:—ಸಾಂಪ್ರತಕ್ಕೆ ಇಂಗ್ಲಂಡದಲ್ಲಿ ಚಲೋ ಬಿಳೇ ಸಕ್ಕರೆ ಬಹುಶಃ ಹುಟ್ಟುವದಿಲ್ಲ. ಇಂಗ್ಲಂಡದಲ್ಲಿ ಮಾರಾಟವಾಗುವ ಬಹುತರ ಯಾವತ್ತು ಸಕ್ಕರೆ ಫ್ರಾನ್ಸದಿಂದ ಬರುತ್ತದೆ. ಹೀಗಾಗುವದಕ್ಕೆ ಇಂಗ್ಲಂಡದ ಸಕ್ಕರೆಗಿಂತಲೂ ಫ್ರಾನ್ಸದಿಂದ ಬರುವ ಸಕ್ಕರೆ ಮೇಲಾದದ್ದಾಗಿರುವದೆಂಬ ಕಾರ

ಣವೂ ಅಲ್ಲ, ಅಥವಾ ಇಂಗ್ಲಂಡದೊಳಗೆ ಹುಟ್ಟಿದ ಸಕ್ಕರೆಗಿಂತಲೂ ಫ್ರಾನ್ಸದ ಸಕ್ಕರೆ ಸ್ವಾಭಾವಿಕವಾಗಿ ಅಗ್ಗ ಬೀಳುತ್ತದೆಂಬ ಕಾರಣವೂ ಅಲ್ಲ. ಆದರೆ ಇದಕ್ಕೆ ಕಾರಣವೇನಂದರೆ, ಫ್ರಾನ್ಸದಿಂದ ರಫ್ತವಾಗುವ ಯಾವತ್ತು ಸಕ್ಕರೆಯ ಮೇಲೆ ಫ್ರೆಂಚ ಸರಕಾರದವರು ಕಪ್ಪ ಮುಂತಾದವುಗಳನ್ನೇನೂ ಕೂಡ್ರಿಸದೆ, ತಿರುಗಿ ಕೈಯಿಂದ ಉತ್ತೇಜಕ ಧನವನ್ನು ಕೊಡುತ್ತಾರೆಂದು ಅಂದರೂ ಅನ್ನ ಬಹುದು. ಈ ಉತ್ತೇಜಕ ಧನದ ಮೂಲಕವಾಗಿ ಫ್ರೆಂಚ ವರ್ತಕರಿಗೆ ಇಂಗ್ಲಿಷ ವರ್ತಕರಿಗಿಂತಲೂ ತಮ್ಮ ಸಕ್ಕರೆಯನ್ನು ಅಗ್ಗ ಮಾರುವದಕ್ಕೆ ಬರುತ್ತದೆ. ಆ ಕಾರಣ ಇಂಗ್ಲಂಡದಲ್ಲಿ ಕ್ಲಾಯಿಡ್ ಹೊಳೆಯ ದಂಡೆಯ ಮೇಲೂ, ಬ್ರಿಸ್ಟಲ್ ಪಟ್ಟದಲ್ಲಿಯೂ ಮೊದಲು ಇದ್ದ ಸಕ್ಕರೆ ಶುದ್ಧ ಮಾಡುವ ಕಾರಖಾನೆಗಳೆಲ್ಲ ಈಗ ನಿಂತು ಹೋಗಿವೆ. ಹಾಗೂ ಈ ಕಾರಖಾನೆಗಳೊಳಗಿನ ಶ್ರಮಬಂಡವಲಗಳು ಬೇರೆ ಉದ್ಯೋಗಗಳಲ್ಲಿ ಶೇರಲಾರಂಭಿಸಿವೆ. ಇದರ ಮೇಲಿಂದ ಸ್ಪಷ್ಟವಾಗಿ ಕಾಣಿಸುವದೇನಂದರೆ, ಫ್ರೆಂಚ ಸರಕಾರದವರು ನಡಿಸಿದ ಕ್ರಮದಿಂದ ಇಂಗ್ಲಂಡ ವರ ಉದ್ಯೋಗಗಳಿಗೇನು ಕಡೆತನಕ ಹಾನಿಯಾಗಲಿಲ್ಲ. ಫ್ರೆಂಚ ಸರಕಾರದವರ ಉದ್ಯೋಗಸಂರಕ್ಷಣದ ಕ್ರಮದಿಂದುಂಟಾದ ಒಂದೇ ಪರಿಣಾಮವೇನಂದರೆ, ಅದರಿಂದ ಯಾವತ್ತು ಇಂಗ್ಲಿಷರಿಗೆ ಸಕ್ಕರೆಯು ಮೂಲಕ್ರಯಕ್ಕಿಂತಲೂ ಅಗ್ಗವಾಗಿ ದೊರಿಯ ಬೇಕೆಂದು, ಇಡೀ ಫ್ರೆಂಚರಾಷ್ಟ್ರದ ಮೇಲೆಲ್ಲ ಕರ ಕೂಡ್ರಿಸಿದ ಹಾಗಾಯಿತು.

**ಉದ್ಯೋಗಸಂರಕ್ಷಕರ ದೃಷ್ಟಿಯಿಂದ ಲೋಹಮಾರ್ಗಗಳ ಯುಕ್ತಾಯುಕ್ತತೆಗಳ ವಿಚಾರವು.**— ಹೊಸದಾಗಿ ಲೋಹಮಾರ್ಗಗಳುಂಟಾಗಿ ಜನರು ಹೊಗೆಬಂಡಿಗಳಿಂದ ಪ್ರಯಾಣ ಮಾಡಹತ್ತಿದಾಗ, ಬಾಡಿಗೆಯ ಕುದುರೆಗಳನ್ನು ಇಟ್ಟ ಪೆಂಡಾರೇರೂ, ಗಾಡಿಯವರೂ, ತಮ್ಮ ಉದ್ಯೋಗಸಂರಕ್ಷಣಕ್ಕಾಗಿ ಮೇಲೆ ಹೇಳಿದಂಥ ಮಾತುಗಳನ್ನೇ ಹೇಳಿದ್ದರೆ ವಿಶೇಷ ಒಪ್ಪುವ ಹಾಗಿತ್ತು. ಅವರು ತಮ್ಮ ಸಂಕಷ್ಟಗಳನ್ನು ಈ ಪ್ರಕಾರ ಹೇಳಿಕೊಳ್ಳ ಬಹುದಾಗಿತ್ತು:—"ಈ ಹೊಸ ಮಾರ್ಗಗಳ ಮೂಲಕವಾಗಿ, ಬಂಡಿ ಹೊಡಿಯುವವರು, ಪೆಂಡಾರೇರು ಮುಂತಾದ ಸಾವಿರಾರು ಜನರ ಉದ್ಯೋಗಗಳು ತಪ್ಪಿ, ಈ ಜನರು ಬಹಳ ಹೀನಸ್ಥಿತಿಯನ್ನು ಹೊಂದುವರು. ಊಚ ಜಾತಿಯ ಕುದುರೆಗಳ ಜಾತಿಯು ಕೆಲದಿವಸಗಳಲ್ಲಿ ನಿರ್ಮೂಲವಾಗುವದು," ಇತ್ಯಾದಿ. ಆದರೆ ಯಾವತ್ತು ಜನಸಮೂಹವನ್ನು ಲಕ್ಷ್ಯದಲ್ಲಿ ತಕ್ಕೊಂಡರೆ, ಪೆಂಡಾರೇರು ಮೊದಲಾದವರ ಸಂಖ್ಯೆಯು ಬಹಳ ಸ್ವಲ್ಪಾಗಿರುವದು. ಅಲ್ಪಸ್ವಲ್ಪ ಜನರ ಹಿತಕ್ಕಿಂತಲೂ, ಬಹು ಜನರ ಹಿತಕ್ಕೆ

ಹೆಚ್ಚು ದೃಷ್ಟಿ ಕೊಡುವದೇ ವಿಹಿತವಾದದ್ದು. ಇದಲ್ಲದೆ, ಲೋಹಮಾರ್ಗಗಳಿಂದ ವ್ಯಾಪಾರದ ಅಭಿವೃದ್ಧಿ ಮೊದಲಾದ ಅಸಂಖ್ಯ ಲಾಭಗಳು ಉಂಟಾಗುವವು.

ಇಂಗ್ಲಂಡದಲ್ಲಿ ೨ನೇ ಚಾರ್ಲಸನೆಂಬ ಅರಸನು ಆಳುವಾಗ, ಟೇಮ್ಸ ಹೊಳೆಯಲ್ಲಿ ಹರಗೋಲು ನಡಿಸುವ ಅಂಬಿಗರು ಸರಕಾರಕ್ಕೆ ಬರೆದು ಕೊಂಡ ಅರ್ಜಿ ಏನಂದರೆ:—"ಲಂಡನದಲ್ಲಿದ್ದ ಬಾಡಿಗೆಯ ಗಾಡಿಗಳನ್ನು ಉತ್ತರ ದಕ್ಷಿಣ ದಿಕ್ಕುಗಳಲ್ಲಿ ಮಾತ್ರ ಓಡ್ಯಾಡಗೊಡ ಬೇಕು; ಗಾಡಿಗಳನ್ನು ಪೂರ್ವಪಶ್ಚಿಮವಾಗಿ ವೈಯಗೊಡಬಾರದು. ಅಂದರೆ ಪೂರ್ವಕ್ಕೆ ಇಲ್ಲವೆ ಪಶ್ಚಿಮಕ್ಕೆ ಹೋಗುವ ಯಾವತ್ತು ಪ್ರಯಾಣಸ್ಥರು ನಮ್ಮ ಹರಗೋಲಿನಿಂದ ಹೋಗಬೇಕಾಗುವದು."

**ಮೇಣದ ಬತ್ತಿಗಳನ್ನು ಮಾಡುವವರ ಅರ್ಜಿಯು:**—ಹಿಂದೆ ಹೇಳಿದ ಎಮ್ ಬ್ಯಾಸ್ಟಿಯಟ್‌ನೆಂಬ ಗ್ರಂಥಕರ್ತನು, ಉದ್ಯೋಗಸಂರಕ್ಷಣದ ಪದ್ಧತಿಯು ಅಬದ್ಧವಾದದ್ದೆಂಬದು ಜನರಿಗೆ ಚನ್ನಾಗಿ ಮನವರಿಕೆಯಾಗುವ ಹಾಗೆ ಒಂದು ವಿನೋದಪರವಾದ ಲೇಖವನ್ನು ಬರೆದಿದ್ದಾನೆ. ಅದರ ತಾತ್ಪರ್ಯವನ್ನು ಕೆಳಗೆ ಬರೆದಿದ್ದೇವೆ:—

"ವ್ಯಾಪಾರದ ಪ್ರತಿನಿಧಿಗಳ ಸಭೆಯ ಸನ್ನಿಧಾನಕ್ಕೆ:—"ಮೇಣ್ಣದ ಬತ್ತಿಗಳು, ತರತರದ ದೀಪಗಳು, ಸಮೇಗಳು, ಮಾರ್ಗಗಳಲ್ಲಿ ಹಚ್ಚುವ ಲಾಂದರಗಳು, ದೀಪದ ಕುಡಿಗಳನ್ನು ಕತ್ತರಿಸುವ ಕತ್ತರಿಗಳು ಮುಂತಾದವುಗಳನ್ನು ಮಾಡುವ ಕಾರಖಾನೆಯವರೂ, ಮಾರ್ಗಗಳಲ್ಲಿದ್ದ ಕಂದೀಲುಗಳನ್ನು ಹಚ್ಚುವವರೂ, ದೀಪಗಳನ್ನು ನಂದಿಸುವವರೂ, ಎಣ್ಣೆ, ನೆಣ, ರಾಳ, ಮದ್ಯಾರ್ಕ ಮೊದಲಾದ ಪ್ರಕಾಶವನ್ನುಂಟು ಮಾಡುವಂಥ ಯಾವತ್ತು ಪದಾರ್ಥಗಳನ್ನು ಉತ್ಪನ್ನ ಮಾಡುವವರೂ, ಬರೆದು ಕೊಂಡ ಅರ್ಜಿ ಏನಂದರೆ:—

"ಸದ್ಗೃಹಸ್ಥರುಗಳಿರಾ,

"ನಾವು ವಿದೇಶೀಯನಾದ ಒಬ್ಬ ವ್ಯಾಪಾರಸ್ಥನ ಸ್ಪರ್ಧೆಯಿಂದ ಸಹಿಸ ಕೂಡದಷ್ಟು ಕಷ್ಟಗಳನ್ನು ಅನುಭವಿಸುತ್ತಲಿದ್ದೇವೆ. ಈ ಪರಕೀಯನಲ್ಲಿ ಪ್ರಕಾಶವನ್ನುಂಟು ಮಾಡುವ ಶಕ್ತಿಯು ನಮಗಿಂತಲೂ ಸಹಸ್ರಾವಧಿ ಪಾಲು ಹೆಚ್ಚು ಇರುವದರಿಂದ ಇವನು ನಮ್ಮ ರಾಷ್ಟ್ರೀಯ ಬಾಜಾರವನ್ನೆಲ್ಲ ಪ್ರಕಾಶಮಯವಾಗಿ ಮಾಡಿ ಬಿಟ್ಟಿದ್ದಾನೆ. ಇಷ್ಟಾಗಿ, ಪ್ರಕಾಶದ ಕ್ರಯವನ್ನಾದರೂ ಬಹಳ ಇಟ್ಟಿದ್ದಾನೋ, ಅದೂ ಇಲ್ಲ; ಅದನ್ನೂ ಅಕಲ್ಪಿತವಾಗಿ ಇಳಿಸಿ ಬಿಟ್ಟಿದ್ದಾನೆ. ಆ ಕಾರಣ ಇವನ ಮೇಲಾಟಕ್ಕೆ ನಾವು ಈಡಾಗುವ ಏನೊಂದು ಹಂಚಿಕೆ ನಮಗೆ

ತೋರಲೊಲ್ಲದು. ಈ ಮಹಾರಾಯನ ದರ್ಶನವಾದ ಕೂಡಲೆ, ಎಲ್ಲರೂ ಅವನ ಪ್ರಕಾಶವನ್ನೇ ಬೇಡುತ್ತಾರಾದ್ದರಿಂದ ನಮ್ಮ ಉದ್ಯೋಗವು ನಮ್ಮ ಕೈ ಬಿಟ್ಟು ಹೋಗುತ್ತದೆ. ಇದರಿಂದ, ಸ್ವದೇಶೀಯವಾದ ಒಂದು ಘನ ಉದ್ಯೋಗವು, ಅದಕ್ಕೆ ಸಂಬಂಧಿಸಿದ್ದ ಸಣ್ಣ ದೊಡ್ಡ ಅಸಂಖ್ಯ ಉದ್ಯೋಗಗಳ ಸಹಿತವಾಗಿ ಕುಂದಿ ಹೋಗಿದೆ. ಈ ಘಾತಕನಾದ ಪ್ರತಿಸ್ಪರ್ಧಿಯು ಯಾರಂದರೆ, ಸೂರ್ಯನು. ಈ ಪ್ರತಿಸ್ಪರ್ಧಿಯು ನಮ್ಮನ್ನು ಸಮೂಲವಾಗಿ ನಾಶ ಮಾಡ ಬೇಕೆಂಬ ಹೇತುವಿನಿಂದ ನಮ್ಮ ಕೂಡ ಕದನ ಮಾಡಲೆಸಗಿದ್ದಾನೆ. ಈ ಶತ್ರುವು ನಮ್ಮ ದ್ರೋಹಿಗಳಾದ ಶ್ವೇತದ್ವೀಪ*ಸ್ಥರ ದುರಾಲೋಚನೆಗಳಿಗೆ ಕಿವಿಗೊಟ್ಟಂತೆ ತೋರುತ್ತದೆ. ಯಾಕಂದರೆ ಆ ಮದೋನ್ಮತ್ತರಾದ ದ್ವೀಪಸ್ಥರಿಗೆ ಅವನು ಸ್ವಲ್ಪ ಪಕ್ಷಪಾತ ಮಾಡಿದ್ದಾನೆ.

"ಸಾಂಪ್ರತಕ್ಕೆ ನಾವು ಬಿನ್ನವಿಸುವದೇನಂದರೆ—ಈ ದೇಶದೊಳಗಿನ ಸಣ್ಣ ದೊಡ್ಡ ಯಾವತ್ತು ಕಿಟಿಕಿಗಳನ್ನೂ, ಜೇರಗಂಡಿಗಳನ್ನೂ, ಕಿಟಿಕಿಗಳ ಹೊರಗಿನ ಹಾಗೂ ಒಳಗಿನ ಬಾಗಿಲಗಳನ್ನೂ, ತೆರೆಗಳನ್ನೂ, ಪರದೆಗಳನ್ನೂ, ಚಾಟುಗಳನ್ನೂ, ಬೆಳಕಂಡಿಗಳನ್ನೂ, ಒಟ್ಟಿಗೆ ಮನೆಗಳಲ್ಲಿ ಪ್ರಕಾಶವು ಬರುವದಕ್ಕೆ ಆಸ್ಪದ ಕೊಡುವಂಥ ಯಾವತ್ತು ತೂತುಗಳು, ಕಿಂಡಿಗಳು, ಬಿರುಕುಗಳು, ಒಡಕುಗಳು, ಸಂದುಗಳು ಮುಂತಾದ ಎಲ್ಲ ಮಾರ್ಗಗಳನ್ನೂ ಮುಚ್ಚಿ ಬಿಡುವದಾಗಿ ಧನಿಯರು ದಯ ಮಾಡಿ ಕಟ್ಟಳೆಯ ಮಾಡ ಬೇಕು. ಈ ಮಾರ್ಗಗಳಿಂದ ಮನೆಗಳಲ್ಲಿ ಪ್ರಕಾಶವು ಬರಲಿಕ್ಕೆ ಆಸ್ಪದವಾದ್ದರಿಂದ ನಾವು ಸ್ವದೇಶಹಿತಕ್ಕಾಗಿ ಸ್ಥಾಪಿಸಿದಂಥ ಸದುದ್ಯೋಗವು ನಷ್ಟವಾಗುತ್ತದೆ. ನಾವು ಈ ಅಸಮವಾದ ಕದನದಲ್ಲಿ ಹೋರಾಡುವ ಸಮಯದಲ್ಲಿ, ನಾವು ನಮ್ಮ ದೇಶಕ್ಕೆ ಮಾಡಿದ ಉಪಕಾರಗಳನ್ನು ನೆನಸದೆ ನಮ್ಮನ್ನು ನಡುನೀರಲ್ಲಿ ಕೈ ಬಿಟ್ಟಂತೆ ಮಾಡುವದು ನಮ್ಮ ದೇಶಬಾಂಧವರಿಗೆ ಯೋಗ್ಯವಲ್ಲ.

"ನಮ್ಮ ಬಿನ್ನಹದ ಸಮರ್ಥನಕ್ಕಾಗಿ ಕೆಳಗೆ ಬರೆದ ಕಾರಣಗಳನ್ನು ದಿವ್ಯ ಚಿತ್ತಕ್ಕೆ ಅರಿಕೆ ಮಾಡಿಕೊಳ್ಳುತ್ತೇವೆ:—

"೧ನೇ ಕಾರಣ.—ಸ್ವಾಭಾವಿಕ ಪ್ರಕಾಶವು ಬರುವಂಥ ಯಾವತ್ತು ಮಾರ್ಗಗಳನ್ನು ಕೈಲಾದ ಮಟ್ಟಿಗೆ ನೀವು ಮುಚ್ಚಿ ಬಿಡಿಸಿ, ಕೃತ್ರಿಮ ಬೆಳಕಿಗೆ ಬೇಡಿಕೆ

*ಆಲ್‌ಬಿ ಆನ್, ಅಂದರೆ ಶ್ವೇತದ್ವೀಪವೆಂಬುವದು ಇಂಗ್ಲಂಡ ದೇಶದ ಪುರಾತನ ಹೆಸರು. ಯುರೋಪ ಖಂಡದ ಬೇರೆ ದೇಶಗಳಿಂದ ಇಂಗ್ಲಂಡಕ್ಕೆ ಹೋಗುವವರಿಗೆ ಮೊದಲು ಇಂಗ್ಲಂಡದ ಬಿಳೇ ಮಟ್ಟಿಯ ಗುಡ್ಡಗಳು ಕಣ್ಣಿಗೆ ಬೀಳುವದರಿಂದ ಇಂಗ್ಲಂಡಕ್ಕೆ ಈ ಹೆಸರು ಬಂತು. ಇಂಗ್ಲಿಷರಿಗೂ ಫ್ರೆಂಚರಿಗೂ ಎಂದಿಗೂ ದ್ವೇಷ ಉಂಟೇ ಉಂಟು.

ಯನ್ನುಂಟು ಮಾಡಿದ್ದೇ ಆದರೆ, ತಮ್ಮ ದಯದಿಂದ ಫ್ರಾನ್ಸ ದೇಶದಲ್ಲಿ ಯಾವ ಕಾರ ಖಾನೆಗಳಿಗೆ ಪ್ರೋತ್ಸಾಹನ ಉಂಟಾಗಲಿಕ್ಕಿಲ್ಲ?

"೨ನೇ ಕಾರಣ.—ಮೇಣದ ಬತ್ತಿಗಳಿಗಾಗಿ ನೆಣವು ಹೆಚ್ಚು ಹೆಚ್ಚಾಗಿ ಬೇಕಾದ ಹಾಗೆ ಎತ್ತು, ಕೋಣ, ಕುರಿ ಮುಂತಾದವುಗಳು ಹೆಚ್ಚು ಬೇಕಾಗುವವು. ಅದ ರಿಂದ ಕೃತ್ರಿಮ ಹುಲ್ಲುಗದ್ದೆಗಳೂ, ಮಾಂಸವೂ, ಉಣ್ಣೆಯೂ, ತೊಗಲುಗಳೂ ಹೆಚ್ಚುವವು. ಇಷ್ಟೇ ಅಲ್ಲ, ಇದರಿಂದ ಯಾವತ್ತು ಒಕ್ಕಲತನಕ್ಕೆ ಆಧಾರಭೂತ ವಾದ ಗೊಬ್ಬರವೂ ಹೆಚ್ಚುವದು.

"ದೀಪದ ಎಣ್ಣೆ ಹೆಚ್ಚು ಖರ್ಚು ಆದ ಹಾಗೆ ಎಳ್ಳು, ಕೊಬ್ಬರೆ, ಔಡ್ಲ, ಕುಸುಬಿ, ನೆಲಗಡ್ಲೆ ಮೊದಲಾದವುಗಳ ಪೈರು ಬಹಳವಾಗಿ ಹಬ್ಬುಗೊಳ್ಳುವದು. ಮತ್ತು ನಮ್ಮ ದನಕರಗಳು ಹೆಚ್ಚಾಗಿ ಭೂಮಿಯು ಕಸುವುಳ್ಳದ್ದಾದ್ದರಿಂದ, ಈ ಎಣ್ಣೇ ಕಾಳುಗಳು ವಿಪುಲವಾಗಿ ಬೆಳೆದು, ನಮ್ಮ ಲಾಭಕ್ಕೆ ಮಿತಿ ಇಲ್ಲದೆ ಹೋಗುವದು.

"ನಮ್ಮ ಅಡವಿಗಳಲ್ಲೆಲ್ಲ ರಾಳ ಮುಂತಾದವುಗಳನ್ನು ಹುಟ್ಟಿಸುವಂಥ ಗಿಡ ಗಳು ಕಂಗೊಳಿಸುವವು. ಜೇನು ನೊಣಗಳ ಅಸಂಖ್ಯ ಹಿಂಡುಗಳು ಗುಡ್ಡಗಳ ಮೇಲೆ ತಮ್ಮ ಸುವಾಸನೆಯುಳ್ಳ ಮಕರಂದದ ಸಂಗ್ರಹಗಳನ್ನು ಮಾಡಿಡುವವು; ಈಗಿನಂತೆ ಮುಂದೆ ಪುಷ್ಪಗಳ ಸುವಾಸನೆಯು ನಿರರ್ಥಕವಾಗಿ ಹಾಳಾಗಲಿಕ್ಕಿಲ್ಲ. ಹೀಗಾಗುವದರಿಂದ ಒಕ್ಕಲತನದ ಪ್ರತಿಯೊಂದು ಉದ್ಯೋಗಕ್ಕೆ ತೇಜ ಬಾರದೆ ಇರದು.

"ಇದೇ ಮಾತು ನೌಕಾವಿದ್ಯೆಗೆ ಸಹ ಸರಿ ಬೀಳುತ್ತದೆ. ಯಾಕಂದರೆ ಎಣ್ಣೆ ಹೆಚ್ಚು ಬೇಕಾದ ಹಾಗೆ ಸಹಸ್ರಾವಧಿ ಜನರು ತಿಮಿಂಗಿಲ ಮೊದಲಾದ ಅಧ್ಭುತ ವಾದ ಪ್ರಾಣಿಗಳನ್ನು ಹಿಡಿಯುವದಕ್ಕಾಗಿ ಸಮುದ್ರಸಂಚಾರ ಮಾಡ ಹತ್ತುವರು ಅದರಿಂದ ನಮ್ಮ ದೇಶದ ಉಜ್ವಲ ಕೀರ್ತಿಗೂ, ಅರ್ಜಿದಾರರ ಸ್ವದೇಶೋನ್ನತಿಯ ಅಭಿಲಾಷೆಗಳಿಗೂ ಒಪ್ಪುವಂಥ ಹಡಗಪಡೆ ಉಂಟಾಗುವದು.

"ಪ್ಯಾರಿಸ್ ಪಟ್ಟದಲ್ಲಿ ಹುಟ್ಟುವ ಕೈಗಾರಿಕೆಗಳ ವಿಷಯದಲ್ಲಂತೂ ಕೇಳುವ ದೇನು! ಬೆಳ್ಳಿ ಭಂಗಾರಗಳ ಮುಲಾಮು, ಕಾಂತಿಯುಳ್ಳ ಲೋಲಕಗಳು ಮೊದ ಲಾದವುಗಳ ಪ್ರಭೆಯಿಂದ ಹೊಳಿಯುವಂಥ ಭವ್ಯವಾದ ವಖಾರುಗಳು ದೃಷ್ಟಿ ಗೋಚರವಾಗುವದು. ಈ ವಖಾರುಗಳ ಮುಂದೆ ಈಗಿನ ವಖಾರುಗಳು ಚಿಕ್ಕ ತಕ್ಕಡಿಯ ಅಂಗಡಿಗಳಂತೆ ಕಾಣಿಸುವವು.

"ಎತ್ತರವಾದ ಪ್ರದೇಶಗಳಲ್ಲಿ ರಾಳದ ಗಿಡಗಳನ್ನು ಬೆಳಿಸುವ ಬಡ ಜನರಿಗೂ, ಕಲ್ಲಿದ್ದಲಿಯ ಕಣಿಗಳ ಬುಡದ ಕಪ್ಪು ಮಂದಿರಗಳಲ್ಲಿ ದುಡಿಯುವಂಥ ಕೂಲಿಕಾ

ರಿಗೂ ಹೆಚ್ಚಿನ ಸಂಬಳವೂ ಸೌಖ್ಯಗಳೂ ಉಂಟಾಗುವದರಿಂದ ಇವರಲ್ಲಿ ಯಾರಿಗೆ ಸಂತೋಷವಾಗಲಿಕ್ಕಿಲ್ಲ!

"ಸದ್ಗೃಹಸ್ಥರುಗಳಿರಾ, ತಾವು ಸ್ವಲ್ಪ ತಿಳಿದು ನೋಡಿ ನಮ್ಮ ಬಿನ್ನಹವನ್ನು ಅಂಗೀಕರಿಸಿದ್ದೇ ಆದರೆ, ಅದರಿಂದ ಫ್ರೆಂಚ ಜನರೊಳಗೆ ಒಳ್ಳೇ ಧನಿಕರಾದ ಕಲ್ಲಿದ್ದಲಿಯ ಕಣಿಗಳ ಯಜಮಾನರು ಮೊದಲ್ಗೊಂಡು ದೀಪದ ಕಡ್ಡಿಗಳನ್ನು ಮಾರುವ ಬಡ ಅಂಗಡಿಕಾರನ ವರೆಗೆ ಸಮಸ್ತರಿಗೂ ಕಲ್ಯಾಣವಾಗುವದೆಂಬುವದು ತಮಗೆ ಮನವರಿಕೆಯಾಗುವದು. ಇದಕ್ಕೆ ವಿರುದ್ಧವಾಗಿ—"ಸೂರ್ಯನ ಪ್ರಕಾಶವು ಸೃಷ್ಟಿಯಲ್ಲಿ ಸ್ವಾಭಾವಿಕವಾಗಿ ದೊರಿಯುವಂಥ ಪದಾರ್ಥವು. ಇಂಥ ಪದಾರ್ಥವನ್ನು ತ್ಯಜಿಸಿದರೆ, ಸಂಪತ್ತನ್ನು ಹುಟ್ಟಿಸುವದಕ್ಕೆ ಪ್ರೋತ್ಸಾಹನವಾಗ ಬೇಕೆಂದು ಪ್ರತ್ಯಕ್ಷ ಸಂಪತ್ತನ್ನೇ ಕಳಕೊಂಡ ಹಾಗಾಗುವದು," ಎಂದು ತಾವು ಎಷ್ಟು ಮಾತ್ರವೂ ಪ್ರತಿವಾದಿಸ ಕೂಡದು. ತಾವು ಈ ಪ್ರಕಾರ ಪ್ರತಿಪಾದಿಸಿದ್ದೇ ಆದರೆ, ತಾವು ಇದು ವರೆಗೆ ನಡಿಸಿದ ಕ್ರಮಗಳಿಗೆಲ್ಲ ವಿರೋಧ ಬರುವದು. ಸ್ವದೇಶದ ಸರಕುಗಳಿಗಿಂತಲೂ ಪರದೇಶದ ಸರಕುಗಳಲ್ಲಿ ತಮ್ಮಿಂದ ತಾವೇ ದೊರಿಯುವ ಗುಣವು ಹೆಚ್ಚಾಗಿರುವದರಿಂದಲೇ ಇದು ವರೆಗೆ ತಾವು ಆ ಸರಕುಗಳು ನಮ್ಮ ದೇಶದಲ್ಲಿ ಬರುವದಕ್ಕೆ ಪ್ರತಿಬಂಧ ಮಾಡಿರುವಿರಿ. ಈ ದೃಷ್ಟಿಯಿಂದ ನೋಡಲಾಗಿ, ಬೇರೆ ಉದ್ಯೋಗಗಳನ್ನು ಮಾಡುವವರ ಬಿನ್ನಹಕ್ಕೆ ತಾವು ಸಮ್ಮತಿಸಿದ್ದಕ್ಕೆ ನಮ್ಮಷ್ಟು ಸಬಲವಾದ ಕಾರಣವಿದ್ದಿಲ್ಲ. ಆದರೆ ನಮ್ಮ ಬಿನ್ನಹಕ್ಕೆ ಒಪ್ಪಿಕೊಳ್ಳುವದಕ್ಕೆ ತಮಗೆ ಬಲವತ್ತರ ಆಧಾರವುಂಟು. ಬೇರೆಯವರ ಬಿನ್ನಹಕ್ಕೆ ಒಪ್ಪಿಕೊಂಡದ್ದಕ್ಕೆ ಇದ್ದ ಕಾರ್ಣಗಳಿಗಿಂತಲೂ, ನಮ್ಮ ಬಿನ್ನಹವನ್ನು ಅಂಗೀಕರಿಸುವದಕ್ಕೆ ಹೆಚ್ಚು ಬಲವಾದ ಕಾರಣಗಳುಂಟೆಂದು ನಮ್ಮ ಬಿನ್ನಹವನ್ನು ತಾವು ಅನಾದರ ಮಾಡಿದ್ದುಂಟಾದರೆ, ತಾವು $+\times+=-$ ಎಂಬ ಸಮೀಕರಣವನ್ನು ಅಂಗೀಕರಿಸಿದಂತಾಗುವದು. ಅಂದರೆ ಒಂದು ಅಬದ್ಧ ಆಲೋಚನೆಯ ಮೇಲೆ ಮತ್ತೊಂದು ಅಬದ್ಧ ಆಲೋಚನೆಯನ್ನು ಹೇರಿದಂತಾಗುವದು.

"ಬೇರೆ ಬೇರೆ ದೇಶಗಳಲ್ಲಿಯೂ ಹವೆಗಳಲ್ಲಿಯೂ ಪದಾರ್ಥಗಳನ್ನು ಹುಟ್ಟಿಸುವಲ್ಲಿ ಸೃಷ್ಟಿಧರ್ಮಗಳೂ, ಮಾನುಷಶ್ರಮವೂ, ಬೇರೆ ಬೇರೆ ಪ್ರಮಾಣದಿಂದ ಕೂಡಿಕೊಂಡಿರುವವು. ಸೃಷ್ಟಿಧರ್ಮಗಳಿಂದ ಆಗುವ ಕಾರ್ಯವು ಯಾವಾಗಲೂ ವೆಚ್ಚವಿಲ್ಲದೆ ತನ್ನಿಂದ ತಾನೇ ಆಗುವದು. ಆದ್ದರಿಂದ ಯಾವದೊಂದು ಪದಾರ್ಥವನ್ನು ಹುಟ್ಟಿಸುವದಕ್ಕೆ ತಗಲುವ ಮಾನುಷಶ್ರಮದಿಂದಲೇ ಆ ಪದಾರ್ಥಕ್ಕೆ ಬೆಲೆಯುಂಟಾಗುವದು; ಹಾಗೂ ಅದನ್ನು ಕೊಳ್ಳುವವರು ಈ ಬೆಲೆಯನ್ನೇ ಕೊಡ ಬೇಕಾ

ಗುವದು. ಉದಾಹರಣಾರ್ಥವಾಗಿ, ಪ್ಯಾರಿಸದಲ್ಲಿ ಹುಟ್ಟುವ ಕಿತ್ತಳೆಹಣ್ಣಿಗೆ, ಲಿಸ್ಬನದ ಕಿತ್ತಳೆಹಣ್ಣಿನ ಎರಡಷ್ಟು ಬೆಲೆ ಬೀಳುವದು. ಯಾಕಂದರೆ ಲಿಸ್ಬನದಲ್ಲಿ ಏನು ವೆಚ್ಚವಿಲ್ಲದೆ ಸ್ವಾಭಾವಿಕ ಉಷ್ಣತೆಯಿಂದ ಆಗುವ ಕೆಲಸವನ್ನು, ಪ್ಯಾರಿಸದಲ್ಲಿ ಬಹಳ ವೆಚ್ಚ ಮಾಡಿ ಕೃತಿಯಿಂದ ಉಂಟು ಮಾಡಿದ ಉಷ್ಣತೆಯಿಂದ ಮಾಡ ಬೇಕಾಗುವದು. ಆ ಕಾರಣ, ಪೋರ್ತುಗಲದಿಂದ ಬಂದ ಕಿತ್ತಳೆಹಣ್ಣು ಅಂಶತಃ ತನ್ನಿಂದ ತಾನೇ ದೊರಿದದ್ದಾಗಿರುವದು, ಹಾಗೂ ಅಂಶತಃ ಮನುಷ್ಯಶ್ರಮದಿಂದ ದೊರಿದದ್ದಾಗಿರುವದು. ಅಂದರೆ ಪ್ಯಾರಿಸದ ಕಿತ್ತಳೆಹಣ್ಣುಗಳ ಮಾನದಿಂದ ಲಿಸ್ಬನ್ನದ ಹಣ್ಣುಗಳು ಅರ್ಧ ಕ್ರಯಕ್ಕೆ ಬರುವವು.

"ಈಗ್ಯೆ ನಾವಾದರೂ ಬೇಡುವದು ತನ್ನಿಂದ ತಾನೇ ದೊರಿಯುವ ಈ ಅರ್ಧ ಭಾಗದಿಂದ ನಮಗಾಗುವ ಕೇಡನ್ನು ತಾವು ಪರಿಹರಿಸ ಬೇಕೆಂಬುವದೇ. ಈ ಪ್ರಸಕ್ತಿಯಲ್ಲಿ ನೀವು—"ಸ್ವದೇಶೀಯರಿಗೆ ಎಲ್ಲ ಕೆಲಸವನ್ನು ತಮ್ಮ ಕೈಯಿಂದಲೇ ಮಾಡಬೇಕಾಗುತ್ತದೆ; ಪರದೇಶೀಯರ ಅರ್ಧ ಕೆಲಸವು ಸೂರ್ಯನಿಂದ ಪುಗಸಾಟೆಯಾಗುತ್ತದೆ. ಹೀಗಿರಲು, ಸ್ವದೇಶೀಯರು ಸಂರಕ್ಷಿಸಲ್ಪಡದಿದ್ದರೆ ಪರದೇಶೀಯರ ಸ್ಪರ್ಧೆಗೆ ಹ್ಯಾಗೆ ಈಡಾದಾರು?" ಎಂದು ಅನ್ನುತ್ತೀರಿ. ಆದರೆ, ಈ ಅರ್ಧ ಕೆಲಸವು ತನ್ನಿಂದ ತಾನೇ ಆಗುತ್ತದೆಂಬುವದು ಪರದೇಶೀಯರ ಮೇಲಾಟವನ್ನು ಪ್ರತಿಬಂಧಿಸುವದಕ್ಕೆ ತಮಗೆ ಸಾಕಾದ ಕಾರಣವಾದ ಮೇಲೆ, ಎಲ್ಲ ಕೆಲಸವೂ ತನ್ನಿಂದ ತಾನೇ ಆದರೆ ಮಾತ್ರ ಪರದೇಶೀಯರ ಮೇಲಾಟವನ್ನು ನಡಿಯಗೊಡುವದಕ್ಕೆ ತಮಗೆ ಬಲವಾದ ಕಾರಣವಾಗುವದೊ? ನೀವು ಇದು ವರೆಗೆ ವರ್ತಿಸಿದ ಕ್ರಮಕ್ಕೆ ಅನುಗುಣವಾಗಿಯೇ ವರ್ತಿಸುವದಾದರೆ, ಅರ್ಧ ಪುಗಸಾಟೆ ದೊರಿಯುವ ಸರಕುಗಳು ಸ್ವದೇಶದ ಉದ್ಯೋಗಗಳಿಗೆ ಹಾನಿಕರವಾದವುಗಳೆಂದು ನೀವು ವರ್ಜಿಸಿದ್ದರಿಂದ, ಎಲ್ಲಾ ಪುಗಸಾಟೆ ದೊರಿಯುವಂಥ ಸರಕನ್ನಂತೂ ಇಮ್ಮಡಿ ಉತ್ಸಾಹದಿಂದ ವರ್ಜಿಸುವಿರೆಂಬುವಲ್ಲಿ ನಾವು ತಿಲಮಾತ್ರ ಸಂದೇಹ ಪಡುವದಿಲ್ಲ. ನಮ್ಮ ಅಭಿಪ್ರಾಯವನ್ನು ಮತ್ತೊಮ್ಮೆ ಅರಿಕೆ ಮಾಡಿಕೊಳ್ಳುತ್ತೇವೆ: ಕಲ್ಲಿದ್ದಲಿ, ಕಬ್ಬಿಣ, ಧಾನ್ಯ, ಇಲ್ಲವೆ ಕೈಗಾರಿಕೆಯ ಸರಕುಗಳನ್ನು ನಾವೇ ಉಂಟು ಮಾಡಿದರೆ ನಮಗೆ ಬೀಳುವ ಶ್ರಮಕ್ಕಿಂತಲೂ ಕಡಿಮೆ ಶ್ರಮದಿಂದ ಈ ಸರಕುಗಳು ನಮಗೆ ಪರದೇಶಗಳಿಂದ ದೊರಿದಪ್ಪಾದರೆ, ಇವೆರಡೂ ಶ್ರಮಗಳ ವ್ಯತ್ಯಾಸದ ಬೆಲೆಯಷ್ಟು ಸರಕು ನಮಗೆ ಉಚಿತವಾಗಿ ದೊರಿದ ಹಾಗಾಗುತ್ತದೆ. ಈ ವ್ಯತ್ಯಾಸವು ಬಹಳವಾಗಲಿ ತುಸುವಾಗಲಿ ಇದ್ದ ಮೇರೆಗೆ, ನಮಗೆ ಬಹಳ, ಇಲ್ಲವೆ ತುಸು ಲಾಭವಾಗುವದು. ಸರಕು ಮಾರುವವನು ತನ್ನ

ಸರಕಿಗೆ ಏನು ಬೆಲೆ ಬೇಡದಿದ್ದರೆ, ಅವನ ಸರಕು ನಮಗೆ ಉಚಿತವಾಗಿ ದೊರಿದ ಹಾಗಾಗುವದು. ಇದೇ ಪ್ರಕಾರ ಸೂರ್ಯನೂ ತನ್ನ ಪ್ರಕಾಶಕ್ಕೆ ಏನು ಬೆಲೆ ಬೇಡುವದಿಲ್ಲ. ಆದ್ದರಿಂದ ಈಗ ನಾವು ನಿಮಗೊಂದು ಸರಳವಾದ ಪ್ರಶ್ನವ ಕೇಳ್ಳುತ್ತೇವೆ. ನಮ್ಮ ದೇಶಕ್ಕೆ ಉಚಿತವಾಗಿ ದೊರಿಯುವ ಸರಕಿನಿಂದುಂಟಾಗುವ ನಿಜವಾದ ಪ್ರಯೋಜನ ಆಗ ಬೇಕೆಂದು ತಮ್ಮ ಅಭಿಲಾಷೆಯುಂಟೋ, ಅಥವಾ ಸರಕುಗಳನ್ನು ಬೇಕೆಂತ ಶ್ರಮ ಪಟ್ಟು ಉತ್ಪನ್ನ ಮಾಡುವದರಿಂದ ಉಂಟಾಗುವ ಟೊಳ್ಳು ಪ್ರಯೋಜನ ಉಂಟಾಗ ಬೇಕೆಂದು ತಮ್ಮ ಅಭಿಲಾಷೆಯುಂಟೋ? ನಿಮ್ಮ ಮನಸಿಗೆ ಯಾವದು ಬರುತ್ತದೆ ಹೇಳಿರಿ. ನೀವು ನಿಮ್ಮ ಮನಸಿಗೆ ಬಂದಂತೆ ಮಾಡ ಬಹುದು. ಒಂದು ಪ್ರಸಕ್ತಿಯಲ್ಲಿ ಅನುಸರಿಸಿದ ತತ್ವವನ್ನೇ ಮಾತ್ರ ಬೇರೆ ಯಾವ ಪ್ರಸಕ್ತಿಯಲ್ಲಾದರೂ ಅನುಸರಿಸಿರಿ; ಈಗೊಂದು ಆಗೊಂದು ಮಾಡಿ ಯುಕ್ತಿಗೆ ವಿರುದ್ಧವಾಗಿ ವರ್ತಿಸ ಬೇಡಿರಿ. ಯಾಕಂದರೆ, ಪರದೇಶದ ಸರಕುಗಳ ಕ್ರಯವು ಶೂನ್ಯಕ್ಕೆ ಸಮೀಪಿಸಿದ ಹಾಗೆ ಅವುಗಳನ್ನು ನೀವು ಹೊರಗೆ ಅಟ್ಟುವ ಸಮಯದಲ್ಲಿ, ಈಗ್ಯೆ ಇಡೀ ಹಗಲು ಹನ್ನೆರಡು ತಾಸು ಶೂನ್ಯ ಕ್ರಯವುಳ್ಳ ಸೂರ್ಯಪ್ರಕಾಶಕ್ಕೆ ನಿಮ್ಮ ದೇಶದಲ್ಲಿ ಆಶ್ರಯ ಕೊಡುವದು ಎಷ್ಟು ಅಸಂಗತವಾಗುವದೆಂಬುವದನ್ನು ನೀವೇ ಆಲೋಚಿಸಿ ನೋಡಿರಿ!»

**ಎರಡು ದೇಶಗಳ ನಡುವೆ ಸರಕುಗಳ ವಿನಿಮಯ ನಡಿಯಲಾಗಿ, ವಿನಿಮಯ ಹೊಂದಿದ ಎರಡೂ ಸರಕುಗಳ ಪರಸ್ಪರ ಬೆಲೆಯ ಪ್ರಮಾಣವು ಅವೆರಡೂ ದೇಶಗಳಲ್ಲಿ ಭಿನ್ನವಾಗಿದ್ದರೆ ಮಾತ್ರ ಪರದೇಶವ್ಯಾಪಾರದಿಂದ ಅವೆರಡೂ ದೇಶಗಳಿಗೆ ಹಿತವಾಗುವದು.**—ನಿರಾತಂಕ ವ್ಯಾಪಾರದ ಸಾಮಾನ್ಯ ತತ್ವಗಳನ್ನೂ, ಪರದೇಶವ್ಯಾಪಾರದಿಂದ ಉಂಟಾಗುವ ಪ್ರಯೋಜನಗಳನ್ನೂ ಇದು ವರೆಗೆ ವಿವರಿಸಿದೆವು. ಇನ್ನು ಮುಂದೆ ಎರಡು ದೇಶಗಳ ನಡುವೆ ಸರಕುಗಳ ಕೊಡಕೊಳ್ಳೋಣವು ನಡಿಯಲಾಗಿ, ಅದರಿಂದ ಉಂಟಾಗುವ ವಾಸ್ತವಿಕ ಪರಿಣಾಮವನ್ನು ವಿಚಾರಿಸುವ. ಉದಾಹರಣಾರ್ಥವಾಗಿ ಫ್ರಾನ್ಸ ಮತ್ತು ಇಂಗ್ಲಂಡ ದೇಶಗಳ ನಡುವೆ ನಡಿಯುವ ವ್ಯಾಪಾರವನ್ನು ತಕ್ಕೊಳ್ಳುವ. ಇಲ್ಲಿ ಮೊದಲು ಧ್ಯಾಸದಲ್ಲಿಡ ತಕ್ಕದ್ದೇನಂದರೆ, ಒಂದು ದೇಶದವರು ಒಂದು ಸರಕು ಮತ್ತೊಂದು ದೇಶದವರಿಗೆ ಕೊಟ್ಟು, ಅದಕ್ಕೆ ಬದಲಾಗಿ ಆ ದೇಶದಿಂದ ಮತ್ತೊಂದು ಸರಕು ಕೊಳ್ಳ ಬೇಕಾದರೆ, ಅವೆರಡೂ ಸರಕುಗಳ ಪರಸ್ಪರ ಬೆಲೆಯು ಪ್ರಮಾಣವು ಎರಡೂ ದೇಶಗಳಲ್ಲಿ ಭಿನ್ನವಾಗಿದ್ದ ಹೊರ್ತು ಈ ವ್ಯಾಪಾರದಿಂದ ಏನು ಲಾಭವಾಗದು. ಎರಡೂ ಸರಕುಗಳು ಒಂದು ದೇಶದಲ್ಲಿ ಮತ್ತೊಂದು

ದೇಶಕ್ಕಿಂತ ಅಗ್ಗವಾಗಿರ ಬಹುದು. ಆದರೂ ಇವೆರಡರ ಪರಸ್ಪರ ಬೆಲೆಯ ಪ್ರಮಾಣವು ಪ್ರತಿಯೊಂದು ದೇಶದಲ್ಲಿ ಬೇರೆಯಾಗಿದ್ದ ಹೊರ್ತು ಇವೆರಡೂ ಸರಕುಗಳ ವಿನಿಮಯವಾಗಲಿಕ್ಕಿಲ್ಲ. ಉದಾಹರಣಾರ್ಥವಾಗಿ, ಕೈಚೀಲಗಳೂ ಮದ್ಯವೂ ಇಂಗ್ಲಂಡಕ್ಕಿಂತಲೂ ಫ್ರಾನ್ಸದಲ್ಲಿ ಅಗ್ಗವಿರ ಬಹುದು. ಈ ಪ್ರಸಕ್ತಿಯಲ್ಲಿ ಫ್ರಾನ್ಸದವರು ಇಂಗ್ಲಂಡಕ್ಕೆ ಕೈಚೀಲಗಳನ್ನು ಕಳುಹಿಸಿ ಅವುಗಳಿಗೆ ಬದಲಾಗಿ ಮದ್ಯವನ್ನು ಎಂದಿಗೂ ಕೊಳ್ಳಲಿಕ್ಕಿಲ್ಲ. ಇದಕ್ಕೆ ವಿರುದ್ಧವಾಗಿ, ಫ್ರಾನ್ಸದಲ್ಲಿ ನಾಲ್ಕು ಜೋಡು ಕೈಚೀಲಗಳ ಬೆಲೆಯು ಒಂದು ಗ್ಯಾಲನ್ ಮದ್ಯಕ್ಕೆ ಸರಿಯಾಗಿದೆ ಎಂತಲೂ, ಅದೇ ಕಾಲಕ್ಕೆ ಇಂಗ್ಲಂಡದಲ್ಲಿ ನಾಲ್ಕು ಜೋಡು ಕೈಚೀಲಗಳ ಬೆಲೆಯು ಒಂದೂ ಕಾಲು ಗ್ಯಾಲನ್ ಮದ್ಯಕ್ಕೆ ಸರಿಯಾಗಿದೆಂತಲೂ ತಿಳಿಯುವ. ಹೀಗಾದ ಪಕ್ಷದಲ್ಲಿ, ಫ್ರೆಂಚ ವರ್ತಕನು ಇಂಗ್ಲಂಡಕ್ಕೆ ಕೈಚೀಲಗಳನ್ನು ಕಳುಹಿಸಿ ಮದ್ಯವನ್ನು ತರಿಸಿದರೆ, ಅವನಿಗೆ ಪ್ರತಿ ನಾಲ್ಕು ಜೋಡು ಕೈಚೀಲಗಳಿಗೆ ಕಾಲು ಗ್ಯಾಲನ್ ಮದ್ಯವು ಲಾಭವಾಗಿ ದೊರಿಯುವದು. ಆ ಕಾರಣ ಈ ಪ್ರಸಕ್ತಿಯಲ್ಲಿ ಇವೆರಡೂ ಸರಕುಗಳ ವಿನಿಮಯ ನಡಿಯುವದು ಎರಡೂ ದೇಶಗಳಿಗೆ ಲಾಭಕರವಾದದ್ದು. ಆದರೆ ಇದಕ್ಕೆ ವಿಪರೀತವಾಗಿ, ಕೈಚೀಲಗಳ ಹಾಗೂ ಮದ್ಯದ ಪರಸ್ಪರ ಬೆಲೆಯ ಪ್ರಮಾಣವು ಎರಡೂ ದೇಶಗಳಲ್ಲಿ ಒಂದೇ ಆಗಿದ್ದರೆ ಈ ಸರಕುಗಳು ವಿನಿಮಯ ಹೊಂದಲಿಕ್ಕಿಲ್ಲ. ಯಾಕಂದರೆ ಈ ವಿನಿಮಯದಿಂದ ವ್ಯಾಪಾರಸ್ಥನಿಗೆ ಏನು ಲಾಭವಾಗುವದಿಲ್ಲ. ಇಂಗ್ಲಂಡದಲ್ಲಿಯೂ ಫ್ರಾನ್ಸದಲ್ಲಿಯೂ ೪ ಜೋಡು ಕೈಚೀಲಗಳಿಗೆ ೧ ಗ್ಯಾಲನ್ ಮದ್ಯವು ಬರುತ್ತಿದ್ದರೆ, ಕೈಚೀಲಗಳನ್ನು ಮಾರುವ ಫ್ರೆಂಚ ವರ್ತಕನು ಮದ್ಯವನ್ನು ಮಾರುವ ಇಂಗ್ಲಿಷ ವರ್ತಕನ ಕೂಡ ಈ ವ್ಯಾಪಾರ ಎಂದಿಗೂ ಮಾಡಲಿಕ್ಕಿಲ್ಲ. ಯಾಕಂದರೆ ಈ ವ್ಯಾಪಾರದಿಂದ ಅವರಿಬ್ಬರಿಗೂ ಏನು ಲಾಭವಾಗುವದಿಲ್ಲ. ಇದರ ಮೇಲಿಂದ, ವಿನಿಮಯ ಮಾಡುವಂಥ ಎರಡೂ ದೇಶಗಳಲ್ಲಿ ವಿನಿಮಯವಾಗ ತಕ್ಕ ಸರಕುಗಳ ಪರಸ್ಪರ ಬೆಲೆಗಳ ಪ್ರಮಾಣವು ಬೇರೆ ಬೇರೆಯಾಗಿರುವದು ಅವಶ್ಯವಾದದ್ದೆಂಬುವದು ಸಿದ್ಧವಾಗುತ್ತದೆ. ಆದರೆ ಇದರಿಂದ, ಈ ಹೆಚ್ಚು ಕಡಿಮೆಯು ಎಷ್ಟು ಇರತಕ್ಕದ್ದೆಂಬ ಮಾತಿನ ನಿರ್ಣಯವಾಗುವದಿಲ್ಲ. ಈ ಹೆಚ್ಚು ಕಡಿಮೆಯು ಕನಿಷ್ಠ ಸರಕನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಒಯ್ಯುವದಕ್ಕೆ ಬೇಕಾಗುವ ಖರ್ಚು ಹೋಗಿ, ಸರಕು ಒಯ್ಯುವ ವರ್ತಕನಿಗೆ ಲಾಭ ಉಳಿಯುವಷ್ಟು ಇರತಕ್ಕದ್ದು. ಯಾಕಂದರೆ, ಯಾವದೊಂದು ಸರಕನ್ನು ಸ್ವದೇಶದಲ್ಲಿ ಮಾರಿದರೆ ಉಂಟಾಗುವ ಲಾಭಕ್ಕಿಂತಲೂ ಹೆಚ್ಚು ಲಾಭವು ಉಂಟಾಗದಿದ್ದರೆ, ಸರಕನ್ನು ದೇಶಾಂತರಕ್ಕೆ

ಕಳುಹಿಸುವ ಲುಕಸಾನಿನ ಹಾಗೂ ತೊಂದರೆಯ ವ್ಯಾಪಾರಕ್ಕೆ ಯಾರೂ ಕೈ ಹಾಕಲಿಕ್ಕಿಲ್ಲ.

**ವಿನಿಮಯವಾಗುವ ಸರಕುಗಳ ಧಾರಣೆ ಬೇಡಿಕೆ ಪೂರೈಕೆಗಳ ಸಮೀಕರಣವಾಗುವ ಹಾಗೆ ಹೆಚ್ಚುಕಡಿಮೆಯಾಗುವದು.**—ವಿನಿಮಯವಾಗುವ ಸರಕುಗಳ ಪರಸ್ಪರ ಬೆಲೆಗಳ ಪ್ರಮಾಣದಲ್ಲಿ ಕನಿಷ್ಠಪಕ್ಷಕ್ಕೆ ಇಂತಿಷ್ಟು ವ್ಯತ್ಯಾಸ ವಿರ ತಕ್ಕದ್ದೆಂದು ಮೇಲೆ ನಿರ್ಣೈಸಲ್ಪಟ್ಟಿತು. ಆದರೆ ಈ ವ್ಯತ್ಯಾಸವು ಕೆಲವು ಕಾಲ ಸರಕುಗಳನ್ನು ಒಯ್ಯುವ ಖರ್ಚು, ಮತ್ತು ಸರಕು ಕಳುಹಿಸುವವನಿಗೆ ಅಲ್ಪಸ್ವಲ್ಪ ಲಾಭ, ಇವುಗಳಲ್ಲದೆ ಹೆಚ್ಚು ಲಾಭ ಉಳಿಯುವಷ್ಟು ಇರುವದು. ಉದಾಹರಣಾರ್ಥವಾಗಿ, ಫ್ರಾನ್ಸದಲ್ಲಿ ಒಂದು ಟನ್ ಕಲ್ಲಿದ್ದಲಿಗೆ ೧ ಕ್ವಾರ್ಟರ ಗೋಧಿ ಬರುತ್ತದೆಂತಲೂ, ಅದೇ ಕಾಲಕ್ಕೆ ಇಂಗ್ಲಂಡದಲ್ಲಿ ಒಂದು ಟನ್ ಕಲ್ಲಿದ್ದಲಿಗೆ ೧/೨ ಕ್ವಾರ್ಟರ್ ಗೋಧಿ ಬರುತ್ತದೆಂತಲೂ ಕಲ್ಪಿಸುವ. ಇಂಗ್ಲಂಡದಲ್ಲಿ ಕಲ್ಲಿದ್ದಲಿಯ ವರ್ತಕನಿಗೆ ೧ ಟನ್ನಿಗೆ ೧/೨ ಕ್ವಾರ್ಟರ ಗೋಧಿ ಬಂದರೆ ಅವನು ತೃಪ್ತನಾಗುತ್ತಾನೆಂದು ಗ್ರಹಿಸುವ. ಈ ವರ್ತಕನಿಗೆ ಒಂದು ಟನ್ ಕಲ್ಲಿದ್ದಲಿಗೆ ಇಂಗ್ಲಂಡಕ್ಕಿಂತ ಫ್ರಾನ್ಸದಲ್ಲಿ ೧/೨ ಪಾಲು ಹೆಚ್ಚು ಗೋಧಿ ಬರುತ್ತದೆಂದು ತಿಳಿದ ಕೂಡಲೆ, ಅವನು ತನ್ನ ಸರಕು ಫ್ರಾನ್ಸಕ್ಕೆ ಕಳುಹಿಸುವ ನಿಶ್ಚಯ ಮಾಡುತ್ತಾನೆ. ಈ ಪ್ರಸಕ್ತಿಯಲ್ಲಿ, ಅವನು ಫ್ರಾನ್ಸಕ್ಕೆ ಕಳುಹಿಸಿದ ಪ್ರತಿಯೊಂದು ಟನ್ ಕಲ್ಲಿದ್ದಲಿಯ ಮೇಲೆ ೧/೨ ಕ್ವಾರ್ಟರ ಗೋಧಿಯೆಲ್ಲವೂ ಲಾಭವಾಗಿ ದೊರಿಯುವದೇ ಹ್ಯಾಗೆ, ಎಂಬ ಪ್ರಶ್ನೆ ಹುಟ್ಟುತ್ತದೆ. ೨ನೇ ಭಾಗದಲ್ಲಿ ಹೇಳಿದ ಈ ವಿಷಯದ ವಿವರಣೆಯನ್ನು ಜ್ಞಾಪಕಕ್ಕೆ ತಂದರೆ ಈ ಪ್ರಶ್ನದ ಉತ್ತರವು ಸಹಜವಾಗಿ ತಿಳಿಯುವದು. ಆ ಭಾಗದಲ್ಲಿ, ಯಾವದೊಂದು ಸರಕಿನ ಧಾರಣೆಯು ಅದರ ಬೇಡಿಕೆ ಪೂರೈಕೆಗಳ ಸಮೀಕರಣವಾಗುವ ಹಾಗೆ ನಿರ್ಣೈಸಲ್ಪಡುವದೆಂದು ಸಿದ್ಧ ಮಾಡಿಯದೆ. ಪ್ರಕೃತ ಉದಾಹರಣದಲ್ಲಿ, ಇಂಗ್ಲಿಷ ವರ್ತಕನು ಫ್ರಾನ್ಸಕ್ಕೆ ಕಲ್ಲಿದ್ದಲಿಯನ್ನು ಕಳುಹಿಸಿ, ಅದಕ್ಕೆ ಬದಲಾಗಿ ಗೋಧಿಯನ್ನು ತರಿಸುತ್ತಾನೆಂದು ಕಲ್ಪಿಸಿದ್ದೇವೆ. ಆ ಕಾರಣ, ಈ ವ್ಯವಹಾರದಿಂದ ಇಂಗ್ಲಂಡದಲ್ಲಿ ಆಮದಾದ ಗೋಧಿಯ ಪೂರೈಕೆ ಹೆಚ್ಚಾಗುವದು; ಹಾಗೂ ಇಂಗ್ಲಂಡದಲ್ಲಿಯೇ ಬೆಳೆದ ಗೋಧಿಯ ಬೇಡಿಕೆ ಕಡಿಮೆಯಾಗುವದು. ಇದರಂತೆಯೇ ಫ್ರಾನ್ಸಕ್ಕೆ ಹೋದ ಕಲ್ಲಿದ್ದಲಿಯಿಂದ ಫ್ರಾನ್ಸದಲ್ಲಿ ಕಲ್ಲಿದ್ದಲಿಯ ಪರಿಮಿತಿಯು ಹೆಚ್ಚಾಗುವ ಕಾರಣ, ಅಲ್ಲಿ ಕಲ್ಲಿದ್ದಲಿಯ ಬೇಡಿಕೆ ಕಡಿಮೆಯಾಗುವದು. ೨ನೇ ಭಾಗದಲ್ಲಿ ಬೆಲೆಯು ಏರುವ ಮತ್ತು ಇಳಿಯುವ ಕ್ರಮವನ್ನು ನಿರೂಪಿಸಿದ ಪ್ರಕಾರ, ಬೇರೆ ಸಂದರ್ಭಗಳೆಲ್ಲ ಯಥಾಪ್ರಕಾರ ಇರಲಾಗಿ,

ಯ್ಯಾವದೊಂದು ಸರಕಿನ ಬೇಡಿಕೆ ಹೆಚ್ಚಾಗಲು ಅದರ ಧಾರಣೆ ಏರುವದು, ಹಾಗೂ ಅದರ ಬೇಡಿಕೆ ಕಡಿಮೆಯಾದ ಮಾನದಿಂದ ಅದರ ಧಾರಣೆ ಇಳಿಯುವದು: ಅಂದರೆ, ಬೇಡಿಕೆ ಪೂರೈಕೆಗಳು ಒಂದಕ್ಕೊಂದು ಸಮಾನವಾಗುವ ಬಗೆಯಿಂದಲೇ ಯಾವದೊಂದು ಸರಕಿನ ಧಾರಣೆ ಏರುವದು, ಇಲ್ಲವೆ ಇಳಿಯುವದು. ಇದರ ಮೇಲಿಂದ ಸ್ಪಷ್ಟವಾಗುವದೇನಂದರೆ, ಇಂಗ್ಲಂಡ ಹಾಗೂ ಫ್ರಾನ್ಸ ದೇಶಗಳ ನಡುವೆ ಕಲ್ಲಿದ್ದಲಿ ಹಾಗೂ ಗೋಧಿಯನ್ನು ಕೊಡಕೊಳ್ಳುವ ವ್ಯವಹಾರವು ನಡಿಯುವದರಿಂದ ಇವೆರಡೂ ಸರಕುಗಳ ಧಾರಣೆ ಎರಡೂ ದೇಶಗಳಲ್ಲಿ ಹೆಚ್ಚು ಕಡಿಮೆಯಾಗುವದು. ಇಂಗ್ಲಂಡದಲ್ಲಿ ಕಲ್ಲಿದ್ದಲಿಗೆ ವಿಶೇಷ ಬೇಡಿಕೆ ಉಂಟಾದ್ದರಿಂದ ಕಲ್ಲಿದ್ದಲಿಯ ಧಾರಣೆ ಏರುವದು; ಹಾಗೂ ಗೋಧಿಯ ಪೂರೈಕೆ ಹೆಚ್ಚಾದ್ದರಿಂದ ಗೋಧಿಯ ಧಾರಣೆ ಇಳಿಯುವದು. ಫ್ರಾನ್ಸದಲ್ಲಿ ಇದಕ್ಕೆ ಕೇವಲ ವಿಪರೀತವಾದ ಪರಿಣಾಮವು ಗೋಚರವಾಗುವದು. ಅಲ್ಲಿ ಕಲ್ಲಿದ್ದಲಿಯ ಧಾರಣೆ ಇಳಿಯುವದು ಹಾಗೂ ಗೋಧಿಯ ಧಾರಣೆ ಏರುವದು. ಹೀಗಾಗಲಾಗಿ, ಕಲ್ಲಿದ್ದಲಿ ಹಾಗೂ ಗೋಧಿಯ ವಿನಿಮಯವು ಮೊದಲಿನ ಧಾರಣೆಗೆ ಆಗಲಿಕ್ಕಿಲ್ಲವೆಂಬುವದು ಸ್ಪಷ್ಟವಾಗಿದೆ. ಯಾಕಂದರೆ, ಎರಡೂ ದೇಶಗಳೊಳಗಿನ ಕಲ್ಲಿದ್ದಲಿಯ ವಿನಿಮಯ ಶಕ್ತಿಗಳ ವ್ಯತ್ಯಾಸವು ಮೊದಲಿನಂತೆ, ೩ ಕ್ವಾರ್ಟರ ಗೋಧಿಯಾಗಿರದು. ಇಂಗ್ಲಂಡದಲ್ಲಿ ಕಲ್ಲಿದ್ದಲಿಯ ವಿನಿಮಯ ಶಕ್ತಿಯು ಹೆಚ್ಚುವದು, ಅಂದರೆ ಒಂದು ಟನ್ ಕಲ್ಲಿದ್ದಲಿಗೆ ಮೊದಲಿನದಕ್ಕಿಂತ ಹೆಚ್ಚು ಗೋಧಿ ಬರುವದು. ಹಾಗೂ ಫ್ರಾನ್ಸದಲ್ಲಿ ಕಲ್ಲಿದ್ದಲಿಯ ವಿನಿಮಯ ಶಕ್ತಿಯು ಕಡಿಮೆಯಾಗುವದು, ಅಂದರೆ ಅಲ್ಲಿ ಒಂದು ಟನ್ ಕಲ್ಲಿದ್ದಲಿಗೆ ಮೊದಲಿನಷ್ಟು ಗೋಧಿ ಬರಲಿಕ್ಕಿಲ್ಲ. ಹಾಗೂ ಎರಡೂ ದೇಶಗಳ ವರ್ತಕರಲ್ಲಿ ಮೇಲಾಟವು ನಿರಂಕುಶವಾಗಿ ನಡಿದದ್ದೇ ಆದರೆ, ಕೊನೆಗೆ ಎರಡೂ ದೇಶಗಳೊಳಗಿನ ಕಲ್ಲಿದ್ದಲಿ ಗೋಧಿಗಳ ಧಾರಣೆಗಳೊಳಗಿನ ವ್ಯತ್ಯಾಸವು, ಆ ಸರಕುಗಳನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಒಯ್ಯುವ ಖರ್ಚು, ಹಾಗೂ ಸರಕುಗಳನ್ನು ದೇಶಾಂತರಕ್ಕೆ ಕಳಿಸುವ ಬಂಡವಲಗಾರನ ಶ್ರಮ ಸಾಹಸಗಳಿಗೆ ಯೋಗ್ಯ ಪ್ರತಿಫಲ, ಇಷ್ಟು ಮಾತ್ರ ಹುಟ್ಟುವಷ್ಟು ಆಗುವದು. ಯಾವದೊಂದು ಸರಕನ್ನು ಹುಟ್ಟಿಸುವವರೊಳಗೆ ಮೇಲಾಟವು ನಿರಾತಂಕವಾಗಿ ನಡಿಯುವ ಮಟ್ಟಿಗೆ, ಆ ಸರಕಿನ ಕ್ರಯವು ಅದನ್ನು ಉತ್ಪನ್ನ ಮಾಡುವ ಖರ್ಚನ್ನು ಅನುಸರಿಸುವದು. ದೇಶದೊಳಗೆ ಆಮದಾಗುವ ಸರಕುಗಳ ಉತ್ಪನ್ನ ಮಾಡುವ ಖರ್ಚಿನಲ್ಲಿ, ಎಷ್ಟೋ ಸಾರಿ, ಆ ಸರಕುಗಳನ್ನು ತರುವ ಖರ್ಚಿನ ಅಂಶವು ವಿಶೇಷವಾಗಿರುವದು.

ಆದರೆ, ಆಮುದರಫಗಳ ಮೇಲಿನ ಯಾವತ್ತು ಕಪ್ಪಗಳನ್ನು ತೆಗೆದು ಹಾಕಿದಾಗ, ಬೇರೆ ಬೇರೆ ದೇಶಗಳಲ್ಲಿ ಯಾವದೊಂದು ಸರಕಿನ ಧಾರಣೆಯೊಳಗಿನ ಹೆಚ್ಚುಕಡಿಮೆಗೆ ಸರಕುಗಳನ್ನು ತರುವ ಖರ್ಚೇ ಮುಖ್ಯ ಕಾರಣವಾಗುವದು. ಸರಕುಗಳು ಬರಹೋಗುವದಕ್ಕೆ ಸರಕಾರದ ಕಟ್ಟಳೆಗಳಿಂದ ಏನು ಪ್ರತಿಬಂಧವಿಲ್ಲದಂಥ ಎರಡು ಪ್ರಾಂತಗಳ ನಡುವೆ ಸರಕುಗಳನ್ನು ಕೊಡಕೊಳ್ಳುವ ವ್ಯವಹಾರವು ನಡಿಯುವ ಉದಾಹರಣವನ್ನು ತಕ್ಕೊಂಡರೆ, ಈ ಅಂಶವು ವಿಶೇಷ ವಿಶದವಾಗ ಬಹುದು. ಉದಾಹರಣಾರ್ಥವಾಗಿ, ಲ್ಯಾಂಕ್ಯಾ ಶಾಯರದಲ್ಲಿ ನೂಲಿನ ವಸ್ತ್ರಗಳಾಗುವವು, ಲಿಂಕನ್ ಶಾಯರದಲ್ಲಿ ಗೋಧಿಯು ಬಹಳ ಬೆಳೆಯುವದು. ಇವೆರಡೂ ಪ್ರಾಂತಗಳ ನಡುವೆ ಸರಕುಗಳನ್ನು ಕೊಡಕೊಳ್ಳುವ ವ್ಯವಹಾರವು ಅಬಾಧಿತವಾಗಿ ನಡಿಯುವದಕ್ಕೆ ಅಡ್ಡಿ ಇದ್ದದ್ದುಂಟಾದರೆ, ಲಿಂಕನ್ ಶಾಯರದೊಳಗಿನ ಹಾಗೂ ಲ್ಯಾಂಕ್ಯಾ ಶಾಯರದೊಳಗಿನ ಗೋಧಿ, ನೂಲಿನ ವಸ್ತ್ರ, ಇವುಗಳ ಪರಸ್ಪರ ಬೆಲೆಯು ಪ್ರಮಾಣದಲ್ಲಿ ಬಹಳ ಹೆಚ್ಚು ಕಡಿಮೆಯಾಗುವದು. ಆದರೆ, ಈಗಿನ ವಾಸ್ತವ ಸ್ಥಿತಿಯನ್ನು ನೋಡಿದ್ದಾದರೆ, ಲ್ಯಾಂಕ್ಯಾ ಶಾಯರ ಹಾಗೂ ಲಿಂಕನ್ ಶಾಯರಗಳೊಳಗಿನ ನೂಲಿನ ವಸ್ತ್ರ ಹಾಗೂ ಗೋಧಿ ಇವುಗಳ ಧಾರಣೆಗಳೊಳಗಿನ ಹೆಚ್ಚುಕಡಿಮೆಯು ಆ ಸರಕುಗಳನ್ನು ಒಂದು ಕೌಂಟಿಯಿಂದ ಮತ್ತೊಂದು ಕೌಂಟಿಗೆ ಒಯ್ಯುವದಕ್ಕೆ ತಾಗುವ ಖರ್ಚಿಗಿಂತಲೂ ಎಂದಿಗೂ ಹೆಚ್ಚಾಗಿರುವದಿಲ್ಲ. ಫ್ರಾನ್ಸದಲ್ಲಿ ರಾಜ್ಯಕ್ರಾಂತಿಯಾಗುವದಕ್ಕಿಂತ ಮುಂಚೆ ಸ್ವದೇಶದ ಉದ್ಯೋಗಸಂರಕ್ಷಣದ ಹುಚ್ಚು ಪ್ರಬಲವಾಗಿದ್ದ ಕಾರಣ, ಅಲ್ಲಿ ಗೋಧಿಯನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕಳುಹಿಸುವದಕ್ಕೆ ಬರುತ್ತಿದ್ದಿಲ್ಲ. ಇದರಿಂದ ಗೋಧಿಯ ಧಾರಣೆ ಊರೂರಿಗೆ ಬದಲಾಗುತ್ತಿತ್ತು. ಒಂದು ಕಡೆಯಲ್ಲಿ ಗೋಧಿಯು ವಿಪುಲವಾಗಿ ಬೆಳೆದದ್ದರಿಂದ ಅಗ್ಗವಾಗಿರುವದು, ಬೇರೆ ಕಡೆಯಲ್ಲಿ ಪೈರು ಕೆಟ್ಟು ಹೋದ್ದರಿಂದ ಬಹಳ ತುಟ್ಟಿಯಾಗಿರುವದು.

ರಫ್ತವಾಗುವ ಸರಕಿನ ಪೂರೈಕೆಯು ಬೇಡಿಕೆಗ್ಗೆ ಸರಿಯಾಗುವ ಕ್ರಮವು.—ಧಾರಣೆ ಏರಿ, ಇಲ್ಲವೆ ಇಳಿದು, ಯಾವದೊಂದು ರಫ್ತವಾದ ಸರಕಿನ ಪೂರೈಕೆಯು ಅದರ ಬೇಡಿಕೆಗೆ ಸರಿಯಾಗುವ ರೀತಿಯನ್ನು ಸುಲಭವಾಗಿ ತಿಳುಕೊಳ್ಳ ಬಹುದು. ಫ್ರಾನ್ಸ ದೇಶಕ್ಕೆ ಕಲ್ಲಿದ್ದಲಿಯನ್ನು ಕಳುಹಿಸಿದ ವರ್ತಕನಿಗೆ ಒಂದು ಟನ್ ಕಲ್ಲಿದ್ದಲಿಗೆ ಒಂದು ಕ್ವಾರ್ಟರ್ ಗೋಧಿ ಬಂದರೆ ಮಿತಿಮೀರಿ ಲಾಭ ಬಂದ ಹಾಗಾಗುವದೆಂದು ಮೇಲೆ ಗ್ರಹಿಸಲ್ಪಟ್ಟದೆ. ಆದಕಾರಣ, ಆ ಇಂಗ್ಲಿಷ

ವರ್ತಕನು ತನ್ನ ಕೈಲಾದಷ್ಟು ಹೆಚ್ಚು ಕಲ್ಲಿದ್ದಲಿಯನ್ನು ಫ್ರಾನ್ಸಕ್ಕೆ ಕಳುಹಿಸುವದಕ್ಕೆ ಯತ್ನೈಸುವನು. ಅವನಂತೆಯೇ ಹೆಚ್ಚಿನ ಲಾಭವನ್ನು ಪಡಕೊಳ್ಳ ಬೇಕೆಂಬ ಆಶೆಯಿಂದ ಬೇರೆ ವರ್ತಕರೂ ಕಲ್ಲಿದ್ದಲಿಯನ್ನು ಕಳಿಸ ಹತ್ತುವರು. ಈ ಪ್ರಕಾರ ಫ್ರಾನ್ಸದಲ್ಲಿ ಕಲ್ಲಿದ್ದಲಿಯ ಪೂರೈಕೆ ಬಹಳವಾಗುವದು; ಮತ್ತು ಈ ಹೆಚ್ಚಿನ ಪೂರೈಕೆಗೆ ಗಿರಾಕಿಗಳು ದೊರಿಯ ಬೇಕಾದರೆ, ಅದರ ಕ್ರಯ ಇಳಿಸುವದು ವ್ಯಾಪಾರಸ್ಥರಿಗೆ ಅಗತ್ಯವಾಗುವದು. ಅದೇ ಕಾಲಕ್ಕೆ ಇಂಗ್ಲಂಡದಲ್ಲಿ ಕಲ್ಲಿದ್ದಲಿಯ ಪೂರೈಕೆ ಕಡಿಮೆಯಾಗಿರುವ ಕಾರಣ ಅಲ್ಲಿ ಅದರ ಧಾರಣೆ ಏರುವದು. ಈ ಪ್ರಕಾರ ಇಂಗ್ಲಂಡದಿಂದ ಕಲ್ಲಿದ್ದಲಿಯು ರಫ್ತವಾಗುವದಕ್ಕೆ ಎರಡು ಮಾರ್ಗಗಳಿಂದ ಪ್ರತಿಬಂಧವಾಗುವದು. ಕಲ್ಲಿದ್ದಲಿಯ ಧಾರಣೆ ಇಂಗ್ಲಂಡದಲ್ಲಿ ಏರಿರುವದು, ಫ್ರಾನ್ಸದಲ್ಲಿ ಇಳಿದಿರುವದು. ವರ್ತಕರಿಗೆ ಇಂಗ್ಲಂಡಕ್ಕಿಂತಲೂ ಫ್ರಾನ್ಸದಲ್ಲಿ ೭ ಕ್ವಾರ್ಟರಿನಷ್ಟು ಹೆಚ್ಚು ಗೋಧಿ ದೊರಿಯುವದಿಲ್ಲ. ಕಟ್ಟಕಡೆಗೆ, ಕಲ್ಲಿದ್ದಲಿಯನ್ನು ಫ್ರಾನ್ಸಕ್ಕೆ ಕಳುಹಿಸುವದಕ್ಕೆ ತಾಗುವ ಖರ್ಚು ಹಾಗೂ ಕಳುಹಿಸಿದವರ ಸಾಹಸದ ಪ್ರತಿಫಲ, ಇಷ್ಟು ಮಾತ್ರ ಹುಟ್ಟುವಷ್ಟು ಬೆಲೆ ಅವರ ಕಲ್ಲಿದ್ದಲಿಗೆ ಬರುವದೇ ಹೊರ್ತು, ಹೆಚ್ಚು ಬರಲಿಕ್ಕಿಲ್ಲ.

**ಅನ್ಯೋನ್ಯ ಸಮ ವ್ಯಾಪಾರ.**— ಯಾವದೊಂದು ದೇಶಕ್ಕೆ ಪರದೇಶ ವ್ಯಾಪಾರದಿಂದ ಲಭಿಸುವ ಪ್ರಯೋಜನಗಳನ್ನು ಕುರಿತು ಅನೇಕ ತಪ್ಪು ಗ್ರಹಿಕೆಗಳು ಹಬ್ಬುಗೊಂಡಿರುವವು. "ವಿನಿಮಯವು ಅನ್ಯೋನ್ಯವಾಗಿರ ಬೇಕು, ಅಂದರೆ ಎರಡು ದೇಶಗಳ ನಡುವೆ ವ್ಯಾಪಾರ ನಡಿಯಲಾಗಿ ಅವೆರಡೂ ದೇಶದವರು ಒಬ್ಬರೊಬ್ಬರ ಸರಕುಗಳ ವಿನಿಮಯ ಮಾಡ ಬೇಕು. ನಮ್ಮ ಸಂಗಡ ವ್ಯಾಪಾರ ಮಾಡುವ ಪರದೇಶದವರು ನಮ್ಮಲ್ಲಿ ಹುಟ್ಟುವ ಸರಕು ತಕ್ಕೊಂಡ ಹೊರ್ತು ನಾವು ಅವರ ಸರಕು ತಕ್ಕೊಳ್ಳ ಬಾರದು", ಎಂದು ಕೆಲವರು ಪ್ರತಿಪಾದಿಸುವದುಂಟು. ಆದರೆ, ಈ ತತ್ವವನ್ನು ಪ್ರತಿಪಾದಿಸುವವರು ಇದೇ ತತ್ವವನ್ನು ನಾಲ್ಕೂಕಡೆಯಲ್ಲಿ ಸಮನಾಗಿ ಹಚ್ಚುವದಿಲ್ಲ. ಉದಾಹರಣಾರ್ಥವಾಗಿ, ಚೀನ ದೇಶದಿಂದ ಇಂಗ್ಲಂಡಕ್ಕೆ ಚಹಎಲೆ ಬಹಳ ಬರುವದು. ಈ ಚಹಎಲೆಗೆ ಬದಲಾಗಿ ಚೀನ ದೇಶದವರು ಇಂಗ್ಲಂಡದವರಿಂದ ಕೆಲವು ಕಾಲ ಬೆಳ್ಳಿಯ ರೋಖ ಹಣವನ್ನೇ ಒಯ್ಯುತ್ತಿದ್ದರು, ಸರಕುಗಳನ್ನು ತಕ್ಕೊಳ್ಳುತ್ತಿದ್ದಿಲ್ಲ. ಇದರಿಂದ ಚೀನ ದೇಶದವರಿಗೆ ಬಹಳ ಹಾನಿಯಾದರೂ ಆಗಿರ ಬಹುದು. ಆದರೆ ಇದರಿಂದ ಇಂಗ್ಲಂಡದವರಿಗೆ ಏನು ಕೇಡಾಗಲಿಲ್ಲ. ಈ ಪ್ರಸಕ್ತಿಯಲ್ಲಿ, ಚೀನ ದೇಶದವರು ಚಹಕ್ಕೆ ಬದಲಾಗಿ ಇಂಗ್ಲಂಡದ ಕೈಗಾರಿಕೆಗಳನ್ನು ತಕ್ಕೊಳ್ಳುವ ವರೆಗೆ ಚೀನ ದೇಶದ

ಚಹವನ್ನು ಇಂಗ್ಲಂಡದವರು ತಮ್ಮ ದೇಶದಲ್ಲಿ ಬರಗೊಡ ಬಾರದಾಗಿತ್ತೆಂದು ಹೇಳುವದಕ್ಕೆ ಈ ಪ್ರತಿಪಾದಕರಿಗೆ ಎಷ್ಟು ಮಾತ್ರವೂ ಧೈರ್ಯ ಸಾಲದು.

**ಎರಡು ದೇಶಗಳ ನಡುವೆ ವಿನಿಮಯ ನಡಿಯಲು, ಅವುಗಳಲ್ಲಿ ಪ್ರತಿಯೊಂದು ದೇಶದ ಲಾಭವು ಆ ದೇಶಕ್ಕಿದ್ದ ಹೊರಗಿಂದ ಬರುವ ಸರಕಿನ ಬೇಡಿಕೆಯ ವ್ಯತ್ಕ್ರಮ ಪ್ರಮಾಣದಿಂದ ಹೆಚ್ಚುಕಡಿಮೆಯಾಗಿರುವದು.**— ಎರಡು ದೇಶಗಳ ನಡುವೆ ಸರಕುಗಳ ವಿನಿಮಯ ನಡಿಯಲಾಗಿ, ಯಾವ ದೇಶಕ್ಕೆ ಹೊರಗಿಂದ ಬರುವ ಸರಕುಗಳ ಅವಶ್ಯಕತೆ ಕಡಿಮೆ ಇರುವದೋ ಆ ದೇಶಕ್ಕೆ ಬಹಳ ಲಾಭ ಉಂಟಾಗುವದು. ಈ ಪ್ರಕಾರ, ಹಿಂದೆ ತಕ್ಕೊಂಡ ಉದಾಹರಣ ದಲ್ಲಿ, ಫ್ರಾನ್ಸದಲ್ಲಿ ಕಲ್ಲಿದ್ದಲಿಗೆ ಬೇಡಿಕೆ ಹೆಚ್ಚಾದ ಪ್ರಮಾಣದಿಂದ ಕಲ್ಲಿದ್ದಲಿಯ ಧಾರಣೆ ಏರುವ ಕಾರಣ, ಇಂಗ್ಲಂಡದಿಂದ ಕಲ್ಲಿದ್ದಲಿಯನ್ನು ತರುವವರಿಗೆ ವಿಶೇಷ ಲಾಭವಾಗುವದು; ಅಂದರೆ ಅವರು ತಂದ ಕಲ್ಲಿದ್ದಲಿಗೆ ಬೇರೆ ಸರಕುಗಳು ಹೆಚ್ಚು ಬರುವವು. ಆದರೆ ಈ ಪ್ರಕಾರ ಏರಿದ ಧಾರಣೆ ಬಹು ಕಾಲ ನಿಲ್ಲಲಿಕ್ಕಿಲ್ಲ. ಯಾ ಕೆಂದರೆ ಧಾರಣೆ ಏರಿದ ಕೂಡ್ಲೆ ಕಲ್ಲಿದ್ದಲಿಯು ಹೆಚ್ಚುಹೆಚ್ಚಾಗಿ ಬರ ಹತ್ತುವದು. ಮತ್ತು ಕಲ್ಲಿದ್ದಲಿಯ ಏರಿದ ಧಾರಣೆ ಕಡೆತನಕ ಹಾಗೇ ಉಳಿದದ್ದಾದರೆ, ಇದರ ಮೇಲಿಂದ ಕಲ್ಲಿದ್ದಲಿಯ ಬೇಡಿಕೆ ವಿಶೇಷವಾದ ಕಾರಣ ಕಡಿಮೆ ಹುಟ್ಟುವಳಿಯ ಕಣಿಗಳು ಅಗಿಯಲ್ಪಟ್ಟು, ಕಲ್ಲಿದ್ದಲಿಯನ್ನು ಉತ್ಪನ್ನ ಮಾಡುವ ಖರ್ಚೇ ಏರಿದೆ, ಎಂದು ತಿಳಿಯ ತಕ್ಕದ್ದು.

ಪರದೇಶವ್ಯಾಪಾರದಿಂದ ಪ್ರತಿಯೊಂದು ದೇಶದವರಿಗೆ ತಮ್ಮ ದೇಶದಲ್ಲಿ ಅತ್ಯುತ್ಕೃಷ್ಟವಾಗಿಯೂ ಅತಿ ಸುಲಭವಾಗಿಯೂ ನಡಿಯುವಂಥ ಉದ್ಯೋಗಗ ಳಲ್ಲಿಯೇ ಬಂಡವಲ ಶ್ರಮಗಳನ್ನು ನಿಯೋಜಿಸುವದಕ್ಕೆ ಅನುಕೂಲವಾಗುವ ಕಾರಣ, ಇಡೀ ಜಗತ್ತಿನ ಉತ್ಪಾದಕ ಶಕ್ತಿಯು ಅಭಿವೃದ್ಧಿಯಾಗುವದು. ಪರ ದೇಶವ್ಯಾಪಾರದಿಂದ ಆಗ ತಕ್ಕಂಥ ಪ್ರತ್ಯಕ್ಷ ಪ್ರಯೋಜನವು ಇದೇ, ಎಂಬುವದನ್ನು ಸ್ಮರಣದಲ್ಲಿಡ ತಕ್ಕದ್ದು. ಈ ವ್ಯಾಪಾರವು ನಡಿಯುವ ಮಟ್ಟಿಗೆ, ಸರಕುಗಳೆಲ್ಲ ಆದಷ್ಟು ಕಡಿಮೆ ಬಂಡವಲ ಶ್ರಮಗಳ ವೆಚ್ಚದಿಂದ ಹುಟ್ಟುತ್ತವೆ. ಈ ವಿಷಯ ವನ್ನು ಕುರಿತು ಮಿಲ್ ಧೊರೆಯು ಈ ಪ್ರಕಾರ ಹೇಳಿದ್ದಾನೆ:—"ವ್ಯಾಪಾರದಿಂದ ಯಾವದೊಂದು ದೇಶಕ್ಕೆ ಉಂಟಾಗುವ ಹಿತವನ್ನು ಕುರಿತು, ಸರ್ವಸಾಧಾರಣ ವಾಗಿ ಜನರ ಮನಸಿನಲ್ಲಿ ತಪ್ಪು ಗ್ರಹಿಕೆಗಳು ವಾಸ ಮಾಡಿಕೊಂಡಿರುವವು. ವ್ಯಾಪಾರವು ದೇಶದ ಸಂಪದಭಿವೃದ್ಧಿಗೆ ಕಾರಣವಾದದ್ದೆಂದು ಹೇಳುವಾಗ, ಜನರ ದೃಷ್ಟಿಯು ವ್ಯಾಪಾರದಿಂದ ವರ್ತಕರಿಗೆ ಉಂಟಾಗುವ ಅಮಿತ ದ್ರವ್ಯಸಂಪಾದ

ನದ. ಕಡೆಗೆ ಮಾತ್ರ ಹೋಗುತ್ತದೇ ಹೊರ್ತು, ಅದರಿಂದ ಪದಾರ್ಥಗಳನ್ನು ಕೊಳ್ಳುವವರಿಗೆ ಪದಾರ್ಥಗಳು ಅಗ್ಗ ದೊರಿಯುತ್ತವೆಂಬದರ ಕಡೆಗೆ ಹೋಗುವದಿಲ್ಲ. ಆದರೆ ಪರದೇಶಗಳ ಕೂಡ ವ್ಯಾಪಾರ ನಡಿಸಿದರೇನು, ಅಥವಾ ಸ್ವದೇಶದಲ್ಲಿಯೇ ಯಾವದೊಂದು ಉದ್ಯೋಗದಲ್ಲಿ ಬಂಡವಲ ಹಾಕಿದರೇನು, ವರ್ತಕರಿಗೆ ಉಂಟಾಗುವ ಲಾಭವು ಅಷ್ಟೇ ಆಗುವದು. ಆ ಕಾರಣ, ಪರದೇಶವ್ಯಾಪಾರದಿಂದ ವರ್ತಕರಿಗೆ ಬೇರೆ ರೀತಿಯಿಂದ ಆಗದಂಥ ವಿಶೇಷ ಲಾಭವೇನೂ ಉಂಟಾಗುತ್ತದೆಂಬುವ ಹಾಗಿಲ್ಲ. ಅವರಿಗೆ ವ್ಯಾಪಾರ ವಿಷಯದ ವಿಶೇಷ ಹಕ್ಕುಗಳು ಶಿಕ್ಕಿದ್ದರೆ ಮಾತ್ರ ಆ ಮಾತು ಬೇರೆ. ವಸ್ತುತಃ ವ್ಯಾಪಾರವೆಂಬುವದೊಂದು ಸರಕುಗಳು ಕಡಿಮೆ ಖರ್ಚಿನಿಂದ ಉತ್ಪನ್ನವಾಗುವ ಹಾಗೆ ಮಾಡುವ ಸಾಧನವಾಗಿದೆ. ಹಾಗೂ ಇಂಥ ಯಾವತ್ತು ಪ್ರಸಕ್ತಿಗಳಲ್ಲಿ ಕೊನೆಗೆ ಸುಖ ಹೊಂದುವವರು ಸರಕುಗಳನ್ನು ಸಂಸಾರ ಕೃತ್ಯಗಳಲ್ಲಿ ಉಪಯೋಗಿಸುವವರೇ. ಸರಕುಗಳನ್ನು ಕೊಳ್ಳುವವರ ಹಣಕ್ಕೆ ಸ್ವಲ್ಪ ಸರಕುಗಳೇ ಬರಲಿ, ಬಹಳ ಸರಕುಗಳೇ ಬರಲಿ, ವ್ಯಾಪಾರಸ್ಥರು ಕೊನೆಯಲ್ಲಿ ತಮ್ಮ ಲಾಭವನ್ನು ತಕ್ಕೊಂಡೇ ತಕ್ಕೊಳ್ಳುವರು."

ಪರದೇಶವ್ಯಾಪಾರದಿಂದ ಅರ್ಥಶಾಸ್ತ್ರದೃಷ್ಟ್ಯಾ ಉಂಟಾಗುವ ಪ್ರಯೋಜನಗಳಲ್ಲದೆ, ನೀತಿ ಹಾಗೂ ಜ್ಞಾನ ಇವುಗಳಿಗೆ ಸಂಬಂಧಿಸಿದ ಕೆಲ ಅತ್ಯಂತ ಗೌರವವುಳ್ಳ ಪರಿಣಾಮಗಳೂ ಉಂಟಾಗುವವು. ಪರದೇಶವ್ಯಾಪಾರವು ಜಗತ್ತಿನೊಳಗಿನ ಯಾವತ್ತು ಜನಾಂಗದವರೊಳಗೆ ಪರಸ್ಪರ ಸಂಬಂಧವನ್ನುಂಟು ಮಾಡುವದು. ರಾಷ್ಟ್ರಗಳಿಗೆ ನಾಗರಿಕತೆಯನ್ನು ಕಲಿಸುವಲ್ಲಿ ಇದೇ ಅತ್ಯಂತ ಶ್ರೇಷ್ಠವಾದ ಸಾಧನವು; ಸರ್ವತ್ರ ಶಾಂತತೆಯು ನೆಲೆಗೊಳ್ಳುವದಕ್ಕೆ ಇದೇ ಮುಖ್ಯವಾದ ಹೊಣೆಯು. ಪರದೇಶವ್ಯಾಪಾರದಿಂದ ಅತ್ಯಂತ ದೂರವಾದ ಜನಾಂಗಗಳ ನಡುವೆ ಸಹ ಪರಸ್ಪರ ವ್ಯವಹಾರವು ಸತತವಾಗಿ ನಡಿಯುವ ಕಾರಣ, ಪ್ರತಿಯೊಂದು ಜನಾಂಗದವರು ತಮ್ಮ ದೇಶದ ಕಟ್ಟಳೆಗಳನ್ನೂ, ಸಂಸ್ಥೆಗಳನ್ನೂ, ನಡೆನುಡಿಗಳನ್ನೂ, ಪರಕೀಯರ ಕಟ್ಟಳೆ ಮೊದಲಾದವುಗಳಿಗೆ ಹೊಂದಿಸಿ ನೋಡಿ, ಅವುಗಳ ಒಳಿತು ಹೀನಗಳನ್ನು ತಿಳುಕೊಂಡು, ಅವರ ಸದುದಾಹರಣಗಳನ್ನು ಅನುಸರಿಸುವರು, ಅವರಿಗುಂಟಾದ ಕೇಡು ನೋಡಿ, ತಾವು ಬುದ್ಧಿಗಲಿಯುವರು. ಇಷ್ಟೇ ಅಲ್ಲ. ಪರದೇಶವ್ಯಾಪಾರದಿಂದ ಮತ್ತೊಂದು ಅತ್ಯಂತ ಹಿತಕರವಾದ ಪ್ರಯೋಜನ ಉಂಟು. ಅದೇನಂದರೆ, ಪರರಾಷ್ಟ್ರಗಳ ಅಹಿತಗಳೇ ತಮ್ಮ ಹಿತಗಳೆಂಬ ಸಾರ್ವತ್ರಿಕ ತಿಳುವಳಿಕೆಯು ಹಿಂದಕ್ಕೆ ಬಿದ್ದು, ಪರರಾಷ್ಟ್ರಗಳ ಐಶ್ವರ್ಯಾಭ್ಯುದಯಗಳಿಂದ ತಮಗೂ ಪ್ರತ್ಯಕ್ಷ ಹಿತವಾಗುವದೆಂಬ ಭಾವನೆಯು ಯಾವತ್ತು ರಾಷ್ಟ್ರಗಳಲ್ಲಿ ಉದ್ಭವಿಸುವದು.

ನಿರಾತಂಕ ವ್ಯಾಪಾರದ ಪ್ರತಿಪಕ್ಷಿಗಳು ಸ್ವಮತಪುಷ್ಟ್ಯರ್ಥವಾಗಿ ಮಾಡಿದ ಯಾವತ್ತು ಪ್ರತಿಪಾದನಗಳಲ್ಲಿ ಕೆಳಗೆ ಬರೆದ ಪ್ರತಿಪಾದನವು ಎಲ್ಲಕ್ಕೂ ಹೆಚ್ಚು ಬಲವಾದದ್ದೆಂದು ಎಣಿಸಲ್ಪಟ್ಟಿದೆ.— ಈ ಪ್ರತಿಪಕ್ಷಿಗಳು ಪ್ರತಿಪಾದಿಸುವದೇನಂದರೆ:— "ಯಾವದೊಂದು ರಾಷ್ಟ್ರದವರು ಪರದೇಶಗಳ ಕೂಡ ವ್ಯಾಪಾರ ನಡಿಸಲಾಗಿ ಆ ದೇಶದಿಂದ ಹೊರಗೆ ಹೋಗುವ ಸರಕುಗಳ ಕ್ರಯ ಏರುವದು, ಹಾಗೂ ಹೊರಗಿಂದ ಬರುವ ಸರಕುಗಳ ಕ್ರಯ ಇಳಿಯುವದು. ಈ ಮಾತು ಯುಕ್ತಿಗೆ ಸರಿಯಾದದ್ದೂ, ಅನುಭವದಿಂದ ಮನಗಂಡದ್ದೂ, ಆಗಿರುವದು. ಹೊರಗೆ ರಫ್ತವಾಗುವ ಸರಕುಗಳಿಗೆ ದೇಶದಲ್ಲಿ ಬೇಡಿಕೆ ಹೆಚ್ಚಾಗುವ ಕಾರಣ ಅವು ತುಟ್ಟಿಯಾಗುವವು. ಹೊರಗಿಂದ ಆಮದಾದ ಸರಕುಗಳ ಪೂರೈಕೆ ಹೆಚ್ಚುವದರಿಂದ ಅವು ಅಗ್ಗವಾಗುವವು. ಅಮೇರಿಕೆಯಂಥ ದೇಶದಿಂದ (ಹಿಂದುಸ್ತಾನಕ್ಕೂ ಇದೇ ಮಾತು ಸರಿಬೀಳುತ್ತದೆ) ಹೊರಗೆ ಹೋಗುವಂಥ ಸರಕುಗಳು ಮುಖ್ಯವಾಗಿ ಅಕ್ಕಿ, ಗೋಧಿ ಮೊದಲಾದ ಜೀವನಕ್ಕೆ ಅತ್ಯಂತ ಅವಶ್ಯವಾದ ಬೇಸಾಯದ ಹುಟ್ಟುವಳಿಗಳೇ. ರಫ್ತವಾಗುವಂಥ ಈ ಸರಕುಗಳಿಗೆ ಬದಲಾಗಿ ಪರದೇಶಗಳಿಂದ ಕಾಜಿನ ಪಾತ್ರೆಗಳು, ಜರತಾರಿಯ ಒಡವೆಗಳು ಮೊದಲಾದ ವಿಲಾಸದ ಒಡವೆಗಳು ಮಾತ್ರ ಬರುವವು. ಇದರಿಂದ ಆ ದೇಶದಲ್ಲಿ ಉಪಜೀವನಕ್ಕೆ ಅತ್ಯವಶ್ಯವಾದ ಪದಾರ್ಥಗಳು ತುಟ್ಟಿಯಾಗಿ, ವಿಲಾಸದ ಒಡವೆಗಳು ಮಾತ್ರ ಅಗ್ಗವಾಗುವದರಿಂದ, ಈ ಬಗೆಯ ಪರದೇಶವ್ಯಾಪಾರವು ದೇಶದೊಳಗಿನ ಲೋಕ ಸಮುದಾಯದ ದೊಡ್ಡ ಭಾಗಕ್ಕೆ, ಅಂದರೆ ಮಧ್ಯಮ ಹಾಗೂ ಕನಿಷ್ಠ ಸ್ಥಿತಿಯ ಜನರಿಗೆ ಅತ್ಯಂತ ಅಹಿತಕರವಾಗುವದು". ಆದರೆ ಈ ಪ್ರತಿಪಾದನಲ್ಲಿದ್ದ ದೋಷವೇನಂದರೆ, ಇದರಲ್ಲಿ ಪರದೇಶವ್ಯಾಪಾರದಿಂದುಂಟಾಗುವ ಒಂದು ದೊಡ್ಡ ಲಾಭವನ್ನು ಲಕ್ಷ್ಯಕ್ಕೆ ತರಲಿಲ್ಲ. ಈ ಲಾಭವು ಯಾವದಂದರೆ, ಪರದೇಶವ್ಯಾಪಾರದಿಂದ ಪ್ರತಿಯೊಂದು ದೇಶದವರಿಗೆ ಸ್ವಾಭಾವಿಕವಾಗಿ ವಿಶೇಷ ಅನುಕೂಲವಾದ ಸರಕುಗಳನ್ನೇ ಹುಟ್ಟಿಸುವದಕ್ಕೆ ಬರುವ ಹಾಗೆ ಶ್ರಮ ವಿಭಾಗವು ಉಂಟಾಗುವದು. ಅಮೇರಿಕೆಯಲ್ಲಿ ಸಂರಕ್ಷಕ ಕರಗಳಿರುವ ಕಾರಣ ಅಲ್ಲಿ ಉಂಟಾದ ಪರಿಣಾಮ ಏನಂದರೆ, ಆ ದೇಶದ ಬಂಡವಲದ ಕೆಲವೊಂದು ಭಾಗವು ಅತ್ಯಂತ ಉತ್ಪಾದಕವಾದ ಉದ್ಯೋಗಗಳೊಳಗಿಂದ ಹೊರಟು, ಕಡಿಮೆ ಉತ್ಪಾದಕವಾದ ಉದ್ಯೋಗಗಳಲ್ಲಿ ಸೇರುತ್ತದೆ. ಇದಲ್ಲದೆ, ಮೇಲಿನ ಪ್ರತಿಪಾದನದಲ್ಲಿ ವಾಸ್ತವ ಸ್ಥಿತಿಯನ್ನೂ ಯಥಾರ್ಥವಾಗಿ ವರ್ಣಿಸಿಲ್ಲ. ಯುನಾಯಿಟೆಡ್ ಸ್ಟೇಟ್ಸದ ಜನರು ಇದು ವರೆಗೆ ಸಂರಕ್ಷಕ ಕರಗಳನ್ನು ಎತ್ತುವ ಕ್ರಮವನ್ನು

ನಡಿಸುತ್ತಲೇ ಇದ್ದಾರೆ. ಆದರೂ ಪ್ರಾಪಂಚದ ಖರ್ಚು ಅಮೇರಿಕೆಯಲ್ಲಿ ದುಬಾರಿಯಾಗಿದ್ದಷ್ಟು ಪೃಥ್ವಿಯೊಳಗೆ ಮತ್ತ್ಯಾವ ದೇಶದಲ್ಲಿಯೂ ಇಲ್ಲ. ಪರದೇಶಗಳಿಂದ ಬರುವ ಸರಕುಗಳು ಜೀವನಕ್ಕೆ ಅವಶ್ಯವಾದವುಗಳೇ ಆಗಲಿ, ಅನಾವಶ್ಯಕವಾದವುಗಳೇ ಆಗಲಿ, ಸ್ವಲ್ಪಾದರೂ ಕ್ಷತಿ ಇಲ್ಲದೆ ಅಮೇರಿಕೆಯವರು ಅವುಗಳ ಮೇಲೆ ಭಾರಿಯಾದ ಕಪ್ಪಗಳನ್ನು ಕೂಡ್ರಿಸಿರುವರು. ಕೆಲವುಗಳಂತೂ ನೂರಕ್ಕೆ ೧೦೦ರಿಂದ ೨೦೦ರ ವರೆಗೆ ದಂಡಾ ತೆರುತ್ತವೆ. ಪರದೇಶದಿಂದ ಬರುವ ಕಾಲು ಜೋಡುಗಳು, ಯಾವತ್ತು ತರದ ಹೊದಿಕೆಗಳು ಮುಂತಾದವುಗಳ ಮೇಲೆ ಸಹ ಭಾರಿಯಾದ ಕಪ್ಪಗಳನ್ನು ಕೂಡ್ರಿಸಿರುವರು. ಮತ್ತು ಅಮೇರಿಕೆಯಿಂದ ರಫ್ತವಾಗುವ ಧಾನ್ಯಗಳು ಮೊದಲಾದ ಉಪಜೀವನದ ಪದಾರ್ಥಗಳನ್ನು ನೋಡಿದರೆ, ಇವು ಯುರೋಪಕ್ಕೆ ದಿನದಿನಕ್ಕೆ ಅತಿಪ್ರಮಾಣದಿಂದ ಹೋಗಲಾರಂಭಿಸಿವೆ.

**ಅಮೇರಿಕೆಯಲ್ಲಿ ಸಂರಕ್ಷಕ ಕರಗಳಿಂದ ಉಂಟಾದ ಪರಿಣಾಮುಗಳ ಉದಾಹರವು.**—ಸನ್ ೧೮೭೦ನೇ ವರ್ಷ ಯುನಾಯಿಟೆಡ್‌ಸ್ಟೇಟ್ಸ ದೇಶದ ಮಿಸ್ತರ ವೆಲ್ಸನೆಂಬ ಸ್ಪೆಶಲ್ ಕಮಿಾಷನರನು ಪ್ರಕಟಿಸಿದ ರಿಪೋರ್ಟನ್ನು ನೋಡಿದರೆ, ಅದರಲ್ಲಿ ನಿರಾತಂಕ ವ್ಯಾಪಾರದ ಪ್ರತಿಪಕ್ಷದವರಿಗೆ ಅನುಕೂಲವಾದಂಥಾದ್ದೇನು ದೊರಿಯುವ ಹಾಗಿಲ್ಲ. ಈ ವೆಲ್ಸ ಧೊರೆಯು ಮೊದಲು ಕಮಿಾಷರನಾಗಿ ನೇಮಿಸಲ್ಪಟ್ಟಾಗ ಉದ್ಯೋಗಸಂರಕ್ಷಕ ಕರಗಳ ಪಕ್ಷದವನಾಗಿದ್ದನು. ಆದರೆ, ಮುಂದೆ ಬರಬರುತ್ತಾ ತನ್ನ ಮತಕ್ಕೆ ಕೇವಲ ವಿರುದ್ಧವಾದ ಸಂಗತಿಗಳು ಅವನ ಅನುಭವಕ್ಕೆ ಬಂದ ಕಾರಣ ಅವನು ತನ್ನ ಪೂರ್ವ ಮತವನ್ನು ನಿರಾಕರಿಸಿದನು. ಆ ಕಾರಣ ಈ ಉದ್ಯೋಗಸ್ಥನ ಅಭಿಪ್ರಾಯವು ವಿಶೇಷ ವಿಚಾರಾರ್ಹವಾದದ್ದು. ಅವನ ರಿಪೋರ್ಟಿನ ಮೇಲಿಂದ ಸರಕುಗಳ ಮೇಲೆ ಬಹಳ ಭಾರಿಯಾದ ಕಪ್ಪಗಳನ್ನು ಕೂಡ್ರಿಸಿದ್ದರಿಂದ ದೇಶದೊಳಗಿನ ಉದ್ಯೋಗಗಳಿಗೆ ಬಹಳ ಹಾನಿಯು ತಗಲಿದ್ದು ಗೋಚರವಾಯಿತು. ಈ ಕಪ್ಪಗಳಿಂದ ವ್ಯಾಪಾರ ಉದ್ಯೋಗಗಳಿಗೆ ಹಾನಿಯಾಗುವ ಕ್ರಮವು ಕೆಳಗೆ ಬರೆದ ಉದಾಹರಣದ ಮೇಲಿಂದ ವ್ಯಕ್ತವಾಗುವದು. ವೆಲ್ಸ ಧೊರೆಯು ಬರೆದದ್ದು ಏನಂದರೆ:—"ಸನ್ ೧೮೬೯ನೇ ವರ್ಷ ಅಮೇರಿಕೆಯೊಳಗಿನ ನಾರ್ಥವೆಸ್ಟ ಪ್ರಾಂತದ ಒಬ್ಬ ವ್ಯಾಪಾರಸ್ಥನು ಅಮೇರಿಕೆಯೊಳಗಿನ ಮೇಲ್ಗಡೆಯ ಸರೋವರಗಳಲ್ಲಿ ಕಾಳಿನ ವ್ಯಾಪಾರ ನಡಿಸುವದಕ್ಕಾಗಿ ಒಂದು ಕಬ್ಬಿಣದ ಹಡಗವನ್ನು ಮಾಡಿಸ ಬೇಕೆಂದು ಯೋಚಿಸಿಕೊಂಡು ಇಂಗ್ಲಂಡಕ್ಕೆ ಬಂದನು. ಅಮೇರಿಕೆಯ ಸರಕಾರದವರು ಪರದೇಶಗಳಲ್ಲಿ ಕಟ್ಟಿದ ಹಡಗಗಳನ್ನು ತಮ್ಮ ರಿಜಿಸ್ತರಿಗೆ ಶೇರಿಸಿಕೊಳ್ಳುವದಿಲ್ಲವಾದ್ದರಿಂದ ಅವನು

ಮಾದರಿಗಾಗಿ, ಒಂದು ಹಡಗದ ಬೇರೆ ಬೇರೆ ಭಾಗಗಳನ್ನು ಪ್ರತ್ಯೇಕ ಮಾಡಿ ಒಯ್ಯ ಬೇಕೆಂತಲೂ, ಅಮೇರಿಕೆಯಲ್ಲಿ ಶಿಕ್ಯಾಗೋ ಪಟ್ಟಣದ ಹತ್ತರ ಕಬ್ಬಿಣದ ಹಡಗಗಳನ್ನು ಮಾಡುವ ಒಂದು ಕಾರಖಾನೆಯನ್ನು ಸ್ಥಾಪಿಸುವದಕ್ಕಾಗಿ ಇಂಗ್ಲಂಡದಿಂದ ಒಳ್ಳೇ ಕುಶಲರಾದ ಶಿಲ್ಪಿಗರನ್ನು ಒಯ್ಯ ಬೇಕೆಂತಲೂ ಮನಸುಳ್ಳವನಾಗಿದ್ದನು. ಆದರೆ ಆ ಹಡಗವನ್ನು ಮಾಡಲಿಕ್ಕೆ ಉಪಯೋಗಿಸಿದ ನಾನಾ ತರದ ಸಾಮಾನುಗಳ ಮೇಲೆ ನೂರಕ್ಕೆ ೩೮ರಿಂದ ೬೬ರ ವರೆಗೆ ಇದ್ದ ಕಪ್ಪಗಳನ್ನು ಲೆಕ್ಕ ಮಾಡಿ ನೋಡಲಾಗಿ, ಆ ಕಪ್ಪದ ರಕಮೇ ಮಿತಿಮೀರಿದ್ದರಿಂದ ಅವನು ಆ ಹವ್ಯಾಸವನ್ನು ಬಿಟ್ಟುಬಿಡ ಬೇಕಾಯಿತು. ಶಿಕ್ಯಾಗೋ ಪಟ್ಟಣದಲ್ಲಾಗಲಿ ಅದರ ನೆರೆಯಲ್ಲಾಗಲಿ ಕಬ್ಬಿಣದ ಹಡಗಗಳನ್ನು ಮಾಡುವ ಕಾರಖಾನೆಯು ಇದು ವರೆಗೆ ಸ್ಥಾಪಿತವಾಗಿಲ್ಲ." ಈ ಪ್ರಕಾರ ನೂರಿನ್ನೂರು ಮಂದಿ ಕಬ್ಬಿಣದ ಕಾರಖಾನೆಯವರ ಹಿತಗಳನ್ನು ಸಂರಕ್ಷಿಸುವದಕ್ಕಾಗಿ ದೇಶದೊಳಗಿನ ಯಾವತ್ತು ಜನವು ಕರಕೊಡುತ್ತದೆ. ಇಷ್ಟಾದರೂ ಆಗಿ, ಇದರಿಂದ ಕಬ್ಬಿಣದ ಕಾರಖಾನೆಯವರ ಹಿತಗಳನ್ನಾದರೂ ಪೂರ್ಣವಾಗಿ ರಕ್ಷಿಸಿದಂತೆ ಆಗುವದಿಲ್ಲ. ಇಂಥ ಸಂಗತಿಗಳ ಮೂಲಕವಾಗಿಯೇ ಅಮೇರಿಕೆಯಲ್ಲಿ ಹಡಗಗಳನ್ನು ಮಾಡುವ ಕಾರಖಾನೆಗಳು ಮುರಿಯಲಾರಂಭಿಸಿವೆಂದು ವೆಲ್ಸ ಧೊರೆಯು ಬರೆದಿರುವನು. ಇದಲ್ಲದೆ ಅಮೇರಿಕೆಯಲ್ಲಿ ಕೂಲಿಯೂ ಸಂಬಳಗಳೂ ಏರಿದ ಪ್ರಮಾಣಕ್ಕಿಂತಲೂ ಪ್ರಾಪಂಚದ ಖರ್ಚು ಬಹಳ ಹೆಚ್ಚು ಪ್ರಮಾಣದಿಂದ ಏರಿದೆ, ಎಂತಲೂ ವೆಲ್ಸ ಧೊರೆಯು ಹೇಳಿರುವನು. ಸುಖೋಪಭೋಗದ ಒಡವೆಗಳು ಕಡಿಮೆ ದೊರಿಯ ಹತ್ತಿದ್ದರ ವಿಷಯವಾಗಿ ಅವನು ಅಷ್ಟು ದುಃಖ ಪ್ರದರ್ಶನ ಮಾಡಿಲ್ಲ. ಆದರೆ ಬರಬರುತ್ತಾ ಜನರ ಸಂಗ್ರಹಶಕ್ತಿಯು ಕಡಿಮೆಯಾಗುತ್ತಾ ನಡಿದದ್ದೇ ಬಹಳ ಹಾನಿಕರವಾದದ್ದೆಂದು ಅವನು ಹೇಳಿದ್ದಾನೆ. "ಶ್ರೀಮಂತರು ದಿನೇ ದಿನೇ ಹೆಚ್ಚು ಶ್ರೀಮಂತರಾಗುತ್ತಾ ನಡಿದಿರುವರು. ಬಡವರು ದಿನೇ ದಿನೇ ಮತ್ತಿಷ್ಟು ಬಡತನ ಹೊಂದುತ್ತಾ ನಡಿದಿರುವರು." "ಜನರು ಸಣ್ಣ ಸಣ್ಣ ರಕಮುಗಳನ್ನು ಉಳಿಸಿ, ಬಂಡವಲ ಕೂಡಿಸುವದು ಕಟ್ಟಾಗಿದೆ." ಈ ಪ್ರಕಾರ ಅಮೇರಿಕೆಯವರು ತಾವಾಗಿ ತಮ್ಮ ಉದ್ಯೋಗಗಳ ಮೇಲೆ ಒಜ್ಜೆಗಳನ್ನು ಹೇರಿರುವರು. ಅಮೇರಿಕೆಯೊಳಗಿನ ಉತ್ಪನ್ನವು ಸ್ವಾಭಾವಿಕವಾಗಿ ಅತಿಶಯವಾಗಿರುವದರಿಂದಲೇ ಮಾತ್ರ ಅಮೇರಿಕೆಯ ಉದ್ಯೋಗಗಳು ಈ ಒಜ್ಜೆಗಳನ್ನು ಇದು ವರೆಗೆ ತಾಳಿಕೊಳ್ಳುವ ಸಾಮರ್ಥ್ಯವುಳ್ಳವಾಗಿವೆ. ಇಲ್ಲದಿದ್ದರೆ ಅವುಗಳೆಲ್ಲ ಎಂದೋ ಕುಂದಿ ನೆಲ ಹಿಡಿಯುತ್ತಿದ್ದವು. ಇದು ಎಷ್ಟು ಮಾತ್ರವೂ ಅತಿಶಯೋಕ್ತಿ

ಯಲ್ಲ. ಇವೆಲ್ಲ ಸಂಗತಿಗಳ ಮೇಲಿಂದ ಯುನಾಯಿಟೆಡ್ ಸ್ಟೇಟ್ಸ ದೇಶದವರು ಸಂರಕ್ಷಕ ಪದ್ಧತಿಯನ್ನು ತಮ್ಮ ದೇಶದೊಳಗಿನ ಉಪಜೀವನದ ಪದಾರ್ಥಗಳ ಕ್ರಯ ಏರ ಬಾರದೆಂಬ ಹೇತುವಿನಿಂದ ಸ್ವೀಕರಿಸಿಲ್ಲವೆಂಬದು ಸ್ಪಷ್ಟವಾಗುತ್ತದೆ. ಇಂಗ್ಲಂಡದವರಿಗೆ ಬೇಕಾಗುವ ಅನ್ನದ ಪೂರೈಕೆ ಪರದೇಶಗಳಿಂದಲೇ ಆಗ ಬೇಕಾಗುವ ಕಾರಣ, ಇಂಗ್ಲಂಡದವರಿಗೆ ನಿರಾತಂಕ ವ್ಯಾಪಾರದ ಪದ್ಧತಿಯನ್ನು ಅವಲಂಬಿಸಿದ ಹೊರ್ತು ಗತಿ ಇಲ್ಲ. ಈ ಅವಶ್ಯಕತೆ ಅಮೇರಿಕೆಯವರಿಗಿಲ್ಲಾದ ಕಾರಣ ಪರದೇಶವ್ಯಾಪಾರದಿಂದುಂಟಾಗುವ ಹಿತಗಳು ಅವರ ಲಕ್ಷ್ಯದಲ್ಲಿ ಬೇಗನೆ ಬರುವದಿಲ್ಲ. ಅಮೇರಿಕೆಯ ಒಂದು ವರ್ತಮಾನಪತ್ರದೊಳಗಿಂದ ತಕ್ಕೊಂಡಂಥ ಕೆಳಗೆ ಬರೆದ ಲೇಖವನ್ನು ಓದಿ ನೋಡಲು, ಉದ್ಯೋಗಸಂರಕ್ಷಣ ಕ್ರಮದಿಂದ ಯುನಾಯಿಟೆಡ್ ಸ್ಟೇಟ್ಸದಲ್ಲಿ ಪ್ರಾಪಂಚದ ಖರ್ಚು ಎಷ್ಟು ಹೆಚ್ಚಿದೆಂಬುವದು ಮನವರಿಕೆಯಾಗುವದು. "ಮೈಮೇಲೆ ವಸ್ತ್ರಗಳನ್ನು ಹಾಕಿಕೊಂಡ ಒಬ್ಬ ಅಮೇರಿಕನ ಮೇಲಿನ ಕಪ್ಪಗಳು:—ತಲೆಯ ಮೇಲಿನ ಟೊಪ್ಪಿಗೆ, ರೇಶಿಮೆ, ನೂರಕ್ಕೆ ೬೦ರಂತೆ; ಲಾಡಿಗಳು ನೂರಕ್ಕೆ ೬೦ರಂತೆ; ಅಂಚಿನ ಹತ್ತರದ ಆಲ್ಪಾಕಿನ ಒಳರಿವೆ ಪೌಂಡಿಗೆ ೫೦ ಸೆಂಟುಗಳು, ನೂರಕ್ಕೆ ೩೫ರಂತೆ; ಒಳಗಿನ ಚರ್ಮಕ್ಕೆ ನೂರಕ್ಕೆ ೩೫ರಂತೆ; ಮಲಮಲಿನ ಒಳರಿವೆಗೆ ಒಂದು ಚಚ್ಚೌಕು ವಾರಕ್ಕೆ ೭೩ ಸೆಂಟುಗಳು; ಸರೀಸಕ್ಕೆ ನೂರಕ್ಕೆ ೨೦ರಂತೆ; ಕೋಟಿನ ಅರಿವೆಗೆ ಪೌಂಡಿಗೆ ೫೫ ಸೆಂಟುಗಳು, ಅಥವಾ ಕಿಮ್ಮತಿನ ಮೇಲೆ ನೂರಕ್ಕೆ ೩೫ರಂತೆ; ರೇಶಿಮೆಯ ಒಳರಿವೆಗೆ ನೂರಕ್ಕೆ ೬೦ರಂತೆ; ಕೋಟಿನೊಳಗೆ ಆಲ್ಪಾಕು ಹಚ್ಚಿದ್ದಕ್ಕೆ ಪೌಂಡಿಗೆ ೫೦ ಸೆಂಟುಗಳಂತೆ, ಹಾಗೂ ಕಿಮ್ಮತಿನ ಮೇಲೆ ನೂರಕ್ಕೆ ೩೫ರಂತೆ; ಬಿರಡೆಗಳಿಗೆ ಪೌಂಡಿಗೆ ೨೦ ಸೆಂಟುಗಳಂತೆ, ಅಥವಾ ಕಿಮ್ಮತಿನ ಮೇರೆಗೆ ೧೦೦ರಕ್ಕೆ ೩೫ರಂತೆ; ಮಖಮಲ್ಲಿನ ಕೊರಳು ಪಟ್ಟಿಗೆ ನೂರಕ್ಕೆ ೬೦ರಂತೆ; ಇಜಾರಿನ ಕಾಶ್ಮೀರ ಅರಿವೆಗೆ ಪೌಂಡಿಗೆ ೫೦ ಸೆಂಟುಗಳಂತೆ, ಕಿಮ್ಮತಿನ ಮೇರೆಗೆ ನೂರಕ್ಕೆ ೩೫ರಂತೆ; ಅದರೊಳಗಿನ ನೂಲಿನ ಅರಿವೆಗೆ ಒಂದು ಚಚ್ಚೌಕು ಯಾರ್ಡಿಗೆ ೫ ಸೆಂಟುಗಳಂತೆ; ಧಾತುವಿನ ಬಿರಿಡೆಗಳಿಗೆ ನೂರಕ್ಕೆ ೩೫ರಂತೆ; ರೇಶಿಮೆಯ ಅಥವಾ ದಮಾಸಿನ ಒಳಂಗಿಗೆ ನೂರಕ್ಕೆ ೬೦ರಂತೆ; ನಾರಿನ ಒಳರಿವೆಗೆ ನೂರಕ್ಕೆ ೩೫ರಂತೆ; ರೇಶಿಮೆಯ ಬಿರಿಡೆಗಳಿಗೆ ನೂರಕ್ಕೆ ೬೦ರಂತೆ; ಕಟ್ಟುಗಳಿಗೆ ನೂರಕ್ಕೆ ೩೫ರಂತೆ; ಒಳಗಿನ ರೇಶಿಮೆಯ ಕಮೀಸಿಗೆ ನೂರಕ್ಕೆ ೬೦ರಂತೆ; ಉಣ್ಣೆಯ ಕಮೀಸಿಗೆ ಪೌಂಡಿಗೆ ೫೦ ಸೆಂಟುಗಳು; ನೂಲಿನದಾಗಿದ್ದರೆ ನೂರಕ್ಕೆ ೩೫ರಂತೆ; ಸಾದಾ ಬಿರಿಡೆಗಳಿಗೆ ನೂರಕ್ಕೆ ೩೫ರಂತೆ; ಬೂಟುಗಳ ತೊಗಲಿಗೆ

ನೂರಕ್ಕೆ ಹತ್ತರಂತೆ; ಹದ ಮಾಡಿದ ಚರ್ಮಕ್ಕೆ ನೂರಕ್ಕೆ ೩೦ರಂತೆ; ತಳಟ್ಟಿಗೆ ನೂರಕ್ಕೆ ೩೫ರಂತೆ; ರೇಶಿಮೆಯ ಕಂಠ ವಸ್ತ್ರಕ್ಕೆ ನೂರಕ್ಕೆ ೬೦ರಂತೆ; ಕೈಯ್ಯುರಿವೆಗೆ, ರೇಶಿಮೆಯದಾದರೆ ನೂರಕ್ಕೆ ೬೦ರಂತೆ, ನಾರಿನ ವಸ್ತ್ರದ್ದಾದರೆ ನೂರಕ್ಕೆ ೩೫ರಂತೆ; ಮೇಕೆ ಮರಿಯ ತೊಗಲಿನ ಕೈಚೀಲಗಳಿಗೆ ನೂರಕ್ಕೆ ೫೦ರಂತೆ; ಕಿಶೆಯೊಳಗಿನ ಚಾಕುವಿಗೆ ನೂರಕ್ಕೆ ೩೫ರಂತೆ; ಕಿಶೆಯೊಳಗಿನ ಸಣ್ಣ ಗಡಿಯಾಲಕ್ಕೆ ನೂರಕ್ಕೆ ೨೫ರಂತೆ; ಸಣ್ಣ ಗಡಿಯಾಲಕ್ಕೆ ಹಚ್ಚುವ ರೇಶಿಮೆಯ ದಾರಕ್ಕೆ ನೂರಕ್ಕೆ ೬೦ರಂತೆ;" ಇತ್ಯಾದಿ. ಇದರ ಮೇಲಿಂದ ಪ್ರತಿಯೊಬ್ಬ ಅಮೇರಿಕನ್ ಗೃಹಸ್ಥನಿಗೆ ಅವನ ಅಂಗುಷ್ಠಾಗ್ರದಿಂದ ತಲೆಯ ವರೆಗೆ ಇರುವ ಪ್ರತಿಯೊಂದು ಹೊದಿಕೆ ಮುಂತಾದವುಗಳಿಗಾಗಿ ಎಷ್ಟು ಕರ ತೆರ ಬೇಕಾಗುವದೆಂಬುವದು ಸ್ಪಷ್ಟವಾಗಿ ಕಾಣಿಸುತ್ತದೆ.

**ಆಮದರಫ್ತಗಳು ಯಾವಾಗಲೂ ಒಂದಕ್ಕೊಂದು ಸಮವಾಗುವ ಕ್ರಮದಲ್ಲಿರುವವು.**— ಈ ಕ್ರಮವನ್ನು ಮಿಲ್ ಧೊರೆಯು ಈ ಪ್ರಕಾರ ವರ್ಣಿಸಿರುವನು:—"ಒಂದು ದೇಶದ ಹುಟ್ಟುವಳಿಯು ಬೇರೆ ದೇಶಗಳ ಹುಟ್ಟುವಳಿಗೆ ಬದಲಾಗಿ ಕೊಡಲ್ಪಡ ಬೇಕಾದರೆ, ಆ ದೇಶದ ರಫ್ತಗಳ ಬೆಲೆಯಿಂದ ಆ ದೇಶದ ಯಾವತ್ತು ಆಮದಗಳ ಬೆಲೆ ಮುಟ್ಟುವದಕ್ಕೆ ಅವಶ್ಯವಾದ ಧಾರಣೆಗಳ ಮೇರೆಗೆ ಕೊಡಲ್ಪಡುವದು." ಅಥವಾ, ಇದೇ ಅರ್ಥವನ್ನು ಮಿಲ್ ಧೊರೆಯು ಮತ್ತೊಂದು ಕಡೆಯಲ್ಲಿ ಹೇಳಿದ್ದು ಹ್ಯಾಗಂದರೆ:—"ಎರಡು ದೇಶಗಳ ಆಮದ ರಫ್ತಗಳ ಬೆಲೆಗಳು ಒಟ್ಟಿನ ಮೇಲೆ ಒಂದಕ್ಕೊಂದು ಸರಿಯಾಗಿರ ಬೇಕು." ಆದರೆ ಈ ಸ್ಥಳದಲ್ಲಿ ತೋರಿಸ ತಕ್ಕ ಮತ್ತೊಂದು ಸಂಗತಿ ಏನಂದರೆ, ಯಾವದೊಂದು ದೇಶದ ಆಮದಗಳ ಬೆಲೆಯನ್ನು ಕೊಡುವದು, ಆ ದೇಶದವರು ಕೊಡ ತಕ್ಕ ಋಣಗಳಲ್ಲಿ ಮುಖ್ಯ ಭಾಗವಾಗಿದೆ. ಇದಲ್ಲದೆ, ಆ ದೇಶದಲ್ಲಿ ಪರದೇಶದವರು ಹಾಕಿದ ಬಂಡವಲಕ್ಕೆ ಕೊಡ ತಕ್ಕ ಲಾಭ ಮುಂತಾದ ಅನೇಕ ಬಗೆಯ ಋಣಗಳನ್ನು ಕೊಡುವದಕ್ಕೂ ಆ ದೇಶವು ಪಾತ್ರವಾಗಿರುವದು. ಉದಾಹರಣಾರ್ಥವಾಗಿ, ಇಂಗ್ಲಂಡ ಮತ್ತು ಹಿಂದುಸ್ತಾನ ದೇಶಗಳ ನಡುವೆ ಸರಕುಗಳನ್ನು ಕೊಡಕೊಳ್ಳುವ ವ್ಯವಹಾರವು ನಡಿಯದೆ ಇದ್ದ ಪಕ್ಷದಲ್ಲಿ, ಹಿಂದುಸ್ತಾನದವರಿಗೆ ಇಂಗ್ಲಂಡದ ವರ್ತಕರು ಕೊಟ್ಟಿರುವ ಲಕ್ಷಾವಧಿ ಪೌಂಡುಗಳ ಸಾಲಕ್ಕಾಗಿ ಹಿಂದುಸ್ತಾನದಿಂದ ಇಂಗ್ಲಂಡಕ್ಕೆ ಕೆಲ ಸರಕುಗಳನ್ನು ಕಳಿಸ ಬೇಕಾಗುವದು, ಇಲ್ಲವೆ ಬೆಲೆಯುಳ್ಳ ಧಾತುಗಳನ್ನು ಕಳುಹಿಸ ಬೇಕಾಗುವದು. ಇದರ ಮೇಲಿಂದ ತಿಳಿಯುವದೇನಂದರೆ, ಇಂಗ್ಲಂಡದಿಂದ ಬರುವ ಯಾವತ್ತು ಸರಕುಗಳ ಬೆಲೆಗೆ ಸರಿಯಾದ

ಬೆಲೆಯು ಸರಕುಗಳನ್ನು ಹಿಂದುಸ್ತಾನದಿಂದ ಇಂಗ್ಲಂಡಕ್ಕೆ ಕಳುಹಿಸ ಬೇಕಾಗುವ ದಲ್ಲದೆ, ಹಿಂದುಸ್ತಾನದವರು ಇಂಗ್ಲಂಡದಿಂದ ತಂದ ಸಾಲಕ್ಕೆ ಸರಿಯಾದ ಬೆಲೆಯು ಹೆಚ್ಚು ಸರಕುಗಳನ್ನು ಕಳುಹಿಸ ಬೇಕಾಗುವದು. ಇದಲ್ಲದೆ, ಒಂದು ದೇಶಕ್ಕೆ ಮತ್ತೊಂದು ದೇಶವು ಋಣಿಯಾಗಿರುವ ಮತ್ತೊಂದು ಬಗೆಯೂ ಉಂಟು. ಎರಡು ದೇಶದವರು ತಮ್ಮ ಪರಸ್ಪರ ಸರಕುಗಳನ್ನು ಕೊಡಕೊಳ್ಳಲು, ಯಾವ ದೇಶದವರು ಸರಕುಗಳನ್ನು ಪರದೇಶಕ್ಕೆ ಒಯ್ಯುವ ಹಾಗೂ ಪರದೇಶದಿಂದ ತರುವ ಶ್ರಮವನ್ನು ಕೈಕೊಂಡಿರುವರೋ ಆ ದೇಶದವರಿಗೆ ಅವರ ಶ್ರಮದ ಮೊಬದಲೆಯನ್ನು ಕೊಡಬೇಕಾಗುವದು. ಸ್ಥೂಲಮಾನದಿಂದ, ಇಂಗ್ಲಂಡದವರು ಜಗತ್ತಿನಲ್ಲಿ ಯಾವತ್ತು ಕಡೆಗೆ ಸರಕುಗಳನ್ನು ಒಯ್ಯುವ ಹಾಗೂ ತರುವ ಕೆಲಸವನ್ನು ವಹಿಸಿಕೊಂಡಿದ್ದಾರೆಂದು ಹೇಳ ಬಹುದು. ಆ ಕಾರಣ, ಇಂಗ್ಲಂಡದವರ ಸಂಗಡ ವ್ಯಾಪಾರ ಮಾಡುವ ಯಾವತ್ತು ದೇಶದವರು ಅವರ ಆಮ್ಮದಗಳನ್ನು ತರುವ ಹಾಗೂ ರಫ್ತಗಳನ್ನು ಒಯ್ಯುವ ಶ್ರಮ ಮಾಡುವ ಇಂಗ್ಲಂಡದವರಿಗೆ ಈ ಶ್ರಮಕ್ಕಾಗಿ ಋಣಿಯಾಗಿರುವರು. ಈ ಕಾರಣದಿಂದಲೇ ಇಂಗ್ಲಂಡದ ರಫ್ತಗಳಿಗಿಂತಲೂ ಆಮದಗಳು ಯಾವಾಗಲೂ ಹೆಚ್ಚಾಗಿರುವವು. ಹಾಗೂ ಇಂಗ್ಲಂಡದವರು ಪರದೇಶದವರಿಗೆ ಸಾಲಗಳನ್ನು ಕೊಡದಿದ್ದರೂ ಸಹ ಈ ಸ್ಥಿತಿಯು ಮುಂದಾದರೂ ಹೀಗೇ ನಡಿಯ ತಕ್ಕದ್ದು. ಈ ಅಂಶವನ್ನು ಸ್ಪಷ್ಟೀಕರಿಸುವದಕ್ಕಾಗಿ ಒಂದು ಉದಾಹರಣವನ್ನು ತಕ್ಕೊಳ್ಳುವ. ಹಾವೇರಿಯ ಒಬ್ಬ ಒಕ್ಕಲಿಗನು ೨೦೦ ರೂಪಾಯಿಯ ಗೋಧಿಯನ್ನು ಹುಬ್ಬಳ್ಳಿಗೆ ದಲಾಲನ ಕಡೆಗೆ ಕಳುಹಿಸಿ, ಅದಕ್ಕೆ ಬದಲಾಗಿ ಆ ದಲಾಲನಿಂದ ೨೦೦ ರೂಪಾಯಿಯ ಕೆಲ ಸಾಮಾನು ಒಯ್ಯುವದಕ್ಕೆ ಅಪೇಕ್ಷಿಸುತ್ತಾನೆಂದು ಕಲ್ಪಿಸಿರಿ. ಆ ಹಾವೇರಿಯ ಒಕ್ಕಲಿಗನು ಗೋಧಿಯನ್ನು ತನ್ನ ಬಂಡಿಯ ಮೇಲೆ ಹೇರಿ ಕಳುಹಿಸ ಬೇಕೆಂತಲೂ, ಹುಬ್ಬಳ್ಳಿಯಿಂದ ಒಯ್ಯ ತಕ್ಕ ಸಾಮಾನವನ್ನೂ ಅವನು ತಾನೇ ತನ್ನ ಬಂಡಿಯ ಮೇಲೆ ಒಯ್ಯ ಬೇಕೆಂತಲೂ ಗೊತ್ತಾಗಿದೆ. ಗೋಧಿಯನ್ನು ಹುಬ್ಬಳ್ಳಿ ತನಕ ಒಯ್ಯುವದಕ್ಕೂ, ಹುಬ್ಬಳ್ಳಿಯಿಂದ ಸಾಮಾನವನ್ನು ಹಾವೇರಿಗೆ ತರುವದಕ್ಕೂ, ಆ ಒಕ್ಕಲಿಗನಿಗೆ ೨೦ ರೂಪಾಯಿ ಖರ್ಚು ಬೀಳುತ್ತದೆಂದು ತಿಳಿಯುವ. ಹೀಗಾದಲ್ಲಿ ಆ ಒಕ್ಕಲಿಗನು ದಲಾಲನಿಗೆ ಈ ಪ್ರಕಾರ ಅನ್ನುವನು: "ಗೋಧಿಯನ್ನು ಇಲ್ಲಿ ತಂದು ಹಾಕುವ ಕೆಲಸವನ್ನೂ ಇಲ್ಲಿಂದ ಸಾಮಾನವನ್ನೂ ಒಯ್ಯುವ ಕೆಲಸವನ್ನೂ ನಾನೇ ಮಾಡಬೇಕಾದರೆ ಈ ದಾವತಿಯನ್ನು ನಾನು ಪುಗಸಾಟೆ ಮಾಡಲಿಕ್ಕಿಲ್ಲ. ಇದಕ್ಕಾಗಿ ನನಗೇನಾ

ದರೂ ದೊರಿದರೆ ಮಾಡೇನು." ಅದಕ್ಕೆ ದಲಾಲನು ಒಂದು ವೇಳೆ ಹತ್ತು ರೂಪಾಯಿಯ ಹೆಚ್ಚು ಸಾಮಾನವನ್ನು ಕೊಡುವದಕ್ಕೆ ಒಪ್ಪಿಕೊಂಡು,— "ಈಗ ಸರಿಯಾಯಿತಲ್ಲವೊ? ನಿನಗೆ ೨೧೦ ರೂಪಾಯಿಯ ಸಾಮಾನು ದೊರಿಯುವದು. ನೀನು ನನಗೆ ೨೦೦ ರೂಪಾಯಿಯ ಗೋಧಿ ಕೊಟ್ಟು, ತರುವ ಖರ್ಚು ವಹಿಸಿಕೊಂಡಂತಾಯಿತು. ಆದ್ದರಿಂದ, ತರುಒಯ್ಯುವ ಖರ್ಚಿನಲ್ಲಿ ನಿನಗೆ ಅರ್ಧ ಬಿದ್ದಂತಾಯಿತು, ಹಾಗೂ ನನಗೆ ಅರ್ಧ ಬಿದ್ದಂತಾಯಿತು" ಎಂದು ಉತ್ತರ ಹೇಳ ಬಹುದು. ಅದಕ್ಕೆ ಒಕ್ಕಲಿಗನು ಒಪ್ಪಿಕೊಳ್ಳದೆ—"ಹೀಗೆ ಯಾಕಾದೀತು? ನಾನು ಗೋಧಿಯನ್ನು ಇಲ್ಲಿಗೆ ಮುಟ್ಟಿಸಿದಾಗ ಗೋಧಿಗೆ ನನಗೆ ೨೧೦ ರೂಪಾಯಿ ಬಿದ್ದಂತಾಯಿತು. ಆ ಕಾರಣ ನೀವು ೨೧೦ ರೂಪಾಯಿಯ ಸಾಮಾನವನ್ನು ಕೊಟ್ಟು, ನಿಮ್ಮ ಖರ್ಚಿನಿಂದ ಅದನ್ನು ನನಗೆ ಮುಟ್ಟಿಸಿ ಕೊಡಬೇಕು," ಎಂದು ಹೇಳ ಬಹುದು. ಈ ಪ್ರಕಾರ ಆ ಒಕ್ಕಲಿಗನು ಚನ್ನಾಗಿ ಅರದಾಡಿದರೆ, ಅವನು ಬೇಡಿದಂತೆ ಅವನಿಗೆ ೨೦ ರೂಪಾಯಿಗಳೇ ಶಿಕ್ಕುವವು. ಆ ಕಾರಣ, ಅವನ ಇನ್ನೂರು ರೂಪಾಯಿಯ ಗೋಧಿಗೆ ಅವನಿಗೆ ೨೨೦ ರೂಪಾಯಿಯ ಸಾಮಾನು ಬರುವದು. ಅಂದರೆ ಅವನ ರಫ್ತಗಳಿಗಿಂತಲೂ ಆಮದಗಳು ನೂರಕ್ಕೆ ಹತ್ತರಂತೆ ಹೆಚ್ಚುವವು. ಇದರಂತೆಯೇ ಯಾವದೊಂದು ದೇಶದವರು ಹೊರಗೆ ಹೋಗುವ ಸರಕುಗಳನ್ನೂ ಹೊರಗಿಂದ ಬರುವ ಸರಕುಗಳನ್ನೂ ತಾವೇ ಒಯ್ಯುವ ಹಾಗೂ ತರುವ ಕೆಲಸವನ್ನು ಮಾಡಿದಲ್ಲಿ, ಈ ಶ್ರಮಕ್ಕೆ ಸರಿಯಾಗಿ ಅವರ ರಫ್ತಗಳಿಗಿಂತಲೂ ಆಮದಗಳು ಹೆಚ್ಚು ಬರುವವು. ಕಳೆದ ಎಷ್ಟೋ ವರ್ಷಗಳಲ್ಲಿ ಇಂಗ್ಲಂಡದ ರಫ್ತಗಳಿಗಿಂತಲೂ ಆಮದಗಳು ೧೦,೦೦,೦೦,೦೦೦ ಪೌಂಡುಗಳಿಗಿಂತಲೂ ಹೆಚ್ಚು ಆದವು. ಸನ್ ೧೮೮೮ನೇ ವರ್ಷದ ಹಿಂದಿನ ನಾಲ್ಕು ವರ್ಷಗಳ ಸರಾಸರಿಯನ್ನು ತೆಗೆದು ನೋಡಲಾಗಿ ಇಂಗ್ಲಂಡದ ರಫ್ತಗಳ ಬೆಲೆಗಿಂತಲೂ ಆಮದಗಳ ಬೆಲೆ ೧೧,೫೦,೦೦,೦೦೦ ಪೌಂಡುಗಳಿಗಿಂತಲೂ ಹೆಚ್ಚಾಗಿತ್ತು. ಈ ಹೆಚ್ಚಿನ ಸರಕು ಅಂಶತಃ ಇಂಗ್ಲಿಷರು ಸರಕುಗಳನ್ನು ಒಯ್ಯುವ ಹಾಗೂ ತರುವ ಕೆಲಸವನ್ನು ಮಾಡುವ ಮೂಲಕವಾಗಿ ಬಂದದ್ದೆಂತಲೂ, ಅಂಶತಃ ಇಂಗ್ಲಿಷ ವರ್ತಕರು ಪರದೇಶಗಳಲ್ಲಿ ಹಾಕಿದ ಬಂಡವಲಕ್ಕೆ ಬರುವ ಬಡ್ಡಿಯ ಮೂಲಕವಾಗಿ ಬಂದದ್ದೆಂತಲೂ ತಿಳಿಯ ತಕ್ಕದ್ದು. ಹಾಗೂ ಅಂಶತಃ ಇಂಗ್ಲಿಷ ವರ್ತಕರು ಪರದೇಶಗಳ ಉದ್ಯೋಗಗಳಲ್ಲಿ ಹಾಕಿದ ಬಂಡವಲವನ್ನು ತಿರುಗಿ ತೆಗೆದುಕೊಂಡದ್ದರಿಂದಲೂ ಈ ಹೆಚ್ಚಿನ ಸರಕು ಬಂದಿರ ಬಹುದು. ಆದಕಾರಣ ಯಾವದೊಂದು ದೇಶದ ಪರದೇಶವ್ಯಾಪಾರದ ಸಮ

ತೋಲನವು ಆ ದೇಶದ ಆಮದರಫ್ತಗಳು ಸರಿಯಾಗುವಲ್ಲಿಗೆ ಆಗುವದಿಲ್ಲ; ಆದರೆ ಆ ದೇಶದವರು ಕೊಡ ತಕ್ಕ ಯಾವತ್ತು ಋಣಗಳನ್ನು ತೀರಿಸುವಷ್ಟು ಆ ದೇಶದ ರಫ್ತಗಳಾದಾಗ ಈ ಸಮತೋಲನ ಉಂಟಾಗುವದು. ಆದರೆ, ಈ ಬಗೆಯ ಪ್ರತಿಬಂಧಕ ಸಂಗತಿಗಳಿಂದ ಮೇಲೆ ಉದಹರಿಸಿದಂಥ "ಯಾವದೊಂದು ದೇಶದ ಆಮದ ರಫ್ತಗಳು ಒಂದಕ್ಕೊಂದು ಸಮಾನವಾಗುವ ಕ್ರಮದಲ್ಲಿರುವವು ಎಂಬ ಸಿದ್ಧಾಂತಕ್ಕೆ ಏನು ಬಾಧ ಬರುವದಿಲ್ಲ. ಈ ಪ್ರವೃತ್ತಿಯು ನಡಿಯುವ ಬಗೆಯು ಕೆಳಗೆ ಬರೆದ ಉದಾಹರಣದಿಂದ ಚನ್ನಾಗಿ ಸ್ಪಷ್ಟವಾಗುವದು. ಇಂಗ್ಲಂಡದವರ ಯಾವತ್ತು ಪರದೇಶವ್ಯಾಪಾರವು ಹಿಂದುಸ್ತಾನದ ಸಂಗಡಲೇ ನಡಿಯುತ್ತದೆಂತಲೂ, ಯಾವದೊಂದು ವರ್ಷದಲ್ಲಿ ಇಂಗ್ಲಂಡದಿಂದ ಹಿಂದುಸ್ತಾನಕ್ಕೆ ಬಂದ ಸರಕುಗಳಿಗಿಂತಲೂ ಹಿಂದುಸ್ತಾನದಿಂದ ಇಂಗ್ಲಂಡಕ್ಕೆ ಹೋದ ಸರಕುಗಳು ಬಹಳ ಹೆಚ್ಚಿದವೆಂತಲೂ ಕಲ್ಪಿಸುವ. ಈ ಪ್ರಸಕ್ತಿಯಲ್ಲಿ ಇಂಗ್ಲಂಡದವರು ಹಿಂದುಸ್ತಾನದಿಂದ ಸಾಲಾ ಒಯಿದ ಹಾಗಾಗುವದು; ಹಾಗೂ ಈ ಸಾಲವನ್ನು ತೀರಿಸುವದಕ್ಕಾಗಿ ಇಂಗ್ಲಂಡದಿಂದ ಹಿಂದುಸ್ತಾನಕ್ಕೆ ನಗದು ಹಣ ಕಳುಹಿಸ ಬೇಕಾಗುವದು. ಈ ಪ್ರಕಾರ ಹಿಂದುಸ್ತಾನದಲ್ಲಿ ಹಣದ ಪೂರೈಕೆ ಹೆಚ್ಚುವದು; ಹಾಗೂ ಇಂಗ್ಲಂಡದಲ್ಲಿ ಕಡಿಮೆಯಾಗುವದು. ಹಿಂದೆ ಎರಡನೆ ಭಾಗದ ನಾಲ್ಕನೇ ಅಧ್ಯಾಯದಲ್ಲಿ, ಬೇರೆ ಸರಕುಗಳ ಬೆಲೆಯಂತೆಯೇ ಹಣದ ಬೆಲೆಯೂ ಬೇಡಿಕೆ ಪೂರೈಕೆಗಳು ಸಮಾನವಾಗುವ ರೀತಿಯಿಂದ ಹೆಚ್ಚುಕಡಿಮೆಯಾಗುವದೆಂದು ಹೇಳಿದೆ. ಆದ್ದರಿಂದ ಹಿಂದುಸ್ತಾನದಲ್ಲಿ ಆಮದಾದ ನಗದು ಐವಜಿನ ಮೂಲಕವಾಗಿ ಅಲ್ಲಿ ಹಣದ ಬೆಲೆ ಇಳಿಯುವದು, ಮತ್ತು ಕ್ರಯಗಳು ಏರುವವು. ಮತ್ತು ಅದೇ ಸಮಯಕ್ಕೆ ಇಂಗ್ಲಂಡದಿಂದ ನಗದು ಐವಜು ರಫ್ತವಾಗಿರುವ ಕಾರಣ ಅಲ್ಲಿ ಹಣದ ಬೆಲೆ ಏರುವದು, ಹಾಗೂ ಕ್ರಯಗಳು ಇಳಿಯುವವು. ಈ ಪ್ರಕಾರ ಹಣದ ಬೆಲೆ ಬದಲಿಸಿದ್ದರಿಂದ ಎರಡೂ ದೇಶಗಳಲ್ಲುಂಟಾಗುವ ಪರಿಣಾಮಗಳನ್ನು ವಿಚಾರಿಸುವ. ಹಿಂದುಸ್ತಾನದಲ್ಲಿ ಹೆಚ್ಚು ಧಾರಣೆ ಬರಹತ್ತಿದ್ದರಿಂದ ಹಿಂದುಸ್ತಾನಕ್ಕೆ ಇಂಗ್ಲಂಡದಿಂದ ಹೆಚ್ಚು ಸರಕುಗಳು ಬರಲಾರಂಭಿಸುವವು. ಇಂಗ್ಲಂಡದ ವರ್ತಕರಿಗೆ ತಮ್ಮ ಸರಕುಗಳನ್ನು ಇಂಗ್ಲಂಡದಲ್ಲಿ ಮಾರುವದಕ್ಕಿಂತಲೂ ಹಿಂದುಸ್ತಾನದಲ್ಲಿ ಮಾರುವದರಿಂದ ಹೆಚ್ಚು ಧಾರಣೆ ಬರುವ ಕಾರಣ, ಇಂಗ್ಲಿಷ ವರ್ತಕರು ತಮ್ಮ ಸರಕುಗಳನ್ನು ಇಂಗ್ಲಂಡದಲ್ಲಿ ಮಾರದೆ ಹಿಂದುಸ್ತಾನಕ್ಕೆ ಕಳುಹಿಸ ತೊಡಗುವರು. ಇದೇ ಕಾರಣದಿಂದ ಹಿಂದುಸ್ತಾನದ ವರ್ತಕರಾದರೂ ತಮ್ಮ ಸರಕುಗಳನ್ನು ಇಂಗ್ಲಂಡಕ್ಕೆ ಹಾಕದೆ ಇಲ್ಲಿಯೇ ಮಾರ

ಹೆತ್ತುವರು. ಈ ಮೇರೆಗೆ ಇಂಗ್ಲಂಡದಿಂದ ಹಿಂದುಸ್ತಾನಕ್ಕೆ ಬರುವ ಸರಕುಗಳ ಪರಿಮಿತಿಯು ಹೆಚ್ಚುವದು. ಅದೇ ಸಮಯಕ್ಕೆ ಹಿಂದುಸ್ತಾನದಿಂದ ಇಂಗ್ಲಂಡಕ್ಕೆ ಹೋಗುವ ಸರಕುಗಳ ಪರಿಮಿತಿಯು ಕಡಿಮೆಯಾಗುವದು. ಹಾಗೂ ಅದರಿಂದ ಆಮದಗಳೂ ರಫ್ತಗಳೂ ಮೊದಲಿನಂತೆ ಒಂದಕ್ಕೊಂದು ಸಮಾನವಾಗುವವು.

"ವ್ಯಾಪಾರಸಮತೋಲನ," "ಪ್ರತಿಕೂಲ ವಿನಿಮಯ" ಮುಂತಾದವುಗಳ ವಿವರಣೆ.— ಮೊದಲನೇ ಭಾಗದ ೧ನೇ ಅಧ್ಯಾಯದಲ್ಲಿ ವಿವರಿಸಿದ "ಧನ್ಯೆಕಾಭಿವೃದ್ಧಿಮತವು" ಪೂರ್ವದಲ್ಲಿ ಹಬ್ಬಿದ್ದ ಕಾಲಕ್ಕೆ ಜನರು ಯಾವದೊಂದು ದೇಶದ ರಫ್ತಗಳ ಕೆಲವೊಂದು ಭಾಗವು ನಗದು ಹಣವಾಗಲಿ, ಬೆಳ್ಳಿ ಭಂಗಾರದ ಘಟ್ಟಿಗಳಾಗಲಿ ಇರುವದು ಆ ದೇಶಕ್ಕೆ ಬಹಳ ಹಾನಿಕರವಾದದ್ದೆಂದು ತಿಳಿಯುವರು. ಯಾವದೊಂದು ದೇಶದಿಂದ ರಫ್ತವಾದ ನಗದು ಹಣದಷ್ಟು, ಅಥವಾ ಚಿನ್ನ ಬೆಳ್ಳಿಗಳ ಘಟ್ಟಿಗಳಷ್ಟು ಆ ದೇಶಕ್ಕೆ ಶುದ್ಧ ಲುಕಸಾನು ಉಂಟಾಯಿತೆಂದು ಎಣಿಸುವರು. ಯಾವದೊಂದು ದೇಶದವರು ಹೊರಗಿಂದ ಬಂದ ಕೆಲ ಸರಕುಗಳಿಗೆ ಬದಲಾಗಿ ಭಂಗಾರ ಇಲ್ಲವೆ ಬೆಳ್ಳಿಯನ್ನು ಕೊಡ ಬೇಕಾದರೆ, ಈ "ವ್ಯಾಪಾರಸಮ ತೋಲ್ಯನವು" ಅವರಿಗೆ ವಿರುದ್ಧವಾದದ್ದೆಂತಲೂ, ಅವರು ಮಾಡಿದ ವಿನಿಮಯವು ಅವರಿಗೆ "ಪ್ರತಿಕೂಲವಾದದ್ದೆಂತಲೂ" ಆಗಿನ ಕಾಲದಲ್ಲಿ ಹೇಳುವರು. ಆದರೆ, ನಡಿಯುವ ಶತಮಾನದ ಅನುಭವದಿಂದ ಈ ಗ್ರಹಿಕೆಯು ನಿರಾಧಾರವಾದದ್ದೆಂತಲೂ, ಭ್ರಾಂತಿಮೂಲಕವಾದದ್ದೆಂತಲೂ ಸಿದ್ಧವಾಗಿದೆ. ಸಾಂಪ್ರತಕ್ಕೆ ಭಂಗಾರ ಉತ್ಪನ್ನ ಮಾಡುವ ದೇಶದವರು ಭಂಗಾರವನ್ನು ಬೇರೆ ಸರಕುಗಳಂತೆಯೇ ಪರದೇಶಗಳಿಗೆ ಕಳುಹಿಸುತ್ತಾರೆ. ಹೀಗಿದ್ದಾಗ್ಯೂ, ಆಸ್ಟ್ರೇಲಿಯಾ ಮತ್ತು ಕ್ಯಾಲಿಫೋರ್ನಿಯಾ ದೇಶದವರು ಬಹಳ ತ್ವರೆಯಾಗಿ ಐಶ್ವರ್ಯಾಭ್ಯುದಯಗಳನ್ನು ಹೊಂದುತ್ತಾ ನಡಿದಿರುವರೆಂಬುವದು ಪ್ರಸಿದ್ಧವದೆ. ಹಾಗೂ, ಅವರ ಐಶ್ವರ್ಯಾಭ್ಯುದಯಗಳು ಅವರು ತಮ್ಮ ಭಂಗಾರ ಕೊಟ್ಟು ಪರದೇಶಗಳಲ್ಲುಂಟಾದ ಸರಕುಗಳನ್ನು ಕೊಂಡ ಮಾನದಿಂದಲೇ ವೃದ್ಧಿ ಹೊಂದಿವೆ. ಯಾವದೊಂದು ದೇಶದಿಂದ ಚಿನ್ನ ಬೆಳ್ಳಿಗಳು ಹೊರಗೆ ಹೋದಷ್ಟು ಆ ದೇಶಕ್ಕೆ ಲುಕಸಾನು ತಗಲುವದೆಂದು ತಿಳುಕೊಳ್ಳುವವರು ಒಂದು ದಮ್ಮಡೀ ಕೊಟ್ಟು ಏನಾದರೂ ಕೊಳ್ಳುವವನಿಗೆ ಒಂದು ದಮ್ಮಡಿ ಲುಕಸಾನು ಆಗುತ್ತದೆಂತಲೂ ತಿಳಿಯ ಬಹುದು. ಬೆಲೆಯುಳ್ಳ ಧಾತುಗಳನ್ನು ಯಾವಾಗಲೂ ಪರದೇಶಗಳಿಗೆ ಕಳುಹಿಸುವದು ಅಥವಾ ಪರದೇಶಗಳಿಂದ ತರುವದು ಅವಶ್ಯವಾಗದೆ, ಪರದೇಶದವರ ಸಂಗಡ ವಿನಿಮಯ

ನಡಿಸುವ ಕ್ರಮವು ಮುಂದೆ ಬರುವ 'ಪತ್ತಿನ ವಿಷಯದ' ಅಧ್ಯಾಯದಲ್ಲಿ ವಿವರಿಸಲ್ಪಡುವದು.

## ಮೊದಲನೆ ಅಧ್ಯಾಯದ ಮೇಲಿನ ಪ್ರಶ್ನಗಳು.

೧. ಪರದೇಶವ್ಯಾಪಾರದಿಂದುಂಟಾಗುವ ದೊಡ್ಡ ಪ್ರಯೋಜನ ಯಾವದು?

೨. ಈ ಪ್ರಯೋಜನವನ್ನು ವಿವರಿಸುವಂಥ ಉದಾಹರಣಗಳನ್ನು ಹೇಳಿರಿ.

೩. ಉದ್ಯೋಗಸಂರಕ್ಷಣವೆಂದರೇನು? ಹಾಗೂ ಉದ್ಯೋಗಸಂರಕ್ಷಕರು ಪರದೇಶವ್ಯಾಪಾರದಲ್ಲಿ ಕೈಹಾಕುವದು ಒಳ್ಳೇದೆಂದು ಹ್ಯಾಗೆ ಸಾಧಿಸುವರು?

೪. ಪರದೇಶದವರ ಸ್ಪರ್ಧೆಗೆ ಈಡಾಗದಂಥ ಉದ್ಯೋಗಗಳನ್ನು ಸಂರಕ್ಷಿಸುವದನ್ನು ಬಿಟ್ಟು ಬಿಟ್ಟರೆ ಏನು ಪರಿಣಾಮವಾಗುವದು?

೫. ಪರದೇಶದವರ ಸ್ಪರ್ಧೆಯಿಂದ ರಕ್ಷಿಸದಿದ್ದರೆ ನಡಿಯದಂಥ ಸ್ವದೇಶದ ಉದ್ಯೋಗವನ್ನು ರಕ್ಷಿಸುವದು ಇಡೀ ಜನಸಮೂಹಕ್ಕೆ ಹಿತಕರವೋ? ಅಥವಾ ಹಾನಿಕರವೋ?

೬. ಉದ್ಯೋಗಸಂರಕ್ಷಣಪ್ರತಿಪಾದಕರು ಯಾವ ಜನರ ಹಿತವನ್ನು ಅಲಕ್ಷ್ಯ ಮಾಡುವರು?

೭. ಸಂಪದುತ್ಪಾದನದ ಖರ್ಚು ಕಡಿಮೆಯಾಗುವದರಿಂದ ಬಂಡವಲದ ಸಂಗ್ರಹದ ಮೇಲೆ ಯಾವ ಪರಿಣಾಮ ಉಂಟಾಗುವದು?

೮. ಜೀವನಕ್ಕೆ ಅವಶ್ಯವಾದ ಯಾವದೊಂದು ಸರಕು ಅಗ್ಗವಾಗುವದರಿಂದ ಸಂಬಳದ ಮೇಲೆ ಉಂಟಾಗುವ ಪರಿಣಾಮ ಯಾವದು?

೯. ಉದ್ಯೋಗಸಂರಕ್ಷಣಪ್ರತಿಪಾದಕರ ತರ್ಕಗಳನ್ನು ಹೊಗೆಬಂಡಿಯಿಂದ ಪ್ರಯಾಣ ಮಾಡುವದನ್ನು ಕುರಿತು ಹೇಳಿರಿ.

೧೦. ಮೇಣದ ಬತ್ತಿಗಳನ್ನು ಮಾಡುವವರು ಬರಕೊಂಡ ಅರ್ಜಿಯೊಳಗಿನ ತರ್ಕಗಳ ಸಾರಾಂಶವನ್ನು ಹೇಳಿರಿ.

೧೧. ಎರಡು ದೇಶದವರು ಪರಸ್ಪರರೊಳಗೆ ಸರಕುಗಳ ವಿನಿಮಯ ನಡಿಸಲಾಗಿ ಇಂಥ ವಿನಿಮಯವು ಯಾವ ಪ್ರಸಕ್ತಿಗಳಲ್ಲಿ ಎರಡೂ ದೇಶಗಳಿಗೆ ಹಿತಕರವಾಗುವದು?

೧೨. ವಿನಿಮಯ ಹೊಂದಿದ ಸರಕುಗಳ ಬೆಲೆಗಳ ಪ್ರಮಾಣಗಳಲ್ಲಿ ನಿಕೃಷ್ಟ ಪಕ್ಷಕ್ಕೆ ಎಷ್ಟು ವ್ಯತ್ಯಾಸವಿರುವದು ಅವಶ್ಯ?

೧೩ ಈ ಕನಿಷ್ಠ ಪಕ್ಷದ ವ್ಯತ್ಯಾಸದ ಪರಿಮಾಣಕ್ಕಿಂತಲೂ ಹೆಚ್ಚು ವ್ಯತ್ಯಾಸವಿದ್ದರೆ ವಿನಿಮಯ ಮಾಡುವ ಧಾರಣೆಗಳು ಹ್ಯಾಗೆ ನಿರ್ಣೈಸಲ್ಪಡುವವು?

೧೪. ಪರದೇಶವ್ಯಾಪಾರದಿಂದ ಆಮದ ರಫ್ತಗಳ ಕ್ರಯಗಳಲ್ಲಿ ಹೆಚ್ಚುಕಡಿಮೆಗಳಾಗುವದು ಹ್ಯಾಗೆ?

೧೫. ಪರದೇಶವ್ಯಾಪಾರವು ಅಪ್ರತಿಬಂಧವಾಗಿ ನಡಿದಾಗ್ಯೂ ಯಾವ ಸಂಗತಿಗಳ ಮೂಲಕವಾಗಿ ಕೆಲವು ಸರಕುಗಳ ಕ್ರಯಗಳು ಬೇರೆ ಬೇರೆ ಪ್ರಾಂತಗಳಲ್ಲಿ ಭಿನ್ನವಾಗಿರುವವು?

೧೬. ಫ್ರಾನ್ಸದಲ್ಲಿ ರಾಜ್ಯಕ್ರಾಂತಿಯಾಗುವ ಪೂರ್ವದಲ್ಲಿ ಉದ್ಯೋಗಸಂರಕ್ಷಣಮತವು ಎಷ್ಟರ ಮಟ್ಟಿಗೆ ಪ್ರಬಲವಾಗಿತ್ತು?

೧೭. ಪರದೇಶದಿಂದ ಬರುವ ಯಾವದೊಂದು ಸರಕಿನ ಬೇಡಿಕೆಯೂ ಪೂರೈಕೆಯೂ ಒಂದಕ್ಕೊಂದು ಸಮಾನವಾಗುವ ಕ್ರಮವನ್ನು ವಿವರಿಸಿರಿ.

೧೮. ಸರಕುಗಳನ್ನು ಕೊಡಕೊಳ್ಳುವ ಪ್ರತಿಯೊಂದು ದೇಶಕ್ಕೆ ಬರತಕ್ಕ ಲಾಭದ ಪರಿಮಿತಿಯು ಇಷ್ಟೇ ಎಂದು ನಿಶ್ಚೈಸುವಂಥ ಸಂಗತಿ ಯಾವದು?

೧೯. "ಅನ್ಯೋನ್ಯ ಸಮ ವ್ಯಾಪಾರ"ವೆಂದರೇನು? ಕೆಲ ಪ್ರಸಕ್ತಿಗಳಲ್ಲಿ ಇದು ಅಶಕ್ಯವಾಗಿರುವದೆಂಬ ಬಗ್ಗೆ ಒಂದು ದೃಷ್ಟಾಂತ ಹೇಳಿರಿ.

೨೦. ಪರದೇಶವ್ಯಾಪಾರದಿಂದುಂಟಾಗುವ ಮುಖ್ಯ ಪ್ರಯೋಜನವು ಯಾರಿಗೆ ಆಗುವದು?

೨೧. ಉದ್ಯೋಗಸಂರಕ್ಷಣಮತಾಭಿಮಾನಿಗಳು ಇದು ವರೆಗೆ ಮಾಡಿದ ಯಾವತ್ತು ಪೂರ್ವ ಪಕ್ಷಗಳಲ್ಲಿ ಎಲ್ಲಕ್ಕೂ ಸಮರ್ಪಕವಾದ ಪ್ರತಿಪಾದನವು ಯಾವದು?

೨೨. ಈ ಪೂರ್ವಪಕ್ಷ ಮಾಡುವವರು ಅಲಕ್ಷ್ಯ ಮಾಡುವಂಥ ನಿರಾತಂಕ ವ್ಯಾಪಾರದಿಂದುಂಟಾ ಗುವ ಮುಖ್ಯ ಪ್ರಯೋಜನ ಯಾವದು?

೨೩. ಈ ಪ್ರತಿಪಾದನವು ವಾಸ್ತವಸ್ಥಿತಿಯನ್ನು ನೋಡಲಾಗಿ ಸಮರ್ಪಕ ತೋರುವದೋ?

೨೪. ಸಂರಕ್ಷಕ ಸುಂಕಗಳಿಂದ ಉದ್ಯೋಗಗಳು ಕಳೆಗುಂದುವ ಬಗೆಯನ್ನು ಉದಾಹರಣ ಮೂಲಕವಾಗಿ ತೋರಿಸಿರಿ.

೨೫. ಉಪಜೀವನದ ಖರ್ಚು ಏರಿದ್ದರಿಂದ ಯುನಾಯಿಟೆಡ್‌ಸ್ಟೇಟ್ಸ ದೇಶದ ಯಾವತ್ತು ಪ್ರಜೆಗಳ ಮೇಲೆ ಉಂಟಾಗುವ ಪರಿಣಾಮ ಯಾವದು? ಈ ಸಂಗತಿಗಳಿಗೆ ಆಧಾರವಾದ ಪ್ರಮಾಣಗ ಳನ್ನು ಹೇಳಿರಿ.

೨೬. ನಿರಾತಂಕ ವ್ಯಾಪಾರದಿಂದುಂಟಾಗುವ ಪ್ರಯೋಜನಗಳು ಅಮೇರಿಕೆಯವರಿಗಿಂತಲೂ ಇಂ ಗ್ಲಂಡದವರ ಲಕ್ಷ್ಯದಲ್ಲಿ ಮೊದಲು ಬರಲಿಕ್ಕೆ ಕಾರಣವೇನು?

೨೭. ಯಾವದೊಂದು ದೇಶದ ಆಮದ ರಫ್ತಗಳು ಯಾವಾಗಲೂ ಒಂದಕ್ಕೊಂದು ಸರಿಯಾಗುವ ಕ್ರಮದಲ್ಲಿರುವದು ಹ್ಯಾಗೆ? ಈ ಕ್ರಮವನ್ನು ಪ್ರತಿಬಂಧಿಸುವಂಥ ಕೆಲ ಸಂಗತಿಗಳನ್ನು ಹೇಳಿರಿ.

೨೮. ಯಾವದೊಂದು ದೇಶದಿಂದ ನಾಣ್ಯಗಳು ರಫ್ತವಾಗುವದರಿಂದ ಉಂಟಾಗುವ ಪರಿಣಾಮ ಕ್ಕೂ, ನಾಣ್ಯಗಳನ್ನು ಮಾಡುವ ಚಿನ್ನ ಬೆಳ್ಳಿಗಳು ರಫ್ತವಾಗುವದರಿಂದ ಆಗುವ ಪರಿಣಾಮ ಕ್ಕೂ ಭೇದವೇನು?

೨೯. "ವ್ಯಾಪಾರಸಮತೋಲನ" ಹಾಗೂ "ಪ್ರತಿಕೂಲ ವಿನಿಮಯ" ಅಂದರೇನು?

೩೦. ಯಾವದೊಂದು ದೇಶದಿಂದ ಹೊರಗೆ ಹೋಗುವ ಚಿನ್ನ ಬೆಳ್ಳಿಗಳಷ್ಟು ರಕಮಿಗೆ ಆ ದೇಶದ ವರು ಬಡವಾಗುತ್ತಾರೆಂಬ ತಿಳುವಳಿಕೆ ಅಬದ್ಧವಾದದ್ದೆಂಬದನ್ನು ದೃಷ್ಟಾಂತಮೂಲಕವಾಗಿ ವಿವರಿಸಿರಿ.

---

೧. ಇಂಗ್ಲಂಡದಲ್ಲಿ ಚಹ, ತಂಬಾಕು, ಮದ್ಯಗಳು ಮುಂತಾದ ಹೊರಗಿಂದ ಬರುವ ಸರಕುಗಳ ಮೇಲೆ ಸುಂಕಗಳುಂಟು. ಈ ಸುಂಕಗಳು ಉದ್ಯೋಗಸಂರಕ್ಷಕ ಸುಂಕಗಳೆನಿಸ ಬಹುದೋ?

೨. ಒಂದು ಗ್ರಾಮದಲ್ಲಿ ಒಂದೇ ಕೈಯ್ಯುಳ್ಳ ಒಬ್ಬ ಮೊಚ್ಚೆಗಾರನಿದ್ದಾನೆ. ಈ ಮೊಚ್ಚೆಗಾರನು ಮಾಡುವ ಮೊಚ್ಚೆಗಳು ಬೇರೆ ಕಡೆಯಲ್ಲಿ ಆಗುವ ಮೊಚ್ಚೆಗಳಿಗಿಂತಲೂ ಕೆಟ್ಟವಾಗಿಯೂ ತುಟ್ಟಿಯಾಗಿಯೂ ಉಂಟು. ಆ ಗ್ರಾಮದ ಅಧಿಕಾರಿಗಳು ತಮ್ಮ ಗ್ರಾಮದೊಳಗಿನ ಒಂದು ಉದ್ಯೋಗಕ್ಕೆ ಉತ್ತೇಜನ ಕೊಡುವದಕ್ಕೋಸ್ಕರ, ಅವನು ಮಾಡದಂಥ ಬೇರೆ ಯಾವತ್ತು ಜೋಡುಗಳ ಮೇಲೆ ಸುಂಕಾ ಕಟ್ಟಿದರೆ, ಇದು ಉದ್ಯೋಗಸಂರಕ್ಷಣದ ತತ್ವಗಳಿಗೆ ಅನು ಸರಿಸಿಯೇ ಆಗಲಿಕ್ಕಿಲ್ಲವೋ? ಈ ಸಂರಕ್ಷಕ ಸುಂಕದಿಂದ ಆ ಗ್ರಾಮದ ಯಾವತ್ತು ಜನರ ಹಿತದ ಮೇಲೆ ಉಂಟಾಗುವ ಪರಿಣಾಮಗಳು ಯಾವವು?

೩. ಅಮೇರಿಕೆಯಲ್ಲಿ ನಿರಾತಂಕವ್ಯಾಪಾರವನ್ನು ಪ್ರತಿಪಾದಿಸುವವರು ಪಶ್ಚಿಮ ಕಡೆಯ ಕಾಳು ಬೆಳಿಸುವ ಪ್ರಾಂತಗಳಲ್ಲಿ ಪ್ರಬಲರಾಗಿದ್ದರೋ, ಅಥವಾ ಕೈಗಾರಿಕೆಯ ಉದ್ಯೋಗಗಳು ನಡಿಯುವ ಪ್ರಾಂತಗಳಲ್ಲಿ ಪ್ರಬಲರಾಗಿದ್ದರೋ? ಉತ್ತರವನ್ನು ಕಾರಣ ಸಹಿತವಾಗಿ ಬರೆಯಿರಿ.

೪. ಆಸ್ಟ್ರೇಲಿಯದಂಥ ದೇಶದಲ್ಲಿ ಶಿಲ್ಪದ ಉದ್ಯೋಗಗಳಿಗಿಂತಲೂ ಬೇಸಾಯವು ಯಾಕೆ ಹೆಚ್ಚು ಲಾಭಕರವಾಗಿರುವದು?

೫. ಚಿನ್ನವು ವಿಪುಲವಾಗಿ ದೊರಿಯುವಂಥ ಪ್ರದೇಶಗಳುಳ್ಳ ದೇಶದವರಿಗೆ ಪರದೇಶಗಳಲ್ಲುಂಟಾದ ಸರಕುಗಳನ್ನು ಕೊಳ್ಳುವದಕ್ಕೆ ಪೂರ್ಣವಾಗಿ ಪ್ರತಿಬಂಧವಾದರೆ ಉಂಟಾಗುವ ಪರಿಣಾಮಗಳನ್ನು ವಿವೇಚಿಸಿರಿ.

## ೨ನೇ ಅಧ್ಯಾಯವು.

### ಪತ್ತೂ, ಅದರಿಂದ ಧಾರಣೆಗಳ ಮೇಲೆ ಉಂಟಾಗುವ ಪರಿಣಾಮಗಳೂ.

ಪತ್ತು ಎಂಬ ಶಬ್ದದ ವ್ಯಾಖ್ಯೆ.—ಸಾಲಾ ತರುವ ಶಕ್ತಿಗೆ ಪತ್ತೆಂಬ ಹೆಸರು. ಯಾವನೊಬ್ಬನು ಒಯಿದ ಸಾಲವನ್ನು ತೀರಿಸುವನೆಂದು ಜನರಿಗೆ ಭರವಸವಿದ್ದರೆ ಅವನ ಪತ್ತು ಚನ್ನಾಗಿ ಉಂಟೆಂದು ಹೇಳುವರು. ಪತ್ತುಳ್ಳವನಿಗೆ ಸಾಲವು ಕಡಿಮೆ ಬಡ್ಡಿಯಿಂದ ಹುಟ್ಟುವದು. ಪತ್ತು ಚನ್ನಾಗಿ ಇಲ್ಲದವನ ಸಾಲಾ ತೀರಿಸುವ ಸಾಮರ್ಥ್ಯವು ಸಂಶಯಾಸ್ಪದವಾದ್ದರಿಂದ, ಬಹಳ ಬಡ್ಡೀ ತೆರದೆ ಅವನಿಗೆ ಸಾಲ ಹುಟ್ಟುವದಿಲ್ಲ. ಯಾವದೊಂದು ದೇಶದಲ್ಲಿ ಒಂದೇ ಕಾಲಕ್ಕೆ ಬೇರೆ ಬೇರೆ ಜನರು ಎಷ್ಟು ಪತ್ತುಳ್ಳವರೆಂಬದನ್ನು ಹೇಳ ಬೇಕಾದರೆ, ಅವರು ತರುವ ಸಾಲಕ್ಕೆ ಎಷ್ಟು ಬಡ್ಡಿಯನ್ನು ಕೊಡುತ್ತಾರೆಂಬದರ ಮೇಲಿಂದ ಹೇಳ ಬಹುದು. ಆದರೆ ಈ ಮಾತು ಬೇರೆ ಬೇರೆ ವ್ಯಕ್ತಿಗಳ ಪತ್ತಿನ ವಿಷಯದಲ್ಲಿ ಪೂರ್ಣವಾಗಿ ಸರಿಬೀಳುವಂತೆ, ರಾಷ್ಟ್ರಗಳ ಪತ್ತಿನ ವಿಷಯದಲ್ಲಿ ಚನ್ನಾಗಿ ಸರಿಬೀಳುವದಿಲ್ಲ. ಆದರೂ "ಸಾಲಾ ತೀರಿಸುವ ಸಾಮರ್ಥ್ಯದಿಂದ" ಬೇರೆ ಬೇರೆ ವ್ಯಕ್ತಿಗಳ ಪತ್ತಿನ ಮೇಲೆ ಪರಿಣಾಮವಾಗುವಂತೆಯೇ ರಾಷ್ಟ್ರಗಳ ಪತ್ತಿನ ಮೇಲಾದರೂ ಕೆಲ ಪರಿಣಾಮವಾಗುವದು. ಉದಾಹರಣಾರ್ಥವಾಗಿ, ಟರ್ಕೀ ದೇಶದ ಸರಕಾರದ ಪತ್ತು ತೀರ ಕಡಿಮೆಯಾಗಿರುವದು. ಟರ್ಕೀ ಸರಕಾರದವರಿಗೆ ಕೊಟ್ಟ ಸಾಲಕ್ಕೆ ಅವರು ಎಷ್ಟೋ ವರ್ಷಗಳ ವರೆಗೆ ನೂರಕ್ಕೆ ೧೨ರಂತೆ ಬಡ್ಡಿಯನ್ನು ಕೊಡುತ್ತಿದ್ದರು. ಸನ್ ೧೮೭೫ನೇ ವರ್ಷ ಟರ್ಕೀ ಸರಕಾರದವರು

ದಿವಾಳಿ ತೆಗೆದು ತಮ್ಮ ಸಾಲಗಾರರಿಗೆ ಕೊಡತಕ್ಕ ಬಡ್ಡಿಯ ಅರ್ಧ ಬಡ್ಡಿಯನ್ನು ಮಾತ್ರ ನಗದು ಕೊಡುವೆವು ಎಂದು ಪ್ರಕಟಿಸಿದರು. ಈ ಅರ್ಧ ಬಡ್ಡಿಯನ್ನಾದರೂ ಅವರು ಕಡೆಗೆ ಮುಟ್ಟಿಸಲೇ ಇಲ್ಲ. ಈಗ್ಯೂ ಟರ್ಕೀ ದೇಶದ ಕೆಲವು ಶೇವುಗಳ ಧಾರಣೆ ನೂರಕ್ಕೆ ೫೦ರಂತೆ ಬಡ್ಡಿ ಬರುವ ಹಾಗಿದೆ. ಈ ಪ್ರಕಾರ ಸನ್ ೧೮೮೪ನೇ ವರ್ಷದ ಮಾರ್ಚ ತಿಂಗಳ ೨೮ನೇ ತಾರೀಖಿನ ದಿವಸದ ಟಾಯಿಮ್ಸ್ ವರ್ತಮಾನದ ಮೇಲಿಂದ, ಟರ್ಕಿಯ ಶೇವುಗಳ ಧಾರಣೆ ನೂರಕ್ಕೆ ೮೫ ಪೌಂಡುಗಳಂತೆ ಇತ್ತು. ಈ ಪ್ರಕಾರ ಟರ್ಕೀ ದೇಶದವರು ಹೆಚ್ಚು ಬಡ್ಡಿಯನ್ನು ಕೊಡುವದಕ್ಕೆ ಒಪ್ಪಿಕೊಳ್ಳುವದರ ಮೇಲಿಂದ, ಜನರಿಗೆ ಟರ್ಕಿಯವರು ತಮ್ಮ ಸಾಲದ ಬಡ್ಡಿಯನ್ನು ಇನ್ನು ಮೇಲಾದರೂ ಕೊಡಲಿಕ್ಕೆ ಹತ್ತುವರೆಂಬ ವಿಶ್ವಾಸವು ಜನರಿಗೆ ಹುಟ್ಟಿಲ್ಲವೆಂದು ವ್ಯಕ್ತವಾಗುತ್ತದೆ. ಸ್ಪೇನದವರಿಗೆ ಕೊಟ್ಟ ಶೇವುಗಳಿಗೆ ನೂರಕ್ಕೆ ೭ರಂತೆ ಬಡ್ಡಿ ಬರುತ್ತದೆ. ಇತ್ತಲಾಗಿ ಕೆಲವು ವರ್ಷ ಸ್ಪೇನದವರ ಪತ್ತು ಬಹಳ ಬೆಳೆದದೆ; ಯಾಕಂದರೆ ಇದೇ ತರದ ಶೇವುಗಳಿಗೆ ಸನ್ ೧೮೮೦ನೇ ವರ್ಷ ಅವರು ನೂರಕ್ಕೆ ೧೭ರಂತೆ ಬಡ್ಡೀ ಕೊಡುತ್ತಿದ್ದರು. ಇಂಗ್ಲಿಷ ಸರಕಾರದ ಕಡೆಗೆ ಇಟ್ಟ ಶೇವುಗಳಿಗೆ ನೂರಕ್ಕೆ ೩ರಕ್ಕಿಂತಲೂ ಕಡಿಮೆ ಬಡ್ಡಿ ದೊರಿಯುತ್ತದೆ. ಆದರೆ ಎಷ್ಟೋ ಸಾರಿ ಎರಡು ದೇಶಗಳೊಳಗಿನ ಬಡ್ಡಿಯ ದರಗಳಲ್ಲಿ ಬಹಳ ಹೆಚ್ಚುಕಡಿಮೆ ಇದ್ದರೂ, ಆ ಮಾನದಿಂದ ಆ ದೇಶಗಳ "ಸಾಲಾ ತೀರಿಸುವ ಸಾಮರ್ಥ್ಯವು" ಹೆಚ್ಚುಕಡಿಮೆಯಾಗಿದ್ದಂತೆ ಕಂಡು ಬರುವದಿಲ್ಲ. ಬಡ್ಡಿಯ ದರವು ಆಸ್ತಿಯ ಸುರಕ್ಷಿತತ್ವದ ಮಾನದಿಂದಲೂ, ಸಾಲಾ ಕೊಡುವವರಿಗೆ ಇದ್ದ ಸಾಲ ಮುಳುಗುವದೆಂಬ ಭಯದ ಮಾನದಿಂದಲೂ ಹೆಚ್ಚುಕಡಿಮೆಯಾಗುವದಲ್ಲದೆ, ದೇಶದೊಳಗಿನ ಸಾಗುವಳಿಯ ಮೇರೆಯಿಂದಲೂ ಹೆಚ್ಚುಕಡಿಮೆಯಾಗುವದೆಂದು ಹಿಂದೆ ವಿವರಿಸಿದ್ದೇವೆ. ಆದಕಾರಣ, ಇಂಗ್ಲಿಷ ಸರಕಾರದ ಶೇವುಗಳಿಗೆ ನೂರಕ್ಕೆ ೩ರಕ್ಕಿಂತ ಕಡಿಮೆ ಬಡ್ಡಿ ಬರುತ್ತಿದ್ದು, ಅಮೇರಿಕೆಯ ಸರಕಾರದ ಶೇವುಗಳಿಗೆ ಹೆಚ್ಚು ಬಡ್ಡಿ ಬರುತ್ತದೆಂಬುವದರ ಮೇಲಿಂದ ಅಮೇರಿಕೆಯ ಸರಕಾರಕ್ಕಿಂತಲೂ ಇಂಗ್ಲಿಷ ಸರಕಾರದ ಪತ್ತು ವಿಶೇಷ ಉಂಟೆಂದು ಊಹಿಸುವದು ಸರಿಯಾಗಲಾರದು. ಇವೆರಡು ದೇಶಗಳಲ್ಲಿ ಸಾಗುವಳಿಯ ಮೇರೆಯ ಸ್ಥಿತಿಯು ಬೇರೆಯಾಗಿರುವದೊಂದು ಇವೆರಡು ದೇಶಗಳಲ್ಲಿ ದೊರಿಯುವ ಬಡ್ಡಿಯ ಹೆಚ್ಚುಕಡಿಮೆಗೆ ಕಾರಣವು. ಇಂಗ್ಲಂಡದಲ್ಲಿ ಭೋಗ್ಯಾದಿ ಅಡವಿಗೆ, ಅಂದರೆ ಭೂಮಿಯನ್ನು ಅಡವು ಇಟ್ಟರೆ ನೂರಕ್ಕೆ ೪ರ ಬಡ್ಡಿಯಂತೆ ಸಾಲ ದೊರಿಯ ಬಹುದು. ಆದರೆ ಅಮೇರಿಕೆಯಲ್ಲಿ ಭೋಗ್ಯಾದಿ ಅಡವು ಇಟ್ಟರೂ ನೂರಕ್ಕೆ ೭ಕ್ಕಿಂತ

ಕಡಿಮೆ ಬಡ್ಡಿಗೆ ಸಾಲ ದೊರಿಯುವದಿಲ್ಲ. ಆದಕಾರಣ ಯಾವದೊಂದು ದೇಶದ ಪತ್ತು ಇಷ್ಟೇ ಎಂದು ಆ ದೇಶದವರು ತಂದ ಸಾಲಕ್ಕೆ ಕೊಡುವ ಬಡ್ಡಿಯ ದರದ ಮೇಲಿಂದ ಸರಿಯಾಗಿ ತಿಳಿಯಲಾರದು. ಯಾವದೊಂದು ದೇಶದವರಿಗೆ ಕೊಟ್ಟ ಸಾಲವು ತಿರುಗಿ ಬರುವ ವಿಷಯದಲ್ಲಿ ಭರವಸ, ಇಲ್ಲವೆ ಅಭರವಸವಿದ್ದ ಮೇರೆಗೆ, ಅವರು ಕೊಡ ಬೇಕಾಗುವ ಬಡ್ಡಿಯ ದರವು ಯಾವಾಗಲೂ ಹೆಚ್ಚು ಕಡಿಮೆಯಾಗುವದು. ಆದಾಗ್ಯೂ ರಾಜ್ಯದ ವಸೂಲಿನ ಸಂಬಂಧದಿಂದ ಸಮನಾಗಿ ಊರ್ಜಿತಸ್ಥಿತಿಯಲ್ಲಿದ್ದಂಥ ಬೇರೆ ಬೇರೆ ದೇಶಗಳಲ್ಲಿ ಸಾಗುವಳಿಯ ಮೇರೆಯ ಉಚ್ಚನೀಚತ್ವಗಳು ಭಿನ್ನವಾಗಿರಲು, ಬಡ್ಡಿಯ ದರಗಳೂ ಭಿನ್ನವಾಗಿರುವವು.

**ಪತ್ತು ಬಂಡವಲವಾಗಿರುವದೆಂದು ಹೇಳುವದು ಅಬದ್ಧವು.**— ಕೆಲವು ಸಾರಿ, ಪತ್ತು ಬಂಡವಲವಾಗಿದೆಂದು ಜನರು ಹೇಳುವರು. ಆದರೆ, ಈ ಶಬ್ದಗಳ ಅರ್ಥವನ್ನು ಸ್ವಲ್ಪ ಆಲೋಚಿಸಿ ನೋಡಿದರೆ ಅವುಗಳಿಂದ ಏನು ಅರ್ಥ ನಿಷ್ಪನ್ನವಾಗುವದಿಲ್ಲವೆಂಬದು ಲಕ್ಷ್ಯಕ್ಕೆ ಬರುವದು. ಪತ್ತೆಂದರೆ "ಸಾಲಾ ತರುವ ಶಕ್ತಿ", ಎಂದು ಮೇಲೆ ಹೇಳಿದೆಯಷ್ಟೇ. ಹಾಗು ಬಂಡವಲವೆಂದರೆ ಮುಂದೆ ಸಂಪತ್ತು ಹುಟ್ಟಿಸುವ ಕೆಲಸಕ್ಕೆ ಉಪಯೋಗಿಸ ಬೇಕೆಂದು ತೆಗೆದಿಟ್ಟ ಸಂಪತ್ತಿನ ಭಾಗವೆಂತಲೂ ಆಗಾಗ್ಯೆ ವಿವರಿಸಲ್ಪಟ್ಟದೆ. ಬಂಡವಲವು ಕೂಲಿಕಾರರ ಉಪಜೀವನ ಸಾಗಿಸುವದು; ಹಾಗೂ ಅವರು ಮಾಡುವ ಕೆಲಸಕ್ಕೆ ಬೇಕಾಗುವ ಆಯುಧಗಳು, ಯಂತ್ರಗಳು, ಮೂಲದ್ರವ್ಯಗಳು, ಇಮಾರತುಗಳು ಮೊದಲಾದವುಗಳನ್ನು ಪೂರೈಸುವದು. ಈ ಕೆಲಸಗಳು ಬರೇ "ಸಾಲಾ ತರುವ ಶಕ್ತಿಯಿಂದ" ಆಗ ಬಹುದೋ? ಎಂದಿಗೂ ಆಗಲಾರವು. ಪತ್ತು ಶ್ರಮಕರ್ತರಿಗೆ ಅಶನವಸನಗಳನ್ನೂ, ಅವರ ಉದ್ಯೋಗದ ಆಯುಧಗಳನ್ನೂ ಪೂರೈಸಲಾರದು. "ಸಾಲಾ ತರುವ ಶಕ್ತಿಯನ್ನು" ಉಪಯೋಗಿಸಿದ್ದೇ ಆದರೆ ಅದರಿಂದ ಬಂಡವಲ ದೊರಕುವದು ನಿಜ. ಇದೇ ಪ್ರಕಾರ ಶರೀರದೊಳಗಿನ ಸ್ನಾಯುಗಳ ಶಕ್ತಿಯನ್ನು ಉಪಯೋಗಿಸಿದ್ದಾದರೆ ಒಂದು ಗೋಧಿಯ ಚೀಲವನ್ನು ನೆಗವಿ ಒಯ್ಯ ಬಹುದು. ಆದರೆ ಇದರ ಮೇಲಿಂದ ಮನುಷ್ಯನ ಶಕ್ತಿಯಂದರೆ ಒಂದು ಚೀಲ ಗೋಧಿ, ಎಂದು ಹೇಳ ಬಹುದೋ? ಹೀಗೆ ಹೇಳುವದು ಅಬದ್ಧವಾದರೆ, ಪತ್ತು ಬಂಡವಲವೆಂದು ಹೇಳುವದಾದರೂ ಅಷ್ಟೇ ಅಬದ್ಧವಾಗಿರುವದು.

**ಬ್ಯಾಂಕುಗಳು, ಅಂದರೆ ಶೇವಿನ ಅಂಗಡಿಗಳು.**—ಪತ್ತಿನಿಂದ ಉಂಟಾಗುವ ನಿಜವಾದ ಪ್ರಯೋಜನವು ಯಾವದಂದರೆ, ಅದರಿಂದ ದೇಶದೊಳಗಿನ

ಸಂಪತ್ತು ಹೆಚ್ಚು ಹೆಚ್ಚಾಗಿ ಬಂಡವಲದ ರೂಪದಿಂದ ಉತ್ಪಾದಕ ಉದ್ಯೋಗಗಳಲ್ಲಿ ಶೇರುವದಕ್ಕೆ ಮಾರ್ಗವಾಗುವದು. ಅದರಿಂದ ಜನರಿಗೆ ಉತ್ಪಾದಕ ಕೆಲಸಗಳಲ್ಲಿ ಸಂಪತ್ತು ಹಾಕುವದಕ್ಕೆ ಪ್ರೋತ್ಸಾಹನ ಉಂಟಾಗುತ್ತದೆ. ಎಷ್ಟೋ ಜನರ ಹತ್ತರ ಅವರ ನಿತ್ಯದ ಖರ್ಚಿಗೆ ಸಾಕಾಗಿ ಕೆಲವು ಹಣ ಕೈಯ್ಯಲ್ಲಿ ಉಳಿದೇ ಉಳಿಯುವದು. ವರ್ಷಾರು ತಿಂಗಳಿಗೊಮ್ಮೆ ಪೇನ್ಶನುಗಳು, ಬಾಡಿಗೆ, ಬಡ್ಡಿ ಮುಂತಾದವುಗಳು ಬರುವವರು ತಮಗೆ ಬಂದ ಎಲ್ಲಾ ಹಣವನ್ನು ತಾತ್ಕಾಲಕ್ಕೆ ವೆಚ್ಚಮಾಡುವದಿಲ್ಲ; ಸ್ವಲ್ಪ ಹಣ ಮಾತ್ರ ಅವರ ದಿನದ ಖರ್ಚಿಗೆ ಬೇಕಾಗುವದು. ಉಳಿದ ಹಣದಿಂದ ಅವರು ತಾವೇ ವ್ಯಾಪಾರ ಮಾಡ ಬೇಕಾದರೆ ಕೆಲವರಿಗೆ ಅನುಕೂಲವಿರುವದಿಲ್ಲ, ಬೇರೆ ಕೆಲವರಿಗೆ ಮನಸಿರುವದಿಲ್ಲ. ಇದಲ್ಲದೆ, ಎಷ್ಟೋ ಸಾರಿ ತೀರ ಸಣ್ಣ ಪುಟ್ಟ ರಕಮುಗಳಿಂದ ವ್ಯಾಪಾರ ಮಾಡಲಿಕ್ಕೂ ಬರುವ ಹಾಗಿರುವದಿಲ್ಲ. ಇಂಥ ಜನರ ಶಿಲುಕುಗಳು ಅವರಿಗೆ ಬೇಕಾದಾಗ ತಿರುಗಿ ದೊರಿಯುವ ಹಾಗೆ ಮಾಡಿ, ಅವು ಅವರಿಗೆ ಬೇಕಾಗುವ ವರೆಗೆ ಅವುಗಳನ್ನು ಸಂಪದುತ್ಪಾದಕ ಉದ್ಯೋಗಗಳಲ್ಲಿ ಶೇರಿಸುವಂಥ ಸಾಧನವಿದ್ದರೆ, ಈ ಎಲ್ಲ ಶಿಲುಕುಗಳು ಬಂಡವಲವಾಗಿ ಉಪಯೋಗಿಸಲ್ಪಟ್ಟು ಅದರಿಂದ ಉತ್ಪಾದಕ ಕೆಲಸಗಳಾಗುವವು. ಇಂಥ ಸಾಧನಗಳಿಲ್ಲದಿದ್ದರೆ ಈ ಶಿಲುಕುಗಳೆಲ್ಲ ಮನೆಯಲ್ಲಿ ನಿರರ್ಥಕವಾಗಿ ನೆಲ ಹಿಡಕೊಂಡು ಕೂಡ್ರುವವು. ಇಂಗ್ಲಂಡದಂಥ ಸುಧಾರಿಸಿದ ದೇಶಗಳಲ್ಲಿ ಇಂಥ ಶಿಲುಕುಗಳನ್ನು ಇಡುವಂಥ ಶೇವಿನ ಅಂಗಡಿಗಳು ಬಹಳ ಉಂಟು. ಆದ್ದರಿಂದ ಜನರ ಹತ್ತರ ಉಳಿದ ಸಣ್ಣ ಪುಟ್ಟ ರಕಮುಗಳು ಸಹ ಸುರಕ್ಷಿತವಾಗಿರುವದಲ್ಲದೆ, ಅವುಗಳಿಂದ ಉತ್ಪಾದಕ ಕೆಲಸಗಳು ನಡಿಯುತ್ತವೆ. ಉದಾಹರಣಾರ್ಥವಾಗಿ "ಅ" ಎಂಬವನ ವರ್ಷದ ಉತ್ಪನ್ನವು ೧,೦೦೦ ರೂಪಾಯಿಯುಂಟೆಂದು ತಿಳಿಯಿರಿ. ಇವನು ಈ ಯಾವತ್ತು ರೂಪಾಯಿಗಳನ್ನು ಬ್ಯಾಂಕಿನಲ್ಲಿಟ್ಟು, ತನಗೆ ಬೇಕಾದ ಹಾಗೆ ಸಣ್ಣ ಸಣ್ಣ ರಕಮುಗಳನ್ನು ತಿರುಗಿ ತಕ್ಕೊಳ್ಳುವನು. ಈ ಪ್ರಕಾರ ಬ್ಯಾಂಕುಗಳಲ್ಲಿ ದಿನಾಲು ಎಷ್ಟೋ ಜನರು ಹಣವನ್ನು ತಂದು ಇಡುವರು; ಎಷ್ಟೋ ಜನರು ತಕ್ಕೊಂಡು ಹೋಗುವರು. ಆದರೂ ಅನುಭವದಿಂದ ಗೊತ್ತಾಗಿರುವದೇನಂದರೆ, ಒಳ್ಳೇ ದೀರ್ಘದೃಷ್ಟಿಯಿಂದ ಕೆಲಸ ನಡಿಸುವಂಥ ಶೇವಿನ ಅಂಗಡಿಯಲ್ಲಿ ಸಹ ಜನರು ಇಟ್ಟ ಯಾವತ್ತು ಇಡಗಂಟುಗಳಲ್ಲಿ ೩ನೇ ಅಂಶಕ್ಕಿಂತಲೂ ಹೆಚ್ಚು ನಗದು ಹಣವನ್ನು ದಿನಂಪ್ರತಿಯ ಕೊಡುವಿಕೆಗಳಿಗೋಸ್ಕರ ಇಡಬೇಕಾಗುವದಿಲ್ಲ. ಆದಕಾರಣ ಬ್ಯಾಂಕಿನಲ್ಲಿಟ್ಟ ಇಡಗಂಟುಗಳ ೩ ಅಂಶವನ್ನು ಬ್ಯಾಂಕಿನವರಿಗೆ ಬೇಕಾದ ಉದ್ಯೋಗಗಳಲ್ಲಿ

ಹಾಕುವದಕ್ಕೆ, ಇಲ್ಲವ ಬೇರೆಯವರಿಗೆ ಸಾಲವಾಗಿ ಕೊಡುವದಕ್ಕೆ ಬರುತ್ತದೆ. "ಅ"ನಿಗೆ ತನ್ನ ಗಂಟು ಯಾವದೊಂದು ಉದ್ಯೋಗದಲ್ಲಿ ಹಾಕುವದು ಎಂದಿಗೂ ಆಗುತ್ತಿದ್ದಿಲ್ಲ. ಆದರೆ ಠೇವಿನ ಅಂಗಡಿಯವರು ಇಂಥ ಅನೇಕ ರಕಮುಗಳನ್ನು ಒಟ್ಟುಗೂಡಿಸಿ, ಅವುಗಳಲ್ಲಿ ೩/೪ ಭಾಗವನ್ನು ಹೊಸ ಸಂಪತ್ತು ಹುಟ್ಟಿಸುವ ಉದ್ಯೋಗದಲ್ಲಿ ಸೇರಿಸುವದರಿಂದ ಅವರಿಗೂ ಲಾಭವಾಗುತ್ತದೆ; ಹಾಗೂ ಅವರ ಅಂಗಡಿಯಲ್ಲಿ ಗಂಟು ಇಟ್ಟವರಿಗೂ ಲಾಭವಾಗುತ್ತದೆ. ವಾಸ್ತವಿಕವಾಗಿ ಠೇವಿನ ಅಂಗಡಿಗಳಲ್ಲಿ ಗಂಟು ಇಡುವವರು ತಮ್ಮ ಎಲ್ಲ ಗಂಟು, ಇಲ್ಲವೆ ಗಂಟಿನಲ್ಲಿ ಬೇಡಿದಷ್ಟು ಭಾಗವನ್ನು ಬೇಕಾದಾಗ ತಮಗೆ ಕೊಡಬೇಕೆಂಬ ಕರಾರಿನಿಂದ ಅದನ್ನು ಠೇವಿನ ಅಂಗಡಿಯ ಸಾವುಕಾರನಿಗೆ ಸಾಲಾ ಕೊಡುವರು. ಕೆಲವು ಠೇವಿನ ಅಂಗಡಿಗಳಲ್ಲಿ ಗಂಟು ಇಡುವವರು ಕೆಲವೊಂದು ಅವಧಿಗಿಂತಲೂ ಹೆಚ್ಚು ಕಾಲ ಗಂಟು ಇಟ್ಟರೆ ಮಾತ್ರ ಅವರ ಗಂಟಿನ ಮೇಲೆ ಬಡ್ಡಿ ದೊರಿಯುವದು. ಆದರೆ, ಬಹುತರವಾಗಿ ಠೇವಿನ ಅಂಗಡಿಗಳ ಸಾವುಕಾರರು ಜನರ ಹಣವನ್ನು ತಮ್ಮ ವಶಕ್ಕೆ ತಕ್ಕೊಂಡು, ಅವರು ಬೇಡಿದ ಕ್ಷಣಕ್ಕೆ ಅವರ ಎಲ್ಲಾ ಹಣವನ್ನೇ ಆಗಲಿ, ಅವರು ತಮ್ಮ ಹಣದೊಳಗಿಂದ ಬೇಡಿದ ಎಷ್ಟೇ ಭಾಗವನ್ನಾಗಲಿ ತಿರುಗಿ ಕೊಟ್ಟರೆ, ಆ ಸಾವುಕಾರರ ಕರ್ತವ್ಯವು ಮುಗಿಯಿತೆಂದು ತಿಳಿಯುವದುಂಟು. ಈ ಅಂಗಡಿಗಳ ದ್ವಾರದಿಂದ ದೇಶದೊಳಗಿನ ಎಷ್ಟು ಅದ್ಭುತವಾದ ರಕಮು, ಸ್ವತಃ ಉದ್ಯೋಗ ಮಾಡದಂಥವರ ಕೈಯ್ಯೊಳಗಿಂದ ಉದ್ಯೋಗ ನಡಿಸುವಂಥವರ ಕೈಯ್ಯಲ್ಲಿ ಶೇರುತ್ತದೆಂಬದನ್ನು ಸ್ವಲ್ಪ ತಿಳುಕೊಳ್ಳ ಬೇಕಾದರೆ, ಇಂಗ್ಲಂಡದೊಳಗಿನ "ಲಂಡನ್ ವೆಸ್ಟಮಿನಿಸ್ಟರ್ ಬ್ಯಾಂಕಿ"ನಂಥ ಒಂದು ಬ್ಯಾಂಕಿನ ಲೆಖ್ಖವನ್ನು ನೋಡಿದರೆ ತಿಳಿಯುವದು. ಈ ಬ್ಯಾಂಕಿನವರು ಇಟ್ಟುಕೊಂಡಿರುವ ಇಡಗಂಟುಗಳ ಸರಾಸರಿಯು ೨,೪೦,೦೦,೦೦೦ ಪೌಂಡುಗಳಾಗಿರುವದು. ಈ ಅದ್ಭುತವಾದ ರಕಮು ನಾನಾ ತರದ ಉದ್ಯೋಗಗಳಲ್ಲಿ ತೊಡಗಿದಂಥ ಬೇರೆ-ಬೇರೆ ವರ್ಗದ ಸಾವಿರಾರು ಜನರಿಂದ ಕೂಡಿಸಲ್ಪಟ್ಟದ್ದು. ಈ ರಕಮಿನೊಳಗಿಂದ ಕನಿಷ್ಠ ಪಕ್ಷಕ್ಕೆ ೧,೬೦,೦೦,೦೦೦ ಪೌಂಡುಗಳು ಹೊಸ ಉದ್ಯೋಗಗಳಲ್ಲಿ ಬಂಡವಲವಾಗಿ ಉಪಯೋಗಿಸಲ್ಪಡುವವು. ಬ್ಯಾಂಕಿನ ಅಂಗಡಿಯ ಸಾವುಕಾರನ ಪತ್ತು ಚನ್ನಾಗಿ ಇದ್ದ ಹೊರ್ತು ಬ್ಯಾಂಕು ಎಂದಿಗೂ ನಡಿಯದೆಂಬದಂತೂ ಸ್ಪಷ್ಟವೇ. ಜನರು ತಾವು ಕೊಟ್ಟ ಹಣವನ್ನು ತಿರುಗಿ ಕೊಡುವ ಸಾಮರ್ಥ್ಯವುಳ್ಳವನೆಂತಲೂ ಪ್ರಾಮಾಣಿಕನೆಂತಲೂ ತಿಳಿದುಕೊಂಡಂಥ ಮನುಷ್ಯನ ವಶಕ್ಕೆ ಮಾತ್ರ ತಮ್ಮ ಹಣವನ್ನು ಕೊಡುವರೇ ಹೊರ್ತು, ಬೇರೆಯವರ ವಶಕ್ಕೆ ಕೊಡಲಾರರು.

ಈ ಪ್ರಕಾರ ದೇಶದೊಳಗಿನ ಸಂಪತ್ತಿನ ಸದ್ವಿನಿಯೋಗವಾಗುವ ಹಾಗೆ ಮಾಡುವದೊಂದು, ಪತ್ತಿನಿಂದ ಆಗತಕ್ಕ ಅನೇಕ ಕಾರ್ಯಗಳಲ್ಲಿ ಗೌರವವುಳ್ಳ ಕಾರ್ಯವು.

**ಸಮೂಹಿಕ ಬಂಡವಲದ ವ್ಯಾಪಾರಸಂಘಗಳು.**—ದೇಶದೊಳಗೆ ಜನರ ಹತ್ತರ ಉಳಿಯುವಂಥ ಸಂಪತ್ತು ಹೆಚ್ಚು ಹೆಚ್ಚಾಗಿ ಉತ್ಪಾದಕ ಕೆಲಸಗಳಲ್ಲಿ ಶೇರುವ ಹಾಗೆ ಪತ್ತು ಮತ್ತೊಂದು ವಿಧದಿಂದ ಮಾಡುವದು. ಈ ವಿಧವು ಯಾವದಂದರೆ: ಸಮೂಹಿಕ ಬಂಡವಲದ ಸಂಘಗಳ ದ್ವಾರದಿಂದ ಬಂಡವಲ ಕೂಡಿಸುವದು. ದೇಶದೊಳಗೆ ಹೊಗೆಬಂಡಿಗಳ ಮಾರ್ಗಗಳು, ಕಾಲಿವೆಗಳು, ದೊಡ್ಡ ಮಾರ್ಗಗಳು ಮೊದಲಾದ ಲೋಕೋಪಯೋಗವುಳ್ಳ ಕೆಲಸಗಳಾಗುವದರಿಂದ ದೇಶದ ಸಂಪತ್ತು ಎಷ್ಟು ಅಭಿವೃದ್ಧಿಯಾಗುವದೆಂಬದನ್ನು ಇಲ್ಲಿ ವರ್ಣಿಸುವ ಅವಶ್ಯವಿಲ್ಲ. ಆದರೆ ಇಂಥ ಪ್ರಚಂಡವಾದ ಉದ್ಯೋಗಗಳು ಒಬ್ಬಿಬ್ಬರ ಬಂಡವಲದಿಂದ ಎಂದಿಗೂ ಸಾಗಲಾರವು. ಇಂಥ ಕೆಲಸಗಳು ಸಮೂಹಿಕ ಬಂಡವಲದ ವ್ಯಾಪಾರಸಂಘಗಳಿಂದ ಮಾತ್ರ ನೆರವೇರುವವು. ಇಂಥ ಸಂಘದ ಉತ್ಪಾದಕರು ಮೊದಲು ಇಂಥ ಉದ್ಯೋಗಕ್ಕೆ ಬೇಕಾಗುವ ಬಂಡವಲವನ್ನು ನಿರ್ಣೈಸುವರು. ಈ ಪ್ರಕಾರ ಯಾವದೊಂದು ಉದ್ಯೋಗಕ್ಕೆ ೧೦,೦೦,೦೦೦ ಪೌಂಡುಗಳು ಬೇಕಾಗುವವೆಂದು ಗೊತ್ತಾಯಿತೆಂದು ಕಲ್ಪಿಸುವ. ಈ ಬಂಡವಲವನ್ನು ಕೂಡಿಸ ಬೇಕಾದರೆ, ಸಂಘದವರು ಅದರಲ್ಲಿ ೫೦ ಪೌಂಡಿನ ಒಂದು ಪಾಲಿನಂತೆ ೨೦,೦೦೦ ಪಾಲು ಮಾಡುವರು. ಆ ಮೇಲೆ ೫೦ ಪೌಂಡು ಸಂಗ್ರಹ ಮಾಡಿ, ಅವನ್ನು ಕೊಟ್ಟು, ೧ ಪಾಲು ಕೊಳ್ಳುವಂಥ ಪ್ರತಿಯೊಬ್ಬ ಗೃಹಸ್ಥನು ಆ ಹೊಗೆಬಂಡಿಯ ಮಾರ್ಗದ ಉದ್ಯೋಗದಲ್ಲಿ ಪಾಲುಗಾರನಾಗುವನು. ಈ ಪ್ರಕಾರ ೫೦ ಪೌಂಡು ಉಳಿಸಿದವನು ಸಹ ಒಂದು ದೊಡ್ಡ ವ್ಯಾಪಾರದಲ್ಲಿ ಪಾಲುಗಾರನಾಗುವನು; ಹಾಗೂ ಅವನ ೫೦ ಪೌಂಡುಗಳಿಂದ ಹೊಸ ಸಂಪತ್ತು ಹುಟ್ಟಿಸುವಂಥ ಉದ್ಯೋಗಕ್ಕೆ ಸಹಾಯವಾಗುವದು. ಆದರೆ, ಇಂಥ ಸಂಘಗಳೇ ಮೂಲತಃ ಇಲ್ಲದಿದ್ದ ಪಕ್ಷದಲ್ಲಿ, ಅವನ ಈ ೫೦ ಪೌಂಡುಗಳು ಬಹುತರ ಅನುತ್ಪಾದಕವಾಗಿ ವೆಚ್ಚವಾಗ ಬಹುದಾಗಿತ್ತು. ಆದರೆ, ಯಾವದೊಂದು ವ್ಯಾಪಾರಸಂಘವು ಚನ್ನಾಗಿ ನಡಿಯುವದು ಅದರ ಉತ್ಪಾದಕರ ಹಾಗೂ ಕಾರ್ಯದರ್ಶಿಗಳ ಪತ್ತನ್ನು ಅವಲಂಬಿಸಿರುವದು ಸ್ಪಷ್ಟವೇ ಸರಿ. ಅನೇಕ ಸಾರಿ, ವ್ಯಾಪಾರಸಂಘಗಳ ಕಾರ್ಯದರ್ಶಿಗಳು ಜನರು ತಮ್ಮಲ್ಲಿಟ್ಟ ವಿಶ್ವಾಸಕ್ಕೆ ಸರಿಯಾಗಿ ವರ್ತಿಸದೆ ಜನರನ್ನು ಮುಳುಗಿಸುವದೂ ಉಂಟು. ಆದರೆ ಇದು ಪ್ರಕೃತ ವಿಷಯವಲ್ಲ.

ಇಂಥ ಮುಳುಗಿಸುವ ಸಂಘಗಳಾದರೂ ಅವುಗಳ ಪತ್ತು ಇಲ್ಲದೆ ಹೋದಲ್ಲಿ ಹುಟ್ಟುತ್ತಿದ್ದೇ ಇಲ್ಲ.

ಈ ವಿವರಣೆಯಿಂದ ತಿಳಿಯುವದೇನಂದರೆ, ಸಂಪತ್ತನ್ನು ಉತ್ಪಾದಕ ಕೆಲಸಗಳಲ್ಲಿ ಉಪಯೋಗಿಸುವದಕ್ಕೆ ಪತ್ತಿನಿಂದ ಬಹಳ ಅನುಕೂಲತೆಗಳುಂಟಾಗುವ ಕಾರಣ, ಪತ್ತಿನಿಂದ ದೇಶದೊಳಗಿನ ಬಂಡವಲವು ನಿಶ್ಚಯವಾಗಿ ಅಭಿವೃದ್ಧಿಯಾಗುವದು. ಆದರೆ ಮೇಲೆ ಹೇಳಿದ ವಿಧವಾಗಿ ಪತ್ತಿನಿಂದ ಸಂಪದುತ್ಪಾದನಕ್ಕೆ ಸಹಾಯವಾಗುವದಲ್ಲದೆ, ಪತ್ತಿನ ಕೆಲವು ಅವಾಂತರ ಪ್ರಕಾರಗಳಿಂದ ಬೇರೆ ಕೆಲವು ಕಾರ್ಯಗಳೂ ಆಗುವದುಂಟು. ಈ ಅವಾಂತರ ಪ್ರಕಾರಗಳ ಮೂಲಕವಾಗಿ ಸರಕುಗಳ ವಿನಿಮಯವು ಅತ್ಯಂತ ಸುಲಭವಾಗಿ ನಡಿಯುವದಲ್ಲದೆ, ಅವುಗಳಿಂದ ಸರಕುಗಳ ಕ್ರಯಗಳ ಮೇಲಾದರೂ ಬಹಳ ಪರಿಣಾಮ ಉಂಟಾಗುವದು. ಹುಂಡೀ ಚೀಟುಗಳು, ಬ್ಯಾಂಕಿನ ನೋಟುಗಳು, ಚೇಕುಗಳು, ಖಾತೇ ಲೆಖ್ಖಗಳು, ಎಂಬಿವುಗಳೇ ಈ ಬಗೆಯ ಪತ್ತಿನ ಪ್ರಕಾರಗಳು.

**ಹುಂಡೀ ಚೀಟುಗಳು.**—ಬೇರೆ ಬೇರೆ ದೇಶಗಳ ನಡುವೆ ವ್ಯಾಪಾರ ನಡಿಯಲಾಗಿ, ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಯಾವಾಗಲೂ ಚಿನ್ನಬೆಳ್ಳಿಗಳನ್ನು ಕಳಿಸುವ ಅಗತ್ಯ ಉಳಿಯುವದಿಲ್ಲವೆಂದು ಹಿಂದಿನ ಅಧ್ಯಾಯದಲ್ಲಿ ಹೇಳಲ್ಪಟ್ಟಿತು. ಉದಾಹರಣಾರ್ಥವಾಗಿ, ಇಂಗ್ಲಂಡದ ಸರಕುಗಳನ್ನು ಕೊಂಡಂಥ ಹಿಂದುಸ್ತಾನದ ಯಾವತ್ತೂ ವರ್ತಕರು ಆ ಸರಕುಗಳ ಕ್ರಯವನ್ನು ಇಂಗ್ಲಂಡಕ್ಕೆ ನಗದು ಕಳುಹಿಸ ಬೇಕಾದರೆ, ಬಹಳ ತೊಂದರೆಗಳೂ ಭಯಗಳೂ ಸಂಭವಿಸುವವು. ಆದರೆ, ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಯಾವಾಗಲೂ ಚಿನ್ನ ಬೆಳ್ಳಿಗಳ ಹಣವನ್ನು ಕಳುಹಿಸುವ ಅವಶ್ಯಕತೆ ಉಳಿಯ ಬಾರದೆಂದು ಕೆಳಗೆ ಬರೆದ ಯುಕ್ತಿಯನ್ನು ಮಾಡುವರು. "ಅ"ನೆಂಬ ಇಂಗ್ಲಿಷ ವರ್ತಕನು "ಬ"ನೆಂಬ ಹಿಂದುಸ್ತಾನದ ವರ್ತಕನಿಗೆ ೧೦,೦೦೦ ರೂಪಾಯಿಯ ಕಬ್ಬಿಣ ಮಾರಿದನೆಂತಲೂ, ಹಿಂದುಸ್ತಾನದ "ಕ"ನೆಂಬ ಮೂರನೆ ವರ್ತಕನು ಇಂಗ್ಲಂಡದ "ಡ"ನೆಂಬ ನಾಲ್ಕನೆ ವರ್ತಕನಿಗೆ ೧೦,೦೦೦ ರೂಪಾಯಿಗಳ. ಗೋಧಿಯನ್ನು ಮಾರಿದನೆಂತಲೂ ಕಲ್ಪಿಸುವ. ಇವೆರಡು ದೇಶಗಳ ನಡುವೆ ಹುಂಡೀ ವ್ಯಾಪಾರವು ನಡಿಯದೆ ಹೋದಲ್ಲಿ "ಬ"ನು (ಹಿಂದುಸ್ತಾನದಿಂದ) "ಅ"ನಿಗೆ (ಇಂಗ್ಲಂಡಕ್ಕೆ) ೧೦,೦೦೦ ರೂಪಾಯಿಗಳನ್ನು ನಗದು ಕಳುಹಿಸ ಬೇಕಾಗುವದು; ಹಾಗೂ ಅದೇ ಪ್ರಕಾರ "ಡ"ನು (ಇಂಗ್ಲಂಡದಿಂದ) "ಕ"ನಿಗೆ (ಹಿಂದುಸ್ತಾನಕ್ಕೆ) ೧೦,೦೦೦ ರೂಪಾಯಿಗಳನ್ನು ನಗದು ಕಳುಹಿಸ ಬೇಕಾಗುವದು. ಆದರೆ,

ಸರಕು ಮಾರಿದ "ಅ"ನೆಂಬ ಇಂಗ್ಲಿಷ ವರ್ತಕನಿಗೆ ಸರಕು ಕೊಂಡ "ಡ"ನೆಂಬ ಇಂಗ್ಲಿಷ ವರ್ತಕನ ಕಡೆಯಿಂದ ೧೦,೦೦೦ ರೂಪಾಯಿಗಳು ದೊರಿದರೆ, ಹಾಗೂ ಅದೇ ಪ್ರಕಾರ ಸರಕು ಮಾರಿದ "ಕ"ನೆಂಬ ಹಿಂದುಸ್ತಾನದ ವರ್ತಕನಿಗೆ ಸರಕು ಕೊಂಡಂಥ "ಬ"ನೆಂಬ ಹಿಂದುಸ್ತಾನದ ವರ್ತಕನಿಂದ ೧೦,೦೦೦ ರೂಪಾಯಿ ದೊರಿದದ್ದಾದರೆ, ಇಂಗ್ಲಂಡದಿಂದ ಹಿಂದುಸ್ತಾನಕ್ಕಾಗಲಿ, ಹಿಂದುಸ್ತಾನದಿಂದ ಇಂಗ್ಲಂಡಕ್ಕಾಗಲಿ ನಗದು ಹಣ ಕಳಿಸುವ ಅಗತ್ಯವು ಯತ್ಕಿಂಚಿತವಾದರೂ ಉಳಿಯದೆ, ಮೇಲೆ ಹೇಳಿದ ಕಾರ್ಯವೇ ಆಗುವದು. ಇದನ್ನು ಕೆಳಗೆ ಬರೆದ ಪ್ರಕಾರ ಮಾಡುವರು:—"ಬ"ನೆಂಬ ಹಿಂದುಸ್ತಾನದ ವರ್ತಕನು "ಅ"ನೆಂಬ ಇಂಗ್ಲಿಷ ವರ್ತಕನಿಗೆ ತಾನು ೧೦,೦೦೦ ರೂಪಾಯಿಗಳನ್ನು ಕೊಡುವೆನೆಂಬ ವಚನಪತ್ರವನ್ನು ಕಳುಹಿಸುವನು; ಇದೇ ಪ್ರಕಾರ "ಡ"ನೆಂಬ ಇಂಗ್ಲಿಷ ವರ್ತಕನು "ಕ"ನೆಂಬ ಹಿಂದುಸ್ತಾನದ ವರ್ತಕನಿಗೆ ೧೦,೦೦೦ ರೂಪಾಯಿಗಳನ್ನು ಕೊಡುವ ವಚನಪತ್ರವನ್ನು ಕಳುಹಿಸುವನು. ಈ ಬರಹಮೂಲವಾದ ವಚನಗಳಿಗೆ ಹುಂಡಿಗಳು ಅಥವಾ ಹುಂಡೀ ಚೀಟುಗಳೆಂಬ ಹೆಸರು. "ಅ"ನ ಹತ್ತರ ಹಿಂದುಸ್ತಾನದ ಮೇಲೆ ೧೦,೦೦೦ ರೂಪಾಯಿಗಳ ಹುಂಡಿಯುಂಟು. "ಕ"ನ ಹತ್ತರ ಇಂಗ್ಲಂಡದ ಮೇಲೆ ೧೦,೦೦೦ ರೂಪಾಯಿಗಳ ಹುಂಡಿಯುಂಟು. ಇವರಿಬ್ಬರೂ ಈ ಹುಂಡಿಗಳನ್ನು ಒಬ್ಬರಿಗೊಬ್ಬರು ಕೊಟ್ಟರೆ, ಇಬ್ಬರ ಸಾಲಗಳೂ ತೀರುವವು.

**ಹುಂಡೀಚೀಟುಗಳನ್ನು ಮುರಿಸುವ ಕ್ರಮ.**—ಮೇಲೆ ಹೇಳಿದ ಮೇರೆಗೆ ಹುಂಡೀ ಚೀಟುಗಳನ್ನು ಅದಲುಬದಲು ಮಾಡುವ ಕೆಲಸವನ್ನು ವ್ಯಾಪಾರಸ್ಥರು ತಾವೇ ಮಾಡುವದಿಲ್ಲ. ವಾಡಿಕೆಯಾಗಿ ಈ ಕೆಲಸವನ್ನು ಮಾಡುವಂಥ ಹುಂಡೀ ವ್ಯಾಪಾರ ಮಾಡುವ ದಲಾಲರೆಂಬುವರು ಬೇರೆ ಇರುವರು. ಇವರು ಬೇರೆ ಬೇರೆ ದೇಶಗಳ ಮೇಲಿನ ಹುಂಡಿಗಳನ್ನು ಕೊಳ್ಳುವರು. ಮೇಲೆ ಹೇಳಿದ ಉದಾಹರಣದಲ್ಲಿ "ಅ" ಮತ್ತು "ಕ" ಎಂಬವರು ತಾವೇ ತಮ್ಮಿಬ್ಬರ ಹುಂಡೀ ಚೀಟುಗಳನ್ನು ಒಬ್ಬರಿಗೊಬ್ಬರು ಕೊಡುವದಿಲ್ಲ. "ಅ" ಎಂಬವನು ಲಂಡನದ ಯಾವನಾದರೊಬ್ಬ ಹುಂಡೀ ವ್ಯಾಪಾರ ಮಾಡುವ ದಲಾಲನಿಗೆ ಸ್ವಲ್ಪ ದಲಾಲಿ ಕೊಟ್ಟು ತನ್ನ ಹುಂಡೀ ಚೀಟನ್ನು ಮಾರಿಕೊಳ್ಳುವನು. ಹಾಗೂ "ಕ"ನು ತನ್ನ ಹುಂಡೀ ಚೀಟನ್ನು ಮುಂಬಾಯಿಯ ಒಬ್ಬ ದಲಾಲನಿಗೆ ಮಾರುವನು. ಈ ಮೇರೆಗೆ, ಲಂಡನದಲ್ಲಿರುವ ಹುಂಡೀಚೀಟುಗಳ ದಲಾಲನ ಹತ್ತರ ಹಿಂದುಸ್ತಾನದ ಮೇಲೆ ೧,೦೦,೦೦,೦೦೦ ರೂಪಾಯಿಗಳ ಹುಂಡೀ ಚೀಟುಗಳು ಕೂಡ

ಬಹುದು. ಅದೇ ಕಾಲಕ್ಕೆ ಮುಂಬಾಯಿಯ ದಲಾಲನ ಹತ್ತರವಾದರೂ ಇಂಗ್ಲಂಡದ ಮೇಲೆ ೧,೦೦,೦೦,೦೦೦ ರೂಪಾಯಿಗಳ ಹುಂಡಿಗಳು ಕೂಡಬಹುದು. ಆಗ ಈ ಇಬ್ಬರು ದಲಾಲರೂ ತಮ್ಮಲ್ಲಿ ಕೂಡಿದ್ದ ಹುಂಡೀ ಚೀಟುಗಳನ್ನು ಒಬ್ಬರಿಗೊಬ್ಬರು ಕೊಡುವರು. ಈ ಪ್ರಕಾರ, ಎರಡೂ ದೇಶಗಳ ನಡುವೆ ಕೇವಲ ಸರಕುಗಳನ್ನೇ ಅದಲುಬದಲು ಮಾಡಿ ವ್ಯಾಪಾರ ನಡಿಸಿದ ಹಾಗೆ, ಅಲ್ಪಸ್ವಲ್ಪಾದರೂ ನಗದು ಹಣ ಕಳುಹಿಸ ಬೇಕಾಗದೆ ಯಾವತ್ತು ವ್ಯಾಪಾರವು ನಡಿಯ ಬಹುದು.

**ಹಣದಿಂದ ಆಗುವ ಅನೇಕ ಕಾರ್ಯಗಳು ಹುಂಡೀ ಚೀಟುಗಳಿಂದ ಆಗುವ ಕಾರಣ, ಅವುಗಳಿಂದ ಸಾಮಾನವಾಗಿ ಯಾವತ್ತು ಧಾರಣೆಗಳ ಮೇಲೆ ಕೆಲವೊಂದು ಪರಿಣಾಮವು ಉಂಟಾಗುವದು.**—ಹುಂಡೀ ಚೀಟುಗಳನ್ನು ಸ್ವದೇಶದೊಳಗಿನ ವ್ಯಾಪಾರದಲ್ಲಿಯೂ ಪರದೇಶಗಳ ಕೂಡ ನಡಿಸಿದ ವ್ಯಾಪಾರದಲ್ಲಿಯೂ ಬಹಳ ಉಪಯೋಗಿಸುವದುಂಟು. ವ್ಯಾಪಾರಸ್ಥರು ಒಬ್ಬರಿಗೊಬ್ಬರು ನಗದು ಹಣವನ್ನು ಬಹುಶಾ ಕೊಡುವದಿಲ್ಲ, ಕೊಡತಕ್ಕ ಹಣಕ್ಕಾಗಿ ಹುಂಡೀ ಚೀಟುಗಳನ್ನು ಕೊಡುವರು: ಅಂದರೆ ಹಣವನ್ನು ಇಂತಿಷ್ಟು ವಾಯಿದೆಗೆ ಕೊಡುವೆವೆಂಬ ವಚನಪತ್ರವನ್ನು ಬರಕೊಡುವರು. ಈ ಪ್ರಕಾರ, ಮೂರು ತಿಂಗಳ ವಾಯಿದೆಯ ಹುಂಡಿಯಂದರೆ, ಮೂರು ತಿಂಗಳನಂತರ ಹಣ ಕೊಡುವ ವಚನಪತ್ರವೆಂದು ತಿಳಿಯ ತಕ್ಕದ್ದು. ಹುಂಡಿಯು ವಾಯಿದೆ ತುಂಬುವ ವರೆಗೆ ಹುಂಡಿಯು ಹಣದಿಂದಾಗುವ ಎಷ್ಟೋ ಕಾರ್ಯಗಳನ್ನು ಮಾಡುತ್ತದೆ. ಹ್ಯಾಗಂದರೆ, ಹುಂಡೀ ತಕ್ಕೊಂಡವನು ಏನೊಂದು ಖರೀದಿಯನ್ನು ಮಾಡ ಲಪೇಕ್ಷಿಸ ಬಹುದು. ೧೦,೦೦೦ ರೂಪಾಯಿಗಳದೊಂದು ಹುಂಡಿಯನ್ನು 'ಬ'ನೆಂಬವನು 'ಅ'ನಿಗೆ ಕೊಟ್ಟಿದ್ದಾನೆಂದು ಕಲ್ಪಿಸುವ. ಈಗ್ಯೆ "ಅ"ನು "ಡ" ಎಂಬವನ ಕಡೆಯಿಂದ ೧೦,೦೦೦ ರೂಪಾಯಿಗಳ ಸರಕು ಕೊಳ್ಳ ಬೇಕಾದರೆ ಈ ಪ್ರಸಕ್ತಿಯಲ್ಲಿ "ಅ"ನು ತನಗೆ "ಬ"ನು ಕೊಟ್ಟ ೧೦,೦೦೦ ರೂಪಾಯಿಗಳ ಹುಂಡಿಯನ್ನೇ "ಡ"ನಿಗೆ ಕೊಟ್ಟು ಅವನ ಸರಕು ಕೊಳ್ಳುವನು. "ಅ"ನು ತನಗೆ "ಬ"ನಿಂದ ದೊರಿದ ಹುಂಡಿಯನ್ನು "ಡ"ನಿಗೆ ಕೊಡುವಾಗ, ಆ ಹುಂಡಿಯ ಬೆನ್ನಿನ ಮೇಲೆ, "ಬ"ನು "ಡ"ನಿಗೆ ಹುಂಡಿಯ ಹಣ ಕೊಡುವದಕ್ಕೆ ತಪ್ಪಿದರೆ ಆ ಹಣವನ್ನು ತಾನೇ "ಡ"ನಿಗೆ ಕೊಡುವನೆಂಬ ಗುರುತಿನ ಬಗ್ಗೆ ಶೆರಾ ಬರೆಯುವನು (ಅಂದರೆ, ಆ ಹುಂಡಿಯ ಬೆನ್ನಿನ ಮೇಲೆ ತನ್ನ ಸಹಿಯನ್ನು ಮಾಡುವನು). ಆ ಹುಂಡಿಯ ವಾಯಿದೆ ತೀರುವ ವರೆಗೆ, ಇದರಂತೆಯೇ ಆ ಹುಂಡಿಯನ್ನು ಬೇಕಾ

ಏಷ್ಟು ಸಾರಿ ಸರಕು ಕೊಳ್ಳುವ ಕೆಲಸಕ್ಕೆ ಉಪಯೋಗಿಸ ಬಹುದು. ಪ್ರತಿಯೊಂದು ಸಾರಿ ಆ ಹುಂಡಿಯು ಒಬ್ಬನ ಕೈಯಿಂದ ಮತ್ತೊಬ್ಬನ ಕೈಗೆ ಹೋಗುವಾಗ ಅದರ ಬೆನ್ನಿನ ಮೇಲೆ ಕೊಡುವವನ ಹೊಸ ಸಹಿಯು ಬೀಳುವದು. ಈ ಪ್ರಕಾರ ಹುಂಡಿಯು ವಾಯಿದೆ ತೀರುವ ವರೆಗೆ ಒಮ್ಮೊಮ್ಮೆ ಹುಂಡಿಯ ಬೆನ್ನೆಲ್ಲಾ ಸಹಿಗಳಿಂದ ಮುಚ್ಚಿ ಹೋಗಿರುವದು. ಇಂಥ ಪ್ರಸಕ್ತಿಯಲ್ಲಿ ಹುಂಡಿಯು ಕೆಲವು ಕಾಲ ಹಣದಿಂದಾಗುವ ಕಾರ್ಯಗಳನ್ನು ನಡಿಸುವದೆಂಬದು ಸ್ಪಷ್ಟವೇ ಸರಿ. ಹುಂಡಿಯ ವಾಯಿದೆ ತುಂಬುವ ವರೆಗೆ, ಬೆಳ್ಳಿ ಭಂಗಾರಗಳಲ್ಲಿ ಬೇರೆ ಪದಾರ್ಥಗಳನ್ನು ಕೊಳ್ಳುವ ಶಕ್ತಿ ಇದ್ದಷ್ಟೇ ಅದರಲ್ಲಿಯೂ ಇರುವದು. ಯಾವದೊಂದು ಸಂಗತಿಯಿಂದ ದೇಶದೊಳಗೆ ಬಳಿಕೆಯಲ್ಲಿದ್ದ ಹಣದ ಪರಿಮಿತಿಯು ವೃದ್ಧಿಯಾಗಲಾಗಿ, (ಬೇರೆ ಸಂಗತಿಗಳೆಲ್ಲಾ ಯಥಾಪೂರ್ವವಾಗಿದ್ದರೆ) ಅದರಿಂದ ಸರಕುಗಳ ಧಾರಣೆಗಳು ಏರುವವೆಂಬದನ್ನು ಹಿಂದೆ ಹೇಳಿದ್ದೇವೆ. ಯಾವ ಸರಕಿನ ಬೆಲೆ (ಅಂದರೆ ವಿನಿಮಯಶಕ್ತಿ) ಯಾದರೂ ಅದರ ಬೇಡಿಕೆ ಪೂರೈಕೆಗಳು ಒಂದಕ್ಕೊಂದು ಸಮ್ಮಾನವಾಗುವ ಹಾಗೆ ನಿರ್ಣೈಸಲ್ಪಡುವದು. ಪೂರೈಕೆ ಹೆಚ್ಚಾದರೆ, ಈ ಹೆಚ್ಚಾದ ಪೂರೈಕೆಗೆ ಸರಿಯಾದ ಬೇಡಿಕೆಯನ್ನುಂಟು ಮಾಡುವಷ್ಟು ಆ ಸರಕಿನ ಧಾರಣೆ ಇಳಿಯುವದು. ಈ ಮಾತು ಬೇರೆ ಸರಕುಗಳಿಗೆ ಸರಿಬಿದ್ದಂತೆಯೇ ಹಣವೆಂಬ ಸರಕಿಗಾದರೂ ಸರಿಬೀಳುವದು. ಆದ ಕಾರಣ, ದೇಶದೊಳಗೆ ಹಣದ ಪೂರೈಕೆ ಹೆಚ್ಚಾಗಲು, (ಬೇರೆ ಎಲ್ಲಾ ಸ್ಥಿತಿಯು ಪೂರ್ವದಂತೆಯೇ ಇದ್ದರೆ) ಹಣದ ಬೆಲೆ ಇಳಿಯುವದು; ಅದರ ವಿನಿಮಯಶಕ್ತಿಯು, ಅಂದರೆ ಬೇರೆ ಸರಕುಗಳನ್ನು ಕೊಳ್ಳುವ ಶಕ್ತಿಯು ಕಡಿಮೆಯಾಗುವದು; ಧಾರಣೆಗಳೆಲ್ಲ ಏರುವವು. ಈ ವಿವರಣೆಯ ಮೇಲಿಂದ ಹುಂಡಿಗಳಿಂದುಂಟಾಗುವ ಪರಿಣಾಮವನ್ನು ಸುಲಭವಾಗಿ ತಿಳುಕೊಳ್ಳ ಬಹುದು. ಹುಂಡಿಯು ಅದರ ವಾಯಿದೆ ಮುಗಿಯುವ ವರೆಗೆ ಹಣಕ್ಕೆ ಬದಲಾಗಿ ಹಣದಂತೆಯೇ ಉಪಯೋಗಿಸಲ್ಪಡುತ್ತದೆಂದು ಈಗಲೇ ವಿವರಿಸಿದೆಯಷ್ಟೆ. ಆ ಕಾರಣ ದೇಶದೊಳಗಿನ ಚಿನ್ನ ಬೆಳ್ಳಿಗಳ ನಾಣ್ಯಗಳ ಪರಿಮಿತಿಯು ಹೆಚ್ಚಿದ್ದರಿಂದ ಉಂಟಾಗುವ ಪರಿಣಾಮವೇ ಹುಂಡಿಗಳ ಉಪಯೋಗದಿಂದಲೂ ಆಗುವದು. ಈಗ್ಯೆ ಹುಂಡಿಗಳ ಮುಖಾಂತರವಾಗಿ ನಡಿಯುವಂಥ ಯಾವತ್ತೂ ವ್ಯವಹಾರವನ್ನು ನಗದು ಹಣದಿಂದ ನಡಿಸಿದರೆ, ಕೆಳಗಿನ ಎರಡು ಸಂಗತಿಗಳಲ್ಲೊಂದು ವರ್ತಿಸಲಿಕ್ಕೇ ಬೇಕು. ನಿಲ್ಲಿಸಿ ಬಿಟ್ಟ ಹುಂಡಿಗಳಷ್ಟು ಹೆಚ್ಚು ಹಣವು ದೇಶದೊಳಗೆ ಬಳಿಕೆಯಲ್ಲಿದ್ದ ಹಣಕ್ಕೆ ಶೇರಿಸಲ್ಪಡ ಬೇಕು; ಇಲ್ಲವೆ ಸಾಮಾನ್ಯವಾಗಿ ಯಾವತ್ತು ಧಾರಣೆಗಳು ಇಳಿಯ ಬೇಕು. ಆದ ಕಾರಣ, ಈಗ್ಯೆ ನಡಿಯುವಂಥ ಹುಂಡೀ

ಚೀಟುಗಳ ವ್ಯವಹಾರದಿಂದ ದೇಶದೊಳಗಿನ ಧಾರಣೆಗಳು ಏರಿರ ಬೇಕು; ಇಲ್ಲವೆ ಧಾರಣೆಗಳು ಇಳಿಯುವದಕ್ಕೆ ಪ್ರತಿಬಂಧ ಉಂಟಾಗಿರ ಬೇಕು.

**ಬ್ಯಾಂಕನೋಟುಗಳು.**—ಧಾರಣೆಗಳ ಮೇಲೆ ಹುಂಡೀ ಚೀಟುಗಳಿಂದ ಉಂಟಾಗುವ ಪರಿಣಾಮವೇ ಪತ್ತಿನ ಬೇರೆ ಕೆಲವು ಪ್ರಕಾರಗಳಿಂದಲೂ ಉಂಟಾಗುವದು. ಬೆಳ್ಳಿ ಭಂಗಾರಗಳ ನಾಣ್ಯಗಳ ಪರಿಮಿತಿಯು ಬೆಳೆಯುವದರಿಂದ ಧಾರಣೆಗಳ ಮೇಲೆ ಆಗುವ ಪರಿಣಾಮವೇ ಬ್ಯಾಂಕಿನ ನೋಟುಗಳಿಂದಲೂ ಆಗುವದು. ಬ್ಯಾಂಕಿನ ನೋಟೆಂಬುವದು ಹಣ ಕೊಡುವ ವಚನವಾಗಿರುವದು. ಹಾಗೂ, ಬ್ಯಾಂಕಿನ ನೋಟಿಗೂ ಹುಂಡೀ ಚೀಟಿಗೂ ಇರುವ ಮುಖ್ಯ ಹೆಚ್ಚುಕಡಿಮೆ ಏನಂದರೆ, ಬ್ಯಾಂಕನೋಟಿನ ಹಣವನ್ನು ಬೇಡಿದ ಕೂಡ್ಲೆ ಕೊಡ ತಕ್ಕದ್ದಾಗಿರುವದು; ಹುಂಡೀ ಚೀಟಿಯ ಹಣವನ್ನು ಹುಂಡಿಯಲ್ಲಿ ಬರೆದ ವಾಯಿದೆಗೆ ಕೊಡತಕ್ಕದ್ದಾಗಿರುವದು. ಹಣಕ್ಕೆ ಬದಲಾಗಿ ಬ್ಯಾಂಕಿನ ನೋಟುಗಳನ್ನು ಉಪಯೋಗಿಸುವದು ಎಷ್ಟು ಪ್ರಯೋಜನಕರವಾಗಿರುವದೆಂಬುವದು ಎಲ್ಲರಿಗೂ ತಿಳಿದದ್ದೇ ಸರಿ. ನೋಟುಗಳು ಬಹಳ ಸಣ್ಣವಾಗಿಯೂ, ಹತ್ತರ ಇಡಲಿಕ್ಕೂ ಬೇಕಾದಲ್ಲಿ ಒಯ್ಯಲಿಕ್ಕೂ ಬಹಳ ಸುಲಭವಾದವುಗಳೂ ಆದ ಕಾರಣ, ಪತ್ತಿನ ಸಾಧನಗಳಾಗಿ ಉಪಯೋಗಿಸಲ್ಪಡುವದಕ್ಕೆ ಇವೇ ಯೋಗ್ಯವಾದವುಗಳು. ಇಂಗ್ಲಂಡದ ಬ್ಯಾಂಕಿನ ನೋಟುಗಳೂ, ಈ ದೇಶದೊಳಗಿನ ಸರಕಾರೀ ನೋಟುಗಳೂ ಕೇವಲ ಹಣದಂತೆಯೇ ಇರುವವು. ಈ ನೋಟುಗಳನ್ನು ಕೊಟ್ಟರೆ ಅವನ್ನು ಹಣದಂತೆಯೇ ಹಿಡಿಯ ಬೇಕೆಂಬ ಕಟ್ಟಳೆಯುಂಟು. ಹಾಗೂ ಈ ನೋಟುಗಳನ್ನು ಜನರು ಹಣದಂತೆಯೇ ಏನೂ ಅಂದೇಶವಿಲ್ಲದೆ ತಕ್ಕೊಳ್ಳುವರು. ಆದರೆ, ಪ್ರೊಹ್ವಿನ್ಸಿಯಲ್ ಬ್ಯಾಂಕುಗಳ ನೋಟುಗಳನ್ನೂ ಖಾಸಗಿ ಬ್ಯಾಂಕುಗಳ ನೋಟುಗಳನ್ನೂ ಕೊಟ್ಟರೆ ಹಿಡಿಯ ಬೇಕೆಂಬ ಸರಕಾರದ ಕಟ್ಟಳೆ ಇಲ್ಲದಿದ್ದಾಗ್ಯೂ, ಈ ನೋಟುಗಳನ್ನು ಹೊರಡಿಸಿದ ಬ್ಯಾಂಕಿನವರ ಪತ್ತಿನಲ್ಲಿ ನಂಬಿಕೆಯುಳ್ಳವರು ಈ ನೋಟುಗಳನ್ನು ಪೂರ್ಣ ವಿಶ್ವಾಸದಿಂದ ಹಿಡಿಯುವರು. ಇಂಗ್ಲಂಡದಲ್ಲಿ "ಇಂಗ್ಲಂಡದ ಬ್ಯಾಂಕಿನ" ನೋಟುಗಳನ್ನು ಬೇಕಾದಾಗ ಆ ಬ್ಯಾಂಕಿನಲ್ಲಿ ಮುರಿಸಲಿಕ್ಕೆ ಒಯಿದರೂ ಅವುಗಳಿಗೆ ಸರಿಯಾದ ಭಂಗಾರವನ್ನು ತಾತ್ಕಾಲಕ್ಕೆ ಕೊಡಲಿಕ್ಕೇ ಬೇಕೆಂಬ ಸರಕಾರದ ಕಟ್ಟಳೆಯುಂಟು. ಇದಲ್ಲದೆ ಈ ಬ್ಯಾಂಕಿನ ಪತ್ತಿನ ವಿಷಯದಲ್ಲಿ ಎಲ್ಲರಿಗೂ ಪೂರ್ಣ ವಿಶ್ವಾಸವಿರುವದು. ಆ ಕಾರಣ ಬೇರೆ ಪದಾರ್ಥಗಳನ್ನು ಕೊಳ್ಳುವ ಶಕ್ತಿಯು ಭಂಗಾರದಲ್ಲಿದ್ದಷ್ಟೇ ಈ ಬ್ಯಾಂಕಿನ ನೋಟುಗಳಲ್ಲಿಯೂ ಇರುವದು. ಇಂಗ್ಲಂಡದ ಬೇರೆ ಯಾವ ಬ್ಯಾಂಕುಗಳಾದರೂ ತಮ್ಮ

ನೋಟುಗಳಿಗೆ ಬೇಡಿದಾಗ ಭಂಗಾರವನ್ನಾಗಲಿ "ಬ್ಯಾಂಕ ಆಫ್ ಇಂಗ್ಲಂಡಿನ" ನೋಟುಗಳನ್ನಾಗಲಿ ಕೊಡುವದಕ್ಕೆ ಕಾಯಿದೆಯಿಂದ ಬದ್ಧವಾಗಿರುವವು. ಆದರೂ, ಒಳ್ಳೇ ಜಾಗ್ರತೆಯಿಂದ ನಡಿಸಿದ ಬ್ಯಾಂಕುಗಳಲ್ಲಿ ಸಹ, ಅವುಗಳು ಹೊರಡಿಸಿದ ಯಾವತ್ತು ನೋಟುಗಳ ಬೆಲೆಗೆ ಸರಿಯಾದ ನಗದು ಹಣವನ್ನು ಇಡಬೇಕೆಂದು ಕಾಯಿದೆಯು ಅಗತ್ಯ ಪಡಿಸುವದಿಲ್ಲ. ಯಾವ ಬ್ಯಾಂಕಿನಲ್ಲಾದರೂ ಆ ಬ್ಯಾಂಕಿನಿಂದ ಹೊರಟ ನೋಟುಗಳ ⅓ಕ್ಕಿಂತಲೂ ಹೆಚ್ಚು ನಗದು ಹಣವನ್ನು ಇಡುವ ಅವಶ್ಯವಿಲ್ಲವೆಂದು ಅನುಭವದಿಂದ ಕಂಡು ಬಂದಿರುವದು. ಉದಾಹರಣಾರ್ಥವಾಗಿ, ಇಂಗ್ಲಂಡದಲ್ಲಿ ಒಟ್ಟಿಗೆ ಸುಮಾರು ೩,೦೦,೦೦,೦೦೦ ಪೌಂಡುಗಳ ನೋಟುಗಳು ಬಳಿಕೆಯಲ್ಲಿರುವವು. ಆದರೆ ಲೆಖ್ಖ ಮಾಡಿ ನೋಡಿದರೆ ಎಲ್ಲ ಬ್ಯಾಂಕುಗಳು ಕೂಡಿ ೧,೦೦,೦೦,೦೦೦ ಪೌಂಡುಗಳನ್ನು ಮಾತ್ರ ನಗದು ಇಟ್ಟಿರುವವೆಂದು ಕಂಡು ಬರುವದು. ಆ ಕಾರಣ ಉಳಿದ ೨,೦೦,೦೦,೦೦೦ ಪೌಂಡುಗಳು ದೇಶದೊಳಗಿನ ನಾಣ್ಯಗಳ ಮೊಬಲಗಿಗೆ ಹೆಚ್ಚು ಕೂಡಿದಂತಾಯಿತು. ಬ್ಯಾಂಕಿನ ನೋಟುಗಳನ್ನು ಹೊರಡಿಸಿ, ಅಷ್ಟೇ ಪರಿಮಿತಿಯ ಹಣವನ್ನು ದೇಶದೊಳಗಿನ ಬಳಿಕೆಯಲ್ಲಿದ್ದ ನಗದು ಹಣದೊಳಗಿಂದ ತೆಗೆದು ಹಾಕಿದರೆ, ಧಾರಣೆಗಳ ಮೇಲೆ ಏನೇನು ಪರಿಣಾಮ ಉಂಟಾಗದೆ ಯಥಾಪ್ರಕಾರ ಇರುವವೆಂಬದು ಸ್ಪಷ್ಟವದೆ. ಯಾಕಂದರೆ, ಇದರಿಂದ ದೇಶದೊಳಗಿನ ಹಣದ ಪರಿಮಿತಿಯು ಹೆಚ್ಚೂ ಆಗುವದಿಲ್ಲ ಕಡಿಮೆಯೂ ಆಗುವದಿಲ್ಲ. ಆದರೆ, ಬ್ಯಾಂಕಿನ ನೋಟುಗಳನ್ನು ಹೆಚ್ಚು ಹೊರಡಿಸಿ ಆ ಪ್ರಮಾಣದಿಂದ ನಗದು ಹಣವನ್ನು ಕಡಿಮೆ ಮಾಡದಿದ್ದರೆ, ಧಾರಣೆಗಳೆಲ್ಲ ಏರುವವು, ಇಲ್ಲವೆ ಇಳಿಯುವದಕ್ಕೆ ಅಡ್ಡಿಯಾಗುವದು.

**ಚೇಕುಗಳು ಅಥವಾ ವರಾತಚೀಟುಗಳು.**— ಇಂಥವನಿಗೆ ಇಂತಿಷ್ಟು ಹಣ ಕೊಡಬೇಕೆಂದು ಬ್ಯಾಂಕಿನ ಸಾವುಕಾರನಿಗೆ ಕಳುಹಿಸಿದ ಬರಹಮೂಲಕವಾದ ಅಪ್ಪಣೆಗೆ, ಚೇಕು ಅಥವಾ ವರಾತಚೀಟೆಂಬ ಹೆಸರು. ಚೇಕುಗಳ ಹಣ ಬರುವವರು ತಮ್ಮ ಚೇಕುಗಳನ್ನು ತಾತ್ಕಾಲಕ್ಕೆ ಮುರಿಸಿ ನಗದು ಹಣ ತಕ್ಕೊಂಡರೆ, ಅದರಿಂದ ಧಾರಣೆಗಳ ಮೇಲೆ ಏನೂ ಪರಿಣಾಮ ಉಂಟಾಗದು. ಆದರೆ, ಬಹುತರವಾಗಿ ಚೇಕುಗಳು ತಾತ್ಕಾಲಕ್ಕೆ ಎಂದೂ ಮುರಿಸಲ್ಪಡುವದಿಲ್ಲ. ಯಾವನೊಬ್ಬನಿಗೆ ಒಂದು ಚೇಕು ಬರಲಾಗಿ ಅವನು ಅದನ್ನು ತಾನು ವ್ಯವಹಾರವಿಟ್ಟ ಬ್ಯಾಂಕಿನ ಸಾವುಕಾರನ ಕಡೆಗೆ ಕೊಡುವನು. ಇದರಿಂದ ಧಾರಣೆಗಳ ಮೇಲೆ ಉಂಟಾಗುವ ಪರಿಣಾಮವನ್ನು ನೋಡುವಾ. "ಲಂಡನ ಹಾಗೂ ವೆಸ್ಟ ಮಿನಿಸ್ಟರ ಬ್ಯಾಂಕಿನ" ಸಂಗಡ ವ್ಯವಹಾರವಿಟ್ಟ 'ಅ'ನೆಂಬವನೊಬ್ಬನು "ಇಂಪೀ

ರಿಯಲ್ ಬ್ಯಾಂಕಿ"ನ ಕೂಡ ವ್ಯವಹಾರವಿಟ್ಟ 'ಬ'ನಿಗೆ ೧,೦೦೦ ರೂಪಾಯಿಗಳದೊಂದು ಚೇಕು ಕೊಡುತ್ತಾನೆ. ಈ ಚೇಕಂದರೆ 'ಬ'ನಿಗೆ ೧,೦೦೦ ರೂಪಾಯಿಗಳನ್ನು ಕೊಡುವದಕ್ಕಾಗಿ 'ಅ'ನು "ಲಂಡನ ಮತ್ತು ವೆಸ್ಟಮಿನಿಸ್ಟರ ಬ್ಯಾಂಕಿ"ನ ಡಿರೆಕ್ಟರರಿಗೆ ಮಾಡಿದ ಬರಹಮೂಲಕವಾದ ಅಪ್ಪಣೆಯಾಗಿರುವದು. ಆದರೆ, ಆ ಚೇಕು ಪಡಕೊಂಡ "ಬ"ನು ಅದನ್ನು ಮುರಿಸುವದಕ್ಕೆ "ಲಂಡನ ವೆಸ್ಟಮಿನಿಸ್ಟರ ಬ್ಯಾಂಕಿ"ಗೆ ಹೋಗುವದಿಲ್ಲ. ಅವನು ಆ ಚೇಕನ್ನು "ಇಂಪೀರಿಯಲ್ ಬ್ಯಾಂಕಿನವರಿಗೆ" ತನ್ನ ಖಾತೆಗೆ ಜಮೆಮಾಡಲಿಕ್ಕೆ ಕೊಡುವನು. ಆ ದಿವಸವೇ ಈ "ಇಂಪೀರಿಯಲ್" ಬ್ಯಾಂಕಿನವರ ಕೂಡ ವ್ಯವಹಾರವಿಟ್ಟ 'ಕ'ನೆಂಬವನು "ಲಂಡನ ವೆಸ್ಟಮಿನಿಸ್ಟರ ಬ್ಯಾಂಕಿ"ನವರ ಸಂಗಡ ವ್ಯವಹಾರವಿಟ್ಟ 'ಡ'ನೆಂಬವನಿಗೆ ೧,೦೦೦ ರೂಪಾಯಿಯ ಚೇಕು ಕೊಟ್ಟಿರುವನು. 'ಡ'ನೆಂಬವನು ಅದನ್ನು ಇಂಪೀರಿಯಲ್ ಬ್ಯಾಂಕಿಗೆ ತರದೆ, ತನ್ನ ಖಾತೆಗೆ "ಲಂಡನ ವೆಸ್ಟಮಿನಿಸ್ಟರ ಬ್ಯಾಂಕಿ"ನವರಿಗೆ ಕೊಡುವನು. ಆ ದಿವಸದ ಕೊನೆಗೆ ಇಂಪೀರಿಯಲ್ ಬ್ಯಾಂಕಿನವರ ಹತ್ತರ ಲಂಡನ ವೆಸ್ಟಮಿನಿಸ್ಟರ ಬ್ಯಾಂಕಿನವರ ಮೇಲೆ ೧,೦೦೦ ರೂಪಾಯಿಯ ಚೇಕು ಇರುವದು, ಹಾಗು ಲಂಡನ ವೆಸ್ಟಮಿನಿಸ್ಟರ ಬ್ಯಾಂಕಿನವರ ಹತ್ತರವಾದರೂ ಇಂಪೀರಿಯಲ್ ಬ್ಯಾಂಕಿನವರ ಮೇಲೆ ೧,೦೦೦ ರೂಪಾಯಿಯ ಚೇಕು ಇರುವದು. ಆ ಕಾರಣ ಇವೆರಡೂ ಬ್ಯಾಂಕಿನವರು ಆ ಚೇಕುಗಳನ್ನು ಅದಲುಬದಲು ಮಾಡುವರು; ಆದ್ದರಿಂದ ಒಂದು ಬ್ಯಾಂಕಿನಿಂದ ಮತ್ತೊಂದು ಬ್ಯಾಂಕಿಗೆ; ನಗದು ಹಣ ಕಳುಹಿಸುವ ಪ್ರಯೋಜನವೇ ಉಳಿಯುವದಿಲ್ಲ.

**ಲೆಖ್ಖ ತೀರಿಸುವ ಮನೆ.**—ಬೇರೆ ಬೇರೆ ಬ್ಯಾಂಕುಗಳ ಮೇಲಿರುವ ಚೇಕುಗಳನ್ನೂ ಹುಂಡಿಗಳನ್ನೂ ಕೊಡಕೊಳ್ಳುವ ಕೆಲಸವು ಲಂಡನದಲ್ಲಿ ನಿತ್ಯದಲ್ಲಿ ಒಂದು ಕಡೆಗೆ ನಡಿಯುವದು. ಈ ಸ್ಥಳಕ್ಕೆ "ಲೆಖ್ಖ ತೀರಿಸುವ ಮನೆ" ಎಂಬ ಹೆಸರುಂಟು. ಬ್ಯಾಂಕುಗಳ ಸಾವುಕಾರರು ಹಗಲೆಲ್ಲ ಕೂಡಿ ತಮ್ಮ ಕಡೆಗೆ ಬಂದ ಯಾವತ್ತು ಚೇಕುಗಳನ್ನೂ ಹುಂಡಿಗಳನ್ನೂ ಈ ಸ್ಥಳಕ್ಕೆ ಕಳುಹಿಸುವರು. ಹಾಗೂ ಅವುಗಳನ್ನು ಕೊಟ್ಟು, ಅವುಗಳಷ್ಟೇ ಬೆಲೆಯುಳ್ಳ ತಮ್ಮ ಬ್ಯಾಂಕಿನ ಮೇಲೆ ಬಂದ ಹುಂಡಿಗಳನ್ನೂ ಚೇಕುಗಳನ್ನು ತಕ್ಕೊಳ್ಳುವರು. ಈ ಪ್ರಕಾರ ಈ ಮನೆಯಲ್ಲಿ ವರ್ಷಕ್ಕೆ ೬,೦೦,೦೦,೧೦,೦೦೦ ಪೌಂಡುಗಳ ಚೇಕುಗಳು ವಿನಿಮಯವಾಗುತ್ತವೆ. ಈ ವಿನಿಮಯವನ್ನು ನಡಿಸುವದಕ್ಕೆ ಏನೂ ನಗದು ಹಣ ಬೇಕಾಗುವದಿಲ್ಲ. ಹಿಂದಕ್ಕೆ ಒಬ್ಬರೊಬ್ಬರ ಚೇಕುಗಳನ್ನು ಬದಲಿಸಿದನಂತರ, ಹೆಚ್ಚಾದ ಬಾಕಿಗಳನ್ನು ರೋಖ ಹಣ ಕೊಟ್ಟು ತೀರಿಸುತ್ತಿದ್ದರು. ಆ ಪ್ರಚಾ

ರವು ಈಗಿಲ್ಲ. ಈಗ, ಇಂಥ ಬಾಕಿಗಳನ್ನೆಲ್ಲ ತೀರಿಸುವದಕ್ಕಾಗಿ, "ಬ್ಯಾಂಕ ಆಫ್ ಇಂಗ್ಲಂಡ" ಎಂಬ ಬ್ಯಾಂಕಿನಲ್ಲಿ "ಲೆಖ್ಖ ತೀರಿಸುವ ಮನೆಯ ಸಾವುಕಾರರ ಲೆಖ್ಖ" ಎಂಬ ಹೆಸರಿನ ಲೆಖ್ಖವನ್ನು ಇಟ್ಟು ಈ ಬಾಕಿಗಳನ್ನೆಲ್ಲ ತೀರಿಸುವರು. ಈ ಲೆಖ್ಖದಲ್ಲಿ ಪ್ರತಿದಿವಸ ಪ್ರತಿಯೊಂದು ಬ್ಯಾಂಕಿನವರ ಕಡೆಗೆ ಆದ ಬಾಕಿಯನ್ನು, ಇಲ್ಲವೆ ಅವರಿಗೆ ಸಲ್ಲ ತಕ್ಕ ಬಾಕಿಯನ್ನು ಬರೆದಿಡುವರು. ಈ ಪ್ರಕಾರ ಪ್ರತಿಯೊಂದು ಬ್ಯಾಂಕಿಗಾಗಿ ಒಂದು ದಿವಸಕ್ಕೆ ಒಂದು ರಕಮು ಬರೆದರೆ ಸಾಕಾಗುತ್ತದೆ. ಉದಾಹರಣಾರ್ಥವಾಗಿ, "ಲಂಡನ ಹಾಗೂ ವೆಸ್ಟಮಿನಿಸ್ಟರ" ಬ್ಯಾಂಕಿನನವರ ಹತ್ತರ, "ಲಂಡನ ಹಾಗೂ ಕೌಂಟಿ" ಬ್ಯಾಂಕಿನ ಮೇಲೆ ೧೦,೦೦,೦೦೦ ರೂಪಾಯಿಯ ಚೇಕು ಉಂಟೆಂತಲೂ, "ಲಂಡನ ಹಾಗೂ ಕೌಂಟಿ" ಎಂಬ ಬ್ಯಾಂಕಿನವರ ಹತ್ತರ "ಲಂಡನ ಹಾಗೂ ವೆಸ್ಟಮಿನಿಸ್ಟರ" ಬ್ಯಾಂಕಿನ ಮೇಲೆ ೧೧,೦೦,೦೦೦ ರೂಪಾಯಿಯ ಚೇಕು ಉಂಟೆಂತಲೂ ತಿಳಿಯುವ. ಹಿಂದಿನ ರೂಢಿಯಂತೆ ಇವೆರಡು ಬ್ಯಾಂಕಿನವರು ತಮ್ಮೊಳಗಿನ ಬಾಕಿಯನ್ನು ತೀರಿಸ ಬೇಕಾದರೆ, "ಲಂಡನ ಹಾಗೂ ವೆಸ್ಟಮಿನಿಸ್ಟರ" ಬ್ಯಾಂಕಿನವರು ತಮ್ಮ ಮೇಲೆ ಏರಿದ ೧,೦೦,೦೦೦ ರೂಪಾಯಿ ಬಾಕಿಯನ್ನು ನಗದು ಹಣ ಕೊಟ್ಟು ತೀರಿಸುತ್ತಿದ್ದರು. ಆದರೆ ಸಾಂಪ್ರತಕ್ಕೆ, ಬೇರೆ ಬೇರೆ ಬ್ಯಾಂಕಿನವರು ಪರಸ್ಪರರಿಗೆ ಕೊಡಬೇಕಾದ ಇಂಥ ಸಣ್ಣ ರಕಮುಗಳನ್ನು ಕೊಡುವಲ್ಲಿ ಸಹ ಮೇಲೆ ಹೇಳಿದ ಮೇರಿಗೆ ಹಣವನ್ನು ಉಪಯೋಗಿಸುವ ಅವಶ್ಯವಿಲ್ಲದಂತೆ ಮಾಡಿರುವರು. "ಲಂಡನ ಹಾಗು ವೆಸ್ಟಮಿನಿಸ್ಟರ" ಬ್ಯಾಂಕಿನವರು ಬೇರೆ ಲೆಖ್ಖ ತೀರಿಸುವ ಸಾವುಕಾರರ ಕೂಡ ಒಂದು ದಿವಸದ ವ್ಯವಹಾರವನ್ನೆಲ್ಲ ಮುಗಿಸಿದನಂತರ ಒಟ್ಟು ಬೇರೀಜು ಮಾಡಲಾಗಿ, "ಲಂಡನ ಹಾಗೂ ವೆಸ್ಟಮಿನಿಸ್ಟರ ಬ್ಯಾಂಕಿ"ನವರ ಮೇಲೆ ಇದ್ದ ಹುಂಡಿಗಳಿಗಿಂತಲೂ ಬೇರೆಯವರ ಮೇಲೆ ಅವರ ಹತ್ತರ ೧೦,೦೦೦ ರೂಪಾಯಿಗಳ ಹುಂಡಿಗಳು ಹೆಚ್ಚಾದರೆ, ಅಂದರೆ ಬೇರೆ ಸಾವುಕಾರರ ಕಡೆಗೆ "ಲಂಡನ ಹಾಗೂ ವೆಸ್ಟಮಿನಿಸ್ಟರ" ಬ್ಯಾಂಕಿನವರ ೧೦,೦೦೦ ರೂಪಾಯಿ ಬಾಕಿಯಾದರೆ, ಈ ೧೦,೦೦೦ ರೂಪಾಯಿಗಳನ್ನು "ಲೆಖ್ಖ ತೀರಿಸುವ ಸಾವುಕಾರರ ಲೆಖ್ಖ"ದಲ್ಲಿ "ಲಂಡನ ಹಾಗೂ ವೆಸ್ಟಮಿನಿಸ್ಟರ" ಬ್ಯಾಂಕಿನವರ ಖಾತೆಗೆ ಜಮೆ ಹಿಡಿಯುವರು. ಲಂಡನದಲ್ಲಿದ್ದ ಸಾವುಕಾರರ "ಲೆಖ್ಖ ತೀರಿಸುವ ಮನೆ"ಯಲ್ಲದೆ, ಇಂಥಾದ್ದೇ ಮತ್ತೊಂದು ಮನೆಯು ಮ್ಯಾಂಚೆಸ್ಟರ ಪಟ್ಟದಲ್ಲಿರುವದು. ಅಲ್ಲಿ ಪ್ರತಿವಾರಕ್ಕೆ ೨,೦೦,೦೦,೦೦೦ ರೂಪಾಯಿಗಳ ಹುಂಡಿಗಳೂ ಚೇಕುಗಳೂ ಬದಲಿಸಲ್ಪಡುತ್ತವೆ. ಇಂಗ್ಲಂಡದಲ್ಲಿ ಹೊಗೆಬಂಡಿಯ ಕಂಪನಿಗಳೂ ತಮ್ಮದೊಂದು "ಲೆಖ್ಖ ತೀರಿಸುವ ಮನೆಯನ್ನು" ಮಾಡಿ

ಕೊಂಡಿರುವರು. ಈ ಮನೆಯಲ್ಲಿ ಬೇರೆ ಬೇರೆ ಕಂಪನಿಯವರು ಒಬ್ಬರಿಗೊ ಬ್ಬರು ಮುಟ್ಟಿಸ ತಕ್ಕ ಸಾಲಗಳನ್ನು ಮೇಲೆ ವರ್ಣಿಸಿದ ಬಗೆಯಾಗಿ ಮುಟ್ಟಿಸು ವರು.

ಇದರ ಮೇಲಿಂದ ಸ್ಪಷ್ಟವಾಗುವದೇನಂದರೆ, ಚೇಕುಗಳನ್ನು ಉಪಯೋಗಿ ಸುವದರಿಂದಲೂ "ಲೆಖ್ಖತೀರಿಸುವ ಮನೆಗಳ" ದ್ವಾರದಿಂದಲೂ ದೇಶದೊಳಗಿನ ಬಳಿಕೆಯಲ್ಲಿದ್ದ ಹಣದ ಪರಿಮಿತಿಯು ಬಹಳವಾಗಿ ಹೆಚ್ಚುವದು. ಯಾಕಂದರೆ, ಚೇಕುಗಳ ಮುಖಾಂತರವಾಗಿ ವರ್ಷಕ್ಕೆ ೬೦,೦೦,೦೦,೦೦,೦೦೦ ರೂಪಾಯಿಗ ಳಿಗೆ ಸರಿಯಾದ ಕ್ರಯವಿಕ್ರಯಗಳು ಒಂದು ದಮ್ಮಡಿಯಾದರೂ ನಡುವೆ ಬರದೆ ನಡಿಯುವವು. ಆದಕಾರಣ, ಕ್ರಯವಿಕ್ರಯಗಳು ಮೊದಲಿನಷ್ಟೇ ನಡಿಯುತ್ತಿ ರಲು, ಚೇಕುಗಳನ್ನು ಇಲ್ಲವೆ ಚೇಕುಗಳಂಥ ಬೇರೆ ಯಾವದಾದರೊಂದು ಪತ್ತಿನ ಪ್ರಕಾರವನ್ನು ಉಪಯೋಗಿಸುವದನ್ನು ನಿಲ್ಲಿಸಿ ಬಿಟ್ಟರೆ, ಹಣದ ಬೆಲೆ ಏರಿ, ಸಾಮಾನ್ಯವಾಗಿ ಯಾವತ್ತು ಧಾರಣೆಗಳು ಇಳಿಯುವವು. ಯಾಕಂದರೆ, ಚೇಕು ಮುಂತಾದವುಗಳು ನಡಿಯದೆ ಹೋದ್ದರಿಂದ ಈಗ ಚೇಕುಗಳ ದ್ವಾರದಿಂದ ನಡಿ ಯುವಂಥ ಎಷ್ಟೋ ಕ್ರಯವಿಕ್ರಯಗಳನ್ನು ನಡಿಸುವದಕ್ಕೆ ಚಿನ್ನ ಬೆಳ್ಳಿಗಳೇ ಬೇ ಕಾಗುವವು.

**ಖಾತೇಲೆಖ್ಖವು.**— ಖಾತೇಲೆಖ್ಖದ ಕ್ರಮವನ್ನು ಸ್ವಲ್ಪದರಲ್ಲಿ ವಿವರಿಸ ಬಹು ದು. 'ಅ'ನೆಂಬ ಕಬ್ಬಿಣ ಮಾರುವವನೊಬ್ಬನು 'ಬ'ನೆಂಬ ಕಲ್ಲಿದ್ದಲಿ ಮಾರುವ ವರ್ತಕನಿಂದ ೫೦೦ ರೂಪಾಯಿಗಳ ಕಲ್ಲಿದ್ದಲಿಯನ್ನು ಕೊಂಡನೆಂತಲೂ, 'ಬ'ನು 'ಅ'ನ ಬಳಿಯಲ್ಲಿ ೫೦೦ ರೂಪಾಯಿಗಳ ಕಬ್ಬಿಣವನ್ನು ಕೊಂಡನೆಂತಲೂ ತಿಳಿ ಯುವ. ಆಗ 'ಅ' 'ಬ' ಎಂಬವರು ಈ ೫೦೦ ರೂಪಾಯಿಗಳಿಗೋಸ್ಕರ ಒಬ್ಬ ರಿಗೊಬ್ಬರು ಹುಂಡೀ ಚೀಟುಗಳನ್ನಾಗಲಿ ಚೇಕುಗಳನ್ನಾಗಲಿ ಕೊಡದೆ 'ಅ'ನು ತನ್ನ ಖಾತೇವಹಿಯಲ್ಲಿ ೫೦೦ ರೂಪಾಯಿಗಳನ್ನು 'ಬ'ನ ಹೆಸರಿನಲ್ಲಿ ಖರ್ಚು ಹಾಕುವನು. ಅದೇ ಪ್ರಕಾರ 'ಬ'ನೂ ತನ್ನ ಖಾತೇವಹಿಯಲ್ಲಿ 'ಅ'ನ ಹೆಸರಿ ನಲ್ಲಿ ೫೦೦ ರೂಪಾಯಿಗಳನ್ನು ಖರ್ಚು ಹಾಕುವನು. ಅನಂತರ ಒಬ್ಬರಿಗೊ ಬ್ಬರು ೫೦೦ ರೂಪಾಯಿಗಳನ್ನು ಕೊಡಬೇಕಾಗುವ ಕಾರಣ, ಇವರಿಬ್ಬರೂ ಪರ ಸ್ಪರರಿಗೆ ಕೊಡುವ ರಕಮುಗಳನ್ನು ತೆಗೆದು ಹಾಕುವರು. ಈ ಪ್ರಕಾರ ಹಣ ವನ್ನು ಉಪಯೋಗಿಸುವ ಅಗತ್ಯ ಬೀಳುವದಿಲ್ಲ.

**ಧಾರಣೆಗಳ ಮೇಲೆ ಉಂಟಾಗುವ ಪರಿಣಾಮವು, ಪತ್ತಿನಿಂದ ಆಗು ತ್ತದೇ ಹೊರ್ತು ಪತ್ತಿನ ಯಾವದೊಂದು ವಿಶೇಷ ಪ್ರಕಾರದಿಂದ ಆಗುವ**

ದಿಲ್ಲ.—ಈ ಮೇಲೆ ವರ್ಣಿಸಿದ ಪತ್ತಿನ ಪ್ರಕಾರಗಳಲ್ಲೆಲ್ಲಾ ಧಾರಣೆಗಳು ಪತ್ತಿನ ಮೂಲಕವಾಗಿ ಹೆಚ್ಚುಕಡಿಮೆಯಾಗುವವೇ ಹೊರ್ತು, ಪತ್ತಿನ ಯಾವದೊಂದು ವಿಶೇಷ ಪ್ರಕಾರದಿಂದ ಆಗುವದಿಲ್ಲ. ಈ ಮಾತು ಲಕ್ಷ್ಯದಲ್ಲಿಡ ತಕ್ಕದ್ದು. ಬ್ಯಾಂಕಿನ ನೋಟಾಗಲಿ, ಚೇಕಾಗಲಿ, ಹುಂಡಿಯಾಗಲಿ ಪತ್ತಲ್ಲ; ಇವು ಪತ್ತಿನ ಅಸ್ತಿತ್ವವನ್ನು ಹೇಳುವಂಥ ಕೇವಲ ಸಾಧನಗಳಾಗಿವೆ. ಹಣವನ್ನು ಉಪಯೋಗಿಸುವ ಅಗತ್ಯ ಬೀಳದಂತೆ, ಹಣಕ್ಕೆ ಬದಲಾಗಿ ಉಪಯೋಗಿಸಲ್ಪಡುವ ಪ್ರತಿಯೊಂದು ಪತ್ತಿನ ಪ್ರಕಾರದಿಂದ ಧಾರಣೆಗಳ ಮೇಲೆ ಕೆಲವೊಂದು ಪರಿಣಾಮ ಉಂಟಾಗುವದು.

**ಪತ್ತಿನಿಂದ ಉಂಟಾಗುವ ಸರಕು ಕೊಳ್ಳುವ ಶಕ್ತಿ.**—ಪತ್ತನ್ನು ಉಪಯೋಗಿಸುವದರಿಂದ ಧಾರಣೆಗಳ ಮೇಲೆ ಕೆಲವು ಕಾಲದ ವರೆಗೆ ಬಹಳ ಪರಿಣಾಮ ಉಂಟಾಗುವಂಥ ಮತ್ತೊಂದು ವಿಧವೂ ಉಂಟು. ಪತ್ತನ್ನು ಉಪಯೋಗಿಸುವಂಥ ಪ್ರತಿಯೊಬ್ಬನ ಸರಕು ಕೊಳ್ಳುವ ಶಕ್ತಿಯು ಬಹಳ ಹೆಚ್ಚುವದು. ಸರಕುಗಳ ಯಾವತ್ತು ಕ್ರಯವಿಕ್ರಯಗಳು ನಗದು ಹಣದಿಂದಲೇ ನಡಿಯ ಬೇಕಾದರೆ ವ್ಯಾಪಾರವೃದ್ಧಿಗೆ ಬಹಳ ಅಡ್ಡಿಯುಂಟಾಗುವದು. ಉದಾಹರಣಾರ್ಥವಾಗಿ, ಅರಳೀ ನೂಲುವ ಕಾರಖಾನೆಯುವನೊಬ್ಬನು ಬಹಳ ಅರಳೆಯನ್ನು ಖರೀದಿ ಮಾಡ ಬೇಕೆಂದು ಅಪೇಕ್ಷಿಸುತ್ತಾನೆಂದು ತಿಳಿಯುವ. ಅವನಿಗೆ ಬೇಕಾದಷ್ಟು ಅರಳೆಯನ್ನು ಒಮ್ಮೇಲೆ ಕೊಳ್ಳಲಿಕ್ಕೆ ಸಾಕಾಗುವಷ್ಟು ನಗದು ಹಣ ಅವನ ಹತ್ತರ ಇರಲಿಕ್ಕಿಲ್ಲ. ಆದಕಾರಣ, ಅವನು ಅರಳೆಯ ಯಜಮಾನನಿಗೆ ಮೂರು ತಿಂಗಳ ಇಲ್ಲವೆ ಆರು ತಿಂಗಳ ವಾಯಿದೆಯ ಹುಂಡೀ ಚೀಟು ಬರಕೊಡುವನು. ಆ ವಾಯಿದೆಗೆ ಅವನಿಂದ ಹಣ ಕೊಡುವದು ಆಗದಿದ್ದರೆ, ಅವನ ಪತ್ತು ಚನ್ನಾಗಿದ್ದರೆ ನೂರಕ್ಕೆ ಕೆಲವೊಂದು ದರದಂತೆ ಹೆಚ್ಚು ಹಣ ಕೊಟ್ಟು, ಹುಂಡೀ ಚೀಟಿನ ವಾಯಿದೆಯನ್ನೆ ಇನ್ನೂ ಬೆಳಿಸ ಬಹುದು. ಒಮ್ಮೊಮ್ಮೆ ಕೆಲವರು ತಂದ ಸಾಲಾ ತಿರುಗಿ ಕೊಡುವದಕ್ಕೆ ತಮಗೆ ಆಗಲಿಕ್ಕಿಲ್ಲವೆಂಬದನ್ನು ಪೂರಾ ತಿಳಿದಿದ್ದರೂ ಬೇಕಾದ ಹಾಗೆ ಸಾಲಾ ಮಾಡಿ, ಪತ್ತಿನಿಂದ ಉಂಟಾಗುವ ಸರಕುಕೊಳ್ಳುವ ಶಕ್ತಿಯ ದುರುಪಯೋಗ ಮಾಡುವದುಂಟು. ಆದರೂ, ಪತ್ತಿನ ಮೇಲೆ ಕೆಲಸಗಳು ನಡಿಯದೆ ಹೋದರೆ, ವ್ಯವಹಾರ ಮಾಡುವದು ಬಹುತರ ಅಶಕ್ಯವಾಗುವದು, ಹಾಗೂ ಅದರಿಂದ ಖರೀದಿಗಳು ಬಹಳ ಕಡಿಮೆಯಾಗುವವು. ಕೊಂಡ ಸರಕುಗಳಿಗೆಲ್ಲ ನಗದು ಹಣವನ್ನೇ ಕೊಡಬೇಕಾಗಿದ್ದರೆ, ಈಗಾಗುವ ಎಷ್ಟೋ ಖರೀದಿಗಳು ಆಗಲಿಕ್ಕೇ ಇಲ್ಲ. ಇಂಥ ಖರೀದಿಗಳೆಲ್ಲ ಪತ್ತಿನ ಮೇಲೆ ಆಗುವ

ಕಾರಣ, ಪತ್ತಿನಿಂದ ಸರಕುಗಳಿಗೆ ಹೆಚ್ಚು ಬೇಡಿಕೆಯುಂಟಾಗುವದೆಂಬದು ಸ್ಪಷ್ಟವದೆ. ಸರಕುಗಳ ಬೇಡಿಕೆಯನ್ನು ಹೆಚ್ಚಿಸುವಂಥ ಪ್ರತಿಯೊಂದು ಸಂಗತಿಯಿಂದ ಸರಕುಗಳ ಧಾರಣೆಗಳು ಏರ ಹತ್ತುವವೆಂದು ಹಿಂದೆ ಎಷ್ಟೋ ಸಾರಿ ಸಿದ್ಧ ಮಾಡಿದೆ. ಆ ಕಾರಣ, ಪತ್ತಿನಿಂದ ಜನರ ಸರಕು ಕೊಳ್ಳುವ ಶಕ್ತಿ ಹೆಚ್ಚಿ, ಸರಕುಗಳ ಧಾರಣೆಗಳು ಏರುವ ಕ್ರಮ ಹಿಡಿಯುವವು.

ಪತ್ತಿನ ಪರಿಣಾಮವು ಮರ್ಯಾದಿತ ಪೂರೈಕೆಯುಳ್ಳ ಸರಕುಗಳ ಕ್ರಯದ ಮೇಲೆ ಅತಿಶಯವಾಗಿ ಕಂಡು ಬರುವದು.—ಬೇಕಾದಷ್ಟು ಹೆಚ್ಚು ಪೂರೈಸಲಿಕ್ಕೆ ಬರುವಂಥ ಸರಕುಗಳ ಕ್ರಯವು, ಯಾವಾಗಲೂ ಅವುಗಳನ್ನು ಉತ್ಪನ್ನ ಮಾಡಲಿಕ್ಕೆ ತಗಲುವ ಖರ್ಚನ್ನು ಸಮೀಪಿಸುತ್ತಿರುವದೆಂಬದು ನಿಜ. ಆದರೂ ಮುಂದಿನ ಧಾರಣೆಯ ಅಡಸಟ್ಟಿನ ಮೇಲೆ ವ್ಯಾಪಾರ ಮಾಡುವ ಸಾಹಸಿಕರೆಲ್ಲರೂ, ಬಹುತರ ಮುಂದೆ ಕೆಲ ವಿಶೇಷ ಕಾರಣಗಳಿಂದ ಪೂರೈಕೆ ಕಡಿಮೆಯಾಗುವಂಥ ಸರಕುಗಳನ್ನೇ ಬಹಳ ಕೊಳ್ಳುವರು. ಇಂಥ ಪ್ರಸಕ್ತಿಗಳಲ್ಲಿ ಸರಕಿನ ಧಾರಣೆಯು ಕೇವಲ ಮರ್ಯಾದಿತ ಪರಿಮಿತಿಯುಳ್ಳ ಸರಕುಗಳ ಧಾರಣೆಯಂತೆಯೇ ಹೆಚ್ಚುಕಡಿಮೆಯಾಗುವದು. ಉದಾಹರಣಾರ್ಥವಾಗಿ, ಸನ್ ೧೮೫೪ನೇ ವರ್ಷ ರಶಿಯನ್ ಜನರ ಸಂಗಡ ಯುದ್ಧ ಮಾಡುವ ಪ್ರಸಂಗ ಒದಗಿದಾಗ, ಮುಂದೆ ಯುದ್ಧ ನಡಿದ ಮೇಲೆ ರಶಿಯ ದೇಶದಿಂದ ಬರುವ ಸೆಣ, ನಾರು ಮೊದಲಾದ ಸರಕುಗಳು ಬರುವದು ಕಟ್ಟಾಗುವದೆಂದು ಇಂಗ್ಲಂಡದವರಿಗೆ ತಿಳಿಯಿತು. ಮುಂದೆ ಈ ಸರಕುಗಳ ಪೂರೈಕೆ ಕಡಿಮೆಯಾಗುವ ಕಾರಣ, ಅವುಗಳ ಧಾರಣೆಗಳು ಏರುವವೆಂದು ತಿಳುಕೊಂಡು, ವ್ಯಾಪಾರಸ್ಥರು ಈ ಸರಕುಗಳನ್ನು ಬಹಳ ಕೊಂಡರು. ಈ ಪ್ರಕಾರ ಮಾಡಿದ ಪ್ರತಿಯೊಂದು ಖರೀದಿಯಿಂದ, ಸಹಜವಾಗಿಯೇ ರಶಿಯನ್ ಸರಕುಗಳ ಧಾರಣೆ ಏರುವದಕ್ಕೆ ಕಾರಣವಾಯಿತು. ಸನ್ ೧೮೭೯ನೇ ವರ್ಷ ಇಂಗ್ಲಂಡದಲ್ಲಿ ಮೇ ಮತ್ತು ಜೂನ ತಿಂಗಳುಗಳಲ್ಲಿ ಬಹಳ ಚಳಿಯೂ, ಹವೆಯಲ್ಲಿ ಆರ್ದ್ರತ್ವವೂ ಉಂಟಾದ್ದರಿಂದ, ಕಾಳಿನ ಪೈರು ಕೆಟ್ಟು, ಕಾಳು ಬಹಳ ತುಟ್ಟಿಯಾಗುವವೆಂದು ಆಲೋಚಿಸಿ, ಕಾಳಿನ ವ್ಯಾಪಾರ ಮಾಡುವ ಎಷ್ಟೋ ವರ್ತಕರು ಬಹಳ ಕಾಳು ಖರೀದಿ ಮಾಡಿದರು. ಈ ಖರೀದಿಗಳಿಂದ ಕಾಳಿನ ಧಾರಣೆಯು ಏರುವದಕ್ಕೆ ಕಾರಣವಾಯಿತು. ಹಾಗೂ ಈ ವರ್ತಕರು ಭಾವಿಸಿದಂತೆಯೇ ಮುಂದೆ ಆಗಿದ್ದರೆ, ಅವರಿಗೆ ನಿಃಸಂದೇಹವಾಗಿ ಬಹಳ ಸಂಪತ್ತು ದೊರಿಯುವ ಹಾಗಿತ್ತು. ಆದರೆ, ವಾಸ್ತವಿಕವಾಗಿ ಕಡೆಗೆ ಆದದ್ದೇನಂದರೆ, ಈ ವರ್ತಕರು ಕಾಳಿನ ಖರೀದಿಗಳನ್ನು, ಕಾಳಿನ ಯಜಮಾನರಿಗೆ ವಾಯಿ

ಡೆಯ ಹುಂಡಿಗಳನ್ನು ಬರಕೊಟ್ಟು ಮಾಡಿದ್ದರು. ಅವರ ಮನಸಿನಲ್ಲಿದ್ದ ಆಲೋಚನೆ ಏನಂದರೆ, ಹುಂಡಿಯು ವಾಯಿದೆ ತೀರುವ ಸಮಯಕ್ಕೆ ತಾವು ತಮ್ಮ ಕಾಳು ಬಹಳ ತುಟ್ಟಿಯಾಗಿ ಮಾರ ಬಹುದು, ಅಥವಾ ಒಂದು ವೇಳೆ ಧಾರಣೆಯು ಇನ್ನೂ ಮುಂದೆ ಏರುವ ಹಾಗೆ ಕಂಡರೆ, ಆಗ್ಯಾದರೂ ಕಾಳು ಮಾರದೆ ಮುಂದೆ ಮತ್ತಿಷ್ಟು ಲಾಭ ಬರುವ ಆಶೆಯಿಂದ ಹೊಸ ಹುಂಡಿಗಳನ್ನು ಮಾಡಿ ಕೊಟ್ಟರೂ ಚಿಂತೆ ಇಲ್ಲ. ಆದರೆ ಅವರು ಒಂದೆಣಿಸಿದರೆ ದೈವ ಮತ್ತೊಂದೆಣಿಸಿತು. ಇಂಗ್ಲಂಡದಲ್ಲಿ ಗೋಧಿಯ ಪೈರು ತೀರ ಕೆಟ್ಟು ಹೋದರೂ, ಆ ವರ್ಷ ಅಮೇರಿಕೆಯಲ್ಲಿ ಗೋಧಿಯ ಪೈರು ವಿಲಕ್ಷಣ ಹೆಚ್ಚು ಬಂದ ಕಾರಣ, ಅಮೇರಿಕೆಯಲ್ಲಿ ಗೋಧಿಯ ಧಾರಣೆ ತೀರ ಇಳಿಯಿತು. ಕೂಡ್ಲೆ, ಅಮೇರಿಕೆಯವರು ಇಂಗ್ಲಂಡಕ್ಕೆ ಗೋಧಿಯನ್ನು ಬಹಳ ಕಳುಹಿಸ ಹತ್ತಿದರು. ಇದರಿಂದ ಇಂಗ್ಲಂಡದಲ್ಲಿ ಕಾಳಿನ ಧಾರಣೆ ಏರುವದಕ್ಕೆ ಬದಲಾಗಿ ಒಂದೇ ಸಮನಾಗಿ ಇಳಿಯ ಹತ್ತಿತು. ಆಗ ಎಷ್ಟೋ ವರ್ತಕರಿಗೆ, ತಾವು ಕೊಟ್ಟ ಹುಂಡಿಗಳ ಹಣ ಕೊಡುವ ಸಾಮರ್ಥ್ಯವಿಲ್ಲದೆ ಹೋದ್ದರಿಂದ ಬಹಳ ಜನರು ದಿವಾಳಿ ತೆಗೆಯ ಬೇಕಾಯಿತು.

**ವ್ಯಾಪಾರಸಮುದ್ವೇಗ, ಅಥವಾ ವ್ಯಾಪಾರದ ಬೆಬ್ಬರ.**— ಪತ್ತಿನ ಮೇಲೆ ಸುಲಭವಾಗಿ ಬೇಕಾದಷ್ಟು ಖರೀದಿಗಳನ್ನು ಮಾಡಲಿಕ್ಕೆ ಬಂದರೆ, ಅದರಿಂದ ಧಾರಣೆಗಳ ಮೇಲೆ ಇಷ್ಟೇ ಪರಿಣಾಮ ಉಂಟಾಗುವದೆಂದು ಹೇಳುವದು ಕಠಿಣವದೆ. ಪತ್ತಿನ ದುರುಪಯೋಗ ಮಾಡಿ ಖರೀದಿಗಳನ್ನು ಮಿತಿಮೀರಿ ಮಾಡಲು, ಸರಕುಗಳ ಧಾರಣೆಗಳು ಉತ್ಪನ್ನ ಮಾಡುವ ಖರ್ಚಿಗಿಂತಲೂ ಬಹಳವಾಗಿ ಏರುವವು. ಆಗ ಇಂಥ ಖರೀದಿಗಳನ್ನು ಮಾಡಿದ ವರ್ತಕರು ಮನಸಿನಲ್ಲಿ ಮಾಡಿಕೊಂಡಿದ್ದ ಆಲೋಚನೆಗಳು ಸಫಲವಾಗದೆ, ಎಷ್ಟೋ ವರ್ತಕರಿಗೆ ತಮ್ಮ ಹುಂಡೀ ಚೀಟುಗಳ ಹಣ ತೀರಿಸಲಿಕ್ಕೆ ಸಾಮರ್ಥ್ಯವಿಲ್ಲದೆ ಹೋಗುತ್ತದೆ. ಹೀಗಾಗಲು, ವ್ಯಾಪಾರಸಮುದ್ವೇಗ, ಅಂದರೆ ವ್ಯಾಪಾರದಲ್ಲಿ ಬೆಬ್ಬರ ಉಂಟಾಗಿ, ಕೆಲವು ಕಾಲ ಪತ್ತಿನ ವ್ಯವಹಾರವು ಬಹುತರ ನಿಂತು ಹೋಗುವದು. ಇಂಥ ಇಕ್ಕಟ್ಟಿನ ಪ್ರಸಂಗದಲ್ಲಿ ಎಷ್ಟೋ ವರ್ತಕರಿಗೆ ತಮ್ಮ ಹುಂಡಿಗಳ ವಾಯಿದೆ ಬೆಳಿಸುವದಕ್ಕೆ ಬರುವದಿಲ್ಲವಾದ್ದರಿಂದ ಹಾಳಾಗಿ ಹೋಗುತ್ತಾರೆ. ಈ ಪ್ರಕಾರ ವ್ಯಾಪಾರದಲ್ಲಿ ಬೆಬ್ಬರ ಬೀಳಲು, ಜನರು ಹುಂಡಿಗಳನ್ನು ತಕ್ಕೊಳ್ಳುವದು ಬಿಟ್ಟು ಬಿಡುವರು. ಆಗ, ನಗದು ಹಣಕ್ಕೂ ಬ್ಯಾಂಕಿನ ನೋಟುಗಳಿಗೂ ಬೇಡಿಕೆ ಬಹಳ ಹೆಚ್ಚಾಗುವದು. ಅದರಿಂದ, ಧಾರಣೆಗಳು ತ್ವರೆಯಾಗಿ ಇಳಿಯ ಹತ್ತುವವು. ಹಾಗೂ ಒಂದು ವೇಳೆ, ಧಾರಣೆಗಳು ಮೊದಲು ಉತ್ಪನ್ನ ಮಾಡುವ ಖರ್ಚಿಗಿಂತಲೂ

ಹೆಚ್ಚಾಗಿದ್ದಷ್ಟೇ ಈಗ ಕಡಿಮೆಯಾಗ ಬಹುದು. ಇದರ ಮೇಲಿಂದ ಗೋಚಕ ವಾಗುವದೇನಂದರೆ, ಪತ್ತಿನಿಂದ ಬರುವ ಖರೀದಿ ಮಾಡುವ ಶಕ್ತಿಯ ದುರುಪ ಯೋಗದಿಂದ ಧಾರಣೆಗಳು ತಮ್ಮ ಸ್ವಾಭಾವಿಕ ದರಕ್ಕಿಂತಲೂ ಏರಲು, ವ್ಯಾಪಾರ ದಲ್ಲಿ ಬಹುತರ ಬೆಬ್ಬರ ಉಂಟಾಗುವದು. ಆಗ, ಪತ್ತಿನ ಮೇಲೆ ಖರೀದಿ ಮಾಡು ವದು ಮೊದಲು ಸುಲಭವಾಗಿದ್ದಷ್ಟೇ ಕಠಿಣವಾಗುವದು.

**ಸನ್ ೧೮೪೪ನೇ ವರ್ಷ ಇಂಗ್ಲಂಡದಲ್ಲುಂಟಾದ ಬ್ಯಾಂಕುಗಳ ಸನ ದಿನ ಆಕ್ಟು.**—ಪತ್ತಿನ ದುರುಪಯೋಗ ಮಾಡುವದನ್ನೂ, ವ್ಯಾಪಾರಸಮು ದ್ವೇಗಗಳಿಂದ ಉಂಟಾಗುವ ಅತಿಶಯ ಹಾನಿಗಳನ್ನೂ, ತೊಂದರೆಗಳನ್ನೂ ತಪ್ಪಿಸು ವದಕ್ಕಾಗಿ ಇಂಗ್ಲಂಡದಲ್ಲಿ ಸನ್ ೧೮೪೪ನೇ ವರ್ಷ ಒಂದು ಕಾಯಿದೆಯುಂಟಾ ಯಿತು. ಈ ಕಾಯಿದೆಗೆ ಬ್ಯಾಂಕುಗಳ ಸನದಿನ ಆಕ್ಟು ಎಂಬ ಹೆಸರು. ಈ ಕಾ ಯಿದೆಯ ಉತ್ಪಾದಕರು ಪತ್ತಿನ ಯಾವತ್ತು ಸಾಧನಗಳಲ್ಲಿ ಬ್ಯಾಂಕಿನ ನೋಟು ಗಳೇ ಅತಿಶಯ ಮಹತ್ವವುಳ್ಳವೆಂತಲೂ, ವ್ಯಾಪಾರಸ್ಥರ ಸರಕು ಕೊಳ್ಳುವ ಶಕ್ತಿ ಯು ಈ ಸಾಧನಗಳಿಂದಲೇ ವೃದ್ಧಿಯಾಗುತ್ತದೆಂತಲೂ ಭಾವಿಸಿದಂತೆ ತೋರು ತ್ತದೆ. ಯಾಕಂದರೆ, ಈ ಆಕ್ಟಿನಿಂದ ಬ್ಯಾಂಕುಗಳು ಇಷ್ಟೇ ನೋಟುಗಳನ್ನು ಹೊರಡಿಸ ಬಹುದೆಂಬ ಕಟ್ಟಳೆಯಾಯಿತು. ಈ ಕಾಯಿದೆಯ ಕರ್ತರು ವಿಧಿ ಸಿದ್ದೇನಂದರೆ, ಪ್ರತಿಯೊಂದು ಬ್ಯಾಂಕಿನವರ ಹತ್ತರ ಅವರು ಹೊರಡಿಸುವ ಯಾವತ್ತು ನೋಟುಗಳಿಗೆ ಸರಿಯಾದ ಭಂಗಾರದ ಘಟ್ಟಿಗಳಾಗಲಿ, ಆಸ್ತಿಯಾಗಲಿ ಇರ ತಕ್ಕದ್ದು. ಈ ಮೇರೆಗೆ, "ಬ್ಯಾಂಕ ಆಫ್ ಇಂಗ್ಲಂಡ" ಎಂಬ ಬ್ಯಾಂಕಿನ ವರ ನಗದು ಹಣವೂ, ಆಸ್ತಿಯೂ ಕೂಡಿ ಸುಮಾರು ೧,೫೦,೦೦,೦೦೦ ಪೌಂಡು ಬೆಲೆಯುಳ್ಳವೆಂದು ಗೊತ್ತಾದ ಕಾರಣ, ಈ ಆಕ್ಟಿನಿಂದ ನಿರ್ಬಂಧಿಸಲ್ಪಟ್ಟದ್ದೇನಂದರೆ, "ಬ್ಯಾಂಕ ಆಫ್ ಇಂಗ್ಲಂಡ"ದವರು ಹೊರಡಿಸಿದ ನೋಟುಗಳು ೧,೫೦,೦೦,೦೦೦ ಪೌಂಡುಗಳಿಗಿಂತಲೂ ಹೆಚ್ಚಾದರೆ, ಹೆಚ್ಚಿನ ಬೆಲೆಗೆ ಸರಿಯಾದ ನಗದು ಹಣ ವನ್ನಾಗಲಿ ಭಂಗಾರದ ಘಟ್ಟಿಗಳನ್ನಾಗಲಿ ಬ್ಯಾಂಕಿನಲ್ಲಿ ಇಡುವದಕ್ಕೆ ಆ ಬ್ಯಾಂ ಕಿನ ಗವ್ಹರ್ನರರಿಗೆ ಅಗತ್ಯ ಪಡಿಸ ಬೇಕು. ಈ ಪ್ರಕಾರ ಬ್ಯಾಂಕ ಆಫ್ ಇಂ ಗ್ಲಂಡದವರು ೧,೬೦,೦೦,೦೦೦ ಪೌಂಡುಗಳ ನೋಟುಗಳನ್ನು ಹೊರಡಿಸಿದ್ದಾ ದರೆ, ಆ ಬ್ಯಾಂಕಿನ ಗವ್ಹರ್ನರರಿಗೆ ೧೦,೦೦,೦೦೦ ಪೌಂಡುಗಳ ಭಂಗಾರವನ್ನು ಬ್ಯಾಂಕಿನ ಸಂದಕಗಳಲ್ಲಿ ಇಡುವದು ಅಗತ್ಯವಾಗುತ್ತದೆ. ಈ ಆಕ್ಟಿನಿಂದ ಬೇರೆ ಬ್ಯಾಂಕುಗಳು ಸಹ ಇಷ್ಟೇ ನೋಟುಗಳ ವರೆಗೆ ನೋಟುಗಳನ್ನು ಹೊರಡಿಸ ಬ ಹುದು, ಹೆಚ್ಚು ಹೊರಡಿಸ ಬಾರದೆಂಬ ನಿಬಂಧನೆಯಾಯಿತು. ಹಾಗೂ ಈ

ಕಾಯಿದೆಯು ಉಂಟಾದನಂತರ ಸ್ಥಾಪಿಸಲ್ಪಟ್ಟ ಯಾವ ಬ್ಯಾಂಕಿನವರಾದರೂ ನೋಟುಗಳನ್ನು ಹೊರಡಿಸಲಾಗದೆಂದು ಈ ಕಾಯಿದೆಯಿಂದ ವಿಧಿಸಲಾಯಿತು. ಆದರೆ ಇದರಲ್ಲಿ ಸೋಜಿಗವೇನಂದರೆ, ಇಷ್ಟೆಲ್ಲ ಮಾಡಿದಾಗ್ಯೂ ಈ ಆಕ್ಟ್ ಉಂಟಾದನಂತರ ಎಷ್ಟೋ ವರ್ಷ ಕ್ಲಿಪ್ತವಾದ ಅವಧಿಗೊಮ್ಮೆ, ವ್ಯಾಪಾರಸಮುದ್ವೇಗಗಳು ವೇಳೆಯನ್ನು ಸಹ ತಪ್ಪಿಸದೆ ಕ್ರಮವಾಗಿ ಆಗುತ್ತಾ ಬಂದವು. ಇಂಥ ಸಮುದ್ವೇಗಗಳು ಸುಮಾರು ಒಂಭತ್ತು ವರ್ಷಕ್ಕೊಮ್ಮೆ ಆಗುತ್ತಿದ್ದವು. ಹಾಗೂ, ಬ್ಯಾಂಕುಗಳ ಸನದಿನ ಕಾಯಿದೆಯನ್ನು ಇಂಥ ಸಮುದ್ವೇಗಗಳನ್ನು ತಪ್ಪಿಸ ಬೇಕೆಂಬ ಹೆತುವಿನಿಂದಲೇ ಮಾಡಿದಾಗ್ಯೂ, ಈ ಕಾಯಿದೆ ಉಂಟಾದನಂತರ ಎಷ್ಟೋ ವರ್ಷಗಳ ವರೆಗೆ ವ್ಯಾಪಾರಸಮುದ್ವೇಗಗಳು ತಮ್ಮ ಕಾಲಕ್ರಮವನ್ನು ಬಿಡದೆ ಯಥಾಕಾಲಕ್ಕೆ ಬರುತ್ತಿದ್ದವು. ಈ ಆಕ್ಟ ೧೮೪೪ನೇ ವರ್ಷ ಉಂಟಾಯಿತು. ಆನಂತರ ಇಂಗ್ಲಂಡದಲ್ಲಿ ಸನ್ ೧೮೪೭, ೧೮೫೭, ೧೮೬೬, ಈ ವರ್ಷಗಳಲ್ಲಿ ವ್ಯಾಪಾರ ಸಮುದ್ವೇಗಗಳುಂಟಾದವು. ಈ ಮೇರೆಗೆ ವ್ಯಾಪಾರ ಸಮುದ್ವೇಗಗಳನ್ನು ತಪ್ಪಿಸ ಬೇಕೆಂಬ ಈ ಕಾಯಿದೆಯ ಉದ್ದೇಶವು ನಿಷ್ಫಲವಾಯಿತು. ಇದರ ಕಾರಣವೇನಂದರೆ, ವ್ಯಾಪಾರವು ಒತ್ತರವಾಗಿ ನಡಿದು, ವ್ಯಾಪಾರಸ್ಥರ ಪತ್ತು ಚನ್ನಾಗಿರುವಾಗ್ಗೆ ಅವರ ಖರೀದಿ ಮಾಡುವ ಶಕ್ತಿಗೆ ಈ ಕಾಯಿದೆಯಿಂದ ಎಷ್ಟು ಮಾತ್ರವೂ ಪ್ರತಿಬಂಧವಾಗುವದಿಲ್ಲ. ಯಾಕಂದರೆ, ಧಾರಣೆಗಳನ್ನು ಬಹಳವಾಗಿ ಏರಿಸುವಂಥ ದೊಡ್ಡ ಖರೀದಿಗಳು ಬ್ಯಾಂಕಿನ ನೋಟುಗಳಿಂದ ನಡಿಯುವದಿಲ್ಲ; ಇಂಥ ಖರೀದಿಗಳನ್ನು ಹುಂಡೀ ಚೀಟುಗಳಿಂದ ಮಾಡುವರು. ಬ್ಯಾಂಕಿನ ನೋಟುಗಳಿಗೆ ಬೇಡಿದಾಗ ಹಣ ಕೊಡ ಬೇಕಾಗುತ್ತದೆ. ಆದ್ದರಿಂದ ಹಣ ದೊರಕುವದು ಕಠಿಣವಾಗಿದ್ದಷ್ಟೇ ಬ್ಯಾಂಕಿನ ನೋಟುಗಳು ದೊರಕುವದೂ ಕಠಿಣವಾಗಿರುವದು. ಆ ಕಾರಣ ವ್ಯಾಪಾರವು ನಿರ್ಭಯವಾಗಿಯೂ, ಶಾಂತವಾಗಿಯೂ ನಡಿಯುವಾಗ ಈ ಕಾಯಿದೆಯಿಂದ ಏನು ಪ್ರಯೋಜನವಿಲ್ಲ. ಈ ಕಾಯಿದೆಯಿಂದ ವ್ಯಾಪಾರ ಸಮುದ್ವೇಗಗಳಂತೂ ತಪ್ಪುವದಿಲ್ಲ; ಆದರೆ, ವ್ಯಾಪಾರ ಸಮುದ್ವೇಗಗಳು ಸಂಭವಿಸಿದಾಗ ಈ ಕಾಯಿದೆಯಿಂದ ಉಂಟಾಗ್ಳುವ ಪರಿಣಾಮವೇನೆಂಬದನ್ನು ವಿಚಾರಿಸುವ. ವ್ಯಾಪಾರ ಸಮುದ್ವೇಗಗಳು ಉಂಟಾದಾಗ ಯಾವತ್ತು ಜನರು ತಮ್ಮ ಹುಂಡೀ ಚೀಟುಗಳನ್ನು ಮುರಿಸುವ ಅಪೇಕ್ಷೆಯುಳ್ಳವರಾಗಿರುವರು; ಹಣವು ಕಡಿಮೆಯಾಗಿರುವದು; ನಾಲ್ಕೂ ಕಡೆಗೆ ದಗೆಯೇ ಕಂಡು ಬರುವದರಿಂದ ಹುಂಡಿಗಳಿದ್ದವರೆಲ್ಲರು ಅವುಗಳನ್ನು ರೋಖ ಹಣಕ್ಕೆ ಮುರಿಸ ಬೇಕೆಂದು ಹವಣಿಸುವರು. ಆ ಕಾರಣ ವ್ಯಾಪಾರ ಸಮುದ್ವೇಗ ಉಂಟಾದಾಗ ಬ್ಯಾಂಕಿನವರಿಗೆ

ವಾಢಿಕೆಗಿಂತಲೂ ಬಹಳ ಹೆಚ್ಚು ಹುಂಡಿಗಳ ಹಣ ಕೊಡ ಬೇಕಾಗುವದು. ಆ ಕಾರಣ ಮುರಕೊಳ್ಳುವ ಬಡ್ಡಿಯ ದರವು ತೀವ್ರವಾಗಿ ಏರುವದು. ಮೇಲೆ ಹೇಳಿದ ಕಾಯಿದೆಯಿಂದಂತೂ ಬ್ಯಾಂಕಿನವರು ಕೆಲವೊಂದು ರಕಮಿಗಿಂತಲೂ ಹೆಚ್ಚು ನೋಟುಗಳನ್ನು ಹೊರಡಿಸಿದರೆ, ಹೆಚ್ಚಿನ ರಕಮಿಗೆ ಸರಿಯಾದ ಚಿನ್ನದ ಘಟ್ಟಿಗಳನ್ನು ಕೊಳ್ಳ ಬೇಕಾಗುತ್ತದೆ. ಆ ಕಾರಣ ಬ್ಯಾಂಕಿನವರ ಕೈಯ್ಯೊಳಗಿದ್ದ ತರಣೋಪಾಯವು ಸಹ ಈ ಕಾಯಿದೆಯಿಂದ ನಿಂತು ಹೋಗುತ್ತದೆ. ಬ್ಯಾಂಕಿನವರು ನೇಮಕವಾದ ರಕಮಿನ ವರೆಗೆ ನೋಟುಗಳನ್ನು ಹೊರಡಿಸಿದನಂತರ, ಹೆಚ್ಚು ನೋಟುಗಳನ್ನು ಹೊರಡಿಸುವದನ್ನು ಕಟ್ಟು ಮಾಡುವರು. ಯಾಕಂದರೆ, ಹೆಚ್ಚು ನೋಟುಗಳನ್ನು ತೆಗೆಯುವದರಿಂದ ಬ್ಯಾಂಕಿನವರಿಗೆ ಏನು ಲಾಭವಿರುವದಿಲ್ಲ. ಈ ಪ್ರಕಾರ ಪತ್ತಿನಿಂದಾಗುವ ಪೂರೈಕೆಗೆ ಕೃತ್ರಿಮ ಪ್ರತಿಬಂಧ ಉಂಟಾಗುವದರಿಂದ ಮುರಕೊಳ್ಳುವ ಬಡ್ಡಿಯ ದರವು ಮತ್ತಿಷ್ಟು ಏರುವದು. ಎಲ್ಲ ಕಡೆಯಲ್ಲಿ ಜನರ ವಿಶ್ವಾಸವು ತಪ್ಪಿ ಹೋಗಿರುವದು; ನೋಡಿದತ್ತೆಲ್ಲ ದಗೆಯೇ ಕಂಡು ಬರುವದು. ಆದ್ದರಿಂದ ಹುಂಡೀ ಚೀಟುಗಳನ್ನು ಯಾರೂ ಹಿಡಿಯುವದಿಲ್ಲ. ಇಂಥ ಇಕ್ಕಟ್ಟಿನ ಪ್ರಸಂಗದಲ್ಲಿ ಬ್ಯಾಂಕಿನ ನೋಟುಗಳಿಂದ ಆಗುವ ಕಾರ್ಯಭಾಗವು ಪತ್ತಿನ ಬೇರೆ ಯಾವ ಸಾಧನದಿಂದಲೂ ಆಗುವದಿಲ್ಲ. "ಬ್ಯಾಂಕ್ ಆಫ್ ಇಂಗ್ಲಂಡಿ"ನ ನೋಟುಗಳಾದರೆ ಈ ನೋಟುಗಳಿಗೆ ಬ್ಯಾಂಕಿನಲ್ಲಿ ಬೇಡಿದಾಗ ಭಂಗಾರ ದೊರಿಯುವ ಹಾಗಿರುವ ಕಾರಣ, ಈ ನೋಟುಗಳನ್ನು ಜನರು ಶಂಕೆ ಇಲ್ಲದೆ ಹಿಡಿಯುವರು. ಈ ವಿವರಣೆಯ ಮೇಲಿಂದ ಸಿದ್ಧವಾಗುವದೇನಂದರೆ, ವ್ಯಾಪಾರದಲ್ಲಿ ಶಾಂತತೆ ಇದ್ದಾಗ, ಬ್ಯಾಂಕುಗಳ ಸನದಿನ ಕಾಯಿದೆಯಿಂದ ಮುಂದಿನ ವಿಚಾರವಿಲ್ಲದೆ ವ್ಯವಹಾರ ಮಾಡುವದಕ್ಕೂ, ಪತ್ತಿನ ಮೇಲೆ ಮಿತಿಮೀರಿ ಖರೀದಿಗಳನ್ನು ಮಾಡುವದಕ್ಕೂ ಏನು ಅಡ್ಡಿಯಾಗುವದಿಲ್ಲ. ಆದರೆ, ಜನರ ವಿಶ್ವಾಸವು ತಪ್ಪಿ ವ್ಯಾಪಾರಸಮುದ್ವೇಗವು ಉಂಟಾದಾಗ ಮಾತ್ರ, ಬ್ಯಾಂಕಿನವರಿಗೆ ಇದ್ದ ಅನುವೆಲ್ಲ ಈ ಕಾಯಿದೆಯಿಂದ ಕಡಿಮೆಯಾಗುತ್ತದೆ. ಈ ಮಾತು ಕಾಯಿದೆ ಮಾಡುವವರ ಲಕ್ಷ್ಯದಲ್ಲಿಯೂ, ಬ್ಯಾಂಕುಗಳ ಮೇಲಣ ಅಧಿಕಾರಿಗಳ ಲಕ್ಷ್ಯದಲ್ಲಿಯೂ ಬಾರದೆ ಹೋಗಿಲ್ಲ. ಆ ಕಾರಣ ಈ ಕಾಯಿದೆ ಉಂಟಾದನಂತರ ವರ್ತಿಸಿದ ಮೂರೂ ಉದ್ವೇಗಗಳಲ್ಲಿ ಈ ಕಾಯಿದೆಯು ಕೆಲವು ಕಾಲ ನಿಲ್ಲಿಸಲ್ಪಟ್ಟಿತು. ಈ ಕಾಯಿದೆಯನ್ನು ನಿಲ್ಲಿಸಿದಾಗ ಪ್ರತಿಯೊಂದು ಸಾರಿ ಮುರಕೊಳ್ಳುವ ಬಡ್ಡಿಯ ದರವು ತಾತ್ಕಾಲಕ್ಕೆ ಇಳಿದು ಹೋಯಿತು. ಈ ಕಾಯಿದೆಯನ್ನು ಕೆಲವು ಕಾಲ ನಿಲ್ಲಿಸಿದರಿಂದ ಜನರ ಮನಸಿನ ಗಾಬರಿತನವು ತಕ್ಕ ಮಟ್ಟಿಗೆ ಶಾಂತವಾಯಿತು. ಯಾಕಂ

ದಿರೆ, ಈ ಕಾಯಿದೆಯು ನಿಲ್ಲಿಸಲ್ಪಟ್ಟನಂತರ, ಜನರು ಹಣದ ಕೊರತೆಯುಂಟಾಗ ಲಿಕ್ಕಿಲ್ಲವೆಂದು ತಿಳಿಯುವರು. ಸನ್ ೧೮೫೭, ೧೮೬೬ ವರ್ಷಗಳಲ್ಲಿ, ಬ್ಯಾಂಕ ಆಫ್ ಇಂಗ್ಲಂಡದವರು ೧೦,೦೦,೦೦೦ ಪೌಂಡುಗಳ ಹೆಚ್ಚು ನೋಟುಗಳನ್ನು ಹೊರಡಿಸಿದರು. ಈ ನೋಟುಗಳೊಳಗಿನ ಬಹುತರ ಯಾವತ್ತು ನೋಟುಗಳು ಸ್ವಲ್ಪ ದಿವಸಗಳಲ್ಲಿಯೇ ಬ್ಯಾಂಕಿಗೆ ತಿರುಗಿ ಬಂದವು; ಮತ್ತು ಹಣವು ತನ್ನ ಸ್ವಾಭಾವಿಕ ಸ್ಥಿತಿಯನ್ನು ಹೊಂದಿತು. ಈ ಕಾಯಿದೆಯು ನಿಲ್ಲಿಸಲ್ಪಡುವದೋ, ಇಲ್ಲವೋ ಎಂಬುವದು ಅನಿಶ್ಚಿತವಾಗಿರುವ ಕಾರಣ, ವ್ಯಾಪಾರಸಮುದ್ವೇಗವು ಉಂಟಾದಾಗ ಜನರ ಮನಸು ಮತ್ತಿಷ್ಟು ಅಸಮಾಧಾನಗೊಳ್ಳುವದಕ್ಕೆ ಕಾರಣವಾಗುತ್ತದೆ. ವ್ಯಾಪಾರಸಮುದ್ವೇಗವು ಉಂಟಾದಾಗ ಈ ಕಾಯಿದೆಯು ಕೆಲವು ಕಾಲಪರಿಯಂತರ ಬಹುತರವಾಗಿ ನಿಲ್ಲಿಸಲ್ಪಡುವದೆಂಬುವದು ವರ್ತಕರಿಗೂ, ವ್ಯಾಪಾರ ಸಾಹಸಿಗಳಿಗೂ ಗೊತ್ತಿರುವದು. ಆದರೂ ಈ ಕಾಯಿದೆಯು ಇಂಥ ದಿವಸ ಇಷ್ಟೇ ವೇಳೆಗೆ ನಿಲ್ಲಿಸಲ್ಪಡುತ್ತದೆಂಬುವದು ಯಾರಿಗೂ ತಿಳಿದಿರುವದಿಲ್ಲ. ಎಷ್ಟೋ ವ್ಯಾಪಾರಸಾಹಸಿಗಳು ಮುಣುಗುವದೂ, ತೇಲುವದೂ ಈ ವೇಳೆಯ ಮೇಲೆಯೇ ಅವಲಂಬಿಸಿರುವದು. ಈ ಕಾಯಿದೆಯನ್ನು ಈ ಕ್ಷಣಕ್ಕೆ ನಿಲ್ಲಿಸಿದರೆ ಪಾರಾಗುವಂಥ ಎಷ್ಟೋ ವ್ಯಾಪಾರಸಾಹಸಿಗಳು ಮತ್ತೊಂದು ಕ್ಷಣ ತಡವಾದರೆ ಹಾಳಾಗಿ ಹೋಗುತ್ತಾರೆ.

**ಈ ಕಾಯಿದೆಯನ್ನು ಕೆಲವು ಕಾಲ ನಿಲ್ಲಿಸುವದರಿಂದ ತಮ್ಮ ಸಾಲಗಳನ್ನು ತೀರಿಸುವ ಸಾಮರ್ಥ್ಯವುಳ್ಳ ಸ್ಥಿತಿವಂತರಾದ ವ್ಯಾಪಾರಸ್ಥರು ಮಾತ್ರ ಪಾರಾಗಿ, ಮುಂದಿನ ವಿಚಾರ ತಿಳಿಯದೆ ವ್ಯವಹಾರ ಮಾಡಿದಂಥ ಸಾಹಸಿಕರು ಮುಳುಗುವರು.** — ಇಲ್ಲಿ ಲಕ್ಷಿಸ ತಕ್ಕಂಥ ಸಂಗತಿ ಏನಂದರೆ, ಅವಿಚಾರದಿಂದ ವ್ಯವಹಾರ ಮಾಡಿದ್ದರಿಂದ ನಿಜವಾಗಿ ತಮ್ಮ ಸಾಲಗಳನ್ನು ತೀರಿಸುವ ಶಕ್ತಿ ಇಲ್ಲದ ಹಾಗಾಗಿದ್ದವರು ಹಾಳಾಗುವದು ಈ ಕಾಯಿದೆಯನ್ನು ಕೆಲವು ಕಾಲ ನಿಲ್ಲಿಸಿದ್ದರಿಂದ ತಪ್ಪುವದಿಲ್ಲ. ಬ್ಯಾಂಕಿನ ಡಿರೆಕ್ಟರರಿಗೆ ತಮ್ಮ ಹಿತದ ಕಡೆಗೆ ಲಕ್ಷ್ಯವಿರುವದರಿಂದ ಹಣ ಬರುವಂಥ ಹುಂಡಿಗಳ ಹಣವನ್ನು ಮಾತ್ರ ಕೊಡುವಲ್ಲಿ ಜಾಗ್ರತೆಯುಳ್ಳವರಾಗಿರುತ್ತಾರೆ. ಮೇಲಾಗಿ, ವ್ಯಾಪಾರಸಮುದ್ವೇಗವಾಗಿದ್ದಾಗಂತೂ ಈ ವಿಷಯದಲ್ಲಿ ಅವರು ವಿಶೇಷ ಎಚ್ಚರದಿಂದ ಹುಂಡಿಗಳ ಹಣ ಕೊಡುವರು. ಈ ಕಾಯಿದೆಯನ್ನು ನಿಲ್ಲಿಸುವದರಿಂದ ನಿಜವಾಗಿ ಸ್ಥಿತಿವಂತರೂ, ತಮ್ಮ ಸಾಲಗಳನ್ನು ತೀರಿಸುವ ಶಕ್ತಿಯುಳ್ಳವರೂ ಆಗಿದ್ದು, ಮುಂದೆ ತಮ್ಮ ಹುಂಡಿಗಳ ವಾಯಿದೆಗಳನ್ನು ಬೆಳಿಸುವದಕ್ಕೂ, ಹುಂಡಿಗಳ ಹಣ ಕೊಡುವದಕ್ಕೂ ತಮಗೆ ಬರುವ

ದೆಂಬ ಯೋಗ್ಯ ಭರವಸದಿಂದ ವ್ಯವಹಾರ ನಡಿಸಿದವರು ಉಳಕೊಳ್ಳುವರು. ಇಲ್ಲದಿದ್ದರೆ, ವ್ಯಾಪಾರಸಮುದ್ವೇಗ ಉಂಟಾದಾಗ ಪತ್ತು ಒಮ್ಮಿಂದೊಮ್ಮೆ ಆಕುಂಚಿತವಾಗುವದರಿಂದ ಎಷ್ಟೋ ಸಾರಿ ಇಂಥ ವ್ಯಾಪಾರಸ್ಥರು ಸಹ ಅವರ ಕಡೆಗೆ ಏನು ತಪ್ಪಿಲ್ಲದಿದ್ದರೂ ನಿರರ್ಥಕವಾಗಿ ಹಾಳಾಗುವರು. ಬ್ಯಾಂಕುಗಳ ಸನದಿನ ಆಕ್ಟಿನಿಂದ ವ್ಯಾಪಾರಸಮುದ್ವೇಗಗಳಂತೂ ತಪ್ಪುವದಿಲ್ಲ; ಹಾಗು ಈ ಆಕ್ಟಿನಿಂದ ಒಮ್ಮೊಮ್ಮೆ ವ್ಯಾಪಾರಸಮುದ್ವೇಗದಿಂದಾಗುವ ಕೇಡು ಹೆಚ್ಚಿದರೂ ಹೆಚ್ಚ ಬಹುದು. ಆದಾಗ್ಯೂ, ಈ ಆಕ್ಟಿನಿಂದ ಒಂದು ದೊಡ್ಡ ಉಪಯೋಗವಾಗುವದು. ಈ ಉಪಯೋಗವನ್ನು ಲಕ್ಷ್ಯಕ್ಕೆ ತಂದರೆ, ಈ ಕಾಯಿದೆಯಿಂದ ಕೆಲವು ಕಾಲ ಉಂಟಾಗುವ ತೊಂದರೆಗಳು ಕೇವಲ ಕ್ಷುಲ್ಲಕವಾಗಿ ತೋರುವವು. ಇಂಗ್ಲಂಡದಲ್ಲಿ "ಬ್ಯಾಂಕ ಆಫ್ ಇಂಗ್ಲಂಡಿ"ನ ನೋಟುಗಳನ್ನು ಹಿಡಿಯಲೇ ಬೇಕೆಂಬ ಕಾಯಿದೆಯ ನಿಬಂಧನೆಯುಂಟು. ಅಂದರೆ ಕೊಡತಕ್ಕಂಥ ಬೇಕಾದ ರಕಮುಗಳನ್ನು ಈ ನೋಟುಗಳ ದ್ವಾರಾ ಕೊಡುವದಕ್ಕೆ ಕಾಯಿದೆಯ ಸಮ್ಮತಿಯುಂಟು. ಸಾವುಕಾರರಿಗೆ ತಮ್ಮ ಸಾಲವನ್ನು ರೋಖ ಹಣದಿಂದ, ಇಲ್ಲವೆ ಬ್ಯಾಂಕ ಆಫ್ ಇಂಗ್ಲಂಡಿನ ನೋಟುಗಳಿಂದ ತೀರಿಸಿಕೊಳ್ಳುವದಕ್ಕೆ ಕಾಯಿದೆಯ ಪ್ರಕಾರ ಹಕ್ಕುಂಟು. ಆದರೆ, ಈ ಪ್ರಕಾರ ಅವರು ಬೇರೆ ಯಾವ ಬ್ಯಾಂಕಿನ ನೋಟುಗಳನ್ನಾದರೂ ತಕ್ಕೊಳ್ಳಲೇ ಬೇಕೆಂಬ ಕಾಯಿದೆ ಇಲ್ಲ. ಬ್ಯಾಂಕ ಆಫ್ ಇಂಗ್ಲಂಡಿನ ಬ್ಯಾಂಕಿನವರು, ತಾವು ಹೊರಡಿಸಿದ ನೋಟುಗಳಿಗೆ ಬದಲಾಗಿ ಬೇಡಿದಾಗ ಭಂಗಾರವನ್ನು ಕೊಡುವದಕ್ಕೆ ಕಾಯಿದೆಯಿಂದ ಬದ್ಧರಾಗಿದ್ದಾರೆ. ಹಾಗೂ ಬ್ಯಾಂಕ ಚಾರ್ಟರ ಆಕ್ಟಿನ ಮೂಲಕವಾಗಿ, ಜನರ ಮನಸಿನಲ್ಲಿ ಈ ಬ್ಯಾಂಕಿನವರು ಈ ಶರ್ತಿನ ಪ್ರಕಾರ ವರ್ತಿಸುವದಕ್ಕೆ ನಿಶ್ಚಯವಾಗಿ ಸಮರ್ಥರಾಗುವರೆಂಬ ವಿಶ್ವಾಸವು ಪೂರ್ಣವಾಗಿ ಬಿಂಬಿಸಿರುತ್ತದೆ. ಈ ಕಾಯಿದೆಯ ನಿಬಂಧನೆಗಳ ಮೇರೆಗೆ, ಈ ಬ್ಯಾಂಕಿನವರು ೧,೫೦,೦೦,೦೦೦ ಪೌಂಡುಗಳ ನೋಟುಗಳನ್ನು ಹೊರಡಿಸಿದನಂತರ, ಹೆಚ್ಚು ನೋಟುಗಳನ್ನು ಹೊರಡಿಸ ಬೇಕಾದರೆ, ಈ ಹೆಚ್ಚಿನ ನೋಟುಗಳ ಬೆಲೆಗೆ ಸರಿಯಾದ ನಗದು ಹಣವನ್ನಾಗಲಿ, ಭಂಗಾರದ ಘಟ್ಟಿಗಳನ್ನಾಗಲಿ ಬ್ಯಾಂಕಿನ ಸಂದಕಗಳಲ್ಲಿ ಇಡ ಬೇಕಾಗುವದು. ಆ ಕಾರಣ, "ಬ್ಯಾಂಕ ಆಫ್ ಇಂಗ್ಲಂಡಿ"ನಿಂದ ನೋಟುಗಳು ಅತಿಶಯ ಹೊರಟು, ಬಳಿಕೆಯಲ್ಲಿದ್ದ ನೋಟುಗಳ ಸಂಖ್ಯೆಯು ಮಿತಿಮೀರಿ ಬೆಳಿಯುವದೆಂಬ ಭಯವು ಈ ಆಕ್ಟಿನ ಮೂಲಕವಾಗಿ ತಪ್ಪುವದು; ಹಾಗೂ "ಬ್ಯಾಂಕ ಆಫ್ ಇಂಗ್ಲಂಡಿನ" ನೋಟುಗಳಿಗೆ ಬೇಡಿದಾಗ ನಗದು ಹಣ ದೊರಿಯುವದೆಂದು ಜನರಿಗೆ ಭರವಸ ಉಂಟಾಗುವದು. ಇಂಗ್ಲಂಡದ

ಯಾವತ್ತು ಪತ್ತಿನ ವ್ಯವಹಾರಕ್ಕೆ ಬ್ಯಾಂಕ ಆಫ್ ಇಂಗ್ಲಂಡವೆಂಬ ಬ್ಯಾಂಕು ಮಧ್ಯಸ್ಥಾನವಾಗಿದೆ. ಈ ಬ್ಯಾಂಕನ್ನೇ ಎಲ್ಲ ಪತ್ತಿನ ವ್ಯವಹಾರವೂ ಅವಲಂಬಿಸಿ ಕೊಂಡಿರುವದು. ಲಂಡನ ಪಟ್ಟದ ಹೊರಗಿರುವ ಪ್ರತಿಯೊಂದು ಬ್ಯಾಂಕಿನ ಸಾವುಕಾರನು ಲಂಡನದಲ್ಲಿದ್ದ ಯಾವನಾದರೊಬ್ಬ ಬ್ಯಾಂಕಿನ ಸಾವುಕಾರನ ಬಳಿಯಲ್ಲಿ ಲೆಖ್ಖವಿಡುವನು; ಹಾಗೂ ಲಂಡನದೊಳಗಿನ ಯಾವತ್ತು ಬ್ಯಾಂಕು ಗಳವರು "ಬ್ಯಾಂಕ ಆಫ್ ಇಂಗ್ಲಂಡಿನಲ್ಲಿ" ಖಾತೆಗಳನ್ನು ಇಡುವರು. ಆದ ಕಾ ರಣ "ಬ್ಯಾಂಕ ಆಫ್ ಇಂಗ್ಲಂಡಿನ" ನೋಟುಗಳು ಬೇಕಾದಾಗ ಮುರಿಸಲಿಕ್ಕೆ ಬರುವವೆಂಬ ಬಗ್ಗೆ ಜನರ ಮನಸಿನಲ್ಲಿ ಕಾಯಿದೆಯ ಮೂಲಕವಾಗಿ ಭರವಸ ವನ್ನುಂಟು ಮಾಡುವದು ಬಹಳ ಮಹತ್ವವುಳ್ಳ ಸಂಗತಿಯಾಗಿರುವದು.

**ಮುರಿಸಲಿಕ್ಕೆ ಬರುವಂಥ, ಮತ್ತು ಮುರಿಸಲಿಕ್ಕೆ ಬಾರದಂಥ ಕಾಗದದ ಹಣ.**—ಇಂಗ್ಲಂಡದಲ್ಲಿ ಬ್ಯಾಂಕಿನ ನೋಟುಗಳನ್ನು ಮುರಿಸಿ, ಬೇಕಾದಾಗ ರೋಖ ಭಂಗಾರವನ್ನು ದೊರಕಿಸ ಬಹುದೆಂದು ಅನೇಕ ಬಾರಿ ಹೇಳಿದ್ದೇವೆ. ಇಂಗ್ಲಂಡದಲ್ಲಿ ಯಾವ ಖಾಸಗಿ ಬ್ಯಾಂಕಿನವರಾದರೂ ತಾವು ಹೊರಡಿಸಿದ ನೋಟುಗಳಿಗೆ, ಬೇಡಿದಾಗ ರೋಖ ಭಂಗಾರವನ್ನು, ಇಲ್ಲವೆ 'ಬ್ಯಾಂಕ ಆಫ್ ಇಂಗ್ಲಂಡಿನ' ನೋಟುಗಳನ್ನು ಕೊಡಬೇಕು; ಹಾಗೂ 'ಬ್ಯಾಂಕ ಆಫ್ ಇಂಗ್ಲಂ ಡಿ'ನವರು ತಮ್ಮ ನೋಟುಗಳಿಗೆ ಬೇಡಿದಾಗ್ಯೆ ರೋಖ ಭಂಗಾರವನ್ನು ಕೊಡ ಬೇಕು, ಎಂಬ ಕಟ್ಟಳೆಯುಂಟು. ಈ ಕಟ್ಟಳೆಯ ಮೂಲಕವಾಗಿ, ಇಂಗ್ಲಂಡದೊಳ ಗಿನ ನೋಟುಗಳು "ಮುರಿಸಲಿಕ್ಕೆ ಬರುವಂಥ ಕಾಗದದ ಹಣ"ವಾಗಿವೆ. ಅಂದರೆ ಈ ನೋಟುಗಳನ್ನು ಕೊಟ್ಟು ಬೇಕಾದಾಗ ರೋಖ ಹಣವನ್ನು ತರಬಹುದು. ಬೇರೆ ಕೆಲವು ದೇಶಗಳಲ್ಲಿ, ಉದಾಹರಣಾರ್ಥವಾಗಿ ಇತಾಲಿ ದೇಶದಲ್ಲಿ, "ಮುರಿ ಸಲಿಕ್ಕೆ ಬಾರದಂಥ ಕಾಗದದ ಹಣ"ವಿರುವದು. ಅಂದರೆ ಈ ನೋಟುಗಳಿಗೆ ಬದಲಾಗಿ ಬೇಡಿದಾಗ ರೋಖ ಹಣ ದೊರಿಯುವದಿಲ್ಲ; ಹಾಗೂ ಈ ಕಾಗದದ ಹಣವು ಉಣಾಕಿಯಾಗಿರುವದು: ಅಂದರೆ ಅದರಲ್ಲಿ ತೋರಿಸಿದ ಬೆಲೆಗಿಂತಲೂ ಅದರ ಬೆಲೆಯು ಕಡಿಮೆಯಾಗಿರುವದು. ಉದಾಹರಣಾರ್ಥವಾಗಿ, ಇತಾಲಿ ದೇಶದಲ್ಲಿ ಒಂದು ಲಾಯರ* (ಇತಾಲಿಯೊಳಗಿನ ಒಂದು ಬೆಳ್ಳಿಯ ನಾಣ್ಯ)ದ ನೋಟಿನ ಬೆಲೆಯು ಬೆಳ್ಳಿಯ ಲಾಯರಕ್ಕಿಂತಲೂ ಕಡಿಮೆ ಎಂದು ತಿಳಿಯಲ್ಪ

*ಈ ಉದಾಹರಣವು ಇತಾಲಿಯಲ್ಲಿ ೧೮೮೩ನೇ ವರ್ಷದ ಪೂರ್ವದಲ್ಲಿ ಇದ್ದಂಥ ಸ್ಥಿತಿಯನ್ನು ಕುರಿತು ಕೊಟ್ಟಿದೆ. ಸನ್ ೧೮೮೩ರಲ್ಲಿ ಇತಾಲಿಯವರೂ ರೋಖ ಹಣ ಕೊಡುವ ಪದ್ಧತಿಯನ್ನು ಅವ ಲಂಬಿಸಿದ್ದರಿಂದ ಮೇಲೆ ವಿವರಿಸಿದ ಸ್ಥಿತಿಯು ಈಗಿಲ್ಲ.

ಡುವದು. ಇತಾಲಿಯಲ್ಲಿ ಪ್ರವಾಸ ಮಾಡುವ ಇಂಗ್ಲಿಷ ಪ್ರಯಾಣಸ್ಥನಿಗೆ ೧ ಪೌಂಡಿಗೆ ೨೫ ಬೆಳ್ಳಿಯ ಲಾಯರಗಳು ದೊರಿಯುವವು, ಇಲ್ಲವೆ ೨೭ ಲಾಯರ ಹಾಗೂ ಚಿಲ್ಲರೆಯ ನೋಟುಗಳು ಬರುವವು. ಮುರಿಸಲಿಕ್ಕೆ ಬಾರದಂಥ ನೋಟುಗಳನ್ನು ಹಿಡಿಯಲೇ ಬೇಕೆಂದು ಕಟ್ಟಳೆ ಇಲ್ಲದ ಪಕ್ಷದಲ್ಲಿ ಇಂಥ ನೋಟುಗಳನ್ನು ಎಷ್ಟು ಹೊರಡಿಸಿದರೂ ಅದರಿಂದ ಯಾರಿಗೂ ಅನ್ಯಾಯವಾಗುವದಿಲ್ಲ. ಯಾಕಂದರೆ, ಇಂಥ ಪ್ರಸಕ್ತಿಯಲ್ಲಿ ಬೇಕಾದವರು ಈ ನೋಟುಗಳನ್ನು ತಕ್ಕೊಳ್ಳುವರು, ಬೇಡಾದವರು ರೋಖ ಹಣವನ್ನೇ ತಕ್ಕೊಳ್ಳುವರು. ಆದರೂ, ಈ ಬಗೆಯ ಮುರಿಸಲಿಕ್ಕೆ ಬಾರದ ನೋಟುಗಳು ಬಳಿಕೆಯಲ್ಲಿರುವಾಗ ಯಾವಾಗಲೂ ವ್ಯಾಪಾರದಲ್ಲಿ ದಗೆಗಳಾಗುವ ಸಂಭವವಿರುವದು. ಯಾಕಂದರೆ, ಈ ನೋಟುಗಳನ್ನು ಇಷ್ಟೇ ಹೊರಡಿಸ ಬೇಕೆಂಬುವ ಬಗ್ಗೆ ನಿಬಂಧನೆ ಇರುವದಿಲ್ಲಾದ ಕಾರಣ, ಅವುಗಳ ದ್ವಾರಾ ಅತಿಶಯ ದೊಡ್ಡ ರಕಮುಗಳು ದೇಶದ ಬಳಿಕೆಯೊಳಗಿನ ಹಣಕ್ಕೆ ಶೇರಿ, ಅದರಿಂದ ರಾಜ್ಯದ ವಸೂಲಿನಲ್ಲಿ ಬಹಳ ತೊಂದರೆಯುಂಟಾಗುವದು; ಮತ್ತು ಸರಕಾರದವರ ಪತ್ತಿಗೆ ಬಹಳ ಹಾನಿಯುಂಟಾಗುವದು. ಅಮೇರಿಕೆಯಲ್ಲಿ ಯುದ್ಧ ನಡಿದಾಗ ಅಲ್ಲಿ ಮುರಿಸಲಿಕ್ಕೆ ಬಾರದ ನೋಟುಗಳನ್ನು ಅತಿಶಯವಾಗಿ ಹೊರಡಿಸಿದ ಕಾರಣ, ಭಂಗಾರದ ನಾಣ್ಯಗಳ್ಳ ಬೆಲೆಗೂ, ಈ ನೋಟುಗಳ ಬೆಲೆಗೂ ಹೆಚ್ಚುಕಡಿಮೆಯಾಯಿತು. ಯಾಕಂದರೆ, ಆ ಕಾಲದಲ್ಲಿ ಜನರಿಗೆ ಅಮೇರಿಕೆಯಲ್ಲಿ ಸರಕಾರದವರು ಈ ನೋಟುಗಳ ಹಣ ಕೊಡುವ ತ್ರಾಣವುಳ್ಳವರಾಗುವರೆಂಬ ಪೂರ್ಣ ಭರವಸವಿದ್ದಿಲ್ಲ. ಭಂಗಾರದ ರೋಖ ಹಣದ ಬೆಲೆ ಏರಿ, ಅದು ಕಡಿಮೆ ದೊರಿಯ ಹತ್ತಿತು; ಹಾಗೂ ನೋಟುಗಳಿಗೆ ವಟ್ಟಾ ತೆರಬೇಕಾಯಿತು. ಈ ಯುದ್ಧದಿಂದುಂಟಾದ ಕೇಡಿನಿಂದ ಯುನಾಯಿಟೆಡ್ ಸ್ಟೇಟ್ಸದವರು ಪಾರಾಗಿ ಪೂರ್ವಸ್ಥಿತಿಗೆ ಬರ ಹತ್ತಿದ ಹಾಗೆ, ಈ ಹೆಚ್ಚುಕಡಿಮೆಯು ಬೇಗನೆ ಇಲ್ಲದಂತಾಯಿತು. ಹಾಗೂ, ಈಗ ಅಮೇರಿಕಾ ಸರಕಾರದವರು ನಗದು ಹಣ ಕೊಡಲಾರಂಭಿಸಿದ್ದರಿಂದ ಈ ಹೆಚ್ಚುಕಡಿಮೆಯು ಏನೂ ಇಲ್ಲದ ಹಾಗಾಗಿ, ಯುನಾಯಿಟೆಡ್ ಸ್ಟೇಟ್ಸದ ನೋಟುಗಳು "ಮುರಿಸಲಿಕ್ಕೆ ಬರುವ ಹಣ"ವಾಗಿವೆ. ಮೇಲೆ ಹೇಳಿದ ಯುದ್ಧವು ನಡಿದಾಗ ಒಮ್ಮೆ ೧೦೦ ಪೌಂಡು ಭಂಗಾರಕ್ಕೆ ೧೮೦ ಪೌಂಡುಗಳ ನೋಟುಗಳು ಬರುತ್ತಿದ್ದವು. ಸನ್ ೧೮೭೧ನೇ ವರ್ಷದ ಜನವರಿ ತಿಂಗಳಲ್ಲಿ ೧೦೦ ಪೌಂಡು ಭಂಗಾರಕ್ಕೆ ೧೨೦ ಪೌಂಡುಗಳ ನೋಟುಗಳು ಬರುತ್ತಿದ್ದವು. ಸನ್ ೧೮೭೧ನೇ ವರ್ಷದ ಜುಲಾಯಿ ತಿಂಗಳಲ್ಲಿ ಭಂಗಾರದ ೧೦೦ ಪೌಂಡುಗಳಿಗೆ ೧೧೨ ಪೌಂಡುಗಳ ನೋಟುಗಳು ಬರುತ್ತಿದ್ದವು; ಹಾಗೂ ನಗದು ಹಣ

ವನ್ನು ಕೊಡಲಾರಂಭಿಸಿದ್ದಕ್ಕೆ ಸ್ವಲ್ಪ ಮುಂಚಿನ ವರೆಗೆ ಈ ದರವೇ ಸ್ಥಿರವಾಗಿ ನಿಂತಿತ್ತು. ಅಮೇರಿಕೆಯಲ್ಲಿ ಈ ಪ್ರಕಾರ ನೋಟುಗಳನ್ನು ಬಹಳವಾಗಿ ಹೊರಡಿಸಿದ್ದರ ಪರಿಣಾಮವು ಧಾರಣೆಗಳ ಮೇಲೆ ಉಂಟಾಗಿ, ಆ ದೇಶದಲ್ಲಿ ಧಾರಣೆಗಳು ಬಹಳ ಏರಿದ್ದವು. ಮುರಿಸಲಿಕ್ಕೆ ಬಾರದಂಥ ನೋಟುಗಳನ್ನು ಮಿತಿಮೀರಿ ಹೊರಡಿಸಿದ್ದರಿಂದ ಅಮೇರಿಕಾ ಸರಕಾರದ ಪತ್ತು ಕಡಿಮೆಯಾಗಿ, ಭಂಗಾರದ ಬೆಲೆಗೂ ನೋಟುಗಳ ಬೆಲೆಗೂ ಬಹಳ ಹೆಚ್ಚುಕಡಿಮೆಯಾಗಲು, ಅದರಿಂದ ಸಾಹಸಿಕ ವ್ಯಾಪಾರಿಗಳ ಒಂದು ಹೊಸ ವರ್ಗವು ಹುಟ್ಟಿತು. ಈ ಸಾಹಸಿಕರ ಕೃತ್ಯಗಳಿಂದ ಪ್ರಾಮಾಣಿಕತನದಿಂದ ನಡಿಸಿದ ಉದ್ಯೋಗಗಳಿಗೆ ಬಹಳ ಹಾನಿಯುಂಟಾಯಿತು. ಈ ವ್ಯಾಪಾರಿಗಳು ಭಂಗಾರದ ವ್ಯಾಪಾರವನ್ನೇ ಆರಂಭಿಸಿ, ಭಂಗಾರದ ಬೆಲೆಯನ್ನು ಏರಿಸ ಬೇಕೆಂದು ವ್ಯಾಪಾರದ ಬೇರೆ ಸರಕುಗಳಂತೆ ಭಂಗಾರವನ್ನು ಬಹಳ ಖರೀದಿ ಮಾಡಿದ್ದರ ವಿವರವನ್ನು ಕೆಳಗೆ ಬರೆದಿದ್ದೇವೆ.

**ಅಮೇರಿಕೆಯೊಳಗಿನ ನ್ಯೂಅರ್ಕ ಪಟ್ಟದಲ್ಲಿ ಮಾಡಿದ "ಗೋಲ್ಡ್ ರಿಂಗ್" ಎಂಬ ಎಲ್ಲಾ ಭಂಗಾರವನ್ನು ಖರೀದಿ ಮಾಡುವ ಸಂಚು.**—ನ್ಯೂ ಅರ್ಕದ "ಗೋಲ್ಡ್ ರಿಂಗ್" ಎಂಬ ಸಂಚಿನವರ ವ್ಯಾಪಾರವು, ಸನ್ ೧೮೬೯ನೇ ಇಸವಿಯ ಶರತ್ಕಾಲದಲ್ಲಿ ಜಗತ್ತಿನಲ್ಲೆಲ್ಲ ಹೆಸರಾಯಿತು. ಈ ಸಂಚಿಗೆ ಸೇರಿದ ವ್ಯಾಪಾರಿಗಳು ದೇಶದೊಳಗಿನ ಯಾವತ್ತು ಭಂಗಾರವನ್ನೂ, ಭಂಗಾರದ ಚೇಕುಗಳನ್ನೂ (ಈ ಚೇಕುಗಳನ್ನು ಮುರಿಸಿದರೆ ರೋಖ ಭಂಗಾರವೇ ದೊರಿಯುತ್ತದೆ) ಕೊಳ್ಳ ಬೇಕೆಂದು ಒಳಸಂಚು ಮಾಡಿದರು. ಈ ಪ್ರಕಾರ ಇವರು ಭಂಗಾರವನ್ನು ಬಹಳವಾಗಿ ಖರೀದಿ ಮಾಡ ಹತ್ತಿದ್ದರ ಪರಿಣಾಮವು ಸನ್ ೧೮೬೯ನೇ ವರ್ಷದ ಸಪ್ಟಂಬರ ತಿಂಗಳಿನಲ್ಲಿ ಗೋಚರವಾಗ ಹತ್ತಿತ್ತು. ಆಗ ಈ ಸಂಚಿನವರಿಗೆ ಜನರ ಕಡೆಯಿಂದ ೧೦,೦೦,೦೦,೦೦೦ ಡೋಲರುಗಳು ಬರ ತಕ್ಕವಾದ ಕಾರಣ, ನ್ಯೂ ಅರ್ಕ ಪಟ್ಟದೊಳಗಿನ ಯಾವತ್ತು ಭಂಗಾರಕ್ಕೆ ಇವರೇ ಧನಿಯರಾಗಿದ್ದರು. ಇವರಿಗೆ ಕೊಡ ತಕ್ಕ ಭಂಗಾರವನ್ನು ಕೊಟ್ಟ ಕೂಡಲೆ, ಅವರು ಅದನ್ನು ಒತ್ತಟ್ಟಿಗೆ ತೆಗೆದಿಟ್ಟರು. ಅದರಿಂದ ಭಂಗಾರದ ಬೆಲೆಯು ತ್ವರೆಯಾಗಿ ಏರ ಹತ್ತಿತು. ಈ ಭಂಗಾರದ ವ್ಯಾಪಾರಗಾರರು ಭಂಗಾರದ ಬೆಲೆಯನ್ನು ೧೦೦ಕ್ಕೆ ೧೦೦ರ ವರೆಗೆ ಏರಿಸ ಬೇಕೆಂಬ ಆಲೋಚನೆಯಲ್ಲಿದ್ದರು. ಒಂದು ವೇಳೆ ಸರಕಾರದವರು ತಮ್ಮಲ್ಲಿ ಶಿಲಕು ಇದ್ದ ಭಂಗಾರವನ್ನು ಮಾರುವರೆಂಬದೊಂದು ಮಾತ್ರ ಭಯವು ಅವರ ಮನಸಿನಲ್ಲಿ ಯಾವಾಗಲೂ ಕಟಿಯುತ್ತಿತ್ತು. ಇಂಥ ಪ್ರಸಂಗವೇ ಬರಬಾರದೆಂದು ಅವರು ಬಹಳ ಯತ್ನ ಮಾಡಿದರು. ಆದರೆ ಅದೆಲ್ಲ ನಿಷ್ಫಲವಾಯಿತು.

ಆದ್ದರಿಂದ ಅವರು ತಾವು ಒಳಸಂಚು ಮಾಡಿದ್ದು ಸರಕಾರದವರ ಕಿವಿಗೆ ಮುಟ್ಟುವ ದರೊಳಗಾಗಿಯೇ ತಾವು ಬೇಗನೆ ಭಂಗಾರದ ಧಾರಣೆಯನ್ನು ಏರಿಸ ಬೇಕೆಂಬ ಯೋಚನೆ ಮಾಡಿ, ತಮ್ಮ ಉದ್ಯೋಗವನ್ನು ನಡಿಸಿದರು. ಮತ್ತು ಅವರ ಮನೋರಥವು ಬಹುತರ ಕೈಗೂಡಿತಂದರೂ ಅನ್ನ ಬಹುದು. ಒಂದು ದಿವಸ ಮುಂಜಾನೆಯಿಂದಮಧ್ಯಾಹ್ನದ ೧೨ ಘಂಟೆಯೊಳಗೆ ಭಂಗಾರದ ಬೆಲೆ ೧೩೦ರಿಂದ ೧೬೦ರ ವರೆಗೆ ಏರಿತು. ೧೨ ಘಂಟೆಗೆ ಬೊಕ್ಕಸದ ಮಂತ್ರಿಯು ಸರಕಾರದ ೪೦ ಲಕ್ಷ ಪೌಂಡುಗಳ ಭಂಗಾರವನ್ನು ಮಾರ ಬೇಕೆಂದು ಅಪ್ಪಣೆ ಕೊಟ್ಟನು. ಕೂಡಲೇ ಭಂಗಾರ ಖರೀದಿಗಾರರ ಒಳಸಂಚು ವ್ಯರ್ಥವಾಯಿತು. ಈ ಹುಕುಮು ಕೊಟ್ಟ ಮೇಲೆ ೮ ಮಿನಿಟುಗಳಲ್ಲಿ ಭಂಗಾರದ ಬೆಲೆಯು ೧೦೦ಕ್ಕೆ ೧೨೫ರಂತೆ ಇಳಿಯಿತು. ೧೨ ಘಂಟೆಗೆ ಭಂಗಾರದ ಬೆಲೆಯು ೧೬೦ ಆಗಿತ್ತು. ೧೨ಘಂಟೆಯ ಮೇಲೆ ೮ ಮಿನಿಟುಗಳಾದಾಗ ೧೪೦ ಆಯಿತು. ಮುಂದೆ ೧೯ ಮಿನಿಟುಗಳೊಳಗೆ ೧೩೩ ಆಯಿತು.— ("ಫ್ರೇಜರ್ಸ ಮ್ಯಾಗ್ಯಾಝೀನ"ವೆಂಬ ಮಾಸಿಕ ಪುಸ್ತಕದ ಸನ್ ೧೮೭೦ನೇ ವರ್ಷದ ಜನವರಿಯ ಅಂತದ ಮೇಲಿಂದ.) ಆದರೆ, ಇಂಥ ಸಂಗತಿಗಳು ವರ್ತಿಸುವ ಸಂಭವವಿದ್ದಲ್ಲಿ ಪ್ರಾಮಾಣಿಕತನದಿಂದ ಉದ್ಯೋಗ ಮಾಡುವವರಿಗೆ ತಾಗುವ ಹಾನಿಯು ಇಷ್ಟೇ ಎಂದು ಹೇಳ ಕೂಡದು. ಅದರಿಂದ ಪ್ರತಿಯೊಬ್ಬ ವ್ಯಾಪಾರಸ್ಥನ ವ್ಯವಹಾರಗಳೆಲ್ಲ ಕೇವಲ ಅನಿಶ್ಚಿತವಾಗಿಯೂ, ಗಂಡಾಂತರಗಳಿಗೆ ಒಳಪಟ್ಟವಾಗಿಯೂ ಕಾಣಿಸುವವು. ಹಾಗೂ ವ್ಯಾಪಾರ ಉದ್ಯೋಗಗಳೆಲ್ಲ ಹೆಚ್ಚು ಕಡಿಮೆಯಾಗಿ ಜುಗಾರಿನ ಆಟಗಳಂತೆ ಆಗುವವು.

**ಪತ್ತಿನಿಂದ ಸಾಮಾನ್ಯವಾಗಿ ಧಾರಣೆಗಳ ಮೇಲೆ ಉಂಟಾಗುವ ಪರಿಣಾಮವು ಹಿತಕರವಾಗಿರುವದು.**— ಪತ್ತನ್ನು ಮಿತಿಮೀರಿ ಉಪಯೋಗಿಸದೆ ಯೋಗ್ಯವಾದ ಪ್ರಮಾಣದಿಂದ ಉಪಯೋಗಿಸಿದರೆ ಅದರಿಂದ ಧಾರಣೆಗಳ ಮೇಲೆ ಉಂಟಾಗುವ ಪರಿಣಾಮವು ಯಾವತ್ತು ಜನಸಮೂಹಕ್ಕೆ ಹಿತಕರವಾಗಿರುವದು. ಪೇಟೆಯ ಸಾಮಾನ್ಯ ಧಾರಣೆಗಳು ಒಮ್ಮಿಂದೊಮ್ಮೆ ಹೆಚ್ಚು ಕಡಿಮೆಯಾದರೆ, ಅದರಿಂದ ವ್ಯಾಪಾರ ಉದ್ಯೋಗಗಳೆಲ್ಲ ಅನಿಶ್ಚಿತವಾಗಿ, ಸಂಪದುತ್ಪಾದನಕ್ಕೆ ಬಹಳ ಅಡ್ಡಿಯಾಗುವದು. ಪತ್ತನ್ನು ಉಪಯೋಗಿಸುವದರಿಂದ ಈ ಅಹಿತಕರವಾದ ಹೆಚ್ಚು ಕಡಿಮೆಗಳಿಗೆ ಪ್ರತಿಬಂಧವಾಗುವದು. ಪೇಟೆಯ ಧಾರಣೆಗಳಲ್ಲುಂಟಾಗುವ ಹೆಚ್ಚು ಕಡಿಮೆಗಳನ್ನು ತಪ್ಪಿಸುವದಕ್ಕೆ ಪತ್ತಿನಿಂದ ಆಗುವ ಸಹಾಯವನ್ನು ವರ್ಣಿಸುವದಕ್ಕಾಗಿ, ಈ ವಿಷಯದಲ್ಲಿ ಹುಂಡೀ ಚೀಟುಗಳಿಂದ ಆಗುವ ಕಾರ್ಯವನ್ನು ವಿಚಾರಿಸುವ. ಕ್ರಯವಿಕ್ರಯಗಳು ಹೆಚ್ಚಾದ ಪ್ರಮಾಣದಿಂದ ಅವುಗಳಿಗೆ ಹೆಚ್ಚು

ಹಣ ಬೇಕಾಗುವದು. ಹಾಗೂ ಈ ಹೆಚ್ಚು ಹಣವೇ ಆಗಲಿ, ಹಣಕ್ಕೆ ಬದಲಾಗಿ ಉಪಯೋಗಿಸಲ್ಪಡುವಂಥ ಯಾವ ಸಾಧನವೇ ಆಗಲಿ ಬಳಿಕೆಯಲ್ಲಿ ಬಾರದೆ ಹೋದರೆ, ಧಾರಣೆಗಳೆಲ್ಲ ಇಳಿಯುವವೆಂದು ಹಿಂದೆ ಅನೇಕ ಸಾರಿ ಹೇಳಿಯದೆ. ಒಬ್ಬ ವ್ಯಾಪಾರಸ್ಥನ ಕ್ರಯವಿಕ್ರಯಗಳು ಇಮ್ಮಡಿಯಾದರೆ, ಅವನು ಮೊದಲಿನದಕ್ಕಿಂತಲೂ ಹೆಚ್ಚು ಹುಂಡಿಗಳನ್ನು ಎರಡನೆಯವರಿಗೆ ಕೊಡಬೇಕಾಗುವದು. ಹಾಗೂ ಎರಡನೆಯವರಿಂದ ಅವನ ಮೇಲೂ ಹೆಚ್ಚು ಹುಂಡಿಗಳು ಬರುವವು. ಆ ಕಾರಣ ವ್ಯಾಪಾರವು ಬೆಳೆದ ಪ್ರಮಾಣದಿಂದ ಪತ್ತಿನ ಉಪಯೋಗವಾದರೂ ತನ್ನಿಂದ ತಾನೇ ಹೆಚ್ಚಾಗುತ್ತದೆ. ಇದರಂತೆಯೇ ವ್ಯಾಪಾರವು ಮಂದವಾದಾಗ್ಯಾದರೂ ಇದೇ ಬಗೆಯ ಪರಿಣಾಮ ಉಂಟಾಗುವದು. ಹ್ಯಾಗಂದರೆ, ವ್ಯಾಪಾರವು ಮಂದವಾಗಿ ಕ್ರಯವಿಕ್ರಯಗಳು ಕಡಿಮೆಯಾದ ಮಾನದಿಂದ ಕಡಿಮೆ ಹುಂಡಿಗಳು ಉಪಯೋಗಿಸಲ್ಪಡುವವು. ಈ ಪ್ರಕಾರ ಹುಂಡೀ ಚೀಟುಗಳನ್ನು ಉಪಯೋಗಿಸುವ ಪ್ರಚಾರವೇ ಇಲ್ಲದ ಪಕ್ಷಕ್ಕೆ, ವ್ಯಾಪಾರವು ಅಭಿವೃದ್ಧಿಯಾದ ಮಾನದಿಂದ ಧಾರಣೆಗಳೆಲ್ಲ ಇಳಿಯುವವು; ಹಾಗೂ ವ್ಯಾಪಾರ ಮಂದವಾದ ಮಾನದಿಂದ ಧಾರಣೆಗಳೆಲ್ಲ ಏರುವವು. ಈ ಪ್ರಕಾರ ಪತ್ತಿನಲ್ಲಿರುವ ಸ್ಥಿತಿಸ್ಥಾಪಕ ಗುಣದಿಂದ ಧಾರಣೆಗಳು ಒಮ್ಮಿಂದೊಮ್ಮೆ ಹೆಚ್ಚುಕಡಿಮೆಯಾಗುವದು ತಪ್ಪುವ ಕಾರಣ, ಪತ್ತಿನಿಂದ ಸಮಾಜಕ್ಕೆ ಬಹಳ ಕಲ್ಯಾಣವಾಗುವದು. ಕೆಲವು ಸಾರಿ ಯಾವದೊಂದು ಸರಕಿನ ಧಾರಣೆಯಲ್ಲಿ ಪತ್ತಿನಿಂದ ಬಹಳ ತ್ವರೆಯಾಗಿ ಹೆಚ್ಚುಕಡಿಮೆಯಾಗುವದೂ ಉಂಟು. ಆದರೂ ಇಂಥ ಉದಾಹರಣಗಳು ಬಹಳ ವಿರಳ.

**ಕಾಗದದ ಹಣವನ್ನು ಉಪಯೋಗಿಸುವದರಿಂದ ಹಣವನ್ನು ಬಹಳ ಮಿತಿಯಿಂದ ಉಪಯೋಗಿಸದಂತಾಗುವದು.**—ಪತ್ತಿನಿಂದುಂಟಾಗುವ ಮತ್ತೊಂದು ಪ್ರಯೋಜನವನ್ನು ಹೇಳ ತಕ್ಕದ್ದುಂಟು. ಯಾವದಾದರೊಂದು ದೇಶದಲ್ಲಿ ಉಪಯೋಗಿಸಲ್ಪಡುವ ಕಾಗದದ ಹಣವು ಬಹುಶಾ ನಗದು ಹಣದಂತೆಯೇ ಉಪಯೋಗಿಸಲ್ಪಡುವದೆಂದು ಹಿಂದೆ ತೋರಿಸಿ ಅದೆ. ಬ್ಯಾಂಕನೋಟುಗಳನ್ನೂ, ಚೇಕುಗಳನ್ನೂ, ಹುಂಡೀ ಚೀಟುಗಳನ್ನೂ ಉಪಯೋಗಿಸುವದನ್ನು ಬಿಟ್ಟು ಬಿಟ್ಟರೆ, ಈಗಿನದಕ್ಕಿಂತಲೂ ಬಹಳ ಹೆಚ್ಚು ಬೆಳ್ಳಿ ಭಂಗಾರದ ನಾಣ್ಯಗಳು ಬೇಕಾಗುವವು. ಆದ್ದರಿಂದ ಪತ್ತಿನ ಸಾಧನಗಳನ್ನು ಉಪಯೋಗಿಸುವದರಿಂದ ಪ್ರತ್ಯಕ್ಷ ಲಾಭ ಉಂಟು. ಯಾಕಂದರೆ, ಕಾಗದದಂಥ ಕ್ಷುಲ್ಲಕ ಪದಾರ್ಥವು ಅತಿಶಯ ಬೆಲೆಯುಳ್ಳ ಬೆಳ್ಳಿ ಭಂಗಾರಗಳಿಂದಾಗ ತಕ್ಕ ಕಾರ್ಯವನ್ನು ನೆರವೇರಿಸುವದು. ಬ್ಯಾಂಕ ಆಫ್ ಇಂಗ್ಲಂಡಿನ ೧,೦೦೦ ಪೌಂಡು ಬೆಲೆಯ್ಳ ಒಂದು ನೋಟಿನ

ಾಗದದ ಬೆಲೆಯನ್ನು ನೋಡಿದರೆ ಒಂದು ಪೈಗಿಂತಲೂ ಕಡಿಮೆಯಾಗಿರುವದು. ದರ ಸ್ವತಃಸಿದ್ಧವಾದ ಬೆಲೆಯು ಅತ್ಯಂತ ಕ್ಷುಲ್ಲಕವಾಗಿದ್ದಾಗ್ಯೂ, ಅದರಲ್ಲಿ ಪತ್ತಿ ಂದುಂಟಾದ ಸರಕು ಕೊಳ್ಳುವ ಶಕ್ತಿಯ ಮೂಲಕವಾಗಿ ಆ ನೋಟು ಇದ್ದ ನಿಗೆ ಅದು ೧,೦೦೦ ಪೌಂಡುಗಳಷ್ಟೇ ಉಪಯೋಗವುಳ್ಳದ್ದಾಗಿರುವದು.

## ಎರಡನೆ ಅಧ್ಯಾಯದ ಮೇಲಿನ ಪ್ರಶ್ನೆಗಳು.

## ಪತ್ತು ಹಾಗೂ ಪತ್ತಿನಿಂದ ಧಾರಣೆಗಳ ಮೇಲೆ ಉಂಟಾಗುವ ಪರಿಣಾಮವು.

೧. ಪತ್ತಂದರೇನು?

೨. ಯಾವನಾದರೊಬ್ಬ ಮನುಷ್ಯನ ಪತ್ತನ್ನಾಗಲಿ ಯಾವದಾದರೊಂದು ದೇಶದ ಪತ್ತನ್ನೇ ಆಗಲಿ ಒರೆಹಚ್ಚುವದು ಹ್ಯಾಗೆ?

೩. ಬಡ್ಡಿಯು ಬೇರೆ ಬೇರೆ ದರಗಳನ್ನುಂಟು ಮಾಡುವದಕ್ಕೆ "ಸಾಲಾ ತಿರುಗಿ ಕೊಡುವ ಸಾಮರ್ಥ್ಯ" ಎಂಬ ಸಂಗತಿಯಲ್ಲದೆ ಬೇರೆ ಯಾವ ಸಂಗತಿಯು ಕಾರಣವಾಗಿರುವದು?

೪. ಪತ್ತು ಬಂಡವಲವೆಂದು ಹೇಳುವದು ಯಾಕೆ ಮೂರ್ಖತನ?

೫. ಸಂಪದುತ್ಪಾದನಕ್ಕೆ ಪತ್ತಿನಿಂದುಂಟಾಗುವ ಸಹಾಯವನ್ನು ವಿವರಿಸಿರಿ.

೬. ಸಂಪತ್ತು ಉತ್ಪಾದಕ ಕೆಲಸಗಳಲ್ಲಿ ತೊಡಗುವದಕ್ಕೆ ಬ್ಯಾಂಕುಗಳಿಂದ ಪ್ರೋತ್ಸಾಹನವಾಗುವದು ಹ್ಯಾಗೆ?

೭. ಸಮೂಹಿಕ ಬಂಡವಲದ ಕಂಪನಿಗಳ ಮೂಲಕವಾಗಿ ಸಂಪತ್ತು ಉತ್ಪಾದಕ ಕೆಲಸಗಳಲ್ಲಿ ಸೇರುವ ಬಗೆ ಹ್ಯಾಗೆ?

೮. ಬ್ಯಾಂಕುಗಳೂ ಸಮೂಹಿಕ ಬಂಡವಲದ ಸಂಘಗಳೂ ಪತ್ತನ್ನು ಅವಲಂಬಿಸಿಕೊಂಡಿರುವವೆಂಬುದನ್ನು ತೋರಿಸಿರಿ.

೯. ಹುಂಡಿಗಳಂದರೇನು? ಇವುಗಳಿಂದ ಸಂಪತ್ತಿನ ಕ್ರಯವಿಕ್ರಯವು ಸುಲಭವಾಗುವ ಕ್ರಮ ಹ್ಯಾಗೆ?

೧೦. ಹುಂಡಿಯನ್ನು ಮುರಕೊಡುವದಂದರೇನು?

೧೧. ಹುಂಡಿಯು ಹಣದ ಕಾರ್ಯವನ್ನು ಮಾಡುವ ವಿಧವನ್ನು ಹೇಳಿರಿ.

೧೨. ಹುಂಡೀ ಚೀಟುಗಳ ಹಿಂದುಗಡೆಯಲ್ಲಿ ಪೇಚೆ ಮಾಡೋಣವಂದರೇನು?

೧೩. ಪತ್ತು, ಹುಂಡೀ ಚೀಟುಗಳ ರೂಪದಿಂದ ಕ್ರಯಗಳ ಮೇಲೆ ಉಂಟು ಮಾಡುವ ಪರಿಣಾಮವು ಯಾವದು?

೧೪. ಪತ್ತಿನ ಮೂಲಕವಾಗಿ ಸರಕುಗಳ ಕ್ರಯ ಏರುವದಕ್ಕೆ ಕಾರಣವೇನು?

೧೫. ಹುಂಡೀ ಚೀಟುಗಳನ್ನೇ ಆಗಲಿ ಹುಂಡೀ ಚೀಟುಗಳಂಥ ಪತ್ತಿನ ಬೇರೆ ಸಾಧನಗಳನ್ನೇ ಆಗಲಿ ಉಪಯೋಗಿಸುವದನ್ನು ನಿಲ್ಲಿಸಿದರೆ ಏನು ಪರಿಣಾಮ ಉಂಟಾಗುವದು?

೧೬. ಬ್ಯಾಂಕಿನ ನೋಟು ಅಂದರೇನು?

೧೭. ಬ್ಯಾಂಕಿನ ನೋಟಿಗೂ ಹುಂಡೀ ಚೀಟಿಗೂ ಇರುವ ವ್ಯತ್ಯಾಸವೇನು?

೧೮. 'ಬ್ಯಾಂಕ ಆಫ್ ಇಂಗ್ಲಂಡ'ವೆಂಬ ಬ್ಯಾಂಕಿನ ನೋಟುಗಳಲ್ಲಿ ಭಂಗಾರದಲ್ಲಿದ್ದಷ್ಟೇ ಸರಕು ಕೊಳ್ಳುವ ಶಕ್ತಿ ಇರುವ ಕಾರಣವೇನು?

೧೯. ಬ್ಯಾಂಕಿನ ನೋಟುಗಳಿಂದ ಧಾರಣೆಗಳ ಮೇಲೆ ಪರಿಣಾಮ ಉಂಟಾಗುವದು ಹ್ಯಾಗೆ?

೨೦. ಚೇಕುಗಳೆಂದರೇನು? ಇವುಗಳು ಹಣಕ್ಕೆ ಬದಲಾಗಿ ಉಪಯೋಗಿಸಲ್ಪಡುವದು ಹ್ಯಾಗೆ?

೨೧. ಲೆಖ್ಖ ತೀರಿಸುವ ಮನೆಗಳೆಂದರೇನು?

೨೨. ಲಂಡನದ ಲೆಖ್ಖ ತೀರಿಸುವ ಮನೆಯಲ್ಲಿ ವರ್ಷಕ್ಕೆ ಎಷ್ಟು ಚೇಕುಗಳು ಬದಲಿಸಲ್ಪಡುವವು?

೨೩. ಖಾತೇಲೆಖ್ಖವೆಂದರೇನು? ಅದರಿಂದ ರೋಖ ಹಣವನ್ನು ಕೊಡಕೊಳ್ಳುವದು ಹ್ಯಾಗೆ ಅನಾವಶ್ಯಕವಾಗುವದು?

೨೪. ಪತ್ತಿನಿಂದ ಜನರ ಸರಕು ಕೊಳ್ಳುವ ಸಾಮರ್ಥ್ಯವು ಹೆಚ್ಚುವದು ಹ್ಯಾಗೆ?

೨೫. ಈ ಪ್ರಕಾರ ವೃದ್ಧಿಯಾದ ಸರಕು ಕೊಳ್ಳುವ ಶಕ್ತಿಯಿಂದ ಧಾರಣೆಗಳ ಮೇಲೆ ಉಂಟಾಗುವ ಪರಿಣಾಮ ಯಾವದು?

೨೬. ಯಾವ ತರದ ಸರಕುಗಳ ಧಾರಣೆಯ ಮೇಲೆ ಪತ್ತಿನಿಂದ ಅತಿಶಯ ಪರಿಣಾಮ ಉಂಟಾಗುವದು?

೨೭. ವ್ಯಾಪಾರಸಮುದ್ವೇಗಗಳಿಗೆ ಕಾರಣವೇನು?

೨೮. ಅವುಗಳಿಂದ ಪತ್ತಿನ ಮೇಲೆ ಉಂಟಾಗುವ ಪರಿಣಾಮವೇನು?

೨೯. "ಬ್ಯಾಂಕ ಚಾರ್ಟರ ಆಕ್ಟಿನ" ಉದ್ದೇಶವೇನಾಗಿತ್ತು?

೩೦. ಈ ಆಕ್ಟಿನ ನಿಬಂಧನೆಗಳು ಯಾವವು?

೩೧. ಈ ಆಕ್ಟು ವ್ಯಾಪಾರದಲ್ಲುಂಟಾಗುವ ಬೆಬ್ಬುರಗಳನ್ನು ತಪ್ಪಿಸುವ ಸಾಮರ್ಥ್ಯವುಳ್ಳದ್ದಾಯಿತೋ?

೩೨. ಹಿಂದಕ್ಕೆ ಯಾವ ಕಾಲಕ್ರಮವನ್ನು ಅನುಸರಿಸಿ ವ್ಯಾಪಾರಸಮುದ್ವೇಗಗಳು ಸಂಭವಿಸುತ್ತಿದ್ದವು? ಮೇಲೆ ಕಾಣಿಸಿದ ಆಕ್ಟು ಉಂಟಾದನಂತರ ಯಾವ ವರ್ಷಗಳಲ್ಲಿ ಇಂಥ ಉದ್ವೇಗಗಳು ಆದವು?

೩೩. ಸಾಹಸಿಕ ವ್ಯಾಪಾರಿಗಳ ಸರಕು ಕೊಳ್ಳುವ ಶಕ್ತಿಗೆ ಈ ಕಾಯಿದೆಯಿಂದ ಪ್ರತಿಬಂಧವಾಗದೆ ಇರುವದಕ್ಕೆ ಕಾರಣವೇನು?

೩೪. ಈ ಆಕ್ಟಿನಿಂದ ಉಂಟಾದ ನಿಜವಾದ ಪರಿಣಾಮ ಯಾವದು?

೩೫. ವ್ಯಾಪಾರದಲ್ಲಿ ಬೆಬ್ಬುರ ಉಂಟಾದಾಗ "ಬ್ಯಾಂಕ ಆಫ್ ಇಂಗ್ಲಂಡಿನ" ನೋಟುಗಳನ್ನು ಮಾತ್ರ ಜನರು ಹಿಡಿಯುವದಕ್ಕೆ ಕಾರಣವೇನು? ಪತ್ತಿನ ಬೇರೆ ಸಾಧನಗಳನ್ನು ಯಾಕೆ ಹಿಡಿಯುವದಿಲ್ಲ?

೩೬. ಯಾವ ಯಾವ ಕಾಲದಲ್ಲಿ, ಹಾಗೂ ಎಷ್ಟು ಬಾರಿ "ಬ್ಯಾಂಕುಗಳ ಸನದಿನ ಆಕ್ಟು" ನಿಲ್ಲಿಸಲ್ಪಟ್ಟಿತು?

೩೭. ಈ ಆಕ್ಟನ್ನು ಕೆಲವು ಕಾಲ ನಿಲ್ಲಿಸಿದ್ದರಿಂದ ಉಂಟಾದ ಪರಿಣಾಮವೇನು?

೩೮. ಈ ಆಕ್ಟಿನಿಂದ ನಿಶ್ಚಯವಾಗಿ ಆಗುವಂಥ ದೊಡ್ಡ ಕಾರ್ಯಭಾಗವು ಯಾವದು?

೩೯. ಮುರಿಸಲಿಕ್ಕೆ ಬರುವ ಕಾಗದದ ಹಣವೆಂದರೇನು? ಮತ್ತು ಮುರಿಸಲಿಕ್ಕೆ ಬಾರದ ಕಾಗದದ ಹಣವೆಂದರೇನು?

೪೦. ಮುರಿಸಲಿಕ್ಕೆ ಬಾರದಂಥ ನೋಟುಗಳನ್ನು ಹೊರಡಿಸುವದರಿಂದ ಆಗುವ ಅಪಾಯಗಳು ಯಾವವು?

೪೧. ನ್ಯೂಆರ್ಕದಲ್ಲಿ ಆದ 'ಭಂಗಾರ ಕೊಳ್ಳುವ ಒಳಸಂಚಿ'ನವರ ಉದ್ಯೋಗವನ್ನು ವರ್ಣಿಸಿರಿ.

೪೨. ಸಾಮಾನ್ಯವಾದ ಧಾರಣೆಗಳಲ್ಲುಂಟಾಗುವ ಹೆಚ್ಚುಕಡಿಮೆಗಳು ತಪ್ಪುವದಕ್ಕೆ ಪತ್ತಿನಿಂದ ಸಹಾಯವಾಗುವ ಬಗೆಯನ್ನು ವಿವರಿಸಿರಿ.

೪೩. ಕಾಗದದ ಹಣವನ್ನು ಉಪಯೋಗಿಸುವದರಲ್ಲಿ ಕಂಡು ಬರುವ ಪ್ರತ್ಯಕ್ಷ ಮಿತವ್ಯಯವು ಯಾವದು?

---

೧. ಒಂದು ಸುಳ್ಳು ಬ್ಯಾಂಕಿನ ನೋಟು ಹುಟ್ಟಿಸಿದವನು ದೇಶದ ಸಂಪತ್ತನ್ನು ವೃದ್ಧಿ ಪಡಿಸಿದಂತೆ ಆಗುತ್ತದೋ?

೨. ನಾನು ಬ್ಯಾಂಕಿನಲ್ಲಿ ೧೦,೦೦೦ ರೂಪಾಯಿ ಇಟ್ಟು ಅವುಗಳನ್ನು ಉಪಯೋಗಿಸದೆ ಇದ್ದರೆ, ದುಷ್ಕೃತ್ಯ ಮಾಡಿದಂತಾಗುವದೋ?

೩. ಬ್ಯಾಂಕಿನ ಸಾವುಕಾರನೊಬ್ಬನು ತನ್ನ ನೋಟುಗಳಲ್ಲಿ ೧೦,೦೦೦ ರೂಪಾಯಿಯ ಒಂದು ನೋಟು ಸುಟ್ಟು ಬಿಟ್ಟರೆ ಅಷ್ಟರ ಮಟ್ಟಿಗೆ ಅವನು ಬಡವನಾಗುವನೋ?

೪. ಯಾವನೊಬ್ಬ ಬ್ಯಾಂಕಿನ ಸಾವುಕಾರನು ನೋಟುಗಳನ್ನು ಹೊರಡಿಸಿ ಧನಿಕನಾಗ ಬಹುದೋ?

೫. ಬೇಕಾದಷ್ಟು ಚೇಕುಗಳನ್ನು ಬರೆಯುವದರಿಂದ ಯಾವನಾದರೂ ಹಣವಂತನಾಗ ಬಹುದೋ?

# ೩ನೇ ಅಧ್ಯಾಯ.

## ಕರ.

**ಕರ ಕಟ್ಟುವ ಅವಶ್ಯಕತೆ.** — ಜನರ ಆಸ್ತಿ ಹಾಗೂ ಜೀವ ಇವುಗಳನ್ನು ರಕ್ಷಿಸುವದೂ, ಯಾವತ್ತು ಜನರಿಗೆ ಸಮಾನವಾಗಿದ್ದ ಸ್ವತಂತ್ರತೆಯನ್ನು ಕಾಪಾಡುವದೂ, ಸರಕಾರದ ಯೋಗ್ಯವಾದ ಕರ್ತವ್ಯಗಳೆಂದು ಬಹುತರವಾಗಿ ಸಮಸ್ತರೂ ಒಪ್ಪಿಕೊಳ್ಳುವರು. ಸರಕಾರದವರು ಈ ಕರ್ತವ್ಯಗಳನ್ನು ಕಡೆಗಾಣಿಸ ಬೇಕಾದರೆ ಬಹಳ ಹಣ ವೆಚ್ಚ ಮಾಡಬೇಕಾಗುವದು. ಈ ಹಣವು ಹುಟ್ಟುವದಕ್ಕಾಗಿ ಕರ ಕಟ್ಟುವ ಅವಶ್ಯಕತೆಯುಂಟಾಗುತ್ತದೆ. ಕರಗಳನ್ನು ಹ್ಯಾಗೆ ಕಟ್ಟ ಬೇಕು, ಯಾವ ವರ್ಗದ ಜನರಿಗೆ ಕಟ್ಟ ಬೇಕು, ಎಂಬೀ ವಿಷಯಗಳು ಅತ್ಯಂತ ಗೌರವವುಳ್ಳವಾದ್ದರಿಂದ ಜನರು ಯಾವಾಗಲೂ ಈ ವಿಷಯಗಳಲ್ಲಿ ಬಹಳ ಮನಸು ಹಾಕುವರು. ಕಾಹೀಮವಾದ ದಂಡು, ಪೋಲೀಸ ಖಾತೆ, ಮುಂತಾದವುಗಳಿಂದ ಉಂಟಾಗುವ ಸಂರಕ್ಷಣದಿಂದ ಹಿತ ಪಡಕೊಳ್ಳುವ ಪ್ರತಿಯೊಬ್ಬನು ಈ ಖಾತೆಗಳನ್ನು ಇಡುವದಕ್ಕೆ ತಗಲುವ ಖರ್ಚಿನ ಕೆಲ ಭಾಗವನ್ನು ಕೊಡ ತಕ್ಕದ್ದೆಂದು ಇತ್ತ

ಲಾಗಿ ಎಲ್ಲರೂ ಎಣಿಸುವರು. ಪ್ರಾಚೀನ ಕಾಲದಲ್ಲಿ ಯುರೋಪಖಂಡದೊಳಗೆ "ಫ್ಯೂಡಲ್ ಸಿಸ್ಟಿಮ್" ಎಂಬ ಜಮೇದಾರೀ ಪದ್ಧತಿಯು ಪ್ರಚಾರದಲ್ಲಿದ್ದ ಕಾಲಕ್ಕೆ ಈ ತತ್ವವು ಅಂಗೀಕರಿಸಲ್ಪಟ್ಟಿದ್ದಿಲ್ಲ. ಆ ಕಾಲಕ್ಕೆ ಫ್ರಾನ್ಸ ದೇಶದಲ್ಲಿ ಜಮೀನದಾರರೂ ಧರ್ಮೋಪಾಧ್ಯಾಯಿಗಳೂ ಕರಗಳಿಂದ ವಿಮುಕ್ತರಾಗಿದ್ದರು. ಹಾಗೂ ದೇಶದ ಕರದ ಭಾರವೆಲ್ಲ ಬಡ ಜನರ ತಲೆಯ ಮೇಲೆ ಬಿದ್ದಿತ್ತು. ಹೀಗಿದ್ದು, ಈ ಬಡ ಜನರಿಗೆ ರಾಜ್ಯದ ವಸೂಲಿನ ಆಡಳಿತದಲ್ಲಿ ಕೈಹಾಕುವ ಅಧಿಕಾರವು ಅಣುಮಾತ್ರವೂ ಇದ್ದಿಲ್ಲ. ಸನ್ ೧೭೮೯ನೇ ವರ್ಷ ಫ್ರಾನ್ಸದಲ್ಲಿ ವರ್ತಿಸಿದ ಘೋರವಾದ ರಾಜ್ಯಕ್ರಾಂತಿಗೆ ಈ ಅನ್ಯಾಯವೇ ಕಾರಣವೆಂಬುವದು ನಿಃಸಂದೇಹವಾಗಿದೆ. ಆದರೆ ನ್ಯಾಯಕ್ಕೆ ಇಷ್ಟು ವಿರುದ್ಧವಾದ ಆಚರಣೆಗಳು ಈಗಿನ ಕಾಲದಲ್ಲಿ ನಡಿಯುವದಿಲ್ಲ. ಏನು ಕರ ಕೊಡದೆ ಪಾರಾಗುವ ಹಕ್ಕು ಸಾಂಪ್ರತಕ್ಕೆ ಯಾವ ವರ್ಗದವರಿಗೂ ಇಲ್ಲ; ಜನರ ಉಚ್ಚ ನೀಚ ವರ್ಗಗಳ ಭೇದಾಭೇದವನ್ನು ಲಕ್ಷ್ಯಕ್ಕೆ ತಾರದೆ, ತೆರಿಗೆಗಳೂ ಕಪ್ಪಗಳೂ ಕರಗಳೂ ಎಲ್ಲರಿಂದ ತೆಗೆದುಕೊಳ್ಳಲ್ಪಡುವವು. ಕರದ ವಸೂಲಿನ ಹಣದ ವಿನಿಯೋಗವು ಯಾವನೊಬ್ಬ ವ್ಯಕ್ತಿಯ ಅಭಿಪ್ರಾಯದ ಮೇರೆಗೆ ಆಗಲಿಲ್ಲವೆಂಬ ಕಾರಣದಿಂದ ಅವನು ಕರದಿಂದ ಮುಕ್ತನಾಗುವದಿಲ್ಲ. ಉದಾಹರಣಾರ್ಥವಾಗಿ, ಇಂಗ್ಲಂಡದ ಕಂದಾಯದ ವಸೂಲಿನ ಕೆಲವೊಂದು ಭಾಗವು ಗುಪ್ತ ಪೋಲೀಸರನ್ನು ಇಡುವದರಲ್ಲಿಯೂ, ಕೆಲಸವಿಲ್ಲದಂಥ ಕೆಲ ಅಧಿಕಾರಿಗಳಿಗೆ ಭಾರಿಯಾದ ಸಂಬಳಗಳನ್ನೂ, ವರ್ಷಾಶನಗಳನ್ನೂ ಕೊಡುವದರಲ್ಲಿಯೂ ವೆಚ್ಚವಾಗುತ್ತದೆ. ಈ ಖರ್ಚನ್ನು ಕುರಿತು ದೇಶದಲ್ಲಿ ವಿರುದ್ಧ ಅಭಿಪ್ರಾಯವುಳ್ಳ ವ್ಯಕ್ತಿಗಳು ಎಷ್ಟೋ ಇದ್ದಾಗ್ಯೂ, ಈ ಖರ್ಚು ಅವರಿಗೆ ಕೇವಲ ಸಮ್ಮತವಾಗಿದ್ದರೆ ಕೊಡುವಷ್ಟೇ ಕರವನ್ನು ಅವರು ತೆರಬೇಕಾಗುವದು. ವ್ಯವಹಾರದ ದೃಷ್ಟಿಯಿಂದ ನೋಡಿದರೆ ಇದರಲ್ಲಿ ಏನು ಅನ್ಯಾಯವಿಲ್ಲ. ಕನಿಷ್ಠ ಪಕ್ಷಕ್ಕೆ, ಪಾರ್ಲಮೆಂಟ ಸಭೆಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವ ಅಧಿಕಾರವುಳ್ಳ ಜನರ ವಿಷಯವಾಗಿಯಾದರೂ ಇದು ಅನ್ಯಾಯವಲ್ಲ.

ಅಡಾಮ್‌ಸ್ಮಿಥನ ಕರ ಕಟ್ಟುವ ವಿಷಯದ ನಾಲ್ಕು ಸೂತ್ರಗಳು.— ಅಡಾಮ್‌ಸ್ಮಿಥನು "ರಾಷ್ಟ್ರಗಳ ಸಂಪತ್ತು" ಎಂಬ ಗ್ರಂಥದಲ್ಲಿ, ಕರ ಕಟ್ಟುವ ವಿಷಯದಲ್ಲಿ ನಾಲ್ಕು ಸೂತ್ರಗಳನ್ನು ಹಾಕಿಕೊಟ್ಟಿದ್ದಾನೆ. ಕರ ಕಟ್ಟುವವರು ಈ ಸೂತ್ರಗಳಿಗೆ ಸರಿಯಾಗಿ ವರ್ತಿಸಿದ್ದಾದರೆ, ಕರ ತೆರುವವರಿಗೆ ಸಾಧ್ಯವಾದ ಮಟ್ಟಿಗೆ ಎಲ್ಲಕ್ಕೂ ಕಡಿಮೆ ಬಾಧೆಯುಂಟಾಗಿ, ಸರಕಾರಕ್ಕೆ ಆದಷ್ಟು ಹೆಚ್ಚು ಕಂದಾಯವು ಬರುವದು. ಸ್ಥಳಸಂಕೋಚದ ಮೂಲಕವಾಗಿ ಈ ಸೂತ್ರಗಳನ್ನು

ಇಲ್ಲಿ ಸಮಗ್ರವಾಗಿ ಬರೆಯುವದಕ್ಕೆ ಅನುಕೂಲವಿಲ್ಲಾದ ಕಾರಣ, ಅವುಗಳ ಸಾರಾಂಶವನ್ನು ಮಾತ್ರ ಕೆಳಗೆ ಬರೆದಿದ್ದೇವೆ:

೧. ಪ್ರತಿಯೊಬ್ಬನು ಸರಕಾರದಿಂದುಂಟಾಗುವ ರಕ್ಷಣೆಯ ಮೂಲಕವಾಗಿ ತಾನು ಉಪಭೋಗಿಸುವ ಪ್ರಾಪ್ತಿಯ ಮಾನದಿಂದ ಕೆಲವೊಂದು ರಕಮನ್ನು ದೇಶದ ಕಂದಾಯಕ್ಕೆ ಸಲ್ಲಿಸ ತಕ್ಕದ್ದು. ಈ ಸೂತ್ರಕ್ಕೆ ಅನುಸಾರವಾಗಿ ಕರ ಕಟ್ಟಿದರೆ ಸರ್ವರಿಗೂ ಸಮನಾಗಿ ಕರ ಕಟ್ಟಿದ ಹಾಗಾಗುವ ಕಾರಣ, ಈ ಸೂತ್ರಕ್ಕೆ ಸಮತ್ವದ ಸೂತ್ರವೆಂಬ ಹೆಸರು ಕೊಡಬಹುದು.

೨. ಪ್ರತಿಯೊಬ್ಬನು ಕೊಡತಕ್ಕ ಕರವು ನಿಶ್ಚಿತವಾಗಿರ ಬೇಕು, ಮನಸೋಕ್ತವಾಗಿರ ಬಾರದು. ಕರ ಕೊಡುವ ವೇಳೆ, ಕೊಡತಕ್ಕ ಕ್ರಮ, ಕೊಡ ತಕ್ಕ ರಕಮು, ಇವೆಲ್ಲ ಕರ ತೆರುವವನಿಗೂ ಬೇರೆ ಯಾವತ್ತೂ ಜನರಿಗೂ ಬಹಿರಂಗವಾಗಿಯೂ ಸ್ಪಷ್ಟವಾಗಿಯೂ ತಿಳಿದಿರ ಬೇಕು. ಈ ಸೂತ್ರಕ್ಕೆ ನಿಶ್ಚಿತತ್ವದ ಸೂತ್ರವೆಂದು ಹೇಳ ಬಹುದು.

೩. ಯಾವ ಕಾಲದಲ್ಲಿ ಹಾಗೂ ಯಾವ ರೀತಿಯಿಂದ ಕರ ಕೊಡುವದು ಕರ ಕೊಡುವವನಿಗೆ ಅತಿಶಯ ಅನುಕೂಲವಾಗುವದೋ, ಆ ಕಾಲದಲ್ಲಿ ಹಾಗೂ ಆ ರೀತಿಯಿಂದ ಕರವನ್ನು ವಸೂಲು ಮಾಡ ತಕ್ಕದ್ದು. ಇದು ಅನುಕೂಲತೆಯ ಸೂತ್ರವೆನಿಸುವದು.

೪. ಪ್ರತಿಯೊಂದು ಕರವನ್ನು ಆ ಕರದಿಂದ ಸರಕಾರದ ಖಜಾನೆಯಲ್ಲಿ ಬರುವ ರಕಮಿಗಿಂತಲೂ, ಜನರ ಕಡೆಯಿಂದ ವಸೂಲಾಗುವ ರಕಮು ಆದಷ್ಟು ಕಡಿಮೆ ಹೆಚ್ಚಾಗುವ ಹಾಗೆ ಎತ್ತ ಬೇಕು. ಅಂದರೆ ವಸೂಲಾದ ಕರದೊಳಗಿನ ಆದಷ್ಟು ಹೆಚ್ಚು ಭಾಗವು ಸರಕಾರದ ಖಜಾನೆಗೆ ಬರುವ ಹಾಗೆ ಪ್ರತಿಯೊಂದು ಕರವನ್ನು ಕೂಡ್ರಿಸ ಬೇಕು. ಇದಕ್ಕೆ ಮಿತವ್ಯಯದ ಸೂತ್ರವೆಂದು ಅನ್ನಬಹುದು.

**ಮೊದಲನೆ ಸೂತ್ರದ ವಿವರಣೆ.**—ಮೇಲೆ ಹೇಳಿದ ನಾಲ್ಕು ಸೂತ್ರಗಳಲ್ಲಿ ಮೊದಲನೆ ಸೂತ್ರದಂತೆ ಪ್ರತಿಯೊಂದು ಕರವನ್ನು ಕೂಡ್ರಿಸುವಲ್ಲಿ ಪ್ರತ್ಯೇಕವಾಗಿ ನಡಿಯುವದಕ್ಕೆ ಬರುವದಿಲ್ಲ. ಯಾಕಂದರೆ, ಪ್ರತಿಯೊಂದು ಕರವನ್ನು ಕರ ಕೊಡುವವನ ಆದಾಯದ ಪ್ರಮಾಣದಿಂದ, ಇಲ್ಲವೆ ಅವನ ಕರ ಕೊಡುವ ಸಾಮರ್ಥ್ಯದ ಪ್ರಮಾಣದಿಂದ ಕೂಡ್ರಿಸುವದು ಅಸಾಧ್ಯವಾಗಿರುವದು. ಉದಾಹರಣಾರ್ಥ

ವಾಗಿ, ಉಪ್ಪಿನ ಮೇಲಣ ಕರವನ್ನು ವಿಚಾರಿಸುವ. ಕೇವಲ ಉದರ ನಿರ್ವಾಹಕ್ಕೆ ಮಾತ್ರ ಸಾಕಾಗುವಷ್ಟು ಪ್ರಾಪ್ತಿಯುಳ್ಳ ಆರು ಮಂದಿಯ ಒಂದು ಕುಟುಂಬಕ್ಕೆ, ಮೂರು ಮಂದಿಯ ಒಂದು ದೈವುಳ್ಳ ಕುಟುಂಬದಷ್ಟು, ಅಥವಾ ಒಂದು ವೇಳೆ ಹೆಚ್ಚು ಉಪ್ಪು ಬೇಕಾಗುವದು. ಆದಕಾರಣ, ಆದಾಯದ ಪ್ರಮಾಣದಿಂದ ನೋಡಲಾಗಿ, ದೈವುಳ್ಳ ಕುಟುಂಬದವರಿಗಿಂತಲೂ ಬಡ ಕುಟುಂಬದವರ ಮೇಲೆ ಉಪ್ಪಿನ ಮೇಲಿನ ಕರವು ಹೆಚ್ಚು ಬೀಳುತ್ತದೆ. ಆದ್ದರಿಂದ, ಇಂಥ ಪ್ರಸಕ್ತಿಗಳಲ್ಲಿ ಮೊದಲನೆ ಸೂತ್ರವನ್ನು ಅನ್ಯಾಯವಾಗದಂತೆ ಕೊನೆಗಾಣಿಸುವದು ಯಾವ ಸರಕಾರದವರಿಗಾದರೂ ಅಸಂಭವವೇ ಸರಿ. ಇಂಥ ಪ್ರಸಕ್ತಿಗಳಲ್ಲಿ ಬೇರೆ ಬೇರೆ ಜನರ ಕರ ಕೊಡುವ ಸಾಮರ್ಥ್ಯವನ್ನು ವಿಚಾರಿಸಿ ಕರ ಕಟ್ಟುವ ಯತ್ನ ಮಾಡಿದರೆ, ಈ ಕೆಲಸಕ್ಕೆ ಸಾವಿರಾರು ಅಧಿಕಾರಿಗಳು ಬೇಕಾಗುವದರಿಂದ ವಸೂಲಾದ ಕರವನ್ನೆಲ್ಲ ಈ ಅಧಿಕಾರಿಗಳ ಸಂಬಳಕ್ಕೆ ಕೊಡಬೇಕಾಗುವದು. ಈ ಪ್ರಕಾರ, ಸರಕಾರದವರು ಅಡಾಮ್‌ಸ್ಮಿಥನ ಮೊದಲನೆ ಸೂತ್ರವನ್ನು ಕೊನೆಗಾಣಿಸುವ ಯತ್ನದಿಂದ, ಅವನ ನಾಲ್ಕನೆ ಸೂತ್ರವನ್ನು ಮುರಿದ ಹಾಗಾಗುವದು. ಆ ಕಾರಣ ಕರದ ಸಮತ್ವವನ್ನುಂಟು ಮಾಡುವದು ಪ್ರತಿಯೊಂದು ವಿವಕ್ಷಿತವಾದ ಕರವು ಎಲ್ಲರ ಮೇಲೆ ಸಮನಾಗಿ ಬೀಳುವ ಹಾಗೆ ಮಾಡಿ ಅಲ್ಲ. ಆದರೆ, ಜನರ ಮೇಲೆ ಬೀಳುವ ಯಾವತ್ತು ಕರಗಳನ್ನು ಒಟ್ಟುಗೂಡಿಸಿ ನೋಡಿದರೆ, ಪ್ರತಿಯೊಬ್ಬನಿಗೆ ಅವನ ಆದಾಯಕ್ಕೆ ಸರಿಯಾಗಿ ಕರ ಕೂಡ್ರುವ ಹಾಗೆ ಯಾವತ್ತು ಕರಗಳ ವ್ಯವಸ್ಥೆಯನ್ನು ಇಡತಕ್ಕದ್ದು. ಅಂದರೆ ಒಂದು ಕರವನ್ನು ಭಾರಿಯಾಗಿ ತೆರಬೇಕಾಗುವವರು ಮತ್ತೊಂದು ಕರವನ್ನು ಕಡಿಮೆ ಕೊಡ ಬೇಕಾಗುವ ಹಾಗೆ ಮಾಡಬೇಕು; ಒಂದು ಕರವನ್ನು ತಪ್ಪಿಸಿಕೊಳ್ಳುವವರ ತಲೆಯ ಮೇಲೆ ಮತ್ತೊಂದು ಕರವಾದರೂ ಬಿದ್ದಿರ ಬೇಕು. ಒಟ್ಟಿಗೆ, ಪ್ರತಿಯೊಬ್ಬನು ತಾನು ಉಪಭೋಗಿಸುವ ಆದಾಯಕ್ಕೆ ಸರಿಯಾಗಿ ರಾಜ್ಯದಾಡಳಿತದ ವೆಚ್ಚವನ್ನು ಕೊಡುವ ಹಾಗೆ ಯಾವತ್ತು ಕರಗಳನ್ನು ಕೂಡ್ರಿಸಿರ ಬೇಕು. ಮೇಲಿನ ಉದಾಹರಣದಲ್ಲಿ ಬಡ ಕುಟುಂಬದವರಿಗೆ ಅವರ ಪ್ರಾಪ್ತಿಯ ಮಾನದಿಂದ ಉಪ್ಪಿನ ಮೇಲಿನ ಕರವನ್ನು ಹೆಚ್ಚು ಕೊಡಬೇಕಾಗುವದು. ಆದರೆ ಪ್ರಾಪ್ತಿಯ ಮೇಲಿನ ಕರವನ್ನು ಬಡ ಕುಟುಂಬದವನಿಗಿಂತಲೂ ದೈವುಳ್ಳ ಕುಟುಂಬದಾರನಿಗೆ ಹೆಚ್ಚು ಕೊಡಬೇಕಾಗುವದು. ದೈವುಳ್ಳವನು ರೇಶಿಮೆ ಅರಿವೆ, ಮದ್ಯ ಮುಂತಾದ ಯಾವತ್ತು ಸುಖೋಪಭೋಗದ ಒಡವೆಗಳ ಮೇಲಿನ ಕರವನ್ನು ಹೆಚ್ಚು ಕೊಡ ಬೇಕಾಗುವದು. ಬಡವರು ಈ ಜಿನಸುಗಳನ್ನು ಕಡಿಮೆ ಕೊಳ್ಳುವ ಕಾರಣ ಅವರ ಮೇಲೆ

ಈ ಕರವು ಕಡಿಮೆ ಬೀಳುವದು. ಈ ಪ್ರಕಾರ ಎಲ್ಲ ಕರಗಳು ಕೂಡಿ ಸರಾಸರಿ ಮಾನದಿಂದ ಕರಗಳಲ್ಲಿ ಸಮತ್ವವು ಉಂಟಾಗುವದು.

ಎರಡನೆ ಸೂತ್ರದ ವಿವರಣೆ.— ಕರಗಳು ನಿಶ್ಚಿತವಾಗಿರ ಬೇಕು, ಮನಸೋಕ್ತವಾಗಿರ ಬಾರದು, ಎಂಬ ಅಡಾಮ್‌ಸ್ಮಿಥನ ಎರಡನೆ ಸೂತ್ರವು ಬಹು ಗೌರವವುಳ್ಳದ್ದಾಗಿದೆ. ವ್ಯಾಪಾರಸ್ಥರಿಗೆ ತಾವು ತಮ್ಮ ಸರಕುಗಳ ಮೇಲೆ ಎಷ್ಟು ಕರ ಕೊಡಬೇಕಾಗುವದೆಂಬುವದು ಖಂಡಿತವಾಗಿ ತಿಳಿಯದೆ ಇರಲಾಗಿ, ಯಾವತ್ತು ವ್ಯಾಪಾರ ಉದ್ಯೋಗಗಳಲ್ಲಿ ಅನಿಶ್ಚಿತತ್ವವೂ ಲುಕಸಾನಿನ ಭಯವೂ ಉಂಟಾಗುವವು. ಜನರು ತಮ್ಮ ದೀರ್ಘದೃಷ್ಟಿ ಚಾತುರ್ಯಗಳಿಗಿಂತಲೂ, ತಮ್ಮ ಅದೃಷ್ಟದ ಮೇಲೆ ವಿಶೇಷ ಭಾರ ಹಾಕಿ ಎಲ್ಲ ವ್ಯವಹಾರಗಳನ್ನು ನಡಿಸ ಬೇಕಾಗುವದರಿಂದ, ವ್ಯಾಪಾರವೆಂಬುವದೊಂದು ದೊಡ್ಡ ಜುಗಾರಿನ ಆಟವಾಗುವದು. ಇದಲ್ಲದೆ, ಜನರಿಗೆ ತಾವು ಕೊಡತಕ್ಕ ಕರವು ಇಷ್ಟೇ ಇರುವದೆಂದು ತಿಳಿಯದೆ ಇದ್ದಲ್ಲಿ, ಕರ ಕೊಡುವವರೆಲ್ಲರೂ ಕರ ಎತ್ತುವ ಅಧಿಕಾರಿಗಳ ಬಲೆಯಲ್ಲಿ ಶಿಕ್ಕುವರು. ಈ ಅಧಿಕಾರಿಗಳು ತಮ್ಮ ಮನಸು ಬಂದಂತೆ ಕೆಲವರಿಗೆ ಹೆಚ್ಚು ಕರ ಕಟ್ಟುವರು, ಕೆಲವರಿಗೆ ಕಡಿಮೆ ಕರ ಕಟ್ಟುವರು. ಇದರಿಂದ ಆ ಅಧಿಕಾರಿಗಳಿಗೆ ಬಕ್ಷೀಸು, ಲಂಚ ಮುಂತಾದವುಗಳನ್ನು ತಕ್ಕೊಳ್ಳುವ ಬುದ್ಧಿಯೂ ಹುಟ್ಟುವದು. ಸರಕುಗಳ ಕ್ರಯಗಳ ಮೇಲೆ ಕರ ಕಟ್ಟುವ ಪದ್ಧತಿಯೂ ಇದೇ ದೋಷಕ್ಕೆ ಪಾತ್ರವಾದದ್ದು. ಸರಕುಗಳ ಕ್ರಯಗಳು ಆಯಾ ಸರಕುಗಳ ವಾಹಿನಿ, ಬಣ್ಣ, ಗುಣ ಮುಂತಾದವುಗಳ ಮೇಲಿರುವ ಕಾರಣ, ಸರಕುಗಳ ಕ್ರಯವನ್ನು ಆಗಿಂದಾಗ್ಯೆ ನಿರ್ಣೈಸಿ ಕರ ತಕ್ಕೊಳ್ಳುವ ಅಧಿಕಾರವು ಕರ ಎತ್ತುವ ಅಧಿಕಾರಿಗಳ ಕೈಯ್ಯಲ್ಲಿ ಶಿಕ್ಕಲು, ಅವರಿಗೆ ಬೇಕಾದ ಹಾಗೆ ಲಂಚ ತಕ್ಕೊಳ್ಳುವದಕ್ಕೂ ಪಕ್ಷಪಾತ ಮಾಡುವದಕ್ಕೂ ಆಸ್ಪದವಾಗುವದು.

ಮೂರನೆ ಸೂತ್ರವು.— ಕರ ಕೊಡುವವನಿಗೆ ಆದಷ್ಟು ಕಡಿಮೆ ಬಾಧೆಯುಂಟಾಗಿ ಕರ ಬರ ಬೇಕೆಂಬುವದಿದ್ದರೆ, ಈ ಮೂರನೆ ಸೂತ್ರವನ್ನು ಅನುಸರಿಸುವದು ಅತ್ಯವಶ್ಯವಾದದ್ದು. ಕರ ತೆರುವವನಿಗೆ ಕೇವಲ ಅನಾನುಕೂಲವಾದ ಸಮಯಕ್ಕೆ ಕರ ತೆರ ಬೇಕಾದರೆ, ಅದರಿಂದ ಸಮಾಜಕ್ಕೆ ಏನು ಲಾಭವಾಗದೆ, ಕರ ಕೊಡುವವನಿಗೆ ಮಾತ್ರ ನಿಷ್ಕಾರಣವಾಗಿ ತೊಂದರೆಯುಂಟಾಗುವದು. ಆ ಕಾರಣ, ಕರ ಕೊಡುವವರಿಗೆ ಬಹುತರವಾಗಿ ಅನುಕೂಲವಾಗಿದ್ದ ಸಮಯಕ್ಕೇ ಕರ ಕೊಡ ಬೇಕಾಗುವ ಹಾಗೆ ವ್ಯವಸ್ಥೆಯನ್ನಿರಿಸುವದು ಸರಕಾರದ ಕರ್ತವ್ಯವಾಗಿದೆ. ಸರಕುಗಳ ಮೇಲಿನ್ನ ಕರಗಳು ಸರಕುಗಳನ್ನು ಉತ್ಪನ್ನ ಮಾಡುವ ಖರ್ಚಿನ ಭಾಗ

ವಾಗಿರುವ ಕಾರಣ, ಈ ಕರಗಳನ್ನೆಲ್ಲ ಸರಕುಗಳನ್ನು ಉಪಯೋಗಿಸುವವರೇ ತೆರುವರು. ಆ ಕಾರಣ, ಸರಕುಗಳನ್ನು ಉಪಯೋಗಿಸುವದಕ್ಕಾಗಿ ಕೊಳ್ಳುವವನು ತನಗೆ ಅನುಕೂಲವಿದ್ದ ಕಾಲದಲ್ಲಿಯೇ ಕರ ಕೊಟ್ಟ ಹಾಗಾಗುವದು: ಅಂದರೆ, ಅವನು ಸರಕು ಕೊಂಡಾಗ ಕರ ಕೊಡುವನು; ಅವನಿಗೆ ಕರ ಕೊಡುವದಕ್ಕೆ ಆ ವೇಳೆಯು ಅನುಕೂಲವಾಗಿರದಿದ್ದರೆ, ಅವನು ಆ ಸರಕನ್ನು ಆಗ ಕೊಳ್ಳುವದೇ ಇಲ್ಲ. ಆದರೆ, ಸರಕುಗಳ ಮೇಲಿನ ಕರವನ್ನು ಮೊದಲು ಸರಕುಗಳ ಮಾರಾಟ ಮಾಡುವವನು ಕೊಡುವನು. ಉದಾಹರಣಾರ್ಥವಾಗಿ, ಒಬ್ಬನು ಒಂದು ಶೇರು ಉಪ್ಪು ಕೊಂಡರೆ, ಆ ಉಪ್ಪಿನ ಕ್ರಯದಲ್ಲಿ ಕೆಲವೊಂದು ಭಾಗವು ಸರಕಾರದವರು ಉಪ್ಪಿನ ಮೇಲೆ ಕೂಡ್ರಿಸಿದ ಕರವಾಗಿರುವದು. ಉಪ್ಪಿನ ಕಿರುಕುಳ ವ್ಯಾಪಾರ ಮಾಡುವವನು ಉಪ್ಪು ಖರೀದಿ ಮಾಡಿದಾಗಲೇ ಅದರ ಮೇಲಿನ ಕರವನ್ನು ಕೊಟ್ಟಿರುವನು. ಅವನು ಆ ಉಪ್ಪು ನಗದು ಹಣ ಕೊಟ್ಟು ಕೊಂಡಿದ್ದಾದರೆ, ಅವನು ಕರ ಕೊಟ್ಟ ಕಾಲವು ಅವನಿಗೆ ಬಹಳ ಅನಾನುಕೂಲವಾದ ಕಾಲವಾಗಿರ ಬಹುದು. ಅವನು ಉಪ್ಪನ್ನು ನಗದು ಹಣ ಕೊಟ್ಟುಕೊಳ್ಳದೆ, ಮೂರು ತಿಂಗಳ, ಇಲ್ಲವೆ ಆರು ತಿಂಗಳ ವಾಯಿದೆಯ ಹುಂಡಿಯನ್ನು ಬರೆದು ಕೊಟ್ಟುಕೊಂಡಿದ್ದರೆ ಮಾತ್ರ, ಅವನು ಅನಾನುಕೂಲವಾದ ವೇಳೆಗೆ ಕರ ಕೊಟ್ಟಂತೆ ಆಗುವದಿಲ್ಲ. ಯಾಕಂದರೆ, ಅವನ ಹುಂಡಿಯು ವಾಯಿದೆ ಮುಗಿಯುವಷ್ಟರೊಳಗೆ, ಅವನ ಉಪ್ಪು ಮಾರಾಟವಾಗಿ ಅವನ ಹತ್ತರ ತನ್ನ ಹುಂಡಿಯ ಹಣ ಕೊಡುವದಕ್ಕೆ ಹಣ ಬಂದಿರುವದು. "ಭೂಮಿಯ ಅಥವಾ ಮನೆಗಳ ಬಾಡಿಗೆಯ ಮೇಲಿನ ಕರವನ್ನು ಜನರು ವಾಡಿಕೆಯಾಗಿ ಈ ಬಾಡಿಗೆಗಳನ್ನು ತೀರಿಸುವ ಕಾಲದಲ್ಲಿ ತಕ್ಕೊಂಡರೆ, ಕರ ಕೊಡುವವನಿಗೆ ಬಹುಶಃ ಅನುಕೂಲವಾದ ಕಾಲದಲ್ಲಿಯೇ ಕರ ತಕ್ಕೊಂಡ ಹಾಗಾಗುವದು. ಅಂದರೆ, ಅವನ ಹತ್ತರ ಬಹುತರ ಕರ ಕೊಡುವದಕ್ಕೆ ಹಣವಿದ್ದ ಕಾಲದಲ್ಲಿ ಕರ ವಸೂಲು ಮಾಡಿದ ಹಾಗಾಗುಗುವದು," ಎಂದು ಅಡಾಮ್‌ಸ್ಮಿಥನು ಹೇಳಿದ್ದಾನೆ. ಬಲ್‌ಗೇರಿಯಾ, ಮತ್ತು ಬೋಸನಿಯಾ ಪ್ರಾಂತಗಳು ತುರ್ಕಸ್ತಾನದವರ ಅಮಲಿನಲ್ಲಿದ್ದಾಗ, ಅಲ್ಲಿಯ ನಿವಾಸಿಗಳು ಅನುಭೋಗಿಸಿದ ಕಷ್ಟಗಳಿಗೆ ಆ ಸರಕಾರದವರು ಕರ ಕಟ್ಟುವ ಎರಡನೆ ಮತ್ತು ಮೂರನೆ ಸೂತ್ರಗಳನ್ನು ಉಲ್ಲಂಘಿಸಿದ್ದೇ ಮುಖ್ಯ ಕಾರಣವಾಗಿತ್ತು. ಆಗ ಆ ಪ್ರಾಂತಗಳಲ್ಲಿ ಬೆಳೆದಲ್ಲೇ ಕೊಳಿತು ಹೋಗುವಂಥ ಪೈರುಗಳು ಪ್ರಯಾಣಸ್ಥರಿಗೆ ಅಲ್ಲಲ್ಲಿಗೆ ಕಾಣಿಸುತ್ತಿದ್ದವು. ಯಾಕಂದರೆ, ಕರ ಕಟ್ಟುವ ಅಧಿಕಾರಿಯು ಬಂದು, 'ಪೈರು ಪರೀಕ್ಷಿಸಿ, ಕೊಡ ತಕ್ಕ ಕರವ ನಿರ್ಣೈಸುವ ವರೆಗೆ ಒಕ್ಕಲಿಗರಿಗೆ ಪೈರು ಮನೆಗೆ ಒಯ್ಯು

ಲಿಕ್ಕೆ ಅಪ್ಪಣೆ ಇದ್ದಿಲ್ಲ. ಮತ್ತು ಈ ಪ್ರಕಾರ ಕಟ್ಟಲ್ಪಡುವ ಕರವಾದರೂ ಇಷ್ಟೇ ಎಂದು ಖಂಡಿತವಾಗಿ ತಿಳಿಯುತ್ತಿದ್ದಿಲ್ಲ; ಎಷ್ಟೋ ಬಾರಿ, ಕರ ಕಟ್ಟುವ ಉದ್ಯೋಗಸ್ಥನು ಬರುವದಕ್ಕೆ ತಡವಾದ್ದರಿಂದ ಪೈರುಗಳು ಅಲ್ಲಿಂದಲ್ಲೇ ಕೊಳಿತು, ನಾಶವಾಗಿ ಹೋಗುತ್ತಿದ್ದವು.

**ನಾಲ್ಕನೆ ಸೂತ್ರವು. ಅಟಕಿನ ಮನೆಗಳ ಉಪಯೋಗವು.**— ಈ ನಾಲ್ಕನೆ ನಿಯಮಕ್ಕೂ ಮೂರನೆ ನಿಯಮಕ್ಕೂ ಅತಿ ನಿಕಟವಾದ ಸಂಬಂಧ ಉಂಟು. ಕರ ತೆರುವವನಿಗೆ ಅನಾನುಕೂಲವಾದ ವೇಳೆಯಲ್ಲಿ ಕರವನ್ನು ತಕ್ಕೊಳ್ಳಲು, ಅದರಿಂದ ಬಹುಶಾ ನಿಶ್ಚಯವಾಗಿ, ಸರಕಾರದ ಕಂದಾಯಕ್ಕೆ ಸಲ್ಲುವ ಹಣಕ್ಕಿಂತಲೂ ಹೆಚ್ಚು ಹಣವು ಕರ ತೆರುವವನ ಕೈಯ್ಯಿಂದ ಹೋಗುವದು. ಯಾವದಾದರೊಂದು ವಿಶೇಷ ಪ್ರಕಾರದ ವ್ಯವಸ್ಥೆಯನ್ನು ಮಾಡಿ, ಯಾವದೊಂದು ಕರವನ್ನು ಅನಾನುಕೂಲವಾದ ವೇಳೆಗೆ ಕೊಡ ಬೇಕಾಗುವದನ್ನು ತಪ್ಪಿಸಿದಾಗ, ಸರಕಾರಕ್ಕೆ ಮುಟ್ಟುವ ರಕಮಿಗೂ ಕರ ತೆರುವವನಿಂದ ತಕ್ಕೊಂಡ ರಕಮಿಗೂ ಇರುವ ವ್ಯತ್ಯಾಸವು ಕಡಿಮೆಯಾಗುವದು. ಉದಾಹರಣಾರ್ಥವಾಗಿ, ಸುಂಕಾ ಕೊಡ ಬೇಕಾಗುವ ಸರಕುಗಳನ್ನು ಹೊರಗಿಂದ ತಂದವನಿಗೆ ತನ್ನ ಸರಕುಗಳನ್ನು ತಾತ್ಕಾಲಕ್ಕೆ ಮಾರುವ ಮನಸ್ಸಿಲ್ಲದಿದ್ದರೆ, ಅವುಗಳನ್ನು ಇಡುವದಕ್ಕೆ ಅಟಕಿನ ಮನೆಗಳನ್ನು ಮಾಡ ಬಹುದು. ಈ ಸರಕುಗಳು ಅಲ್ಲಿ ಇರುವ ವರೆಗೆ, ಅವನಿಗೆ ಅವುಗಳ ಮೇಲಣ ಸುಂಕವನ್ನು ಕೊಡಬೇಕಾಗುವದಿಲ್ಲ. ಸರಕುಗಳು ಮಾರಾಟವಾಗುವ ವರೆಗೂ ಅವುಗಳನ್ನು ಅಟಕಿನ ಮನೆಯಲ್ಲಿಟ್ಟು, ಅವು ಮಾರಾಟವಾದಾಗ ಅವುಗಳ ಮೇಲಣ ಸುಂಕವನ್ನು ತೀರಿಸ ಬಹುದು. ಈ ಪ್ರಕಾರ, ಅವನ ಸರಕು ಮಾರಾಟವಾಗಿ ಹಣ ಕೈಗೆ ಬಂದಾಗ ಅವನ ಕಡಿಯಿಂದ ಸುಂಕವನ್ನು ತಕ್ಕೊಂಡಿದ್ದಾದರೆ, ಅವನಿಗೆ ಕೇವಲ ಅನುಕೂಲವಾದ ವೇಳೆಗೇ ಅವನಿಂದ ಸುಂಕಾ ವಸೂಲು ಮಾಡಿದ ಹಾಗಾಗುವದು. ಮದ್ಯವನ್ನು ಮಾರುವವನೊಬ್ಬನು ಒಂದು ಸಾವಿರ ಪೌಂಡುಗಳ ಮದ್ಯವನ್ನು ತಂದಿದ್ದಾನೆಂತಲೂ, ಈ ಮದ್ಯದ ಮೇಲೆ ೫೦೦ ಪೌಂಡು ಸುಂಕ ಉಂಟೆಂತಲೂ ಕಲ್ಪಿಸುವ. ಈ ವ್ಯಾಪಾರಸ್ಥನು ತನ್ನ ಮದ್ಯವು ಮಾರಾಟವಾಗುವ ವರೆಗೆ ಆರು ತಿಂಗಳು ಅದನ್ನು ಅಟಕಿನ ಮನೆಯಲ್ಲಿ ಇಟ್ಟು ಬಿಡುವನು. ಅನಂತರ, ವಾಡಿಕೆಯಾಗಿ ಅವನ ಬಂಡವಲಕ್ಕೆ ವರ್ಷ ಒಂದಕ್ಕೆ ನೂರಕ್ಕೆ ೨೦ರಂತೆ ಲಾಭ ಬರುತ್ತಿದ್ದರೆ, ಅವನು ತನ್ನ ಮದ್ಯವನ್ನು ೧,೬೦೦ ಪೌಂಡುಗಳಿಗೆ ಮಾರುವನು. ಈ ಕ್ರಯದಲ್ಲಿ ಕೆಳಗೆ ಬರೆದ ಪ್ರಕಾರ ಬೇರೆ ಬೇರೆ ರಕಮುಗಳು ಸೇರಿರುವವು:—

| | |
|---|---|
| ಮದ್ಯದ ಮೂಲಕ್ರಯ . . . . . . . . | ೧,೦೦೦ ಪೌಂಡುಗಳು. |
| ಆರು ತಿಂಗಳಿಗೆ ನೂರಕ್ಕೆ ೧೦ರಂತೆ ಮದ್ಯದ | |
| ವ್ಯಾಪಾರದಲ್ಲಿ ಬರತಕ್ಕ ಲಾಭ. . . . . . | ೧೦೦ ,, |
| ಮದ್ಯದ ಮೇಲಿನ ಸುಂಕ . . . . . . . | ೫೦೦ ,, |
| ಒಟ್ಟಿಗೆ | ೧,೬೦೦ ಪೌಂಡುಗಳು. |

ಆದರೆ ಇದಕ್ಕೆ ವಿಪರೀತವಾಗಿ, ಆ ಮದ್ಯ ಮಾರುವವನಿಗೆ ಮದ್ಯವು ಬಂದರದಲ್ಲಿ ಬಂದು ತಲ್ಪಿದ ಕೂಡಲೆ ಅದರ ಮೇಲಣ ಸುಂಕಾ ಕೊಡಬೇಕಾದರೆ, ಆರು ತಿಂಗಳನಂತರ ಆ ಮದ್ಯದ ಕ್ರಯವು ೧,೦೦೦ ಪೌಂಡುಗಳಿಗೆ ಬದಲಾಗಿ, ೧೬೫೦ ಪೌಂಡುಗಳಾಗುವದು. ಹ್ಯಾಗಂದರೆ, ಆ ವರ್ತಕನು ೫೦೦ ಪೌಂಡು ಹೆಚ್ಚು ಬಂಡವಲವನ್ನು ಆರು ತಿಂಗಳು ಮೊದಲು ಹಾಕಿದ ಹಾಗಾಗುವದು. ಹಾಗೂ ಈ ಬಂಡವಲದ ಮೇಲೂ, ಅವನು ವರ್ಷಕ್ಕೆ ನೂರಕ್ಕೆ ೨೦ರಂತೆ ಬಡ್ಡಿಯನ್ನು ಅಪೇಕ್ಷಿಸುವನು. ಈ ಪ್ರಸಕ್ತಿಯಲ್ಲಿ ಮದ್ಯದ ಕ್ರಯದಲ್ಲಿ ಕೆಳಗಿನ ರಕಮುಗಳು ಬರುವವು:—

| | |
|---|---|
| ಮದ್ಯದ ಕ್ರಯವು, ಸುಂಕ ಸಹಿತವಾಗಿ . . . | ೧,೫೦೦ಪೌಂಡುಗಳು. |
| ೧,೫೦೦ ಪೌಂಡುಗಳ ಮೇಲೆ ವರ್ತಕನ | |
| ನೂರಕ್ಕೆ ೧೦ರಂತೆ, ಆರು ತಿಂಗಳ ಲಾಭ. . . | ೧೫೦ ಪೌಂಡುಗಳು. |
| | ೧,೬೫೦ ಪೌಂಡುಗಳು. |

ಈ ಪ್ರಕಾರ, ಸರಕಾರದ ಕಂದಾಯಕ್ಕೆ ಸಲ್ಲುವ ರಕಮಿಗಿಂತಲೂ ಮದ್ಯವನ್ನು ಉಪಯೋಗಿಸುವವನ ತಲೆಯ ಮೇಲೆ ೫೦ ಪೌಂಡು ಹೆಚ್ಚು ಸುಂಕ ಬೀಳುವದು.*

* ಈ ವಿಷಯವನ್ನು ಕುರಿತು ಕೆಲವರು ತೆಗೆದ ಆಕ್ಷೇಪವೇನಂದರೆ, ಸರಕುಗಳನ್ನು ಉಪಯೋಗಿಸುವವರಿಗೆ ಈ ಬಗೆಯಿಂದ ಲಾಭವಾದಷ್ಟೇ ಸರಕಾರಕ್ಕೆ ಲುಕಸಾನು ತಾಗುವದು. ಮದ್ಯವು ಹೊರಗಿಂದ ಬಂದ ಕೂಡ್ಲೆ ಸುಂಕವನ್ನು ವಸೂಲು ಮಾಡಿದ್ದರೆ, ಸರಕಾರಕ್ಕೆ ೫೦೦ ಪೌಂಡುಗಳು ಆರು ತಿಂಗಳು ಮುಂಚಿತವಾಗಿ ಬರುತ್ತಿದ್ದವು. ಅದರಿಂದ, ಸರಕಾರಕ್ಕೆ ೫೦೦ ಪೌಂಡುಗಳ ಮೇಲಣ ಆರು ತಿಂಗಳ ಬಡ್ಡಿಯು ಬರುತ್ತಿತ್ತು. ಆದರೆ ಈ ಆಕ್ಷೇಪದಲ್ಲಿ ಗ್ರಹಿಸಿದಂಥ ಮೂಲ ಮಾತೇ ಸುಳ್ಳಾಗಿರುವದು. ಆದ್ದರಿಂದ ಈ ಆಕ್ಷೇಪವು ನಿರರ್ಥಕವಾದದ್ದು. ವ್ಯಾಪಾರಸ್ಥರಿಗೆ ಅವರ ಬಂಡವಲದ ಮೇಲೆ ಬರುವಷ್ಟು ಬಡ್ಡಿಯು ಸರಕಾರದವರಿಗೆ ಎಂದಿಗೂ ಬರುವದಿಲ್ಲ. ಮೇಲಿನ ಉದಾಹರಣದಲ್ಲಿ ಮದ್ಯದ ವ್ಯಾಪಾರ ಮಾಡುವವನ ವಾರ್ಷಿಕ ಲಾಭವು ನೂರಕ್ಕೆ ೨೦ರಂತೆ ಇರುವದೆಂದು ಲೆಕ್ಕ ಮಾಡಿದ್ದೇವೆ. ಸರಕಾರದವರ ಹಣಕ್ಕೆ ನೂರಕ್ಕೆ ೩ರಕ್ಕಿಂತಲೂ, ಹೆಚ್ಚು ಬಡ್ಡಿಯು ಬರುವದಿಲ್ಲ. ಈ ಮೇರೆಗೆ ವರ್ಷಕ್ಕೆ ನೂರಕ್ಕೆ ೩ರಂತೆ ೫೦೦ ಪೌಂಡುಗಳ ಆರು ತಿಂಗಳ ಬಡ್ಡಿಯು ೭ ಪೌಂಡು, ೧೦ ಶಿಲಿಂಗು ಆಗುವದು. ಆದಕಾರಣ, ಸರಕಾರದವರಿಗೆ ೫೦೦ ಪೌಂಡುಗಳು ಮುಂಚಿತವಾಗಿ ಬಂದರೆ ಅವುಗಳಿಂದ ಸರಕಾರಕ್ಕೆ ೭ ಪೌಂಡು ೧೦ ಶಿಲಿಂಗು ಉ

. **ಮೂಲದ್ರವ್ಯಗಳ ಮೇಲಣ ಕರಗಳು.**—ಅಡಾಮ್ ಸ್ಮಿಥನ ನಾಲ್ಕನೆ ನಿಯಮದ ಪ್ರಕಾರ ಸರಕುಗಳ ಮೇಲಣ ಕಪ್ಪಗಳನ್ನು ಮೂಲದ್ರವ್ಯಗಳ ಮೇಲೆ ಕೂಡ್ರಿಸದೆ, ಆ ಮೂಲದ್ರವ್ಯಗಳಿಂದ ಉಂಟಾದ ಸರಕುಗಳ ಮೇಲೆ ಕೂಡ್ರಿಸ ತಕ್ಕದ್ದು. ಉದಾಹರಣಾರ್ಥವಾಗಿ ಅರಳೆಯ ಮೇಲೆ ಸುಂಕಾ ಕೂಡ್ರಿಸ ಬೇಕಾದರೆ, ಈ ಸುಂಕವನ್ನು ಅರಳೆಯಿಂದುಂಟಾದ ಸರಕಿನ ಮೇಲೆ ಕೂಡ್ರಿಸ ತಕ್ಕದ್ದೇ ಹೊರತು, ಮೂಲದ್ರವ್ಯವಾದ ಅರಳೆಯ ಮೇಲೆ ಕೂಡ್ರಿಸ ತಕ್ಕದ್ದಲ್ಲ. ಅರಳೆಯು ನೂತು ಬಟ್ಟೆಯಾಗುವ ವರೆಗೆ ಅನೇಕ ವರ್ತಕರ ಕೈಯ್ಯೊಳಗಿಂದ ಹೋಗ ಬೇಕಾಗುವದು. ಅರಳೆಯ ಮೇಲೆ ಸುಂಕವನ್ನು ಕೂಡ್ರಿಸಿದರೆ ಈ ವರ್ತಕರಲ್ಲಿ ಪ್ರತಿಯೊಬ್ಬನು ಆ ಸುಂಕವನ್ನು ತೆರಬೇಕಾಗುವದಲ್ಲದೆ, ತನಗೆ ಅರಳೆಯನ್ನು ಮಾರಿದ ವರ್ತಕನು ಸುಂಕಕ್ಕಾಗಿ ವೆಚ್ಚ ಮಾಡಿದ ಬಂಡವಲದ ಮೇಲಿನ ಬಡ್ಡಿಯನ್ನು ಸಹ ತೆರಬೇಕಾಗುವದು. ಉದಾಹರಣಾರ್ಥವಾಗಿ, 'ಅ' ಎಂಬವನು ತಾನು ತಂದ ಅರಳೆಯ ಮೇಲೆ ಒಂದು ಸಾವಿರ ರೂಪಾಯಿ ಸುಂಕಾ ಕೊಟ್ಟನೆಂದು ಕಲ್ಪಿಸುವ. ಈ 'ಅ'ನು 'ಬ'ನಿಗೆ ತನ್ನ ಅರಳೆಯನ್ನು ಮಾರ ಬೇಕಾದರೆ, ಈ ಸಾವಿರ ರೂಪಾಯಿಗಳ ಮೇಲೆ ವಾಡಿಕೆಯ ದರದಿಂದ ಲಾಭವನ್ನು ತಕ್ಕೊಳ್ಳುವದು ಸ್ವಾಭಾವಿಕವಾಗಿದೆ. ಇವನಿಗೆ ನೂರಕ್ಕೆ ೧೦ರಂತೆ ಲಾಭ ಬರತಕ್ಕದ್ದೆಂದು ತಿಳಿಯುವ. ಆದ್ದರಿಂದ, 'ಬ'ನು ಆ ಅರಳೆಯ ಮೇಲಿನ ಸುಂಕಕ್ಕಾಗಿ ೧,೧೦೦ ರೂಪಾಯಿ ಕೊಡುವನು. ಇದೇ ಮೇರೆಗೆ 'ಬ'ನು 'ಕ'ನೆಂಬ ಮೂರನೆಯವನಿಗೆ ತನ್ನ ಅರಳೆ ಮಾರುವಾಗ, ತನಗೆ ಬಿದ್ದಿರುವ ೧,೧೦೦ ರೂಪಾಯಿಗಳ ಮೇಲೆ ನೂರಕ್ಕೆ ೧೦ರಂತೆ ಲಾಭ ತಕ್ಕೊಳ್ಳುವನು. ಆ ಕಾರಣ, 'ಕ'ನು ಆ ಅರಳೆಗೆ ೧,೨೧೦ ರೂಪಾಯಿ ಕೊಡಬೇಕಾಗುವದು. ಈ ಪ್ರಕಾರ ಈ ಸರಕು ಒಬ್ಬ ವರ್ತಕನಿಂದ ಮತ್ತೊಬ್ಬನ ಕಡೆಗೆ ಹೋದ ಸರತಿಗೊಮ್ಮೆ ಅದರ ಮೇಲಿನ ಸುಂಕವೂ ಚಕ್ರ ಬಡ್ಡಿಯ ದರದಿಂದ ಹೆಚ್ಚುತ್ತಾ ಹೋಗುವದು. ಕಟ್ಟಕಡೆಗೆ ಈ ಹೆಚ್ಚಾದ ಸುಂಕದ ಭಾರವೆಲ್ಲ ನೂತ ಬಟ್ಟೆಯನ್ನು ಕೊಳ್ಳುವವನ ತಲೆಯ ಮೇಲೆ ಬೀಳುವದು. ಇವನ ತನಕ ಆ ಸರಕು ಬಂದು ಮುಟ್ಟಿದನಂತರ, ಇವನು ಸುಂಕದ ಮೂಲಕವಾಗಿ ಕೊಡಬೇಕಾಗುವ ಹೆಚ್ಚು ಕ್ರಯವು ಸರಕಾರಕ್ಕೆ ಮುಟ್ಟಿದ ಸುಂಕದ ಇಮ್ಮಡಿಯಾದರೂ ಆಗ ಬಹುದು. ಆದಕಾರಣ, ಅಡಾಮ್ ಸ್ಮಿಥನ ನಾಲ್ಕನೆ ನಿಯಮಕ್ಕೆ ಸರಿಯಾಗಿ

---

ತ್ಪನ್ನವಾಗುವದು. ಆದರೆ ಸರಕಾರದ ಕಂದಾಯಕ್ಕೆ ಸಲ್ಲುವ ೨ ಪೌಂಡು, ೧೦ ಶಿಲಿಂಗುಗಳಿಗಾಗಿ ಮದ್ಯವನ್ನು ಕೊಳ್ಳುವವನ ಕಿಶೆಯೊಳಗಿಂದ ೫೦ ಪೌಂಡುಗಳು ಹೋಗುವವು. ಈ ಪ್ರಕಾರ, ಸರಕಾರದ ಕಂದಾಯಕ್ಕೆ ಸೇರುವಂಥ ರಕಮಿಗಿಂತಲೂ, ೪೭ ಪೌಂಡು ೧೦ ಶಿಲಿಂಗು ಹೆಚ್ಚು ಕರವನ್ನು ಮದ್ಯವನ್ನು ಕೊಳ್ಳುವವರು ತೆರಬೇಕಾಗುವದು.

ಪಾರ್ತಿಸ ಬೇಕಾದರೆ, ಸಾಧ್ಯವಾದ ಮಟ್ಟಿಗೆ ಸರಕುಗಳು ಕಟ್ಟಕಡೆಗೆ ಉಪಯೋಗಕ್ಕಾಗಿ ಕೊಳ್ಳಲ್ಪಡುವ ಕಾಲಕ್ಕೆ, ಇಲ್ಲವೆ ಆ ಕಾಲದ ಸುಮಾರಕ್ಕೆ ಅವುಗಳ ಮೇಲಿ ಕರವನ್ನು ತಕ್ಕೊಳ್ಳಬೇಕು. ಯಾಕಂದರೆ, ಕರದ ಒಜ್ಜೆಯು ನಿಜವಾಗಿ ಬೀಳುವದು ಸರಕುಗಳನ್ನು ಉಪಯೋಗಿಸುವವರ ಮೇಲೆಯೇ. ಮೂಲದ್ರವ್ಯಗಳಿಂದ ಸರಕುಗಳು ಸಿದ್ಧವಾಗುವ ವರೆಗೆ ಕ್ರಯವಿಕ್ರಯಗಳನ್ನು ಮಾಡಿದ ಅಸಂಖ್ಯ ವರ್ತಕರು ಕರಕ್ಕೋಸ್ಕರ ವೆಚ್ಚ ಮಾಡ ಬೇಕಾದ ಹೆಚ್ಚಿನ ಬಂಡವಲದ ಮೇಲಿನ ಬಡ್ಡಿಯನ್ನು ಸರಕುಗಳನ್ನು ಉಪಯೋಗಿಸುವವರು ತೆರಬೇಕಾಗುವದು ಬಹಳ ಅನ್ಯಾಯವು. ಇಂಗ್ಲಂಡದಲ್ಲಿ ಸನ್ ೧೮೮೦ನೇ ಇಸವಿಯ ಪಾರ್ಲಮೆಂಟಿನ ಬಜೇಟಿನಲ್ಲಿ ಗ್ಲ್ಯಾಡಸ್ಟನ್ ಧೊರೆಯು ಜವೆಗೋಧಿಯ ಮೇಲಣ ಕರವನ್ನು ನಿಲ್ಲಿಸಿ, ಜವೆಗೋಧಿಯಿಂದ ಆಗುವ ಮದ್ಯದ ಮೇಲೆ ಕರ ಕೂಡ್ರಿಸ ಬೇಕೆಂದು ಹಾಕಿದ ಕಲಮು ಅಡಾಮ್‌ಸ್ಮಿಥನ ನಾಲ್ಕನೆ ನಿಯಮಕ್ಕೆ ಸರಿಯಾಗಿತ್ತು.

ಸರಕುಗಳ ಮೇಲೆ ಪ್ರತ್ಯಕ್ಷ ಕರವನ್ನು ಕೂಡ್ರಿಸುವದು ಅಸಾಧ್ಯವು.— ಸರಕುಗಳನ್ನು ಮಾರುವ ಅಂಗಡಿಗಳಲ್ಲಿಯೇ ಅವುಗಳ ಮೇಲಿನ ಕರ ತಕ್ಕೊಂಡರೆ, ಅದರಿಂದ ಸರಕುಗಳನ್ನು ಉಪಯೋಗಿಸುವವರಿಗೆ ಹಿತವಾಗುವದೆಂದು ಕೆಲವರು ತಿಳಿಯುವರು. ಉದಾಹರಣಾರ್ಥವಾಗಿ, ಒಬ್ಬ ಹೆಂಗಸು ಒಂದು ಶೇರು ಉಪ್ಪು ತರುವದಕ್ಕೆ ಅಂಗಡಿಗೆ ಹೋದಾಗ, ಅಂಗಡಿಕಾರನು ಆಕೆಗೆ ಒಂದು ಶೇರು ಉಪ್ಪಿನ ಕ್ರಯ ಐದು ಆಣೆ, ಅದರ ಮೇಲಿನ ಕರ ಅರ್ಧ ಆಣೆ, ಎಂದು ಹೇಳ ಬೇಕು. ಆದರೆ ಅಡಾಮ್‌ಸ್ಮಿಥನ ನಾಲ್ಕನೆ ನಿಯಮವನ್ನು ಕೊನೆಗಾಣಿಸುವದಕ್ಕೋಸ್ಕರ ಈ ಉಪಾಯವನ್ನು ಯೋಜಿಸಿದರೆ, ಅದರಿಂದ ಅಡಾಮ್‌ಸ್ಮಿಥನ ನಿಯಮವನ್ನು ಈಗಿನದಕ್ಕಿಂತಲೂ ಮತ್ತಿಷ್ಟು ಮುರಿದಂತೆ ಆಗುವದು. ಅಂಗಡಿಕಾರರ ಲೆಕ್ಕಗಳನ್ನು ಯಾವಾಗಲೂ ಜಾಗ್ರತೆಯಿಂದ ತನಖಿ ಮಾಡುವದಕ್ಕೂ, ಅಂಗಡಿಕಾರರು ತಾವು ಕೊಡ ತಕ್ಕಷ್ಟು ಕರವನ್ನು ಸರಕಾರಕ್ಕೆ ಕೊಟ್ಟರೋ, ಇಲ್ಲವೋ, ಎಂಬುವದನ್ನು ನಿಶ್ಚೈಸುವದಕ್ಕೂ, ಸರಕಾರದವರು ಅಧಿಕಾರಿಗಳ ದಂಡುಗಳನ್ನು ಇಡ ಬೇಕಾಗುವದು. ಮತ್ತು ವಸೂಲಾದ ಕರವೆಲ್ಲ, ಈ ದಂಡಿನ ಸಂಬಳಕ್ಕೆ ಹೋಗುವದು. ಒಂದು ವೇಳೆ ಇವರ ಸಂಬಳಕ್ಕಾಗಿ ಸರಕಾರದವರು ಕೆಲ ಹಣವನ್ನು ಕೈಯ್ಯಿಂದಲೂ ಹಾಕ ಬೇಕಾಗುವದು. ಇಷ್ಟು ವೆಚ್ಚ ಮಾಡಿದಾಗ್ಯೂ, ಕೆಲವು ಅಂಗಡಿಕಾರರು ಕರ ಕೊಡುವದನ್ನು ತಪ್ಪಿಸದೇ ಇರರು. ಬಹಳ ವೆಚ್ಚವಾಗದೆ ಮಿತವ್ಯಯದಿಂದ ಕರ ಬರ ಬೇಕಾದರೆ, ಸರಕನ್ನು ಸಾವಿರಾರು ಕಿರುಕುಳ ವರ್ತಕರು ಕೊಂಡನಂತರ ಅದರ ಮೇಲಿನ ಕರ ವಸೂಲು ಮಾಡ ಬಾರದು. ಶೋಕ ವ್ಯಾ

ಪಾದ ಮಾಡುವ ವ್ಯಾಪಾರಸ್ಥನ ವಖಾರಿನಲ್ಲಿ ಸರಕು ತುಂಬಿರುವಾಗಲೇ ಅದರ ಮೇಲೆ ಕರವನ್ನು ವಸೂಲು ಮಾಡ ಬೇಕು. ಇದರಿಂದ ಕರವನ್ನು ತಪ್ಪಿಸಿಕೊಳ್ಳುವ ಮಾರ್ಗಗಳು ಎಷ್ಟೋ ಕಡಿಮೆಯಾಗುವವು.

**ಕರ ಎತ್ತುವ ಖರ್ಚನ್ನು ಆದಷ್ಟು ಕಡಿಮೆ ಮಾಡ ತಕ್ಕದ್ದು.**— ಕೆಲವು ಕರಗಳನ್ನು ಎತ್ತುವಲ್ಲಿ ಈಗ್ಯೆ ಆಗುವ ಖರ್ಚು ಕಡಿಮೆಯಾಗುವ ಯತ್ನಗಳನ್ನು ಚನ್ನಾಗಿ ನಡಿಸಿದರೆ, ಈ ಖರ್ಚು ಕಡಿಮೆಯಾಗುವ ಹಾಗೆ ಉಂಟು. ಉದಾಹರಣಾರ್ಥವಾಗಿ, ಇಂಗ್ಲಂಡದಲ್ಲಿ ಒಂದು ಸಮಾಜದವರು ಒಂದು ಪತ್ರಿಕೆಯನ್ನು ಪ್ರಸಿದ್ಧ ಮಾಡಿರುವರು. ಈ ಪತ್ರಿಕೆಯಲ್ಲಿ ಸನ್ ೧೮೬೮ನೇ ವರುಷದಲ್ಲಿ ವಸೂಲಾದ ಕಷ್ಟಮ್ ಖಾತೆಯ ಒಟ್ಟು ಕಂದಾಯ, ಈ ಕಂದಾಯ ಎತ್ತುವ ಖರ್ಚು, ಕಂದಾಯದ ಐನು ಉತ್ಪನ್ನ, ಇವುಗಳನ್ನೂ ಪ್ರತಿಯೊಂದು ಕಷ್ಟಮ್ ಕಚೇರಿಯ ಒಟ್ಟು ಉತ್ಪನ್ನ, ಖರ್ಚು, ಐನ ಉತ್ಪನ್ನಗಳನ್ನೂ ತೋರಿಸಿದ್ದಾರೆ. ಈ ಪತ್ರಿಕೆಯ ಮೇಲಿಂದ ತಿಳಿಯುವದೇನಂದರೆ, ಸರಕಾರಕ್ಕೆ ಒಟ್ಟಿಗೆ ಕಷ್ಟಮ್ ಖಾತೆಯಿಂದ ಬಹಳ ಉತ್ಪನ್ನವಾಗುತ್ತಾ ಇದ್ದಾಗ್ಯೂ, "೧೩೨ ಕಷ್ಟಮ್ ಕಚೇರಿಗಳಲ್ಲಿ ೬೬ ಕಷ್ಟಮ್ ಕಚೇರಿಗಳಿಂದ, ಅಂದರೆ ಒಟ್ಟು ಕಷ್ಟಮ್ ಕಚೇರಿಗಳಲ್ಲಿ ಅರ್ಧ ಕಚೇರಿಗಳಿಂದ ದೇಶಕ್ಕೆ ಲುಕಸಾನು ಆಗುತ್ತಿರುವದು." "ಇದರ ಹೊರ್ತು, ಸರಕಾರದವರಿಗೆ ಬೀಳುವ ಅವಾಂತರ ಖರ್ಚಿನ ಲೆಕ್ಕ ಮಾಡಿದರೆ, ೧೩೨ ಕಷ್ಟಮ್ ಕಚೇರಿಗಳಲ್ಲಿ ೧೦೦ಕ್ಕಿಂತ ಹೆಚ್ಚು ಕಚೇರಿಗಳು ದೇಶಕ್ಕೆ ಲುಕಸಾನವಾಗುವಂಥವಾಗಿರುವವು." ದೇಶಕ್ಕೆ ಲುಕಸಾನವನ್ನುಂಟು ಮಾಡುವ ಕಷ್ಟಮ್ ಕಚೇರಿಗಳ ಪಟ್ಟಿಯನ್ನು ನೋಡಲಾಗಿ, ಅಡಾಮ್‌ಸ್ಮಿಥನ ನಾಲ್ಕನೆ ನಿಯಮಕ್ಕೆ ವಿರುದ್ಧವಾದಂಥ ಎಷ್ಟೋ ವಿಲಕ್ಷಣವಾದ ಉದಾಹರಣಗಳು ದೃಷ್ಟಿಗೆ ಬೀಳುವವು. ಅವುಗಳಲ್ಲಿ ಕೆಲವುಗಳನ್ನು ಇಲ್ಲಿ ಬರೆಯುತ್ತೇವೆ: —

| ಊರ ಹೆಸರು | ಕರ ಎತ್ತುವ ಒಟ್ಟು ಖರ್ಚು | ಸನ್ ೧೮೬೮ನೇ ವರ್ಷದ ಕಂದಾಯ | ದೇಶಕ್ಕೆ ಉಂಟಾದ ಲುಕಸಾನು |
|---|---|---|---|
| ಅಬೆರಿಸ್ಟ ಉಯಿಥ್ . . | ೧೯೧೩ ಪೌಂಡು | ೭೩ ಪೌಂಡು | ೧೮೪೦ ಪೌಂಡು |
| ಬಾರೊಸ್ಟೋನೆಸ್ . . . | ೧೫೮೬ ,, | ೪೦೧ ,, | ೧೧೮೫ ,, |
| ಕರ್ಕವಾಲ್ . . . . | ೨೦೭೬ ,, | ೦ ,, | ೨೦೭೬ ,, |
| ಲರವಿಕ್ . . . . . | ೧೩೭೬ ,, | ೦ ,, | ೧೩೭೬ ,, |
| ಮಿಲ್‌ಫರ್ಡ . . . . | ೩೩೧೩ ,, | ೧೪೭ ,, | ೩೧೬೬ ,, |
| ರಾಯ್ . . . . . | ೧೨೩೬ ,, | ೫ ,, | ೧೨೩೧ ,, |
| ಸಿಲೀ . . . . . . | ೧೧೪೩ ,, | ೧ ,, | ೧೧೪೨ ,, |

ಕರಪತನವು ಅಥವಾ ಕರದ ಭಾರವು. ಪ್ರತ್ಯಕ್ಷ ಕರಗಳೂ, ಪರೋಕ್ಷ ಕರಗಳೂ.—ಪ್ರಾಪ್ತಿಯ ಮೇಲಿನ ಕರ, ಭೂಮಿಯ ಮೇಲಿನ ತೀರ್ವೆ, ಇವು ಮೊದಲಾದ ವಿಶೇಷ ಪ್ರಕಾರದ ಕರಗಳ ಸ್ವರೂಪವನ್ನು ವಿವರಿಸುವ ಪೂರ್ವದಲ್ಲಿ, ಕರಪತನ, ಅಂದರೆ ಕರದ ಭಾರವೆಂದರೇನೆಂಬುವದನ್ನೂ, ಪ್ರತ್ಯಕ್ಷ ಕರಗಳಿಗೂ ಪರೋಕ್ಷ ಕರಗಳಿಗೂ ಇರುವ ವ್ಯತ್ಯಾಸವನ್ನೂ ಹೇಳುವದು ಉಚಿತವಾಗಿದೆ. “ಯಾವ ಜನರು ಕರ ಕೊಡಬೇಕೆಂಬ ಉದ್ದೇಶವಾಗಲಿ ಅಪೇಕ್ಷೆಯಾಗಲಿ ಇರುವದೋ, ಆ ಜನರ ಕಡೆಗೇ ಬೇಡಲ್ಪಡುವ ಕರವು ಪ್ರತ್ಯಕ್ಷ ಕರವೆನಿಸುವದು. ಒಬ್ಬನಿಂದ ಕರ ತಕ್ಕೊಂಡರೆ ಅವನು ತಾನು ಕೊಟ್ಟ ಕರವನ್ನು ಬೇರೆಯವರಿಂದ ತಕ್ಕೊಳ್ಳುವನು ಎಂದು ತಿಳಿದು, ಹಾಗೂ ಅವನು ಆ ಪ್ರಕಾರ ತಕ್ಕೊಳ್ಳಬೇಕೆಂಬ ಉದ್ದೇಶದಿಂದ, ಅವನಿಂದ ತಕ್ಕೊಳ್ಳಲ್ಪಡುವ ಕರವು ಪರೋಕ್ಷ ಕರವೆನಿಸುವದು. ಸ್ಥಾನಿಕ ಸರಕುಗಳ ಮೇಲಿನ ಸುಂಕ, ಆಮದರಫ್ತಗಳ ಮೇಲಿನ ಸುಂಕ ಮೊದಲಾದವುಗಳು ಈ ಬಗೆಯ ಕರಗಳು” (ಮಿಲ್‌ಧೊರೆಯ ಅರ್ಥಶಾಸ್ತ್ರದ ತತ್ವಗಳು. ೫ನೇ ಭಾಗ, ಪುಟ ೪೦೪). ಕರವು ನಿಜವಾಗಿ ಯಾವನ ಕಿಶೆಯೊಳಗಿಂದ ಬರುತ್ತದೋ, ಆತನ ತಲೆಯ ಮೇಲೇ ಆ ಕರದ ಭಾರವು ಬೀಳುವದು. ಉದಾಹರಣಾರ್ಥವಾಗಿ, ಸರಕುಗಳ ಮೇಲಿನ ಕರಗಳ ಭಾರವನ್ನು ಆ ಸರಕುಗಳನ್ನು ಉಪಯೋಗಿಸುವವರು ಸಹಿಸುವರು. ಯಾಕಂದರೆ, ಅವುಗಳ ಮೇಲಿನ ಕರಗಳನ್ನು ಮೊದಲು ಆ ಸರಕುಗಳನ್ನು ತಂದವರಾಗಲಿ, ಉತ್ಪನ್ನ ಮಾಡಿದವರಾಗಲಿ ಕೊಟ್ಟಾಗ್ಯೂ, ಅವರು ತಾವು ಕೊಟ್ಟ ಕರದಷ್ಟು, ಸರಕುಗಳ ಧಾರಣೆಯನ್ನು ಏರಿಸುವರು. ಆದಕಾರಣ, ಕಟ್ಟಕಡೆಗೆ ಈ ಕರವನ್ನು ಸರಕುಗಳನ್ನು ಉಪಯೋಗಿಸುವವರೇ ತೆರುವರು. ಈ ಪ್ರಕಾರ ಇಂಗ್ಲಂಡದಲ್ಲಿ ಬೇಸಾಯದ ಭೂಮಿಯ ಮೇಲೆ ಕೂಡ್ರಿಸಿದ ದರಿದ್ರಸಂರಕ್ಷಕ ಕರದ ಭಾರವೆಲ್ಲ ಭೂಮಿಯ ಒಡೆಯರ ಮೇಲೆ ಬೀಳುವದು. ಯಾಕಂದರೆ, ಈ ಕರವನ್ನು ಹೊಲ ಮಾಡುವ ಒಕ್ಕಲುಗಳ ಕಡೆಯಿಂದ ವಸೂಲು ಮಾಡಿದಾಗ್ಯೂ, ಈ ಒಕ್ಕಲುಗಳು ಒಡೆಯರಿಗೆ ಆ ಕರದಷ್ಟು ಕಡಿಮೆ ಗೇಣಿಯನ್ನು ಕೊಡುವರು. ಹಾಗೂ ಈ ಕರವನ್ನು ಭೂಮಿಯ ಒಡೆಯರ್ಧೇ ಕೊಟ್ಟಿದ್ದಾದರೆ, ಒಕ್ಕಲುಗಳು ಅಷ್ಟು ಹೆಚ್ಚು ಗೇಣಿಯನ್ನು ಕೊಡುವರು. ಈ ಪ್ರಕಾರ ಈ ದರಿದ್ರಸಂರಕ್ಷಕ ಕರವನ್ನು ಒಕ್ಕಲುಗಳೇ ಕೊಡುತ್ತಾರಾದರೂ, ಕಡೆಗೆ ಈ ಕರವು ಒಡೆಯರ ಕೈಯ್ಯಿಂದಲೇ ಬೀಳುವದು. ನಾಯಿಗಳ ಮೇಲಿನ ಕರ, ಗಾಡಿಗಳು, ಚಾಕರರು ಮೊದಲಾದವರ ಮೇಲಿನ ಕರ, ಹಾಗೂ ಬಹುತರ ಯಾವತ್ತು ಪ್ರಸಕ್ತಿಗಳಲ್ಲಿ ಪ್ರಾಪ್ತಿಯ ಮೇಲಿನ ಕರ, ಇವೇ

ಷೊದಲಾದ ಕರಗಳ ಭಾರವು ಆ ಕರಗಳನ್ನು ಮೊದಲಿಗೆ ಕೊಡುವವರ ಮೇಲೆ ಬೀಳುವದು. ಇಂಥ ಕರಗಳು ಪ್ರತ್ಯಕ್ಷ ಕರಗಳು. ಯಾವದೊಂದು ಕರವು ಒಬ್ಬನಿಂದ ವಸೂಲು ಮಾಡಲ್ಪಟ್ಟು, ಅದರ ಭಾರವು ಬೇರೊಬ್ಬನ ಮೇಲೆ ಬಿದ್ದರೆ, ಆ ಕರವು ಪರೋಕ್ಷ ಕರವೆಂದು ಹೇಳ ತಕ್ಕದ್ದು. ಪ್ರತ್ಯಕ್ಷ ಕರದ ಭಾರವು, ಆ ಕರವು ಮೊದಲಿಗೆ ಯಾರಿಂದ ತಕ್ಕೊಳ್ಳಲ್ಪಡುವದೋ ಅವರ ಮೇಲೇ ಬೀಳುವದು. ಆದಕಾರಣ, ಸರಕುಗಳ ಮೇಲೆ ಕೂಡ್ರಿಸಿದ ಕರಗಳು ಪರೋಕ್ಷ ಕರಗಳಾಗಿರುವವು; ವ್ಯಕ್ತಿಗಳ ಮೇಲೆ ಕಟ್ಟಿದ ಕರಗಳೂ, ವಾಡಿಕೆಯಾಗಿ ಪ್ರಾಪ್ತಿಯ ಮೇಲಿನ ಕರವೂ ಪ್ರತ್ಯಕ್ಷ ಕರಗಳಾಗಿರುವವು.

**ಪ್ರಾಪ್ತಿಯ ಮೇಲಿನ ಕರ.**—ವರ್ಷಕ್ಕೆ ಇಂತಿಷ್ಟು ಪ್ರಾಪ್ತಿಗಿಂತ ಹೆಚ್ಚು ಪ್ರಾಪ್ತಿಯುಳ್ಳವರು ರೂಪಾಯಿಗೆ ಇಂತಿಷ್ಟರಂತೆ ಕೊಡಬೇಕೆಂದು ಕಟ್ಟಿದ ಕರವು ಪ್ರಾಪ್ತಿಯ ಮೇಲಿನ ಕರವಾಗಿರುವದು. ಇಂಗ್ಲಂಡದಲ್ಲಿ ವರ್ಷಕ್ಕೆ ೧೫೦ ಪೌಂಡುಗಳಿಗಿಂತಲೂ ಹೆಚ್ಚು ಪ್ರಾಪ್ತಿಯುಳ್ಳವರು ಪ್ರಾಪ್ತಿಯ ಮೇಲಿನ ಕರವನ್ನು ಕೊಡಬೇಕಾಗುತ್ತದೆ. ಈ ಪ್ರಕಾರ, ಪ್ರಾಪ್ತಿಯ ಮೇಲಿನ ಕರವು ಪೌಂಡಿಗೆ ೬ ಪೇನಿನಂತೆ ಇದ್ದರೆ, ವರ್ಷಕ್ಕೆ ೧,೦೦೦ ಪೌಂಡು ಪ್ರಾಪ್ತಿಯುಳ್ಳವನು ಸರಕಾರಕ್ಕೆ ಒಂದು ಸಾವಿರ ಆರು ಪೇನ್ಸಗಳನ್ನು, ಅಂದರೆ ೨೫ ಪೌಂಡುಗಳನ್ನು ಪ್ರಾಪ್ತಿಯ ಮೇಲಿನ ಕರವಾಗಿ ಕೊಡುವನು. ಇಂಗ್ಲಂಡದಲ್ಲಿ ಈ ಕರವನ್ನು ಮೊದಲಿಗೆ ಕೂಡ್ರಿಸಿದಾಗ, ಈ ಕರವು ಹಂಗಾಮಿ ಎಂದು ಕೂಡ್ರಿಸಲ್ಪಟ್ಟಿತು. ಹಾಗೂ ಆಗ ಈ ಕರವು ಬೇಗನೇ ನಿಲ್ಲಿಸಲ್ಪಡುವದೆಂತ ಜನರಾದರೂ ತುಂಬಾ ನಂಬಿಕೊಂಡಿದ್ದರು. ಆದರೆ ಈ ಕರವು ಆಗಿಂದಾಗ್ಯೆ ಹೆಚ್ಚುಕಡಿಮೆಯಾದರೂ ಇದು ವರೆಗೆ ಪೂರಾ ಎಂದೂ ತೆಗಿಯಲ್ಪಟ್ಟಿಲ್ಲ. ಸನ್ ೧೮೭೪ನೇ ಇಸವಿಯಲ್ಲಿ ಇಂಗ್ಲಂಡದಲ್ಲಿ ಪಾರ್ಲಮೆಂಟಿಗೆ ಕಳುಹಿಸ ತಕ್ಕ ಹೊಸ ಸಭಾಸದರನ್ನು ಆರಿಸುವ ಕಾಲಕ್ಕೆ, ಪಾರ್ಲಮೆಂಟಿನ ಎರಡು ಪ್ರಸಿದ್ಧ ಬಣಗಳಲ್ಲಿ ಒಂದು ಬಣದ ಪ್ರಖ್ಯಾತನಾದ ಅಗ್ರೇಸರನು ಈ ಕರವನ್ನು ನಿಲ್ಲಿಸ ಬೇಕೆಂಬ ಪಕ್ಷವನ್ನು ಬಹಳವಾಗಿ ಪ್ರತಿಪಾದಿಸಿದನು. ಆಗ ಬಂದ ಅನುಭವದ ಮೇಲಿಂದ ನೋಡಲಾಗಿ, ಇಂಗ್ಲಂಡದಲ್ಲಿ ಈ ಕರವನ್ನು ನಿಲ್ಲಿಸ ಬೇಕೆಂಬ ಅಪೇಕ್ಷೆಯು ಸಾರ್ವತ್ರಿಕವಾಗಿದ್ದಂತೆ ತೋರುವದಿಲ್ಲ. ಹಿಂದುಸ್ತಾನದಲ್ಲಿಯಾದರೂ ಈ ಕರವು ಕೆಲವು ಕಾಲ ಮಾತ್ರ ವಸೂಲು ಮಾಡಲ್ಪಡುವದೆಂದು ಸನ್ ೧೮೮೬ನೇ ವರ್ಷದ ಮಾರ್ಚ ತಿಂಗಳಿನಲ್ಲಿ ಕೂಡ್ರಿಸಲ್ಪಟ್ಟಿತು. ಇಲ್ಲಿ ವರ್ಷಕ್ಕೆ ೫೦೦ ರೂಪಾಯಿಗಳಿಗಿಂತಲೂ ಕಡಿಮೆ ಪ್ರಾಪ್ತಿಯುಳ್ಳವರಿಗೆ ಈ ಕರವಿಲ್ಲ. ೫೦೦ ರೂಪಾಯಿಯಿಂದ ೨,೦೦೦ ರೂಪಾಯಿಗಳ

ವಣಿಗೆ ಪ್ರಾಪ್ತಿಯುಳ್ಳವರು ರೂಪಾಯಿಗೆ ೪ ಪೈಯಂತೆ ಕರ ಕೊಡ ಬೇಕಾಗು ವದು. ೨,೦೦೦ ರೂಪಾಯಿಗಿಂತ ಹೆಚ್ಚು ಪ್ರಾಪ್ತಿಯುಳ್ಳವರು ರೂಪಾಯಿಗೆ ೫ ಪೈಯಂತೆ ಕರ ಕೊಡುವರು. ಈ ಕರವು ಎಂದು ನಿಲ್ಲಿಸಲ್ಪಡುವದೆಂಬದನ್ನು ಈಗ್ಯೆ ಹೇಳಲಿಕ್ಕೆ ಬರುವ ಹಾಗಿಲ್ಲ. ಪ್ರಾಪ್ತಿಯ ಮೇಲಿನ ಕರದ ಯುಕ್ತಾಯು ಕ್ತತೆಗಳನ್ನು ಅರ್ಥಶಾಸ್ತ್ರದ ದೃಷ್ಟಿಯಿಂದ ನಿರ್ಣೈಸ ಬೇಕಾದರೆ, ಈ ಕರವು ಕಾಹೀ ಮವಾಗಿ, ಇಲ್ಲವೆ ಹಂಗಾಮಿಯಾಗಿ ಇದ್ದದ್ದು ತಿಳಿಯುವದು ಅತ್ಯವಶ್ಯವು. ಹಂ ಗಾಮಿಯಾದ ಪ್ರಾಪ್ತಿಗಳ ಮೇಲೂ, ಕಾಹೀಮವಾದ ಪ್ರಾಪ್ತಿಗಳ ಮೇಲೂ, ಈ ಕರವನ್ನು ಸಮನಾಗಿ ಕೂಡ್ರಿಸ ತಕ್ಕದ್ದೋ, ಅಥವಾ ಹೆಚ್ಚುಕಡಿಮೆ ಕೂಡ್ರಿಸ ತಕ್ಕದ್ದೋ, ಎಂಬ ವಿಷಯದಲ್ಲಿ ಇತ್ತಲಾಗಿ ಬಹಳ ಚರ್ಚೆ ನಡಿದಿರುವದು. ಪ್ರಾಪ್ತಿಯ ಮೇಲಿನ ಕರವು ಕಾಹೀಮವಾಗಿ ಹಾಗೂ ನಿಯಮಿತ ರಕಮುಳ್ಳ ದ್ದಾಗಿ ಇಲ್ಲವೆ ಹಂಗಾಮಿ ಹಾಗೂ ಆಗಾಗ್ಯೆ ಹೆಚ್ಚುಕಡಿಮೆಯಾಗುವಂಥಾ ದ್ದಾಗಿ ಇದ್ದ ಮೇರೆಗೆ ಈ ಪ್ರಶ್ನದ ನಿರ್ಣಯವಾಗ ತಕ್ಕದ್ದಾಗಿದೆ. ಈ ಕರವು ಕಾಹೀಮವಾಗಿಯೂ ನಿಯಮಿತ ರಕಮುಳ್ಳದ್ದಾಗಿಯೂ ಕೂಡ್ರಿಸಲ್ಪಟ್ಟಿದ್ದರೆ, ಹಂಗಾಮಿ ಪ್ರಾಪ್ತಿಗಳೇ ಆಗಲಿ, ಕಾಹೀಮವಾದ ಪ್ರಾಪ್ತಿಗಳೇ ಆಗಲಿ, ಎಲ್ಲ ಪ್ರಾಪ್ತಿಗಳ ಮೇಲೆ ಈ ಕರವನ್ನು ಸಮನಾಗಿಯೇ ಕಟ್ಟ ತಕ್ಕದ್ದು. ಈ ಕರವು ಕೆಲ ಕಾಲ ಮಾತ್ರ ಕೂಡ್ರಿಸಲ್ಪಟ್ಟು, ಅನಂತರ ತೆಗಿಯಲ್ಪಡ ತಕ್ಕದಿದ್ದರೆ, ಕಾಹೀಮವಾದ ಪ್ರಾಪ್ತಿಗಳಿಗಿಂತಲೂ, ಹಂಗಾಮಿ ಪ್ರಾಪ್ತಿಗಳ ಮೇಲೆ ಕಡಿಮೆ ದರದಿಂದ ಕರ ಕಟ್ಟ ತಕ್ಕದ್ದು. ಪ್ರಾಪ್ತಿಯ ಮೇಲಿನ ಕರವು ಕಾಹೀಮವಾಗಿಯೂ ನಿಯಮಿತ ರಕಮುಳ್ಳದ್ದಾಗಿಯೂ ಇರುವಂಥ ಮೊದಲನೆ ಬಗೆಯದೊಂದು ಉದಾಹರಣವನ್ನು ತಕ್ಕೊಳ್ಳುವ. 'ಅ'ನೆಂಬವನೊಬ್ಬ ಗೃಹಸ್ಥನಿಗೆ ೧೦,೦೦೦ರೂ ಪಾಯಿಯ ಭೂಮಿಯ ಉತ್ಪನ್ನವುಂಟು. 'ಬ'ನೆಂಬ ಮತ್ತೊಬ್ಬ ಗೃಹಸ್ಥನು ವೈದ್ಯನಾಗಿದ್ದಾನೆ. ಇವನ ಉದ್ಯೋಗದಿಂದ ಇವನಿಗೂ ವರ್ಷಕ್ಕೆ ೧೦,೦೦೦ರೂ ಪಾಯಿ ಪ್ರಾಪ್ತಿಯುಂಟು. ಈ ಪ್ರಸಕ್ತಿಯಲ್ಲಿ 'ಬ'ನ ಹಂಗಾಮಿ ಉತ್ಪನ್ನದ ಮೇಲೆ, 'ಅ'ನ ಕಾಹೀಮವಾದ ಉತ್ಪನ್ನದ ಮೇಲೆ ಕಟ್ಟಿದಂತೆಯೇ ಕರ ಕಟ್ಟು ವದು ಬಹಳ ಅನ್ಯಾಯವೆಂದು ಕೆಲವರು ಪ್ರತಿಪಾದಿಸುವದುಂಟು. ಈ ಪಕ್ಷದ ವರು ಸಾಧಿಸುವದೇನಂದರೆ, 'ಬ'ನ ಉತ್ಪನ್ನವು ಕೇವಲ ಅವನ ಸ್ವಂತ ಪರಿಶ್ರಮ ದಿಂದ ಉಂಟಾಗುವಂಥಾದ್ದು; ಹಾಗೂ, ಅವನು ಮೃತಪಟ್ಟ ಕೂಡಲೆ ಈ ಉತ್ಪ ನ್ನವು ನಿಂತು ಹೋಗುವದು. ಆದರೆ, ಇವೆರಡೂ ಬಗೆಯ ಪ್ರಾಪ್ತಿಗಳ ಮೇಲೂ ಂದೇ ದರದಿಂದ ಕರ ಕೂಡ್ರಿಸ ಬೇಕೆಂಬುವದಕ್ಕೆ ಯೋಗ್ಯ ಕಾರಣವು ಈ

ಪ್ರತಿಪಾದನದಿಂದಲೇ ವ್ಯಕ್ತವಾಗುತ್ತದೆ. ಹ್ಯಾಗಂದರೆ, ಪ್ರಾಪ್ತಿಯ ಮೇಲಿನ ಕರವೂ ಕರದ ರಕಮೂ ಕಾಹೀಮವಾಗಿವೆಂದು ಗ್ರಹಿಸಲ್ಪಟ್ಟಿರುವ ಕಾರಣ, 'ಅ'ನಿಗೆ ಭೂಮಿಯಿಂದ ಆಗುವ ಕಾಹೀಮವಾದ ಪ್ರಾಪ್ತಿಯ ಮೇಲೆ ಕಡೆತನಕ ಕಾಹೀಮವಾಗಿಯೇ ಕರ ಕೊಡ್ರುವದು. 'ಬ'ನ ಪ್ರಾಪ್ತಿಯು ಹಂಗಾಮಿಯಾಗಿ ರುವದೆಂಬುವದು ನಿಜ. ಆದರೆ ಈ ಪ್ರಾಪ್ತಿಯು ನಿಂತು ಹೋದ ಕೂಡಲೆ ಅದರ ಮೇಲಿನ ಕರವೂ ನಿಂತು ಹೋಗುತ್ತದೆ. 'ಬ'ನು ಮೃತಪಟ್ಟನಂತರ ಸಹ ಅವನ ಪ್ರಾಪ್ತಿಯ ಮೇಲೆ ಕರ ಕಟ್ಟುವರೋ? ಈ ವಿಷಯವು ಮತ್ತಿಷ್ಟು ವಿಶದವಾಗಿ ತಿಳಿಯುವದಕ್ಕೋಸ್ಕರ ಮತ್ತೊಂದು ಉದಾಹರಣವನ್ನು ತಕ್ಕೊಳ್ಳೋಣ. ಒಬ್ಬೊಬ್ಬನಿಗೆ ೨೦,೦೦೦ ರೂಪಾಯಿಯಂತೆ ಮೂರು ಮಂದಿಗೆ ಪಿತ್ರಾರ್ಜಿತ ಆಸ್ತಿಯ ಪಾಲು ಬಂತೆಂದು ತಿಳಿಯುವ. 'ಅ'ನು ತನ್ನ ೨೦,೦೦೦ ರೂಪಾಯಿಗಳನ್ನು ಕೊಟ್ಟು ವರ್ಷಕ್ಕೆ ೫೦೦ ರೂಪಾಯಿ ಪ್ರಾಪ್ತಿಯ ಭೂಮಿಯನ್ನು ಸಂಪಾದಿಸುತ್ತಾನೆ. 'ಬ'ನು ತನ್ನ ೨೦,೦೦೦ ರೂಪಾಯಿಗಳನ್ನು ಒಂದು ವಿಮೆ ತಕ್ಕೊಳ್ಳುವ ಕಂಪನಿಗೆ ಕೊಟ್ಟು, ತನ್ನ ಜೀವಮಾನವಿರುವ ವರೆಗೆ ವರ್ಷಕ್ಕೆ ೧,೫೦೦ ರೂಪಾಯಿಯ ವರ್ಷಾಶನವನ್ನು ಮಾಡಿಕೊಳ್ಳುತ್ತಾನೆ. 'ಕ'ನೆಂಬವನು ತನ್ನ ೨೦,೦೦೦ ರೂಪಾಯಿಗಳನ್ನು ಕೊಟ್ಟು ವರ್ಷಕ್ಕೆ ೨,೫೦೦ ರೂಪಾಯಿಯಂತೆ ಹತ್ತು ವರ್ಷ ನಡಿಯುವ ವರ್ಷಾಶನವನ್ನು ಮಾಡಿ ಕೊಂಡಿದ್ದಾನೆ. ಈ ಮೂರೂ ಮಂದಿಯ ಪ್ರಾಪ್ತಿಗಳು ಅಷ್ಟೇ ಬಂಡವಲದಿಂದ ಉಂಟಾದವುಗಳು. ಆದರೆ, ಮೊದಲನೆಯವನ ಪ್ರಾಪ್ತಿಯು ಶಾಶ್ವತವಾಗಿರುವದು; ಎರಡನೆಯವನ ಪ್ರಾಪ್ತಿಯು ಅವನ ಆಯುಷ್ಯಮರ್ಯಾದೆಯನ್ನವಲಂಬಿಸಿರುವದು; ಮೂರನೆಯವನ ಪ್ರಾಪ್ತಿಯು ಕೆಲ ಕ್ಲುಪ್ತ ವರ್ಷಗಳನಂತರ ಮುಗಿಯುವದಾಗಿರುವದು. ಈ ಪಕ್ಷದಲ್ಲಿ, ಪ್ರಾಪ್ತಿಯ ಮೇಲಿನ ಕರವೂ ಕರದ ದರವೂ ಕಾಹೀಮವಾಗಿದ್ದರೆ, 'ಬ'ನ ಅಥವಾ 'ಕ'ನ ಪ್ರಾಪ್ತಿಗಿಂತಲೂ 'ಅ'ನ ಪ್ರಾಪ್ತಿಯ ಮೇಲೆ ಹೆಚ್ಚಿನ ದರದಿಂದ ಕರ ಕಟ್ಟುವದಕ್ಕೆ ಏನು ಕಾರಣವಿಲ್ಲ. ಪ್ರಾಪ್ತಿಯ ಮೇಲಿನ ಕರದ ದರವು ರೂಪಾಯಿಗೆ ೪ ಪೈಯಂತೆ ಇದ್ದಿದ್ದಾದರೆ, 'ಅ'ನ ಪ್ರಾಪ್ತಿಯ ಮೇಲೆ ವರ್ಷಕ್ಕೆ ೧೦ ರೂಪಾಯಿ ೬ ಆಣೆ ೮ ಪೈಯಂತೆ ಕಡೆತನಕ ಕರ ಕೊಡ್ರುವದು. 'ಬ'ನು ತನ್ನ ಜೀವಮಾನ ಇರುವ ವರೆಗೂ ವರ್ಷಕ್ಕೆ ೩೧ ರೂಪಾಯಿ ೪ ಆಣೆಯಂತೆ ಕರ ಕೊಡುವನು. ಹಾಗೂ 'ಕ'ನು ವರ್ಷಕ್ಕೆ ೫೨ ರೂಪಾಯಿ ೧ ಆಣೆ ೪ ಪೈಯಂತೆ ಹತ್ತು ವರ್ಷ ಕರ ಕೊಡುವನು. ಈ ಮೂವ್ವರಲ್ಲಿ ಪ್ರತಿಯೊಬ್ಬನು ಒಟ್ಟಿಗೆ ಕೊಟ್ಟ ಕರದ ರಕಮಿಗೆ ಸರಿಯಾದ ಬಂಡವಲವನ್ನು ಲೆಕ್ಕ

ಮಾಡಿ ನೋಡಿದರೆ, ಈ ಮೂವರೂ ಕೊಟ್ಟ ಕರದ ರಕಮುಗಳು ಅಷ್ಟೇ ಬೆಲೆಯುಳ್ಳವೆಂದು ಕಂಡು ಬರುವದು. ಮತ್ತು ಈ ಮೂವರೂ ತಮ್ಮ ಪ್ರಾಪ್ತಿಗಳಿಗೋಸ್ಕರ ಬೈತಂಕ ಕರ ಕೊಡುವ ಅಗತ್ಯ ಉಳಿಯ ಬಾರದೆಂದು, ಯಾವತ್ತು ಕರದ ರಕಮು ಒಮ್ಮೇಲೆ ಕೊಟ್ಟು ತಮ್ಮ ಪ್ರಾಪ್ತಿಗಳನ್ನು ಕಡೆತನಕ ಕರದಿಂದ ವಿಮುಕ್ತ ಮಾಡ ಬೇಕೆಂದು ಅಪೇಕ್ಷಿಸಿದರೆ, ಅವರೆಲ್ಲರೂ ಅಷ್ಟೇ ರಕಮು ಕೊಡ ಬೇಕಾಗುವದು. ಇದಕ್ಕೆ ವಿಪರೀತವಾಗಿ ಪ್ರಾಪ್ತಿಯ ಮೇಲಿನ ಕರವು ಕೇವಲ ಹಂಗಾಮಿಯಾಗಿದ್ದರೆ, ಹಂಗಾಮಿ ಪ್ರಾಪ್ತಿಗಳಿಗೂ ಕಾಹೀಮ ಪ್ರಾಪ್ತಿಗಳಿಗೂ ಒಂದೇ ದರದಿಂದ ಕರ ಕಟ್ಟುವದು ಬಹಳ ಅನ್ಯಾಯವಾಗುವದು. ಉದಾಹರಣಾರ್ಥವಾಗಿ, ಪ್ರಾಪ್ತಿಯ ಮೇಲಿನ ಕರವು ರೂಪಾಯಿಗೆ ೪ ಪೈಯಂತೆ ಹತ್ತು ವರ್ಷ ಮಾತ್ರ ಕೂಡ್ರಿಸಲ್ಪಟ್ಟಿತೆಂದು ಕಲ್ಪಿಸುವ. ಇಂಥ ಪ್ರಸಕ್ತಿಯಲ್ಲಿ, ಮೇಲಿನ ಉದಾಹರಣದೊಳಗಿನ 'ಅ'ನು ಕಾಹೀಮವಾದ ಕರ ಕೂಡ್ರಿಸಿದ್ದರೆ ಕಡೆತನಕ ಒಟ್ಟಿಗೆ ಕೊಡ ಬೇಕಾಗುವಷ್ಟು ಕರವನ್ನು 'ಕ'ನು ಹತ್ತು ವರುಷದೊಳಗೇ ಕೊಡ ಬೇಕಾಗುವದು. ಅಂದರೆ, 'ಅ' ಹಾಗೂ 'ಕ' ಇವರ ಪ್ರಾಪ್ತಿಗಳು ಅವುಗಳ ಬಂಡವಲದ ಮಾನದಿಂದ ನೋಡಲಾಗಿ ಒಂದಕ್ಕೊಂದು ಸರಿಯಾಗಿದ್ದಾಗ್ಯೂ, 'ಅ'ನಿಗೆ ಹತ್ತು ವರ್ಷದಲ್ಲಿ ಸ್ವಲ್ಪ ಕರ ಕೊಡ ಬೇಕಾಗುವದು, 'ಕ'ನಿಗೆ ಅವನಿಗಿಂತಲೂ ಬಹಳ ಹೆಚ್ಚು ಕರ ಕೊಡ ಬೇಕಾಗುವದು. ಪ್ರಾಪ್ತಿಯ ಮೇಲಿಣ ಕರದ ದರವು ಆಗಾಗ್ಯೆ ಹೆಚ್ಚುಕಡಿಮೆಯಾಗುವದಾಗಿದ್ದರೂ ಸಹ ಕೆಲವು ಮಟ್ಟಿಗೆ ಇದೇ ತರದ ಅನ್ಯಾಯವಾಗುವದು.

**ಪ್ರಾಪ್ತಿಯ ಮೇಲಿನ ಕರವು ಕಾಹೀಮವಾಗಿಯೂ ಅದರ ರಕಮು ನಿಯಮಿತವಾಗಿಯೂ ಇದ್ದರೆ, ಹಂಗಾಮಿ ಪ್ರಾಪ್ತಿಗಳಿಗೂ ಕಾಹೀಮ ಪ್ರಾಪ್ತಿಗಳಿಗೂ ಒಂದೇ ದರದಂತೆ ಕರ ಕಟ್ಟ ಬೇಕು.**—ಈ ವಿಷಯದಲ್ಲಿ ಸಾಮಾನ್ಯ ನಿಯಮವೇನಂದರೆ, ಪ್ರಾಪ್ತಿಯ ಮೇಲಿನ ಕರವು ಕಾಹೀಮವಾಗಿ ಕೂಡ್ರಿಸಲ್ಪಟ್ಟಿದ್ದು, ಅದರ ರಕಮೂ ನಿಯಮಿತವಾಗಿದ್ದರೆ, ಹಂಗಾಮಿ ಉತ್ಪನ್ನಗಳೇ ಆಗಲಿ ಕಾಹೀಮ ಉತ್ಪನ್ನಗಳೇ ಆಗಲಿ ಅವುಗಳಿಗೆ ಒಂದೇ ದರದಿಂದ ಕರ ಕಟ್ಟ ತಕ್ಕದ್ದು; ಹಾಗೂ ಪ್ರಾಪ್ತಿಯ ಮೇಲಿನ ಕರವು ಹಂಗಾಮಿಯಾಗಿ ಕೂಡ್ರಿಸಲ್ಪಟ್ಟಿದ್ದು, ಅದರ ರಕಮೂ ಅನಿಶ್ಚಿತವಾಗಿದ್ದ ಪಕ್ಷದಲ್ಲಿ, ಹಂಗಾಮಿ ಉತ್ಪನ್ನಗಳಿಗಿಂತಲೂ ಕಾಹೀಮವಾದ ಉತ್ಪನ್ನಗಳಿಗೆ ಹೆಚ್ಚು ದರದಿಂದ ಕರ ಕಟ್ಟ ತಕ್ಕದ್ದು. ಪ್ರಾಪ್ತಿಯ ಮೇಲಿನ ಕರವು ಹಂಗಾಮಿಯಾಗಿದ್ದ ಪ್ರಸಕ್ತಿಯಲ್ಲಿ ಈ ಕರವನ್ನು ಕೇವಲ ನ್ಯಾಯಕ್ಕೆ ಸರಿಯಾಗಿ ಕಟ್ಟ ಬೇಕಾದರೆ, ಯಾವತ್ತು ಪ್ರಾಪ್ತಿಗಳಿಗೆ ಸರಿ

ಘಾದ ಬಂಡವಲಗಳ ಲೆಕ್ಕ ಮಾಡಿ, ಆಯಾ ಬಂಡವಲಗಳ ಮೇಲೆ ವರ್ಷಕ್ಕೆ ನೂರಕ್ಕೆ ಇಂತಿಷ್ಟೆಂದು ಪ್ರಾಪ್ತಿಯ ಮೇಲಿನ ಕರ ತಕ್ಕೊಳ್ಳ ಬೇಕಾಗುವದು. ಆದರೆ ಈ ಬಗೆಯ ವ್ಯವಸ್ಥೆಯನ್ನು ಮಾಡುವದು ಕೇವಲ ಅಸಾಧ್ಯವಾಗಿರುವದು. ಯಾಕಂದರೆ, ಹಂಗಾಮಿ ಪ್ರಾಪ್ತಿಗಳಿಗೆ ಸರಿಯಾದ ಯೋಗ್ಯ ಬಂಡವಲಗಳನ್ನು ನಿರ್ಣೈಸುವ ಕೆಲಸದಲ್ಲಿ ಅಸಂಖ್ಯ ತೊಂದರೆಗಳೂ, ಮಿತಿ ಇಲ್ಲದ ಖರ್ಚೂ ಸಂಭವಿಸುವವು. ಸರಕಾರದ ಉದ್ಯೋಗಸ್ಥರು ಹಂಗಾಮಿ ಪ್ರಾಪ್ತಿಯುಳ್ಳ ಯಾವತ್ತು ಜನರ ವಯಸ್ಸು, ಅವರ ಶರೀರದ ಸ್ಥಿತಿ, ಆರೋಗ್ಯತೆ ಮುಂತಾದವುಗಳನ್ನೆಲ್ಲ ಪರೀಕ್ಷಿಸಿ, ಆ ಮೇಲೆ ಅವರು ಕೊಡ ತಕ್ಕ ಪ್ರಾಪ್ತಿಯ ಮೇಲಿನ ಕರವನ್ನು ನಿರ್ಣೈಸ ಬೇಕಾಗುವದು. ಉದಾಹರಣಾರ್ಥವಾಗಿ, ವರ್ಷಕ್ಕೆ ೨,೦೦೦ ರೂಪಾಯಿ ಸಂಬಳ ಶಿಕ್ಕುವ ಮತ್ತು ಸಮ ವಯಸ್ಸುಳ್ಳ ಇಬ್ಬರು ಅಧಿಕಾರಿಗಳಿದ್ದಾರೆಂದು ತಿಳಿಯುವ. ಇವರಿಬ್ಬರಲ್ಲಿ ಒಬ್ಬನು ಎರಡನೆಯವನಿಗಿಂತಲೂ ವಿಶೇಷ ಆರೋಗ್ಯವುಳ್ಳವನಿದ್ದ ಪಕ್ಷದಲ್ಲಿ, ಅವನು ಎರಡನೆಯವನಿಗಿಂತಲೂ ಹೆಚ್ಚು ವರ್ಷ ಬದುಕ ಬಹುದು. ಆ ಕಾರಣ, ಅವನ ಪ್ರಾಪ್ತಿಗೆ ಸರಿಯಾದ ಬಂಡವಲದ ಮಾನದಿಂದ ನೋಡಿದರೆ, ಅವನ ಪ್ರಾಪ್ತಿಯ ಬೆಲೆಯು ಎರಡನೆಯವನ ಪ್ರಾಪ್ತಿಯ ಬೆಲೆಗಿಂತಲೂ ಹೆಚ್ಚಾಗಿರುವದು. ಆದ್ದರಿಂದ ಇವರಿಬ್ಬರಿಗೂ ಬೇರೆ ಬೇರೆ ದರದಿಂದ ಕರ ಕಟ್ಟ ಬೇಕಾಗುವದು. ಈ ಪ್ರಕಾರ ಪ್ರತಿಯೊಬ್ಬನ ಪ್ರಾಪ್ತಿಯ ಬೆಲೆಯನ್ನು ಅದಕ್ಕೆ ಸರಿಯಾದ ಬಂಡವಲದ ಮಾನದಿಂದ ನಿರ್ಣೈಸಿ, ಆ ಪ್ರಕಾರ ಕರ ಕಟ್ಟುವ ಪ್ರಯತ್ನ ಮಾಡಿದರೆ, ವಸೂಲಾದ ಕರದೊಳಗಿನ ದೊಡ್ಡ ಭಾಗವು ಕರ ಎತ್ತುವ ಖರ್ಚಿಗೇ ಬೇಕಾಗುವದು. ರಾಜ್ಯಕರ್ತರು ಪ್ರತಿಯೊಂದು ಕರವು ಜನರ ಮೇಲೆ ಕೇವಲ ಅವರವರ ಶಕ್ತ್ಯಾನುಸಾರವಾಗಿ ಬೀಳುವ ಹಾಗೆ ಕೂಡ್ರಿಸುವ ಹವ್ಯಾಸಕ್ಕೆ ಬೀಳದೆ, ಯಾವತ್ತು ಕರಗಳು ಕೂಡಿ ಸಾಮಾನ್ಯವಾಗಿ ಎಲ್ಲರ ಮೇಲೂ ಅವರವರ ಸಾಮರ್ಥ್ಯಾನುಸಾರವಾಗಿ ಕರದ ಭಾರವು ಬೀಳುವಂತೆ ಕರ ಕಟ್ಟುವದಕ್ಕೆ ಯತ್ನಿಸ ತಕ್ಕದ್ದೆಂದು ಹಿಂದೆ ಹೇಳಿದೆಯಷ್ಟೇ. ಈ ಪ್ರಸಕ್ತಿಯಲ್ಲಾದರೂ ಆ ತತ್ವವನ್ನೇ ಅನುಸರಿಸ ತಕ್ಕದ್ದು.

**ಪ್ರಾಪ್ತಿಯ ಮೇಲಿನ ಕರದಿಂದ ದೊಡ್ಡ ಪ್ರಾಪ್ತಿಯುಳ್ಳವರಿಗಿಂತಲೂ ಸಣ್ಣ ಪ್ರಾಪ್ತಿಯುಳ್ಳವರಿಗೆ ಹೆಚ್ಚು ಬಾಧೆಯುಂಟಾಗುವದು.**—ಪ್ರಾಪ್ತಿಯ ಮೇಲಿನ ಕರವನ್ನು ಕೊಡುವದು ದೊಡ್ಡ ಪ್ರಾಪ್ತಿಯುಳ್ಳ ಜನರಿಗಿಂತಲೂ ಸಣ್ಣ ಸಣ್ಣ ಪ್ರಾಪ್ತಿಯುಳ್ಳವರಿಗೆ ಬಹಳ ಕಷ್ಟವಾಗುವದು. ಆ ಕಾರಣ, ಪ್ರಾಪ್ತಿಯ ಮೇಲೆ ಕರ ಕೂಡ್ರಿಸುವದು ಒಳ್ಳೇದಲ್ಲವೆಂದು ಕೆಲವರು ಹೇಳುವರು. ಉದಾಹ

ರಕ್ಷಣಾರ್ಥವಾಗಿ, ಪ್ರಾಪ್ತಿಯ ಮೇಲಿನ ಕರವನ್ನು ರೂಪಾಯಿಗೆ ೪ ಪೈ ಪ್ರಕಾರ ಸಣ್ಣ ದೊಡ್ಡ ಯಾವತ್ತು ಪ್ರಾಪ್ತಿಗಳ ಮೇಲೆ ಕಟ್ಟಿದರೆ, ವರ್ಷಕ್ಕೆ ನೂರು ರೂಪಾಯಿ ಪ್ರಾಪ್ತಿಯುಳ್ಳವನು ೨ ರೂಪಾಯಿ. ೧ ಆ. ೪ ಪೈ. ಕರ ತೆರ ಬೇಕಾಗುವದು; ಹಾಗೂ ೧೦,೦೦೦ ರೂಪಾಯಿ ಪ್ರಾಪ್ತಿಯುಳ್ಳವನು ವರ್ಷಕ್ಕೆ ೨೦೮ ರೂ. ೫ ಆ. ೪ ಪೈ. ಕರ ಕೊಡ ಬೇಕಾಗುವದು. ವರ್ಷಕ್ಕೆ ನೂರು ರೂಪಾಯಿ ಪ್ರಾಪ್ತಿಯುಳ್ಳವನು ಬಹಳ ಪ್ರಯಾಸದಿಂದ ಚರಿತಾರ್ಥ ಸಾಗಿಸುತ್ತಿರುವನು. ಇದಲ್ಲದೆ, ಅವನು ಸರ್ವಸಾಧಾರಣ ಕುಟುಂಬಸ್ಥನಾಗಿದ್ದರಂತೂ, ೧೦೦ ರೂಪಾಯಿಯಿಂದ ಅವನು ಹೊಟ್ಟೆಬಟ್ಟೆಗೆ ಮಾಡಿಕೊಂಡು ಹ್ಯಾಗಾದರೂ ಜೀವಿಸುವದು ಸಹ ಕಷ್ಟವಾಗಿರುವದು. ಇವನ ಪ್ರಾಪ್ತಿಯ ಮೇಲೆ ೨ ರೂ. ೧ ಆ. ೪ಪೈ. ಕರ ತಕ್ಕೊಂಡಿದ್ದಾದರೆ, ಅವನು ಈ ಕರವನ್ನು ತನ್ನ ಕುಟುಂಬದವರ ಅನ್ನಅರಿವೆಗಳನ್ನು ಕಡಿಮೆ ಮಾಡಿಕೊಂಡು ಕೊಡಬೇಕಾಗುವದರಿಂದ ಬಹಳ ತಾಪತ್ರಯವನ್ನು ಅನುಭೋಗಿಸುವನು. ಸಾಕಷ್ಟು ಅನ್ನ ಅರಿವೆಗಳು ದೊರಿಯುದ ಕಾರಣ ಅವನ ಕುಟುಂಬದವರು ಬೇನೆ ಬೀಳ ಬಹುದು. ಅದೇ, ವರ್ಷಕ್ಕೆ ಹತ್ತು ಸಹಸ್ರ ರೂಪಾಯಿ ಪ್ರಾಪ್ತಿಯುಳ್ಳವನ ಪ್ರಾಪ್ತಿಯೊಳಗಿಂದ ೨೦೮ ರೂ. ೫ ಆ. ೪ ಪೈಗಳನ್ನು ಕಡಿಮೆ ಮಾಡಿದರೆ ಅವನಿಗೆ ಪ್ರಯಾಸವಾಗುವದಿಲ್ಲ; ಬಹಳಾದರೆ ಅವನು ಸೊಗಸಿನ ಒಡವೆಗಳನ್ನು ಅಲ್ಪಸ್ವಲ್ಪ ಕಡಿಮೆ ಕೊಳ್ಳ ಬೇಕಾಗುವದು; ಇಷ್ಟೇ ಸರಿ. ಈ ಬಗೆಯ ಅಸಮತೆಯನ್ನು ನಿರಾಕರಿಸುವದಕ್ಕೋಸ್ಕರ ಬೆಂಥಮ್‌ನೆಂಬ ಗ್ರಂಥಕರ್ತನು ಸೂಚಿಸಿದ ಉಪಾಯವೇನಂದರೆ, ಉಪಜೀವನಕ್ಕೆ ಕನಿಷ್ಠ ಪಕ್ಷಕ್ಕೆ ಅವಶ್ಯವಾದ ರಕಮನ್ನು ನಿರ್ಣೈಸಿ, ಈ ರಕಮನ್ನು ಕರಕ್ಕೆ ಒಳಪಡಿಸ ಬಾರದು. ಹಾಗೂ ಯಾವತ್ತು ಪ್ರಾಪ್ತಿಗಳಲ್ಲಿ ಜೀವನದ ಈ ಕನಿಷ್ಠ ರಕಮು ಕಳಿದು ಉಳಿದ ಪ್ರಾಪ್ತಿಗಳ ಮೇಲೆ ಕರ ಕಟ್ಟ ಬೇಕು. ಈ ಪ್ರಕಾರ, ಸರ್ವಸಾಧಾರಣವಾದ ಒಂದು ಕುಟುಂಬದ ಚರಿತಾರ್ಥಕ್ಕೆ ೫೦೦ ರೂಪಾಯಿ ಅವಶ್ಯವೆಂದು ನಿರ್ಣಯವಾದರೆ, ೫೪೦ ರೂಪಾಯಿ ಪ್ರಾಪ್ತಿಯುಳ್ಳವನಿಗೆ ೪೦ ರೂಪಾಯಿಗಳ ಮೇಲೆ ಮಾತ್ರ ಕರ ಕಟ್ಟ ಬೇಕು. ಹಾಗೂ ೧,೦೦೦ ರೂಪಾಯಿ ಪ್ರಾಪ್ತಿಯುಳ್ಳವನಿಗೆ ೫೦೦ ರೂಪಾಯಿಗಳ ಮೇಲೆ ಮಾತ್ರ ಕರ ಕಟ್ಟ ಬೇಕು. ಈ ಬಗೆಯ ವ್ಯವಸ್ಥೆಯಿಂದ, "ಪ್ರತಿಯೊಬ್ಬನು ತನಗೆ ಅನಾವಶ್ಯಕವಾದ ಒಡವೆಗಳ ಕೆಲವೊಂದು ನಿಯಮಿತ ಭಾಗವನ್ನು ಕೊಟ್ಟಂತಾಗುವದು." ಆದರೆ ಸಾಂಪ್ರತಕ್ಕೆ ಪ್ರಾಪ್ತಿಯ ಮೇಲೆ ಕಟ್ಟಿದ ಕರವು ಈ ನಿಯಮವನ್ನು ಪೂರ್ಣವಾಗಿ ಅನುಸರಿಸಿ ಇಲ್ಲ. ಇಂಗ್ಲಂಡದಲ್ಲಿ ೧೫೦ ಪೌಂಡುಗಳಿಗಿಂತಲೂ ಕಡಿಮೆ ಪ್ರಾಪ್ತಿಗಳ ಮೇಲೆ ಕರ ಕಟ್ಟುವದಿಲ್ಲ. ಹಾಗೂ ೧೫೦ ಪೌಂ

ಡುಗಳಿಂದ ೪೦೦ ಪೌಂಡುಗಳ ವರೆಗೆ ಇದ್ದ ಪ್ರಾಪ್ತಿಗಳಲ್ಲಿ ೧೨೦ ಪೌಂಡುಗಳನ್ನು ಕಳಿದು ಉಳಿದದ್ದರ ಮೇಲೆ ಕರ ಕಟ್ಟುವರು. ಈ ಮೇರೆಗೆ ೨೦೦ ಪೌಂಡು ಪ್ರಾಪ್ತಿಯುಳ್ಳವನಿಗೆ ೮೦ ಪೌಂಡುಗಳ ಮೇಲೆ ಮಾತ್ರ ಕರ ಕಟ್ಟುವರು. ಈ ಪದ್ಧತಿಯು ಬೆಂಥಮ್ ಧೊರೆಯು ಸೂಚಿಸಿದ ಪದ್ಧತಿಯಷ್ಟು ಪೂರ್ಣವಾಗಿ ನ್ಯಾಯವಾದದ್ದಲ್ಲ. ಉದಾಹರಣಾರ್ಥವಾಗಿ, ೧೫೦ ಪೌಂಡು ಪ್ರಾಪ್ತಿಯ ಮೇಲೆ ಏನು ಕರ ಕೊಡ್ರುವದಿಲ್ಲ. ಆದರೆ ಇದಕ್ಕೂ ೫ ಪೌಂಡು ಮಾತ್ರ ಹೆಚ್ಚು ಪ್ರಾಪ್ತಿ ಇದ್ದರೆ, ೩೫ ಪೌಂಡುಗಳ ಮೇಲೆ ಕರ ಕೊಡಬೇಕಾಗುತ್ತದೆ. ೩೯೫ ಪೌಂಡು ಪ್ರಾಪ್ತಿ ಇದ್ದವನಿಗೆ ೨೭೫ ಪೌಂಡುಗಳ ಮೇಲೆ ಕರ ಕೊಡ ಬೇಕಾಗುವದು. ಆದರೆ ೫ ಪೌಂಡು ಹೆಚ್ಚು ಪ್ರಾಪ್ತಿಯುಳ್ಳವನು, ಅಂದರೆ ೪೦೦ ಪೌಂಡು ಪ್ರಾಪ್ತಿಯುಳ್ಳವನು ಎಲ್ಲಾ ೪೦೦ ಪೌಂಡುಗಳ ಮೇಲೆ ಕರ ಕೊಡ ಬೇಕಾಗುವದು. ಬೆಂಥಮ್ ಧೊರೆಯ ನಿಯಮದ ಪ್ರಕಾರ, ಹಿಂದುಸ್ತಾನದಲ್ಲಿ ಪ್ರಾಪ್ತಿಯ ಮೇಲೆ ಕಟ್ಟಿದ ಕರದಲ್ಲಿ ಇಂಗ್ಲಂಡದಲ್ಲಿದ್ದ ಪದ್ಧತಿಗಿಂತಲೂ ನ್ಯಾಯದ ಅಂಶವು ಮತ್ತಿಷ್ಟು ಕಡಿಮೆ ಇರುವದು. ಹ್ಯಾಗಂದರೆ, ಇಲ್ಲಿ ವರ್ಷಕ್ಕೆ ೫೦೦ ರೂಪಾಯಿಗಳಿಗಿಂತಲೂ ಕಡಿಮೆ ಪ್ರಾಪ್ತಿಗಳಿಗೆ ಏನು ಕರವಿಲ್ಲ. ೫೦೦ರಿಂದ ೨,೦೦೦ ರೂಪಾಯಿಗಳ ವರೆಗೆ ರೂಪಾಯಿಗೆ ೪ ಪೈಯಂತೆ ಕರವುಂಟು. ೨,೦೦೦ ರೂಪಾಯಿಗಳಿಗಿಂತಲೂ ಹೆಚ್ಚು ಪ್ರಾಪ್ತಿಯುಳ್ಳವರಿಗೆ ರೂಪಾಯಿಗೆ ೫ ಪೈಯಂತೆ ಕರವುಂಟು. ಆದ್ದರಿಂದ ವರ್ಷಕ್ಕೆ ೫೦೦ ರೂಪಾಯಿ ಪ್ರಾಪ್ತಿಯುಳ್ಳವನಿಗೆ ಏನು ಕರವಿಲ್ಲದಿದ್ದರೂ, ೫೦೫ ರೂಪಾಯಿ ಪ್ರಾಪ್ತಿಯುಳ್ಳವನು ವರ್ಷಕ್ಕೆ ಈ ಎಲ್ಲಾ ಪ್ರಾಪ್ತಿಯ ಮೇಲೆ, ಅಂದರೆ ೫೦೫ ರೂಪಾಯಿಗಳ ಮೇಲೆ ಕರ ತೆರ ಬೇಕಾಗುವದು. ಆದರೆ ಇಂಗ್ಲಂಡದಲ್ಲಿಯೂ ಹಿಂದುಸ್ತಾನದಲ್ಲಿಯೂ ಈಗ ಪ್ರಚಾರದಲ್ಲಿ ತಂದಿದ್ದ ಪದ್ಧತಿಗಳು ಕಡಿಮೆ ನ್ಯಾಯವುಳ್ಳವಾಗಿದ್ದಾಗ್ಯೂ, ಅವುಗಳಲ್ಲಿ ವ್ಯಾವಹಾರಿಕ ರೀತಿಯಿಂದ ನೋಡಿದರೆ ಒಂದು ಗುಣ ಉಂಟು. ಆದೇನಂದರೆ, ಬೆಂಥಮ್ ಧೊರೆಯು ಸೂಚಿಸಿದ ಪದ್ಧತಿಗಿಂತಲೂ ಈ ಪದ್ಧತಿಗಳಿಂದ ಕರ ಎತ್ತುವದು ಸುಲಭವಾಗಿರುವದು.

ಪ್ರಾಪ್ತಿಯ ಮೇಲಿನ ಕರವು ವಾಡಿಕೆಯಾಗಿ ಪ್ರತ್ಯಕ್ಷ ಕರವಾಗಿರುವದು; ಒಮ್ಮೊಮ್ಮೆ ಮಾತ್ರ ಪರೋಕ್ಷ ಕರವಾಗಿರುವದು.—ಸಕೃದ್ದರ್ಶನಕ್ಕೆ ಪ್ರಾಪ್ತಿಯ ಮೇಲಿನ ಕರವು ಯಾವಾಗಲೂ ಪ್ರತ್ಯಕ್ಷ ಕರವಾಗಿರುವದೆಂದು ತೋರುವದು. ಆದರೆ ಕೆಲವು ಪ್ರಸಕ್ತಿಗಳಲ್ಲಿ ಪ್ರಾಪ್ತಿಯ ಮೇಲಿನ ಕರವು ಸಹ ಪರೋಕ್ಷ ಕರವಾಗಿರುವದೆಂದು ಸಿದ್ಧ ಮಾಡಿ ತೋರಿಸ ಬಹುದು. ಪ್ರಾಪ್ತಿಯ ಮೇಲೆ ಕಟ್ಟಿದ ಕರವನ್ನು ಉತ್ಪಾದಕ ಕೆಲಸಗಳಲ್ಲಿ ಹಾಕಲಾಗುವ ಬಂಡವಲದೊಳಗಿಂದ

ಕೊಡದೆ, ಹಾಗೇ ಇಟ್ಟಿದ್ದ ಬೇರೆ ಸಂಗ್ರಹದೊಳಗಿಂದ ಕೊಟ್ಟದ್ದಾದರೆ, ಈ ಕರವು ಪ್ರತ್ಯಕ್ಷ ಕರವಾಗುವದು. ಯಾಕಂದರೆ, ಈ ಕರದ ಭಾರವನ್ನು ಕರ ಕೊಡುವವನೇ ಸಹಿಸುವನು. ಹೀಗಾಗದೆ, ಪ್ರಾಪ್ತಿಯ ಮೇಲಣ ಕರವನ್ನು ಬಂಡವಲದೊಳಗಿಂದ ಕೊಟ್ಟಿದ್ದಾದರೆ, ಈ ಕರವು ಪರೋಕ್ಷ ಕರವಾಗುವದು. ಯಾಕಂದರೆ, ಈ ಕರವು ಬಂಡವಲದೊಳಗಿಂದ ಕಡಿಮೆಯಾಗದಿದ್ದರೆ ಅಷ್ಟು ಹೆಚ್ಚು ಬಂಡವಲವು ಕೆಲಸಗಾರರ ಉಪಜೀವನಕ್ಕೆ ಸಲ್ಲುತ್ತಿತ್ತು. ಕರದಿಂದ ಬಂಡವಲ ಕಡಿಮೆಯಾದ ಕಾರಣ ಕರದ ಕೆಲವೊಂದು ಭಾಗವು ಆ ಕೆಲಸಗಾರರ ಮೇಲೆ ಬೀಳುವದು. ಉದಾಹರಣಾರ್ಥವಾಗಿ, ಒಬ್ಬ ಕಾರಖಾನೆಯುವನು ವರ್ಷಕ್ಕೆ ೧,೦೦೦ ರೂಪಾಯಿ ಕರ ತೆರುತ್ತಾನೆಂತಲೂ, ಅವನು ಈ ಕರವನ್ನು ಕೊಡಬೇಕಾಗದೆ ಇದ್ದರೆ ಈ ಹಣವನ್ನು ತನ್ನ ಕಾರಖಾನೆಯಲ್ಲಿ ಹಾಕಿ ಹೆಚ್ಚು ಕೂಲಿಕಾರರನ್ನು ದುಡಿಸಿಕೊಳ್ಳುತ್ತಿದ್ದನೆಂತಲೂ ತಿಳಿಯುವ. ಹೀಗಾದ ಪಕ್ಷದಲ್ಲಿ, ಅವನು ಕೊಟ್ಟ ಕರವು ಅಂಶತಃ ದುಡಿಯುವ ಜನರ ಮೇಲೆ ಬಿದ್ದು, ಸಂಬಳದ ದರವು ಇಳಿಯುವ ಮಾರ್ಗಕ್ಕೆ ಹತ್ತುವದು. ಆದರೆ ಆ ಕಾರಖಾನೆಯವನು ಈ ಸಾವಿರ ರೂಪಾಯಿಯನ್ನು ತನ್ನ ಬಂಡವಲದೊಳಗಿಂದ ಕೊಡದೆ, ತನ್ನ ಸುಖೋಪಭೋಗದ ಒಡವೆಗಳನ್ನು ಕಡಿಮೆ ಮಾಡಿಕೊಂಡು ಕೊಟ್ಟಿದ್ದಾದರೆ, ಈ ಕರವು ಕೇವಲ ಅವನ ಮೇಲೇ ಬೀಳುವದರಿಂದ ಅದು ಪ್ರತ್ಯಕ್ಷ ಕರವಾಗುವದು. ಪ್ರಾಪ್ತಿಯ ಮೇಲಣ ಕರವನ್ನು ಬಂಡವಲದೊಳಗಿಂದ ಕೊಟ್ಟದ್ದಾದರೆ, ಅದರಿಂದ ಉದ್ಯೋಗಗಳಿಗೆ ಬಹಳ ಹಾನಿಯುಂಟಾಗುವದು. ಆದಕಾರಣ, ಈ ಕರವನ್ನು ವ್ಯಾಪಾರ ಉದ್ಯೋಗಗಳನ್ನು ನಡಿಸುವದಕ್ಕೆ ವಿಪುಲವಾದ ಬಂಡವಲವಿರುವಂಥ ಇಂಗ್ಲಂಡ ಮೊದಲಾದ ದೇಶಗಳಲ್ಲಿ ಮಾತ್ರ ಕೂಡ್ರಿಸ ತಕ್ಕದ್ದು. ಯಾಕಂದರೆ, ಇಂಥ ದೇಶಗಳಲ್ಲಿ ಈ ಕರದಿಂದ ಸಂಪದುತ್ಪಾದನಕ್ಕೆ ಪ್ರತಿಬಂಧ ಉಂಟಾಗುವದಿಲ್ಲ. ಆದರೆ ವ್ಯಾಪಾರ ಉದ್ಯೋಗಗಳಲ್ಲಿ ಹಾಕುವದಕ್ಕೆ ಸಾಕಷ್ಟು ಬಂಡವಲವಿಲ್ಲದಂಥ ದೇಶಗಳಲ್ಲಿ ಪ್ರಾಪ್ತಿಯ ಮೇಲಿನ ಕರವನ್ನು ಎಷ್ಟು ಮಾತ್ರವೂ ಕೂಡ್ರಿಸ ಬಾರದು.

**ಕೆಲವು ತಗಲುಖೋರರಿಗೆ ಪ್ರಾಪ್ತಿಯ ಮೇಲಿನ ಪೂರ್ಣ ಕರ ಕೊಡುವದನ್ನು ತಪ್ಪಿಸುವದಕ್ಕೆ ಬರುವದು:**— ಪ್ರಾಪ್ತಿಯ ಮೇಲಿನ ಕರದ ಮೇಲೆ ಮತ್ತೊಂದು ಆಕ್ಷೇಪ ತೆಗಿಯುವದುಂಟು. ಅದೇನಂದರೆ, ತಮ್ಮ ಪ್ರಾಪ್ತಿಗಳನ್ನು ಕಡಿಮೆ ಹೇಳಿ, ಈ ಕರವನ್ನು ತಪ್ಪಿಸಿಕೊಳ್ಳುವದಕ್ಕೆ ಕೆಲವು ತಗಲುಖೋರರಿಗೆ ಆಸ್ಪದ ಉಂಟಾಗುತ್ತದೆ. ಆ ಕಾರಣ ಈ ಕರವು ಜನರಿಗೆ ಅಪ್ರಾಮಾಣಿಕತನವನ್ನು ಕಲಿಸುವಂಥ ಒಂದು ಕಾರಣವಾಗುವದು. ಯಾವದಾದರೂ ಕರದಿಂದ ಜನರ

ನೀತಿಗೆ ಹಾನಿ ಉಂಟಾಗುವದೋ ಹ್ಯಾಗೆ, ಎಂಬ ವಿಚಾರವನ್ನು ಸಹ ರಾಜ್ಯ ಕಾರಭಾರಿಗಳು ಅವಶ್ಯವಾಗಿ ಮಾಡ ತಕ್ಕದ್ದಾಗಿದೆ. ಆದರೆ ಪ್ರಾಪ್ತಿಯ ಮೇಲಿನ ಕರವನ್ನು ಕುರಿತು ವಿಚಾರಿಸಲಾಗಿ, ಈ ಕರವನ್ನು ತಪ್ಪಿಸುವ ಜನರ ಅಪ್ರಾಮಾಣಿಕತನಕ್ಕೆ ಈ ಕರವೇ ಕಾರಣವೆಂದು ತಿಳಿಯುವದಕ್ಕೆ ಸಾಕಷ್ಟು ಆಧಾರವಿಲ್ಲ. ಜನರಿಗೆ ಈ ಕರದಿಂದ ಅಪ್ರಾಮಾಣಿಕತನದಿಂದ ವರ್ತಿಸುವದಕ್ಕೆ ಆಸ್ಪದ ದೊರಿಯುವದೆಂಬದು ನಿಜ. ಆದರೂ, ಅವರಲ್ಲಿ ಅಪ್ರಾಮಾಣಿಕತನದಿಂದ ವರ್ತಿಸುವ ಪ್ರವೃತ್ತಿಯು ಮೊದಲೇ ಇದ್ದ ವಿನಹಾ, ಅವರು ಅಪ್ರಾಮಾಣಿಕತನದಿಂದ ವರ್ತಿಸುವದಕ್ಕೆ ಈ ಸಮಯವನ್ನು ಎಂದಿಗೂ ಸಾಧಿಸರು. ಸಾಂಪ್ರತದ ಸ್ಥಿತಿಯನ್ನು ನೋಡಲಾಗಿ, ಪ್ರಾಪ್ತಿಯ ಮೇಲಿನ ಕರದಿಂದ ಕೆಲವು ತಗಲುಖೋರರಿಗೆ ಸರಕಾರವನ್ನೂ ಕರ ಕೊಡುವಂಥ ಬೇರೆ ಜನರನ್ನೂ ಠಕ್ಕಿಸುವದಕ್ಕೆ ಆಸ್ಪದ ಉಂಟಾಗುತ್ತದೆಂಬುವದು ಈ ಕರಕ್ಕೆ ಸರಿಯಾದ ವಿರುದ್ಧ ಆಕ್ಷೇಪವೆಂದು ತಿಳಿಯಲಿಕ್ಕೆ ಬರುವದಿಲ್ಲ.

**ಸರಕುಗಳ ಮೇಲೆ ಕೂಡ್ರಿಸ ತಕ್ಕ ಕರಗಳನ್ನು ಉಪಜೀವನಕ್ಕೆ ಅವಶ್ಯವಾದ ಪದಾರ್ಥಗಳ ಮೇಲೆ ಕೂಡ್ರಿಸುವದಕ್ಕಿಂತಲೂ ಸುಖೋಪಭೋಗದ ಸೊಗಸಿನ ಪದಾರ್ಥಗಳ ಮೇಲೆ ಕೂಡ್ರಿಸುವದು ಯೋಗ್ಯವು.**— ಪ್ರಾಪ್ತಿಯ ಮೇಲಿನ ಕರದ ವಿಷಯವಾಗಿ ಮೇಲೆ ಹೇಳಿದ ಕೆಲವು ಸಂಗತಿಗಳ ಮೇಲಿಂದ ಸರಕುಗಳ ಮೇಲಿನ ಕರಗಳ ವಿಷಯದ ಕೆಲ ಸಂಗತಿಗಳು ಸಹ ತಿಳಿಯುವವು. ಕೇವಲ ಉದರನಿರ್ವಾಹಕ್ಕೆ ಮಾತ್ರ ಸಾಕಾಗುವ ಪ್ರಾಪ್ತಿಗಳ ಮೇಲೆ ಪ್ರಾಪ್ತಿಯ ಕರ ಕಟ್ಟುವದು ಯೋಗ್ಯವಲ್ಲವೆಂದು ಮೇಲೆ ಹೇಳಿದ್ದೇವೆ. "ಪ್ರತಿಯೊಬ್ಬನು ತನಗೆ ಅನಾವಶ್ಯಕವಾದ ಪದಾರ್ಥಗಳ ಕೆಲವೊಂದು ಭಾಗವನ್ನು ರಾಷ್ಟ್ರೀಯ ಬೊಕ್ಕಸಕ್ಕೆ ಸಲ್ಲಿಸ ತಕ್ಕದ್ದೆಂಬ" ನಿಯಮವು ಹಿಂದೆ ಹೇಳಲ್ಪಟ್ಟಿತು. ಈ ನಿಯಮಕ್ಕೆ ಅನುಸಾರವಾಗಿ, ಸರಕುಗಳ ಮೇಲೆ ಕಟ್ಟ ತಕ್ಕ ಕರಗಳನ್ನು ಉಪಜೀವನಕ್ಕೆ ಅನಾವಶ್ಯಕವಾದ ವಿಲಾಸದ ಒಡವೆಗಳ ಮೇಲೆ ಕಟ್ಟ ತಕ್ಕದ್ದು, ಉಪಜೀವನಕ್ಕೆ ಅತ್ಯವಶ್ಯವಾದ ಒಡವೆಗಳ ಮೇಲೆ ಕಟ್ಟ ಬಾರದು. ಉಪಜೀವನಕ್ಕೆ ಅತ್ಯವಶ್ಯವಾದ ಒಡವೆಗಳು ಮಾತ್ರ ದೊರಿಯುವಷ್ಟು ಪ್ರಾಪ್ತಿಯುಳ್ಳ ಜನರನ್ನು ಪ್ರಾಪ್ತಿಯ ಮೇಲಿನ ಕರದಿಂದ ಕೈಲಾದ ಮಟ್ಟಿಗೆ ಉಳಿಸ ತಕ್ಕದ್ದೆಂದು ಎಲ್ಲರೂ ಒಪ್ಪಿಕೊಳ್ಳುವದಾದರೆ, ಉಪಜೀವನದ ಪದಾರ್ಥಗಳ ಮೇಲೆ ಕರ ಕೂಡ್ರಿಸಿ, ಅವುಗಳ ಕ್ರಯ ಏರಿಸುವದು ಯೋಗ್ಯವಲ್ಲೆಂಬುವದು ಸ್ಪಷ್ಟವೇ ಸರಿ. ಆದರೆ ಇದರ ಮೇಲಿಂದ ಬಡವರು ಕೊಳ್ಳುವ ಸಾರಾಯಿ,

ಅಫೀಮು, ತಂಬಾಕ ಮುಂತಾದ ಸೊಗಸಿನ ಪದಾರ್ಥಗಳ ಮೇಲೆ ಕರ ಕಟ್ಟ ಬಾರದೆಂದು ಎಷ್ಟು ಮಾತ್ರವೂ ಸಿದ್ಧವಾಗುವದಿಲ್ಲ. ಸೊಗಸಿನ ಒಡವೆಗಳನ್ನು ಬಡವರು ಉಪಯೋಗಿಸಿದಾಗ್ಯೂ, ಅವುಗಳ ಮೇಲೆ ಕರ ಕೂಡ್ರಿಸುವದೇ ಯೋಗ್ಯವು. ಯಾಕಂದರೆ, ಬಡವರಾಗಿದ್ದು ಅವರಿಗೆ ಸೊಗಸಿನ ಒಡವೆಗಳನ್ನು ಕೊಳ್ಳುವದಕ್ಕೆ ರೊಕ್ಕವಿದ್ದ ಪಕ್ಷದಲ್ಲಿ, ಅವರ ಬಡತನಕ್ಕೋಸ್ಕರ ಅವರನ್ನು ಕರದಿಂದ ಪೂರ್ಣವಾಗಿ ಉಳಿಸುವದು ಯೋಗ್ಯವಾಗಲಾರದು. ಇವರು ತಾವು ಬಡವರಾದ ಕಾರಣ ಕರ ಕೊಡ ಬಾರದೆಂದು ಬಯಸುವದಾದರೆ, ಇಂಥ ಒಡವೆಗಳನ್ನು ಕೊಳ್ಳುವದನ್ನೇ ಬಿಟ್ಟು ಬಿಡ ಬೇಕು. ಹೀಗಿದ್ದು ಅವನ್ನು ಕೊಂಡರೆ, ಅವುಗಳ ಕೆಲವೊಂದು ಭಾಗವನ್ನು ಅವರು ಸಾರ್ವಜನಿಕ ಖಜಾನೆಗೆ ಸಲ್ಲಿಸ ಬೇಕಾಗುವದು ಅನ್ಯಾಯವಲ್ಲ.

**ಭೂಮಿಯ ಮೇಲಿನ ಕರಗಳು ಭೂಮಿಯ ಒಡೆಯನ ಮೇಲೆ ಬೀಳುವವು, ಒಕ್ಕಲಿನ ಮೇಲೆ ಬೀಳುವದಿಲ್ಲ.**—ತೆರಿಗೆ, ಇಂಗ್ಲಂಡದಲ್ಲಿದ್ದ ದಶಮಭಾಗದ ಕರ ಹಾಗೂ ದರಿದ್ರಸಂರಕ್ಷಕ ಕರ, ಇವು ಮೊದಲಾದ ಭೂಮಿಯ ಮೇಲೆ ಕಟ್ಟಿದ ಕರಗಳೆಲ್ಲ ಭೂಮಿಯ ಒಡೆಯರ ಮೇಲೇ ಬೀಳುವವು, ಹೊಲ ಮಾಡುವ ಒಕ್ಕಲುಗಳ ಮೇಲೆ ಬೀಳುವದಿಲ್ಲ ಎಂಬ ಸಾಮಾನ್ಯ ನಿಯಮ ಉಂಟು. ಈ ಕರಗಳನ್ನು ಒಂದು ವೇಳೆ ಹೊಲ ಮಾಡುವ ಒಕ್ಕಲಿನಿಂದಲೇ ತಕ್ಕೊಂಡಾಗ್ಯೂ, ಅವನು ಅಷ್ಟು ರಕಮನ್ನು ಭೂಮಿಯ ಗೇಣಿಯಲ್ಲಿ ಮುರಕೊಳ್ಳುವನು. ಅವನು ಕರವನ್ನು ಕೊಡದೆ ಇದ್ದ ಪಕ್ಷದಲ್ಲಿ, ಅವನು ಒಡೆಯನಿಗೆ ಕೊಡ ಬೇಕಾಗುವ ಗೇಣಿಯು ಹೆಚ್ಚುವದು. ಆದಕಾರಣ ಭೂಮಿಯ ಮೇಲೆ ಕೂಡ್ರಿಸಿದ ದರಿದ್ರಸಂರಕ್ಷಕ ಕರವನ್ನು ಕಡಿಮೆ ಮಾಡಿದಾಗ್ಯೂ, ಅದರಿಂದ ಒಕ್ಕಲುಗಳಿಗೆ ಸ್ಥಿರವಾದ ಹಾಗೂ ಪ್ರತ್ಯಕ್ಷವಾದ ಲಾಭವೇನು ಆಗುವದಿಲ್ಲ. ಅವರು ಈ ಕರವನ್ನು ಕಡಿಮೆ ಕೊಡ ಬೇಕಾದ ಮಾನದಿಂದ, ಅವರು ಕೊಡ ಬೇಕಾಗುವ ಭೂಮಿಯ ಗೇಣಿಯು ಆದಷ್ಟು ಬೇಗನೆ ಏರಿಸಲ್ಪಡುವದು.

**ಭೂಮಿಯ ತೆರಿಗೆಯು ವಾಸ್ತವಿಕವಾಗಿ ಗೇಣಿಯಾಗಿರುವದು.**—ಇಂಗ್ಲಂಡದಲ್ಲಿ ಭೂಮಿಯ ತೆರಿಗೆಯು ಕಾಹೀಮವಾಗಿ ನಿರ್ಣೈಸಲ್ಪಟ್ಟಿರುವದು. ಈ ತೆರಿಗೆಯ ಹಣವನ್ನು ಹೆಚ್ಚು ಕಡಿಮೆ ಮಾಡುವದಕ್ಕೆ ಸರಕಾರದವರಿಗೆ ಅಧಿಕಾರವಿಲ್ಲ. ಹಾಗೂ ಆ ದೇಶದಲ್ಲಿ ಬೇಸಾಯದ ಹುಟ್ಟುವಳಿಗಳ ಬೆಲೆಯು ದಿನೇದಿನೇ ಹೆಚ್ಚುತ್ತಾ ನಡಿದದೆ. ಆದಕಾರಣ, ಬರ ಬರುತ್ತಾ ಹೆಚ್ಚುವಂಥ ಭೂಮಿಯ ಹುಟ್ಟುವಳಿಯ ಬೆಲೆಯ ಮಾನದಿಂದ ನೋಡಲಾಗಿ, ತೆರಿಗೆಯು ಕಡಿಮೆ

ಯ್ಯಾಗುತ್ತಾ ನಡಿದದೆ. ಆದರೆ, ತೆರಿಗೆಯು ಸ್ವಲ್ಪೇ ಇರಲಿ, ಬಹಳೇ ಇರಲಿ, ಅದು ಭೂಮಿಯ ಒಡೆಯರು ಸರಕಾರಕ್ಕೆ ಕೊಡುವ ಗೇಣಿಯ ಸ್ವರೂಪದ್ದೇ ಆಗಿರುವದು. ಆ ಕಾರಣ, ಈ ತೆರಿಗೆಯಿಂದ ಇಂಗ್ಲಂಡದಲ್ಲಿ ಸಹ ಕೆಲವು ಅಂಶದಲ್ಲಿ ಭೂಮಿಯ ಮೇಲೆ ಸರಕಾರದವರಿಗೆ ಸ್ವತ್ವದ ಹಕ್ಕು ಉಂಟೆಂದು ಸಿದ್ಧವಾಗುತ್ತದೆ. ಹಿಂದುಸ್ಥಾನದಲ್ಲಿ ಬಹುತರ ಯಾವತ್ತು ಭೂಮಿಯು ಸರಕಾರದ್ದೇ ಎಂದು ಎಣಿಸಲ್ಪಡುವದು. ಆದಕಾರಣ ಇಲ್ಲಿಯ ಭೂಮಿಯ ಮೇಲಿನ ತೆರಿಗೆಯು ಭೂಮಿಯ ಗೇಣಿಯಾಗಿರುವದು. ಈ ಗೇಣಿಯನ್ನು ಹೊಲ ಮಾಡುವ ಒಕ್ಕಲುಗಳು ತಾವೇ ಸರಕಾರಕ್ಕೆ ಕೊಡುವರು. ಈ ಒಕ್ಕಲುಗಳು ಭೂಮಿಯನ್ನು ಖಾಸಗಿ ಒಡೆಯರಿಂದ ಹಿಡಿಯುವದಿಲ್ಲ, ಸರಕಾರದ ಕಡೆಯಿಂದ ಹಿಡಿಯುತ್ತಾರೆ. ಇವರು ಕೊಡುವ ಗೇಣಿಗೆ ತೆರಿಗೆ ಎಂಬ ಹೆಸರುಂಟು. ಅರ್ಥಶಾಸ್ತ್ರದೃಷ್ಟ್ಯಾ ಈ ರಹಿತವಾರೀ ಪದ್ಧತಿಯು ಅತ್ಯುತ್ಕೃಷ್ಟವಾದದ್ದೆಂಬುವದು ಸಹಜವಾಗಿ ತಿಳಿಯುವದು. ಹ್ಯಾಗೆಂದರೆ, ದೇಶದ ಜನಸಂಖ್ಯೆ ಬೆಳೆದ ಹಾಗೆ ಬೇಸಾಯದ ಹುಟ್ಟುವಳಿಗಳ ಬೆಲೆ ಹೆಚ್ಚುವ ಕಾರಣ, ಭೂಮಿಯ ಬೆಲೆಯೂ ಹೆಚ್ಚುವದು. ಈ ಮೇರೆಗೆ ಭೂಮಿಯ ಬೆಲೆ ಹೆಚ್ಚುವದು ಭೂಮಿಯ ಒಡೆಯರ, ಅಥವಾ ಒಕ್ಕಲಿಗರ ಶ್ರಮದ ಫಲವಲ್ಲ. ಆ ಕಾರಣ ಈ ಹೆಚ್ಚಿದ ಬೆಲೆಗೆ ಅವರು ನ್ಯಾಯದಿಂದ ಬಾಧ್ಯಸ್ಥರಾಗರು. ಭೂಮಿಯ ಒಡೆತನವು ಸರಕಾರದವರಿಗೆ ಇರದೆ ಖಾಸಗಿ ಜನರ ಕಡೆಗೆ ಇರುವಂಥ ಜಮೀನದಾರಿ ಪದ್ಧತಿಯು ನಡಿಯುವ ದೇಶದಲ್ಲಿ, ಈ ಮೇರೆಗೆ ಹೆಚ್ಚಾದ ಬೆಲೆಯು ಭೂಮಿಯ ಒಡೆಯರಾದ ಹಲಕೆಲವು ಜಮೀನುದಾರರ ಕೈಗೆ ಶೇರುವದು. ಆದರೆ ಭೂಮಿಯ ಮೇಲೆ ಸರಕಾರದ ಬಾಧ್ಯತೆ ಇದ್ದ ದೇಶದಲ್ಲಿ, ಭೂಮಿಯ ಬೆಲೆ ಹೆಚ್ಚಿದ ಮಾನದಿಂದ ಉಂಟಾಗುವ ಲಾಭವೆಲ್ಲ ಇಡೀ ಜನಸಮೂಹಕ್ಕೆ ಶಿಕ್ಕುವದು. ಹ್ಯಾಗೆಂದರೆ, ಭೂಮಿಯ ಬೆಲೆ ಹೆಚ್ಚಿದ್ದರಿಂದ ಸರಕಾರಕ್ಕೆ ಹೆಚ್ಚು ತೆರಿಗೆ ಬಂದು, ಅದರಿಂದ ಜನರ ಮೇಲಿನ ಬೇರೆ ಕರಗಳ ಒಜ್ಜೆಯನ್ನು ಕಡಿಮೆ ಮಾಡುವದಕ್ಕೆ ಅನುಕೂಲವಾಗುತ್ತದೆ. ಹಾಗೂ ಉಪಜೀವನದ ಪದಾರ್ಥಗಳ ಕ್ರಯ ಏರಿದ್ದರಿಂದ ಜನರ ಕೈಯೊಳಗಿಂದ ಹೋಗುವ ಸಂಪತ್ತಿನಲ್ಲಿ ದೊಡ್ಡ ಭಾಗವು ತೆರಿಗೆಯ ರೂಪದಿಂದ ರಾಷ್ಟ್ರೀಯ ಬೊಕ್ಕಸಕ್ಕೆ ಶೇರುವದರಿಂದ, ಅಷ್ಟು ಭಾಗವು ಅವರಿಗೆ ತಿರುಗಿ ದೊರಿದಂತೆಯೇ ಆಗುತ್ತದೆ. ಹಿಂದುಸ್ಥಾನದಲ್ಲಿ, ಭೂಮಿಯ ಕಂದಾಯವು ವರ್ಷಕ್ಕೆ ೨೨,೦೦,೦೦,೦೦೦ ಕೋಟಿ ರೂಪಾಯಿಯುಂಟು. ಈ ಕಂದಾಯವು ಸರಕಾರಕ್ಕೆ ಬಾರದಿದ್ದರೆ ಭೂಮಿಯ ಒಡೆಯರಿಗೆ ಹೋಗುತ್ತಿತ್ತು. ಆ ಕಾರಣ ಸರಕಾರಕ್ಕೆ ಬರುವ ಈ ಕಂದಾಯದ ಒಜ್ಜೆ ಯಾರ

ಮೇಲೂ ಬೀಳುವದಿಲ್ಲ. ಮತ್ತು ಈ ಕಂದಾಯವು ಸರಕಾರಕ್ಕ ಬರುವದರಿಂದ ಯಾರಿಗೂ ನಷ್ಟವಾಗುವದಿಲ್ಲ. ಇದಕ್ಕೆ ವಿಪರೀತವಾಗಿ, ಭೂಮಿಯ ಒಡೆತನವು ಖಾಸಗಿ ಜನರ ಕಡೆಗೆ ಇದ್ದು, ಕಂದಾಯವೆಲ್ಲ ಅವರ ಪಾಲಿಗೇ ಹೋಗುವದಾಗಿದ್ದರೆ, ಸರಕಾರದ ವಾರ್ಷಿಕ ವಸೂಲಿನಲ್ಲಿ ೨೨,೦೦,೦೦,೦೦೦ ಕೋಟಿ ರೂಪಾಯಿಗಳು ಕಡಿಮೆಯಾಗುತ್ತಿದ್ದವು. ಹಾಗೂ ಈ ಮೇರೆಗೆ ಕಡಿಮೆಯಾದ ೨೨,೦೦,೦೦,೦೦೦ ರೂಪಾಯಿಗಳನ್ನು ವಸೂಲು ಮಾಡುವದಕ್ಕೋಸ್ಕರ ಜನರ ಮೇಲೆ ಹೆಚ್ಚು ಕರಗಳನ್ನು ಕೂಡ್ರಿಸಬೇಕಾಗುತ್ತಿತ್ತು. ಭೂಮಿಯ ತೆರಿಗೆಯು ಅರ್ಥಶಾಸ್ತ್ರದೃಷ್ಟ್ಯಾ ಬರ ಬಹುದಾದ ಗೇಣಿಗಿಂತಲೂ ಎಂದಿಗೂ ಹೆಚ್ಚು ಇರಬಾರದೆಂಬುವದು ಸ್ಪಷ್ಟವೇ ಸರಿ. ಅಂದರೆ, ಭೂಮಿಯನ್ನು ಮಾಡುವ ಒಕ್ಕಲು ಹಾಕಿದ ಬಂಡವಲದ ಮೇಲಿನ ವಾಡಿಕೆಯ ದರದ ಲಾಭವನ್ನು ಸಹ ಒಳಗೂಡಿಸಿ ಹೊಲ ಮಾಡುವ ಯಾವತ್ತು ಖರ್ಚು ಕಳಿಯಲಾಗಿ ಉಳಿಯುವ ಬಾಕಿಗಿಂತಲೂ ಭೂಮಿಯ ತೆರಿಗೆಯು ಎಂದಿಗೂ ಹೆಚ್ಚಾಗಿರ ಬಾರದು. ಈ ಬಾಕಿಯು ವಿವಕ್ಷಿತವಾದ ಭೂಮಿಯ ಬೆಳೆಗೂ, ಏನು ಗೇಣಿ ಬಾರದ ಸಾಗುವಳಿಯಾದಂಥ ಕನಿಷ್ಠ ಭೂಮಿಯ ಬೆಳೆಗೂ, ಇರುವ ವ್ಯತ್ಯಾಸಕ್ಕೆ ಸರಿಯಾಗಿರುವದೆಂದು ಹಿಂದೆ ಸಿದ್ಧ ಮಾಡಿದ್ದೇವೆ. ಭೂಮಿಯ ತೆರಿಗೆಯು ಅರ್ಥಶಾಸ್ತ್ರದೃಷ್ಟ್ಯಾ ಬರ ಬಹುದಾದ ಗೇಣಿಗಿಂತಲೂ ಹೆಚ್ಚಾಗಲಾಗಿ, ಮೊದಲು ಏನು ಗೇಣಿ ಬಾರದೆ ಸಾಗುವಳಿಯಾಗಿದ್ದ ಕನಿಷ್ಠ ಭೂಮಿಯ ಸಾಗುವಳಿಯಿಂದ ಏನು ಲಾಭವಾಗುವದಿಲ್ಲ. ಆ ಕಾರಣ ಇಂಥ ಭೂಮಿಯು ಬೀಳು ಬೀಳುವದು. ಅದರಿಂದ ಉಪಜೀವನದ ಪದಾರ್ಥಗಳ ಪೂರೈಕೆ ಕಡಿಮೆಯಾಗಿ, ಅವುಗಳ ಧಾರಣೆ ಏರುವದು. ಇದಲ್ಲದೆ, ಭೂಮಿಯ ಮೇಲಿನ ಕರವನ್ನು ಮಿತಿಮೀರಿ ಬೆಳಿಸಲಾಗಿ, ಉಪಜೀವನದ ಪದಾರ್ಥಗಳು ಪರದೇಶಗಳಿಂದ ಹೆಚ್ಚು ಹೆಚ್ಚಾಗಿ ಬರಲಾರಂಭಿಸುವವು. ಹೆಚ್ಚು ಭೂಮಿಯು ಬೀಳು ಬೀಳುವದಕ್ಕೆ ಇದು ಹುತ್ತೊಂದು ಕಾರಣವಾಗುವದು. ಈ ಮೇರೆಗೆ ಭೂಮಿಯ ತೆರಿಗೆಯನ್ನು ಅರ್ಥಶಾಸ್ತ್ರದೃಷ್ಟ್ಯಾ ಬರುವ ಗೇಣಿಗಿಂತಲೂ ಏರಿಸಲಾಗಿ ಭೂಮಿಯು ಬೀಳು ಬೀಳುವದಕ್ಕೆ ಎರಡು ಕಾರಣಗಳುಂಟಾಗಿ, ತೆರಿಗೆ ಬರುವ ಭೂಮಿಯ ವಿಸ್ತಾರವು ಕಡಿಮೆಯಾಗುವದು.

ಹೆನ್ರಿಜಾರ್ಜನೆಂಬ ಅಮೇರಿಕಾ ದೇಶದ ಗ್ರಂಥಕರ್ತನು "ಬೆಳುವಣಿಗೆ ಹಾಗೂ ಬಡತನ" ಎಂಬ ಗ್ರಂಥದಲ್ಲಿ ಪ್ರತಿಪಾದಿಸಿರುವದೇನಂದರೆ, "ಇಂಗ್ಲಂಡದಲ್ಲಿ ಜಮೀನುದಾರರಿಗೆ ತಮ್ಮ ಭೂಮಿಗಳ ಗೇಣಿಗಳನ್ನು ಎತ್ತುವದಕ್ಕೂ, ಭೂಮಿಯ ಮೇಲ್ವಿಚಾರಣೆಯ ಕೆಲಸ ಮಾಡುವದಕ್ಕೂ ಮನಸಾಗುವಷ್ಟು ಮಾತ್ರ ಭೂಮಿಯ

ಭ್ಯುತ್ಪನ್ನವನ್ನು ಅವರಿಗೆ ಬಿಟ್ಟು, ಉಳಿದ ವಾರ್ಷಿಕ ಉತ್ಪನ್ನವನ್ನೆಲ್ಲ ಸರಕಾರದ ವರು ತೆರಿಗೆಯ ರೂಪದಿಂದ ತಕ್ಕೊಳ್ಳ ಬೇಕು". ಭೂಮಿಯ ಸ್ವಾಮಿತ್ವವು ಸರಕಾರದ ಕಡೆಗೆ ಇರುವದು ಅರ್ಥಶಾಸ್ತ್ರದೃಷ್ಟ್ಯಾ ಜನರಿಗೆ ಬಹಳ ಹಿತ ಕರವಾದದ್ದೆಂಬುವದಕ್ಕೆ ಏನು ಸಂದೇಹವಿಲ್ಲ. ಆದರೂ ಇಂಗ್ಲಂಡದಲ್ಲಿದ್ದ ಎಷ್ಟೋ ಭೂಮಿಗಳು ಬಹು ಕಾಲ ಏಕಪ್ರಕಾರವಾಗಿ ಕಷ್ಟಪಟ್ಟು, ಮಿತವ್ಯಯ ವನ್ನು ಆಚರಿಸಿ, ಸಂಪಾದಿಸಿದಂಥವುಗಳಾಗಿರುವವು. ಹಾಗೂ, ಎಷ್ಟೋ ಭೂಮಿ ಗಳ ಉತ್ಪಾದಕತ್ವವು ಅವುಗಳಲ್ಲಿ ಹಾಕಿದ ಶ್ರಮ ಬಂಡವಲಗಳ ಫಲವಾಗಿರು ವದು. ಇಂಥ ಭೂಮಿಗಳ ಹೆಚ್ಚಿದ ಬೆಲೆಯನ್ನು ಜಮೀನುದಾರರಿಂದ ಕಸುಕೊಂ ಡರೆ, ಅವರನ್ನು ಅನ್ಯಾಯದಿಂದ ಸುಲಿದು ಹಾಳು ಮಾಡಿದಂತಾಗುವದು. ಇಂ ಗ್ಲಿಷ ಜನರ ಸ್ವಭಾವವು ಜಾರ್ಜ ಧೊರೆಯು ಪ್ರತಿಪಾದಿಸಿದ ಸುಲಿಗೆಗೆ ತಮ್ಮ ಒಪ್ಪಿಗೆ ಕೊಡುವಷ್ಟು ಎಂದಿಗಾದರೂ ಬದಲಿಸುವ ಸಂಭವ ತೋರುವದಿಲ್ಲ. ಇಂ ಗ್ಲಂಡದಲ್ಲಿ ಯಾವತ್ತು ಜನಸಂಖ್ಯೆಯ ಮಾನದಿಂದ ಜಮೀನುದಾರರು ಬಹಳ ಸ್ವಲ್ಪ ಮಂದಿಯಾಗಿರುವ ಕಾರಣ, ಈ ಜಮೀನುದಾರರ ಪಕ್ಷದ ಬಲ ಕಡಿಮೆಯಾ ಗುವದೆಂದು ಭಾವಿಸಿ, ತಾನು ಸೂಚಿಸಿದ ಸುಲಿಗೆಯ ಕ್ರಮವು ಇಂಗ್ಲಂಡದಲ್ಲಿ ಚನ್ನಾಗಿ ನಡಿಯುವದೆಂದು ಜಾರ್ಜ ಧೊರೆಯು ಎಣಿಸಿರ ಬಹುದು. ಆದರೆ ಇಂ ಗ್ಲಂಡದಂಥ ಐಶ್ವರ್ಯವುಳ್ಳ ದೇಶದ ಜನರು ಜಾರ್ಜ ಧೊರೆಯು ಪ್ರತಿಪಾದಿಸಿದ ನೀತಿವಿರುದ್ಧವಾದ ಸುಲಿಗೆಯ ಕ್ರಮವನ್ನು ಎಂದಿಗೂ ತಿರಸ್ಕರಿಸದೆ ಇರರು. ಇದಲ್ಲದೆ, ಇಂಥ ಸುಲಿಗೆಯಿಂದ ಉಂಟಾಗುವ ಭಯಂಕರ ಪರಿಣಾಮಗಳನ್ನು ಆಲೋಚಿಸಿದರೆ, ಈ ಸುಲಿಗೆಯಿಂದ ಉಂಟಾಗುವ ಲಾಭವು ಅತಿ ಕ್ಷುದ್ರವಾಗಿ ರುವದು. ಇಂಗ್ಲಂಡದಲ್ಲಿ ಭೂಮಿಗೆ ಬರುವ ಯಾವತ್ತು ಗೇಣಿಯು ಈ ಹೊತ್ತಿಗೆ ಸಾರ್ವಜನಿಕ ಆಸ್ತಿಯಾಯಿತೆಂದು ಕಲ್ಪಿಸಿದರೆ, ಈ ಲೂಟಿಯಿಂದ ಇಂಗ್ಲಂಡದಲ್ಲಿ ಪ್ರತಿಯೊಬ್ಬನ ಪಾಲಿಗೆ ವಾರಕ್ಕೆ ೧ ಶಿಲಿಂಗು ೬ ಪೇನ್ಸುಗಳು ಬರುವವು. ಆದರೆ, ದೇಶದೊಳಗಿನ ಭೂಮಿಯ ಯಾವತ್ತು ಬೆಲೆಯನ್ನು ಜಪ್ತೀ ಮಾಡಿ, ಒಬ್ಬೊಬ್ಬನಿಗೆ ದಿನ ಒಂದಕ್ಕೆ ೩ ಪೇನ್ಸುಗಳಂತೆ ಹೆಚ್ಚು ಪ್ರಾಪ್ತಿಯನ್ನು ಮಾಡಿಕೊಟ್ಟರೆ, ಬಣಿ ವೆಗೆ ಬೆಂಕೀ ಹಚ್ಚಿ ಅರಳು ಹುರುಕೊಂಡ ಹಾಗಾಗುವದು. ಜನರಿಗೆ ದಿನ ೩ ಪೇನ್ಸುಗಳಂತೆ ಹೆಚ್ಚು ಪ್ರಾಪ್ತಿಯಾಗುವ ಹಾಗೆ ಮಾಡುವದಕ್ಕೆ ಮೇಲೆ ಹೇಳಿದ ಉಪಾಯಕ್ಕಿಂತಲೂ ಸುಲಭವಾದ ಹಾಗೂ ನೀತಿಗೆ ಸರಿಯಾದ ಉಪಾಯ ಗಳು ಅಸಂಖ್ಯ ಉಂಟು. ಇವುಗಳಲ್ಲಿ, ಉದಾಹರಣಾರ್ಥವಾಗಿ, ಉಪಜೀವನದ ಪದಾರ್ಥಗಳನ್ನು ಬಿಯ್ಯೋಣ, ತರೋಣ, ಹಂಚೋಣ ಮೊದಲಾದ ಕೆಲಸಗ

ಳಲ್ಲಿ ಸುಧಾರಣೆಗಳನ್ನು ಮಾಡುವದು; ಬಾಡಿಗೆಯ ಗಾಡಿಗಳು, ಟ್ರಾಮಿನ ಗಾಡಿಗಳು, ಹೊಗೆಬಂಡಿಗಳು ಮೊದಲಾದವುಗಳಿಗೆ ಬೀಳುವ ಬಾಡಿಗೆಯನ್ನು ಕಡಿಮೆ ಮಾಡುವದು; ಸಾರಾಯಿ, ತಂಬಾಕ ಮೊದಲಾದವುಗಳನ್ನು ಕಡಿಮೆ ಸೇವಿಸುವದು, ಮುಂತಾದ ಕೆಲವು ಮಾರ್ಗಗಳನ್ನು ತೋರಿಸಿಕೊಡ ಬಹುದು. ಜಾರ್ಜ ಧೊರೆಯ ಪದ್ಧತಿಯಿಂದ ದೊರಿಯುವ ೧ ಶಿಲಿಂಗು ೬ ಪೇನ್ಸುಗಳನ್ನು ಭೂಮಿಯ ಗೇಣಿಯನ್ನು ಅಪಹರಿಸುವ ಪದ್ಧತಿಗಿಂತಲೂ ಈ ಉಪಾಯಗಳಿಂದ ಬಹು ಸುಲಭವಾಗಿ ದೊರಕಿಸಿಕೊಡ ಬಹುದು.

ದಶಮಭಾಗದ ಕರಗಳು ಭೂಮಿಯ ಮೇಲೇ ಬೀಳುವವು. — ಇಂಗ್ಲಂಡದಲ್ಲಿ ದಶಮಭಾಗದ ಕರಗಳೆಂಬ ಕರಗಳು ಭೂಮಿಯ ಮೇಲೆ ಕೂಡ್ರಿಸಲ್ಪಟ್ಟಿರುವವು. ಈ ಕರಗಳು ಮೊದಲಿಗೆ ಧರ್ಮಸಂಸ್ಥೆಗಳ ಸಂರಕ್ಷಣಕ್ಕಾಗಿ ಕೂಡ್ರಿಸಲ್ಪಟ್ಟವುಗಳು. ಪೂರ್ವದಲ್ಲಿ ಉತ್ಪನ್ನದ ಹತ್ತನೇ ಅಂಶದಷ್ಟು ಈ ಕರವನ್ನು ಕೊಡ ಬೇಕಾಗುತ್ತಿದ್ದ ಕಾರಣ, ಇದಕ್ಕೆ ದಶಮಭಾಗದ ಕರವೆಂಬ ಹೆಸರು ಉಂಟಾಯಿತು. ಇಂಗ್ಲಂಡದಲ್ಲಿ ಧರ್ಮಸುಧಾರಣೆಯು ವರ್ತಿಸಿದಂದಿನಿಂದ ಈ ಕರವನ್ನು ಧರ್ಮದ ಕೆಲಸಗಳಿಗೆ ಉಪಯೋಗಿಸುವದು ನಿಲ್ಲಿಸಲ್ಪಟ್ಟಿತು. ಹಾಗೂ ಈಗ ಅನೇಕ ಪ್ರಸಕ್ತಿಗಳಲ್ಲಿ ಈ ಕರಗಳಿಗೆ ಖಾಸಗಿ ಜನರೇ ಬಾಧ್ಯಸ್ಥರಾಗಿದ್ದು, ಅವರ ಕಡೆಗೆ ಭೂಮಿಯ ಸಾಗುವಳಿಯ ಕೆಲಸವಾಗಲಿ, ಮೇಲ್ವಿಚಾರಣೆಯ ಕೆಲಸವಾಗಲಿ, ಏನು ಇರುವದಿಲ್ಲ; ಭೂಮಿಯೂ ಅವರ ವಶದಲ್ಲಿ ಇರುವದಿಲ್ಲ. ಸನ್ ೧೮೩೬ನೇ ವರ್ಷಕ್ಕೆ ಮುಂಚೆ ಈ ಕರವನ್ನು ನಿರ್ಣೈಸುವಲ್ಲಿ ತೊಂದರೆಯುಂಟಾಗುತ್ತಿದ್ದ ಕಾರಣ, ಆ ವರ್ಷ ಈ ಕರವನ್ನು ನಿರ್ಣೈಸುವ ಬಗ್ಗೆ ಒಂದು ಕಟ್ಟಳೆಯುಂಟಾಯಿತು. ಈ ಕಟ್ಟಳೆಯ ಮೇರೆಗೆ, ಹಿಂದಿನ ಏಳು ವರುಷಗಳಲ್ಲಿದ್ದ ಕಾಳಿನ ಧಾರಣೆಗಳ ಸರಾಸರಿಯನ್ನು ತೆಗೆದು, ಆ ಪ್ರಕಾರ ದಶಮಭಾಗದ ಕರವನ್ನು ನಿರ್ಣೈಸಬೇಕೆಂದು ಗೊತ್ತಾಯಿತು. ಈ ವ್ಯವಸ್ಥೆಯ ಮೂಲಕವಾಗಿ, ದಶಮಭಾಗದ ಕರಕ್ಕೆ ಬಾಧ್ಯಸ್ಥರಾಗಿದ್ದವರಿಗೆ ಭೂಮಿಯ ಉತ್ಪಾದಕತ್ವವು ಹೆಚ್ಚಿದ್ದರಿಂದ ಉಂಟಾಗುವ ಲಾಭವು ಉಂಟಾಗದ ಹಾಗಾಯ್ತಿತು. ಯಾಕಂದರೆ, ಮೊದಲು ಈ ಕರವು ಹೊಲದ ಹುಟ್ಟುವಳಿಯ ಸುಮಾರು ಹತ್ತನೇ ಪಾಲಿನಷ್ಟು ಕಟ್ಟಲ್ಪಡುತ್ತಿದ್ದದರಿಂದ, ಭೂಮಿಯ ಹುಟ್ಟುವಳಿಯು ಹೆಚ್ಚಾದರೆ ಆ ಮಾನದಿಂದ ಕರವೂ ಹೆಚ್ಚು ಬರುತ್ತಿತ್ತು. ಆದರೆ ಮೇಲಿನ ಕಟ್ಟಳೆಯುಂಟಾದಂದಿನಿಂದ ಈ ಲಾಭವು ತಪ್ಪಿ ಹೋದದ್ದಲ್ಲದೆ, ಯಾವ ಕಾರಣದಿಂದಾದರೂ ಕಾಳಿನ ಬೆಳೆ ಹೆಚ್ಚಾದರೆ ಕರದ ಬಾಧ್ಯಸ್ಥರಿಗೆ ಒಂದು ವೇಳೆ ಲುಕಸಾನು ಸಹ ಆಗ್ಗಬಹುದು. ಉದಾ

ಹರಣಾರ್ಥವಾಗಿ, ಕಾಳಿನ ಬೆಳೆ ಇಮ್ಮಡಿಯಾದರೆ ಕಾಳಿನ ಪೂರೈಕೆ ಬಹಳವಾಗಿ, ಕಾಳಿನ ಧಾರಣೆ ಇಳಿಯ ಬಹುದು. ಹಾಗೂ ಅದರಿಂದ ಕರದ ಹಣವು ಕಡಿಮೆ ಯಾಗುವದು. ಇದಲ್ಲದೆ ಈ ಕಟ್ಟಳೆಯಿಂದ ದಶಮಭಾಗದ ಕರದ ಬೆಲೆಯ ಪರಿಮಾಣವು ಕಡಿಮೆಯಾಗುವದಕ್ಕೆ ಬೇರೆ ಕಾರಣಗಳೂ ಉಂಟು. ಈ ಕಾರಣಗಳು ಸನ್ ೧೮೩೬ನೇ ವರ್ಷ ಈ ಕಟ್ಟಳೆಯನ್ನು ಮಾಡಿದವರ ಲಕ್ಷ್ಯದಲ್ಲಿ ಸಹ ಬಂದಿರಲಿಕ್ಕಿಲ್ಲ. ಕಾಳು ಪರದೇಶಗಳಿಂದ ಸುಲಭವಾಗಿ ತರ ಬಹುದು. ಸನ್ ೧೮೪೬ನೇ ವರ್ಷದಿಂದ ಇಂಗ್ಲಂಡದಲ್ಲಿ ಹೊರಗಿಂದ ಬಹಳ ಧಾನ್ಯವು ಬಂದಿರುವದು. ಆದರೆ ದನ ಕರಗಳು, ಹಾಲು ಮೊಸರು, ಮುಂತಾದವುಗಳನ್ನು ಪರದೇಶಗಳಿಂದ ತರುವದು ಅಷ್ಟು ಸುಲಭವಲ್ಲದ ಕಾರಣ, ಜನಸಂಖ್ಯೆ ಬೆಳೆದ ಹಾಗೆ ಮಾಂಸ, ಹೈನ ಮುಂತಾದವುಗಳ ಬೆಲೆಯು ಮಾನದಿಂದ ಕಾಳಿನ ಬೆಲೆ ಕಡಿಮೆಯಾಗುತ್ತಾ ಹೋಗುವದು. ಈ ಕರದ ಹಣವು ಕಾಳಿನ ಧಾರಣೆಯ ಸರಾಸರಿಯ ಮೇಲಿಂದ ಮಾತ್ರವೇ ನಿರ್ಣೈಸಲ್ಪಡುವದರಿಂದ, ಬೇಸಾಯದ ಒಟ್ಟು ಹುಟ್ಟುವಳಿಯ ಬೆಲೆ ಹೆಚ್ಚಿದ ಪ್ರಮಾಣದಿಂದ ಈ ಕರವು ಹೆಚ್ಚಲಿಕ್ಕಿಲ್ಲ.

ಮನೆಗಳ ಮೇಲೆ ಕೂಡ್ರಿಸಿದ ದರಿದ್ರಸಂರಕ್ಷಕ ಕರದ ಭಾರವು.— ದರಿದ್ರಸಂರಕ್ಷಕ ಕರಗಳಿಂದ ಉಂಟಾಗುವ ಸಾಮಾಜಿಕ ಪರಿಣಾಮಗಳನ್ನು ಇಲ್ಲಿ ವಿಸ್ತಾರವಾಗಿ ಹೇಳುವ ಅವಶ್ಯವಿಲ್ಲ. ಈ ಕರದ ಭಾರವು ಯಾರ ಮೇಲೆ ಬೀಳುವದೆಂಬದನ್ನೂ, ಅರ್ಥಶಾಸ್ತ್ರದೃಷ್ಟ್ಯಾ ಈ ಕರದಿಂದ ಉಂಟಾಗುವ ಕೆಲ್ಲ ಪರಿಣಾಮಗಳನ್ನೂ ಮಾತ್ರ ಇಲ್ಲಿ ಹೇಳ ತಕ್ಕದ್ದಾಗಿದೆ. ದರಿದ್ರಸಂರಕ್ಷಕ ಕರಗಳು ಭೂಮಿ, ವ್ಯಾಪಾರದ ಅಂಗಡಿಗಳು, ಮನೆಗಳು ಮೊದಲಾದ ಸ್ಥಾವರ ಆಸ್ತಿಯ ಮೇಲೆ ಮಾತ್ರ ಕೂಡ್ರಿಸಲ್ಪಡುವವು. ಬೇಸಾಯದ ಭೂಮಿಯ ಮೇಲೆ ಕಟ್ಟಿದ ದರಿದ್ರಸಂರಕ್ಷಕ ಕರವು ಭೂಮಿಯ ಒಡೆಯರ ಮೇಲೆ ಬೀಳುತ್ತದೆಂದು ಹಿಂದೆ ತೋರಿಸಿಯದೆ. ಆದರೆ ಈ ಕರವನ್ನು ಮನೆಗಳ ಮೇಲೆ ಕೂಡ್ರಿಸಿದಾಗ ಅದು ಮನೆಯ ಯಜಮಾನನ ಮೇಲೆ ಬೀಳುವದೋ, ಅಥವಾ ಮನೆಯಲ್ಲಿ ಬಾಡಿಗೆಗೆ ಇರುವವನ ಮೇಲೆ ಬೀಳುವದೋ, ಎಂಬ ವಿಷಯದಲ್ಲಿ ಬಹು ದಿವಸದಾರಭ್ಯ ವಾದವಿವಾದ ನಡಿದಿರುವದು. ಮನೆಗಳ ಮೇಲೆ ಕೂಡ್ರಿಸಿದ ದರಿದ್ರಸಂರಕ್ಷಕ ಕರವನ್ನು ನಿಲ್ಲಿಸಿ ಬಿಡಲು, ಇಲ್ಲವೆ ಕಡಿಮೆ ಮಾಡಲು, ಅಷ್ಟೇ ಪ್ರಮಾಣದಿಂದ ಮನೆಗಳ ಬಾಡಿಗೆ ಏರಿದ್ದಾದರೆ, ಈ ಕರದ ಎಲ್ಲಾ ಭಾರವು ಮನೆಗಳ ಯಜಮಾನರ ಮೇಲೇ ಬೀಳುತ್ತದೆಂದು ಸಿದ್ಧವಾಗುವದು. ಯಾಕಂದರೆ, ಈ ಕರದ ಮೂಲಕವಾಗಿ ಅವರಿಗೆ ಬರುವ ಬಾಡಿಗೆ ಕಡಿಮೆಯಾಗುತ್ತದೆ. ಆದರೆ ಇಲ್ಲಿ

ಲಕ್ಷ್ಯದಲ್ಲಿ ಇಡ ತಕ್ಕದ್ದೇನಂದರೆ, ಈ ಕರವನ್ನು ಮನೆ ಕಟ್ಟಿದ ಭೂಮಿಯು ಮೇಲೇ ಮಾತ್ರ ಕೂಡ್ರಿಸಿರುವದಿಲ್ಲ, ಮನೆಗಳ ಮೇಲೆ ಸಹ ಕೂಡ್ರಿಸಿರುವರು. ಉದಾಹರಣಾರ್ಥವಾಗಿ, ಒಂದು ಮನೆಗೆ ವರ್ಷಕ್ಕೆ ೮ ಪೌಂಡು ನೆಲದೆರಿಗೆ ಬರುತ್ತದೆಂತಲೂ ೬೦ ಪೌಂಡು ಮನೆಬಾಡಿಗೆ ಬರುತ್ತದೆಂತಲೂ ತಿಳಿಯುವ. ಈ ಮನೆಗೆ ವರ್ಷಕ್ಕೆ ಸರಾಸರಿ ಮಾನದಿಂದ ಒಂಭತ್ತು ಪೌಂಡು ಕರ ಕೊಡ ಬೇಕಾಗುವದು. ಈ ಕರವನ್ನು ಪೌಂಡಿಗೆ ಇಂತಿಷ್ಟರಂತೆ ಮನೆಯ ಒಟ್ಟು ಬಾಡಿಗೆಯ ಮೇಲೆ ಕಟ್ಟುವರು, ನೆಲದ ಬಾಡಿಗೆಯ ಮೇಲೇ ಮಾತ್ರ ಬೇರೆ ಕಟ್ಟುವದಿಲ್ಲ. ಆ ಕಾರಣ, ಉಪ್ಪು ಮಾರುವವನು ಉಪ್ಪಿನ ಮೇಲಿನ ಸುಂಕವನ್ನು ತನ್ನ ಕೈಯ್ಯಿಂದ ಹಾಕದೆ ಅದನ್ನು ಗಿರಾಕಿಗಳ ಮೇಲೆ ಹಾಕುವಂತೆಯೇ, ಮನೆ ಕಟ್ಟಿಸಿದವನಾದರೂ ದರಿದ್ರಸಂರಕ್ಷಕ ಕರವನ್ನು ಬಾಡಿಗೆದಾರರ ಮೇಲೆಯೇ ಹಾಕುವನೆಂಬದು ಸ್ಪಷ್ಟವಾಗಿದೆ. ಮನೆ ಕಟ್ಟಿಸಿದವನಿಗೆ ಅವನ ಉದ್ಯೋಗದಲ್ಲಿ ವಾಡಿಕೆಯಾಗಿ ದೊರಿಯ ತಕ್ಕ ಲಾಭವು ದೊರಿಯುವದು. ಈ ಲಾಭದಲ್ಲಿ ವಾಡಿಕೆಯ ದರದ ಬಡ್ಡಿ, ಲುಕಸಾನಿನ ಭಯದ ಪ್ರತಿಫಲ, ಮೇಲ್ವಿಚಾರಣೆಯ ಸಂಬಳ, ಈ ಅಂಶಗಳಿರುವವು. ದರಿದ್ರಸಂರಕ್ಷಕ ಕರವನ್ನು ಅವನು ತನ್ನ ಕೈಯ್ಯಿಂದ ಹಾಕುವದಿಲ್ಲ. ಸಾರಾಯಿಯ ಮೇಲೆ ಕೂಡ್ರಿಸಿದ ಕರದಿಂದ ಸಾರಾಯಿ ಉತ್ಪನ್ನ ಮಾಡುವ ಖರ್ಚು ಹೆಚ್ಚುವಂತೆಯೇ, ದರಿದ್ರಸಂರಕ್ಷಕ ಕರದಿಂದ ಮನೆ ಕಟ್ಟುವ ಖರ್ಚು ಹೆಚ್ಚುವದು. ಆದಕಾರಣ ಮನೆಯ ಒಟ್ಟು ಬಾಡಿಗೆಯು ದರಿದ್ರಸಂರಕ್ಷಕ ಕರದಿಂದ ಏರುವದು; ಹಾಗೂ ಅದರಿಂದ ಈ ಕರವು ಅಂಶತಃ ಮನೆಯ ಬಾಡಿಗೆದಾರನ ಮೇಲೆ ಬೀಳುವದು. ಮನೆಯ ನೆಲದ ಬಾಡಿಗೆಯ ಮೇಲೆ ಕೂಡ್ರಿಸಿದ ಕರದ ಭಾಗವು ಮಾತ್ರ ಭೂಮಿಯ ಒಡೆಯನ ಮೇಲೆ ಬೀಳುವದು; ಮನೆಯ ಬೆಲೆಯ ಮೇಲೆ ಕಟ್ಟಿದ ಕರವು ಮನೆಯಲ್ಲಿರುವ ಬಾಡಿಗೆದಾರನ ಮೇಲೆ ಬೀಳುವದು.

**ವ್ಯಾಪಾರದ ವರಾರಗಳ ಮೇಲಿನ ದರಿದ್ರಸಂರಕ್ಷಕ ಕರದ ಭಾರವು.**— ವ್ಯಾಪಾರದ ವರಾರಗಳು, ಕಾರಖಾನೆಗಳು ಮುಂತಾದವುಗಳ ಮೇಲೆ ಕಟ್ಟಿದ ಸಂರಕ್ಷಕ ಕರದಲ್ಲಿ ಸಹ ಎರಡು ಭಾಗಗಳನ್ನು ಮಾಡತಕ್ಕದ್ದು. ನೆಲದ ಮೇಲೆ ಕೂಡ್ರಿಸಿದ ಕರವು ಭೂಮಿಯ ಒಡೆಯರ ಮೇಲೆ ಬೀಳುವದು; ಹಾಗೂ ಇಮಾರತುಗಳ ಮೇಲೆ ಕಟ್ಟಿದ ಕರವು ಅವುಗಳಲ್ಲಿ ಉಂಟಾಗುವ ಸರಕುಗಳನ್ನು ಉಪಯೋಗಿಸುವವರ ಮೇಲೆ ಬೀಳುವದು. ಉದಾಹರಣಾರ್ಥವಾಗಿ, ನೂಲಿನ ವಸ್ತ್ರಗಳನ್ನು ನೇಯುವ ಒಂದು ಕಾರಖಾನೆಯ ಮೇಲೆ ವರ್ಷಕ್ಕೆ ೧೫೦ ಪೌಂಡು ದರಿದ್ರಸಂರಕ್ಷಕ ಕರ ಉಂಟೆಂದು ತಿಳಿಯುವ. ಈ ಕರದಿಂದ ಆ ಕಾರಖಾನೆ

ಯಲ್ಲಿ ನೂಲಿನ ವಸ್ತ್ರಗಳನ್ನು ಉತ್ಪನ್ನ ಮಾಡುವ ಖರ್ಚು ೧೫೦ ಪೌಂಡು ಹೆಚ್ಚಾ ಗುವದು. ಬೇಕಾದಷ್ಟು ಹೆಚ್ಚು ಹುಟ್ಟಿಸಲಿಕ್ಕೆ ಬರುವ ಸರಕುಗಳ ಕ್ರಯವು ಅಂತ್ಯದಲ್ಲಿ ಆ ಸರಕುಗಳನ್ನು ಉತ್ಪನ್ನ ಮಾಡಲಿಕ್ಕೆ ತಾಗುವ ಖರ್ಚಿನ ಪ್ರಕಾರ ಹೆಚ್ಚು ಕಡಿಮೆಯಾಗುತ್ತದೆಂದು ಹಿಂದೆ ಸಿದ್ಧ ಮಾಡಿದೆಯಷ್ಟೇ. ಆ ಕಾರಣ, ದರಿದ್ರಸಂರಕ್ಷಕ ಕರದಿಂದ ನೂಲಿನ ವಸ್ತ್ರಗಳ ಕ್ರಯ ಏರುವದು, ಅಂದರೆ ಈ ಕರದ ಭಾರವು ನೂಲಿನ ವಸ್ತ್ರಗಳನ್ನು ಉಡುತೊಡುವವರ ಮೇಲೆ ಬೀಳುವದೆಂಬದು ಸ್ಪಷ್ಟವದೆ. ಆದರೆ ಈ ಕರವು ಬೇರೆ ಬೇರೆ ಕಡೆಯಲ್ಲಿ ಹೆಚ್ಚುಕಡಿಮೆಯಾಗಿ ಕೂಡ್ರಿಸಲ್ಪಟ್ಟಿರುವದು. ಉದಾಹರಣಾರ್ಥವಾಗಿ, ಒಂದು ಪ್ರಾಂತದಲ್ಲಿ ಕೆಲವೊಂದು ವಠಾರಿನ ಮೇಲೆ ೧೦೦ ಪೌಂಡು ಕರ ಕೂಡ್ರಿಸಿದ್ದರೆ, ಮತ್ತೊಂದು ಪ್ರಾಂತದಲ್ಲಿ ಅಂಥ ವಠಾರಗಳಿಗೇ ೩೦೦ ಪೌಂಡು ಕರವಿರುವದು. ಇಂಥ ಪ್ರಸಕ್ತಿಯಲ್ಲಿ ಇವೆರಡೂ ವಠಾರಗಳಲ್ಲಿ ಒಂದೇ ತರದ ಸರಕುಗಳು ಹುಟ್ಟುತ್ತಿದ್ದರೆ, ಇವೆರಡೂ ವಠಾರಗಳ ಮೇಲೆ ಬೇರೆ ಬೇರೆ ದರದಿಂದ ಕರ ಕೂಡ್ರಿಸಿರುವದರಿಂದ ಆ ಸರಕುಗಳ ಕ್ರಯಗಳ ಮೇಲೆ ಏನು ಪರಿಣಾಮ ಉಂಟಾಗುವದೆಂಬ ಪ್ರಶ್ನವು ಸಹಜವಾಗಿ ಹುಟ್ಟುತ್ತದೆ. ಯಾವದೊಂದು ಸರಕಿನ ಧಾರಣೆಯು ಆ ಸರಕಿನಲ್ಲಿ ಎಲ್ಲಕ್ಕೂ ಹೆಚ್ಚು ಉತ್ಪನ್ನ ಮಾಡುವ ಖರ್ಚು ತಗಲಿದಂಥ ಭಾಗದ ಖರ್ಚಿನ ಮೇರೆಗೆ ಗೊತ್ತಾಗುವದೆಂದು ಅರ್ಥಶಾಸ್ತ್ರದ ನಿಯಮ ಉಂಟು. ಉದಾಹರಣಾರ್ಥವಾಗಿ, ಹಡಗಗಳ ಕ್ರಯವು ಎಲ್ಲಕ್ಕೂ ಹೆಚು ಉತ್ಪನ್ನ ಮಾಡುವ ಖರ್ಚು ಬೀಳುವ ಹಡಗಗಳಿಗೆ ಬಿದ್ದ ಖರ್ಚಿನ ಮೇರೆಗೆ ನಿರ್ಣೈಸಲ್ಪಡುವದು. ಯಾಕಂದರೆ, ಹಡಗಗಳ ಕ್ರಯ ಇದಕ್ಕೂ ಕಡಿಮೆಯಾದರೆ, ಅತಿಶಯ ಅನಾನುಕೂಲವಾದ ಸ್ಥಳಗಳಲ್ಲಿ ಕಟ್ಟಿದ ಹಡಗಗಳ ಕಾರಖಾನೆಯವರಿಗೆ ಅವರ ಬಂಡವಲದ ಮೇಲೆ ವಾಡಿಕೆಯಾದ ದರದ ಲಾಭವೂ, ಕೆಲಸಗಾರರಿಗೆ ಸರಾಸರಿ ಮಾನದ ಕೂಲಿಯೂ ಹುಟ್ಟದೆ ಹೋಗುವವು. ಹಾಗೂ ಅದೇ ಕಾಲಕ್ಕೆ ಒಳ್ಳೇ ಅನುಕೂಲವಾದ ಸ್ಥಳಗಳಲ್ಲಿ ಹಡಗ ಕಟ್ಟುವ ಕೆಲಸ ಮಾಡುವ ಕಾರಖಾನೆಯವರಿಗೆ ಅತಿಶಯ ಲಾಭ ಬರಹತ್ತುವದು. ಇದರಿಂದ ಈ ಕಾರಖಾನೆಯವರಿಗೆ ಹೆಚ್ಚು ಹಡಗಗಳನ್ನು ಕಟ್ಟುವದಕ್ಕೆ ಉತ್ತೇಜನವಾಗುವದು. ಈ ಪ್ರಕಾರ ಹಡಗಗಳ ಪೂರೈಕೆ ಬೆಳೆದರೆ, ಇಲ್ಲವೆ ಹಡಗಗಳ ಬೇಡಿಕೆ ಕಡಿಮೆಯಾದರೆ, ಹಡಗಗಳ ಕ್ರಯ ಇಳಿದು ಬೇಡಿಕೆ ಪೂರೈಕೆಗಳ ಸಮೀಕರಣವಾಗುವದು. ಈ ಪ್ರಸಕ್ತಿಯಲ್ಲಿ ಹಡಗ ಕಟ್ಟುವ ಉದ್ಯೋಗದೊಳಗಿನ ಭಾರಿ ಕರ ಕೂಡ್ರಿಸಲ್ಪಟ್ಟ ಭಾಗದಲ್ಲಿ ಏನು ಲಾಭವಾಗದೆ, ಈ ಭಾಗವು ಕ್ರಮೇಣ ನಿಂತು ಹೋಗುವದು. ಸನ್ ೧೮೭೦ನೇ ವರ್ಷ ಲಂಡನದಲ್ಲಿ ನಡಿಯು

ತ್ತಿದ್ದ ಹಡಗ ಕಟ್ಟುವ ಉದ್ಯೋಗದಲ್ಲಿ ಇದೇ ಸಂಗತಿಯು ವರ್ತಿಸಿತು. ಲಂಡನ್ ಪಟ್ಟದ ಪೂರ್ವದಿಕ್ಕಿನ ತುದಿಯಲ್ಲಿ ದರಿದ್ರಸಂರಕ್ಷಕ ಕರಗಳೂ ಬೇರೆ ವೆಚ್ಚಗಳೂ ಅತಿಶಯವಾಗಿ ಏರಿದ್ದವು. ಆ ಕಾರಣ, ಅಲ್ಲಿ ನಡಿಯುತ್ತಿದ್ದ ಹಡಗ ಕಟ್ಟುವ ಕಾರಖಾನೆಗಳು ಅಮೇರಿಕೆಯಲ್ಲಿ ನಡಿದ ಯುದ್ಧದಿಂದ ಹಡಗಗಳಿಗೆ ಬಹಳ ಬೇಡಿಕೆ ಇದ್ದಾಗ ಮಾತ್ರ ಚನ್ನಾಗಿ ನಡಿದವು. ಆದರೆ, ಈ ಯುದ್ಧವು ನಿಂತು ಹಡಗಗಳ ಧಾರಣೆ ಇಳಿದ ಕೂಡ್ಲೆ ಈ ಕಾರಖಾನೆಗಳೆಲ್ಲ ನಿಂತು ಹೋದವು; ಮತ್ತು ಅವಶ್ಯವಾದ ಹಡಗಗಳೆಲ್ಲ, ಟಾಯಿನ್ ಹಾಗು ಕ್ಲಾಯಿಡ್ ಹೊಳೆಗಳ ದಂಡೆಯಲ್ಲಿ ಆಗ ಹತ್ತಿದವು. ಲಂಡನದಲ್ಲಿ ಹಡಗ ಕಟ್ಟುವ ಒಂದು ಕಾರಖಾನೆಯು ನಿಂತ ಕೂಡ್ಲೆ ಅದರ ಸಮೀಪದಲ್ಲಿದ್ದ ಬೇರೆ ಕಾರಖಾನೆಗಳು ನಿಲ್ಲುವ ಕಾಲವು ಸಮೀಪಿಸಲಾರಂಭಿಸಿತು. ಯಾಕಂದರೆ, ಕಾರಖಾನೆಗಳು ಒಂದರ ಹಿಂದೊಂದು ನಿಂತು ಹೋದ ಹಾಗೆ ಸಾವಿರಾರು ಕೆಲಸಗಾರರ ಕೆಲಸ ತಪ್ಪಿ, ಅಶನಕ್ಕೆ ಗತಿ ಇಲ್ಲದ ದರಿದ್ರರ ಸಂಖ್ಯೆ ಬೆಳೆಯುತ್ತಾ ನಡಿಯಿತು. ಹಾಗೂ ಆ ಮಾನದಿಂದ ದರಿದ್ರಸಂರಕ್ಷಕ ಕರವನ್ನು ಹೆಚ್ಚಿಸುವದು ಅವಶ್ಯವಾಯಿತು. ಈ ಪ್ರಕಾರ ಮೊದಲೇ ಕುಂದಲಾರಂಭಿಸಿದ್ದ ಉದ್ಯೋಗಗಳ ಮೇಲೆ ಮತ್ತಿಷ್ಟು ಒಜ್ಜೆಯು ಬಿದ್ದು, ಟೇಮ್ಸ ನದಿಯ ದಂಡೆಯ ಮೇಲಿದ್ದ ಹಡಗ ಕಟ್ಟುವ ಕಾರಖಾನೆಗಳು ಕ್ರಮೇಣ ಲಯ ಹೊಂದಿದವು. ಇಂಥ ಪ್ರಸಕ್ತಿಯಲ್ಲಿ, ದರಿದ್ರಸಂರಕ್ಷಕ ಕರದ ಭಾರವು ಕುಂದಿದಂಥ ಉದ್ಯೋಗದಲ್ಲಿ ತೊಡಗಿದ ಬಂಡವಲಗಾರರ ಮೇಲೂ ಕೂಲಿಕಾರರ ಮೇಲೂ ಕೂಡೇ ಬೀಳುವದು. ಆದ್ದರಿಂದ, ಇಂಥ ಉದಾಹರಣಗಳಲ್ಲಿ ದರಿದ್ರಸಂರಕ್ಷಕ ಕರದಿಂದ ಹಿತಕ್ಕಿಂತಲೂ ಹಾನಿಯೇ ವಿಶೇಷವಾಗುತ್ತದೆಂದು ಹೇಳ ಬಹುದು. ದೇಶದಲ್ಲಿ ದರಿದ್ರಸಂರಕ್ಷಕ ಕರದ ಒಜ್ಜೆ ಅತಿಶಯವಾದದ್ದರ ಮೂಲಕವಾಗಿ, ದೇಶದೊಳಗೆ ಉತ್ಕೃಷ್ಟವಾಗಿ ನಡಿಯುತ್ತಿದ್ದಂಥಾದ್ದೊಂದು ಉದ್ಯೋಗವು ನಾಶ ಹೊಂದುವದು ಬಹು ದೊಡ್ಡ ರಾಷ್ಟ್ರೀಯ ಹಾನಿಯಾಗಿರುವದು. ದರಿದ್ರಸಂರಕ್ಷಕ ಕರಗಳಿಂದ ಉಂಟಾಗುವ ಘಾತಕ ಪರಿಣಾಮಗಳನ್ನು ತಪ್ಪಿಸುವದಕ್ಕೆ, ಅನೇಕ ಜನರು ಸದ್ಭಾವದಿಂದ ನಡಿಸುವ ಮಾರ್ಗ ತಪ್ಪಿದ ಧರ್ಮಕೃತ್ಯಗಳಿಂದ ಏನು ಸಹಾಯವಾಗುವದಿಲ್ಲ. ದರಿದ್ರರ ಸಂಖ್ಯೆಯನ್ನು ಬೆಳಿಸುವಂಥ ಮೂಲಕಾರಣಗಳನ್ನು ತೆಗೆದು ಹಾಕುವದಕ್ಕೆ ಸಹಾಯ ಮಾಡದಂಥ ವ್ಯಕ್ತಿ ಮಾತ್ರರ ಪ್ರಯತ್ನಗಳಿಂದಾಗಲಿ, ಸರಕಾರದ ಕಟ್ಟಳೆಗಳಿಂದಾಗಲಿ, ಏನು ಶಾಶ್ವತವಾದ ಪ್ರಯೋಜನವಾಗಲಿಕ್ಕಿಲ್ಲ.

## ಮೂರನೆ ಅಧ್ಯಾಯದ ಮೇಲಿನ ಪ್ರಶ್ನಗಳು
## ಕರದ ವಿಷಯದಲ್ಲಿ.

೧ ಕರಕಟ್ಟುವದು ಯಾಕೆ ಅವಶ್ಯವಾಗಿರುವದು?

೨. ಸರಕಾರದ ಆಡಳಿತೆಯಿಂದ ಲಭಿಸುವ ಸಂರಕ್ಷಣದಿಂದ ಪ್ರಯೋಜನ ಹೊಂದುವ ಯಾವದೊಂದು ವರ್ಗದ ಜನರು ಕರದಿಂದ ಮುಕ್ತರಾಗಿರುವದು ನ್ಯಾಯವೋ?

೩. ಆಡಾಮ್‍ಸ್ಮಿಥನು ಹೇಳಿದ ಕರದ ನಾಲ್ಕು ಸೂತ್ರಗಳನ್ನು ಹೇಳಿರಿ.

೪. ಮೊದಲನೆ ಸೂತ್ರವನ್ನು ಯಾವ ರೀತಿಯಾಗಿ ಅಮಲಿನಲ್ಲಿ ತರ ಬಹುದು?

೫. ಎರಡನೆ ಸೂತ್ರವನ್ನು ಅನುಸರಿಸದಿದ್ದರೆ ವ್ಯಾಪಾರಕ್ಕೆ ಹಾನಿಯುಂಟಾಗುವ ಕಾರಣವೇನು?

೬. ಮೂರನೆ ಸೂತ್ರದ ಮಹತ್ವವನ್ನು ದೃಷ್ಟಾಂತಮೂಲಕವಾಗಿ ವಿವರಿಸಿರಿ.

೭. ಮೂರನೆ ಸೂತ್ರಕ್ಕೂ ನಾಲ್ಕನೆ ಸೂತ್ರಕ್ಕೂ ಇರುವ ಸಂಬಂಧವನ್ನು ತೋರಿಸಿರಿ.

೮. ಅಟಕಿನ ಮನೆಗಳಿಂದ ಉಂಟಾಗುವ ಪ್ರಯೋಜನವನ್ನು ವಿವರಿಸಿರಿ

೯ ಅಟಕಿನ ಮನೆಗಳನ್ನು ಉಪಯೋಗಿಸುವದರಿಂದ ಅವುಗಳಲ್ಲಿಟ್ಟ ಸರಕುಗಳ ಕ್ರಯದ ಮೇಲೆ ಉಂಟಾಗುವ ಪರಿಣಾಮವು ಯಾವದು?

೧೦. ನಾಲ್ಕನೆ ಸೂತ್ರದ ಪ್ರಕಾರ ಮೂಲದ್ರವ್ಯಗಳ ಮೇಲೆ ಕರ ಕಟ್ಟುವದು ಯೋಗ್ಯವೋ, ಅಥವಾ ಕಾರಖಾನೆಗಳಲ್ಲಿ ತಯಾರಾದ ಸರಕುಗಳ ಮೇಲೆ ಕರಕಟ್ಟುವದು ಯೋಗ್ಯವೋ?

೧೧. ಮೂಲದ್ರವ್ಯಗಳ ಮೇಲೆ ಕರ ಕಟ್ಟಲಾಗಿ, ಆ ದ್ರವ್ಯಗಳಿಂದ ಹುಟ್ಟುವ ಸರಕುಗಳ ಕ್ರಯವು ಬಹಳ ಹೆಚ್ಚಾಗಿ ಬೆಳೆಯುವ ಕಾರಣವೇನು?

೧೨. ಅಂಗಡಿಗಳಲ್ಲಿ ಮಾರುವ ಸರಕುಗಳ ಮೇಲೆ ಪ್ರತ್ಯಕ್ಷ ಕರವನ್ನು ಕೂಡ್ರಿಸುವದು ಯಾಕೆ ಸಾಧ್ಯವಲ್ಲ?

೧೩. ನಾಲ್ಕನೆ ಸೂತ್ರವನ್ನು ಕಡೆಗಾಣಿಸುವಂಥ ಸುಲಭ ಮಾರ್ಗವು ಯಾವದು?

೧೪. ಪ್ರತ್ಯಕ್ಷ ಕರಕ್ಕೂ ಪರೋಕ್ಷ ಕರಕ್ಕೂ ಭೇದವೇನು?

೧೫. ಕರದ ಭಾರವೆಂದರೇನು?

೧೬. ಪ್ರಾಪ್ತಿಯ ಮೇಲಿನ ಕರವೆಂದರೇನು?

೧೭. ಹಂಗಾಮಿ ಪ್ರಾಪ್ತಿಗಳಿಗೂ ಕಾಹೀಮುವಾದ ಪ್ರಾಪ್ತಿಗಳಿಗೂ ಒಂದೇ ದರದಿಂದ ಕರ ಕಟ್ಟತಕ್ಕದ್ದೋ?

೧೮. ಪ್ರಾಪ್ತಿಯ ಮೇಲಿನ ಕರವೂ ಕರದ ರಕಮೂ ಕಾಹೀಮುವಾಗಿ ಇದ್ದಿದ್ದಾದರೆ, ಹಂಗಾಮಿ ಪ್ರಾಪ್ತಿಗಳ ಮೇಲೂ ಕಾಹೀಮು ಪ್ರಾಪ್ತಿಗಳ ಮೇಲೂ ಒಂದೇ ದರದಿಂದ ಕರ ತಕ್ಕೊಳ್ಳಬೇಕೆಂಬುವದನ್ನು ತೋರಿಸುವಂಥ ದೃಷ್ಟಾಂತಗಳನ್ನು ಕೊಡಿರಿ.

೧೯. ಪ್ರತಿಯೊಂದು ಪ್ರಾಪ್ತಿಯ ಬೆಲೆಯನ್ನು ಆ ಪ್ರಾಪ್ತಿಗೆ ಸರಿಯಾದ ಬಂಡವಲದ ಮಾನದಿಂದ ತೆಗೆದು ಆ ಬೆಲೆಯ ಮೇಲೆ ಕರ ಕಟ್ಟುವದು ಯಾಕೆ ಸಾಧ್ಯವಲ್ಲ?

೨೦. ದೊಡ್ಡ ಪ್ರಾಪ್ತಿಯುಳ್ಳವರಿಗಿಂತಲೂ ಸಣ್ಣ ಪ್ರಾಪ್ತಿಯುಳ್ಳವರ ಮೇಲೆ ಪ್ರಾಪ್ತಿಯ ಮೇಲಿನ ಕರದ ಭಾರವು ವಿಶೇಷ ಬೀಳುವ ಕಾರಣವೇನು?

೨೧. ಈ ಅಸಮತೆಯನ್ನು ಪರಿಹರಿಸುವದಕ್ಕಾಗಿ ಯಾವ ಉಪಾಯವು ಸೂಚಿಸಲ್ಪಟ್ಟಿರುವದು?

೨೨. ಈ ಪದ್ಧತಿಯಲ್ಲಿ ಈಗ್ಯೆ ಏನು ಹೆಚ್ಚುಕಡಿಮೆ ಮಾಡಿ ಅದನ್ನು ಗ್ರಹಿಸಿರುವರು?

೨೩. ಪ್ರಾಪ್ತಿಯ ಮೇಲಿನ ಕರವು ಯಾವಾಗಲೂ ಪ್ರತ್ಯಕ್ಷ ಕರವೇ ಆಗಿರುವದೋ?

೨೪. ಪ್ರಾಪ್ತಿಯ ಮೇಲಿನ ಕರವನ್ನು ಬಂಡವಲದೊಳಗಿಂದ ಕೊಡಲಾಗಿ, ಆ ಕರವು ಪೂರ್ಣವಾಗಿ ಯಾರ ಮೇಲೆ ಬೀಳುವದು?

೨೫. ಪ್ರಾಪ್ತಿಯ ಮೇಲಿನ ಕರದ ಪೂರ್ಣ ರಕಮು ಕೊಡುವದನ್ನು ತಪ್ಪಿಸುವದಕ್ಕೆ ಕೆಲವರಿಗೆ ಆಸ್ಪದವಾಗುವದೆಂಬದು ಈ ಕರಕ್ಕೆ ಸರಿಯಾದ ಬಾಧಕವಾಗ ಬಹುದೋ?

೨೬. ಪ್ರತಿಯೊಬ್ಬನು ತನ್ನ ನಿರ್ವಾಹಕ್ಕೆ ಸಾಕಾಗಿ ಉಳಿದ ಪ್ರಾಪ್ತಿಯ ಕೆಲವೊಂದು ಭಾಗವನ್ನು ಸರಕಾರದ ಬೊಕ್ಕಸಕ್ಕೆ ಕೊಡ ಬೇಕೆಂಬುವದೊಂದು ಸಾಮಾನ್ಯ ನಿಯಮ ಉಂಟು. ಯಾವ ಸರಕುಗಳ ಮೇಲೆ ಕರ ಕಟ್ಟ ಬೇಕೆಂಬ ಬಗ್ಗೆ ಈ ನಿಯಮದಿಂದ ಏನು ತಿಳಿಯುವದು?

೨೭. ಭೂಮಿಯ ಮೇಲೆ ಕೂಡ್ರಿಸಿದ ಯಾವತ್ತು ಕರಗಳ ಭಾರವನ್ನು ಯಾರು ಸಹಿಸುವರು?

೨೮. ಭೂಮಿಯ ಮೇಲಿನ ಕರವೆಂದರೇನು?

೨೯ ಭೂಮಿಯಿಂದ ಬರುವ ಕಂದಾಯದ ವಸೂಲು ಇಂಗ್ಲಂಡದಲ್ಲಿ ಎಷ್ಟು ಇರುವದು? ಹಿಂದುಸ್ತಾನದಲ್ಲಿ ಎಷ್ಟು ಇರುವದು?

೩೦. ಇಂಗ್ಲಂಡದಲ್ಲಿ ಸರಕಾರದವರಿಗೆ ಭೂಮಿಯ ತೆರಿಗೆ ಬರುವದರ ಮೇಲಿಂದ ಯಾವ ಮಹತ್ವವುಳ್ಳ ತತ್ವವು ಸಿದ್ಧವಾಗುತ್ತದೆ?

೩೧. ಭೂಮಿಯ ಯಾವತ್ತು ಗೇಣಿಯು ಸರಕಾರಕ್ಕೆ ಬರುವಂಥ ಭೂಮಿಯ ಸತ್ತಾಪ್ರಕಾರವು ಅರ್ಥಶಾಸ್ತ್ರದೃಷ್ಟ್ಯಾ ಯಾಕೆ ಸರ್ವೋತ್ಕೃಷ್ಟವಾದದ್ದೆಂಬುವದನ್ನು ವಿವರಿಸಿರಿ.

೩೨. ಅರ್ಥಶಾಸ್ತ್ರದೃಷ್ಟ್ಯಾ ಬರಬಹುದಾದಂಥ ಗೇಣಿಗಿಂತಲೂ ಭೂಮಿಯ ಮೇಲಿನ ತೆರಿಗೆ ಹೆಚ್ಚಾದ ಪಕ್ಷದಲ್ಲಿ ಏನು ಪರಿಣಾಮ ಸಂಭವಿಸುವದು?

೩೩. ಇಂಗ್ಲಂಡದ ಭೂಮಿಯನ್ನು ಸರಕಾರದವರು ಯಾವ ಬಗೆಯಿಂದ ತಕ್ಕೊಳ್ಳ ಬೇಕೆಂದು ಹೆನ್ರಿಜಾರ್ಜ ಥೋರೆಯು ಸೂಚಿಸಿದ್ದಾನೆ?

೩೪. ದಶಮಭಾಗದ ಕರಗಳೆಂದರೇನು? ಮೊದಲು ಈ ಕರಗಳು ಯಾವ ಹೇತುವಿನಿಂದ ಕೂಡ್ರಿಸಲ್ಪಟ್ಟವು? ಈ ಕರಗಳಿಗೆ ಈಗ್ಯೆ ಬಹುತರ ಯಾರು ಬಾಧ್ಯಸ್ಥರಾಗಿರುವರು?

೩೫. ದಶಮಭಾಗದ ಕರದ ನಿರ್ಣಯ ಮಾಡುವದಕ್ಕಾಗಿ ಉಂಟಾದ ಕಟ್ಟಳೆಯ ಮುಖ್ಯ ನಿಯಮಗಳು ಯಾವವು?

೩೬. ಈ ಕರದ ರಕಮಿನ ಮೇಲೆ ಈ ಕಟ್ಟಳೆಯಿಂದ ಏನು ಪರಿಣಾಮ ಉಂಟಾಗಿರುವದು?

೩೭. ಮನೆಗಳ ಮೇಲೆ ಕೂಡ್ರಿಸಿದ ದರಿದ್ರಸಂರಕ್ಷಕ ಕರಗಳ ಭಾರವು ಯಾರ ಮೇಲೆ ಬೀಳುವದು?

೩೮. ಮನೆಯ ಮೇಲೆ ಕಟ್ಟಿದ ದರಿದ್ರಸಂರಕ್ಷಕ ಕರದ ಕೆಲವು ಭಾಗವು ಮನೆಯಲ್ಲಿ ಬಾಡಿಗೆಗೆ ಇರುವವನ ಮೇಲೆ ಬೀಳುವದೆಂಬದನ್ನು ಸಿದ್ಧ ಮಾಡಿರಿ.

೩೯. ವ್ಯಾಪಾರದ ವರಾರಗಳ ಮೇಲೆ ಕೂಡ್ರಿಸಿದ ದರಿದ್ರಸಂರಕ್ಷಕ ಕರದ ಭಾರವು ಯಾರ ಮೇಲೆ ಬೀಳುವದು?

೪೦. ದರಿದ್ರಸಂರಕ್ಷಕ ಕರವು ಮಿತಿಮೀರಿ ಹೆಚ್ಚಲಾಗಿ, ಅದರಿಂದ ಉದ್ಯೋಗಗಳು ನಾಶಹೊಂದುವದು ಹ್ಯಾಗೆ?

೪೧. ಟೇಮ್ಸ್ ನದಿಯ ಥಡದ ಮೇಲಿದ್ದ ಹಡಗ ಕಟ್ಟುವ ಕಾರಖಾನೆಯು ಕುಂದಿದ ಬಗೆಯನ್ನು ವರ್ಣಿಸಿರಿ.

೪೨. ಯಾವದೊಂದು ಉದ್ಯೋಗವು ನಾಶ ಹೊಂದುವಷ್ಟು ದರಿದ್ರಸಂರಕ್ಷಕ ಕರವನ್ನು ಕೂಡ್ರಿಸಲಾಗಿ, ಈ ಕರದ ಭಾರವು ನಿಜವಾಗಿ ಯಾರ ಮೇಲೆ ಬೀಳುವದು?

೧. ಸಾರ್ವಜನಿಕ ಕಂದಾಯವನ್ನು ಯಾವ ಕೆಲಸಗಳಿಗೆ ವೆಚ್ಚ ಮಾಡಬೇಕು, ಯಾವ ಕೆಲಸಗಳಿಗೆ ವೆಚ್ಚ ಮಾಡಬಾರದೆಂಬ ಬಗ್ಗೆ, ಕರ ಕೊಡುವ ಜನರ ಅಭಿಪ್ರಾಯಗಳನ್ನು ಕರ ಎತ್ತುವ ಅಧಿಕಾರಿಗಳು ಇಂಗ್ಲಂಡದಲ್ಲಿಯೂ ಕೇಳುವದಿಲ್ಲ, ಹಿಂದುಸ್ತಾನದಲ್ಲಿಯೂ ಕೇಳುವದಿಲ್ಲ. ಆದರೆ, ಇಂಗ್ಲಂಡದಲ್ಲಿ ಜನರ ಅಧಿಕಾರವು ರಾಷ್ಟ್ರೀಯ ವೆಚ್ಚದ ಮೇಲೆ ನಡೆಯುವದೋ ಹ್ಯಾಗೆ? ಹಿಂದುಸ್ತಾನದಲ್ಲಿ ನಡೆಯುವದೋ? ಈ ಬಗೆಯ ಅಧಿಕಾರವು ಜನರಿಗೆ ಇರತಕ್ಕದ್ದೋ? ಇಂಗ್ಲಂಡದಲ್ಲಿ, ಜನರಿಗೆ ಪಾರ್ಲಮೆಂಟಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವ ಹಕ್ಕು ಇರುವದರಿಂದ ಅಲ್ಲಿಯ ಕರ ಕೊಡುವ ಜನರಿಗೆ ಮೇಲೆ ಹೇಳಿದ ಅಧಿಕಾರವು ಎಷ್ಟರ ಮಟ್ಟಿಗೆ ದೊರಿದಿರುವದು?

೨. ಕೂದಲಿಗೆ ಹಚ್ಚುವ ಪುಡಿಯ ಮೇಲೂ, ಕಿಟಿಕೆಗಳ ಮೇಲೂ ಕಟ್ಟಿದ ಕರಗಳು ಪ್ರತ್ಯಕ್ಷ ಕರಗಳೋ, ಪರೋಕ್ಷ ಕರಗಳೋ?

೩. ಜಾರ್ಜ ಥೊರೆಯು ಸಾಧಿಸುವದೇನಂದರೆ, ಭೂಮಿಯು ಯಾವತ್ತು ಮನುಷ್ಯವರ್ಗಕ್ಕೆ ಸೃಷ್ಟಿಯಿಂದ ತಾನೇ ದೊರಿದಿದ್ದ ಕಾರಣ, ವ್ಯಕ್ತಿ ಮಾತ್ರರಿಗೆ ಭೂಮಿಯ ಮೇಲೆ ಬಾಧ್ಯತೆ ಇರುವದು ಸಂಭವಿಸುವದಿಲ್ಲ. ಮನುಷ್ಯರ ಶ್ರಮದಿಂದುಂಟಾದ ಫಲಕ್ಕೆ ಮಾತ್ರ ವ್ಯಕ್ತಿ ಮಾತ್ರರು ಬಾಧ್ಯಸ್ಥರಾಗುವದು ನ್ಯಾಯವಾದದ್ದು. ಈ ಸಿದ್ಧಾಂತವನ್ನು ಕೆಳಗೆ ಬರೆದ ವಿಷಯಗಳಲ್ಲಿ ಉಪಯೋಗಿಸಿ ನೋಡಿರಿ:—

೧. ಇಂಗ್ಲಂಡದಲ್ಲಿ ಕೇಂಬ್ರಿಜ ಪರಗಣೆಯಲ್ಲಿ ಹಿಂದಕ್ಕೆ ನೀರು ತೆಗಿಸಿದ ಪೂರ್ವದಲ್ಲಿ ಏನು ಕೆಲಸಕ್ಕೆ ಬಾರದೆ ಇದ್ದ ಕೊಳಚೇ ಭೂಮಿಗಳು.
೨. ಕಾಡಿನಲ್ಲಿ ತಾವೇ ಬೆಳೆದ ಕಂದಮೂಲಫಲಾದಿಗಳು.
೩. ಇಟ್ಟಂಗಿಗಳನ್ನು ಮಾಡಲಿಕ್ಕೆ ಬರುವ ಭೂಮಿಯು.
೪. ಇಟ್ಟಂಗಿಗಳನ್ನು ಮಾಡಲಿಕ್ಕೆ ಬರುವ ಒಂದು ಬಂಡಿ ಮಣ್ಣು.
೫. ಅದೇ ಮಣ್ಣಿನಿಂದ ಮಾಡಿದ ಇಟ್ಟಂಗಿಗಳು.
೬. ಶ್ರಮವಿಲ್ಲದೆ ಕೆಲವು ಸಾರಿ ಅಕಸ್ಮಿತವಾಗಿ ತಿಕ್ಕಿದ ಬೆಳ್ಳಿ ಭಂಗಾರಗಳ ತುಣುಕುಗಳು.
೭. ಸ್ವೀಡನ ದೇಶದ ಪರ್ವತಗಳ ಮೇಲೆ ಗಂಡಸರೂ ಹೆಂಗಸರೂ ಬುಟ್ಟಿಗಳಿಂದ ಮಣ್ಣು ಹಾಕಿ ಸಾಗು ಮಾಡಿದ ಭೂಮಿಗಳು.